ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯಾ–೫೧

ನರಸಿಂಹ ಪುರಾಣಮ್

(ಕನ್ನಡ ಅನುವಾದ ಸಹಿತ)

ಸಂಪುಟ ೨

ಅನುವಾದಕರು :

ಆಸ್ಥಾನ ವಿದ್ವಾನ್,

ನಾ. ವಾ. ಪದ್ಮನಾಭಾಚಾರ್ಯರು,

ಸಾಹಿತ್ಯ, ವೇದಾನ್ತ ವಿದ್ವಾಂಸರು ಮತ್ತು ಕನ್ನಡ ಪಂಡಿತರು,

ಅಧ್ಯಾಪಕರು,

ಸರ್ಕಾರದ ಶಿಕ್ಷಣ ಮಹಾ ಪಾಠಶಾಲಾ, ಮೈಸೂರು.

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್.

ಮೈ ಸೂ ರು.

೧೯೪೯

ಬಿನ್ನಹ.

ಶ್ರೀ ನರಸಿಂಹ ಪುರಾಣದ ಪ್ರಥಮ ಸಂಪುಟದಲ್ಲಿ ಮೂವತ್ತೊಂದು ಅಧ್ಯಾಯಗಳಲ್ಲಿ ಸೃಷ್ಟಿಮೊದಲು ಭೂಗೋಲಕಥನಾಂತವಾದ ವಿಷಯಗಳು ನಿರೂಪಿತವಾಗಿ ಇರುವುವು. ಈ ದ್ವಿತೀಯ ಸಂಪುಟದಲ್ಲಿ ಮೂವತ್ತೆರಡನೆಯ ಅಧ್ಯಾಯದಿಂದ ನಲವತ್ತೊಂಬತ್ತನೆಯ ಅಧ್ಯಾಯಾಂತವಾದ ಗ್ರಂಥಭಾಗವು ಪ್ರತಿಪಾದಿತವಾಗಿದೆ.

ಈ ಗ್ರಂಥಭಾಗವು ಮಾರ್ಕಂಡೇಯ ಸಹಸ್ರಾನೀಕ ಸಂವಾದವೆಂಬ ಮಹಾಸಂವಾದವಾಗಿದೆ. ಇದರಲ್ಲಿ ಮೂವತ್ತೆರಡನೆಯ ಅಧ್ಯಾಯದಿಂದ ಮೂವತ್ತೈದನೆಯ ಅಧ್ಯಾಯದ ಪೂರ್ತ ಶ್ರೀ ನರಸಿಂಹ ಪ್ರತಿಮಾ ಪ್ರತಿಷ್ಠಾವಿಧಿ, ಅದರ ಹಿರಿಮೆ, ಪ್ರಯೋಜನಗಳು ಇವನ್ನು ಸಂಕ್ಷೇಪವಾಗಿ ನಿರೂಪಿಸಿ, ಭರತವಂಶೀಯನಾದ ಜಯಧ್ವಜರಾಜನ ವೃತ್ತಾಂತವನ್ನು ನಿರೂಪಿಸುವುದರ ಮೂಲಕ ಭಗವತ್ಸೇವಾ ಎಂದಿಗೂ ವ್ಯರ್ಥವಾಗದೆ, ಶ್ರೀ ವಿಷ್ಣುಸಾರೂಪ್ಯಸಾಲೋಕ್ಯಾದಿ ಫಲಗಳನ್ನುಂಟು ಮಾಡುವುದೆಂದು ಹೇಳಿ, ಶ್ರೀ ಭಗವತ್ಪೂಜಾವಿಧಿಯನ್ನು ಬಿತ್ತರದಿಂದ ನಿರೂಪಿಸಿ, ಲಕ್ಷಹೋಮ ಮತ್ತು ಅದರ ಫಲ ಇವೂ ವರ್ಣಿತವಾಗಿವೆ.

ಇದರ ಮುಂದಣ ಗ್ರಂಥಭಾಗದಲ್ಲಿ ಮತ್ಸ್ಯಾದಿಪ್ರಾದುರ್ಭಾವಾನುಕ್ರಮಣವು ಕಥಿತವಾಗಿ, ಅನಂತರ ಭಗವಂತನ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಭಾರ್ಗವರಾಮ ಮತ್ತು ಶ್ರೀ ರಾಮ— ಈ ಅವತಾರಗಳ ಕಥೆಯು ನಿರೂಪಿತವಾಗಿದೆ. ಚೇತನಾಚೇತನಾತ್ಮಕವಾದ ಈ ಪ್ರಪಂಚಕ್ಕೆ ಯಥಾಯೋಗ್ಯವಾಗಿ ಉತ್ಪತ್ತಿ ಸ್ಥಿತಿ ಸಂಹಾರ ನಿಯಮನ ಜ್ಞಾನಾಜ್ಞಾನ ಬಂಧ ಮೋಕ್ಷಗಳನ್ನು ಕೊಡತಕ್ಕ ಸಾಕ್ಷಾತ್ಪರಬ್ರಹ್ಮನು ಅಪ್ರಾಕೃತಾನಂತ ಕಲ್ಯಾಣಗುಣ ಪೂರ್ಣನೂ, ದೋಷದೂರನೂ, ನಿತ್ಯನೂ, ಸರ್ವೋತ್ತಮನೂ, ಆಗಿರುತ್ತಾನೆ. ಅವನ ಅವತಾರರೂಪಗಳೂ ಅವನಂತೆಯೇ ಇರುವುವು. 'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ । ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥' (ಬೃ. ಉ. ೫-೧-೧) 'ವಾಸುದೇವಃ ಸಂಕರ್ಷಣಃ ಪ್ರದ್ಯುಮ್ನೋಽನಿರುದ್ಧೋಽಹಂ ಮತ್ಸ್ಯಃ ಕೂರ್ಮೋ ವರಾಹೋ ನಾರಸಿಂಹೋ ವಾಮನೋ ರಾಮೋ ರಾಮಃ

ಕೃಷ್ಣೋ ಬುದ್ಧಃ ಕಲ್ಕಿರಹಂ ಶತಧಾಹಂ ಸಹಸ್ರಧಾಹಂ ಅಮಿತೋಽಹಂ ಅನಂತೋಽಹಂ ನೈವೇತೇ ಜಾಯಂತೇ ನ ಮ್ರಿಯಂತೇ ನೈಷಾಮನುಜ್ಞಾನ ಬಂಧೋ ನ ಮುಕ್ತಿಃ ಸರ್ವ ಏವ ಹ್ಯೇತೇ ಪೂರ್ಣಾ ಅಜರಾಮೃತಾಃ ಪರಮಾಃ ಪರಾನಂದಾಃ ॥ (ಇತಿ ಚತುರ್ವೇದಶಿಖಾಯಾಂ) ತತ್ರೈವ 'ತಸ್ಯ ಹ ವಾ ಏತಸ್ಯ ಪರಮಸ್ಯ ತ್ರೀಣಿ ರೂಪಾಣಿ ಕೃಷ್ಣೋ ರಾಮಃ ಕಪಿಲ ಇತಿ ತಸ್ಯ ಹ ವಾ ಏತಸ್ಯ ಪರಮಸ್ಯ ಪಂಚ ರೂಪಾಣಿ, ದಶರೂಪಾಣಿ, ಶತರೂಪಾಣಿ, ಸಹಸ್ರರೂಪಾಣಿ, ಅಮಿತರೂಪಾಣಿ, ತಾನಿ ಹ ವಾ ಏತಾನಿ ಸರ್ವಾನಿ ಪೂರ್ಣಾನಿ ಸರ್ವಾಣ್ಯನಂತಾನಿ ಸರ್ವಾಣ್ಯಸಮ್ಮಿತಾನಿ;' ಈ ಶ್ರುತಿಗಳಲ್ಲಿ ಪರಬ್ರಹ್ಮನೂ, ಅವನ ಸ್ವರೂಪಾಂಶಗಳೂ ಪರಸ್ಪರವಾಗಿ ಅಭಿನ್ನ ಗಳು, ನಿತ್ಯಗಳು, ಪೂರ್ಣಗಳು, ಅನಾದ್ಯನಂತಗಳು—ಎಂಬಂಶಗಳು ವ್ಯಕ್ತ ವಾಗುವುವು.

'ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ॥' ಎಂಬ

ಈ ಗೀತಾ ವಚನದಂತೆ ಲೋಕದಲ್ಲಿ ಅಧರ್ಮವು ಹೆಚ್ಚಿ, ಧರ್ಮ ನಾಶವಾಗಿ ಸಜ್ಜನರಿಗೆ ದುಷ್ಟರ ಬಾಧೆಯುಂಟಾಗಿರಲು, ಅದನ್ನು ಬ್ರಹ್ಮಾದಿ ದೇವತೆಗಳೂ ಪರಿಹರಿಸಲಾಗದಿರುವಾಗ, ಭಗವಂತನೇ ತನ್ನ ಸ್ವರೂಪಾಂಶಗಳಾದ ರಾಮಕೃಷ್ಣಾ ದ್ಯವತಾರಗಳನ್ನು ಅಭಿವ್ಯಂಜನಮಾಡಿ, ಧರ್ಮನಾಶಕರಾದ ಆ ದುಷ್ಟರನ್ನು ನಾಶಮಾಡಿ, ಧರ್ಮಸಂಸ್ಥಾಪನೆಯನ್ನು ಮಾಡುವನು. ಈ ಅವತಾರಗಳಿಂದ 'ಮರ್ತ್ಯಾವತಾರಸ್ತ್ವಿಹ ಮರ್ತ್ಯಶಿಕ್ಷಣಂ ರಕ್ಷೋವಧಾಯೈವ ನ ಕೇವಲಂ ವಿಭೋಃ ॥' ಎಂಬಂತೆ ಭಗವಂತನು ಕೇವಲ ದುಷ್ಟಸಂಹಾರ ಕಾರ್ಯವನ್ನು ಮಾಡದೆ, ತನ್ನ ಸದ್ವೃತ್ತದಿಂದ ಮಾನವರಿಗೆ ಧರ್ಮೋಪದೇಶವನ್ನೂ ಮಾಡಿರುತ್ತಾನೆ. ಭಗವಂತನ ಈ ಅವತಾರಗಳಲ್ಲಿ ದುಃಖಾದ್ಯನುಭವವನ್ನು ತೋರಿಸಿರುವುದು ಕೇವಲ ನಟನೆಯೇ ಹೊರತು, ಪೂರ್ಣಾನಂದನಾದವನಿಗೆ ದುಃಖವೆಲ್ಲಿಯದು? ಎಂದು ತಿಳಿಯ ಬೇಕು. ಅಂತಲ್ಲದೆ ಅನ್ಯಥಾ ಎಣಿಸಿದರೆ ಅದರಿಂದ ಅಧಿಕಾರಿಗಳು ತತ್ತ್ವಜ್ಞಾನರಹಿತ

ರಾಗಿ, ಪಾಪ ಭಾಗಿಗಳಾಗುವುವರಲ್ಲಿ ಸಂಶಯವಿಲ್ಲ. ರಾಮಾದ್ಯವತಾರಗಳಲ್ಲಿ ದುಃಖ ಪ್ರದರ್ಶನಮಾಡಿರುವುದು 'ಲೋಕದಲ್ಲಿ ಕೇವಲ ಸ್ತ್ರೀ ವ್ಯಾಮೋಹವುಳ್ಳವರು ಹೀಗೆ ದುಃಖಗೊಳ್ಳುವರು,' ಎಂದು ಮರ್ತ್ಯಶಿಕ್ಷಣವೇ ಹೊರತು ಅನ್ಯಥಾ ಅಲ್ಲ.

ಲೋಕದಲ್ಲಿ ಉನ್ಮತ್ತನಾದವನು ಕೇವಲ ಸುಖದಿಂದ ನೃತ್ತಗಾಯನಾದಿಗಳಲ್ಲಿ ತೊಡಗುವಂತೆ, ಪೂರ್ಣಕಾಮನಾದ ಭಗವಂತನು ಲೋಕಸೃಷ್ಟ್ಯಾದಿವ್ಯಾಪಾರವನ್ನು ಕೇವಲ ಆನಂದದಿಂದ ಮಾಡುವನೇ ಹೊರತು ಮತ್ತಾವ ಫಲಾಪೇಕ್ಷೆಯಿಂದಲ್ಲವು. ಇದು ಅವನಸ್ವಭಾವ; ಅವನು ಸತ್ಯಸಂಕಲ್ಪನು. ಆದುದರಿಂದ ಕೇವಲ ತನ್ನಿಚ್ಛೆಯಿಂದಲೇ ಸೃಷ್ಟ್ಯಾದಿ ವ್ಯಾಪಾರವನ್ನೆಸಗುವನು. ಈ ತತ್ತ್ವವು ಕೇವಲ ಶಾಸ್ತ್ರೈಕ ಸಮಧಿಗಮ್ಯವಾದುದು.

ಶ್ರೀ ಪರಮಾತ್ಮನು ಸರ್ವತ್ರವ್ಯಾಪ್ತ, ಅವನ ಅವತಾರಗಳೂ ಅಪ್ರಾಕೃತಗಳು, ಪೂರ್ಣಗಳು, ಅಚಿಂತ್ಯಾದ್ಭುತ ಶಕ್ತಿಯುಳ್ಳವು- ಎಂಬಂಶವನ್ನು ಶ್ರೀ ನರಸಿಂಹಾವತಾರವು ವ್ಯಕ್ತಪಡಿಸುತ್ತದೆ. ಪ್ರಹ್ಲಾದ ಚರಿತೆಯಿಂದ ಸ್ಥಿತಪ್ರಜ್ಞನಾದವನ ಅನುಭವಗಳೆಂತಹವು ಎಂಬವು ತಿಳಿದು ಬರುತ್ತವೆ.

ಶ್ರೀ ರಾಮಾವತಾರ ಚರಿತೆಯಲ್ಲಿ ಈ ಸಂಪುಟದಲ್ಲಿ ಅರಣ್ಯಕಾಂಡಾಂತವಾದ ಕಥೆಯ ಮುಖ್ಯ ಘಟ್ಟಗಳು ಮೂರು ಅಧ್ಯಾಯಗಳಲ್ಲಿ ಸಂಗ್ರಹವಾಗಿ ಸ್ವಾರಸ್ಯವಾಗಿ ನಿರೂಪಿತವಾಗಿವೆ.

ಮೂರನೆಯ ಸಂಪುಟದಲ್ಲಿ ಶ್ರೀ ರಾಮಚರಿತೆಯ ಕಿಷ್ಕಿಂಧಾಸುಂದರಕಾಣ್ಡ ಮತ್ತು ಯುದ್ಧಕಾಣ್ಡ ಕಥಾಭಾಗವೂ, ಶ್ರೀ ಕೃಷ್ಣಪ್ರಾದುರ್ಭಾವವೂ, ಕಲಿಲಕ್ಷಣ ನಿರೂಪಣಾದಿಗಳೂ, ವರ್ಣಾಶ್ರಮ ಧರ್ಮಾದಿನಿರೂಪಣವೂ, ಮಂತ್ರತೀರ್ಥ ಮಹಿಮಾದಿಗಳೂ ನಿರೂಪಿತಗಳಾಗುವುವು.

ಅಧಿಕಾರಿಯು ಪರಬ್ರಹ್ಮನ ಸ್ವರೂಪ ಮತ್ತು ಅವತಾರಗಳು— ಇವುಗಳ ತತ್ತ್ವವನ್ನು ಯಥಾವತ್ತಾಗಿ ತಿಳಿದು, ಅವನಲ್ಲಿ ನಿರತಿಶಯವಾದ ಮಹಾತ್ಮ್ಯಜ್ಞಾನ ಪೂರ್ವಕ ಸುದೃಢಸ್ನೇಹಾತ್ಮಕವಾದ ಭಕ್ತಿಯನ್ನು ಮಾಡಿ, ಅದರಿಂದ ಪರಮ ಫಲವಾದ ಕೈವಲ್ಯವನ್ನು ಪಡೆಯುವುದೆಂದು ಈ ಗ್ರಂಥದಲ್ಲಿ ನಿರೂಪಿತವಾಗಿದೆ.

ಇಂತಹ ಉತ್ಕೃಷ್ಟಗ್ರಂಥದ ಅಭಿಪ್ರಾಯವನ್ನು ತಮ್ಮ ದೇಶದ ಪ್ರಜೆಗಳು ಗ್ರಹಿಸಿ, ಧರ್ಮಾಚರಣೆಯಲ್ಲಿ ಆಸಕ್ತರಾಗಿ, ಸತ್ಫಲವನ್ನು ಪಡೆಯಲೆಂಬ ಅಭಿಪ್ರಾಯದಿಂದ ನಮ್ಮನ್ನಾಳುವ ಪ್ರಜಾವತ್ಸಲರೂ, ಆತ್ಮತತ್ತ್ವವಿಚಾರಾಸಕ್ತರೂ, ಧರ್ಮ ಕಾರ್ಯತತ್ಪರರೂ, ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,** ಜಿ. ಸಿ. ಬಿ., ಜಿ. ಸಿ. ಎಸ್. ಐ., ಮಹಾ ಪ್ರಭುಗಳವರು ಕನ್ನಡ ಭಾಷೆಯಲ್ಲಿ ಪ್ರಕಾಶ ಪಡಿಸಲು ಆಜ್ಞೆಯಿತ್ತುದರಿಂದ, ಮೂಲಶ್ಲೋಕದೊಡನೆ ಶ್ಲೋಕಾಭಿಪ್ರಾಯವನ್ನು ತಿಳಿಗನ್ನಡದಲ್ಲಿ ಅನುವಾದ ಮಾಡಲಾಗಿದೆ. ಈ ಮಹಾ ಕಾರ್ಯವನ್ನು ನೆರವೇರಿಸಲು ಸಕಲ ವಿಧದಲ್ಲಿಯೂ ಪ್ರೋತ್ಸಾಹವನ್ನಿತ್ತ ಮಹಾ ಸ್ವಾಮಿಗಳವರಿಗೆ ಪರಮಾತ್ಮನು ಸುಖಸಂತೋಷಗಳನ್ನು ಶಾಶ್ವತವಾಗಿ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು.
ತಾ|| ೧೭–೪–೧೯೪೯
ಸದ್ವಿರೋಧಿ ಚೈತ್ರ ಬಹುಳ
ಪಂಚಮೀ ಭಾನುವಾರ

ನಾ. ವಾ. ಪದ್ಮನಾಭಾಚಾರ್ಯ,
ಆಸ್ಥಾನ ವಿದ್ವಾನ್, ಪಂಡಿತ,
ಸರ್ಕಾರದ ಶಿಕ್ಷಣ ಮಹಾ ಪಾಠಶಾಲಾ,
ಮೈಸೂರು.

ಶ್ರೀ ನರಸಿಂಹಪುರಾಣ : ಸಂಪುಟ ೨

ವಿಷಯಾನುಕ್ರಮಣಿಕೆ.

---

೪. ಹರ್ಯವತಾರಾದಿ ನಿರೂಪಣಮ್.

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಅಧ್ಯಾಯ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಕೊಡತಕ್ಕ ವರಗಳಲ್ಲಿ ಒಂದಕ್ಕೆ ಶ್ರೀರಾಮನು ಕಾಡಿನಲ್ಲಿ ಹನ್ನೆರಡು ವರ್ಷ ತಪಸ್ಸು ಮಾಡಿಕೊಂಡಿರುವುದು, ಮತ್ತೊಂದಕ್ಕೆ ಭರತನಿಗೆ ರಾಜ್ಯವೀವುದು ಎಂದು ಹೇಳಲು, ದಶರಥನು ಮೂರ್ಛಾಕ್ರಾಂತನಾದುದು. ಬೆಳಗ್ಗೆ ಯಾಗಮಂಟಪದಲ್ಲಿದ್ದ ಶ್ರೀರಾಮನನ್ನು ಬರಮಾಡಿಕೊಂಡು ಕೈಕೆ ಅವನಿಗೆ ಈ ಸಂಗತಿಯನ್ನು ಹೇಳುವಳು. ರಾಮನು ವನಕ್ಕೆ ತೆರಳಲು ಸಿದ್ಧನಾಗುವನು. ಆಗ ಲಕ್ಷ್ಮಣನೂ ಸೀತೆಯೂ ಹಿಂಬಾಲಿಸುವರು. ರಾಮನ ವನಪ್ರಸ್ಥಾನ. ಪರಿಜನ ಪುರಜನರ ಪ್ರಲಾಪ. ಶ್ರೀರಾಮನು ಅವರನ್ನು ಸಮಾಧಾನಗೊಳಿಸಿ ಹೊರಟುದು. ಶೃಂಗಿಬೇರಪುರಕ್ಕೆ ಬಂದು, ಅಲ್ಲಿ ಗುಹನೆಂಬ ಅಂಬಿಗನ ಸಹಾಯದಿಂದ ಗಂಗೆಯನ್ನು ದಾಟಿ, ಚಿತ್ರಕೂಟವನ್ನು ಸೇರಿ, ಪರ್ಣಶಾಲೆಯನ್ನು ಮಾಡಿಕೊಂಡು ವಾಸ ಮಾಡಿದುದು. ಇತ್ತ ಅಯೋಧ್ಯೆಯಲ್ಲಿ ದಶರಥನ ಮರಣ. ಭರತನನ್ನು ವಸಿಷ್ಠರು ಕರೆಯಿಸಿ, ದಶರಥನ ಔರ್ಧ್ವದೇಹಿಕ ಕರ್ಮವನ್ನು ಮಾಡಿಸಿ ರಾಜ್ಯವನ್ನು ಸ್ವೀಕರಿಸು ಎನಲು, ಅವನು ಶ್ರೀರಾಮನನ್ನು ಕರೆತರಲು ಮಾತೆಯರು, ಪರಿಜನರು, ಪುರಜನರು–ಇವರೊಡನೆ ಚಿತ್ರಕೂಟಕ್ಕೆ ಬಂದು, ಶ್ರೀರಾಮನನ್ನು ಪ್ರಾರ್ಥಿಸುವುದು. ಶ್ರೀರಾಮನು ಪಿತೃಮರಣದಿಂದ ದುಃಖಗೊಂಡು, ಮಲಾಪಹಾರಿಣಿಯಲ್ಲಿ ಮಿಂದು ತರ್ಪಣಾದಿಗಳನ್ನಿತ್ತು, ಭರತನಿಗೆ ಅಯೋಧ್ಯೆಗೆ ಹಿಂದಿರುಗಿ, ಪ್ರಜೆಗಳನ್ನು ರಕ್ಷಿಸುವುದು ಕರ್ತವ್ಯವು, ತನ್ನ ಮಾತು ಅವನಿಗೆ ಪಿತೃವಾಕ್ಯಸಮವೆನಲು, ಅವನು	

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್

ದ್ವಾತ್ರಿಂಶೋಽಧ್ಯಾಯಃ

ಸಹಸ್ರಾನೀಕ ಚರಿತೇ ಶ್ರೀ ನರಸಿಂಹಪ್ರತಿಷ್ಠಾವಿಧಾನಮ್.

॥ ಭರದ್ವಾಜ ಉವಾಚ ॥

ಸಹಸ್ರಾನೀಕಸ್ಯ ಹರೇರವತಾರಸ್ಯ ಶಾರ್ಙ್ಗಿಣಃ ।
ಸಾಂಪ್ರತಂ ಶ್ರೋತುಮಿಚ್ಛಾಮಿ ತನ್ಮೇ ವದ ಮಹಾಮತೇ ॥ ೧ ॥

ಹರ್ಯವತಾರಾದಿ ನಿರೂಪಣವು.

ಮೂವತ್ತೆರಡನೆಯ ಅಧ್ಯಾಯವು.

ಸಹಸ್ರಾನೀಕ ಚರಿತ್ರೆಯಲ್ಲಿ ಶ್ರೀನರಸಿಂಹ ಪ್ರತಿಷ್ಠಾವಿಧಾನವು.

ಭರದ್ವಾಜಮುನಿಯು ಸೂತರನ್ನು ಕುರಿತು ಇಂತು ಹೇಳುತ್ತಾನೆ.

೧. 'ಎಲೈ ಮಹಾಮತಿಗಳಾದ ಸೂತರೇ! ಇನ್ನು ಈಗ ಸಹಸ್ರಾನೀಕನೆಂಬ ರಾಯನ ಮತ್ತು ಶಾರ್ಙ್ಗವೆಂಬ ಧನುರ್ಧಾರಿಯಾದ ಶ್ರೀಹರಿಯ ಅವತಾರ ವೃತ್ತಾಂತವನ್ನು ಕೇಳಲೆಳಸುತ್ತೇನೆ. ಅದನ್ನು ದಯಮಾಡಿ ನನಗೆ ಹೇಳಿರಿ;

ಎಂದು ಭರದ್ವಾಜನು ಹೇಳಲು,

॥ ಸೂತ ಉವಾಚ ॥

ಹಂತ ತೇ ಕಥಯಿಷ್ಯಾಮಿ ಚರಿತಂ ತಸ್ಯ ಧೀಮತಃ ।
ಸಹಸ್ರಾನೀಕಸ್ಯ ಹರೇರವತಾರಾಂಶ್ಚ ಮೇ ಶೃಣು ॥ ೨ ॥

ಸಹಸ್ರಾನೀಕೋಽಭಿಷಿಕ್ತೋ ನಿಜರಾಜ್ಯೇ ದ್ವಿಜೋತ್ತಮ ।
ಪಾಲಯಾಮಾಸ ಧರ್ಮೇಣ ರಾಜ್ಯಂ ಸ ತು ನೃಪಾತ್ಮಜಃ ॥ ೩ ॥

ತಸ್ಯ ಪಾಲಯತೋ ರಾಜ್ಯಂ ರಾಜಪುತ್ರಸ್ಯ ಧೀಮತಃ ।
ಭಕ್ತಿರ್ಬಭೂವ ದೇವೇಶೇ ನರಸಿಂಹೇ ಸುರೋತ್ತಮೇ ॥ ೪ ॥

ತಂ ದ್ರಷ್ಟುಮಾಗತಃ ಸಾಕ್ಷಾದ್ವಿಷ್ಣುಭಕ್ತಂ ಭೃಗುಂ ಪುರಾ ।
ಅರ್ಘ್ಯಪಾದ್ಯಾಸನೈ ರಾಜಾ ತಮಭ್ಯರ್ಚ್ಯಾಬ್ರವೀದಿದಮ್ ॥ ೫ ॥

ಸೂತರು ಭರದ್ವಾಜನಿಗೆ ಇಂತು ಹೇಳುತ್ತಾರೆ.

೨. "ಎಲೈ ಭರದ್ವಾಜಮುನಿಯೇ ! ಕೇಳು ; ಆಹಾ ! ಆ ಜ್ಞಾನಿಯಾದ ಸಹಸ್ರಾನೀಕನ ಚರಿತೆಯನ್ನು ಮತ್ತು ಶ್ರೀಹರಿಯ ಅವತಾರಗಳನ್ನು ನಾನು ನಿನಗೆ ಹೇಳುವೆನು. ಅವನ್ನು ಸಡ್ಡೆಯಿಂದ ಕೇಳು.

೩. ದ್ವಿಜನಾದ ಭರದ್ವಾಜ ! ಕೇಳು ; ಆ ಅರಗುವರನಾದ ಸಹಸ್ರಾನೀಕನು ಪ್ರಾಪ್ತವಯಸ್ಕನಾಗಲು, ಉತ್ತಮವಾದ ತನ್ನ ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ, ತರುವಾಯ ತನ್ನ ರಾಜ್ಯವನ್ನು ಅವನು ಧರ್ಮ ಮಾರ್ಗದಿಂದ ಪಾಲಿಸಿದನು.

೪. ಅಂತು ತನ್ನ ದೇಶವನ್ನು ಧರ್ಮದಿಂದ ಪರಿಪಾಲಿಸುತ್ತಲಿದ್ದ, ಜ್ಞಾನಿಯಾದ ಆ ರಾಯಕುವರನಿಗೆ ಸಕಲ ದೇವ ನಿಯಾಮಕನೂ, ಸರ್ವೋತ್ತಮನೂ ಆದ ಶ್ರೀನರಸಿಂಹನಲ್ಲಿ ಮಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹವೆಂಬ ಭಕ್ತಿಯು ಮೂಡಿತು.

೫. ಪೂರ್ವದಲ್ಲಿ ಒಮ್ಮೆ ಭೃಗುಮುನಿಯು ಸಾಕ್ಷಾದ್ವಿಷ್ಣುಭಕ್ತನಾದ ಆ ಸಹಸ್ರಾನೀಕನನ್ನ ನೋಡಬೇಕೆಂದು ಬಂದನು. ಆ ರಾಯನು ಅರ್ಘ್ಯ ಪಾದ್ಯಾಸನಗಳಿಂದ ಆ ಭೃಗುಮುನಿಯನ್ನು ಪೂಜಿಸಿ, ಈ ವಾಕ್ಯವನ್ನು ಹೇಳಿದನು.

ಪಾವಿತೋಽಹಂ ಮುನಿಶ್ರೇಷ್ಠ ಸಾಂಪ್ರತಂ ತವ ದರ್ಶನಾತ್ ।
ತ್ವದ್ದರ್ಶನಮಪುಣ್ಯಾನಾಂ ಕಲಾವಸ್ಮಿನ್ ಸುದುರ್ಲಭಮ್ ॥ ೬ ॥

ನರಸಿಂಹಂ ಪ್ರತಿಷ್ಠಾಪ್ಯ ದೇವದೇವಂ ಸನಾತನಮ್ ।
ಆರಾಧಯಿತುಮಿಚ್ಛಾಮಿ ವಿಧಾನಂ ತತ್ರ ಮೇ ವದ ॥ ೭ ॥

ಅವತಾರಾನಶೇಷಾಂಶ್ಚ ದೇವದೇವಸ್ಯ ಚಕ್ರಿಣಃ ।
ಶ್ರೋತುಮಿಚ್ಛಾಮಿ ಸಕಲಾಂಸ್ತಾನ್ ಪುಣ್ಯಾನಪಿ ಮೇ ವದ ॥ ೮ ॥

॥ ಭೃಗುರುವಾಚ ॥

ಶೃಣು ಭೂಪಾಲಪುತ್ರ ತ್ವಂ ನ ಹಿ ಕಶ್ಚಿತ್ಕಲೌಯುಗೇ ।
ಹರೌ ಭಕ್ತಿಂ ಕರೋತ್ಯತ್ರ ನೃಸಿಂಹೇ ಚಾತಿಭಕ್ತಿಮಾನ್ ॥ ೯ ॥

---

೬. "ಎಲೈ ಮುನಿಶ್ರೇಷ್ಠನಾದ ಭೃಗುವೇ! ಇಂದು ನಿನ್ನ ದರ್ಶನದಿಂದ ನಾನು ಶುದ್ಧನಾದೆನು. ಈ ಕಲಿಗಾಲದಲ್ಲಿ ಪಾಪಾತ್ಮರಿಗೆ ನಿನ್ನ ದರ್ಶನವೊದಗು ವುದು ದುರ್ಲಭವು.

೭. ದೇವಶ್ರೇಷ್ಠನಾದ, ಆದಿಮಧ್ಯಾಂತರಹಿತನಾದ ಶ್ರೀನರಸಿಂಹನನ್ನು ಪ್ರತಿಷ್ಠಾಪಿಸಿ, ಪೂಜಿಸಲೆಳಸುವೆನು. ಆ ವಿಷಯದಲ್ಲಿ ಶಾಸ್ತ್ರೋಕ್ತಕ್ರಮವನ್ನು (ನಿಯಮವನ್ನು) ದಯಮಾಡಿ ನನಗೆ ಹೇಳು.

೮. ದೇವೋತ್ತಮನಾದ, ಶ್ರೀಸುದರ್ಶನವೆಂಬ ಚಕ್ರವನ್ನು ತಾಳಿರುವ ಶ್ರೀಮನ್ನಾರಾಯಣನ ಅವತಾರಗಳನ್ನೆಲ್ಲಾ ಕೇಳಬಯಸುವೆನು. ಪುಣ್ಯಸಂಪಾದಕ ವಾದ ಅವೆಲ್ಲವನ್ನೂ ನನಗೆ ಕೃಪೆಮಾಡಿ ಹೇಳು.

ಎಂದು ಆ ರಾಯನು ವಿಜ್ಞಾಪಿಸಲು ಭೃಗುಮುನಿಯು ಹೇಳುತ್ತಾನೆ.

"ಕೇಳು; ರಾಜಕುಮಾರ! ಸಾಮಾನ್ಯವಾಗಿ ಹರಿಯ ಸ್ವರೂಪಾಂಶನಾದ ಶ್ರೀನರಸಿಂಹಸ್ವಾಮಿಯಲ್ಲಿ ಅತ್ಯಂತ ಭಕ್ತಿಯುಳ್ಳವನು ಯಾವನೂ ಈ ಕಲಿಯುಗ ದಲ್ಲಿ ತಾನು ಶ್ರೀಹರಿಯಲ್ಲಿ ಬಕುತಿಮಾಡುವುದಿಲ್ಲ.

ಸ್ವಭಾವಾದ್ಯಸ್ಯಭಕ್ತಿಃ ಸ್ಯಾನ್ನರಸಿಂಹೇ ಸುರೋತ್ತಮೇ ।
ತಸ್ಯಾರಯಃ ಪ್ರಣಶ್ಯಂತಿ ಕಾರ್ಯಸಿದ್ಧಿಶ್ಚ ಜಾಯತೇ ॥ ೧೦ ॥

ತ್ವಮತೀವ ಹರೇರ್ಭಕ್ತಃ ಪಾಂಡುವಂಶೇಽಪಿ ಸತ್ತಮಃ ।
ತೇನ ತೇ ನಿಖಿಲಂ ವಕ್ಷ್ಯೇ ಶೃಣುಷ್ವೈಕಾಗ್ರಮಾನಸಃ ॥ ೧೧ ॥

ಯಃ ಕುರ್ಯಾಚ್ಛೋಭನಂ ವೇಶ್ಮ ನರಸಿಂಹಸ್ಯ ಭಕ್ತಿಮಾನ್ ।
ಸ ಸರ್ವಪಾಪ ನಿರ್ಮುಕ್ತೋ ವಿಷ್ಣುಲೋಕಮವಾಪ್ನುಯಾತ್ ॥ ೧೨ ॥

ಪ್ರತಿಮಾಂ ಲಕ್ಷಣೋಪೇತಾಂ ನರಸಿಂಹಸ್ಯ ಕಾರಯೇತ್ ।
ಸ ಸರ್ವಪಾಪ ನಿರ್ಮುಕ್ತೋ ವಿಷ್ಣುಲೋಕಮವಾಪ್ನುಯಾತ್ ॥ ೧೩ ॥

ಯಾವ ಮಾನವನಿಗೆ ದೇವೋತ್ತಮನಾದ ಶ್ರೀನರಸಿಂಹನಲ್ಲಿ ಸಹಜವಾದ ಭಕ್ತಿಯಿರುವುದೋ, ಅವನ ಹಗೆಗಳು ಅಳಿವನ್ನೈದುವರಲ್ಲದೆ, ಅವನು ಕೈಕೊಂಡ ಕಜ್ಜವೂ ನೆರವೇರುವುದು.

೧೧. ನೀನು ಶ್ರೀಹರಿಯ ಅತ್ಯಂತ ಭಕ್ತನು; ಮತ್ತು ಪಾಂಡುವಂಶದಲ್ಲಿ ಶ್ರೇಷ್ಠನು. ಆದುದರಿಂದ ನಿನಗೆ ಎಲ್ಲವನ್ನೂ ಅರುಹುವೆನು; ಸ್ಥಿರವಾದ ಮನಸ್ಸುಳ್ಳವನಾಗಿ (ಅವಧಾನದಿಂದ) ಕೇಳು.

೧೨. ಯಾವಾತನು ಭಕ್ತಿಯುತನಾಗಿ ಶ್ರೀನರಹರಿಗೆ ಮಂಗಳವಾದ ಆಲಯವನ್ನೊಡರಿಸುವನೋ, ಅವನು ಸರ್ವ ಪಾಪಗಳನ್ನೂ ಕಳೆದುಕೊಂಡು, ವೈಕುಂಠಾದಿ ವಿಷ್ಣುಲೋಕವನ್ನೈದುವನು.

೧೩. ಯಾವಾತನು ಶಿಲ್ಪ ಮತ್ತು ಆಗಮ- ಈ ಶಾಸ್ತ್ರಗಳಲ್ಲಿ ಹೇಳಿರುವ ರೀತಿಯಲ್ಲಿ ಸಕಲ ಲಕ್ಷಣಗಳಿಂದ ಕೂಡಿದ ಪ್ರತಿಮೆಯನ್ನು ಮಾಡಿಸುತ್ತಾನೆಯೋ, ಅವನು ಸಕಲ ಪಾಪಗಳಿಂದ ಮುಕ್ತನಾಗಿ, ವಿಷ್ಣುಲೋಕವನ್ನೈದುವನು.

ಪ್ರತಿಷ್ಠಾಂ ನರಸಿಂಹಸ್ಯ ಯಃ ಕರೋತಿ ಯಥಾವಿಧಿ ।
ನಿಷ್ಕಾಮೋ ನರಶಾರ್ದೂಲ ದೇಹಬಾಧಾತ್ಪ್ರಮುಚ್ಯತೇ ॥ ೧೪ ॥

ನರಸಿಂಹಂ ಪ್ರತಿಷ್ಠಾಪ್ಯ ಯಃ ಪೂಜಾಮಾಚರೇನ್ನರಃ ।
ತಸ್ಯ ಕಾಮಾಃ ಪ್ರಸಿದ್ಧ್ಯಂತಿ ಪರಮಂ ಪದಮಾಪ್ನುಯಾತ್ ॥ ೧೫ ॥

ಬ್ರಹ್ಮಾದಯಃ ಸುರಾಸ್ಸರ್ವೇ ವಿಷ್ಣುಮಾರಾಧ್ಯ ತೇ ಪುರಾ ।
ಸ್ವಂ ಸ್ವಂ ಪದಮನುಪ್ರಾಪ್ತಾಃ ಕೇಶವಸ್ಯ ಪ್ರಸಾದತಃ ॥ ೧೬ ॥

ಯೇ ಯೇ ನೃಪವರಾ ರಾಜನ್ ಮಾಂಧಾತೃಪ್ರಮುಖಾ ನೃಪಾಃ ।
ತೇ ತೇ ವಿಷ್ಣುಂ ಸಮಾರಾಧ್ಯ ಸ್ವರ್ಗಲೋಕಮಿತೋ ಗತಾಃ ॥ ೧೭ ॥

---

೧೪. ಎಲೈ ನರಶ್ರೇಷ್ಠನೇ! ಕೇಳು; ಯಾವಾತನು ಪಾಂಚರಾತ್ರಾದ್ಯಾಗಮಗಳಲ್ಲಿ ಹೇಳಿರುವ ನಿಯಮಗಳನ್ನನುಸರಿಸಿ, ಶ್ರೀ ನರಹರಿ ಪ್ರತಿಮೆಯನ್ನು ಫಲಾಪೇಕ್ಷೆಯಿಲ್ಲದೆ ಪ್ರತಿಷ್ಠೆ ಮಾಡುತ್ತಾನೆಯೋ, ಅವನು ಸಕಲವಾದ ದೇಹಬಾಧೆಯಿಂದ ಮುಕ್ತನಾಗುತ್ತಾನೆ.

ಯಾವ ನರನು ಶ್ರೀನರಸಿಂಹ ವಿಗ್ರಹವನ್ನು ವಿಧ್ಯನುಸಾರವಾಗಿ ಪ್ರತಿಷ್ಠಾಪಿಸಿ, ಪೂಜೆಯನ್ನಾಚರಿಸುತ್ತಾನೆಯೋ, ಅವನಿಗೆ ಅಭೀಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು; ಮತ್ತು ಆತನು ಉತ್ತಮಸ್ಥಾನವಾದ ವೈಕುಂಠಾದಿ ಲೋಕಗಳನ್ನೈದುವನು.

೧೬. ಪೂರ್ವದಲ್ಲಿ ಲೋಕಪ್ರಸಿದ್ಧರಾದ ಚತುರ್ಮುಖಬ್ರಹ್ಮನೇ ಮೊದಲಾದ ದೇವತೆಗಳು ಶ್ರೀಮಹಾವಿಷ್ಣುವನ್ನು ಸೇವಿಸಿ, ಆ ಶ್ರೀಕೇಶವನ ಅನುಗ್ರಹದಿಂದ ತಂತಮ್ಮ ಬ್ರಹ್ಮಾದಿಪದವಿಯನ್ನು ಪಡೆದರು.

೧೭. ಕೇಳು ದೊರೆಯೇ! ಮಾಂಧಾತನೇ ಮೊದಲಾದ ಯಾವ ನೃಪೋತ್ತಮರಿದ್ದರೋ, ಆ ರಾಯರೆಲ್ಲರೂ ಶ್ರೀಮಹಾವಿಷ್ಣುವನ್ನು ಆರಾಧಿಸಿಯೇ ಈ ಭೂಲೋಕದಿಂದ ಸ್ವರ್ಗಲೋಕವನ್ನು ಹೊಂದಿದರು.

ಯಸ್ತು ಪೂಜಯತೇ ನಿತ್ಯಂ ನರಸಿಂಹಂ ಸುರೇಶ್ವರಮ್ ।
ಸ ಸ್ವರ್ಗಮೋಕ್ಷಭಾಗೀ ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ॥ ೧೮ ॥

ತಸ್ಮಾದೇಕಮನಾ ಭೂತ್ವಾ ಯಾವಜ್ಜೀವಂ ಪ್ರತಿಜ್ಞಯಾ ।
ಅರ್ಚನಾನ್ನರಸಿಂಹಸ್ಯ ಪ್ರಾಪ್ಸ್ಯಸೇ ಸ್ವಾಭಿವಾಂಛಿತಮ್ ॥ ೧೯ ॥

ವಿಧಿವತ್ಸ್ಥಾಪಯೇದ್ಯಸ್ತು ಕಾರಯಿತ್ವಾ ಜನಾರ್ದನಮ್ ।
ನ ತು ನಿರ್ಗಮನಂ ತಸ್ಯ ವಿಷ್ಣುಲೋಕಾದ್ಭವೇನ್ನೃಪ ॥ ೨೦ ॥

---

೧೮. ಯಾವ ಮಾನವನು ನಿಚ್ಚದಲ್ಲಿಯೂ ದೇವೋತ್ತಮನಾದ ಶ್ರೀನರಹರಿಯನ್ನು ಸೇವಿಸುತ್ತಾನೆಯೋ, ಅವನು ಸ್ವರ್ಗವನ್ನೂ, ಮೋಕ್ಷವನ್ನೂ ಹೊಂದುವನು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲವು.

೧೯. ಎಲೈ ದೊರೆಯೇ! ಶ್ರೀನರಸಿಂಹ ಭಕ್ತರಿಗೆ ಇಂತು ಸತ್ಫಲಗಳು ದೊರಕುವುದರಿಂದ, ನೀನು ಈ ಮಾನವ ಜನ್ಮದಲ್ಲಿ ಜೀವಿಸಿರುವವರೆಗೂ ಪ್ರತಿಜ್ಞೆಯಿಂದ ಏಕಾಗ್ರಮನನಾಗಿದ್ದು, ಶ್ರೀನರಹರಿಯನ್ನು ಪೂಜಿಸುವುದರಿಂದ, ನಿನ್ನ ಮನದ ಕೋರಿಕೆಯೆಲ್ಲವನ್ನೂ ಹೊಂದುವವನಾಗುವೆ.

೨೦. ಎಲೈ ರಾಯನೇ! ಕೇಳು; ಯಾವ ಮಾನವನು ಶಾಸ್ತ್ರೋಕ್ತನಿಯಮದಂತೆ ಜನಾರ್ದನನಾದ ಶ್ರೀನರಹರಿಯ ವಿಗ್ರಹವನ್ನು ಕಟೆಯಿಸಿ, ಪ್ರತಿಷ್ಠೆಯನ್ನೆಸಗುವನೋ, ಅವನು ಶ್ರೀಮಹಾವಿಷ್ಣುವಿನ ಲೋಕಗಳಾದ ವೈಕುಂಠಾದಿಗಳಿಂದ ಹೊರಗೆ ಬರದೆ, ಸ್ಥಿರವಾಗಿ ಅಲ್ಲಿಯೇ ವಾಸಿಸುವನು.

ನರೋ ನೃಸಿಂಹಂ ತಮನಂತವಿಕ್ರಮಂ
ಸುರಾಸುರೈರರ್ಚಿತಪಾದಪಂಕಜಮ್ ।
ಸಂಸ್ಥಾಪ್ಯ ಭಕ್ತ್ಯಾ ವಿಧಿವಚ್ಚ ಪೂಜಯೇ-
ತ್ಸ ಪ್ರಯಾತಿ ಸಾಕ್ಷಾತ್ಪರಮೇಶ್ವರಂ ಹರಿಮ್ ॥ ೨೧ ॥

ಇತಿ ಶ್ರೀ ನರಸಿಂಹಪುರಾಣೇ ಸಹಸ್ರಾನೀಕ ಚರಿತೇ ಶ್ರೀ ನರಸಿಂಹ ಪ್ರತಿಷ್ಠಾವಿಧಾನಂ ನಾಮ ದ್ವಾತ್ರಿಂಶೋಽಧ್ಯಾಯಃ

---

೨೧. ಯಾವ ಮಾನವನು ಪೂರ್ಣಶಕ್ತನೂ, ಸುರಾಸುರರಿಂದ ಪೂಜಿತವಾದ ಅಡಿದಾವರೆಯುಳ್ಳವನೂ ಆದ ಶ್ರೀನರಸಿಂಹನ ವಿಗ್ರಹವನ್ನು ಕಟೆಯಿಸಿ, ಪಾಂಚರಾತ್ರಾದ್ಯಾಗಮ ಶಾಸ್ತ್ರೋಕ್ತ ನಿಯಮದಂತೆ ಪ್ರತಿಷ್ಠೆಯನ್ನು ಮಾಡಿಸಿ ಭಕ್ತಿಯಿಂದ ಪೂಜಿಸುತ್ತಾನೆಯೋ, ಅವನು ಸರ್ವ ಶ್ರೇಷ್ಠನಾದ ಪ್ರಭುವಾದ ಸಾಕ್ಷಾದ್ಧರಿಯ ಲೋಕವನ್ನು ಶಾಶ್ವತವಾಗಿ ಹೊಂದುತ್ತಾನೆ.'

ಎಂದು ಭೃಗುಮುನಿಯು ಸಹಸ್ರಾನೀಕನಿಗೆ ಹೇಳಿದನೆಂದು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀನರಸಿಂಹ ಪುರಾಣದಲ್ಲಿ ಸಹಸ್ರಾನೀಕ ಚರಿತ್ರೆಯಲ್ಲಿ
ಶ್ರೀ ನರಸಿಂಹಪ್ರತಿಷ್ಠಾವಿಧಾನವೆಂಬ ಮೂವತ್ತೆರಡನೆಯ
ಅಧ್ಯಾಯವು ಮುಗಿದುದು.

ಮೂವತ್ತೆರಡನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಭರದ್ವಾಜನು ಸೂತರನ್ನು ಸಹಸ್ರಾನೀಕನ ಮತ್ತು ಶ್ರೀ ಮಹಾವಿಷ್ಣುವಿನ ಅವತಾರ ಚರಿತ್ರೆಯನ್ನು ನಿರೂಪಿಸಬೇಕೆಂದು ಕೇಳಲು, ಸೂತರು "ಪೂರ್ವದಲ್ಲಿ ಪಾಂಡುವಂಶಜನಾದ ಸಹಸ್ರಾನೀಕನೆಂಬ ರಾಯಗುವರನು ಪ್ರಾಪ್ತ ವಯಸ್ಕನಾಗಿ, ರಾಜ್ಯಾಭಿಷಿಕ್ತನಾಗಿ, ಧರ್ಮಮಾರ್ಗದಿಂದ ಪ್ರಜೆಗಳನ್ನು ಕಾಪಾಡುತ್ತಿದ್ದನು. ಒಮ್ಮೆ ಆ ಭಕ್ತನಾದ ಸಹಸ್ರಾನೀಕನೆಡೆಗೆ ಭೃಗುಮುನಿಯು ಆತನನ್ನು ನೋಡಬೇಕೆಂದು ಬರಲು, ಆ ಅರಗುವರನು ತನ್ನ ಮನೆಗೆ ಬಂದ ಆ ಮುನಿಯನ್ನು ಅರ್ಘ್ಯಪಾದ್ಯಾಸನಾದಿಗಳಿಂದ ಪೂಜಿಸಿ, ಆತನನ್ನು ಕುರಿತು ತಾನು ಶ್ರೀನರಸಿಂಹನನ್ನು ಪ್ರತಿಷ್ಠಿಸಿ ಯಥಾವಿಧಿ ಸೇವಿಸಬೇಕೆಂದಿರುವುದಾಗಿಯೂ, ಆ ಸೇವಾ ಪ್ರಕಾರವನ್ನೂ, ಶ್ರೀ ಮಹಾವಿಷ್ಣುವಿನ ಅವತಾರಗಳನ್ನೂ ತನಗೆ ನಿರೂಪಿಸಬೇಕೆಂದೂ ಬೆಸಗೊಳ್ಳಲು, ಆ ಭೃಗುಮುನಿಯು, ಈ ಕಲಿಯುಗದಲ್ಲಿ ಭಗವದ್ಭಕ್ತಿಯುಳ್ಳವರು ದುರ್ಲಭರು. ಎಲೈ ರಾಯನೇ! ನಿನಗೆ ಅಂತು ಭಗವದ್ಭಕ್ತಿ ಸಮನಿಸಿದೆ. ಯಾವ ಮಾನವನು ಶಾಸ್ತ್ರೋಕ್ತರೀತಿಯಿಂದ ಶ್ರೀಹರಿಯ ಸ್ವರೂಪಾಂಶನಾದ ಶ್ರೀನರಹರಿಯ ವಿಗ್ರಹವನ್ನೊಡರಿಸಿ, ಯಥಾವಿಧಿ ಪ್ರತಿಷ್ಠಾಪಿಸಿ, ಅರ್ಚಿಸುವನೋ ಅವನು ಸಕಲಪಾಪಗಳಿಂದಲೂ ಮುಕ್ತನಾಗಿದ್ದು ಶ್ರೀ ವಿಷ್ಣುಲೋಕವನ್ನು ಶಾಶ್ವತವಾಗಿ ಹೊಂದುವನು" ಎಂದು ನಿರೂಪಿಸಿದುದನ್ನು ಭರದ್ವಾಜನಿಗೆ ಹೇಳಿದರು.

ಇಂತು ಮೂವತ್ತೆರಡನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ತ್ರಯಸ್ತ್ರಿಂಶೋಽಧ್ಯಾಯಃ

ಸಹಸ್ರಾನೀಕ ಚರಿತೇ ಮಾರ್ಕಂಡೇಯೋಪದಿಷ್ಟ ಸಂಮಾರ್ಜನೋಪಫಲಮ್

॥ ರಾಜೋವಾಚ ॥

ಹರೇರರ್ಚಾವಿಧಿಂ ಪುಣ್ಯಾಂ ಶ್ರೋತುಮಿಚ್ಛಾಮಿ ತತ್ತ್ವತಃ ।
ತ್ವತ್ಪ್ರಸಾದಾದ್ವಿಶೇಷೇಣ ಭಗವನ್ ಪ್ರಬ್ರವೀಹಿ ಮೇ ॥ ೧ ॥

ಸಂಮಾರ್ಜನಕರೋ ಯಸ್ತು ನರಸಿಂಹಸ್ಯ ಮಂದಿರೇ ।
ಯತ್ಪುಣ್ಯಂ ಲಭತೇ ತದ್ವದುಪಲೇಪನಕೃನ್ನರಃ ॥ ೨ ॥

ಮೂವತ್ತುಮೂರನೆಯ ಅಧ್ಯಾಯವು.

ಸಹಸ್ರಾನೀಕ ಚರಿತ್ರೆಯಲ್ಲಿ ಮಾರ್ಕಂಡೇಯೋಪದಿಷ್ಟವಾದ ಸಂಮಾರ್ಜನೋಪಫಲವು.

೧. ಸಹಸ್ರಾನೀಕರಾಯನು ಭೃಗುಮುನಿಯನ್ನು ಕುರಿತು ಇಂತು ಹೇಳುತ್ತಾನೆ :–'ಎಲೈ ಭಗವಂತನಾದ ಭೃಗುಮುನಿಯೇ ! ನಿನ್ನ ಅನುಗ್ರಹದಿಂದ ವಿಶೇಷವಾಗಿ, ಯಥಾರ್ಥವಾಗಿ ಪುಣ್ಯವನ್ನೊಡರಿಸುವ ಶ್ರೀಹರಿಯ ಪೂಜಾವಿಧಿಯನ್ನು ಕೇಳಲೆಳಸುವೆನು, ದಯಮಾಡಿ ಅದನ್ನು ನನಗೆ ಹೇಳುವನಾಗು.

೨. ಎಲೈ ಬ್ರಹ್ಮಜ್ಞಾನಿಯಾದ ಮುನಿಯೇ ! ಶ್ರೀನರಸಿಂಹನ ಆಲಯದಲ್ಲಿ ಗುಡಿಸುವವನೂ, ಅಂತೆಯೇ ಸುಣ್ಣ ಮುಂತಾದುವನ್ನು ಹಚ್ಚಿ ಅಲಂಕರಿಸುವವನೂ, ಯಾವ ಪುಣ್ಯವನ್ನು ಪಡೆಯುತ್ತಾರೆ ?

ಶುದ್ಧೋದಕೇನ ಯತ್ಪುಣ್ಯಂ ಸ್ನಾಪಿತೇ ಕೇಶವೇ ಭವೇತ್ ।
ಕ್ಷೀರಸ್ನಾನೇನ ಯತ್ಪುಣ್ಯಂ ದಧ್ನಾ ಚ ಮಧುನಾ ತಥಾ ।
ಘೃತಸ್ನಾನೇನ ಯತ್ಪುಣ್ಯಂ ಪಂಚಗವ್ಯೇನ ಯದ್ಭವೇತ್ ॥ ೩ ॥

ಕ್ಷಾಲಿತೇ ಚೋಷ್ಣತೋಯೇನ ಪ್ರತಿಮಾಯಾಂ ಚ ಭಕ್ತಿತಃ ।
" ಬಿಲ್ವಪತ್ರೈಶ್ಚ ಯತ್ನೇನ ಮರ್ದಿತೇ ಯಚ್ಚ ಪೀಠಕೇ ॥
ಉದ್ವರ್ತನಾತ್ಪರಂ ಸ್ನಾನಂ ಕುಶಪುಷ್ಪೋದಕೇನ ಚ ।
ಹೇಮರತ್ನಾಂಬುಭಿರ್ಯಚ್ಚ ಯಚ್ಚ ಗಂಧೋದಕೇನ ಚ " ॥
ಕರ್ಪೂರಾಗುರು ತೋಯೇನ ಮಿಶ್ರೇಣ ಸ್ನಾಪಿತೇನ ಚ ॥ ೪ ॥

---

೩. ಶ್ರೀಕೇಶವನನ್ನು ಶುದ್ಧೋದಕದಿಂದ ಸ್ನಾನ ಮಾಡಿಸುವುದರಿಂದಲೂ, ಕ್ಷೀರ, ದಧಿ, ಮಧು, ಘೃತ ಮತ್ತು ಪಂಚಗವ್ಯಗಳು, ಇವುಗಳಿಂದ ಸ್ನಾನವನ್ನೊಡರಿಸುವುದರಿಂದಲೂ ಯಾವ ಯಾವ ಸುಕೃತಗಳು ಲಭಿಸುತ್ತವೆ?

೪. ಶ್ರೀನರಹರಿಯ ಪ್ರತಿಮೆಯನ್ನು ಬಿಸುನೀರಿನಿಂದ ಭಕ್ತಿಪೂರ್ವಕವಾಗಿ ತೊಳೆದರೆ ಯಾವ ಪುಣ್ಯವು ಲಭಿಸುತ್ತದೆ? ಬಿಲ್ವಪತ್ರದಿಂದ ಯಾವ ಪರಮಾತ್ಮನ ವಿಗ್ರಹದ ಪೀಠವು ತಿಕ್ಕಿಸುದಾಗಿ, ಅಂತೂ ತೊಡೆಸನಂತರ ದರ್ಭೆ ಹೂವಿನಿಂದ ಕೂಡಿದ ನೀರಿನಿಂದಲೂ, ಚಿನ್ನ ರನ್ನಗಳಿಂದ ಕೂಡಿದ ನೀರಿನಿಂದಲೂ, ಪರಿಮಳ ಯುಕ್ತವಾದ ಗಂಧದ ಸ್ವಾದೂದಕದಿಂದಲೂ, ಕರ್ಪೂರ, ಅಗರು ಇವುಗಳಿಂದ ಮಿಶ್ರವಾದ ಉದಕದಿಂದಲೂ, ಶ್ರೀನರಸಿಂಹನ ವಿಗ್ರಹಕ್ಕೆ ಸ್ನಾನವನ್ನೆಸಗುವುದರಿಂದುಂಟಾಗುವ ಪುಣ್ಯಗಳಾವುವು?

ಅರ್ಘ್ಯದಾನೇನ ಯತ್ಪುಣ್ಯಂ ಪಾದ್ಯಾಚಮನದಾಯಕೇ ।
ಮಂತ್ರೇಣ ಸ್ನಾಪಿತೇ ಯಚ್ಚ ವಸ್ತ್ರದಾನೇನ ಯದವೇತ್ ॥ ೫ ॥

ಶ್ರೀಖಂಡಕುಂಕುಮಾಭ್ಯಾಂ ತು ಅರ್ಚಿತೇ ಕಿಂ ಫಲಂ ಭವೇತ್ ।
ಪುಷ್ಪೈರಭ್ಯರ್ಚಿತೇ ಯಚ್ಚ ಯತ್ಫಲಂ ಧೂಪದೀಪಯೋಃ ॥ ೬ ॥

ನೈವೇದ್ಯೈರ್ಯತ್ಫಲಂ ಪ್ರೋಕ್ತಂ ಪ್ರದಕ್ಷಿಣಕೃತೇ ತು ಯತ್ ।
ನಮಸ್ಕಾರಕೃತೇ ಯಚ್ಚ ಫಲಂ ಯತ್ಸ್ತೋತ್ರಗೀತಯೋಃ ॥ ೭ ॥

ತಾಲವೃಂತಪ್ರದಾನೇನ ಚಾಮರಸ್ಯ ಚ ಯದ್ಭವೇತ್ ।
ಧ್ವಜಪ್ರದಾನೇ ಯದ್ವಿಷ್ಣೋಃ ಶಂಖದಾನೇನ ಯದ್ಭವೇತ್ ॥ ೮ ॥

---

೫. ಭಗವಂತನಾದ ನರಸಿಂಹನಿಗೆ ಅರ್ಘ್ಯವನ್ನೀಯುವುದರಿಂದಲೂ, ಪಾದಾರ್ಹವಾದ ಉದಕ, ಆಚಮನ ಇವುಗಳನ್ನೀಯುವುದರಿಂದಲೂ, ಪುರುಷಸೂಕ್ತ ಮಂತ್ರೋಚ್ಚಾರಣ ಪೂರ್ವಕವಾಗಿ ಮೀಯಿಸುವುದರಿಂದಲೂ, ಶುಭ್ರವಸ್ತ್ರಗಳನ್ನು ಅರ್ಪಿಸುವುದರಿಂದಲೂ ಯಾವ ಯಾವ ಪುಣ್ಯಗಳುಂಟಾಗುತ್ತವೆ ?

೬. ಸಿರಿಕಂಡ, ಕುಂಕುಮಕೇಸರ, ಹೂಗಳು ಮತ್ತು ಧೂಪದೀಪಗಳು ಇವುಗಳಿಂದ ಶ್ರೀನರಸಿಂಹನನ್ನು ಪೂಜಿಸಲು ಯಾವ ಯಾವ ಫಲವುಂಟಾಗುವುವು ?

೭. ಶ್ರೀನರಸಿಂಹನಿಗೆ ಖಾದ್ಯ, ಚೋಷ್ಯ, ಲೇಹ್ಯ ಮತ್ತು ಪೇಯಗಳೆಂಬ ನಾಲ್ಕು ತೆರನಾದ ವಸ್ತುಗಳನ್ನು ನಿವೇದಿಸುವುದರಿಂದಲೂ, ಬಲವರುವುದರಿಂದಲೂ ಎರಗುವುದರಿಂದಲೂ, ಸ್ತುತಿಸುವುದರಿಂದಲೂ ಅವನ ಮಹಿಮೆಗಳನ್ನೊಳಗೊಂಡ ಹಾಡುಗಳನ್ನು ಹಾಡುವುದರಿಂದಲೂ ಯಾವ ಪುಣ್ಯವುಂಟಾಗುವುದು ?

೮. ಶ್ರೀನರಸಿಂಹನಿಗೆ ತಾಲೆಮರದ ಬಿಜ್ಜಣಿಗೆಯನ್ನು ಬೀಸುವುದರಿಂದಲೂ, ಚಾಮರವನ್ನು ಹಾಕುವುದರಿಂದಲೂ, ಧ್ವಜವನ್ನು ಕಟ್ಟಿಸುವುದರಿಂದಲೂ, ಸಂಕುವನ್ನು ಪೂರೈಸುವುದರಿಂದಲೂ ಯಾವ ಪುಣ್ಯವೊದಗುವುದು ?

ಏತಚ್ಚಾನ್ಯಚ್ಚ ಯತ್ಕಿಂಚಿದಜ್ಞಾನಾನ್ನ ಪ್ರಚೋದಿತವ್ ।
ತತ್ಸರ್ವಂ ಕಥಯ ಬ್ರಹ್ಮನ್ ಭಕ್ತಸ್ಯ ಮಮ ಕೇಶವೇ ॥ ೯ ॥

॥ ಸೂತ ಉವಾಚ ॥

ಇತಿ ಸಂಪ್ರೇರಿತೋ ವಿಪ್ರಸ್ತೇನ ರಾಜ್ಞಾ ಭೃಗುಸ್ತದಾ ।
ಮಾರ್ಕಂಡೇಯಂ ನಿಯುಜ್ಯಾಥ ಕಥನೇ ಸ ಗತೋ ಮುನಿಃ ॥ ೧೦ ॥

ಸೋऽಪಿ ತಸ್ಮಿನ್ ಮುದಾ ಯುಕ್ತೋ ಹರಿಭಕ್ತ್ಯಾ ವಿಶೇಷತಃ ।
ರಾಜ್ಞೇ ಪ್ರವಕ್ತುಮಾರೇಭೇ ಭೃಗುಣಾ ಚೋದಿತೋ ಮುನಿಃ ॥ ೧೧ ॥

---

೯. ಇವೇ ಮುಂತಾದ ಸೇವೆಗಳ ಫಲಗಳು, ಇನ್ನೂ ನಾನು ತಿಳಿಯದೇ ಹೇಳದಿರುವ ಇತರ ಸೇವೆಗಳ ಫಲಗಳು ಅವೆಲ್ಲವನ್ನೂ ಶ್ರೀಕೇಶವನಾದ ನರಹರಿಯ ಭಕ್ತನಾದ ನನಗೆ ವಿವರಿಸಿ ಹೇಳು' ಎಂದು ಬೆಸಗೊಂಡನು.

ಸೂತರು ಹೇಳುತ್ತಾರೆ:—

೧೦. ಇಂತು ಸಹಸ್ರಾನೀಕನು ಬೆಸಗೊಳ್ಳಲು, ಆಗ ಬ್ರಾಹ್ಮಣನೂ, ಮುನಿಯೂ ಆದ ಭೃಗುವು ಆ ಸಹಸ್ರಾನೀಕನು ಕೇಳಿದುದಕ್ಕೆಲ್ಲಾ ಉತ್ತರವನ್ನು ಹೇಳಲು ಮಾರ್ಕಂಡೇಯನಿಗೆ ಬೆಸಸಿ, ತಾನು ಹೊರಟುಹೋದನು.

೧೧. ಆ ಮಾರ್ಕಂಡೇಯಮುನಿಯು ಭೃಗುಮುನಿಯಿಂದ ಇಂತು ಪ್ರೇರಿತನಾದವನು ಆವಿಷಯಗಳನ್ನು ಹೇಳುವುದರಲ್ಲಿ ಸಂತಸದೊಡಗೂಡಿದವನಾಗಿ ಅತ್ಯಂತ ಹರಿಭಕ್ತಿಯಿಂದ ಆ ಸಹಸ್ರಾನೀಕರಾಯನಿಗೆ ಇಂತು ಹೇಳಲು ತೊಡಗಿದನು.

॥ ಮಾರ್ಕಂಡೇಯ ಉವಾಚ ॥

ರಾಜಪುತ್ರ ಶೃಣುಷ್ವೇದಂ ಹರಿಪೂಜಾವಿಧಿಂ ಕ್ರಮಾತ್ ।
ವಿಷ್ಣುಭಕ್ತಸ್ಯ ವಕ್ಷ್ಯಾಮಿ ತವಾಹಂ ಪಾಂಡುವಂಶಜ ॥ ೧೨ ॥

ನರಸಿಂಹಸ್ಯ ನಿತ್ಯಂ ಚ ಯಃ ಸಂಮಾರ್ಜನಮಾಚರೇತ್ ।
ಸರ್ವಪಾಪ ವಿನಿರ್ಮುಕ್ತೋ ವಿಷ್ಣುಲೋಕೇ ಸ ಮೋದತೇ ॥ ೧೩ ॥

ಗೋಮಯೇನ ಮೃದಾ ತೋಯೈರ್ಯಃ ಕರೋತ್ಯುಪಲೇಪನಂ ।
ಸ ಚಾಕ್ಷಯ್ಯಫಲಂ ಪ್ರಾಪ್ಯ ವಿಷ್ಣುಲೋಕೇ ಮಹೀಯತೇ ॥ ೧೪ ॥

ಅತ್ರಾರ್ಥೇ ಯತ್ಪುರಾವೃತ್ತಮಿತಿಹಾಸಂ ಪುರಾತನಮ್ ।
ತಚ್ಛ್ರುತ್ವಾ ಸರ್ವಪಾಪೇಭ್ಯೋ ಮುಕ್ತಿರ್ಭವತಿ ಸತ್ತಮ ॥ ೧೫ ॥

ಮಾರ್ಕಂಡೇಯಮುನಿಯು ಹೇಳುತ್ತಾನೆ :—

೧೨. ಎಲೈ ಪಾಂಡುರಾಯನ ಸಂತತಿಯಲ್ಲಿ ಹುಟ್ಟಿದ ಅರಗುವರನೇ ಕೇಳು; ನಾನು ಈಗ ಶ್ರೀಮಹಾವಿಷ್ಣುವಿನ ಬಕುತನಾದ ನಿನಗೆ ಈ ಶ್ರೀಹರಿಯ ಪೂಜಾವಿಧಿಯನ್ನು ಪರಿವಿಡಿಯಿಂದ ಪೇಳುವೆನು.

೧೩. ಯಾವ ಮಾನವನು ಶ್ರೀನರಹರಿಯ ಎಣ್ಣೆ ಮಾರ್ಜನವನ್ನು (ದೇವಾಲಯದ ಕಸ ಗುಡಿಸುವುದನ್ನು) ನಿಚ್ಚದಲ್ಲಿಯೂ ಎಸಗುವನೋ, ಅವನು ಸಕಲ ಪಾಪಗಳನ್ನೂ ಕಳೆದುಕೊಂಡು ಶ್ರೀ ಮಹಾವಿಷ್ಣುವಿನ ವೈಕುಂಠಾದಿಲೋಕಗಳಲ್ಲಿ ಸೊಗಯಿಸುತ್ತಾನೆ.

೧೪. ಯಾವ ನರನು ಹಸುವಿನ ಸಗಣಿಯಿಂದ, ಕೆಮ್ಮಣ್ಣಿನಿಂದ, ನೀರಿನಿಂದ ದೇವಾಲಯದ ನೆಲವನ್ನು ಬಳಿದು ಸಾರಿಸುವನೋ, ಅವನು ಎಂದಿಗೂ ಸವೆಯದ ಪುಣ್ಯಫಲವನ್ನು ಹೊಂದಿ, ಶ್ರೀವಿಷ್ಣು ಲೋಕದಲ್ಲಿ ಗೌರವಿಸಲ್ಪಡುತ್ತಾನೆ.

೧೫. ಎಲೈ ಗುಣಶಾಲಿಯೇ! ಕೇಳು; ಈ ವಿಷಯದಲ್ಲಿ ಹಿಂದೆ ನಡೆದ, ಹಳೆಯದಾದ ಚರಿತ್ರೆಯಿರುವುದು; ಅದನ್ನು ಕೇಳಿದರೆ ಸರ್ವ ಪಾಪಗಳಿಂದ ಮುಕ್ತಿಯುಂಟಾಗುವುದು. ಅದನ್ನರುಹುವೆನು, ಕೇಳು.

ಪುರಾ ಯುಧಿಷ್ಠಿರೋ ರಾಜಾ ಪಂಚಭಿರ್ಭ್ರಾತೃಭಿರ್ಯುತಃ ।
ದ್ರೌಪದ್ಯಾ ಸಹ ರಾಜೇಂದ್ರ ಕಾನನಂ ವಿಚಚಾರ ಹ ॥ ೧೬ ॥

ಶೂಲಕಂಟಕೆ ನಿಷ್ಕ್ರಾಂತಾಸ್ತತಸ್ತೇ ಪಂಚ ಪಾಂಡವಾಃ ।
ನಾರದೋಽಪಿ ಗತೋ ನಾಕಂ ಜುಷ್ಟ್ವೇದಂ ತೀರ್ಥಮುತ್ತಮಮ್ ॥ ೧೭ ॥

ತತೋ ಯುಧಿಷ್ಠಿರೋ ರಾಜಾ ಪ್ರಸ್ಥಿತಸ್ತೀರ್ಥಮುತ್ತಮಮ್ ।
ದರ್ಶನಂ ಮುನಿಮುಖ್ಯಸ್ಯ ತೀರ್ಥಧರ್ಮೋಪದೇಶಿನಃ ॥ ೧೮ ॥

ಧರ್ಮಾತ್ಮಾ ಚಿಂತಯತಿ ಚ ಕ್ರೋಧಪೈಶುನ್ಯವರ್ಜಿತಃ ।
ದಾನವೋ ಬಹುರೋಮಾ ಚ ತಥಾ ಸ್ಥೂಲಶಿರಾ ನೃಪ ॥ ೧೯ ॥

---

೧೬. ಕೇಳು; ರಾಜೇಂದ್ರ ! ಪೂರ್ವದಲ್ಲಿ ದ್ವಾಪರಾಂತ್ಯದಲ್ಲಿ ಯುಧಿಷ್ಠಿರನೆಂಬ ಚಂದ್ರವಂಶದ ಅರಸು ತಾನೂ ಸೇರಿ ಐವರು ಸಹೋದರರ ಒಡಗೂಡಿ ದ್ರೌಪದೀದೇವಿಯೊಡನೆ ಅರಣ್ಯದಲ್ಲಿ ರಾಜ್ಯಭ್ರಷ್ಟರಾಗಿ ಸಂಚರಿಸಿದರಷ್ಟೆ !

೧೭. ಆ ಐವರು ಪಾಂಡವರೂ ಶೂಲಕಂಟಕವೆಂಬ ಹಳುವದೆಡೆಯನ್ನು ದಾಟಿದ್ದರು. ಈ ಉತ್ತಮವೆಂಬ ತೀರ್ಥವನ್ನು ಸೇವಿಸಿ ದೇವಮುನಿಯಾದ ನಾರದನೂ ಸ್ವರ್ಗಲೋಕಕ್ಕೆ ಹೋದನು.

೧೮-೧೯. ಅನಂತರದಲ್ಲಿ ಯುಧಿಷ್ಠಿರರಾಯನೂ ಉತ್ತಮವೆಂಬ ತೀರ್ಥಕ್ಕೆ ಹೋದವನು ತೀರ್ಥಧರ್ಮವನ್ನುಪದೇಶಿಸಿದ ಮುನಿಶ್ರೇಷ್ಠನನ್ನು ಎಲೈ ನೃಪನೇ ! ಕೇಳು, ಧಾರ್ಮಿಕಸ್ವಭಾವದವನೂ, ಮುಳಿಸು, ಹಿಸುಣು ಇವುಗಳಿಲ್ಲದವನೂ ಆದ ಯುಧಿಷ್ಠಿರನು ಕಾಣಲು ಬಯಸುತ್ತಾನೆ. ಬಹುರೋಮನೆಂಬೊಬ್ಬ ದಾನವನೂ, ಹಾಗೆಯೇ ಸ್ಥೂಲಶಿರನೆಂಬವನೂ ಆಯೆಡೆಯಲ್ಲಿ ಸಂಚರಿಸುತ್ತಿರುವರು.

ಪಾಂಡವಾನ್ ಗಚ್ಛತೋ ವೀಕ್ಷ್ಯ ದಾನವೋ ದ್ರೌಪದೀಚ್ಛಯಾ ।
ಕೃತ್ವಾ ಭೂಪ ಮುನೇ ರೂಪಂ ಬಹುರೋಮಾ ಗತಸ್ತದಾ ॥ ೨೦ ॥

ಪ್ರಣಿಧಾನಂ ವಿಧಾಯಾಥ ಆಸೀನಃ ಕುಶವಿಷ್ಟರೇ ।
ಬಿಭ್ರತ್ಕಮಂಡಲುಂ ಪಾರ್ಶ್ವೇ ದರ್ಭಸೂಚೀಂ ತಥಾ ಕರೇ ॥ ೨೧ ॥

ಅಕ್ಷಮಾಲಾಂ ಜಪನ್ ಮಂತ್ರಂ ಸ್ವನಾಸಾಗ್ರಂ ನಿರೀಕ್ಷಯನ್ ।
ಸ ದೃಷ್ಟಃ ಪಾಂಡವೈಸ್ತತ್ರ ರೇವಾಯಾಂ ವನಚಾರಿಭಿಃ ॥ ೨೨ ॥

ತತೋ ಯುಧಿಷ್ಠಿರೋ ರಾಜಾ ತಂ ಪ್ರಣಮ್ಯ ಸಹಾನುಜಃ ।
ಜಗಾದ ವಚನಂ ದೃಷ್ಟೋ ಭಾಗ್ಯೇನಾಸಿ ಮಹಾಮುನೇ ॥ ೨೩ ॥

---

೨೦. ಆಗ ಬಹುರೋಮನೆಂಬ ದಾನವನು ಅಲ್ಲಿ ಹೋಗುತ್ತಲಿದ್ದ ಪಾಂಡವರನ್ನು ನೋಡಿ, ದ್ರೌಪದೀದೇವಿಯನ್ನು ಕೊಂಡುಯ್ಯುವ ಅಪೇಕ್ಷೆಯಿಂದ ಎಲೈ ರಾಯನೇ ! ಮುನಿಯ ವೇಷವನ್ನು ತಾಳಿ ಆಯೆಡೆಯನ್ನು ಸಾರಿದನು.

೨೧-೨೨. ಆ ಬಹುರೋಮನು ಬಳಿಕ ಆ ರೇವಾನದಿಯ ತೀರದಲ್ಲಿ ದರ್ಭೆಯ ಪೀಠದಲ್ಲಿ ಕುಳಿತು ಧ್ಯಾನಾಸಕ್ತನಾಗಿ ಪಕ್ಕದಲ್ಲಿ ಕಮಂಡಲುವನ್ನಿಟ್ಟುಕೊಂಡು, ಹಾಗೆಯೇ ಕೈಯಲ್ಲಿ ದರ್ಭೆಯ ಪವಿತ್ರವನ್ನು ತಾಳಿ ಸದ್ರಾಕ್ಷಮಾಲೆಯನು ಎಣಿಸುತ್ತಾ, ಮಂತ್ರವನ್ನು ಜಪಿಸುತ್ತಾ, ತನ್ನ ಮೂಗಿನ ತುದಿಯನ್ನೇ ನೋಡುತ್ತಿರುವನು. ಇಂತಹ ಮುನಿವೇಷವನ್ನು ತಾಳಿರುವವನನ್ನು ವನಚಾರಿಗಳಾದ ಪಾಂಡವರು ನೋಡಿದರು.

೨೩. ಬಳಿಕ ಯುಧಿಷ್ಠಿರರಾಜನು ತಮ್ಮಂದಿರೊಡಗೂಡಿ ಅವನ ಅಡಿಗಳಿಗೆರಗಿ, 'ಎಲೈ ಮುನಿಯೇ ! ನಮ್ಮ ಸುಕೃತವಿಶೇಷದಿಂದ ಇಂದು ನಿನ್ನನ್ನು ಕಂಡೆವು' ಎಂದು ಬಿನ್ನವಿಸಿದನು.

ತೀರ್ಥಾನಿ ರುದ್ರದೇಹಾಯಾಃ ಸುಗೋಪ್ಯಾನಿ ನಿವೇದಯ ।
ಮುನೀನಾಂ ದರ್ಶನಂ ನಾಥ ಶ್ರುತಂ ಧರ್ಮೋಪದೇಶಕಮ್ ॥ ೨೪ ॥

ಯಾವನ್ಮುನಿಮುವಾಚೇದಂ ಧರ್ಮಪುತ್ರೋ ಯುಧಿಷ್ಠಿರಃ ।
ತಾವತ್ಸ್ಥೂಲಶಿರಾಃ ಪ್ರಾಪ್ತೋ ಮುನಿರೂಪಧರೋಽಪರಃ ॥ ೨೫ ॥

ಜಲ್ಪನ್ನಿತ್ಯಾತುರಂ ವಾಕ್ಯಂ ಕೋ ನಾಮಾಸ್ತ್ಯತ್ರ ರಕ್ಷಕಃ ।
ಭಯಾತುರಂ ನರೋ ಜೀವಂ ಯೋ ರಕ್ಷೇಚ್ಛರಣಾಗತಮ್ ॥ ೨೬ ॥

ತಸ್ಯಾನಂತಫಲಂ ಸ್ಯಾದ್ವೈ ಕಿಂ ಪುನರ್ಮಾಂ ದ್ವಿಜೋತ್ತಮಮ್ ।
ಏಕತೋ ಮೇದಿನೀ ದಾನಂ ಮೇರು ಭೂಧರ ದಕ್ಷಿಣಮ್ ॥ ೨೭ ॥

---

೨೪. ಎಲೈ ತಪಸ್ವಿಯೇ ! ಲಿಂಗನದಿಯಾದ ನರ್ಮದೆಯ ತೀರದ ರಹಸ್ಯವಾದ ತೀರ್ಥಗಳನ್ನು ದಯವಿಟ್ಟು ನಮಗೆ ತಿಳಿಸು. ಎಲೈ ಒಡೆಯನೇ ! ಮುನಿಗಳ ಸಂದರ್ಶನವು ಧರ್ಮೋಪದೇಶಕ್ಕೆ ಸಾಧನವೆಂದು ಕೇಳಿದ್ದೇವೆ.

೨೫. ಯಮಧರ್ಮರಾಯನ ಮಗನಾದ ಯುಧಿಷ್ಠಿರರಾಯನು ಆ ಮುನಿಗೆ ಇನಿತನ್ನು ಹೇಳುವುದರೊಳಗೆ, ಸ್ಥೂಲಶಿರನೆಂಬ ಮತ್ತೊಬ್ಬ ದಾನವನೂ ಮುನಿವೇಷವನ್ನು ತಾಳಿ ಅಲ್ಲಿಗೆ ಬಂದನು.

೨೬. ಆ ಸ್ಥೂಲಶಿರನೆಂಬುವನು ಸಂಕಟದ ವಾಕ್ಯಗಳನ್ನಾಡುತ್ತಾ 'ಅಯ್ಯಾ ಅಲ್ಲಿ ರಕ್ಷಕರಾರಯ್ಯಾ ! ಭಯದಿಂದ ಪೀಡಿತನಾದ, ಶರಣಾಗತನಾದವನನ್ನು ರಕ್ಷಿಸುವ ಮಾನವನಾವನಿರುವನಯ್ಯಾ !

೨೭-೨೮. ಅಂತು ಸಂಕಷ್ಟದಲ್ಲಿರುವವರನ್ನು ರಕ್ಷಿಸುವವನಿಗೆ ಪೂರ್ಣಫಲವುಂಟಾಗುವುದು. ಅಂತಹುದರಲ್ಲಿ ಬ್ರಾಹ್ಮಣಶ್ರೇಷ್ಠನಾಗಿ ಭಯ ಪೀಡಿತನಾದ ನನ್ನನ್ನು ರಕ್ಷಿಸುವವನಿಗೆ ಪುಣ್ಯಲಭಿಸುವುದೆಂದು ಹೇಳುವುದೇನಿದೆ? ಒಂದೆಡೆಯಲ್ಲಿ ಮೇರುಪರ್ವತವೇ ದಕ್ಷಿಣೆಯಾಗಿರುವ ಭೂದಾನವು;

ಅನ್ಯತೋ ಹ್ಯಾರ್ತಜೀವಾನಾಂ ಪ್ರಾಣಸಂಶಯ ಕಾರಣಮ್ ।
ದ್ವಿಜಂ ಧೇನುಂ ಸ್ತ್ರಿಯಂ ಬಾಲಂ ಪೀಡ್ಯಮಾನಂ ಚ ದುರ್ಜನೈಃ ॥ ೨೮ ॥

ಉಪೇಕ್ಷೇತ ನರೋ ಯಸ್ತು ಸ ಚ ಗಚ್ಛತಿ ರೌರವಮ್ ।
ಅಥ ಮಾಂ ಹೃತಸರ್ವಸ್ವಂ ಪ್ರಾಣತ್ಯಾಗ ಪರಾಯಣಮ್ ॥ ೨೯ ॥

ಕೋ ರಕ್ಷತಿ ನರೋ ವೀರಃ ಪರಾಭೂತಂ ಹಿ ದಾನವೈಃ ।
ಗೃಹೀತ್ವಾ ಚಾಕ್ಷಮಾಲಾಂ ಮೇ ತಥಾ ಶುಭಕಮಂಡಲುಮ್ ॥ ೩೦ ॥

ನಿಹತೋಽಹಂ ಕರಾಘಾತೈಃ ತಥಾ ವಾಟೋ ಮನೋಹರಃ ।
ಗೃಹೀತಂ ಮಮ ಸರ್ವಸ್ವಂ ದಾನವೇನ ದುರಾತ್ಮನಾ ॥ ೩೧ ॥

ಮತ್ತೊಂದೆಡೆಯಲ್ಲಿ ದುರ್ಜನರಿಂದ ಬಾಧಿತರಾಗಿರುವ ದ್ವಿಜರು, ಹಸು, ಸ್ತ್ರೀಯರು, ಬಾಲರು ಇವರ ಮತ್ತು ಪ್ರಾಣ ಉಳಿಯುವುದು ಕಷ್ಟವೆಂಬ ಸ್ಥಿತಿಯಲ್ಲಿರುವ ಬಾಧಿರಾದವರ ರಕ್ಷಣೆಯು-ಇವೆರಡೂ ಒಂದೇ ಸಮನಾದ ಪುಣ್ಯವನ್ನೊದಗಿಸುವುವು.

೨೯-೩೧. ಯಾವ ನರನು ಇಂತು ಪೀಡಿತರಾದ ಬ್ರಾಹ್ಮಣರೇ ಮೊದಲಾದವರನ್ನು ಉಪೇಕ್ಷಿಸುವನೋ, ಅವನು ತಾರಕವೆಂಬ ನರಕವನ್ನೈದುವನು. ದಾನವರಿಂದ ಬಾಧೆಗೊಂಡು ಎಲ್ಲರನ್ನೂ ಕಳೆದುಕೊಂಡು, ಪ್ರಾಣಗಳನ್ನು ಕಳೆದುಕೊಳ್ಳಲೆಳಸಿರುವ ನನ್ನನ್ನು ರಕ್ಷಿಸುವ ವೀರನಾದ ನರನಾವನಿರುವನು? ದುಷ್ಟ ಸ್ವಭಾವದವನಾದ ದಾನವನು ನನ್ನ ಕಮಲಾಕ್ಷಮಾಲೆಯನ್ನೂ, ಸುಂದರವಾದ ಮಂಗಳದ ಕಮಂಡಲುವನ್ನೂ ಅಪಹರಿಸಿ ನನ್ನನ್ನು ಕೈಗಳಿಂದ ಹೊಡೆದಿಟ್ಟಿರುವನು. ಹಾಗೆಯೇ ನನ್ನ ಮನೋಹರವಾದ ಪರ್ಣಶಾಲೆಯನ್ನೂ, ನನ್ನ ಸರ್ವಸ್ವವನ್ನೂ ವಶಪಡಿಸಿಕೊಂಡಿರುವನು.

ಇತ್ಯಾಕರ್ಣ್ಯ ವಚಃ ಕ್ಲೀಬಂ ಪಾಂಡವಾ ಜಾತಸಂಭ್ರಮಾಃ ।
ಯಾಂತಿ ರೋಮಾಂಚಿತಾ ಭೂಯೋ ವಿಧಾಯಾಗ್ನಿಂ ಚ ತಂ ಮುನಿಃ ॥೩೨॥

ವಿಮುಚ್ಯ ದ್ರೌಪದೀಂ ತತ್ರ ಮುನೇಃ ಪಾರ್ಶ್ವೇ ಮಹಾತ್ಮನಃ ।
ತೇ ದೂರತರಂ ಪ್ರಾಪ್ತಾಃ ಸಂರಂಭಾತ್ತೇ ಚ ಪಾಂಡವಾಃ ॥ ೩೩ ॥

ತತೋ ಯುಧಿಷ್ಠಿರೋಽವೋಚತ್ಕಿಂ ಚನೋ ನಾತ್ರ ದೃಶ್ಯತೇ ।
ಕೃಷ್ಣಾಸಂರಕ್ಷಣಾರ್ಥಾಯ ವ್ರಜ ವ್ಯಾವರ್ತ್ಯ ಚಾರ್ಜುನ ॥ ೩೪ ॥

ತತೋಽರ್ಜುನೋ ವಿನಿಷ್ಕ್ರಾಂತೋ ಬಂಧುವಾಕ್ಯಪ್ರಣೋದಿತಃ ।
ತತೋ ಯುಧಿಷ್ಠಿರೋ ರಾಜಾ ಸತ್ಯಾಂ ವಾಚಮಕಲ್ಪಯತ್ ॥ ೩೫ ॥

---

೩೨. ಪಾಂಡವರು ಇಂತು ಆವನ ದೀನ ವಚನಗಳನ್ನು ಕೇಳಿ ಆವೇಶಗೊಂಡವರಾಗಿ, ಆ ಮುನಿಯು ತನ್ನ ಒಡಲನ್ನು ನೀಗಲು ಸಜ್ಜುಗೊಳಿಸಿದ ಅಗ್ನಿಯನ್ನು ಕಂಡು ಮತ್ತೂ ರೋಮಾಂಚಿತಗಾತ್ರರಾದರು.

೩೩. ಅನಂತರದಲ್ಲಿ ಆ ಪಾಂಡವರು ಆ ಮುನಿಯನ್ನು ಕಾಪಿಡಲು ತೊಡಗಿದವರಾಗಿ, ಆ ಮಹಾತ್ಮನಾದ ಬಹುರೋಮನೆಂಬ ಮುನಿಯ ಪಾರ್ಶ್ವದಲ್ಲಿ ದ್ರೌಪದೀದೇವಿಯನ್ನು ಬಿಟ್ಟು, ಸಡಗರದಿಂದ ಆ ಬಳಿಕ ಬಹು ದೂರವಾಗಿ ಆ ದುಷ್ಟ ದಾನವನನ್ನು ಅರಸಿಕೊಂಡು ಹೋದರು.

೩೪. ಅನಂತರದಲ್ಲಿ ತನ್ನ ತಮ್ಮಂದಿರನ್ನು ಕುರಿತು ಯುಧಿಷ್ಠಿರನು 'ನಮಗೆ ಈ ಯೆಡೆಯಲ್ಲಿ ಆ ಆರ್ತನಾದ ಮುನಿ ಹೇಳಿದಂತೆ ಯಾವುದೂ ಕಾಣಿಸುವುದಿಲ್ಲ. ಎಲೈ ಅರ್ಜುನನೇ! ನೀನು ದ್ರೌಪದಿಯ ಹೊರಗೆ ಹಿಂದಿರುಗಿ ಹೋಗು,' ಎಂದು ಹೇಳಿದನು.

೩೫. ತರುವಾಯದಲ್ಲಿ ಬಂಧುವಾದ ಯುಧಿಷ್ಠಿರನಿಂದ ಪ್ರೇರಿತನಾದ ಅರ್ಜುನನು ಹಿಂದಿರುಗಿದನು. ಬಳಿಕ ಧರ್ಮರಾಯನು ಆ ದಿಟವಾದ ನುಡಿಯನ್ನು ಅಪೇಕ್ಷಿಸಿದನು.

ನಿರೀಕ್ಷ್ಯ ಮಂಡಲಂ ಭಾನೋಸ್ತದಾ ಸುಗಹನೇ ವನೇ ।
ಮಮ ಸತ್ಯಾಚ್ಚ ಸುಕೃತಾದ್ಧರ್ಮಸಂಭಾಷಣಾತ್ ಪ್ರಭೋ ॥ ೩೬ ॥

ತಥ್ಯಂ ಶಂಸಂತು ತ್ರಿದಶಾ ಮಮ ಸಂಶಯಭಾಜಿನಃ ।
ತತೋಽಂಬರೇಽಭವದ್ವಾಣೀ ತದಾ ಭೂಪಾಶರೀರಿಣೀ ॥ ೩೭ ॥

ದಾನವೋಽಯಂ ಮಹಾರಾಜ ಮುನಿಃ ಸ್ಥೂಲಶಿರಾಃ ಸ್ಥಿತಃ ।
ನಾಸಾವುಪದ್ರುತಃ ಕೇನ ಮಾಯೈಷಾಽಸ್ಯ ದುರಾತ್ಮನಃ ॥ ೩೮ ॥

ತತೋ ಭೀಮಃ ಕರಾಘಾತೈರ್ನಶ್ಯಮಾನಂ ಹಿ ದಾನವಮ್ ।
ಸಂರಂಭಂ ಕುಪಿತೋಽತ್ಯರ್ಥಂ ಮೌಲಿದೇಶೇ ಜಘಾನ ತಮ್ ॥ ೩೯ ॥

೩೬-೩೭. ಆಗ ಧರ್ಮರಾಯನು ಆ ದಟ್ಟವಾದ ಹಳುವದಲ್ಲಿ ಸೂರ್ಯ ಮಂಡಲವನ್ನು ದಿಟ್ಟಿಸಿ 'ಎಲೈ ಸರ್ವ ಸಾಕ್ಷಿಯಾದ ಸೂರ್ಯನಾರಾಯಣನೇ ! ಎಲೈ ದೇವತೆಗಳಿರಾ ! ನನ್ನ ಶೌರ್ಯದಿಂದಲೂ, ಪುಣ್ಯದಿಂದಲೂ, ಅರದ ನುಡಿಗಳಿಂದಲೂ ಸಂಶಯಗೊಂಡಿರುವ ನನಗೆ ಯಥಾರ್ಥವಾದ ಸಂಗತಿಯನ್ನು ಹೇಳಿರಿ,' ಎಂದು ಬೇಡಿಕೊಳ್ಳಲು, ಎಲೈ ರಾಯನೇ ! ಆ ಬಳಿಕ ಆಗಸದಲ್ಲಿ ಅಶರೀರವಾಣಿಯು ಕೇಳಿಸಿತು.

೩೮. 'ಎಲೈ ಮಹಾರಾಜನಾದ ಯುಧಿಷ್ಠಿರದೇವನೇ ! ಕೇಳು ; ಸ್ಥೂಲಶಿರಸನೆಂಬ ರಾಕ್ಷಸನೇ ಈ ಮುನಿಯಾಗಿರುತ್ತಾನೆ. ಇವನಿಗೆ ಯಾರೂ ಬನ್ನವನ್ನೆಸಗಲಿಲ್ಲವು ; ಇದು ಆ ದುರಾತ್ಮನು ಎಸಗಿದ ಮಾಯೆಯು.'

೩೯. ಈ ಅಶರೀರವಾಣಿಯನ್ನು ಕೇಳಿದನಂತರದಲ್ಲಿ ಭೀಮನು ಕೈಗಳ ಹೊಡೆತದಿಂದ ಅಳಿವನ್ನೈದುತ್ತಲಿರುವ ಆ ರಾಕ್ಷಸನನ್ನು ಸಡಗರದಿಂದ ಕಡು ಮುಳಿದು ಮತ್ತೂ ಅವನ (ತಲೆಯಮೇಲೆ) ನೆತ್ತಿಯಮೇಲೆ ಹೊಡೆದನು.

ಸೋಽಪಿ ರೂಪಂ ನಿಜಂ ಪ್ರಾಪ್ಯ ರೌದ್ರಂ ಭಯಮುತಾಡಯತ್ ।
ತತ್ರ ಯುದ್ಧಂ ಪ್ರವವೃತೇ ದಾರುಣಂ ಭೀಮದೈತ್ಯಯೋಃ ॥ ೪೦ ॥

ಕಷ್ಟಾದ್ಬಭಂಜ ಭೀಮೋಽಪಿ ತಸ್ಯ ಸ್ಥೂಲಂ ಶಿರೋ ವನೇ ।
ಅರ್ಜುನೋಽಪಿ ಸಮಾಯಾತೋ ನೈವ ಪಶ್ಯತಿ ತಂ ಮುನಿಮ್ ॥ ೪೧ ॥

ತಥಾ ಚ ದ್ರೌಪದೀಂ ಭೂಯಃ ಸಾಧ್ವೀಂ ಕಾಂತಾಂ ಚ ವಲ್ಲಭಾಮ್ ।
ತತೋ ವೃಕ್ಷಂ ಸಮಾರುಹ್ಯ ಯಾವತ್ಪಶ್ಯತಿ ಚಾರ್ಜುನಃ ॥ ೪೨ ॥

ತಾವದ್ವಿಧಾಯ ತಾಂ ಸ್ಕಂಧೇ ಶೀಘ್ರಂ ಧಾವತಿ ದಾನವಃ ।
ಸಂಹೃತಾ ಯಾತಿ ದುಷ್ಟೇನ ರುದತೀ ಕುರರೀ ಯಥಾ ॥ ೪೩ ॥

---

೪೦. ಆ ಸ್ಥೂಲಶಿರನೆಂಬ ದಾನವನು ತನ್ನ ಸ್ವಭಾವ ಸಿದ್ಧವಾದ ಘೋರವಾದ ಭಯಂಕರಾಕೃತಿಯನ್ನು ತಾಳಿ, ಭೀಮನಿಗೆ ಹೊಡೆದನು. ಅಲ್ಲಿ ಭೀಮನಿಗೂ ಆ ದೈತ್ಯನಿಗೂ ಬಹು ಘೋರವಾದ ಸಂಗ್ರಾಮವು ನಡೆಯಿತು.

೪೧. ಭೀಮಸೇನನೂ ಆ ದಾನವನ ತೋರವಾದ ತಲೆಯನ್ನು ಅತಿಕ್ಲೇಶದಿಂದ ಪೋಳ್ಳೈದನು. ಅರ್ಜುನನು ಅಂತು ಅಣ್ಣನ ಮಾತಿನಂತೆ ಮರಳಿ ಬಂದನು. ಆ ಅಡವಿಯಲ್ಲಿ ದ್ರೌಪದೀದೇವಿಯನ್ನು ರಕ್ಷಿಸಲು ಬಿಟ್ಟುಹೋಗಿದ್ದ ಆ ಬಹುರೋಮನೆಂಬ ಮುನಿಯನ್ನೂ ಕಾಣಲಿಲ್ಲವು.

೪೨. ಅಂತೆಯೇ ಪುನಃ ಸಾಧ್ವಿಯೂ, ಕಾಂತೆಯೂ, ಪ್ರಿಯೆಯೂ ಆದ ದ್ರೌಪದೀದೇವಿಯನ್ನು ಕಾಣಲಿಲ್ಲವು. ಅನಂತರದಲ್ಲಿ ಅರ್ಜುನನು ಹತ್ತಿರದಲ್ಲಿದ್ದ ಹೆಮ್ಮರವನ್ನೇರಿ ಸುತ್ತಲೂ ನೋಡಿದನು.

೪೩-೪೪. ಆ ಬಹುರೋಮನೆಂಬ ದಾನವನೂ ಆ ದ್ರೌಪದೀದೇವಿಯನ್ನು ಅಷ್ಟರಲ್ಲಿಯೆ ಹೆಗಲಮೇಲೆ ಕೂರಿಸಿಕೊಂಡು ಓಡುತ್ತಲಿದ್ದನು. ಆ ದ್ರೌಪದಿಯೂ

ಕುರ್ವತೀ ಭೀಮಭೀಮೇತಿ ಧರ್ಮಪುತ್ರೇತಿ ವಾದಿನೀ ।
ತಾಂ ದೃಷ್ಟ್ವಾ ಸ ಯಯೌ ವೀರಶಬ್ದೈಃ ಸನ್ನಾದಯನ್ ದಿಶಃ ॥ ೪೪ ॥

ಪಾದನ್ಯಾಸೋರುವೇಗೇನ ಪ್ರಭಗ್ನಾಃ ಪಾದಪಾ ಭೃಶಮ್ ।
ತತೋ ದೈತ್ಯೋಽಪಿ ತಾಂ ತನ್ವೀಂ ವಿಹಾಯಾಶು ಪಲಾಯಿತಃ ॥ ೪೫ ॥

ತಥಾಪಿ ಚಾರ್ಜುನೋ ತಸ್ಯ ಕೋಪಾನ್ಮುಂಚತಿ ನಾಸುರಮ್ ।
ತತೋ ದೈತ್ಯೋಽಪಿ ತಾಂ ತನ್ವೀಂ ವಿಹಾಯಾಶು ಪಲಾಯಿತಃ ॥ ೪೬ ॥

ಪತಿತೋ ಮೇದಿನೀಪೃಷ್ಠೇ ತಾವದೇವ ಚತುರ್ಭುಜಃ ।
ಪೀತೇ ಚ ವಾಸಸೀ ಬಿಭ್ರತ್ ಶಂಖಚಕ್ರಾಯುಧಾನಿ ಚ ॥ ೪೭ ॥

ಆ ದುಷ್ಟನಿಂದ ಹಿಂಸೆಗೊಂಡವಳಾಗಿ ಭೀಮ ! ಭೀಮ ! ಎಂದೂ, ಧರ್ಮಪುತ್ರನೇ ! ಎಂದೂ ಕೂಗುತ್ತಾ ಹೆಣ್ಣು ಕುರಿಯಂತೆ ಅಳುತ್ತಾ ಹೋಗುತ್ತಿದ್ದಳು. ಅಂತಹ ದ್ರೌಪದೀದೇವಿಯನ್ನು ಕಂಡು ಅರ್ಜುನನು ವೀರಾಲಾಪಗಳಿಂದ ಎಣ್ದೆಸೆಗಳನ್ನೂ ಮೊಳಗಿಸುತ್ತಾ ಹಿಂಬಾಲಿಸಿದನು.

೪೫. ಅಂತು ಅರ್ಜುನನು ಹೆಜ್ಜೆಯಿಡುವ ಕಡು ವೇಗದಿಂದ ಹೆಮ್ಮರಗಳೂ ಬಹುವಾಗಿ ಮುರಿದು ಬಿದ್ದುವು. ಬಳಿಕ ಆ ದೈತ್ಯನೂ ಆ ಅಸಿಯಳನ್ನು ಅಲ್ಲಿಯೇ ಕೆಡಹಿ ಬೇಗನೇ ಓಡಿಹೋದನು.

೪೬. ಆ ಬಳಿಕ ಆ ದೈತ್ಯನು ಅಂತು ಅಸಿಯಳಾದ ದ್ರೌಪದಿಯನ್ನುಳಿದು ವೇಗದಿಂದ ಓಡುತ್ತಲಿದ್ದರೂ, ಅರ್ಜುನನು ಮುಳಿಸಿನಿಂದ ಆ ರಕ್ಕಸನನ್ನು ಹಿಂಬಾಲಿಸದೆ ಬಿಡಲಿಲ್ಲ.

೪೭. ಅನಂತರದಲ್ಲಿಯೇ ಆ ರಕ್ಕಸನು ಮುಂಮುಗಾಣದೇ ನೆಲದಮೇಲೆ ಬಿದ್ದವನೇ ನಾಲ್ಕು ತೋಳುಗಳುಳ್ಳವನಾಗಿಯೂ, ಪೀತಾಂಬರಯುಗಳ ಧಾರಿಯಾಗಿಯೂ, ಶಂಖಚಕ್ರಗದಾಪದ್ಮಗಳನ್ನು ಧರಿಸಿದವನಾಗಿಯೂ ಕಾಣಿಸಿಕೊಂಡನು.

ತತಃ ಸ ವಿಸ್ಮಯಾಕ್ರಾಂತೋ ನತ್ವಾ ಪಾರ್ಥೋ ವಚೋಽವದತ್ ।

॥ ಅರ್ಜುನ ಉವಾಚ ॥

ಕಥಂ ತ್ವಯೈಷಾ ಭಗವಂಶ್ಚಕ್ರೇ ಮಾಯಾತ್ರ ವೈಷ್ಣವೀ ॥ ೪೮ ॥

ಮಯಾಪ್ಯಪಕೃತಂ ನಾಥ ತತ್ ಕ್ಷಮಸ್ವ ನಮೋಽಸ್ತು ತೇ ।
ನೂನಮಜ್ಞಾನಭಾವೇನ ಕರ್ಮೈತದ್ದಾರುಣಂ ಮಯಾ ॥ ೪೯ ॥

ತತ್ಕ್ಷಂತವ್ಯಂ ಜಗನ್ನಾಥ ಚೈತನ್ಯಂ ಮಾನವೇ ಕುತಃ ।

॥ ಚತುರ್ಭುಜ ಉವಾಚ ॥

ಶೃಣ್ವರ್ಜುನ ಮಹಾಭಾಗ ಸಹಿತೋ ಭ್ರಾತೃಭಿರ್ಮಮ ॥ ೫೦ ॥

---

೪೮. ಅನಂತರದಲ್ಲಿ ಪೃಥಾನಂದನನಾದ ಆ ಅರ್ಜುನನು ಆ ಚತುರ್ಭುಜನನ್ನು ಕಂಡು ಆಶ್ಚರ್ಯಗೊಂಡವನಾಗಿ ಅವನಿಗೆರಗಿ ಇಂತು ನುಡಿದನು.

೪೯. 'ಎಲೈ ಒಡೆಯನೇ ! ನಾನು ನಿನಗೆ ಕೇಡೊಡರಿಸಿದೆನು, ಸೈರಿಸು ; ನಿನಗೆರಗುವೆನು ; ನಾನು ಅರಿವಿಲ್ಲದೇ ಈ ಘೋರ ಕರ್ಮವನ್ನೆಸಗಿದೆನು.

೫೦-೫೧. ಎಲೈ ಸಕಲ ಲೋಕನಿಯಾಮಕನೇ ! ಈ ಅಲ್ಪಯೋಗ್ಯತೆಯುಳ್ಳ ಮಾನವನಲ್ಲಿ ವಿವೇಕವೆಲ್ಲಿರುವುದು ? ಆದುದರಿಂದ ಎನ್ನ ಅಪರಾಧಗಳನ್ನು ಸೈರಿಸು,' ಇಂತು ವಿನಯದಿಂದ ಅರ್ಜುನನು ಬಿನ್ನವಿಸಲು, ಆ ಚತುರ್ಭುಜನು ಹೇಳುತ್ತಾನೆ :—'ಎಲೈ ಮಹಾಬಾಹುವಾದ ಅರ್ಜುನನೇ ! ನಾನು ಶ್ರೀಕೃಷ್ಣನಲ್ಲ : ಬಹುರೋಮನೆಂಬ ಹೆಸರಿನ ದಾನವನು.

ಉಪಯಾತೋ ಹರೇರ್ದೇಹಂ ಪೂರ್ವಕರ್ಮಪ್ರಭಾವತಃ ।

॥ ಅರ್ಜುನ ಉವಾಚ ॥

ಬಹುರೋಮನ್ ಪೂರ್ವಜಾತಿಕರ್ಮ ಮೇ ಶಂಸ ತತ್ತ್ವತಃ ॥ ೫೧ ॥

ಕೇನ ಕರ್ಮವಿಪಾಕೇನ ವಿಷ್ಣೋಃ ಸಾರೂಪ್ಯಮಾಪ್ತವಾನ್ ।

॥ ಚತುರ್ಭುಜ ಉವಾಚ ॥

ಶೃಣ್ವರ್ಜುನ ಮಹಾಭಾಗ ಸಹಿತೋ ಭ್ರಾತೃಭಿರ್ಮಮ ॥ ೫೨ ॥

ಚರಿತಂ ಚಿತ್ರಮತ್ಯರ್ಥಂ ಶೃಣ್ವತಾಂ ಮುದವರ್ಧನಮ್ ।
ಅಹಮಾಸಂ ಪುರಾ ರಾಜಾ ಸೋಮವಂಶಸಮುದ್ಭವಃ ॥ ೫೩ ॥

ಹಿಂದಿನ ಜನ್ಮದಲ್ಲೆಸಗಿದ ಸುಕೃತದ ಮಹಿಮೆಯಿಂದ ಹರಿಯ ದೇಹಕ್ಕೆ ಸಮಾನವಾದ ದೇಹವನ್ನು ಹೊಂದಿರುತ್ತೇನೆ. ಅಂತು ಚತುರ್ಭುಜನಾದ ಬಹುರೋಮನು ಹೇಳಿದುದನ್ನು ಕೇಳಿ, ಅರ್ಜುನನು ಹೇಳುತ್ತಾನೆ :—'ಎಲೈ ಬಹುರೋಮನೇ ! ಯಾವ ಕರ್ಮ ಫಲವಾಗಿ ನೀನು ಶ್ರೀಮಹಾವಿಷ್ಣುವಿನ ಸಾರೂಪ್ಯವನ್ನು ಪಡೆದಿರುವಿಯೋ, ಆ ಹಿಂದಿನ ಹುಟ್ಟಿನಲ್ಲೆಸಗಿದ ಕರ್ಮ ವಿಶೇಷವನ್ನು ನನಗೆ ಯಥಾರ್ಥವಾಗಿ ಅರುಹು.'

೫೨-೫೪. ಇಂತು ಅರ್ಜುನನು ಬಹುರೋಮನನ್ನು ಅವನು ಹಿಂದಿನ ಜನ್ಮದಲ್ಲೆಸಗಿದ ಕರ್ಮವನ್ನು ಅರುಹೆನಲು, ಆ ಚತುರ್ಭುಜನಾದ ಬಹುರೋಮನು ಹೇಳುತ್ತಾನೆ :—"ಎಲೈ ಪುಣ್ಯಶಾಲಿಯಾದ ಅರ್ಜುನನೇ ! ನಿನ್ನ ಸಹೋದರರೊಡಗೂಡಿ ಅತ್ಯಂತ ಆಶ್ಚರ್ಯವನ್ನುಂಟುಮಾಡುವ ನನ್ನ ಚರಿತ್ರೆಯನ್ನು ಕೇಳು ; ಇದು ಕೇಳುವವರಿಗೆ ಸಂತಸವನ್ನು ಹೆಚ್ಚಿಸುವುದು ; ನಾನು ಹಿಂದಿನ ಹುಟ್ಟಿನಲ್ಲಿ ಸೋಮಕುಲದ

ಜಯಧ್ವಜ ಇತಿ ಖ್ಯಾತೋ ನಾರಾಯಣಪರಾಯಣಃ ।
ವಿಷ್ಣೋರ್ದೇವಾಲಯೇ ನಿತ್ಯಂ ಸಂಮಾರ್ಜನಪರಾಯಣಃ ॥ ೫೪ ॥

ಉಪಲೇಪರತಶ್ಚೈವ ದೀಪದಾನೇ ಸಮಾದೃತಃ ।
ವೀತಿಹೋತ್ರ ಇತಿ ಖ್ಯಾತ ಆಸೀತ್ಸಾಧು ಪುರೋಹಿತಃ ॥ ೫೫ ॥

ಮಮ ತಚ್ಚರಿತಂ ದೃಷ್ಟ್ವಾ ವಿಪ್ರೋ ವಿಸ್ಮಯಮಾಗತಃ ।

॥ ಮಾರ್ಕಂಡೇಯ ಉವಾಚ ॥

ಕದಾಚಿದುಪವಿಷ್ಟಂ ತಂ ರಾಜಾನಂ ವಿಷ್ಣುತತ್ಪರಂ ॥ ೫೬ ॥

ಲ್ಲೊಗೆದ ಜಯಧ್ವಜನೆಂದು ಹೆಸರು ಪಡೆದ ರಾಯನಾಗಿದ್ದೆನು. ಆಗ ನಾನು ಶ್ರೀಮನ್ನಾರಾಯಣನಲ್ಲಿ ಭಕ್ತಿಯುಳ್ಳವನಾಗಿ ನಿಚ್ಚದಲ್ಲಿಯೂ ಶ್ರೀಮಹಾವಿಷ್ಣುವಿನ ದೇವಾಲಯದಲ್ಲಿ ಕಸವನ್ನು ಗುಡಿಸುವ ಕೆಲಸದಲ್ಲಿ ತೊಡಗಿದವನಾಗಿದ್ದೆನು.

೫೫. ಮತ್ತು ನಾನು ಆ ವಿಷ್ಣುದೇವಾಲಯದಲ್ಲಿ ನೆಲದ ಸಾರಣೆಯನ್ನು ಮಾಡುವುದರಲ್ಲಿ ತೊಡಗಿದವನೂ, ಅಂತೆಯೇ ದೀಪವನ್ನು ಹೆತ್ತಿಸುವುದರಲ್ಲಿ ಉದ್ಯುಕ್ತನಾದವನೂ ಆಗಿದ್ದೆನು. ಅಲ್ಲಿ ವೀತಿಹೋತ್ರನೆಂದು ಪ್ರಸಿದ್ಧನಾದ ಸತ್ಪುರುಷನಾದ ಒಬ್ಬ ಪುರೋಹಿತನಿದ್ದನು.

೫೬–೫೭. ಆ ಪುರೋಹಿತನಾದ ವೀತಿಹೋತ್ರನೆಂಬ ಬ್ರಾಹ್ಮಣನು ನನ್ನ ಆ ಕಸ ಬಳಿಯುವುದೇ ಮೊದಲಾದ ಆ ವ್ಯಾಪಾರವನ್ನು ನೋಡಿ ಅಚ್ಚರಿಗೊಂಡನು.'

ಮಾರ್ಕಂಡೇಯ ಮುನಿಯು ಹೇಳುತ್ತಾನೆ :—

'ಒಮ್ಮೆ ಋಗಾದಿವೇದಗಳು ಶಿಕ್ಷಾದಿ ವೇದಾಂಗಗಳು ಇವುಗಳಲ್ಲಿ ಪಂಡಿತನಾದ ಆ ವೀತಿಹೋತ್ರನು ವಿಷ್ಣುಭಕ್ತನಾದ ಆ ರಾಯನು ಕುಳಿತುಕೊಂಡಿರಲು

ಅಪೃಚ್ಛದ್ವೀತಿಹೋತ್ರಸ್ತಂ ವೇದ ವೇದಾಂಗ ಪಾರಗಃ ।
ರಾಜರ್ಷೇ ಪರಮಧರ್ಮಜ್ಞ ಹರಿಭಕ್ತಿಪರಾಯಣ ॥ ೫೭ ॥

ವಿಷ್ಣುಭಕ್ತಿಮತಾಂ ಪುಂಸಾಂ ಶ್ರೇಷ್ಠೋಽಸಿ ಪುರುಷರ್ಷಭ ।
ಸಂಮಾರ್ಜನ ಪರೋ ನಿತ್ಯಂ ಉಪಲೇಪರತಸ್ತಥಾ ॥ ೫೮ ॥

ತನ್ಮೇ ವದ ಮಹಾಭಾಗ ತ್ವಯಾ ಕಿಂ ವಿದಿತಂ ಫಲಮ್ ।
ಕರ್ಮಾಣ್ಯನ್ಯಾನಿ ಸಂತ್ಯೇವ ವಿಷ್ಣೋಃ ಪ್ರಿಯತರಾಣಿ ವೈ ॥ ೫೯ ॥

ತಥಾಽಪಿ ತ್ವಂ ಮಹಾಭಾಗ ಏತಯೋಃ ಸತತೋದ್ಯತಃ ।
ಸರ್ವಾತ್ಮನಾ ಮಹಾಪುಣ್ಯಂ ಜನೇಶ ವಿದಿತಂ ತವ ॥ ೬೦ ॥

ಅವನನ್ನು ಇಂತು ಪ್ರಶ್ನಿಸಿದನು, ' :—' ಎಲೈ ಶ್ರೇಷ್ಠವಾದ ಧರ್ಮತತ್ವವನ್ನರಿತ ವನೂ, ಶ್ರೀ ಮಹಾವಿಷ್ಣುವಿನಲ್ಲಿ ಭಕ್ತಿಯನ್ನು ಮಾಡುವುದರಲ್ಲಿಯೇ ತೊಡಗಿದ ವನೂ, ಪುರುಷಶ್ರೇಷ್ಠನೂ ಆದ ರಾಜನೇ! ನೀನು ಶ್ರೀ ಮಹಾವಿಷ್ಣುವಿನಲ್ಲಿ ಬಕುತಿಯನ್ನೆಸಗುವ ಮಾನವರಲ್ಲಿ ಉತ್ತಮನಾಗಿರುತ್ತೀಯೆ ; ನೀನು ನಿಚ್ಚದಲ್ಲಿಯೂ ಶ್ರೀ ಹರಿಮಂದಿರವನ್ನು ಗುಡಿಸುವುದರಲ್ಲಿಯೂ, ಸಾರಣೆ ಮಾಡುವುದರಲ್ಲಿಯೂ ಅತ್ಯಂತ ಸಡಗರದಿಂದ ವರ್ತಿಸುತ್ತಿರುವೆ.

೫೯-೬೧. ' ಎಲೈ ಪುಣ್ಯಶಾಲಿಯೇ! ನೀನೆಸಗುವ ಈ ಸೇವೆಗೆ ಫಲವಾವುದೆಂದು ನೀನರಿತಿರುವೆ? ಅದನ್ನು ನನಗೆ ತಿಳಿಸು. ಶ್ರೀಮಹಾವಿಷ್ಣುವಿಗೆ ಇನ್ನೂ ಪ್ರೀತಿಗೆ ಹೆಚ್ಚಾದ ಇತರ ಕರ್ಮಗಳಿವೆ. ಹಾಗಿದ್ದರೂ ನೀನು ಈ ಸಮ್ಮಾರ್ಜನೋಪಲೇಪನ ಕಾರ್ಯಗಳಲ್ಲಿಯೇ ಯಾವಾಗಲೂ ತೊಡಗಿರುವೆ. ಎಲೈ ಜನನಾಯಕನೆ! ಈ ಕಾರ್ಯಗಳು ಎಲ್ಲಾ ತೆರನಾಗಿಯೂ ಮಹಾ ಪುಣ್ಯಕರಗಳೆಂದು ತಿಳಿದಿರುವೆಯೋ? ನಿನಗೆ ನನ್ನಲ್ಲಿ ಪ್ರೀತಿಯಿದ್ದರೆ, ಆ ವಿಷಯವು ರಹಸ್ಯವಲ್ಲದಿದ್ದರೆ.

ತದ್ಬ್ರೂಹಿ ಯದ್ಯಗುಹ್ಯಂ ಚ ಶ್ರೋತುರ್ಮಯಿ ತವಾಸ್ತಿ ಚೇತ್ ॥ ೬೦ ॥

॥ ಜಯಧ್ವಜ ಉವಾಚ ॥

ಶೃಣುಷ್ವ ವಿಪ್ರಶಾರ್ದೂಲ ಮಮೈವ ಚರಿತಂ ಪುರಾ ।
ಜಾತಿಸ್ಮರತ್ವಾಜ್ಜಾನಾಮಿ ಶ್ರೋತೄಣಾಂ ವಿಸ್ಮಯಾವಹಮ್ ।
ಪೂರ್ವಜನ್ಮನಿ ವಿಪ್ರೇಂದ್ರ ರೈವತೋ ನಾಮ ವಾಡವಃ ॥ ೬೧ ॥

ಅಯಾಜ್ಯಯಾಜಕೋಽಹಂ ವೈ ಸದೈವ ಗ್ರಾಮಯಾಜಕಃ ।
ಪಿಶುನೋ ನಿಷ್ಠುರಶ್ಚೈವ ಅಪಣ್ಯಾನಾಂ ಚ ವಿಕ್ರಯೀ ॥ ೬೩ ॥

ನಿಷಿದ್ಧಕರ್ಮಾಚರಣಾತ್ ಪರಿತ್ಯಕ್ತಃ ಸ್ವಬಂಧುಭಿಃ ।
ಮಹಾಪಾಪರತೋ ನಿತ್ಯಂ ಬ್ರಹ್ಮದ್ವೇಷರತಸ್ತಥಾ ॥ ೬೪ ॥

ಅದನ್ನು ನನಗೆ ಹೇಳು,' ಎಂದು ವೀತಿಹೋತ್ರನು ಕೇಳಲು, ಜಯಧ್ವಜರಾಯನು ಹೇಳುತ್ತಾನೆ :—'ಎಲೈ ಬ್ರಾಹ್ಮಣಶ್ರೇಷ್ಠನೇ ! ಕೇಳು ನನ್ನ ಹಿಂದಣ ಚರಿತ್ರೆಯನ್ನೇ ಹೇಳುತ್ತೇನೆ.

೬೧. ನಾನು ಜಾತಿಸ್ಮರನಾದುದರಿಂದ ನನ್ನ ಹಿಂದಿನ ಹುಟ್ಟಿನ ವಿಷಯವನ್ನು ಅರಿಯುವೆನು. ಇದನ್ನು ಕೇಳುವವರಿಗೆ ಅಚ್ಚರಿಯಾಗುವುದು. ಎಲೈ ಬ್ರಾಹ್ಮಣಶ್ರೇಷ್ಠನೇ ! ಹಿಂದಿನ ಭವದಲ್ಲಿ ನಾನು ರೈವತನೆಂಬ ಹೆಸರಿನ ಬ್ರಾಹ್ಮಣನಾಗಿದ್ದೆನು.

೬೩-೬೪. ನಾನು ಯಾಗವನ್ನು ಆಚರಿಸಲು ಅರ್ಹರಲ್ಲದವರಿಗೆ ಯಾಗವನ್ನು ಮಾಡಿಸುವ ಪುರೋಹಿತನಾಗಿಯೂ, ಯಾವಾಗಲೂ ಗ್ರಾಮ ಪುರೋಹಿತನಾಗಿಯೂ, ಪಿಸುಣನಾಗಿಯೂ, ಕ್ರೂರನಾಗಿಯೂ, ವಿಕ್ರಯಿಸಬಾರದ ರಸಪದಾರ್ಥಗಳೇ ಮೊದಲಾದುವನ್ನು ಮಾರುವವನಾಗಿಯೂ ಇದ್ದು, ಮಾಡಬಾರದ ನಿಷಿದ್ಧಗಳಾದ ಕರ್ಮಗಳನ್ನು ಆಚರಿಸುತ್ತಿದ್ದುದರಿಂದ, ನನ್ನ ನಂಟರು ನನ್ನನ್ನು ಬಿಟ್ಟುಬಿಟ್ಟರು. ಅಂತು ಬಹು ಪಾಪಕಾರ್ಯಗಳಲ್ಲಿ ಆಸಕ್ತನಾಗಿ ಹಾಗೆಯೇ ನಿಚ್ಚವೂ ಬ್ರಾಹ್ಮಣರಲ್ಲಿ ಹಗೆಯಿಂದ ನಡೆದುಕೊಳ್ಳತಕ್ಕವನೂ ಆಗಿದ್ದೆನು.

ಪರದಾರ ಪರದ್ರವ್ಯ ಲೋಲುಪೋ ಜಂತುಹಿಂಸಕಃ ।
ಮದ್ಯಪಾನರತೋ ನಿತ್ಯಂ ಬ್ರಹ್ಮದ್ವೇಷರತಸ್ತಥಾ ॥ ೬೫ ॥

ಏವಂ ಪಾಪರತೋ ನಿತ್ಯಂ ಬಹುಶೋ ಮಾರ್ಗರೋಧಕೃತ್ ।
ಕದಾಚಿತ್ ಕಾಮಚಾರೋಽಹಂ ಗೃಹೀತ್ವಾ ಬ್ರಾಹ್ಮಣಸ್ತ್ರಿಯಃ ॥ ೬೬ ॥

ಶೂನ್ಯಂ ಪೂಜಾದಿಭಿರ್ವಿಷ್ಣೋರ್ಮಂದಿರಂ ಪ್ರಾಪ್ತವಾನ್ನಿಶಿ ।
ಸ್ವವಸ್ತ್ರಪ್ರಾಂತತೋ ಬ್ರಹ್ಮನ್ ಕಿಯದಂಶಃ ಸಮಾರ್ಜಿತಃ ॥ ೬೭ ॥

ಪ್ರದೀಪಃ ಸ್ಥಾಪಿತಸ್ತತ್ರ ಸುರತಾರ್ಥಾಯ ದ್ವಿಜೋತ್ತಮ ।
ತೇನಾಪಿ ಮಮ ದುಷ್ಕರ್ಮ ನಿಶ್ಶೇಷಂ ಕ್ಷಯಮಾಗತಮ್ ॥ ೬೮ ॥

---

೬೫. ಪರಸ್ತ್ರೀ, ಪರದ್ರವ್ಯ ಇವುಗಳನ್ನು ಆಶಿಸುವನಾಗಿಯೂ, ಪ್ರಾಣಿಹಿಂಸಕನಾಗಿಯೂ, ನಿತ್ಯದಲ್ಲಿ ಮದ್ಯವನ್ನುಕುಡಿಯುವುದರಲ್ಲಿ ತೊಡಗಿದವನಾಗಿಯೂ, ಹಾಗೆಯೇ ಬ್ರಾಹ್ಮಣರಲ್ಲಿ ದ್ವೇಷವುಳ್ಳವನಾಗಿಯೂ ಇದ್ದೆನು.

೬೬-೬೮. ಅಂತಲ್ಲದೇ ನಿತ್ಯದಲ್ಲಿಯೂ ಇಂತಹ ಪಾಪಕರ್ಮದಲ್ಲಿ ತೊಡಗಿದವನಾಗಿಯೂ, ಅನೇಕವೇಳೆ ಪ್ರಯಾಣಿಕರಿಗೆ ಅಡ್ಡಹಾಕಿ ಅವರ ದ್ರವ್ಯಗಳನ್ನಪಹರಿಸುವವನಾಗಿಯೂ, ಕೆಲವು ವೇಳೆ ಬ್ರಾಹ್ಮಣ ಸ್ತ್ರೀಯರನ್ನು ಹಿಡಿದು ಕಾಮಾಚಾರನಾಗಿ ರಾತ್ರಿಯವೇಳೆಯಲ್ಲಿ ಪೂಜಾದಿಗಳು ನಡೆಯದಿರುವ ವಿಷ್ಣುದೇವಾಲಯಕ್ಕೆ ಹೋಗಿ, ನನ್ನ ವಸ್ತ್ರದ ಅಂಚುಗಳನ್ನು ಹರಿದು, ಎಣ್ಣೆಯಲ್ಲಿ ನೆನೆಸಿ ಆಯೆಡೆಯಲ್ಲಿ ಸ್ತ್ರೀ ಸಂಭೋಗಕ್ಕಾಗಿ ದೀಪವನ್ನುಹಚ್ಚುತ್ತಿದ್ದೆನು. ಎಲೈ ಬ್ರಾಹ್ಮಣನೇ! ಕೇಳು : ಅದರಿಂದಲೂ ನನ್ನ ದುಷ್ಕರ್ಮವು ಸಂಪೂರ್ಣವಾಗಿ ನಶಿಸಲ್ಪಟ್ಟಿತು.

ಏವಂ ಸ್ಥಿತೇ ವಿಷ್ಣುಗೃಹೇ ಮಯಾ ಭೋಗೇಚ್ಛಯಾ ದ್ವಿಜ ।
ತದೈವ ದೀಪಕಂ ದೃಷ್ಟ್ವಾ ಆಗತಾಃ ಪುರಪಾಲಕಾಃ ॥ ೬೯ ॥

ಚೌರ್ಯಾರ್ಥಂ ಪರದೂತೋಽಯಮಿತ್ಯುಕ್ತ್ವಾ ಪೂಮಪಾತಯರ್ ।
ಖಡ್ಗೇನ ತೀಕ್ಷ್ಣಧಾರೇಣ ಶಿರಶ್ಛಿತ್ವಾ ಚ ತೇ ಗತಾಃ ॥ ೭೦ ॥

ದಿವ್ಯಂ ವಿಮಾನಮಾರುಹ್ಯ ಪ್ರಭುದಾಸಸಮನ್ವಿತಮ್ ।
ಗಂಧರ್ವೈರ್ಗೀಯಮಾನೋಽಹಂ ಸ್ವರ್ಗಲೋಕಂ ತದಾ ಗತಃ ॥ ೭೧ ॥

॥ ಚತುರ್ಭುಜ ಉವಾಚ ॥

ತತ್ರ ಸ್ಥಿತ್ವಾ ಬ್ರಹ್ಮಕಲ್ಪಂ ಶತಂ ಸಾಗ್ರಂ ದ್ವಿಜೋತ್ತಮಾಃ ।
ದಿವ್ಯಭೋಗ ಸಮಾಯುಕ್ತೋ ದಿವ್ಯರೂಪಸಮನ್ವಿತಃ ॥ ೭೨ ॥

---

೬೯. ಕೇಳು; ಬ್ರಾಹ್ಮಣ! ನಾನು ಆ ಪರಸ್ತ್ರೀ ಭೋಗೇಚ್ಛೆಯಿಂದ ವಿಷ್ಣು ದೇವಾಲಯದಲ್ಲಿರಲು, ಆಗಲೇ ಆ ಸಣ್ಣದೀಪವನ್ನು ಕಂಡು ಆ ಗ್ರಾಮರಕ್ಷಕರು ಅಲ್ಲಿಗೆ ಬಂದರು.

೭೦. ಆಗ ಅವರು ನನ್ನನ್ನು ಕಂಡು 'ಇವನು ಕಳ್ಳತನಕ್ಕಾಗಿ ಬಂದಿರುವ ಹೆರರ ಆಳು' ಎಂದು ಹೇಳಿ, ನನ್ನನ್ನುಹೊಡೆದು ಕೆಡುಹಿ, ಹರಿತವಾದ ಅಲುಗುಳ್ಳ ಕಡುಗದಿಂದ ನನ್ನ ತಲೆಯನ್ನು ಕತ್ತರಿಸಿ ಅವರು ಹೊರಟು ಹೋದರು.

೭೧. ಆಗ ಅಲ್ಲಿಗೆ ಬಂದ ವಿಷ್ಣುದೂತರಿಂದ ಕೂಡಿದ ದಿವ್ಯವಿಮಾನವನ್ನು ನಾನು ಹತ್ತಿ, ಗಂಧರ್ವರಿಂದ ಕೊಂಡಾಡಿಸಿಕೊಳ್ಳುತ್ತಾ, ಸಗ್ಗಲೋಕಕ್ಕೆಯ್ದಿದೆನು.

೭೨-೭೩. ಚತುರ್ಭುಜನು ಹೇಳುತ್ತಾನೆ:—'ಎಲೈ ದ್ವಿಜೋತ್ತಮರೇ! ಕೇಳಿರಿ; ಆ ಸ್ವರ್ಗಲೋಕದಲ್ಲಿ ಉತ್ತಮವಾದ ರೂಪದೊಡಗೂಡಿದವನಾಗಿ ಉತ್ತಮ

ಜಾತೋಽಹಂ ಪುಣ್ಯಯೋಗಾದ್ಧಿ ಸೋಮವಂಶ ಸಮುದ್ಭವಃ ।
ಜಯದ್ವಿಜ ಇತಿ ಖ್ಯಾತೋ ರಾಜಾ ರಾಜೀವ ಲೋಚನಃ ॥ ೨೩ ॥

ತತ್ರಾಪಿ ಕಾಲವಶತೋ ಮೃತಃ ಸ್ವರ್ಗಮವಾಪ್ತವಾನ್ ।
ಇಂದ್ರಲೋಕಮನುಪ್ರಾಪ್ಯ ರುದ್ರಲೋಕಂ ತತೋ ಗತಃ ॥ ೨೪ ॥

ರುದ್ರಲೋಕಾದ್ಬ್ರಹ್ಮಲೋಕಂ ಗಚ್ಛತಾ ನಾರದೋ ಮುನಿಃ ।
ದೃಷ್ಟಶ್ಚ ನಮಿತೋ ನೈವ ಗರ್ವಾನ್ಮೇ ಹಸಿತಶ್ಚ ಸಃ ।
ಕುಪಿತಃ ಶಪ್ತವಾನ್ ಮಾಂ ಸ ರಾಕ್ಷಸೋ ಭವ ಭೂಪತೇ ॥ ೨೫ ॥

ಇತಿ ಶಾಪಂ ಸಮಾಕರ್ಣ್ಯ ದತ್ತಂ ತೇನ ದ್ವಿಜನ್ಮನಾ ।
ಪ್ರಸಾದಿತೋ ಮಯಾ ಭೂಪ ಪ್ರಸಾದಂ ಕೃತವಾನ್ ಮುನಿಃ ॥ ೨೬ ॥

ಗಳಾದ ಸ್ವರ್ಗೀಯಸುಖಗಳನ್ನು ಅನುಭವಿಸುತ್ತಾ, ಒಂದು ನೂರು ಬ್ರಹ್ಮಕಲ್ಪಕ್ಕಿಂತಲೂ ಸ್ವಲ್ಪ ಹೆಚ್ಚು ಕಾಲವಿದ್ದು, ಪುಣ್ಯದ ಫಲವಾಗಿ ನಾನು ಚಂದ್ರಕುಲದಲ್ಲಿ ಜನಿಸಿ, ತಾವರೆಯಂತೆ ಕಣ್ಣುಗಳುಳ್ಳ ಜಯಧ್ವಜರಾಜನೆಂದು ಹೆಸರುಪಡೆದಿದ್ದೆನು.

೨೪-೨೫. ಆ ಜನ್ಮದಲ್ಲಿಯೂ ಕಾಲಾಧೀನನಾಗಿ ದೇಹವನ್ನು ಬಿಟ್ಟು, ಸ್ವರ್ಗಲೋಕಕ್ಕೆ ಹೋದವನು ಅಲ್ಲಿಂದ ಇಂದ್ರಲೋಕವನ್ನೈದಿ, ಅಲ್ಲಿಂದ ರುದ್ರಲೋಕಕ್ಕೆ ಹೋಗಿ, ಆ ರುದ್ರಲೋಕದಿಂದ ಚತುರ್ಮುಖನ ಸತ್ಯಲೋಕಕ್ಕೆ ಹೋಗುತ್ತಿರುವಾಗ ಹಾದಿಯಲ್ಲಿ ನಾರದಮುನಿಯನ್ನು ನೋಡಿದವನು ಆತನಿಗೆರಗದೆ ಗರ್ವದಿಂದ ಅಪಹಾಸ ಮಾಡಿದೆನು. ಆಗ ಆ ದೇವಮುನಿಯು ನನ್ನ ಗರ್ವದ ಅಪಹಾಸಕ್ಕೆ ಮುನಿದು, ‘ಎಲೈ ರಾಜನೇ ! ನೀನು ರಕ್ಕಸನಾಗು” ಎಂದು ಶಪಿಸಿದನು.

೨೬-೨೭. ಇಂತು ಆ ದೇವಮುನಿಯಿತ್ತ ಶಾಪವನ್ನು ಕೇಳಿ, ನಾನು ಆತನನ್ನು ಅನುನಯದಿಂದ ಸಂತೋಷಗೊಳಿಸಿ ಮುಳಿಸನ್ನಳಿದು ಅನುಗ್ರಹಿಸುವಂತೆಸಗಲು, ಎಲೈ ಭೂಪತಿಯೇ ! ಕೇಳು, ಆ ದೇವಮುನಿಯೂ ಪ್ರಸನ್ನನಾಗಿ ‘ಎಲೈ ಜಯಧ್ವಜನೇ ! ಯಾವಾಗ ರಕ್ಕಸನಾದ ನೀನು ರೇವಾತೀರದ ಮಠದಲ್ಲಿ ಮುನಿಯಾಗಿದ್ದಂತೆ ನಟಿಸಿ ಧೀಮಂತನಾದ, ಧರ್ಮತನಯನಾದ ಯುಧಿಷ್ಠಿರ ದೇವನ ಮಡದಿ

ಯದಾ ರೇವಾಮಠೇ ರಾಜನ್ ಧರ್ಮಪುತ್ರಸ್ಯ ಧೀಮತಃ ।
ಭಾರ್ಯಾಪಹಾರಂ ನಯತಃ ಶಾಪಮೋಕ್ಷೋ ಭವಿಷ್ಯತಿ ॥ ೭೭ ॥

ಸೋಽಹಮರ್ಜುನ ಭೂಪಾಲ ಧರ್ಮಪುತ್ರ ಯುಧಿಷ್ಠಿರ ।
ವಿಷ್ಣೋಃ ಸಾರೂಪ್ಯಮಗಮಂ ಯಾಮಿ ವೈಕುಂಠಮದ್ಯ ವೈ ॥ ೭೮ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಗರುಡಾರೂಢೋ ಧರ್ಮಪುತ್ರಸ್ಯ ಪಶ್ಯತಃ ।
ಗತವಾನ್ ವಿಷ್ಣು ಭುವನಂ ಯತ್ರ ವಿಷ್ಣುಃ ಶ್ರಿಯಾ ಸಹ ॥ ೭೯ ॥

ಯಾದ ದ್ರೌಪದಿಯನ್ನು ಅಪಹರಿಸಿ ಉಯ್ಯುತ್ತಲಿರುವೆಯೋ, ಆಗ ನಿನಗೆ ಈ ರಕ್ಕಸಶಾಪದಿಂದ ಬಿಡುಗಡೆಯಾಗುವುದು,' ಎಂದು ಅನುಗ್ರಹಿಸಿದನು.

೭೮. ಎಲೈ ಅರ್ಜುನನೇ! ಭೂಪತಿಯಾದ ಯಮಧರ್ಮನ ತನಯನಾದ ಯುಧಿಷ್ಠಿರದೇವನೇ! ಅಂತು ದೇವಮುನಿಯ ಶಾಪಗ್ರಸ್ತನಾದ ನಾನು ಈಗ ಶ್ರೀಮಹಾವಿಷ್ಣುವಿನ ಸಾರೂಪ್ಯವನ್ನು ಹೊಂದಿಹೆನು. ಇನ್ನು ವೈಕುಂಠಕ್ಕೆ ಹೋಗುವೆನು.'

ಮಾರ್ಕಂಡೇಯ ಮುನಿಯು ಹೇಳುತ್ತಾನೆ :—

೭೯. 'ಇಂತು ಆ ಚತುರ್ಭುಜನು ಹೇಳಿ, ಧರ್ಮಪುತ್ರನಾದ ಯುಧಿಷ್ಠಿರನು ನೋಡುತ್ತಿರುವಾಗಲೇ ಗರುತ್ಮಂತನ ಹೆಗಲನ್ನೇರಿ ಯಾವ ವೈಕುಂಠ ಲೋಕದಲ್ಲಿ ಶ್ರೀಮಹಾಲಕ್ಷ್ಮೀದೇವಿಯೊಡನೆ ಮಹಾವಿಷ್ಣುವು ಮೆರೆಯುತ್ತಿದ್ದಾನೋ, ಆ ವಿಷ್ಣು ಮಂದಿರಕ್ಕೆ ಹೋದನು.

ಸಂಮಾರ್ಜನೋಪಲೇಪಾಭ್ಯಾಂ ಮಹಿಮಾ ತೇನ ವರ್ಣಿತಃ ।
ಅವಶೇನಾಪಿ ಯತ್ಕರ್ಮ ಕೃತ್ವೇಮಾಂ ಶ್ರಿಯಮಾಗತಃ ॥ ೮೦ ॥

ಭಕ್ತಿಮದ್ಭಿಃ ಪ್ರಶಾಂತೈಶ್ಚ ಕಿಂ ಪುನಃ ಸಮ್ಯಗರ್ಚನಾತ್ ।

॥ ಸೂತ ಉವಾಚ ॥

ಮಾರ್ಕಂಡೇಯವಚಃ ಶ್ರುತ್ವಾ ಪಾಂಡುವಂಶಸಮುದ್ಭವಃ ॥ ೮೧ ॥

ಸಹಸ್ರಾನೀಕಭೂಪಾಲೋ ಹರಿಪೂಜಾರತೋಽಭವತ್ ।
ತಸ್ಮಾಚ್ಛೃಣುತ ವಿಪ್ರೇಂದ್ರಾ ದೇವೋ ನಾರಾಯಣೋಽವ್ಯಯಃ ॥ ೮೨ ॥

---

೮೦. ವಿಷ್ಣುಮಂದಿರದ ಕಸಗುಡಿಸುವುದು, ಸಾರಣೆಗೈಯ್ಯುವುದು- ಇವುಗಳ ಫಲರೂಪವಾದ ಪ್ರಭಾವವು ಆ ಚತುರ್ಭುಜನಿಂದ ನಿರೂಪಿತವಾಯಿತು. ಆ ಜಯಧ್ವಜನು ಬುದ್ಧಿಪೂರ್ವಕವಾಗಿ ಆಚರಿಸದೇ, ಎಂತೋ ಈಶ್ವರೇಚ್ಛೆಗೊಳಪಟ್ಟು ಆಚರಿಸಿದ ಕರ್ಮದ ಫಲವಾಗಿ ಈ ಸಂಪತ್ತನ್ನು ಪಡೆದನು.

೮೧-೮೨. ಇನ್ನು ಭಕ್ತಿಯುಳ್ಳವರಾಗಿ ಸಮಾಧಾನವಾದ ಮನದಿಂದ ಶ್ರೀ ಮಹಾವಿಷ್ಣುವನ್ನು ವಿಧಿವತ್ತಾಗಿ ಸೇವಿಸಿದರೆ ಉಂಟಾಗುವ ಪುಣ್ಯಾತಿಶಯವನ್ನು ಹೇಳುವುದೇನು? (ವಿಶೇಷ ಫಲವುಂಟಾಗುವುದು.)' ಸೂತರು ಹೇಳುತ್ತಾರೆ :— ' ಪಾಂಡುರಾಯನ ಕುಲದಲ್ಲಿ ಜನಿಸಿದ ಸಹಸ್ರಾನೀಕರಾಯನು ಮಾರ್ಕಂಡೇಯನು ಹೇಳಿದ ಚರಿತೆಯನ್ನು ಕೇಳಿ, ಶ್ರೀಹರಿಯ ಸೇವೆಯಲ್ಲಿಯೇ ಸದಾ ತೊಡಗಿದವನಾಗಿದ್ದನು.

ಜ್ಞಾನತೋಽಜ್ಞಾನತೋ ವಾಽಪಿ ಪೂಜಕಾನಾಂ ವಿಮುಕ್ತಿದಃ ।
ಅರ್ಚಯಧ್ವಂ ಜಗನ್ನಾಥಂ ಭೂಯೋಭೂಯೋ ವದಾಮ್ಯಹಮ್ ॥ ೮೩ ॥

ಯದೀಚ್ಛತ ದ್ವಿಜಾ ತರ್ತುಂ ದುಸ್ತರಂ ಭವಸಾಗರಮ್ ।
ಯೇಽರ್ಚಯಂತಿ ಹರಿಂ ಭಕ್ತಾಃ ಪ್ರಣತಾರ್ತಿಹರಂ ಹರಿಮ್ ॥ ೮೪ ॥

ತೇ ವಂದ್ಯಾಸ್ತೇ ಪ್ರಪೂಜ್ಯಾಶ್ಚ ನಮಸ್ಯಾಶ್ಚ ವಿಶೇಷತಃ ॥ ೮೫ ॥

---

೮೩. ಎಲೈ ಬ್ರಾಹ್ಮಣಶ್ರೇಷ್ಠರೇ ! ಕೇಳಿರಿ; ಆದುದರಿಂದ ಕ್ರೀಡಾದಿಗುಣ ವಿಶಿಷ್ಟನೂ, ಅಪ್ರಾಕೃತಾನಂತಕಲ್ಯಾಣಗುಣ ಪರಿಪೂರ್ಣನೂ, ನಾಶರಹಿತನಾದುದ ರಿಂದ ನಿತ್ಯನೂ ಆದ ಶ್ರೀಮನ್ನಾರಾಯಣನು ತನ್ನನ್ನು ಬುದ್ಧಿಪೂರ್ವಕವಾಗಿ ಯಾಗಲೀ, ಅಬುದ್ಧಿಪೂರ್ವಕವಾಗಿಯಾಗಲೀ ಸೇವಿಸಿದವರಿಗೆ ಸ್ವಸ್ವರೂಪಾನಂದಾ ವಿರ್ಭಾವ ಲಕ್ಷಣವಾದ ಮೋಕ್ಷವೆಂಬ ಪುರುಷಾರ್ಥವನ್ನೀಯುವನು. ಸರ್ವಲೋಕ ಸ್ವಾಮಿಯಾದ ಶ್ರೀ ಮಹಾವಿಷ್ಣುವನ್ನು ಪೂಜಿಸಿರಿ. ಇದನ್ನು ನಾನು ಮೇಲಿಂದ ಮೇಲೆ ಒತ್ತಿಹೇಳುತ್ತೇನೆ.'

೮೪-೮೫. ಎಲೈ ದ್ವಿಜರೇ ! ಕೇಳಿರಿ; ದಾಟಲಶಕ್ಯವಾದ ಈ ಜನನಮರಣ ಪ್ರವಾಹ ರೂಪವಾದ ಸಂಸಾರಸಮುದ್ರವನ್ನು ನೀವು ಪಾರಗಾಣಬೇಕೆಂದೆಳಿಸುವು ದಾದರೆ, ಶ್ರೀ ಮಹಾವಿಷ್ಣುವನ್ನು ಪೂಜಿಸಿರಿ. ತನಗೆ ನಮಸ್ಕಾರ ಮಾಡಿದವರ ಪೀಡೆಯನ್ನು ಹೋಗಲಾಡಿಸುವ, ಪಾಪನಾಶಕನಾದ ಶ್ರೀ ಹರಿಯನ್ನು ಯಾವ ಭಕ್ತರು ಪೂಜಿಸುತ್ತಾರೆಯೋ, ಅವರನ್ನು ಕೊಂಡಾಡಬೇಕು; ವಿಶೇಷವಾಗಿ ಸೇವಿಸಬೇಕು ಮತ್ತು ಹೆಚ್ಚಾಗಿ ಅವರಿಗೆರಗಬೇಕು;' ಎಂದು ಸೂತರು ಭಾರದ್ವಾಜಾದಿ ಬ್ರಾಹ್ಮಣರಿಗೆ ಹೇಳಿದರು.

ಪರ್ವತಕಾರಾದಿ ನಿರೂಪಣ; ಮೂವತ್ತುಮೂರನೆಯ ಅಧ್ಯಾಯವು

ಇತಿ ಶ್ರೀ ನರಸಿಂಹಪುರಾಣೇ ಸಹಸ್ರಾನೀಕಚರಿತೇ

ಮಾರ್ಕಂಡೇಯೋಪದಿಷ್ಟ ಸಂಮಾರ್ಜನೋಪಫಲಂ

ನಾಮ ತ್ರಯಸ್ತ್ರಿಂಶೋಽಧ್ಯಾಯಃ

ಇಂತು ಶ್ರೀ ನರಸಿಂಹಪುರಾಣದಲ್ಲಿ ಸಹಸ್ರಾನೀಕಚರಿತೆಯಲ್ಲಿ ' ಮಾರ್ಕಂಡೇಯ ಮುನಿಯು ಉಪದೇಶಿಸಿದ ಸಂಮಾರ್ಜನೆಯ ಉಪಫಲವು ' ಎಂಬ ಮೂವತ್ತುಮೂರನೆಯ ಅಧ್ಯಾಯವು ಮುಗಿದುದು.

ಮೂವತ್ತುಮೂರನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಸೂತರು ಭಾರದ್ವಾಜನಿಗೆ ಶ್ರೀ ಮಹಾವಿಷ್ಣುವಿನ ಭಕ್ತನಾದ ಸಹಸ್ರಾನೀಕನ ಚರಿತೆಯನ್ನು ಹೇಳುತ್ತಾ, "ಸಹಸ್ರಾನೀಕರಾಯನ ಮನೆಗೆ ಬಂದ ಭೃಗು ಮುನಿಗಳನ್ನು ಆ ರಾಯನು ಶ್ರೀ ಮಹಾವಿಷ್ಣುವಿನ ಪೂಜಾದಿಕ್ರಮವನ್ನೂ, ಪ್ರತಿಷ್ಠಾವಿಧಿಯನ್ನೂ, ಅದರ ಫಲವನ್ನೂ ಹೇಳಬೇಕೆಂದು ಕೇಳಲು, ಆಗ ಭೃಗುಮುನಿಯು ಮಾರ್ಕಂಡೇಯ ಮುನಿಗೆ ಅವೆಲ್ಲವನ್ನೂ ಸಹಸ್ರಾನೀಕನಿಗೆ ಹೇಳುವಂತೆ ಹೇಳಿ ಹೊರಟುಹೋಗಲು, ಮಾರ್ಕಂಡೇಯಮುನಿಯು ಹಿಂದೆ ನಡೆದ, ಚಂದ್ರವಂಶದಲ್ಲಿ ಜನಿಸಿದ ಜಯಧ್ವಜನೆಂಬ ರಾಯನು ನಾರದಶಾಪಗ್ರಸ್ತನಾಗಿ, ಯುಧಿಷ್ಠಿರಾದಿಗಳ ದರ್ಶನವನ್ನು ಮಾಡಿ, ಶಾಪದಿಂದಮೋಕ್ಷವನ್ನೈದಿದವನು ಆ ಪಾಂಡವರಿಗೆ ತನ್ನ ಪೂರ್ವವೃತ್ತಾಂತವನ್ನು ಹೇಳುವಾಗ, ಶ್ರೀ ಹರಿಮಂದಿರದ ಸಂಮಾರ್ಜನೋಪಲೇಪನ ಫಲರೂಪವಾಗಿ ತಾನು ಶ್ರೀ ಮಹಾವಿಷ್ಣುವಿನ ಸಾರೂಪ್ಯವನ್ನು ಹೊಂದಿ, ವಿಷ್ಣುಲೋಕವಾದ ವೈಕುಂಠಕ್ಕೆ ಹೋಗುವುದನ್ನು ಅರುಹಿದುದನ್ನೇ ತಿಳಿಸಿದೆನು" ಎಂದು ಹೇಳಿದರು.

ಇಂತು ಮೂವತ್ತುಮೂರನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ವರ್ಣನಮ್

ಚತುಸ್ತ್ರಿಂಶೋಽಧ್ಯಾಯಃ

ಸಹಸ್ರಾನೀಕಚರಿತೇ ಶ್ರೀ ವಿಷ್ಣೋಃ ಪೂಜಾವಿಧಿಃ

॥ ಶ್ರೀ ಸಹಸ್ರಾನೀಕ ಉವಾಚ ॥

ಪುನರೇವ ದ್ವಿಜಶ್ರೇಷ್ಠ ಮಾರ್ಕಂಡೇಯ ಮಹಾಮತೇ ।
ನಿರ್ಮಾಲ್ಯಾಪನಯಾದ್ವಿಷ್ಣೋರ್ಯತ್ಪುಣ್ಯಂ ತದ್ವದಸ್ವ ಮೇ ॥ ೧ ॥

ಮೂವತ್ತುನಾಲ್ಕನೆಯ ಅಧ್ಯಾಯವು

ಸಹಸ್ರಾನೀಕಚರಿತದಲ್ಲಿ ಶ್ರೀ ವಿಷ್ಣುವಿನ ಪೂಜಾವಿಧಿಯು

೧. ಸಹಸ್ರಾನೀಕರಾಜನು ಮಾರ್ಕಂಡೇಯ ಮುನಿಯನ್ನು ಕುರಿತು ಇಂತು ಕೇಳುತ್ತಾನೆ :— " ಎಲೈ ಮಹಾಮತಿಯಾದ ಮಾರ್ಕಂಡೇಯ ದ್ವಿಜಶ್ರೇಷ್ಠನೇ ! ಶ್ರೀ ಮಹಾವಿಷ್ಣುವಿನ ನಿರ್ಮಾಲ್ಯವನ್ನು ತೆಗೆಯುವುದರಿಂದ ಯಾವ ಪುಣ್ಯವುಂಟಾಗುವುದೋ, ಅದನ್ನು ದಯಮಾಡಿ ನನಗೆ ಹೇಳು ; ಎಂದು ಸಹಸ್ರಾನೀಕನು ಮಾರ್ಕಂಡೇಯ ಮುನಿಯನ್ನು ಕೇಳಿದನು.

॥ ಮಾರ್ಕಂಡೇಯ ಉವಾಚ ॥

ನಿರ್ಮಾಲ್ಯಮಪನೀಯಾಥ ತೋಯೇನ ಸ್ನಾಪ್ಯ ಕೇಶವಮ್ ।
ನರಸಿಂಹಾಕೃತಿಂ ರಾಜನ್ ಸರ್ವಪಾಪೈಃ ಪ್ರಮುಚ್ಯತೇ ॥ ೨ ॥

ಸರ್ವತೀರ್ಥಫಲಂ ಪ್ರಾಪ್ಯ ಯಾನಾರೂಢೋ ದಿವಂ ವ್ರಜೇತ್ ।
ಶ್ರೀವಿಷ್ಣೋಃ ಸದನಂ ಪ್ರಾಪ್ಯ ಮೋದತೇ ಕಾಲಮಕ್ಷಯಮ್ ॥ ೩ ॥

ಆಗಚ್ಛ ನರಸಿಂಹೇತಿ ಆವಾಹ್ಯಾಕ್ಷತಪುಷ್ಪಕೈಃ ।
ಏತಾವತಾಪಿ ರಾಜೇಂದ್ರ ಸರ್ವಪಾಪೈಃ ಪ್ರಮುಚ್ಯತೇ ॥ ೪ ॥

ದತ್ವಾಽಽಸನಮಥಾರ್ಘ್ಯಂ ಚ ಪಾದ್ಯಮಾಚಮನೀಯಕಮ್ ।
ದೇವದೇವಸ್ಯ ವಿಧಿನಾ ಸರ್ವಪಾಪೈಃ ಪ್ರಮುಚ್ಯತೇ ॥ ೫ ॥

---

೨. ಮಾರ್ಕಂಡೇಯಮುನಿಯು ಹೇಳುತ್ತಾನೆ:— ಎಲೈ ಸಹಸ್ರಾನೀಕ ರಾಯನೇ! ಕೇಳು; ಬ್ರಹ್ಮರುದ್ರಪ್ರವರ್ತಕನಾದ ಶ್ರೀ ನರಸಿಂಹಮೂರ್ತಿಯ ನಿರ್ಮಾಲ್ಯವನ್ನು ವಿಸರ್ಜಿಸಿ, ಉದಕದಿಂದ ಅಭಿಷೇಕಮಾಡಿದವನು ಸಕಲ ಪಾಪಗಳಿಂದ ಮುಕ್ತನಾಗುತ್ತಾನೆ.

೩. ಆತನು ಸಕಲ ತೀರ್ಥಸ್ನಾನದ ಫಲವನ್ನು ಹೊಂದಿ, ವಿಮಾನವನ್ನೇರಿ ಸ್ವರ್ಗವನ್ನು ಸೇರುವನು; ಅಲ್ಲಿಂದ ಶ್ರೀವಿಷ್ಣುವಿನ ಮಂದಿರವನ್ನು ಹೊಂದಿ, ಅನಂತ ಕಾಲದವರಿವಿಗೂ ಆನಂದವನ್ನು ಅನುಭವಿಸುತ್ತಾನೆ.

೪. ಎಲೈ ರಾಜಶ್ರೇಷ್ಠನೇ! ಕೇಳು; ಪ್ರತಿಮೆಯಲ್ಲಿ 'ಎಲೈ ನರಸಿಂಹನೇ! ಇಲ್ಲಿ ಸನ್ನಿಧಾನವುಳ್ಳವನಾಗು;' ಎಂದು ಅಕ್ಷತೆ, ಪುಷ್ಪ-ಇವುಗಳಿಂದ ಆವಾಹನ ಮಾಡುವುದು ಮಾತ್ರದಿಂದ ಪಾಪಗಳೆಲ್ಲದರಿಂದಲೂ ಬಿಡುಗಡೆಯನ್ನೈಯ್ದುವನು.

೫. ಸಕಲ ದೇವಶ್ರೇಷ್ಠನಾದ ಶ್ರೀನರಸಿಂಹನಿಗೆ ಶಾಸ್ತ್ರೋಕ್ತಕ್ರಮ ಮತ್ತು ನಿಯಮ–ಇವುಗಳಿಂದ ಪೀಠ, ಅರ್ಘ್ಯ, ಪಾದೋದಕ, ಆಚಮನೀಯವಾದ ಉದಕ, ಇವನ್ನು ಸಮರ್ಪಿಸಿ, ಸಕಲ ಪಾಪಗಳಿಂದ ಮುಕ್ತನಾಗುತ್ತಾನೆ.

ಸ್ನಾಪ್ಯ ತೋಯೇನ ಪಯಸಾ ನಾರಸಿಂಹಂ ನರಾಧಿಪ ।
ಸರ್ವಪಾಪ ವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥ ೬ ॥

ಸ್ನಾಪ್ಯ ದಧ್ನಾ ಸಕೃದ್ಯಸ್ತು ನಿರ್ಮಲಂ ಪ್ರಿಯದರ್ಶನಃ ।
ವಿಷ್ಣುಲೋಕಮವಾಪ್ನೋತಿ ಪೂಜ್ಯಮಾನಃ ಸುರೋತ್ತಮೈಃ ॥ ೭ ॥

ಯಃ ಕರೋತಿ ಹರೇರರ್ಚಾಂ ಮಧುನಾ ಸ್ನಾಪಯನ್ನರಃ ।
ಅಗ್ನಿಲೋಕೇ ಸ ಮೋದಿತ್ವಾ ಪುನರ್ವಿಷ್ಣುಪುರೇ ವಸೇತ್ ॥ ೮ ॥

ಘೃತೇನ ಸ್ನಾಪನಂ ಯಸ್ತು ಸ್ನಾನಕಾಲೇ ವಿಶೇಷತಃ ।
ನರಸಿಂಹಾಕೃತೇಃ ಕುರ್ಯಾಚ್ಛಂಖಭೇರೀ ನಿನಾದಿತಮ್ ॥ ೯ ॥

---

೬. ಎಲೈ ನರಾಧಿಪನೇ ! ಕೇಳು ; ಯಾವನು ಶ್ರೀನರಸಿಂಹ ಮೂರ್ತಿಯನ್ನು ಶುದ್ಧೋದಕದಿಂದಾಗಲಿ, ಕ್ಷೀರದಿಂದಾಗಲಿ ಸ್ನಾನ ಮಾಡಿಸುತ್ತಾನೆಯೋ, ಅವನು ಎಲ್ಲಾ ಪಾಪಗಳಿಂದಲೂ ಮುಕ್ತನಾಗಿ ಶ್ರೀವಿಷ್ಣುಲೋಕವಾದ, ಶ್ವೇತ ದ್ವೀಪ, ಅನಂತಾಸನ ಮತ್ತು ವೈಕುಂಠ-ಇವುಗಳಲ್ಲಿ ಗೌರವವನ್ನೈಯ್ದುವನು.

೭. ಯಾವಾತನು ಶುದ್ಧನೂ, ಹಿತವಾದ ನೋಟವುಳ್ಳವನೂ ಆಗಿ, ಶ್ರೀ ನರಹರಿಯನ್ನು ಒಮ್ಮೆ ದಧಿಯಿಂದ ಅಭಿಷೇಕಿಸುವುದರಿಂದ ದೇವೋತ್ತಮರಿಂದ ಸೇವೆಗೊಳ್ಳುತ್ತಾ, ಶ್ರೀಮಹಾವಿಷ್ಣುವಿನ ಲೋಕವನ್ನೈಯ್ದುವನು.

೮. ಯಾವ ಮಾನವನು ಜೇನುತುಪ್ಪದಿಂದ ಅಭಿಷೇಕಪೂರ್ವಕ ಶ್ರೀ ನರಹರಿಯ ಪೂಜೆಯನ್ನೆಸಗುವನೋ, ಅವನು ಅಗ್ನಿಲೋಕದಲ್ಲಿ ಸುಖಗೊಂಡು, ಮತ್ತೂ ಶ್ರೀ ಮಹಾವಿಷ್ಣುವಿನ ಲೋಕದಲ್ಲಿ ವಾಸಿಸುವನು.

೯-೧೦. ಯಾವ ನರನು ಶ್ರೀ ನರಹರಿಯ ಮೂರ್ತಿಗೆ ಘೃತದಿಂದ ಸ್ನಾನಗೆಯ್ಯುತ್ತಾ, ಸಂಕು, ಭೇರಿ ಮುಂತಾದ ವಾದ್ಯಗಳನ್ನು ಸ್ನಾನಕಾಲದಲ್ಲಿ ಮೊಳಗಿಸುವನೋ, ಅವನು ಹಾವು ತನ್ನ ಹಳತಾದ ಪೊರೆಯೆಂಬ ಚರ್ಮವನ್ನು

ಪಾಪಕಂಚುಕಮುನ್ಮುಚ್ಯ ಯಥಾ ಜೀರ್ಣಾಮಹಿಸ್ತ್ವಚಮ್ ।
ದಿವ್ಯಂ ವಿಮಾನಮಾಸ್ಥಾಯ ವಿಷ್ಣುಲೋಕೇ ಮಹೀಯತೇ ॥ ೧೦ ॥

ಪಞ್ಚಗವ್ಯೇನ ದೇವೇಶಂ ಯಃ ಸ್ನಾಪಯತಿ ಭಕ್ತಿತಃ ।
ಮಂತ್ರಪೂರ್ವಂ ಮಹಾರಾಜ ತಸ್ಯ ಪುಣ್ಯಮನಂತಕಮ್ ॥ ೧೧ ॥

ಯಶ್ಚ ಗೋಧೂಮಕೈಶ್ಚೂರ್ಣೈರುದ್ವರ್ತ್ಯೋಷ್ಣೇನ ವಾರಿಣಾ ।
ಪ್ರಕ್ಷಾಲ್ಯ ದೇವದೇವೇಶಂ ವಾರುಣಂ ಲೋಕಮಾಪ್ನುಯಾತ್ ॥ ೧೨ ॥

ಪಾದಪೀಠಂ ತು ಯೋ ಭಕ್ತ್ಯಾ ಬಿಲ್ವಪತ್ರೈರ್ನಿಘರ್ಷಿತಮ್ ।
ಉಷ್ಣಾಂಬುನಾ ಚ ಪ್ರಕ್ಷಾಲ್ಯ ಸರ್ವಪಾಪೈಃ ಪ್ರಮುಚ್ಯತೇ ॥ ೧೩ ॥

ತ್ಯಜಿಸಿ ಸುಖಿಸುವಂತೆ, ತನ್ನ ಪಾಪವೆಂಬ ಕವಚವನ್ನು ತೊರೆದು, ಉತ್ತಮವಾದ ವಿಮಾನದೊಳಗೆ ಕುಳಿತು, ಶ್ರೀ ವಿಷ್ಣುಲೋಕಕ್ಕೆ ಹೋಗಿ, ಅಲ್ಲಿ ಗೌರವವನ್ನು ಹೊಂದುವನು.

ಯಾವ ಮನುಷ್ಯನು ಶ್ರೀ ನರಹರಿಯ ಮೂರ್ತಿಗೆ ಭಕ್ತಿಯಿಂದ ಮಂತ್ರೋಚ್ಚಾರಣ ಪೂರ್ವಕವಾಗಿ ಗೋವಿನಿಂದ ಲಭ್ಯವಾಗುವ ಹಾಲೇ ಮುಂತಾದ ಐದು ವಸ್ತುಗಳಿಂದ ಸ್ನಾನಮಾಡಿಸುತ್ತಾನೆಯೋ, ಅವನಿಗೆ ಅನಂತವಾದ ಪುಣ್ಯಪ್ರಾಪ್ತಿಯಾಗುವುದು.

೧೨. ಯಾವ ಮನುಷ್ಯನು ಶ್ರೀ ನರಹರಿಯ ಮೂರ್ತಿಗೆ ಗೋಧುವೆಯ ಹಿಟ್ಟನ್ನು ಬಳಿದು, ಬಿಸುನೀರಿನಿಂದ ತೊಳೆಯುತ್ತಾನೆಯೋ, ಅವನು ವರುಣ ಲೋಕವನ್ನೈಯ್ದುವನು.

೧೩. ಯಾವಾತನು ಶ್ರೀ ನರಸಿಂಹಮೂರ್ತಿಯ ಪೀಠವನ್ನು ಬಿಲ್ವಪತ್ರೆಗಳನ್ನು ತಿಕ್ಕಿ, ಭಕ್ತಿಯಿಂದ ಬಿಸುನೀರಿಂದ ತೊಳೆಯುತ್ತಾನೆಯೋ, ಅವನು ಸಕಲ ಪಾಪಗಳಿಂದ ಮುಕ್ತನಾಗುತ್ತಾನೆ.

ಕುಶಪುಷ್ಪೋದಕೈಃ ಸ್ನಾತ್ವಾ ಬ್ರಹ್ಮಲೋಕಮವಾಪ್ನುಯಾತ್ ।
ರತ್ನೋದಕೇನ ಸಾವಿತ್ರಂ ಕೌಬೇರಂ ಹೇಮವಾರಿಣಾ ।
ನಾರಸಿಂಹಂ ತು ಸಂಸ್ನಾಪ್ಯ ಕರ್ಪೂರಾಗುರು ವಾರಿಣಾ ॥ ೧೪ ॥

ಇಂದ್ರಲೋಕೇ ಸಮೋದಿತ್ವಾ ಪಶ್ಚಾದ್ವಿಷ್ಣುಪುರೇ ವಸೇತ್ ।
ಪುಷ್ಪೋದಕೇನ ಗೋವಿಂದಂ ಸ್ನಾಪ್ಯ ಭಕ್ತ್ಯಾ ನರೋತ್ತಮಃ ॥ ೧೫ ॥

ಸಾವಿತ್ರಂ ಲೋಕಮಾಸಾದ್ಯ ವಿಷ್ಣುಲೋಕೇ ಮಹೀಯತೇ ।
ವಸ್ತ್ರಾಭ್ಯಾಮರ್ಚನಂ ಭಕ್ತ್ಯಾ ಪರಿಧಾಯ ಹರಿಂ ಹರೇಃ ॥ ೧೬ ॥

ಸೋಮಲೋಕೇ ರಮಿತ್ವಾ ಚ ವಿಷ್ಣುಲೋಕೇ ಮಹೀಯತೇ ।
ಕುಂಕುಮಾಗುರು ಶ್ರೀಖಂಡ ಕರ್ದಮೈರಚ್ಯುತಾಕೃತಿಮ್ ॥ ೧೭ ॥

೧೪-೨೦. ದರ್ಭೆ ಮತ್ತು ಕುಂಕುಮ ಕೇಸರ ಇವುಗಳಿಂದ ಕೂಡಿದ ನೀರಿನಿಂದ ಯಾವಾತನು ಭಗವಂತನಿಗೆ ಅಭಿಷೇಕವನ್ನೆಸಗುವನೋ, ಅವನು ಚತುರ್ಮುಖನ ಸತ್ಯಲೋಕಕ್ಕೆ ಹೋಗುವನು. ಶ್ರೀ ನರಸಿಂಹಮೂರ್ತಿಯನ್ನು ಪಚ್ಚಕರ್ಪೂರ, ಅಗಿಲು– ಇವುಗಳಿಂದ ಮಿಶ್ರವಾದ ಸ್ನಾನೋದಕದಿಂದ ಅಭಿಷೇಕವನ್ನು ಮಾಡಿ, ಆ ನರನು ಇಂದ್ರಲೋಕದ ಸ್ವರ್ಗದಲ್ಲಿ ಸೊಗಗೊಂಡು ಅನಂತರದಲ್ಲಿ ಶ್ರೀ ವಿಷ್ಣುಪುರದಲ್ಲಿ ವಾಸಮಾಡುತ್ತಾನೆ. ಗೋವಿಂದನನ್ನು ಪುಷ್ಪೋದಕದಿಂದ ಭಕ್ತಿಪೂರ್ವಕವಾಗಿ ಅಭಿಷೇಕಮಾಡಿ, ಆ ಮಾನವ ಶ್ರೇಷ್ಠನು ಸೂರ್ಯಲೋಕವನ್ನೈದಿ, ಅನಂತರದಲ್ಲಿ ಶ್ರೀ ವಿಷ್ಣುಲೋಕದಲ್ಲಿ ಪೂಜಿತನಾಗುತ್ತಾನೆ. ಶ್ರೀ ಹರಿಯ ಮೂರ್ತಿಯನ್ನು ದಿವ್ಯವಸ್ತ್ರಗಳಿಂದ ಭಕ್ತಿಯಿಂದ ಪೂಜಿಸಿ, ಚಂದ್ರಲೋಕದಲ್ಲಿ ವಿಲಾಸಗೊಂಡು, ಅವನು ಶ್ರೀ ವಿಷ್ಣುಲೋಕದಲ್ಲಿ ಮಾನಿತನಾಗುತ್ತಾನೆ. ಎಲೈ ರಾಜಶ್ರೇಷ್ಠನೇ ! ಕೇಳು ; ಕುಂಕುಮಕೇಸರ, ಅಗುರು, ಶ್ರೀಗಂಧ,

ಆಲಿಪ್ಯ ಭಕ್ತ್ಯಾ ರಾಜೇಂದ್ರ ಕಲ್ಪಕೋಟಿವಸೇದ್ದಿವಿ ।
ಮಲ್ಲಿಕಾಮಾಲತೀಜಾತಿ ಕೇತಕ್ಯಶೋಕಚಂಪಕೈಃ ॥ ೧೮ ॥

ಪುನ್ನಾಗನಾಗ ಬಕುಲೈಃ ಪದ್ಮೈರುತ್ಪಲಜಾತಿಭಿಃ ।
ತುಲಸೀಕರವೀರೈಶ್ಚ ಪಾಲಾಶೈಃ ಸಾನುಕೊಂಬಕೈಃ ॥ ೧೯ ॥

ಏತೈರನ್ಯೈಶ್ಚ ಕುಸುಮೈಃ ಪ್ರಶಸ್ತೈರಚ್ಯುತಂ ನರಃ ।
ಅರ್ಚಯೇದ್ದಶಸುವರ್ಣಸ್ಯ ಪ್ರತ್ಯೇಕಂ ಫಲಮಾಪ್ನುಯಾತ್ ॥ ೨೦ ॥

ಮಾಲಾಂ ಕೃತ್ವಾ ಯಥಾಲಾಭಂ ಏತೇಷಾಂ ವಿಷ್ಣುಮರ್ಚಯೇತ್ ।
ಕಲ್ಪ ಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ ॥ ೨೧ ॥

ಇವುಗಳ ಗಂಧದ ಕೆಸರಿನಿಂದ ಅಚ್ಯುತನಾದ ಶ್ರೀ ನರಹರಿಯ ಮೂರ್ತಿಯನ್ನು ಲೇಪಿಸಿ ಭಕ್ತಿಯಿಂದ ಸೇವಿಸಿದವನು ಕಲ್ಪಕೋಟಿಗಳ ಕಾಲ ಸ್ವರ್ಗದಲ್ಲಿ ವಾಸಿಸುವನು. ಯಾವ ಮಾನವನು ಮಲ್ಲಿಗೆ, ಜಾಜಿ, ಕೇದಗೆ, ಅಸುಗೆ, ಸಂಪಿಗೆ, ಸುರಹೊನ್ನೆ, ನಾಗಕೇಸರ, ಕಮಲ, ಸುರಗಿ, ನೈದಿಲೆಯ ಜಾತಿಯವು, ತೊಲಚಿ, ಕಣಿಗಲು, ಮುತ್ತುಗ, ಬೆಟ್ಟದ ತಪ್ಪಲಿನ ಕಲ್ಲುಹೂವು— ಇವುಗಳು ಮತ್ತು ಇತರ ಜಾತಿಯವು ಆದ ಉತ್ತಮವಾದ ಹೂವುಗಳಿಂದಲೂ, ಹತ್ತು ಚಿನ್ನದಹೂಗಳಿಂದಲೂ ಶ್ರೀ ನರಹರಿಯನ್ನು ಪೂಜಿಸುವನೋ, ಅವನು ಬೇರೆ ಬೇರೆ ಸತ್ಫಲಗಳನ್ನು ಪಡೆಯುತ್ತಾನೆ.

೨೧. ಯಾವ ಮಾನವನು ಈ ಕುಸುಮಗಳ ಮಾಲೆಯನ್ನು ಮಾಡಿ ದೊರೆತದ್ದರಿಂದ ಶ್ರೀ ಮಹಾ ವಿಷ್ಣುವನ್ನು ಪೂಜಿಸುವನೋ, ಅವನು ಅನೇಕ ಸಾಸಿರ ಕೋಟಿಗಳಾದ ಕಲ್ಪಗಳವರೆಗೂ, ಅನೇಕ ನೂರು ಕೋಟಿಗಳಾದ ಕಲ್ಪಗಳವರೆಗೂ ಉತ್ತಮವಾದ ವಿಮಾನವನ್ನು ಹೊಂದಿ, ವಿಷ್ಣುಲೋಕದಲ್ಲಿ ಸುಖದಿಂದಿರುತ್ತಾನೆ.

ದಿವ್ಯಂ ವಿಮಾನಮಾಸ್ಥಾಯ ವಿಷ್ಣುಲೋಕೇ ಸ ಮೋದತೇ ।
ನರಸಿಂಹಂ ತು ಯೋ ಭಕ್ತ್ಯಾ ಬಿಲ್ವಪತ್ರೈರಖಂಡಿತೈಃ ॥ ೨೨ ॥

ನಿಶ್ಛಿದ್ರೈಃ ಪೂಜಯೇದ್ಯಸ್ತು ತುಲಸೀಭಿಃ ಸಮನ್ವಿತಮ್ ।
ಸರ್ವಪಾಪವಿನಿರ್ಮುಕ್ತಃ ಸರ್ವಭೂಷಣಭೂಷಿತಃ ॥ ೨೩ ॥

ಕಾಂಚನೇನ ವಿಮಾನೇನ ವಿಷ್ಣುಲೋಕೇ ಮಹೀಯತೇ ।
ಮಹಿಷಾಖ್ಯಂ ಗುಗ್ಗುಲಂ ಯ ಆಜ್ಯಯುಕ್ತಂ ಸಶರ್ಕರಮ್ ॥ ೨೪ ॥

ಧೂಪಂ ದದಾತಿ ರಾಜೇಂದ್ರ ನರಸಿಂಹಸ್ಯ ಭಕ್ತಿಮಾನ್ ।
ಧೂಪಿತೈಃ ಸರ್ವದಿಗ್ಭ್ಯಸ್ತು ಸರ್ವಪಾಪ ವಿವರ್ಜಿತಃ ॥ ೨೫ ॥

ಅಪ್ಸರೋಗಣಸಂಕೀರ್ಣ ವಿಮಾನೇನ ವಿರಾಜಿತೇ ।
ವಾಯುಲೋಕೇ ಸ ಮೋದಿತ್ವಾ ಪಶ್ಚಾದ್ವಿಷ್ಣುಪುರಂ ವ್ರಜೇತ್ ॥ ೨೬ ॥

೨೨-೨೬. ಯಾವ ನರನು ಶ್ರೀ ನರಸಿಂಹಮೂರ್ತಿಯನ್ನು ಭಕ್ತಿಯಿಂದ ಛಿದ್ರಶೂನ್ಯವಾದ ತುಳಸೀಪತ್ರದೊಡಗೂಡಿದ ಹರಿಯದ ಬಿಲ್ವಪತ್ರಗಳಿಂದ ಪೂಜಿಸುತ್ತಾನೆಯೋ, ಅವನು ಸಕಲ ಪಾಪಗಳಿಂದ ಮುಕ್ತನಾಗಿ, ಸಕಲವಾದ ಒಡವೆಗಳಿಂದ ಅಲಂಕೃತನಾಗಿ, ಚಿನ್ನದ ವಿಮಾನದಿಂದ ವಿಷ್ಣುಲೋಕದಲ್ಲಿ ಅಗ್ಗಳನಾಗಿರುತ್ತಾನೆ. ಯಾವ ಭಕ್ತನಾದ ನರನು ಶ್ರೀ ನರಹರಿಯ ಮೂರ್ತಿಗೆ ಮಹಿಷವೆಂಬ ಗುಗ್ಗುಲ, ಘೃತ, ಶರ್ಕರಾಯುಕ್ತಗಳಾದ ಧೂಪ-ಇವುಗಳನ್ನು ಭಕ್ತಿಯುಕ್ತನಾಗಿ ಅರ್ಪಿಸುತ್ತಾನೆಯೋ, ಅವನು ಎಲ್ಲಾ ಕಡೆಗಳಲ್ಲಿಯೂ ಸುವಾಸನೆಯ ಧೂಪಗಳಿಂದ ಕೂಡಿದ, ಯಾವ ತೆರನಾದ ಬೇಗೆಯೂ ಇಲ್ಲದ, ಅಪ್ಸರಸ್ತ್ರೀಯರಿಂದ ತುಂಬಿದ ವಿಮಾನದಿಂದ ಪ್ರಕಾಶಿಸುತ್ತಾನೆ. ಅವನು ವಾಯುಲೋಕದಲ್ಲಿ ಕೆಲಕಾಲ ಸೊಗದಿಂದಿದ್ದು, ಅನಂತರದಲ್ಲಿ ವಿಷ್ಣುಪುರವನ್ನೈದುವನು.

ಘೃತೇನ ವಾಽಥ ತೈಲೇನ ದೀಪಂ ಪ್ರಜ್ವಾಲಯೇನ್ನರಃ ।
ವಿಷ್ಣವೇ ವಿಧಿವದ್ಭಕ್ತ್ಯಾ ತಸ್ಯ ಪುಣ್ಯಫಲಂ ಶೃಣು ॥ ೨೭ ॥

ವಿಹಾಯ ಪಾಪಕಲಿಲಂ ಸಹಸ್ರಾದಿತ್ಯಸಪ್ರಭಃ ।
ಜ್ಯೋತಿಷ್ಮತಾ ವಿಮಾನೇನ ವಿಷ್ಣುಲೋಕಂ ಸ ಗಚ್ಛತಿ ॥ ೨೮ ॥

ಹವಿಃ ಶಾಲ್ಯೋದನಂ ವಿದ್ವಾನಾಜ್ಯಯುಕ್ತಂ ಸಶರ್ಕರಮ್ ।
ನಿವೇದ್ಯ ನರಸಿಂಹಾಯ ಯಾವಕಂ ಪಾಯಸಂ ತಥಾ ॥ ೨೯ ॥

ಸಮಾಸ್ತಂಡುಲಸಂಖ್ಯಾಯಾ ಯಾವತೀಸ್ತಾವತೀರ್ನೃಪ ।
ವಿಷ್ಣುಲೋಕೇ ಮಹಾಭೋಗಾನ್ ಭುಂಜನ್ನಾಸ್ತೇ ಸ ವೈಷ್ಣವಃ ॥ ೩೦ ॥

---

೨೭. ಯಾವ ನರನು ಶ್ರೀ ಮಹಾವಿಷ್ಣುವಿನ ಮೂರ್ತಿಗೆ ತುಪ್ಪದಿಂದಾಗಲಿ, ಎಣ್ಣೆಯಿಂದಾಗಲಿ, ಭಕ್ತಿಯಿಂದ ದೀಪವನ್ನು ಹತ್ತಿಸಿ ಬೆಳಗುತ್ತಾನೆಯೋ, ಅವನಿಗೆ ದೊರಕುವ ಪುಣ್ಯಫಲವನ್ನು ಎಲೈ ಸಹಸ್ರಾನೀಕರಾಯನೇ ! ಕೇಳು.

೨೮. ಅವನು ಪಾಪರಾಶಿಯನ್ನು ಕಳೆದುಕೊಂಡು, ಸಾವಿರ ಸೂರ್ಯರಿಗೆ ಸಮಾನವಾದ ಪ್ರಕಾಶವುಳ್ಳವನಾಗಿ, ಅತ್ಯಂತ ಪ್ರಕಾಶಮಾನವಾದ ವಿಮಾನದಿಂದ ಶ್ರೀ ವಿಷ್ಣುವಿನ ಲೋಕಕ್ಕೆ ಹೋಗುವನು.

೨೯-೩೦. ಬತ್ತದ ಅನ್ನವನ್ನೂ, ಜವೆಯೆಂಬ ತೃಣಧಾನ್ಯದಿಂದ ಮಾಡಿದ ಪಾಯಸವನ್ನೂ, ಸಕ್ಕರೆ ಮತ್ತು ತುಪ್ಪ ಇವುಗಳೊಡನೆ ಯಾವ ಅಭಿಜ್ಞನು ಶ್ರೀ ನರಸಿಂಹದೇವರಿಗೆ ಅರ್ಪಿಸುತ್ತಾನೆಯೋ, ಆ ವಿಷ್ಣುಭಕ್ತನು ಅಕ್ಕಿಯ ಲೆಕ್ಕವೆನಿತೋ ಅನಿತು ಸಂವತ್ಸರಗಳವರಿವಿಗೂ ಶ್ರೀ ವಿಷ್ಣುಲೋಕದಲ್ಲಿ ವಿಶೇಷವಾದ ಸುಖಸಾಧನಗಳನ್ನು ಅನುಭವಿಸುತ್ತಿರುತ್ತಾನೆ.

'ಪುಷ್ಪಾಕ್ಷತೈಸ್ತು ಮಂತ್ರೇಣ ಮಂದಿರೇಣ ಸಮಂತತಃ ।
ಪುಷ್ಪಾಕ್ಷತೈಸ್ತು ಮಂತ್ರೇಣ ಬಲಿಂ ಯಸ್ತು ಪ್ರಯಚ್ಛತಿ ।
ಬ್ರಹ್ಮಾದ್ಯೈಃ ಸಹ ದೇವೈಶ್ಚ ಲೋಕಪಾಲಾ ವಿನಾಯಕಾಃ ।'
ಬಲಿನಾ ವೈಷ್ಣವೇನಾಥ ತೃಪ್ತಾಃ ಸಂತೋ ದಿವೌಕಸಃ ।
ಶಾಂತಿಂ ತಸ್ಯ ಪ್ರಯಚ್ಛಂತಿ ಶ್ರಿಯಮಾರೋಗ್ಯಮೇವ ಚ ॥ ೩೧ ॥

ಪ್ರದಕ್ಷಿಣೇನ ಚೈಕೇನ ದೇವದೇವಸ್ಯ ಭಕ್ತಿತಃ ।
ಕೃತೇನ ಯತ್ಫಲಂ ನೄಣಾಂ ತಚ್ಛೃಣುಷ್ವ ನೃಪಾತ್ಮಜ ॥ ೩೨ ॥

ಪೃಥ್ವೀ ಪ್ರದಕ್ಷಿಣಫಲಂ ಪ್ರಾಪ್ಯ ವಿಷ್ಣುಪುರೇ ವಸೇತ್ ।
ನಮಸ್ಕಾರಃ ಕೃತೋ ಯೇನ ಭಕ್ತ್ಯಾ ವೈ ಮಾಧವಸ್ಯ ಚ ॥ ೩೩ ॥

---

೩೧. ಶ್ರೀ ನರಸಿಂಹದೇವಾಲಯದ ಸುತ್ತಲೂ ಹೂವು, ಅಕ್ಷತೆ ಇವುಗಳಿಂದಲೂ, ಮಂತ್ರೋಚ್ಚಾರಣೆಯಿಂದಲೂ, ಹೂವು ಅಕ್ಷತೆ ಮತ್ತು ಮಂತ್ರೋಚ್ಚಾರಣ ಪೂರ್ವಕವಾಗಿ ಅಮೃತಿಯ ಅನ್ನವನ್ನು ಯಾವ ವೈಷ್ಣವನು ಅರ್ಪಿಸುತ್ತಾನೆಯೋ, ಆ ವೈಷ್ಣವ ಬಲಿಯಿಂದಲೂ ಬ್ರಹ್ಮಾದಿದೇವತೆಗಳೊಡನೆ ಇಂದ್ರಾದಿ ಲೋಕಪಾಲಕರೂ, ಗಣಾಧ್ಯಕ್ಷರೂ ಇತರ ದೇವತೆಗಳೂ ತೃಪ್ತಿಯನ್ನೈದ್ದಿ, ಆ ಬಲಿಪ್ರದಾನ ಮಾಡಿದವನಿಗೆ ಮನಸ್ಸಮಾಧಾನವನ್ನೂ, ಐಸಿರಿಯನ್ನೂ, ಆರೋಗ್ಯವನ್ನೂ, ದಯೆಗೆಯ್ವರು.

೩೨. ದೇವೋತ್ತಮನಾದ ಶ್ರೀನರಹರಿದೇವನಿಗೆ ಒಮ್ಮೆಯಾದರೂ ಭಕ್ತಿಯಿಂದ ಬಲಗೊಳ್ಳುವುದರಿಂದ ಮಾನವರಿಗೆ ಯಾವ ಫಲವುಂಟಾಗುವುದೋ ಅದನ್ನು ರುಹುವೆನು ; ಎಲೈ ಸಹಸ್ರಾನೀಕರಾಯಕುವರನೇ ! ಅದನ್ನ ಕೇಳುವವನನಾಗು.

೩೩. ಮಾನವನು ಶ್ರೀಮಾಧವನಿಗೆ ಭಕ್ತಿಪೂರ್ವಕವಾಗಿ ಪ್ರದಕ್ಷಿಣನಮಸ್ಕಾರವನ್ನೆಸಗಿದರೆ, ಅವನು ಪೊಡವಿಯನ್ನು ಪ್ರದಕ್ಷಿಣೆ ಮಾಡುವುದರಿಂದ ಯಾವ ಫಲವುಂಟಾಗುವುದೋ, ಆ ಫಲವನ್ನು ಹೊಂದಿ, ಶ್ರೀವಿಷ್ಣುವಿನ ಲೋಕದಲ್ಲಿ ವಾಸಿಸುವನು.

ಭಕ್ತಿಯಿಂದ ಶ್ರೀನರಹರಿಯನ್ನು ಬಲಗೊಂಡಮನಿಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳೆಂಬ ನಾಲ್ಕು ತೆರನಾದ ಪುರುಷಾರ್ಥಗಳೂ ಪ್ರಾಪ್ತವಾಗುವುವು.

ಧರ್ಮಾರ್ಥ ಕಾಮಮೋಕ್ಷಾಖ್ಯಂ ಫಲಂ ತೇನಾಪ್ತಮಂಜಸಾ ।
ಸ್ತೋತ್ರೈರ್ಜಪೈಶ್ಚ ದೇವಾಗ್ರೇ ಯಃ ಸ್ತೌತಿ ಮಧುಸೂದನಮ್ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥
ಗೀತವಾದ್ಯಾದಿಕಂ ನಾಟ್ಯಂ ಶಂಖತೂರ್ಯಾದಿ ನಿಃಸ್ವನೈಃ ॥ ೩೪ ॥

ಯಃ ಕಾರಯತಿ ವೈ ವಿಷ್ಣೋಃ ಸ ಯಾತಿ ಹರಿಮಂದಿರಮ್ ।
ಪರ್ವಕಾಲೇ ವಿಶೇಷೇಣ ಕಾಮಗಃ ಕಾಮ ರೂಪವಾನ್ ॥ ೩೫ ॥

ಸುಸಂಗೀತವಿದೈಶ್ಚೈವ ಸೇವ್ಯಮಾನೋಽಪ್ಸರೋ ಗಣೈಃ ।
ಮಹಾರ್ಹಮಣಿಚಿತ್ರೇಣ ವಿಮಾನೇನ ವಿರಾಜತಾ ॥ ೩೬ ॥

ಸ್ವರ್ಗಾತ್ಸ್ವರ್ಗಮನುಪ್ರಾಪ್ಯ ವಿಷ್ಣುಲೋಕೇ ಮಹೀಯತೇ ।
ಧ್ವಜಂ ತು ವಿಷ್ಣವೇ ಯಸ್ತು ಗರುಡೇನ ಸಮನ್ವಿತಮ್ ॥ ೩೭ ॥

---

೩೪. ಯಾವ ನರನು ಮಧುಸೂದನನಾದ ನರಸಿಂಹನನ್ನು ಸ್ತೋತ್ರಗಳಿಂದಲೂ, ಜಪಗಳಿಂದಲೂ ಅವನ ಮೂರ್ತಿಯ ಸಂಮುಖದಲ್ಲಿ ನುತಿಸುತ್ತಾನೆಯೋ, ಅವನು ಸಕಲ ಪಾಪಗಳಿಂದ ಮುಕ್ತನಾಗಿ, ಶ್ರೀವಿಷ್ಣುಲೋಕದಲ್ಲಿ ಗೌರವಿಸಲ್ಪಡುತ್ತಾನೆ.

೩೫-೩೬. ಯಾವ ಮಾನವನು ಹಾಡುವುದು, ವಾದ್ಯಗಳನ್ನು ಬಾಜಿಸುವುದು, ಅಭಿನಯಿಸುವುದು-ಇವೇ ಮುಂತಾಗುವನ್ನು ಸಂಕು, (ಕೊಂಬು) ಕಹಳೆ ಮೊದಲಾದ ವಾದ್ಯಗಳ ದನಿಯೊಡನೆ ಶ್ರೀವಿಷ್ಣುವಿನ ಇದಿರಿನಲ್ಲಿ ಮಾಡಿಸುತ್ತಾನೆಯೋ, ಅವನು ಶ್ರೀಮಹಾವಿಷ್ಣುವಿನ ಮಂದಿರಕ್ಕೆ ಹೋಗುವನು.

ಪರ್ವಕಾಲದಲ್ಲಿ, ಎಂದರೆ ಪ್ರತಿಪತ್ಪಂಚದಶೀ ದಿನಗಳ ಮಧ್ಯಕಾಲದಲ್ಲಿ ಹೆಚ್ಚಾಗಿ ಮನಬಂದಂತೆ ಸಂಚರಿಸುವವನಾಗಿಯೂ, ತನಗೆ ಬೇಕಾದ ರೂಪವನ್ನು ತಾಳುವವನಾಗಿಯೂ, ಒಳ್ಳೆಯ ಹಾಡುಗಾರಿಕೆಯನ್ನರಿತ ಅಪ್ಸರೆಯರ ಸಮುದಾಯದಿಂದ ಸೇವಿಸಿಗೊಳ್ಳುತ್ತಾ, ಬಹು ಬೆಲೆ ಬಾಳುವ ರತ್ನಗಳಿಂದ ಅಲಂಕರಿಸಿದ ಬೆಳಗುವ ವಿಮಾನದಿಂದ ಬಂದು, ಸ್ವರ್ಗಪ್ರದೇಶದಿಂದ ಮತ್ತೊಂದು ಸ್ವರ್ಗಪ್ರದೇಶವನ್ನು ಹೊಂದಿ, ಅಲ್ಲಿಂದ ಮುಂದೆ, ವಿಷ್ಣುಲೋಕದಲ್ಲಿ ಪೂಜಿತನಾಗುತ್ತಾನೆ.

ದದ್ಯಾತ್ಸೋಽಪಿ ಧ್ವಜಾಕೀರ್ಣ ವಿಮಾನೇನ ವಿರಾಜತಾ ।
ವಿಷ್ಣುಲೋಕಮವಾಪ್ನೋತಿ ಸೇವ್ಯಮಾನೋಽಪ್ಸರೋ ಗಣೈಃ ॥ ೩೮ ॥

"ಸುವರ್ಣಾಭರಣೈರ್ದಿವ್ಯೈಃ ಹಾರಕೇಯೂರಕುಂಡಲೈಃ ।
ಮುಕುಟಾಭರಣಾದ್ಯೈಶ್ಚ ಯೋ ವಿಷ್ಣುಂ ಪೂಜಯೇನ್ನೃಪ ॥ ೧ ॥

ಸರ್ವಪಾಪವಿನಿರ್ಮುಕ್ತಃ ಸರ್ವಭೂಷಣಭೂಷಿತಃ ।
ಇಂದ್ರಲೋಕೇ ವಸೇದ್ಧೀಮಾನ್ ಯಾವದಿಂದ್ರಾಶ್ಚತುರ್ದಶ" ॥ ೨ ॥

"ಯೋ ಗಾಂ ಪಯಸ್ವಿನೀಂ ವಿಷ್ಣೋಃ ಕಪಿಲಾಂ ಸಂಪ್ರಯಚ್ಛತಿ ।
ಆರಾಧ್ಯ ತಮಥಾಗ್ರೇ ತು ಯತ್ಕಿಂಚಿದ್ಗಂಧಮುತ್ತಮಮ್ ॥
ತದ್ದತ್ವಾ ನರಸಿಂಹಾಯ ವಿಷ್ಣುಲೋಕೇ ಮಹೀಯತೇ" ॥ ೧ ॥

---

೩೮. ಯಾವ ಮನುಷ್ಯನು ಶ್ರೀ ಮಹಾವಿಷ್ಣುವಿಗೆ ಗರುಡನಿಂದ ಕೂಡಿದ ಧ್ವಜವನ್ನು ಮಾಡಿಸಿ ಸಮರ್ಪಿಸುತ್ತಾನೆಯೋ, ಅವನೂ ಧ್ವಜದಿಂದ ಕೂಡಿದ, ಪ್ರಕಾಶಿಸುವ ವಿಮಾನದಿಂದ ಅಪ್ಸರಸ್ತ್ರೀಯರ ತಂಡದಿಂದ ಸೇವೆಗೊಳ್ಳುತ್ತಾ, ವಿಷ್ಣುಲೋಕಕ್ಕೆ ಹೋಗುವನು.

"ಎಲೈ ಸಹಸ್ರಾನೀಕನೇ! ಕೇಳು; ಯಾವನು ಉತ್ತಮವಾದ ಚಿನ್ನದ ತೊಡುವುಗಳಿಂದಲೂ, ಹಾರ, ಬಾವುರಿ, ಕಿವಿಯ ಓಲೆ, ಕಿರೀಟ–ಇವೇ ಮೊದಲಾದ ತೊಡವುಗಳಿಂದಲೂ ಶ್ರೀವಿಷ್ಣುವನ್ನು ಸೇವಿಸುವನೋ, ಆ ಧೀಮಂತನು ಸಕಲ ಪಾಪಗಳಿಂದ ಬಿಡುಗಡೆಯನ್ನು ಹೊಂದಿ, ಎಲ್ಲಾ ತೊಡುವುಗಳಿಂದಲಂಕೃತನಾಗಿ, ಹದಿನಾಲ್ಕು ಮಂದಿ ಇಂದ್ರರ ಒಡೆತನವಿರುವವರೆಗೂ ಇಂದ್ರಲೋಕದಲ್ಲಿ ವಾಸಮಾಡುವನು.

ಯಾವ ಮನುಷ್ಯನು ಶ್ರೀ ವಿಷ್ಣುವಿನ ಸೇವೆಗಾಗಿ ಹಯನೂ, ಕವಿಲೆಯೂ ಆದ ಹಸುವನ್ನು ದಾನಮಾಡುತ್ತಾನೆಯೋ ಅಥವಾ ಶ್ರೀ ನರಸಿಂಹನನ್ನು ಪೂಜಿಸಿ ಆ ಮೂರ್ತಿಯ ಇದಿರಿನಲ್ಲಿ ಉತ್ತಮವಾದ ಗನ್ಧವನ್ನು ಸ್ವಲ್ಪವಾದರೂ ನಿವೇದಿಸುತ್ತಾನೆಯೋ, ಅವನು ವಿಷ್ಣುಲೋಕದಲ್ಲಿ ಸನ್ಮಾನಗೊಳ್ಳುತ್ತಾನೆ."

ಪಿತರಸ್ತಸ್ಯ ಮೋದಂತೇ ಶ್ವೇತದ್ವೀಪೇ ಚಿರಂ ನೃಪ ॥ ೩೯ ॥

ಏವಂ ಯಃ ಪೂಜಯೇದ್ರಾಜನ್ ನರಸಿಂಹಂ ನರೋತ್ತಮಃ ।
ತಸ್ಯ ಸ್ವರ್ಗಾಪವರ್ಗೌ ತು ಭವತೋ ನಾತ್ರ ಸಂಶಯಃ ॥ ೪೦ ॥

ಯತ್ರೈವಂ ಪೂಜ್ಯತೇ ವಿಷ್ಣುರ್ನರಸಿಂಹೋ ನರೈರ್ನೃಪ ।
ನ ತತ್ರ ವ್ಯಾಧಿದುರ್ಭಿಕ್ಷ ರಾಜ ಚೋರಾದಿಕಂ ಭಯಮ್ ॥ ೪೧ ॥

ನರಸಿಂಹಂ ಸಮಾರಾಧ್ಯ ವಿಧಿನಾಽನೇನ ಮಾಧವಮ್ ।
ನಾನಾಸ್ವರ್ಗಸುಖಂ ಭುಕ್ತ್ವಾ ನ ಭೂಯುಸ್ತನಯೋ ಭವೇತ್ ॥ ೪೨ ॥

---

೩೯. ಎಲೈ ರಾಯನೇ ! ಕೇಳು ; ಅವನ ಪಿತೃಗಳು ಶ್ರೀ ವಿಷ್ಣುವಿನ ಪರಮ ಪದವಾದ ಶ್ವೇತದ್ವೀಪದಲ್ಲಿ ಬಹುಕಾಲ ಸಂತಸದಿಂದ ಇರುತ್ತಾರೆ.

೪೦. ಸಹಸ್ರಾನೀಕನೇ ! ಕೇಳು ; ಯಾವ ಮಾನವ ಶ್ರೇಷ್ಠನು ಇಂತು ಶ್ರೀ ನರಹರಿಯನ್ನು ಪೂಜಿಸುತ್ತಾನೆಯೋ, ಅವನಿಗೆ ಸ್ವರ್ಗ ಮತ್ತು ಮೋಕ್ಷ ಇವುಗಳು ದೊರಕುವುವು. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲವು.

೪೧. ಎಲೈ ನೃಪನೇ ! ಯಾವ ದೇಶದಲ್ಲಿ ನರರು ಶ್ರೀ ನರಸಿಂಹದೇವರನ್ನು ಇಂತು ಸೇವಿಸುತ್ತಾರೆಯೋ, ಆ ದೇಶದಲ್ಲಿ ರೋಗ ದುರ್ಭಿಕ್ಷ, ರಾಜಚೋರಾದಿಗಳಿಂದ ಭೀತಿ—ಇವು ಉಂಟಾಗುವುದಿಲ್ಲ.

೪೨. ಯಾವ ಮಾನವನು ಈ ನಿಯಮದಿಂದ ಲಕ್ಷ್ಮೀಪತಿಯಾದ ನರಸಿಂಹಸ್ವಾಮಿಯನ್ನು ಪೂಜಿಸುತ್ತಾನೆಯೋ, ಅವನು ಅನೇಕ ತೆರನಾದ ಸ್ವರ್ಗದ ಸುಖಗಳನ್ನು ಅನುಭವಿಸಿ, ಮಗನಾಗುವುದಿಲ್ಲವೆಂದರೆ ಜನ್ಮರಹಿತನಾಗುತ್ತಾನೆ.

ನಿತ್ಯಂ ಸರ್ಪಿಸ್ತಿಲೈರ್ಹೋಮೋ ಗ್ರಾಮೋ ಯಸ್ಮಿನ್ ಪ್ರವರ್ತತೇ ।
ನ ಭವೇತ್ತಸ್ಯ ಗ್ರಾಮಸ್ಯ ಭಯಂ ವಾ ತತ್ರ ಕುತ್ರಚಿತ್ ॥ ೪೩ ॥

ಅನಾವೃಷ್ಟಿರ್ಮಹಾಮಾರೀ ದೋಷಾನ್ನಾದಾಹಿಕಾ ನೃಪ ।
ನರಸಿಂಹಂ ಸಮಾರಾಧ್ಯ ಬ್ರಾಹ್ಮಣೈರ್ವೇದ ಪಾರಗೈಃ ॥ ೪೪ ॥

ಕಾರಯೇಲ್ಲಕ್ಷಹೋಮಂ ತು ಗ್ರಾಮೇ ಯತ್ರ ಪುರಾಧಿಪಃ ।
ಕೃತೇ ತಸ್ಮಿನ್ ಮಯೋಕ್ತೇ ತು ಆಗಚ್ಛತಿ ನ ತದ್ಭಯಮ್ ॥ ೪೫ ॥

ದೃಷ್ಟೋಪಸರ್ಗಮರಣಂ ಪ್ರಜಾನಾಮಾತ್ಮನಶ್ಚ ಹಿ ।
ಸಮ್ಯಗಾರಾಧನೀಯಾ ತು ನರಸಿಂಹಸ್ಯ ಮಂದಿರೇ ॥ ೪೬ ॥

---

೪೩. ಯಾವ ಗ್ರಾಮದಲ್ಲಿ ನಿಚ್ಚವೂ ತುಪ್ಪ ಮತ್ತು ಎಳ್ಳು ಇವುಗಳಿಂದ ಹೋಮವು (ದೇವತೋದ್ದೇಶದಿಂದ ಅಗ್ನಿಯಲ್ಲಿ ತುಪ್ಪವೇ ಮುಂತಾದುವುಗಳನ್ನು ಕುಡುವುದು) ನಡೆಯುವುದೋ, ಆ ಗ್ರಾಮಕ್ಕೆ ಯಾವ ಎಡೆಯಲ್ಲಿಯೂ ಭೀತಿ ಯುಂಟಾಗುವುದಿಲ್ಲವು.

೪೪. ಎಲೈ ಸಹಸ್ರಾನೀಕರಾಯನೇ! ಕೇಳು ಯಾವ ದೇಶದಲ್ಲಿ ಋಗಾದಿ ವೇದಗಳಲ್ಲಿ ನಿಪುಣರಾದ ಬ್ರಾಹ್ಮಣರಿಂದ ಶ್ರೀ ನರಸಿಂಹಸ್ವಾಮಿಯನ್ನು ಅರ್ಚಿಸು ತ್ತಾರೆಯೋ, ಅಲ್ಲಿ ಅನಾವೃಷ್ಟಿಯೂ, ಮಹಾಮಾರಿಕಾದ್ಯುಪದ್ರವವೂ, ದುಷ್ಟವಾದ ಅನ್ನವೂ, ನೀರಿಲ್ಲದೇ ಬಾಯಾರಿಕೆಯ ಬಾಧೆಯೂ ಇವಾವುವೂ ಉಂಟಾಗುವುದಿಲ್ಲವು.

೪೫. ಯಾವ ಗ್ರಾಮದಲ್ಲಿ ಪುರಾಧಿಪನಾದವನು ಬ್ರಾಹ್ಮಣರಿಂದ ಶ್ರೀ ನರಹರಿಯನ್ನುದ್ದೇಶಿಸಿ ಲಕ್ಷ ಹೋಮವನ್ನುಮಾಡಿಸುವನೋ, ಅಂತು ನಾನು ಹೇಳಿದ ಆ ಪೂಜಾವಿಧಿಯನ್ನೆಸಗಲಾಗಿ, ಅನಾವೃಷ್ಟಿಯೇ ಮೊದಲಾದ ಯಾವ ಭೀತಿಯೂ ಅಲ್ಲಿ ಉಂಟಾಗುವುದಿಲ್ಲವು.

೪೬. ಲೋಕದಲ್ಲಿ ಕಂಡ ಉತ್ಪಾತಗಳಿಂದ ಸಾವು ಪ್ರಜೆಗಳಿಗಾಗಲಿ, ತನಗಾಗಲಿ ಉಂಟಾಗುವುದಿಲ್ಲ. ಆದುದರಿಂದ ಮನೆಯಲ್ಲಿ ನಿರಂತರದಲ್ಲಿ ಶ್ರೀ ನರಸಿಂಹಮೂರ್ತಿಯ ಪೂಜೆಯು ಆವಶ್ಯಕವಾಗಿ ಮಾಡಬೇಕಾದುದು.

ಶಂಕರಾಯತನೇ ಚಾಪಿ ಕೋಟಿಹೋಮಂ ನರಾಧಿಪ ।
ಕಾರಯೇತ್ಸಂಯತೈರ್ವಿಪ್ರೈಃ ಸಭೋಜನಸದಕ್ಷಿಣೈ ॥ ೪೭ ॥

ಕೃತೇ ತಸ್ಮಿನ್ ನೃಪಶ್ರೇಷ್ಠ ನರಸಿಂಹಪ್ರಸಾದತಃ ।
ಉಪಸರ್ಗಾದಿಮರಣಂ ಪ್ರಜಾನಾಮುಪಶಾಮ್ಯತಿ ॥ ೪೮ ॥

ದುಃಸ್ವಪ್ನದರ್ಶನೇ ಘೋರೇ ಗ್ರಹಪೀಡಾಸು ಚಾತ್ಮನಃ ।
ಹೋಮಂ ಚ ಭೋಜನಂ ಚೈವ ತಸ್ಯ ದೋಷಃ ಪ್ರಣಶ್ಯತಿ ॥ ೪೯ ॥

ಅಯನೇ ವಿಷುವೇ ಚೈವ ಚಂದ್ರಸೂರ್ಯಗ್ರಹೇ ತಥಾ ।
ನರಸಿಂಹಂ ಸಮಾರಾಧ್ಯ ಲಕ್ಷಹೋಮಂ ತು ಕಾರಯೇತ್ ॥ ೫೦

೪೭-೪೮. ಎಲೈ ನರಾಧಿಪನೇ! ಕೇಳು ಯಾವ ಮನುಷ್ಯನು ಶಂಕರ ದೇವಾಲಯದಲ್ಲಿಯಾದರೂ ಜಿತೇಂದ್ರಿಯರಾದ ಬ್ರಾಹ್ಮಣರಿಂದ ಭೋಜನ ದಕ್ಷಿಣೆಗಳೊಡನೆ ಕೋಟಿ ಹೋಮವನ್ನು ಆಚರಿಸುತ್ತಾನೆಯೋ, ಅಂತು ಕೋಟಿ ಹೋಮವನ್ನೆಸಗಿದಲ್ಲಿ ಶ್ರೀ ನರಸಿಂಹದೇವರ ಅನುಗ್ರಹದಿಂದ ಪ್ರಜೆಗಳಿಗೆ ಭೌಮ ದಿವ್ಯಾದ್ಯುತ್ಪಾತಗಳಿಂದ ಉಂಟಾಗುವ ಮರಣವು (ಅಡುಗುತ್ತದೆ) ಪರಿಹಾರವಾಗುತ್ತದೆ.

೪೯. ತನಗೆ ಬಹು ಭೀಕರಗಳಾದ ಕೆಟ್ಟಕನಸನ್ನು ಕಾಣುವುದರಲ್ಲಿಯೂ, ದುಷ್ಟಗ್ರಹಚಾರದಿಂದಾಗುವ ಬಾಧೆಯಾಗುವುದರಲ್ಲಿಯೂ, ಈ ತೆರನಾದ ಹೋಮವನ್ನೂ, ಬ್ರಾಹ್ಮಣ ಭೋಜನವನ್ನೂ ಮಾಡಿಸಿದಲ್ಲಿ ಆ ದುಃಸ್ವಪ್ನಾದಿಗಳು, ದುಷ್ಟಗ್ರಹಚಾರಗಳು- ಇವುಗಳಿಂದಾಗುವ ದೋಷವು ನಾಶವಾಗುವುದು.

೫೦. ದಕ್ಷಿಣಾಯನ, ಉತ್ತರಾಯಣ, ಸಂಕ್ರಮಣಕಾಲಗಳಲ್ಲಿಯೂ, ಹಗಲು-ರಾತ್ರಿಗಳ ಪ್ರಮಾಣವು ಸಮನಾಗಿರುವಂತಹ ವಿಷುವತ್ಪುಣ್ಯಕಾಲಗಳಲ್ಲಿಯೂ ಚಂದ್ರ ಸೂರ್ಯ ಗ್ರಹಣಕಾಲಗಳಲ್ಲಿಯೂ ಶ್ರೀ ಲಕ್ಷ್ಮೀನರಸಿಂಹಮೂರ್ತಿಯನ್ನಾರಾಧಿಸಿ, ಲಕ್ಷ ಹೋಮವನ್ನು ಮಾಡಿಸುವುದು.

ಶಾಂತಿರ್ಭವತಿ ರಾಜೇಂದ್ರ ತಸ್ಯ ತತ್ಸ್ಥಾನವಾಸಿನಾಮ್ ।
ಏವಮಾದಿಫಲೋಪೇತಂ ನರಸಿಂಹಾರ್ಚನಂ ದ್ವಿಜ ॥ ೫೧ ॥

ಕುರು ತ್ವಂ ಭೂಪತೇಃ ಪುತ್ರ ಯದಿ ವಾಞ್ಛಸಿ ಸದ್ಗತಿಮ್ ।
ಅತಃ ಪರತರಂ ನಾಸ್ತಿ ಸ್ವರ್ಗಮೋಕ್ಷಫಲಪ್ರದಮ್ ॥ ೫೨ ॥

ನರೇಂದ್ರೈಃ ಸುಕರಂ ಕರ್ತುಂ ದೇವದೇವಸ್ಯ ಪೂಜನಮ್ ।
ಸಂತ್ಯರಣ್ಯೇ ಹ್ಯಮೂಲ್ಯಾನಿ ಪತ್ರಪುಷ್ಪಾಣಿ ಶಾಖಿನಾಮ್ ॥ ೫೩ ॥

ತೋಯಂ ನದೀತಡಾಗ್ರೇಷು ದೇವಃ ಸಾಧಾರಣಃ ಸ್ಥಿತಃ ।
ಮನೋ ನಿಯಮಯೇದೇಕಂ ವಿದ್ಯಾಸಾಧನಕರ್ಮಣಿ ॥ ೫೪ ॥

---

೫೧. ಎಲೈ ದ್ವಿಜನಾದ ಸಹಸ್ರಾನೀಕ ರಾಜೇಂದ್ರನೇ! ಕೇಳು; ಈ ಹಿಂದೆ ಹೇಳಿದ ಫಲವೇ ಮೊದಲಾದುವುಗಳನ್ನುಂಟುಮಾಡುವ, ಆಚರಿಸಿದ, ಶ್ರೀ ನರಸಿಂಹ ಮೂರ್ತಿಯ ಪೂಜೆಯು ಆ ಪ್ರಭುವಿಗೂ, ಅವನ ದೇಶದ ಪ್ರಜೆಗಳಿಗೂ ಸೊಗವನ್ನುಂಟುಮಾಡುವುದು.

೫೨. ಎಲೈ ರಾಯಕುವರನೇ! ನೀನು ಸದ್ಗತಿಯನ್ನು ಅಪೇಕ್ಷಿಸುವುದಾದರೆ, ಇಂತು ಶ್ರೀ ನರಸಿಂಹಮೂರ್ತಿಯ ಪೂಜೆಯನ್ನೂ, ಲಕ್ಷ ಹೋಮಾದಿಗಳನ್ನೂ ಮಾಡಿಸು. ಸ್ವರ್ಗ ಮೋಕ್ಷರೂಪವಾದ ಫಲವನ್ನುಂಟುಮಾಡುವ ಇದಕ್ಕಿಂತಲೂ ಬೇರೆಯಾದ ಸಾಧನವು ಇಲ್ಲವು.

೫೩. ದೇವೋತ್ತಮನಾದ ಶ್ರೀ ನರಹರಿಯ ಪೂಜೆಯನ್ನು ರಾಜೇಂದ್ರರೆಸಗುವುದು ಸುಲಭವು. ಅರಣ್ಯದಲ್ಲಿ ಬಹು ಬೆಲೆಬಾಳುವ ಶ್ರೇಷ್ಠವಾದ ವೃಕ್ಷಗಳ ಎಲೆಗಳು ಮತ್ತು ಹೂವುಗಳು ಇವೆ.

೫೪. ನದಿಗಳಲ್ಲಿಯೂ, ಕೆರೆಗಳಲ್ಲಿಯೂ ನೀರು ಇದೆ. ಸರ್ವರಲ್ಲಿಯೂ ಅವರವರ ಯೋಗ್ಯತೆಯನ್ನನುಸರಿಸಿ ಅನುಗ್ರಹಿಸುವ, ಸಮನೆನಿಸುವ ದೇವನಿದ್ದಾನೆ. ಜ್ಞಾನಸಾಧನವಾದ ಕರ್ಮಗಳಲ್ಲಿ ಮನವೊಂದನ್ನೆ ವಶದಲ್ಲಿ ಇಟ್ಟುಕೊಳ್ಳುವುದು.

ಮನೋ ನಿಯಮಿತಂ ಯೇನ ಮುಕ್ತಿಸ್ತಸ್ಯ ಕರೇ ಸ್ಥಿತಾ ॥

॥ ಮಾರ್ಕಂಡೇಯ ಉವಾಚ ॥

ಇತ್ಯೇವಮುಕ್ತಂ ಭೃಗುಚೋದಿತೇನ
ಮಯಾ ತವೇಹಾರ್ಚನಮಚ್ಯುತಸ್ಯ ।
ದಿನೇ ದಿನೇ ತ್ವಂ ಕುರು ವಿಷ್ಣುಪೂಜಾಂ
ವದಸ್ವ ಚಾನ್ಯತ್ಕಥಯಾಮಿ ಕಿಂ ತೇ ॥ ೫೫ ॥

ಇತಿ ಶ್ರೀ ನರಸಿಂಪುರಾಣೇ ಸಹಸ್ರಾನೀಕಚರಿತೇ ಶ್ರೀ ವಿಷ್ಣೋಃ

ಪೂಜಾವಿಧಿರ್ನಾಮ ಚತುಸ್ತ್ರಿಂಶೋಽಧ್ಯಾಯಃ

---

೫೫. ಯಾವ ಅಧಿಕಾರಿಯು ಮನಸ್ಸನ್ನು ಜಯಿಸಿ ವಶದಲ್ಲಿಟ್ಟುಕೊಳ್ಳು ವನೋ, ಮೋಕ್ಷವೆಂಬ ಪುರುಷಾರ್ಥವು ಅವನ ಕೈಯಲ್ಲಿರುವುದು," ಎಂದು ಮಾರ್ಕಂಡೇಯನು ಶತಾನೀಕನಿಗೆ ಹೇಳಿದನು. ಮತ್ತೂ ಮಾರ್ಕಂಡೇಯನು ಹೇಳುತ್ತಾನೆ :—

"ಎಲೈ ಸಹಸ್ರಾನೀಕ ಮಹಾರಾಯನೇ! ಕೇಳು; ಭೃಗು ಮುನಿಯಿಂದ ಪ್ರೇರಿತನಾದ ನಾನು ನಿನಗೆ ಹಿಂದೆ ನಿರೂಪಿಸಿದಂತೆ ಅಚ್ಯುತನಾದ ಶ್ರೀ ನರಹರಿಯ ಪೂಜಾವಿಧಿಯನ್ನೂ, ಫಲವನ್ನೂ ತಿಳಿಸಿದೆನು. ನೀನು ಪ್ರತಿನಿತ್ಯವೂ ಶ್ರೀ ಮಹಾ ವಿಷ್ಣುವಿನ ಪೂಜೆಯನ್ನು ಆಚರಿಸು. ನಿನಗೆ ಮತ್ತಾವ ಇಷ್ಟವಾದ ಸಂಗತಿಯನ್ನು ಹೇಳಲಿ; ಹೇಳು," ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕ ರಾಜನಿಗೆ ಹೇಳಿದುದನ್ನು ಶ್ರೀ ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣಲ್ಲಿ ಸಹಸ್ರಾನೀಕರಾಜನ ಚರಿತೆಯಲ್ಲಿ
'ಶ್ರೀ ಮಹಾವಿಷ್ಣುವಿನ ಪೂಜಾವಿಧಿಯೆಂಬ' ಮೂವತ್ತುನಾಲ್ಕನೆಯ
ಅಧ್ಯಾಯವು ಮುಗಿದುದು.

ಮೂವತ್ತುನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ' ಸಹಸ್ರಾನೀಕಮಹಾರಾಜನು ಮಾರ್ಕಂಡೇಯ ಮುನಿಯನ್ನು ಶ್ರೀ ವಿಷ್ಣುನ ನಿರ್ಮಾಲ್ಯವಿಸರ್ಜನೆಯನ್ನು ಮಾಡುವುದರಿಂದುಂಟಾಗುವ ಪುಣ್ಯವಿಶೇಷವನ್ನರುಹಬೇಕೆಂದು ಕೇಳಲು, ಆ ಮುನಿಯು ನಿರ್ಮಾಲ್ಯ ವಿಸರ್ಜನ, ಶುದ್ಧೋದಕಸ್ನಾನ, ಪಂಚಾಮೃತಸ್ನಾನ, ಪಂಚಗವ್ಯಸ್ನಾನ, ಗೋಧೂಮಚೂರ್ಣಾದ್ಯುದ್ವರ್ತನ–ಇವನ್ನು ಮಾಡಿ, ಉಷ್ಣೋದಕದಿಂದ ಸ್ನಾನ, ಪಾದಪೀಠಕ್ಕೆ ಬಿಲ್ವಪತ್ರವನ್ನರ್ಪಿಸಿ ಉಷ್ಣೋದಕದಿಂದ ತೊಳೆಯುವುದು, ಕುಶಪುಷ್ಪೋದಕದಿಂದ ಸ್ನಾನ, ರತ್ನೋದಕಸ್ನಾನ, ಕರ್ಪೂರಾಗುರು ಮಿಶ್ರವಾದ ಸ್ನಾನ, ವಸ್ತ್ರಭೂಷಣಾದ್ಯರ್ಪಣ, ನಾನಾ ವಿಧಗಳಾದ ಕುಸುಮಗಳು, ತುಳಸೀ ಮುಂತಾದ ಪತ್ರಗಳು-ಇವುಗಳ ಅರ್ಚನ, ಧೂಪದೀಪಸಮರ್ಪಣ, ಶಾಲ್ಯಾನ್ನಾದ್ಯರ್ಪಣ, ಮಂತ್ರಪುಷ್ಪಾಕ್ಷತಸಮರ್ಪಣ, ಪ್ರದಕ್ಷಿಣನಮಸ್ಕಾರಾರ್ಪಣ, ಛತ್ರಚಾಮರಾದ್ಯರ್ಪಣ, ಗಾನವಾದ್ಯ ನೃತ್ಯಾದಿಗಳಿಂದ ಸೇವೆ, ಧ್ವಜಾದಿಗಳನ್ನು ಕಟ್ಟಿಸುವುದು, ದೇವರ ಸೇವಾದಿಗಳಿಗಾಗಿ ಗೋದಾನ, ಶ್ರೀ ನರಹರಿಯ ಪ್ರೀತ್ಯರ್ಥವಾಗಿ ದೇವಾಲಯಗಳಲ್ಲಿಯೂ, ಶಂಕರಾಲಯಗಳಲ್ಲಿಯೂ ತುಪ್ಪ ಎಳ್ಳು ಮುಂತಾದುವುಗಳಿಂದ ಲಕ್ಷ ಹೋಮಾದಿಗಳನ್ನೆಸಗುವುದು, ರಾಜರು ವೇದಶಾಸ್ತ್ರಪಾರಂಗತರಾದ ಬ್ರಾಹ್ಮಣರಿಂದ ಅವನ್ನು ಮಾಡಿಸುವುದು, ಇವೇ ಮುಂತಾದ ರೀತಿಯಲ್ಲಿ ಶ್ರೀ ನರಸಿಂಹಮೂರ್ತಿಯನ್ನು ಪೂಜಿಸಿದವರು ವಿಷ್ಣುಲೋಕಪ್ರಾಪ್ತಿ ರೂಪವಾದ ಫಲವನ್ನೂ, ಸ್ವರ್ಗಾಪವರ್ಗ ರೂಪವಾದ ಫಲವನ್ನೂ ಹೊಂದುತ್ತಾರೆ. ಆದುದರಿಂದ ಸ್ವರ್ಗಾಪವರ್ಗಪ್ರದವಾದುದು ಶ್ರೀ ಹರಿಯ ಪೂಜೆಯನ್ನು ಬಿಟ್ಟು ಮತ್ತಾವುದೂ ಇಲ್ಲವು. ಎಲೈ ಸಹಸ್ರಾನೀಕನೇ ! ನಿನಗೆ ಸದ್ಗತಿಯ ಆಸೆಯಿದ್ದರೆ, ಇಂತು ದೇವರ ಪೂಜೆಯನ್ನೂ, ಹೋಮಗಳನ್ನೂ ಮಾಡು, ಮಾಡಿಸು; ' ಎಂದು ಮಾರ್ಕಂಡೇಯ ಮುನಿಯು ನಿರೂಪಿಸಿದುದನ್ನು ಶ್ರೀ ಸೂತರು ಭಾರದ್ವಾಜನಿಗೆ ಹೇಳಿದುದಾಗಿ ಬಣ್ಣಿಸಿದೆ.

ಇಂತು ಮೂವತ್ತುನಾಲ್ಕನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಪಂಚತ್ರಿಂಶೋಽಧ್ಯಾಯಃ

ಲಕ್ಷಹೋಮವಿಧಿಃ

॥ ರಾಜೋವಾಚ ॥

ಅಹೋ ಮಹತ್ತ್ವಯಾ ಪ್ರೋಕ್ತಂ ವಿಷ್ಣ್ವಾರಾಧನಜಂ ಫಲಮ್ ।
ಸುಪ್ತಾಸ್ತೇ ಮುನಿಶಾರ್ದೂಲ ಯೇ ವಿಷ್ಣುಂ ನಾರ್ಚಯಂತಿ ವೈ ॥ ೧ ॥

ಮೂವತ್ತೈದನೆಯ ಅಧ್ಯಾಯವು.

ಲಕ್ಷಹೋಮ ವಿಧಿಯು.

೧. ಸಹಸ್ರಾನೀಕರಾಯನು ಮಾರ್ಕಂಡೇಯ ಮುನಿಗೆ ಇಂತು ಹೇಳುತ್ತಾನೆ :— 'ಎಲೈ ಮಾರ್ಕಂಡೇಯ ಮುನಿಯೇ ! ನೀವು ಶ್ರೀ ವಿಷ್ಣುವನ್ನು ಭಕ್ತಿಯಿಂದ ಸೇವಿಸುವುದರಿಂದ ಉಂಟಾಗುವ ಹಿರಿಯ ಫಲವನ್ನು ಹೇಳಿದಿರಿ. ಅದು ಅತಿಶಯವಾದುದು. ಎಲೈ ಮುನಿಶ್ರೇಷ್ಠನೇ ! ಯಾರು ಶ್ರೀ ವಿಷ್ಣುವನ್ನು ಪೂಜಿಸುವುದಿಲ್ಲವೋ, ಅವರು ನಿದ್ರೆಗೊಂಡವರಂತೆ ವ್ಯಾಪಾರಶೂನ್ಯರಾದುದರಿಂದ ನಿಷ್ಫಲವಾದ ಬಾಳುಳ್ಳವರೇ ಸರಿ.

ತ್ವತ್ಪ್ರಸಾದಾಚ್ಛ್ರುತಂ ಹ್ಯೇತನ್ನರಸಿಂಹಾರ್ಚನಕ್ರಮಮ್ ।
ಭಕ್ತ್ಯಾ ತಂ ಪೂಜಯಿಷ್ಯಾಮಿ ಕೋಟಿಹೋಮಫಲಂ ವದ ॥ ೨ ॥

॥ ಮಾರ್ಕಂಡೇಯ ಉವಾಚ ॥

ಇಮಮರ್ಥಂ ಪುರಾ ಪೃಷ್ಟಃ ಶೌನಕೋ ಗುರುಣಾ ನೃಪ ।
ಯತ್ತಸ್ಮೈ ಕಥಯಾಮಾಸ ಶೌನಕಸ್ತದ್ವದಾಮಿ ತೇ ॥ ೩ ॥

ಶೌನಕಂ ತು ಸುಖಾಸೀನಂ ಪರ್ಯಪೃಚ್ಛದ್ಬೃಹಸ್ಪತಿಃ ।

॥ ಬೃಹಸ್ಪತಿರುವಾಚ ॥

ಲಕ್ಷಹೋಮಸ್ಯ ಯಾ ಭೂಮಿಃ ಕೋಟಿಹೋಮಸ್ಯ ಯಾ ಶುಭಾ ॥ ೪ ॥

---

೨. ನಿಮ್ಮ ಅನುಗ್ರಹದಿಂದ ಶ್ರೀ ನರಸಿಂಹದೇವರ ಪೂಜಾಕ್ರಮವನ್ನು ಕೇಳಿ ಅರಿತೆನು. ಆ ಭಗವಂತನನ್ನು ಈ ತೆರನಾಗಿ ಪೂಜಿಸುವೆನು ; ' ಇನ್ನು ಕೋಟಿ ಹೋಮದ ಫಲವನ್ನು ದಯವಿಟ್ಟು ಹೇಳಿರಿ, ' ಎಂದು ಮಾರ್ಕಂಡೇಯ ಮುನಿಯನ್ನು ಸಹಸ್ರಾನೀಕನು ಬೇಡಿದನು.

೩. ಮಾರ್ಕಂಡೇಯ ಮುನಿಯು ಹೇಳುತ್ತಾನೆ:—' ಎಲೈ ನೃಪನೇ ! ಕೇಳು; ಬೃಹಸ್ಪತಿಯು ಇದೇ ವಿಷಯವನ್ನು ಪೂರ್ವದಲ್ಲಿ ಶೌನಕಮುನಿಯನ್ನು ಕೇಳಲು, ಆ ಶೌನಕಮುನಿಯು ಆ ದೇವಗುರುವಾದ ಬೃಹಸ್ಪತಿಗೆ ಹೇಳಿದುದನ್ನು ನಿನಗೆ ಅರುಹುವೆನು.

೪. ' ಒಮ್ಮೆ ಬೃಹಸ್ಪತಿಯು ಸೊಗದಿಂದ ಕುಳಿತಿದ್ದ ಶೌನಕಮುನಿಯನ್ನು ಇಂತು ಕೇಳಿದನು; ಬೃಹಸ್ಪತಿಯು ಇಂತು ಕೇಳುತ್ತಾನೆ:—' ಎಲೈ ಬ್ರಾಹ್ಮಣ ಶ್ರೇಷ್ಠನೇ ! ಲಕ್ಷಹೋಮವನ್ನಾಚರಿಸುವುದಕ್ಕೂ, ಕೋಟಿಹೋಮವನ್ನನುಷ್ಠಿಸು ವುದಕ್ಕೂ, ಯೋಗ್ಯವೂ, ಮಂಗಳಕರವೂ ಆದ ಪ್ರದೇಶವು ಯಾವುದು ?

ಶಾಂ ಮೇ ಕಥಯ ವಿಪ್ರೇಂದ್ರ ಹೋಮಸ್ಯ ಚರಿತೇ ವಿಧಿಮ್ ।

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತೋ ಗುರುಣಾ ಸೋಽಥ ಲಕ್ಷಹೋಮಾದಿಕಂ ವಿಧಿಮ್ ॥ ೫ ॥

ಶೌನಕೋ ವಕ್ತುಮಾರೇಭೇ ಯಥಾವನ್ನೃಪಸತ್ತಮ ।

॥ ಶೌನಕ ಉವಾಚ ॥

ಪ್ರವಕ್ಷ್ಯಾಮಿ ಯಥಾವತ್ತೇ ಶೃಣು ದೇವಪುರೋಹಿತ ॥ ೬ ॥

ಲಕ್ಷಹೋಮ ಮಹಾಭೂಮಿಂ ತದ್ವಿಶುದ್ಧಿಂ ವಿಶೇಷತಃ ।
ಯಜ್ಞಕರ್ಮಣಿ ಶಸ್ತಾಯಾ ಭೂಮೇರ್ಲಕ್ಷಣಮುತ್ತಮಮ್ ॥ ೭ ॥

೫–೭. ಆ ಹೋಮಗಳನ್ನು ಅನುಷ್ಠಿಸುವ ವಿಷಯದಲ್ಲಿ ನಿಯಮವೇನಿರುವುದು ?" ಅದನ್ನು ನನಗೆ ದಯಮಾಡಿ ಹೇಳಿರಿ,' ಎಂದು ಕೇಳಿದನು. ಮಾರ್ಕಂಡೇಯ ಮುನಿಯು ಹೇಳುತ್ತಾನೆ:—' ಎಲೈ ರಾಜಶ್ರೇಷ್ಠನೇ ! ಕೇಳು ; ಇಂತು ದೇವಗುರುವು ಕೇಳಲು, ಅನಂತರದಲ್ಲಿ ಶೌನಕಮುನಿಯು ಲಕ್ಷಹೋಮವೇ ಮೊದಲಾದುದರ ವಿಧಿಯನ್ನು ಶಾಸ್ತ್ರೋಕ್ತ ರೀತಿಯಿಂದ ಹೇಳಲು ಮೊದಲು ಮಾಡಿದನು.

೭. ಶೌನಕಮುನಿಯು ಹೇಳುತ್ತಾನೆ:—' ಎಲೈ ದೇವಪುರೋಹಿತನಾದ ಬೃಹಸ್ಪತಿಯೇ ! ನಿನಗೆ ಈಗ ಶಾಸ್ತ್ರದಲ್ಲಿ ಹೇಳಿರುವ ಲಕ್ಷ ಹೋಮಾದಿಗಳ ನಿಯಮವನ್ನೂ, ಲಕ್ಷ ಹೋಮವನ್ನಾಚರಿಸತಕ್ಕ ಭೂಮಿ ವಿಶೇಷವನ್ನೂ, ಹೆಚ್ಚಾಗಿ ಆ ಭೂಶುದ್ಧಿಯನ್ನೆಸಗುವ ಬಗೆಯನ್ನೂ, ಯಜ್ಞ ಕರ್ಮಗಳಲ್ಲಿ ಪ್ರಶಸ್ತವೆಂದು ಹೇಳಿರುವ ಭೂಮಿಯ ಉತ್ತಮ ಲಕ್ಷಣವನ್ನೂ ನಿರೂಪಿಸುವೆನು. ಅವನ್ನು ಸಷ್ಟೈಯಿಂದ ಕೇಳು.

ಸುಸಂಸ್ಕೃತಾಂ ಸಮಾಂ ಸ್ನಿಗ್ಧಾಂ ಪೂರ್ವಪೂರ್ವಮಥೋತ್ತಮಾಮ್ ।
ಊರುಮಾತ್ರಂ ಖನಿತ್ವಾ ಚ ಶೋಧಯೇತ್ತಾಂ ವಿಶೇಷತಃ ॥ ೮ ॥

ಬಹಿರಚ್ಛತಯಾ ತತ್ರ ಮೃದಾಚ್ಛಾದ್ಯ ಪ್ರಲೇಪಯೇತ್ ।
ಪ್ರಮಾಣಂ ಬಾಹುಮಾತ್ರಂ ತು ಸರ್ವತಃ ಕುಂಡಲಕ್ಷಣಮ್ ॥ ೯ ॥

ಚತುರಸ್ರಂ ಚತುಃಕೋಣಂ ತುಲ್ಯಸೂತ್ರೇಣ ಕಾರಯೇತ್ ।
ಉಪರಿ ಮೇಖಲಾಂ ಕುರ್ಯಾಚ್ಚತುರಸ್ರಾಂ ಸುವಿಸ್ತರಾಮ್ ॥ ೧೦ ॥

ಚತುರಂಗುಲಮಾತ್ರಂ ತು ಉಚ್ಛ್ರಿತಾಂ ಸೂತ್ರಸೂತ್ರಿತಾಮ್ ।
ಬ್ರಾಹ್ಮಣಾಃ ವೇದಸಂಪನ್ನಾಃ ಬ್ರಹ್ಮಕರ್ಮಸಮನ್ವಿತಾಃ ॥ ೧೧ ॥

---

೮. ಉತ್ತಮವಾದ ಸಂಸ್ಕಾರಗೊಂಡು ಸಮವಾಗಿಯೂ, ಜಿಗಟುಳ್ಳದ್ದಾಗಿಯೂ, ಪೂರ್ವವೇ ಮುಂದಾಗಿಯೂ ಇರುವ ಉತ್ತಮವಾದ ಭೂವಿಶೇಷವನ್ನು ಒಂದು ತೊಡೆಯ ಮಟ್ಟದವರಿವಿಗೂ ತೋಡಿ, ವಿಶೇಷವಾಗಿ ಅದನ್ನು ಶೋಧಿಸುವುದು.

೯. ಹೊರಭಾಗದಲ್ಲಿ ಸ್ವಚ್ಛವಾಗಿ ಬೇರೆ ಮಣ್ಣನ್ನು ಮುಚ್ಚಿ, ಅಲ್ಲಿ ನೀರಾಗಿ ಕಲಸಿದ ಮಣ್ಣನ್ನು ಬಳಿಯಬೇಕು. ಉದ್ದ, ಅಗಲ, ಆಳ ಇವೆಲ್ಲವೂ ಒಂದು ತೋಳಿನ ಪ್ರಮಾಣವಷ್ಟಿರುವುದು. ಜನ್ನಕುಂಡದ ಲಕ್ಷಣವು.

೧೦-೧೨. ನಾಲ್ಕು ಕಡೆಯಲ್ಲಿಯೂ ನಾಲ್ಕು ಮೂಲೆಯುಳ್ಳದ್ದಾಗಿ, ಸಮಾನವಾದ ದಾರದ ಅಳತೆಯಿಂದ ರಚಿಸಬೇಕು. ಮೇಲು ಭಾಗದಲ್ಲಿ ಚತುರಸ್ರವಾಗಿ ಅಗಲವಾದ ನಾಲ್ಕು ಅಂಗುಲದಷ್ಟು ಎತ್ತರವಾಗಿರುವ ದಾರದಿಂದ ಕಟ್ಟಿರುವ ಮೇಖಲೆಯನ್ನು ರಚಿಸಬೇಕು. ಯಜಮಾನನು ಋಗಾದಿವೇದಜ್ಞರೂ, ವೇದೋಕ್ತ

ಆಮಂತ್ರಯೇದ್ಯಥಾನ್ಯಾಯಂ ಯಜಮಾನೋ ವಿಶೇಷತಃ ।
ಬ್ರಹ್ಮಚರ್ಯವ್ರತಂ ಕುರ್ಯುಸ್ತ್ರಿರಾತ್ರಂ ತೇ ದ್ವಿಜಾತಯಃ ॥ ೧೨ ॥

ಅಹೋರಾತ್ರಮುಪೋಷ್ಯಾಥ ಗಾಯತ್ರೀಮಯುತಂ ಜಪೇತ್ ।
ತೇ ಶುಕ್ಲವಾಸಸಃ ಸ್ನಾತಾ ಗಂಧಸ್ರಕ್ಪುಷ್ಪಧಾರಿಣಃ ॥ ೧೩ ॥

ಶುಚಯಶ್ಚ ನಿರಾಹಾರಾಃ ಸಂತುಷ್ಟಾಃ ಸಂಯತೇಂದ್ರಿಯಾಃ ।
ಕೌಶಮಾಸನಮಾಸೀನಾ ಏಕಾಗ್ರಮನಸಃ ಪುನಃ ॥ ೧೪ ॥

ಆರಭೇಯುಶ್ಚ ತೇ ಯತ್ನಾತ್ ತತೋ ಹೋಮಮತಂದ್ರಿತಾಃ ।
ಭೂಮಿಮಾಲಿಖ್ಯ ಚಾಭ್ಯುಕ್ಷ್ಯ ಯತ್ನಾದಗ್ನಿಂ ನಿಧಾಪಯೇತ್ ॥ ೧೫ ॥

ಕರ್ಮಾನುಷ್ಠಾನತತ್ಪರರೂ ಆದ ಬ್ರಾಹ್ಮಣರಿಗೆ ಮರ್ಯಾದಾನುಸಾರವಾಗಿ ಆಮಂತ್ರಣವನ್ನೀಯಬೇಕು. ಆ ಬ್ರಾಹ್ಮಣರು ಮೂರು ರಾತ್ರಿಗಳಲ್ಲಿ ಬ್ರಹ್ಮಚರ್ಯವ್ರತವನ್ನಾಚರಿಸಬೇಕು.

೧೩. ಬಳಿಕ ಆ ಬ್ರಾಹ್ಮಣರು ಹಗಲೂ, ಇರುಳೂ ಉಪವಾಸ ಮಾಡಿ, ಹತ್ತುಸಾಸಿರ ಗಾಯತ್ರಿಯನ್ನು ಜಪಿಸುವುದು. ಅವಲ್ಲದೆ ಸ್ನಾನ ಮಾಡಿ, ಬಿಳಿಯ ವಸ್ತ್ರವನ್ನುಟ್ಟು, ಗಂಧ, ಮಾಲ್ಯ, ಪುಷ್ಪಗಳನ್ನು ಧರಿಸಬೇಕು.

೧೪-೧೫. ಆ ಬ್ರಾಹ್ಮಣರು ನಿರ್ಮಲರೂ, ಅನಶನರೂ, ಸಂತಸದಿಂದ ಕೂಡಿದವರೂ, ಜಿತೇಂದ್ರಿಯರೂ, ದರ್ಭಾಸನದಲ್ಲಿ ಕುಳಿತವರೂ, ಏಕಾಗ್ರಮನದಿಂದ ಕೂಡಿದವರೂ ಆಗಿ, ಬಳಿಕ ಅಲಸರಾಗದೆ, ಪ್ರಯತ್ನ ಪೂರ್ವಕವಾಗಿ ಹೋಮವನ್ನು ಮೊದಲು ಮಾಡಬೇಕು. ಹಿಟ್ಟಿನಿಂದ ಭೂಮಿಯ ಮೇಲೆ ಬರೆದು, ನೀರನ್ನು ಪ್ರೋಕ್ಷಿಸಿ ಶುದ್ಧಿಗೆಯ್ದು, ಯತ್ನದಿಂದ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು.

ಗೃಹ್ಯೋಕ್ತೇನ ವಿಧಾನೇನ ಹೋಮಂ ತತ್ರ ಚ ಹೋಮಯೇತ್ ।
ಆಘಾರಾವಾಜ್ಯಭಾಗೌ ಚ ಜುಹುಯಾತ್ಪೂರ್ವಮೇವ ತು ॥ ೧೬ ॥

ಯವಧಾನ್ಯತಿಲೈರ್ಮಿಶ್ರಾಂ ಗಾಯತ್ರ್ಯಾ ಪ್ರಥಮಾಹುತಿಮ್ ।
ಜುಹುಯಾದೇಕಚಿತ್ತೇನ ಸ್ವಾಹಾಕಾರಾನ್ವಿತಾಂ ಬುಧಃ ॥ ೧೭ ॥

ಗಾಯತ್ರೀ ಛಂದಸಾಂ ಮಾತಾ ಬ್ರಹ್ಮಯೋನಿಃ ಪ್ರತಿಷ್ಠಿತಾ ।
ಸವಿತಾ ದೇವತಾ ತಸ್ಯಾ ವಿಶ್ವಾಮಿತ್ರಸ್ತಥಾ ಋಷಿಃ ॥ ೧೮ ॥

ತತೋ ವ್ಯಾಹೃತಿಭಿಃ ಪಶ್ಚಾಜ್ಜುಹುಯಾಚ್ಚ ತಿಲಾನ್ವಿತಮ್ ।
ಯಾವತ್ಪ್ರಪೂರ್ಯತೇ ಸಂಖ್ಯಾ ಲಕ್ಷಂ ವಾ ಕೋಟಿರೇವ ಚ ॥ ೧೯ ॥

---

೧೬. ಗೃಹ್ಯಸೂತ್ರಗಳಲ್ಲಿ ಹೇಳಿರುವ ನಿಯಮದಿಂದ ಆ ಅಗ್ನಿಯಲ್ಲಿ ಹೋಮವನ್ನು ಎಸಗಬೇಕು. ಮೊದಲಲ್ಲಿ ಕಾಸಿದ ತುಪ್ಪದ ಎರಡು ಭಾಗಗಳನ್ನು ಹೋಮ ಮಾಡುವುದು.

೧೭. ಹೋಮವಿಧಿಯನ್ನರಿತವನು ಯವಧಾನ್ಯ ಮತ್ತು ಎಳ್ಳು- ಇವುಗಳನ್ನು ಬೆರೆಸಿ ಮೊದಲನೆಯ ಆಹುತಿಯನ್ನು ಒಮ್ಮನದಿಂದ ಸ್ವಾಹಾಕಾರಶಿರಸ್ಕವಾದ ಗಾಯತ್ರೀಮಂತ್ರೋಚ್ಚಾರಣೆಯಿಂದ ಹೋಮ ಮಾಡುವುದು.

೧೮. ಗಾಯತ್ರಿಯು ಛಂದಸ್ಸುಗಳಿಗೆಲ್ಲಾ ತಾಯಿಯಂತಿರುವುದು. ಶ್ರೀಪರಬ್ರಹ್ಮನನ್ನು ಮುಖ್ಯವಾಗಿ ಪ್ರತಿಪಾದಿಸುವುದರಿಂದ ಬ್ರಹ್ಮರೂಪದಿಂದ ಶಾಶ್ವತವಾಗಿರುವುದು. ಅದಕ್ಕೆ ದೇವತೆ ಸವಿತೃನಾಮಕನಾದ ಭಗವಂತನು. ಹಾಗೆಯೇ ಆ ಮಂತ್ರವನ್ನು ಸಾಕ್ಷಾತ್ಕರಿಸಿ ಕೊಂಡವನು ವಿಶ್ವಾಮಿತ್ರನೆಂಬ ಋಷಿಯು.

೧೯. ಬಳಿಕ ತಿಲವನ್ನು ಸೇರಿಸಿ ಭೂಃ, ಭುವಃ, ಸುವಃ ಎಂಬ ವ್ಯಾಹೃತಿಗಳಿಂದ ಹೋಮ ಮಾಡುವುದು. ಲಕ್ಷ ಅಥವಾ ಕೋಟಿ ಸಂಖ್ಯೆಗಳು ಎಲ್ಲಿಗೆ ಪೂರೈಸುವುವೋ, ಅಲ್ಲಿಯವರೆವಿಗೂ ಅಚ್ಯುತಾರ್ಚನವು ಮೊದಲು ಮಾಡಿ ಎಂದರೆ 'ಓಂ ವಿಷ್ಣವೇಸ್ವಾಹಾ' ಎಂದು ಮೊದಲು ಮಾಡಿ ತಿಲದಿಂದ ಹೋಮವನ್ನೆಸಗುವುದು.

ತಾವದ್ಧೋಮಂ ಶಿಲ್ಪೈಃ ಕುರ್ಯಾದಚ್ಯುತಾರ್ಚನಪೂರ್ವಕಮ್ ।
ದೀನಾನಾಥಜನೇಭ್ಯಸ್ತು ಯಜಮಾನಃ ಪ್ರಯತ್ನತಃ ॥ ೨೦ ॥

ತಾವಚ್ಚ ಭೋಜನಂ ದದ್ಯಾದ್ಯಾವದ್ಧೋಮಂ ಸಮಾಚರೇತ್ ।
ಸಮಾಪ್ತೇ ದಕ್ಷಿಣಾಂ ದದ್ಯಾತ್ ಋತ್ವಿಗ್ಭ್ಯಃ ಶ್ರದ್ಧಯಾನ್ವಿತಃ ॥ ೨೧ ॥

ಯಥಾರ್ಹತಾ ನ ಲೋಭೇನ ತತಃ ಶಾಂತ್ಯುದಕೇನ ಚ ।
ಪ್ರೋಕ್ಷಯೇದ್ಗ್ರಾಮಮಧ್ಯೇ ತು ವ್ಯಾಧಿತಾಂಸ್ತು ವಿಶೇಷತಃ ॥ ೨೨ ॥

ಏವಂ ಕೃತೇ ತು ಹೋಮಸ್ಯ ಪುರಸ್ಯ ನಗರಸ್ಯ ಚ ।
ರಾಷ್ಟ್ರಸ್ಯ ಚ ಮಹಾಭಾಗಾ ರಾಜ್ಞೋ ಜನಪದಸ್ಯ ಚ ॥ ೨೩ ॥

೨೦-೨೨. ದೀನರೂ, ಅನಾಥರೂ ಆದ ಜನರಿಗೆ ಯಜಮಾನನು ಪ್ರಯತ್ನದಿಂದ ಹೋಮವೆಲ್ಲಿಯವರಿಗೂ ನಡೆಯುತ್ತಲಿರುವುದೋ, ಅಲ್ಲಿಯವರಿವಿಗೂ ಭೋಜನವನ್ನು ಮಾಡಿಸಬೇಕು. ಹೋಮವು ಮುಗಿಯಲು ಋತ್ವಿಕ್ಕುಗಳಾದ ಬ್ರಾಹ್ಮಣರಿಗೆ ಸಡ್ಡೆಯಿಂದ ಕೂಡಿ, ಅವರ ಯೋಗ್ಯತಾನುಸಾರ ಲೋಭವಿಲ್ಲದೆ ದಕ್ಷಿಣೆಯನ್ನು ಕೊಡುವುದು.

ಅನಂತರಲ್ಲಿ ಗ್ರಾಮ ಮಧ್ಯದಲ್ಲಿ ವ್ಯಾಧಿಗ್ರಸ್ತರಾದವರನ್ನು ವಿಶೇಷವಾಗಿ ಶಾಂತ್ಯುದಕದಿಂದ ಪ್ರೋಕ್ಷಿಸಬೇಕು

೨೩-೨೫. ಎಲೈ ಪುಣ್ಯಶಾಲಿಯೇ ಇಂತು ಹೋಮವನ್ನಾಚರಿಸಲು, ಅದರಿಂದ ಪಟ್ಟಣಗಳಿಗೂ, ನಗರಗಳಿಗೂ, ರಾಷ್ಟ್ರಗಳಿಗೂ, ದೇಶಗಳಿಗೂ ಯಾವಾಗಲೂ ಎಲ್ಲಾ ತೆರನಾದ ಬಾಧೆಗಳನ್ನೂ (ತೊಂದರೆಗಳನ್ನೂ) ಅಡಗಿಸುವ (ನಾಶಮಾಡುವ) ಸೌಖ್ಯವುಂಟಾಗುವುದು,' ಎಂದು ಶೌನಕಮುನಿಯು ದೇವತೆಗಳ ಗುರುವಿಗೆ ನಿರೂಪಿಸಿದನು.

ಸರ್ವಬಾಧಾ ಪ್ರಶಮನೀ ಶಾಂತಿರ್ಭವತಿ ಸರ್ವದಾ ।

॥ ಮಾರ್ಕಂಡೇಯ ಉವಾಚ ॥

ಇತ್ಯೇತಚ್ಛೌನಕಪ್ರೋಕ್ತಂ ಕಥಿತಂ ನೃಪನಂದನ ॥ ೨೪ ॥

ಗ್ರಾಮೇ ಗೃಹೇ ವಾ ಪುರಬಾಹ್ಯದೇಶೇ
ದ್ವಿಜೈರಯಂ ಯತ್ನಕೃತಃ ಪುರೋವಿಧಿಃ ।
ತತ್ರಾಪಿ ಶಾಂತಿರ್ಭವಿತಾ ನರಾಣಾಂ
ಗವಾಂ ಚ ಭೃತ್ಯೈಃ ಸಹ ಭೂಪತೇಶ್ಚ ॥ ೨೫ ॥

ಇತಿ ಶ್ರೀ ನರಸಿಂಹಪುರಾಣೇ ಲಕ್ಷಹೋಮ ವಿಧಿರ್ನಾಮ

ಪಂಚತ್ರಿಂಶೋಽಧ್ಯಾಯಃ

ಮಾರ್ಕಂಡೇಯ ಮುನಿಯು ಹೇಳುತ್ತಾನೆ :—'ಎಲೈ ರಾಯಕುವರನಾದ ಸಹಸ್ರಾನೀಕನೇ ! ಇಂತೀ ರಾಷ್ಟ್ರದಲ್ಲಿ ಆಚರಿಸಬೇಕಾದ, ಸೌಖ್ಯವನ್ನುಂಟು ಮಾಡುವ ಲಕ್ಷ ಹೋಮವೇ ಮೊದಲಾದುವುಗಳ ನಿಯಮವನ್ನು ಶ್ರೀ ಶೌನಕ ಮುನಿಯು ದೇವ ಗುರುವಿಗೆ ಅರುಹಿದುದನ್ನು ನಿನಗೆ ತಿಳಿಸಿದೆನು. ಈಗ ನಿನ್ನಿದಿರಿನಲ್ಲಿ ಹೇಳಿದ ಈ ಹೋಮ ವಿಧಿಯು ಗ್ರಾಮದಲ್ಲಿಯಾಗಲಿ, ಮನೆಯಲ್ಲಾಗಲಿ ಬ್ರಾಹ್ಮಣರಿಂದ ಶ್ರಮದಿಂದಲಾದರೂ ಆಚರಿಸಿದುದು ಅಲ್ಲಿಯೂ ನರರಿಗೂ, ಗೋವುಗಳಿಗೂ, ಭೃತ್ಯರಿಂದ ಕೂಡಿದ ರಾಯನಿಗೂ ಸೌಖ್ಯವನ್ನುಂಟುಮಾಡುವುದು,' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕನಿಗೆ ಹೇಳಿದುದನ್ನೇ ಶ್ರೀ ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಲಕ್ಷ ಹೋಮವಿಧಿಯೆಂಬ ಮೂವತ್ತೈದನೆಯ ಅಧ್ಯಾಯವು ಮುಗಿದುದು.

ಮೂವತ್ತೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ 'ಸಹಸ್ರಾನೀಕ ರಾಜನು ಮಾರ್ಕಂಡೇಯಮುನಿಯನ್ನು ಕುರಿತು ನಾನು ಶ್ರೀ ನರಸಿಂಹಮೂರ್ತಿಯ ಪೂಜಾಕ್ರಮ, ವಿಧಿ ಮತ್ತು ಫಲ ಇವುಗಳನ್ನು ಅರಿತೆನು ; ಅಂತೆಯೇ ಪೂಜೆಯನ್ನೆಸಗುವೆನು. ಲಕ್ಷ ಹೋಮಾದಿಗಳ ವಿಧಿಯನ್ನೂ ನಿರೂಪಿಸಬೇಕೆನ್ನಲು, ಮಾರ್ಕಂಡೇಯಮುನಿಯು ಹಿಂದೆ ಶೌನಕ ಮುನಿಯು ದೇವಗುರುವಾದ ಬೃಹಸ್ಪತಿಗೆ ಇದೇ ವಿಷಯವನ್ನು ಶಾಸ್ತ್ರದಲ್ಲಿ ಹೇಳಿರುವಂತೆ ನಿರೂಪಿಸಿದುದನ್ನೇ ಅನುವಾದ ರೂಪದಿಂದ ವಿವರಿಸಿದನು,' ಎಂದು ನಿರೂಪಿಸಿದೆ.

ಇಂತು ಮೂವತ್ತೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ವರ್ಣನಮ್

ಷಟ್ತ್ರಿಂಶೋಽಧ್ಯಾಯಃ

ಶ್ರೀ ಹರೇಃ ಪ್ರಾದುರ್ಭಾವಾನುಕ್ರಮಣಮ್.

॥ ಮಾರ್ಕಂಡೇಯ ಉವಾಚ ॥

ಅವತಾರಾನಹಂ ವಕ್ಷ್ಯೇ ದೇವದೇವಸ್ಯ ಚಕ್ರಿಣಃ ।
ತಾನ್ ಶೃಣುಷ್ವ ಮಹೀಪಾಲ ಪವಿತ್ರಾನ್ ಪಾಪನಾಶನಾನ್ ॥ ೧ ॥

ಮೂವತ್ತಾರನೆಯ ಅಧ್ಯಾಯವು

ಶ್ರೀ ಹರಿಯ ಪ್ರಾದುರ್ಭಾವಾನುಕ್ರಮಣವು.

೧. ಮಾರ್ಕಂಡೇಯಮುನಿಯು ಸಹಸ್ರಾನೀಕ ರಾಜನಿಗೆ ಇಂತು ನಿರೂಪಿಸುತ್ತಾನೆ:—‘ ಎಲೈ ಸಹಸ್ರಾನೀಕರಾಯನೇ! ಕೇಳು; ದೇವಶ್ರೇಷ್ಠನಾದ ಚಕ್ರಧಾರಿಯಾದ ಶ್ರೀಮನ್ನಾರಾಯಣನ ಸ್ವರೂಪಾಂಶಭೂತಗಳಾದ, ಅಪ್ರಾಕೃತವಾದುದರಿಂದ ಶುದ್ಧವಾದ, ಅರಿತುಕೊಳ್ಳುವವರದು ರಿತಗಳೆಲ್ಲವನ್ನೂ ಕಳೆಯುವ, ಮತ್ಸ್ಯಾದ್ಯವತಾರಗಳನ್ನು ಹೇಳುವೆನು;’ ಅವುಗಳನ್ನು ಕೇಳು.

ಯಥಾ ಮತ್ಸ್ಯೇನ ರೂಪೇಣ ದತ್ತಾ ವೇದಾಃ ಸ್ವಯಂಭುವೇ ।
ಮಧುಕೈಟಭೌ ಚ ನಿಧನಂ ಪ್ರಾಪಿತೌ ಚ ಮಹಾತ್ಮನಾ ॥ ೨ ॥

ಯಥಾ ಕೌರ್ಮೇಣ ರೂಪೇಣ ವಿಷ್ಣುನಾ ಮಂದರೋ ಧೃತಃ ।
ಯಥಾ ಪೃಥ್ವೀ ಧೃತಾ ರಾಜನ್ ವಾರಾಹೇಣ ಮಹಾತ್ಮನಾ ॥ ೩ ॥

ತೇನೈವ ನಿಧನಂ ಪ್ರಾಪ್ತೋ ಯಥಾ ರಾಜನ್ ಮಹಾಬಲಃ ।
ಹಿರಣ್ಯಾಕ್ಷೋ ಮಹಾವೀರ್ಯೋ ದಿತಿಪುತ್ರೋ ಮಹಾತನುಃ ॥ ೪ ॥

ಯಥಾ ಹಿರಣ್ಯಕಶಿಪುಸ್ತ್ರಿದಶಾನಾಮರಿಃ ಪುರಾ ।
ನರಸಿಂಹೇನ ದೇವೇನ ಪ್ರಾಪಿತೋ ನಿಧನಂ ನೃಪ ॥ ೫ ॥

---

೨. ಶ್ರೀಮನ್ನಾರಾಯಣನು ಮತ್ಸ್ಯ ರೂಪದಿಂದ ಮಧುಕೈಟಭರಿಂದ ಅಪಹೃತವಾದ ವೇದಗಳನ್ನು ಹಿಂದಕ್ಕೆ ತಂದು, ಚತುರ್ಮುಖ ಬ್ರಹ್ಮನಿಗೆ ಕೊಟ್ಟು, ಆಗ ಆ ಮಹಾತ್ಮನು ಮಧುಕೈಟಭರು ಯುದ್ಧಕ್ಕೆ ಬರಲು, ಅವರನ್ನೂ ಲೀಲೆಯಿಂದ ಹೇಗೆ ಸಂಹರಿಸಿದನು ?

೩. ಕೂರ್ಮ ರೂಪವನ್ನು ತಾಳಿದ ಶ್ರೀವಿಷ್ಣುವು ಮಂದರ ಪರ್ವತವನ್ನು ದೇವಾಸುರರು ಕ್ಷೀರ ಸಮುದ್ರವನ್ನು ಅಮೃತಕ್ಕಾಗಿ ಕಡೆಯುವಾಗ ಹೇಗೆ ಧರಿಸಿದನು? ವರಾಹಾವತಾರವನ್ನು ತಾಳಿದ ಮಹಾತ್ಮನಾದ ಶ್ರೀಹರಿಯು ಭೂಮಂಡಲವನ್ನುದ್ಧರಿಸಿ ಹೇಗೆ ರಕ್ಷಿಸಿದನು ?

೪. ಎಲೈ ರಾಜನೇ ! ಕೇಳು ; ' ಬ್ರಾಹ್ಮಣರು ಭೂಮಿಯಿದ್ದರೆ ದೇವತೆಗಳನ್ನುದ್ದೇಶಿಸಿ ಯಜ್ಞಗಳನ್ನಾಚರಿಸುವರು, ಎಂದು ಆ ಭೂಮಿಯನ್ನು ಚಾಪೆಯಂತೆ ಸುತ್ತಿ, ಹೊತ್ತುಕೊಂಡು ಸಮುದ್ರದಲ್ಲಿ ಮುಳಿಗಿಸಿ, ಪಾತಾಳಕ್ಕೆ ಹೋಗುತ್ತಲಿದ್ದ. ದಿತಿಯ ಪುತ್ರನೂ, ಮಹಾಪರಾಕ್ರಮಶಾಲಿಯೂ, ಮಹಾತನುವೂ ಆದ ಹಿರಣ್ಯಾಕ್ಷನನ್ನು ಸರ್ವ ಶಕ್ತನಾದ ಆ ವರಾಹಮೂರ್ತಿಯು ಹೇಗೆ ಸಂಹರಿಸಿದನು ?

೫. ಲೋಕದಲ್ಲಿ ತಾನೇ ದೇವರು, ಎಲ್ಲರೂ ತನ್ನನ್ನೇ ಪೂಜಿಸಬೇಕೆಂದು ಗರ್ವಿತನಾಗಿದ್ದ, ದೇವತೆಗಳ ಶತ್ರುವಾಗಿದ್ದ ಹಿರಣ್ಯಕಶಿಪುವು ಪೂರ್ವದಲ್ಲಿ ಶ್ರೀನರಸಿಂಹದೇವನಿಂದ ಹೇಗೆ ಸಂಹೃತನಾದನು ?

ಯಥಾ ಬದ್ಧೋ ಬಲಿಃ ಪೂರ್ವಂ ವಾಮನೇನ ಮಹಾತ್ಮನಾ ।
ಇಂದ್ರಸ್ತ್ರಿಭುವನಾಧ್ಯಕ್ಷಃ ಕೃತಸ್ತೇನ ನೃಪಾತ್ಮಜ ॥ ೬ ॥

ಸಗಣಾಶ್ಚಾದ್ಭುತಾ ರಾಜನ್ ರಾಕ್ಷಸಾ ದೇವಕಂಟಕಾಃ ।
ರಾಮೇಣ ಭೂತ್ವಾ ಚ ಯಥಾ ವಿಷ್ಣುನಾ ರಾವಣೋ ಹತಃ ॥ ೭ ॥

ಯಥಾ ಪರಶುರಾಮೇಣ ಕ್ಷತ್ರಮುತ್ಸಾದಿತಂ ಪುರಾ ।
ಬಲಭದ್ರೇಣ ರಾಮೇಣ ಯಥಾ ದೈತ್ಯಾಃ ಪುರಾ ಹತಾಃ ॥
ಯಥಾ ಕೃಷ್ಣೇನ ಕಂಸಾದ್ಯಾ ಹತಾ ದೈತ್ಯಾಃ ಸುರದ್ವಿಷಃ ॥ ೮ ॥

---

೬. ಪೂರ್ವದಲ್ಲಿ ಮಹಾತ್ಮನಾದ ವಾಮನನು ತ್ರಿಲೋಕಾಧಿಪತಿಯಾದ ಬಲಿಮಹಾರಾಜನನ್ನು ಮೂರು ಹೆಜ್ಜೆ ಭೂಮಿಯನ್ನು ಬೇಡಿ, ತ್ರಿವಿಕ್ರಮನಾಗಿ ಅವನನ್ನು ಈಗಲೂ ಪಾತಾಲದಲ್ಲಿ ಬಂಧನದಲ್ಲಿಟ್ಟು, ಶಚೀಪತಿಯಾದ ದೇವೇಂದ್ರನನ್ನೇ ತ್ರಿಲೋಕಾಧಿಪತಿಯನ್ನಾಗಿ ಹೇಗೆ ಮಾಡಿದನು?

೭. ಎಲೈ ರಾಯನೇ! ಕೇಳು; ಶ್ರೀವಿಷ್ಣುವು ದಾಶರಥಿರಾಮಚಂದ್ರನಾಗಿ ಅವತರಿಸಿ ಲೋಕ ಹಿಂಸಕನಾದ ರಾವಣನನ್ನು, ಅಂತೆಯೇ ಮಹಾ ಪರಾಕ್ರಮಶಾಲಿಗಳೂ, ವರ ದರ್ಪಿತರೂ ಆಗಿ ದೇವಕಂಟಕರಾಗಿದ್ದ ರಾಕ್ಷಸರ ತಂಡಗಳನ್ನೂ ಹೇಗೆ ಸಂಹರಿಸಿದನು?

೮. ಪೂರ್ವದಲ್ಲಿ ಅಸುರರು ಕ್ಷತ್ರಿಯರಾಗಿ ಹುಟ್ಟಿ, ಲೋಕ ಕಂಟಕರಾಗಿದ್ದವರನ್ನೆಲ್ಲಾ ಇಪ್ಪತ್ತೊಂದು ಸಲ ಭಗವಂತನು ಪರಶುರಾಮನಾಗಿ ಹೇಗೆ ನಿರ್ಮೂಲ ಮಾಡಿದನು? ಬಲರಾಮನಲ್ಲಿ ಶುಕ್ಲಕೇಶಾಂಶದಿಂದಾವಿಷ್ಟನಾಗಿ ಭಗವಂತನು ಅನೇಕ ದೈತ್ಯರನ್ನು ದ್ವಾಪರಾಂತ್ಯದಲ್ಲಿ ಹೇಗೆ ಸಂಹರಿಸಿದನು? ಸಾಕ್ಷಾನ್ನಾರಾಯಣನೇ ಸ್ವರೂಪಾಂಶಾವತಾರನಾದ ಶ್ರೀಕೃಷ್ಣ ರೂಪದಿಂದ ದೇವ ದ್ವೇಷಿಗಳಾದ ಕಂಸನೇ ಮೊದಲಾದ ಅನೇಕ ದಿತಿಯ ಪುತ್ರರನ್ನು ಹೇಗೆ ಸಂಹರಿಸಿದನು?

ಕಲೌ ಪ್ರಾಪ್ತೇ ಯಥಾ ಬುದ್ಧೋ ಭವೇನ್ನಾರಾಯಣಃ ಪ್ರಭುಃ ।
ಕಲ್ಕಿರೂಪಂ ಸಮಾಸ್ಥಾಯ ಯಥಾ ಮ್ಲೇಚ್ಛಾ ನಿಪಾತಿತಾಃ ।
ಸಮಾಪ್ತೇ ತು ಕಲೌ ಭೂಯಸ್ತಥಾ ತೇ ಕಥಯಾಮ್ಯಹಮ್ । ೯ ॥

ಹರೇರನಂತಸ್ಯ ಪರಾಕ್ರಮಂ ಯಃ
ಶೃಣೋತಿ ಭೂಪಾಲ ಸಮಾಹಿತಾತ್ಮಾ ।
ಮಯೋಚ್ಯಮಾನಂ ಸ ವಿಮುಚ್ಯ ಪಾಪಂ
ಪ್ರಯಾತಿ ವಿಷ್ಣೋಃ ಪದಮುತ್ಯುದಾರಮ್ ॥ ೧೦ ॥

ಇತಿ ಶ್ರೀ ನರಸಿಂಹಪುರಾಣೇ ಹರೇಃ ಪ್ರಾದುರ್ಭಾವಾನುಕ್ರಮಣೇ

ಷಟ್ತ್ರಿಂಶೋಽಧ್ಯಾಯಃ

---

೯. ದ್ವಾಪರಾಂತ್ಯದಲ್ಲಿ ಶ್ರೀಕೃಷ್ಣದ್ವೈಪಾಯನಾವತಾರಿಯಾದ ಶ್ರೀಮನ್ನಾರಾಯಣನಿಂದುಪದಿಷ್ಟವಾದ ತತ್ವಜ್ಞಾನವನ್ನು ಅಯೋಗ್ಯಾಧಿಕಾರಿಗಳಿಂದ ತಿರೋಹಿತವಾಗುವಂತೆಸಗಲು ಕಲಿಯುಗವು ಮೊದಲಾಗಲು, ಪ್ರಭುವಾದ ಶ್ರೀಮನ್ನಾರಾಯಣನು ಬುದ್ಧನಾಗಿ ಅವತರಿಸಿ, ಹೇಗೆ ತತ್ತ್ವೋಪದೇಶ ಮಾಡಿದನು ? ಯೋಗ್ಯರಾದವರು ಆ ಉಪದೇಶವನ್ನು ಸರಿಯಾಗಿ ಗ್ರಹಣ ಮಾಡಿದರು ; ಅಯೋಗ್ಯರು ಅನ್ಯಥಾಗ್ರಹಿಸಿದರು. ತರುವಾಯ ಕಲಿಯುಗದ ಕೊನೆಯಲ್ಲಿ ಮತ್ತೂ ಭಗವಂತನೇ ಕಲ್ಕಿರೂಪವನ್ನು ಅಭಿವ್ಯಕ್ತೀಕರಿಸಿ, ಮ್ಲೇಚ್ಛಾದಿಗಳನ್ನು ಹೇಗೆ ಧ್ವಂಸ ಮಾಡಿದನು ?' ಎಂಬಿವನ್ನು ನಿನಗೆ ಅರುಹುವೆನು.

೧೦. ಎಲೈ ಭೂಪಾಲನೇ ! ಕೇಳು ; ಆವ ಅಧಿಕಾರಿಯು ನಾನು ಹೇಳುತ್ತಿರುವ ನಿತ್ಯನಾದ ಶ್ರೀ ಹರಿಯ ನಿರತಿಶಯ ಸಾಮರ್ಥ್ಯವನ್ನು ಶಾಂತವಾದ ಮನವುಳ್ಳವನಾಗಿ ಕೇಳುತ್ತಾನೆಯೋ, ಅವನು ಪಾಪದಿಂದ ಮುಕ್ತನಾಗಿ, ಅತಿ ಶ್ರೇಷ್ಠವಾದ ಶ್ರೀ ಮಹಾವಿಷ್ಣುವಿನ ಲೋಕವನ್ನೈದುವನು,' ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಜನಿಗೆ ಅರುಹಿದುದನ್ನು ಶ್ರೀ ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಶ್ರೀ ಹರಿಯ ಪ್ರಾದುರ್ಭಾವಾನು
ಕ್ರಮಣದಲ್ಲಿ ಮೂವತ್ತಾರನೆಯ ಅಧ್ಯಾಯವು ಮುಗಿದುದು.

ಮೂವತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, 'ಶ್ರೀ ಹರಿಯು ಲೋಕ ಕಲ್ಯಾಣಕ್ಕಾಗಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಭಾರ್ಗವರಾಮ, ದಾಶರಥಿರಾಮ, (ಬಲರಾಮ) ಕೃಷ್ಣ, ಬುದ್ಧ ಮತ್ತು ಕಲ್ಕಿ ಈ ಪ್ರಾದುರ್ಭಾವಗಳನ್ನು ಸ್ವರೂಪಾಂಶದಿಂದ ಅಭಿವ್ಯಕ್ತೀಕರಿಸಿ, ದುಷ್ಟನಿಗ್ರಹ ಶಿಷ್ಟಪರಿಪಾಲನ ಪೂರ್ವಕವಾಗಿ ಧರ್ಮವನು ಸ್ಥಾಪಿಸಿದನು ; ಈ ಪ್ರಾದುರ್ಭಾವಗಳನ್ನು ತಾಳಿದ ಶ್ರೀ ನರಹರಿಯ ಮಹಾಮಹಿಮೆಯನ್ನು ಕೇಳಿದವರಿಗೆ ಶ್ರೀಹರಿ ಲೋಕ ಪ್ರಾಪ್ತಿಯಾಗುವುದು,' ಎಂದು ನಿರೂಪಿಸಿದೆ.

ಇಂತು ಮೂವತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಮತ್ಸ್ಯಪ್ರಾದುರ್ಭಾವಃ

॥ ಮಾರ್ಕಂಡೇಯ ಉವಾಚ ॥

ನಾನಾತ್ವಾದವತಾರಾಣಾಮಚ್ಯುತಸ್ಯ ಮಹಾತ್ಮನಃ ।
ನ ಶಕ್ಯಂ ವಿಸ್ತರಾದ್ವಕ್ತುಂ ತಾನ್ ಬ್ರವೀಮಿ ಸಮಾಸತಃ ॥ ೧ ॥

ಪುರಾ ಕಿಲ ಜಗತ್ಸ್ರಷ್ಟಾ ಭಗವಾನ್ ಪುರುಷೋತ್ತಮಃ ।
ಅನಂತ ಭೋಗಶಯನೇ ಯೋಗನಿದ್ರಾಂ ಸಮಾಗತಃ ॥ ೨ ॥

ಮೂವತ್ತೇಳನೆಯ ಅಧ್ಯಾಯವು. ॥ ೩೭ ॥
ಮತ್ಸ್ಯಾವತಾರವು.

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ನಿರೂಪಿಸುತ್ತಾನೆ; —'ಎಲೈ ಸಹಸ್ರಾನೀಕರಾಯನೇ! ಕೇಳು; ಮಹಾತ್ಮನೂ, ನಾಶರಹಿತನೂ ಆದ ಶ್ರೀ ಮಹಾವಿಷ್ಣುವಿನ ಸ್ವರೂಪಾಂಶಾವತಾರಗಳು ನಿತ್ಯವಾಗಿಯೂ, ಅನಂತವಾಗಿಯೂ ಇರುವುದರಿಂದ ಅವೆಲ್ಲವನ್ನೂ ಬಿಸ್ತರದಿಂದ ಹೇಳಲು ಸಾಧ್ಯವಿಲ್ಲ. ಆದುದರಿಂದ ಅವನ್ನು ಒಟ್ಟಾಗಿ ಸಂಗ್ರಹದಿಂದ ಹೇಳುತ್ತೇನೆ.

೨. ಹಿಂದೆ ಮಹಾ ಪ್ರಲಯದಲ್ಲಿ ಪುರುಷೋತ್ತಮನೂ, ಭಗವಂತನೂ, ಚರಾಚರಾತ್ಮಗಳಾದ ಸಕಲ ಪ್ರಪಂಚಕ್ಕೂ ಮುಖ್ಯ ಸೃಷ್ಟಿಕರ್ತೃವೂ ಆದ ಶ್ರೀ ಮನ್ನಾರಾಯಣನು ಆದಿಶೇಷನ ಒಡಲೆಂಬ ಹಾಸಿನಲ್ಲಿ ತನ್ನ ಇಚ್ಛೆಯಿಂದಲೇ ವಿಲಾಸರೂಪವಾದ ಲೋಕ ವ್ಯಾಪಾರದಿಂದ ಸುಮ್ಮನಿರುವುದೆಂಬ ಯೋಗನಿದ್ರೆಯನ್ನೈದಿದನು.

ಅಥ ತಸ್ಯ ಪ್ರಸುಪ್ತಸ್ಯ ದೇವದೇವಸ್ಯ ಶಾರ್ಙ್ಗಿಣಃ ।
ಶ್ರೋತ್ರಾಭ್ಯಾಮಪತತ್ತೋಯೇ ಸ್ವೇದಬಿಂದುದ್ವಯಂ ನೃಪ ॥ ೩ ॥

ಮಧು ಕೈಟಭನಾಮಾನೌ ತಸ್ಮಾಜ್ಜಾತೌ ಮಹಾಬಲೌ ।
ಮಹಾಕಾಯೌ ಮಹಾವೀರ್ಯೌ ಮಹಾಬಲಪರಾಕ್ರಮೌ ॥ ೪ ॥

ಅಚ್ಯುತಸ್ಯ ಪ್ರಸುಪ್ತಸ್ಯ ಮಹತ್ಪದ್ಮಮಜಾಯತ ।
ನಾಭಿಮಧ್ಯೇ ನೃಪಶ್ರೇಷ್ಠ ತಸ್ಮಿನ್ ಬ್ರಹ್ಮಾಭ್ಯಜಾಯತ ॥ ೫ ॥

ತಚ್ಚೋಕ್ತೋ ವಿಷ್ಣುನಾ ರಾಜನ್ ಪ್ರಜಾಃ ಸೃಜ ಮಹಾಮತೇ ।
ತಥೇತ್ಯುಕ್ತ್ವಾ ಜಗನ್ನಾಥಂ ಬ್ರಹ್ಮಾಪಿ ಕಮಲೋದ್ಭವಃ ॥ ೬ ॥

---

೩. ಅಂತು ಯೋಗನಿದ್ರೆಯಲ್ಲಿ ತೊಡಗಿದ ದೇವಶ್ರೇಷ್ಠನೂ, ಶಾರ್ಙ್ಗವೆಂಬ ಧನುರ್ಧಾರಿಯೂ ಆದ ಶ್ರೀಹರಿಯ ಕಿವಿಗಳಿಂದ ಎರಡು ಬೆವರ್ಹನಿಗಳು ಕ್ಷೀರ ಸಮುದ್ರದಲ್ಲಿ ಬಿದ್ದುವು.

೪. ಆ ಬೆವರ್ಹನಿಗಳಿಂದ ಮಹಾ ಬಲಶಾಲಿಗಳೂ, ಪೇರೊಡಲಿನವರೂ, ಮಹಾ ಪರಾಕ್ರಮವುಳ್ಳವರೂ, ಮಹಾ ಶೌರ್ಯಸಾಹಸವುಳ್ಳವರೂ ಆದ ಮಧು ಕೈಟಭ, ಎಂಬ ಹೆಸರುಗಳ ಇಬ್ಬರು ರಕ್ಕಸರು ಜನಿಸಿದರು.

೫. ಎಲೈ ಮಹಾರಾಜನೇ! ಅನಂತರದಲ್ಲಿ ಅಂತು ಪವಡಿಸಿದ್ದ ಅಚ್ಯುತನ ಹೊಕ್ಕುಳಿನ ನಡುವೆ ಒಂದು ದೊಡ್ಡ ತಾವರೆಯು ಹುಟ್ಟಿತು. ಅದರಲ್ಲಿ ನಾಲ್ಮೊಗಗಳುಳ್ಳ ಬ್ರಹ್ಮನು ಜನಿಸಿದನು.

೬–೭. ಎಲೈ ರಾಯನೇ! ಕೇಳು; ಶ್ರೀ ಮಹಾವಿಷ್ಣುವು ಆ ಬ್ರಹ್ಮನಿಗೆ ‘ಎಲೈ ಮಹಾ ಮತಿಯಾದ ಬ್ರಹ್ಮನೇ! ನೀನು ಪ್ರಜೆಗಳನ್ನು ಸೃಷ್ಟಿಸು,’ ಎಂದು ಹೇಳಲು, ಆ ಪದ್ಮೋದ್ಭವನಾದ ಬ್ರಹ್ಮನೂ ಜಗನ್ನಾಥನಾದ ಶ್ರೀ ಹರಿಗೆ ‘ಅಂತೆಯೇ

ವೇದಶಾಸ್ತ್ರವಶಾದ್ಯಾವತ್ಪ್ರಜಾಃ ಸ್ರಷ್ಟುಂ ಸಮುದ್ಯತಃ ।
ತಾವತ್ತತ್ರ ಸಮಯಾತೌ ತಾವುಭೌ ಮಧುಕೈಟಭೌ ॥ ೭ ॥

ಆಗತ್ಯ ವೇದಶಾಸ್ತ್ರಾರ್ಥವಿಜ್ಞಾನಂ ಬ್ರಹ್ಮಣಃ ಕ್ಷಣಾತ್ ।
ಅಪಕೃತ್ಯ ಗತೌ ಘೋರೌ ದಾನವೌ ಬಲದರ್ಪಿತೌ ॥ ೮ ॥

ತತಃ ಪದ್ಮೋದ್ಭವೋ ರಾಜನ್ ಜ್ಞಾನಹೀನೋಽಭವತ್ ಕ್ಷಣಾತ್ ।
ದುಃಖಿತಶ್ಚಿಂತಯಾಮಾಸ ಕಥಂ ಸ್ರಕ್ಷ್ಯಾಮಿ ವೈ ಪ್ರಜಾಃ ॥ ೯ ॥

ಚೋದಿತಸ್ತ್ವಂ ಸೃಜಸ್ವೇತಿ ಪ್ರಜಾ ದೇವೇನ ತತ್ಕಥಮ್ ।
ಸ್ರಕ್ಷ್ಯೇಽಹಂ ಜ್ಞಾನಹೀನಸ್ತು ಅಹೋ ಕಷ್ಟಮುಪಸ್ಥಿತಮ್ ॥ ೧೦ ॥

ಇತಿ ಸಂಚಿಂತ್ಯ ದುಃಖಾರ್ತೋ ಬ್ರಹ್ಮಾ ಲೋಕಪಿತಾಮಹಃ ।
ಯತ್ನತೋ ವೇದಶಾಸ್ತ್ರಾಣಿ ಸ್ಮರನ್ನಪಿ ನ ದೃಷ್ಟವಾನ್ ॥ ೧೧ ॥

ಆಗಲಿ,' ಎಂದು ಬಿನ್ನವಿಸಿ, ವೇದ ಶಾಸ್ತ್ರಗಳಲ್ಲಿ ಹೇಳಿರುವಂತೆ ಯಾವಾಗ ಪ್ರಜೆಗಳನ್ನು ಸೃಷ್ಟಿಸಲು ತೊಡಗಿದನೋ, ಅಷ್ಟರಲ್ಲಿಯೇ ಅಲ್ಲಿಗೆ ಆ ಮಧು ಕೈಟಭರೀರ್ವರೂ ಬಂದರು.

೮. ಬಹು ಭಯಂಕರರೂ, ಆರ್ಪಿನಿಂದ ಸೊಕ್ಕಿನವರೂ ಆದ ಆ ರಕ್ಕಸರು ಅಲ್ಲಿಗೆ ಬಂದವರೇ ಒಂದು ಚಣದಿಂದಲೇ ಬ್ರಹ್ಮನಿಂದ ವೇದಶಾಸ್ತ್ರಾರ್ಥ ರೂಪವಾದ ಜ್ಞಾನವನ್ನಪಹರಿಸಿಕೊಂಡು ಹೊರಟು ಹೋದರು.

೯. ಅನಂತರದಲ್ಲಿ ಎಲೈ ರಾಜನೇ! ಒಂದು ಕ್ಷಣದೊಳಗೇ ಆ ಸರೋಜಭವನು ವೇದಶಾಸ್ತ್ರಾರ್ಥಜ್ಞಾನ ಶೂನ್ಯನಾಗಿ, ದುಮ್ಮಾನದಿಂದ "ಪ್ರಜೆಗಳನ್ನು ಎಂತು ಸೃಷ್ಟಿಸಲಿ?" ಎಂದು ಚಿಂತಿಸತೊಡಗಿದನು.

೧೦-೧೧. 'ಭಗವಂತನು ನನಗೆ ಪ್ರಜೆಗಳನ್ನು ಸೃಷ್ಟಿಸೆಂದು ಪ್ರೇರಿಸಿದನು; ಅರಿವಿಲ್ಲದ ನಾನು ಪ್ರಜೆಗಳನ್ನು ಸೃಷ್ಟಿಸುವುದು ಹೇಗೆ? ಅಯ್ಯೋ! ಕಷ್ಟವೊದಗಿತು' ಎಂದು ಲೋಕ ಪಿತಾಮಹನಾದ ಬ್ರಹ್ಮನು ದುಃಖದಿಂದ ಪೀಡಿತನಾಗಿ ಯೋಚಿಸಿ, ಪ್ರಯತ್ನಪೂರ್ವಕವಾಗಿ ವೇದ ಶಾಸ್ತ್ರಾರ್ಥಗಳನ್ನು ನೆನೆಸಿಕೊಂಡರೂ, ಅವು ಅವನ ಬುದ್ಧಿಗೆ ಗೋಚರವಾಗಲಿಲ್ಲವು.

ತತೋ ವಿಷಣ್ಣಚಿತ್ತಸ್ತು ತಂ ದೇವಂ ಪುರುಷೋತ್ತಮಮ್ ।
ಏಕಾಗ್ರಮನಸಾ ಸಮ್ಯಕ್ ಶಾಸ್ತ್ರೇಣ ಸ್ತೋತುಮಾರಭತ್ ॥ ೧೨ ॥

॥ ಬ್ರಹ್ಮೋವಾಚ ॥

ಓಂ ನಮೋ ವೇದನಿಧಯೇ ಶಾಸ್ತ್ರಾಣಾಂ ನಿಧಯೇ ನಮಃ ।
ವಿಜ್ಞಾನನಿಧಯೇ ನಿತ್ಯಂ ಕರ್ಮಣಾಂ ನಿಧಯೇ ನಮಃ ॥ ೧೩ ॥

ವಿದ್ಯಾಧಾರಾಯ ದೇವಾಯ ವಾಗೀಶಾಯ ನಮೋನಮಃ ।
ಅಚಿಂತ್ಯಾಯ ನಮೋ ನಿತ್ಯಂ ಸರ್ವಜ್ಞಾಯ ನಮೋನಮಃ ॥ ೧೪ ॥

---

೧೨. ಬಳಿಕ ಅಬ್ಜಯೋನಿಯು ಖಿನ್ನಮನಸ್ಕನಾಗಿ ಕ್ಷರಾಕ್ಷರವಿಲಕ್ಷಣನೂ, ಕ್ರೀಡಾದಿಗುಣವಿಶಿಷ್ಟನೂ ಆದ ಶ್ರೀಮನ್ನಾರಾಯಣನನ್ನು ಅವನಲ್ಲಿ ನಟ್ಟ ಮನಸ್ಸಿನಿಂದ, ಶಾಸ್ತ್ರದಲ್ಲಿ ಹೇಳಿರುವ ರೀತಿಯಿಂದ ಚೆನ್ನಾಗಿ ಸ್ತುತಿಸಲು ಮೊದಲು ಮಾಡಿದನು.

೧೩. ಬ್ರಹ್ಮನು ಹೇಳುತ್ತಾನೆ :—"ಋಗಾದಿ ಸಕಲ ವೇದಗಳಿಗೂ ಆಶ್ರಯನೂ, ಸಕಲ ಜಗದ್ರಕ್ಷಕನೂ, ಅಪ್ರಾಕೃತಾನಂತ ಕಲ್ಯಾಣಗುಣಪೂರ್ಣನೂ ಆದ ಭಗವಂತನಿಗೆ ನಮಸ್ಕಾರವು ; ಸರ್ವಜ್ಞನಾದುದರಿಂದಲೂ, ಪೂರ್ಣಜ್ಞಾನಸ್ವರೂಪನಾದುದರಿಂದಲೂ ಸಕಲ ಶಾಸ್ತ್ರಗಳ ನಿಧಿಯಾದವನಿಗೆ ನಮಸ್ಕಾರವು ; ನಿಚ್ಚವೂ ಸಕಲ ಕರ್ಮ ಪ್ರೇರಕನೂ, ನಿಯಾಮಕನೂ, ಫಲದಾತನೂ ಆದ ಭಗವಂತನಿಗೆ ವಂದನೆಯು.

೧೪. ಸಕಲ ವೇದಗಳನ್ನು ಧರಿಸಿರುವವನೂ, ಕ್ರೀಡಾದಿಗುಣವಿಶಿಷ್ಟನೂ, ಸಕಲ ವಾಙ್ನಿಯಾಮಕನೂ ಆದ ಭಗವಂತನಿಗೆ ಆದರದಿಂದ ನಮಿಸುವೆನು ; ಸಂಪೂರ್ಣವಾಗಿ ರಮಾಬ್ರಹ್ಮಾದಿಗಳಿಂದಲೂ ತಿಳಿಯಲಾಗದವನಿಗೆ ನಮಸ್ಕಾರವು ; ನಿತ್ಯದಲ್ಲಿಯೂ ಆಲೋಚನೆಯಿಲ್ಲದೇ ಸಕಲ ವಸ್ತು ವಿಷಯಕ ಜ್ಞಾನವುಳ್ಳ ಶ್ರೀಮನ್ನಾರಾಯಣನಿಗೆ ನಮಸ್ಕಾರವು ನಮಸ್ಕಾರವು.

ಅಮೂರ್ತಿಸ್ತ್ವಂ ಮಹಾಬಾಹೋ ಯಜ್ಞಮೂರ್ತಿರಧೋಕ್ಷಜ ।

ಸಾಮ್ನಾಂ ಮೂರ್ತಿಸ್ತ್ವಮೇವಾದ್ಯ ಸರ್ವದಾ *ಸರ್ವರೂಪವಾನ್ ॥ ೧೫ ॥

ಸರ್ವಜ್ಞಾನಮಯೋಽಸಿ ತ್ವಂ ಹೃದಿ ಜ್ಞಾನಮಯೋಽಚ್ಯುತ ।

ಸರ್ವಜ್ಞಾನಂ ದೇಹಿ ಮೇ ತ್ವಂ ದೇವದೇವ ನಮೋ ನಮಃ ॥ ೧೬ ॥

---

೧೫. ಎಲೈ ಭಗವಂತನೇ! ನೀನು ಪ್ರಾಕೃತವಾದ ಆಕಾರ ರಹಿತನು; ಎಲೈ ಮಹಾಬಾಹುವೇ! ಸರ್ವಶಕ್ತನೇ! ನೀನು ಇಂದ್ರಿಯಾದ್ಯಪೇಕ್ಷೆಯಿಲ್ಲದೆಯೇ ಎಲ್ಲವನ್ನೂ ಅರಿಯುವನಾದುದರಿಂದ ಅಧೋಕ್ಷಜನೇ! ಎಲ್ಲರಿಂದ ಸೇವೆಗೊಂಬ ಯಜ್ಞ ರೂಪವಾದ ಆಕಾರವುಳ್ಳವನು; ರಥಂತರಾದಿ ಸಾಮಗಳಿಂದ ಕೊಂಡಾಡಿಸಿ ಕೊಳ್ಳುವ ದಿವ್ಯ ಸ್ವರೂಪವುಳ್ಳವನು; ನೀನೇ ಈಗಲೂ, ಯಾವಾಗಲೂ ಸರ್ವ ವಸ್ತುಗಳಲ್ಲಿ ವ್ಯಾಪಿಸಿ ನಿಯಾಮಕನಾಗಿರುವುದರಿಂದ ಸರ್ವರೂಪನೆನಿಸುವೆ.

೧೬. ಎಲೈ ಅಚ್ಯುತನೇ! ನೀನು ಸರ್ವಜ್ಞಾನಪೂರ್ಣನಾಗಿರುವೆ; ನೀನು ಸರ್ವರ ಹೃದಯದಲ್ಲಿದ್ದು ಸರ್ವರಿಗೆ ಜ್ಞಾನದಾತೃವಾಗಿ ಜ್ಞಾನ ನಿಯಾಮಕನಾಗಿರುವೆ; ಎಲೈ ದೇವ ಶ್ರೇಷ್ಠನೇ! ನೀನು ಪ್ರಜಾಸೃಷ್ಟಿಯ ಕಾರ್ಯವನ್ನೆಸಗಲು ನನಗೆ ಆಲೋಚನೆಯಿಲ್ಲದೆ ನೀನು ಮತ್ತು ರಮಾದೇವಿ ಇವರನ್ನುಳಿದ ಇತರ ವಿಷಯಕವಾದ ಸರ್ವಜ್ಞಾನ ವುಂಟಾಗುವಂತೆ ಅನುಗ್ರಹಿಸು; ನಿನಗೆ ಅನಂತನಮಸ್ಕಾರವು,' ಎಂದು ಚತುರ್ಮುಖನು ಶ್ರೀಹರಿಯನ್ನು ಸ್ತುತಿಸಿದನು.

---

*' ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ '

' ಓಂ ತದಧೀನತ್ವಾದರ್ಥವತ್ ಓಂ ' ಸ್ಮೃತಿಃ ಸೂತ್ರಂ ಚ ।

॥ ಮಾರ್ಕಂಡೇಯ ಉವಾಚ ॥

ಇತ್ಥಂ ಸ್ತುತಸ್ತದಾ ತೇನ ಶಂಖಚಕ್ರಗದಾಧರಃ ।
ಬ್ರಹ್ಮಾಣಮಾಹ ದೇವೇಶೋ ದಾಸ್ಯೇ ತೇ ಜ್ಞಾನಮುತ್ತಮಮ್ ॥ ೧೭ ॥

ಇತ್ಯುಕ್ತ್ವಾ ತು ತದಾ ವಿಷ್ಣುಶ್ಚಿಂತಯಾಮಾಸ ಪಾರ್ಥಿವ ।
ಕೇನಾಸ್ಯ ನೀತಂ ವಿಜ್ಞಾನಂ ಕೇನ ರೂಪೇಣ ಚಾದಧೇ ॥ ೧೮ ॥

ಮಧುಕೈಟಭಕೃತಂ ಸರ್ವಂ ಇತಿ ಜ್ಞಾತ್ವಾ ಜನಾರ್ದನಃ ।
ಮಾತ್ಸ್ಯಂ ರೂಪಂ ಸಮಾಸ್ಥಾಯ ಬಹುಯೋಜನಮಾಯತಮ್ ।
ಬಹುಯೋಜನವಿಸ್ತೀರ್ಣಂ ಸರ್ವಜ್ಞಾನಮಯಂ ನೃಪ ॥ ೧೯ ॥

---

೧೭. ಶ್ರೀ ಮಾರ್ಕಂಡೇಯಮುನಿಯು ಹೇಳುತ್ತಾನೆ:—' ಇಂತು ಬ್ರಹ್ಮ ನಿಂದ ಸ್ತುತನಾದ ಶಂಖಚಕ್ರಗದಾಪದ್ಮಧಾರಿಯಾದ, ದೇವೋತ್ತಮನಾದ ಶ್ರೀಮನ್ನಾರಾಯಣನು ಬ್ರಹ್ಮನಿಗೆ 'ಎಲೈ ಚತುರ್ಮುಖನೇ! ನಿನಗೆ ಉತ್ತಮ ವಾದ ಜ್ಞಾನವನ್ನೀಯುವೆನು,' ಎಂದು ಹೇಳಿದನು.

೧೮. ಎಲೈ ದೊರೆಯೇ! ಕೇಳು; ಇಂತು ವಿಷ್ಣುವು ಬ್ರಹ್ಮನಿಗೆ ಹೇಳಿ 'ಈ ಬ್ರಹ್ಮನ ಜ್ಞಾನವನ್ನು ಅಪಹರಿಸಿದವನು ಯಾವನು? ಯಾವ ರೂಪದಿಂದ ಇದ್ದಾನೆ?' ಎಂದು ಯೋಚಿಸಿದನು.

೧೯. ಎಲೈ ರಾಯನೇ! ಆಗ ದುಷ್ಟಜನ ಸಂಹಾರಕನಾದ ಶ್ರೀಜನಾರ್ದ ನನು ಆ ಜ್ಞಾನಾಪಹಾರ ಕಾರ್ಯವೆಲ್ಲವನ್ನೂ ಮಧು ಕೈಟಭರೆಂಬ ರಕ್ಕಸರು ಮಾಡಿದ ರೆಂದು ತಿಳಿದು, ಅನಂತ ಯೋಜನಗಳಗಲವೂ, ಉದ್ದವೂ ಉಳ್ಳ ಸರ್ವಜ್ಞಾನ ಪೂರ್ಣವೂ, ನಿತ್ಯವೂ, ಅಪ್ರಾಕೃತವೂ, ಮಹಾವಿಷ್ಣುವಿನ ಸ್ವರೂಪಾಂಶಭೂತವೂ ಆದ ಮೀನದ ರೂಪವನ್ನು ತನ್ನ ಇಚ್ಛೆಯಿಂದಲೇ ಅಭಿವ್ಯಕ್ತಿ ಮಾಡಿದನು.

ಸ ಪ್ರವಿಶ್ಯ ಜಲಂ ತೂರ್ಣಂ ಕ್ಷೋಭಯಾಮಾಸ ತಂ ಹರಿಃ ।
ಪ್ರವಿಶ್ಯ ಚ ಸ ಪಾತಾಲಂ ದೃಷ್ಟವಾನ್ ಮಧುಕೈಟಭೌ ॥ ೨೦ ॥

ತೌ ಮೋಹಯಿತ್ವಾ ತುಮುಲಂ ತಜ್ಜ್ಞಾನಂ ಜಗೃಹೇ ಹರಿಃ ।
ವೇದಶಾಸ್ತ್ರಾಣಿ ಮುನಿಭಿಃ ಸಂಸ್ತುತೋ ಮಧುಸೂದನಃ ॥ ೨೧ ॥

ಆನೀಯ ಬ್ರಹ್ಮಣೇ ದತ್ವಾ ತ್ಯಕ್ತ್ವಾ ತನ್ಮಾತ್ಸ್ಯಕಂ ವಪುಃ ।
ಜಗದ್ಧಿತಾಯ ಸ ಪುನರ್ಯೋಗನಿದ್ರಾವಶಂ ಗತಃ ॥ ೨೨ ॥

---

೨೦. ಆ ಮೀನ ರೂಪನಾದ ಶ್ರೀಹರಿಯು ಸಮುದ್ರದ ಜಲವನ್ನು ಹೊಕ್ಕು, ಬೇಗನೆ ಅದನ್ನು ಉಲ್ಲೋಲಕಲ್ಲೋಲವನ್ನಾಗಿಸಿದನು. ತರುವಾಯ ಆ ಮತ್ಸ್ಯನು ಪಾತಾಲವನ್ನು ಹೊಕ್ಕು, ಅಲ್ಲಿ ಬ್ರಹ್ಮನ ಜ್ಞಾನಾಪಹಾರಿಗಳಾದ ಆ ಮಧು ಕೈಟಭರನ್ನು ಕಂಡನು.

೨೧. ಆಗ ಶ್ರೀಹರಿಯು ಆ ರಕ್ಕಸರಿಗೆ ತನ್ನ ಮಾಯೆಯಿಂದ ಮೋಹಗೊಳಿಸಿ, ರಾಶೀಭೂತವಾದ, ಆ ಬ್ರಹ್ಮನ ಜ್ಞಾನವಾದ ವೇದ ಶಾಸ್ತ್ರಗಳನ್ನು ತೆಗೆದುಕೊಂಡನು. ಇದನ್ನು ತಿಳಿದು ಜ್ಞಾನಿಗಳು ಮಧುಸೂದನನನ್ನು ಕೊಂಡಾಡಿದರು.

೨೨. ಎಲೈ ನೃಪನೇ! ಕೇಳು; ಮತ್ಸ್ಯಾವತಾರಿಯಾದ ಶ್ರೀಹರಿಯು ವೇದ ಶಾಸ್ತ್ರಾರ್ಥರೂಪವಾದ ಜ್ಞಾನವನ್ನು ಆ ಮಧು ಕೈಟಭರಿಂದ ತಂದು ಚತುರ್ಮುಖನಿಗಿತ್ತು, ಆ ಮತ್ಸ್ಯ ರೂಪವನ್ನು ಮೂಲರೂಪದಲ್ಲಿಯೇ ತನ್ನ ಇಚ್ಛೆಯಿಂದ ಸೇರಿಸಿಬಿಟ್ಟು, ಮತ್ತೂ ಲೋಕ ಕಲ್ಯಾಣಕ್ಕಾಗಿ ಯೋಗನಿದ್ರಾವಶನಾದನು.

ತತಃ ಪ್ರಬುದ್ಧೌ ಸಂಕ್ರುದ್ಧೌ ತಾವುಭೌ ಮಧುಕೈಟಭೌ ।
ಆಗತ್ಯ ದದೃಶಾತೇ ತು ಶಯಾನಂ ದೇವಮವ್ಯಯಂ ॥ ೨೩ ॥

ಅಯಂ ಸ ಪುರುಷೋ ಧೂರ್ತ ಆವಾಂ ಸಂಮೋಹ್ಯ ಮಾಯಯಾ ।
ಆನೀಯ ವೇದಶಾಸ್ತ್ರಾಣಿ ದತ್ವಾ ಶೇತೇಽತ್ರ ಸಾಧುವತ್ ॥ ೨೪ ॥

ಇತ್ಯುಕ್ತ್ವಾ ತೌ ಮಹಾಘೋರೌ ದಾನವೌ ಮಧುಕೈಟಭೌ ।
ಬೋಧಯಾಮಾಸತುಸ್ತೂರ್ಣಂ ಶಯಾನಂ ಕೇಶವಂ ನೃಪ ॥ ೨೫ ॥

ಯುದ್ಧಾರ್ಥಮಾಗತಾವತ್ರ ತ್ವಯಾ ಸಹ ಮಹಾಮತೇ ।
ಆವಯೋರ್ದೇಹಿ ಸಂಗ್ರಾಮಂ ಯುಧ್ಯಸ್ವೋತ್ಥಾಯ ಸಾಂಪ್ರತಮ್ ॥ ೨೬ ॥

---

೨೩. ಬಳಿಕ ಆ ಮದು ಕೈಟಭರೀರ್ವರೂ ಎಚ್ಚೆತ್ತು, ಹರಿಯು ತಮ್ಮನ್ನು ಮೋಹಗೊಳಿಸಿ, ಆ ಶಾಸ್ತ್ರಜ್ಞಾನವನ್ನೊಯ್ದುದಕ್ಕೆ ಕನಲ್ದು, ಕ್ಷೀರ ಸಮುದ್ರಕ್ಕೆ ಬಂದು ಅನಂತನಾದ ಶ್ರೀಮನ್ನಾರಾಯಣನು ಯೋಗನಿದ್ರಾಸಕ್ತನಾಗಿರುವುದನ್ನು ಕಂಡರು.

೨೪. 'ಇಲ್ಲಿ ಸಾಧುವಂತೆ ಮಲಗಿರುವವನೇ ನಮ್ಮಿರ್ವರನ್ನೂ ತನ್ನ ಮಾಯೆಯಿಂದ ಮೋಹಗೊಳಿಸಿ ವೇದ ಶಾಸ್ತ್ರಗಳನ್ನು ತಂದು ಚತುರ್ಮುಖನಿಗಿತ್ತ ಆ ಧೂರ್ತನು.'

೨೫. ಎಲೈ ನೃಪನೇ! ಇಂತು ಹೇಳಿ ಅತ್ಯಂತ ಘೋರವಾದ ಮಧು ಕೈಟಭರೆಂಬ ಆ ರಕ್ಕಸರು ಯೋಗನಿದ್ರಾವಶನಾದ ಕೇಶವನನ್ನು ಬೇಗನೆ ಎಬ್ಬಿಸಿದರು.

೨೬. 'ಎಲೈ ಸರ್ವಜ್ಞನೇ! ನಿನ್ನೊಡನೆ ಹೋರ್ಕೆಗೆಯ್ಯಲು ಇಲ್ಲಿಗೆ ನಾವಿರ್ವರೂ ಬಂದಿದ್ದೇವೆ. ನಮಗೆ ಯುದ್ಧವನ್ನು ನೀಡು; ಈಗ ಎದ್ದು ಹೋರಾಡು,' ಎಂದು ಶ್ರೀಹರಿಗೆ ಆ ಮಧು ಕೈಟಭರು ಹೇಳಿದರು.

ಇತ್ಯುಕ್ತೌ ತು ಭಗವಾಂಸ್ತಾಭ್ಯಾಂ ದೇವದೇವೋ ನೃಪೋತ್ತಮಃ ।
ತಥೇತಿ ಚೋಕ್ತ್ವಾ ತೌ ದೇವಃ ಶಾರ್ಙ್ಗಂ ಸಜ್ಜಮಥಾಕರೋತ್ ॥ ೨೭ ॥

ಜ್ಯಾಘೋಷತಲಘೋಷೇಣ ಶಂಖಶಬ್ದೇನ ಮಾಧವಃ ।
ಖಂ ದಿಶಃ ಪ್ರದಿಶಶ್ಚೈವ ಪೂರಯಾಮಾಸ ಲೀಲಯಾ ॥ ೨೮ ॥

ತೌ ಚ ರಾಜನ್ ಮಹಾವೀರ್ಯೌ ಜ್ಯಾಘೋಷಂ ಚಕ್ರತುಸ್ತದಾ ।
ಯುಯುಧಾತೇ ಮಹಾಘೋರೌ ಹರಿಣಾ ಮಧುಕೈಟಭೌ ॥ ೨೯ ॥

ಕೃಷ್ಣಶ್ಚ ಯುಯುಧೇ ತಾಭ್ಯಾಂ ಲೀಲಯಾ ಜಗತಃ ಪತಿಃ ।
ಸಮಂ ಯುದ್ಧಮಭೂದೇವಂ ತೇಷಾಮಸ್ತ್ರಾಣಿ ಮುಞ್ಚತಾಮ್ ॥ ೩೦ ॥

---

೨೭. ಎಲೈ ನೃಪೋತ್ತಮನೇ! ಕೇಳು; ಅವರೀರ್ವರೂ ಅಂತು ಹೇಳಲು, 'ದೇವಶ್ರೇಷ್ಠನಾದ ಭಗವಂತನು ಅಂತೆಯೇ ಆಗಲಿ,' ಎಂದು ಹೇಳಿ, ಬಳಿಕ ಶಾರ್ಙ್ಗವೆಂಬ ಬಿಲ್ಲನ್ನು ಹೆದೆಯೇರಿಸಿ ಸಜ್ಜುಗೊಳಿಸಿದನು.

೨೮. ಮಾಧವನು ವಿಲಾಸದಿಂದ ಧನುಷ್ಟಂಕಾರದಿಂದಲೂ, ಕೈ ಚಪ್ಪಾಳೆ, ಯಿಂದಲೂ, ಪಾಂಚಜನ್ಯವನ್ನು ಪೂರೈಸುವುದರಿಂದಲೂ ಉಂಟಾದ ಶಬ್ದಗಳಿಂದ ಆಗಸವನ್ನೂ ದಿಕ್ಕುವಿದುಕ್ಕುಗಳನ್ನೂ ತುಂಬಿದನು.

೨೯. ಎಲೈ ರಾಯನೇ! ಆ ಶಬ್ದವನ್ನು ಕೇಳಿ, ಮಹಾ ಪರಾಕ್ರಮಿಗಳಾದ ಆ ಮಧು ಕೈಟಭರೂ ಹೆದೆಯ ಸಪ್ಪಳವನ್ನು ಗೆಯ್ದರು. ಅವರೀರ್ವರೂ ಶ್ರೀಹರಿಯೊಡನೆ ಮಹಾ ಭಯಂಕರವಾದ ಯುದ್ಧವನ್ನು ಮಾಡಿದರು.

೩೦. ಸರ್ವಲೋಕೇಶನೂ ಪೂರ್ಣಾನಂದನೂ, ಆದ ಶ್ರೀಕೃಷ್ಣನೂ ವಿಲಾಸದಿಂದ ಅವರೊಡನೆ ಜುದ್ಧವಾಡಿದನು. ಇಂತು ಪರಸ್ಪರವಾಗಿ ಕಣೆಗಳಿಂದ ಹೋರಾಡುತ್ತಲಿದ್ದ ಅವರಿಗೆ ಯುದ್ಧವು ಸಮಾನವಾಗಿದ್ದಿತು.

ಕೇಶವಃ ಶಾರ್ಙ್ಗನಿರ್ಮುಕ್ತೈಃ ಶರೈರಾಶೀವಿಷೋಪಮೈಃ ।
ತಾನಿ ಶಸ್ತ್ರಾಣಿ ಸರ್ವಾಣಿ ಚಿಚ್ಛೇದ ತಿಲಶಸ್ತದಾ ॥ ೩೦ ॥

ತೌ ಯುದ್ಧ್ವಾ ಸುಚಿರಂ ತೇನ ದಾನವೌ ಮಧುಕೈಟಭೌ ।
ಹತೌ ಶಾರ್ಙ್ಗವಿನಿರ್ಮುಕ್ತೈಃ ಶರೈಃ ಕೃಷ್ಣೇನ ದುರ್ಮದೌ ॥ ೩೧ ॥

ತಯೋಸ್ತು ಮೇದಸಾ ರಾಜನ್ ವಿಷ್ಣುನಾ ಕಲ್ಪಿತಾ ಮಹೀ ।
ಮೇದಿನೀತಿ ತತಃ ಸಂಜ್ಞಾಮವಾಪೇಯಂ ವಸುಂಧರಾ ॥ ೩೨ ॥

ಏವಂ ಕೃಷ್ಣ ಪ್ರಸಾದೇನ ವೇದಾಂಲ್ಲಬ್ಧ್ವಾ ಪ್ರಜಾಪತಿಃ ।
ಪ್ರಜಾಃ ಸಸರ್ಜ ಭೂಪಾಲ ವೇದದೃಷ್ಟೇನ ಕರ್ಮಣಾ ॥ ೩೩ ॥

---

೩೦. ಆಗ ಶ್ರೀ ಕೇಶವನು ಸರ್ಪಗಳಿಗೆ ಸಮನಾದ ಕಣೆಗಳನ್ನು ಶಾರ್ಙ್ಗ ಧನುವಿನಲ್ಲಿ ಸಂಧಾನಮಾಡಿ ಹೊಡೆದು, ಆ ಮಧು ಕೈಟಭರು ಹೊಡೆದ ಆಯುಧಗಳನ್ನೆಲ್ಲಾ ಎಳ್ಳಷ್ಟು ಚೂರಾಗಿ ಕತ್ತರಿಸಿದನು.

೩೧. ಆ ಮಧು ಕೈಟಭರೆಂಬ ದಾನವರು ಆ ಭಗವಂತನೊಡನೆ ಬಹುಹೊತ್ತು ಹೋರಾಡಿದರು. ಕೊನೆಗೆ ಶ್ರೀಕೃಷ್ಣನು ದುರ್ಮದವುಳ್ಳ ಅವರೀರ್ವರನ್ನೂ ಶಾರ್ಙ್ಗದಲ್ಲಿ ಕಣೆಯನ್ನು ಜೋಡಿಸಿ, ಹೊಡೆದು ಸಂಹರಿಸಿದನು.

೩೨. ಎಲೈ ರಾಜನೇ! ಕೇಳು; ಈ ತೆರನಾಗಿ ಶ್ರೀ ಮಹಾವಿಷ್ಣುವು ಆ ಮಧು ಕೈಟಭರ ನೆಣದಿಂದ ಈ ಭೂಮಿಯನ್ನು ಸೃಷ್ಟಿಸಿದನು. ಅದು ಕಾರಣದಿಂದ ಈ ವಸುಂಧರೆಯು ಮೇದಿನಿಯೆಂದು ಹೆಸರ್ಗೊಂಡಿತು.

೩೩. ಎಲೈ ರಾಯನೇ! ಈ ತೆರನಾಗಿ ಪ್ರಜಾಪತಿಯಾದ ಚತುರ್ಮುಖನು ಶ್ರೀಕೃಷ್ಣನ ಅನುಗ್ರಹದಿಂದ ವೇದಗಳನ್ನು ಪಡೆದು, ಆ ವೇದೋಕ್ತಗಳಾದ ಸೃಷ್ಟಿ ಕರ್ಮವನ್ನಾಚರಿಸುವುದರಿಂದ ಪ್ರಜೆಗಳನ್ನು ಸೃಜಿಸಿದನು.

ಯ ಇದಂ ಶೃಣುಯಾನ್ನಿತ್ಯಂ ಪ್ರಾದುರ್ಭಾವಂ ಹರೇರ್ನೃಪ ।
ವಸಿತ್ವಾ ಚಂದ್ರಸದನೇ ವೇದವಿಪ್ರೋ ಬ್ರಹ್ಮಣೋ ಭವೇತ್ ॥ ೩೫ ॥

ಮಾತ್ಸ್ಯಂ ವಪುಸ್ತನ್ಮಹದದ್ರಿತುಲ್ಯಂ
ವಿದ್ಯಾಮಯಂ ಲೋಕಹಿತಾಯ ವಿಷ್ಣುಃ ।
ಆಸ್ಥಾಯ ಭೀಮಂ ಜನಲೋಕಸಂಸ್ಥೈಃ
ಸ್ತುತೋಽಥ ಯಸ್ತಂ ಸ್ಮರ ಭೂಮಿಪಾಲ ॥ ೩೬ ॥

ಇತಿ ಶ್ರೀ ನರಸಿಂಹಪುರಾಣೇ ಮತ್ಸ್ಯಪ್ರಾದುರ್ಭಾವೋ
ನಾಮ ಸಪ್ತತ್ರಿಂಶೋಽಧ್ಯಾಯಃ

---

೩೫. ಎಲೈ ನೃಪನೇ! ಕೇಳು; ಯಾವಾತನು ನಿಚ್ಚ(ನಿತ್ಯ)ದಲ್ಲಿಯೂ ಶ್ರೀಹರಿಯ ಈ ಮತ್ಸ್ಯಾವತಾರ ಚರಿತ್ರೆಯನ್ನು ಕೇಳುತ್ತಾನೆಯೋ, ಅವನು ಚಂದ್ರಲೋಕದಲ್ಲಿ ವಾಸಿಸಿ, ವೇದಜ್ಞನಾಗಿ ಬ್ರಹ್ಮಜ್ಞಾನಿಯಾಗುವನು.

೩೬. ಯಾವ ಶ್ರೀ ಮಹಾವಿಷ್ಣುವು ಪೆರ್ಬೆಟ್ಟಕ್ಕೆ ಸಮವಾದುದೂ, ಪೂರ್ಣ ಜ್ಞಾನಸ್ವರೂಪವೂ, ಬಹು ಭಯಂಕರವೂ ಆದ ಮಾತ್ಸ್ಯದ ಒಡಲನ್ನು ಅಭಿವ್ಯಂಜನ ಮಾಡಿ (ದುಷ್ಟರಾದ ಮಧುಕೈಟಭರಿಂದ ಅಪಹೃತವಾದ ವೇದ ಶಾಸ್ತ್ರಗಳೆಂಬ ಜ್ಞಾನರಾಶಿಯನ್ನು ಅವರಿಗೆ ಮೋಹಗೊಳಿಸಿ ಹಿಂದಕ್ಕೆ ತಂದು ನಾಲ್ಮೊಗನಿಗಿತ್ತು), ಜನಲೋಕದಲ್ಲಿದ್ದ ಜ್ಞಾನಿಗಳಿಂದ ನುತಿಗೊಂಡನೋ, ಆ ಮತ್ಸ್ಯಾವತಾರಿಯಾದ ಶ್ರೀ ಮಹಾವಿಷ್ಣುವನ್ನು ಎಲೈ ಸಹಸ್ರಾನೀಕ ನರಪತಿಯೇ! ನೀನು ಸ್ಮರಣಮಾಡು;' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕನೆಂಬ ರಾಜನಿಗೆ ಹೇಳಿದುದನ್ನು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಮತ್ಸ್ಯಾವತಾರವನ್ನು ಅಭಿವ್ಯಂಜನ
ಮಾಡಿದುದೆಂಬ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

ಮೂವತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ 'ಮಹಾಪ್ರಳಯದಲ್ಲಿ ಶ್ರೀಮನ್ನಾರಾಯಣನು ಕ್ಷೀರ ಸಾಗರದಲ್ಲಿ ಅನಂತಭೋಗಶಯನದಲ್ಲಿ ಯೋಗನಿದ್ರಾವಶನಾಗಿರಲು, ಅವನ ಕಿವಿಗಳಿಂದ ಎರಡು ಬೆವರ್ಹನಿಗಳು ಜಲದಲ್ಲಿ ಬಿದ್ದು, ಅವುಗಳಿಂದ ಮಧು ಕೈಟಭರೆಂಬಿಬ್ಬರು ರಕ್ಕಸರು ಜನಿಸಿದರು.

ಶ್ರೀಮನ್ನಾರಾಯಣನ ನಾಭಿಯಲ್ಲಿ ಒಂದು ಕಮಲವು ಹುಟ್ಟಿತು. ಅಲ್ಲಿ ಚತುರ್ಮುಖಬ್ರಹ್ಮನು ಹುಟ್ಟಿದನು. ಅವನಿಗೆ ಶ್ರೀಹರಿಯು ಪ್ರಜೆಗಳನ್ನು ಸೃಷ್ಟಿಸಬೇಕೆಂದು ಆಣತಿಯನ್ನಿತ್ತನು. ಅದರಂತೆ ಸರ್ಜನಕಾರ್ಯಕ್ಕೆ ಬ್ರಹ್ಮನು ತೊಡಗುವ ವೇಳೆಗೆ ಆ ಮಧು ಕೈಟಭರು ಬಂದು, ಅವನಲ್ಲಿದ್ದ ವೇದಶಾಸ್ತ್ರಜ್ಞಾನವನ್ನು ಅಪಹರಿಸಿಕೊಂಡು ಹೋದರು.

ತರುವಾಯ ಬ್ರಹ್ಮನು ಸೃಷ್ಟಿಯನ್ನೆಸಗಲು ಅರಿವಿಲ್ಲದೆಯೇ ಎನಿತು ನೆನೆಸಿಗೆ ತಂದುಕೊಂಡರೂ ಆ ಸೃಷ್ಟಿಯ ಉಪಾಯವು ಬಗೆದೋರದಿರಲು, ಮತ್ತೆ ಶ್ರೀಹರಿಯನ್ನು ನುತಿಸಿ, ತನಗೆ ಸೃಷ್ಟಿಯನ್ನೆಸಗಲು ಜ್ಞಾನದಾನ ಮಾಡಬೇಕೆಂದು ಬಿನ್ನವಿಸಿದನು. ಆಗ ಶ್ರೀಹರಿಯು ಮಧು ಕೈಟಭರು ಬ್ರಹ್ಮಜ್ಞಾನವನ್ನು ಅಪಹರಿಸಿರುವುದನ್ನು ತಿಳಿದು, ತನ್ನ ಅಪ್ರಾಕೃತವೂ, ನಿತ್ಯವೂ ಆದ ಮತ್ಸ್ಯಾಕೃತಿಯನ್ನು ಮೂಲರೂಪದಿಂದ ಬೇರೆಯಾಗಿ ಆವಿರ್ಭವ ಮಾಡಿ ನೀರಿನಲ್ಲಿ ಮುಳುಗಿ, ಪಾತಾಳಕ್ಕೆ ಹೋಗಿ, ಆ ಮಧು ಕೈಟಭರನ್ನು ಮೋಹಗೊಳಿಸಿ, ಆ ಜ್ಞಾನವನ್ನು ತಂದು ಚತುರ್ಮುಖನಿಗಿತ್ತು, ಮತ್ತು ಕ್ಷೀರಸಾಗರದಲ್ಲಿ ಯೋಗನಿದ್ರಾಸಕ್ತನಾದನು.

ಅನಂತರ ಆ ಮಧು ಕೈಟಭರು ಪಾಲಮುನ್ನೀರೆಡೆಗೆ ಬಂದು, ತಮ್ಮನ್ನೇ ಮೋಹಗೊಳಿಸಿ ಜ್ಞಾನವನ್ನು ತೆಗೆದುಕೊಂಡುಹೋದ ಧೂರ್ತನವನೆಂದು ತಿಳಿದು, ಶ್ರೀಹರಿಯನ್ನೆಬ್ಬಿಸಿ ಯುದ್ಧಕ್ಕೆ ಕರೆದರು. ಶ್ರೀಹರಿಯೂ ಅವರೊಡನೆ ಯುದ್ಧ

ಮಾಡಿ ಶಾರ್ಙ್ಗದಲ್ಲಿ ಬಾಣವನ್ನು ಹೂಡಿ, ಅವರನ್ನು ಹೊಡೆದು ಕೊಂದನು. ಅವರ ಮೇದಸ್ಸಿನಿಂದ ಈ ಪೊಡವಿಯನ್ನು ಭಗವಂತನು ಸೃಷ್ಟಿಸಿದುದರಿಂದ ಈ ವಸುಂಧರೆಗೆ ಮೇದಿನಿಯೆಂದು ಹೆಸರು ಬಂದಿತು.

ಚತುರ್ಮುಖನು ಆ ವೇದಶಾಸ್ತ್ರಗಳಲ್ಲಿ ಹೇಳಿದ ಸೃಷ್ಟಿಕರ್ಮವನ್ನು ಆಚರಿಸಿ, ಪ್ರಜೆಗಳನ್ನು ಸೃಷ್ಟಿಸಿದನು. ಇಂತಿದು ಮತ್ಸ್ಯಾವತಾರ ಚರಿತೆಯು; ಇದನ್ನು ಕೇಳಿದವರು ಚಂದ್ರಲೋಕದಲ್ಲಿ ವಾಸಮಾಡಿ ವೇದಜ್ಞರಾಗಿ, ಬ್ರಹ್ಮಜ್ಞಾನಿಗಳಾಗುವರು;" ಎಂದು ಮಾರ್ಕಂಡೇಯಮುನಿಯು ಶತಾನೀಕರಾಯನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರೆಂದು ವರ್ಣಿಸಿದೆ.

ಇಂತು ಮೂವತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್

ಅಷ್ಟತ್ರಿಂಶೋಽಧ್ಯಾಯಃ

ಕೂರ್ಮಪ್ರಾದುರ್ಭಾವಃ

॥ ಮಾರ್ಕಂಡೇಯ ಉವಾಚ ॥

ಪುರಾ ದೇವಾಸುರೇ ಯುದ್ಧೇ ದೇವಾ ದೈತ್ಯೈಃ ಪರಾಜಿತಾಃ ।
ಸರ್ವೇ ತೇ ಶರಣಂ ಜಗ್ಮುಃ ಕ್ಷೀರಾಬ್ಧಿತನಯಾಪತಿಮ್ ॥ ೧ ॥

ಸ್ತೋತ್ರೇಣ ತುಷ್ಟುವುಃ ಸರ್ವೇ ಸಮಾರಾಧ್ಯ ಜಗತ್ಪತಿಮ್ ।
ಕೃತಾಂಜಲಿಪುಟಾ ರಾಜನ್ ಬ್ರಹ್ಮಾದ್ಯಾ ದೇವತಾಗಣಾಃ ॥ ೨ ॥

ಮೂವತ್ತೆಂಟನೆಯ ಅಧ್ಯಾಯವು.

ಕೂರ್ಮಾವತಾರವು

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ :—ಎಲೈ ಸಹಸ್ರಾನೀಕರಾಯನೇ! ಕೇಳು; ಪೂರ್ವದಲ್ಲಿ ದೇವಾಸುರ ಯುದ್ಧದಲ್ಲಿ ದೇವತೆಗಳು ದಿತಿಯ ಪುತ್ರರಾದ ಅಸುರರಿಂದ ಸೋತುಹೋದವರಾಗಿ, ಅವರೆಲ್ಲರೂ ಪಾಲ್ಗಡಲ ಕುವರಿಯೊಡೆಯನಾದ ಶ್ರೀಮನ್ನಾರಾಯಣನನ್ನು ಮರೆ ಹೊಕ್ಕರು.

೨. ಎಲೈ ರಾಯನೇ! ಕೇಳು; ಚತುರ್ಮುಖಬ್ರಹ್ಮನೇ ಮೊದಲಾದ ದೇವತೆಗಳ ತಂಡಗಳೆಲ್ಲವೂ ತಮ್ಮ ಬೊಗಸೆಗಳನ್ನು ಮುಗಿದು, ಸಕಲ ಲೋಕಸ್ವಾಮಿಯಾದ ಶ್ರೀನರಹರಿಯನ್ನು ಪೂಜಿಸಿ, ಸ್ತೋತ್ರಗಳಿಂದ ಕೊಂಡಾಡಿತು.

॥ ದೇವಾ ಊಚುಃ ॥

ನಮಸ್ತೇ ದೇವದೇವಾಯ ಲೋಕನಾಥಾಯ ಶಾರ್ಙ್ಗಿಣೇ ।
ನಮಸ್ತೇ ಪದ್ಮನಾಭಾಯ ಲೋಕನಾಥಾಯ ಶಾರ್ಙ್ಗಿಣೇ ॥ ೩ ॥

ನಮಸ್ತೇ ಪದ್ಮನಾಭಾಯ ಸರ್ವದುಃಖಾಪಹಾರಿಣೇ ।
ನಮಸ್ತೇ ಪದ್ಮನಾಭಾಯ ಸರ್ವದೇವಮಯಾಯ ಚ ॥ ೪ ॥

ನಮಸ್ತೇ ವಿಶ್ವರೂಪಾಯ ಸರ್ವದೇವಮಯಾಯ ಚ ।
ಮಧು ಕೈಟಭನಾಶಾಯ ಕೇಶವಾಯ ನಮೋನಮಃ ॥ ೫ ॥

ದೈತ್ಯೈಃ ಪರಾಜಿತಾ ದೇವ ವಯಂ ಯುದ್ಧೇ ಬಲಾನ್ವಿತೈಃ ।
ಜಯೋಪಾಯಂ ಹಿ ನೋ ಬ್ರೂಹಿ ಕರುಣಾಕರ ತೇ ನಮಃ ॥ ೬ ॥

---

೩. ದೇವತೆಗಳು ಹೇಳುತ್ತಾರೆ:— ಸಕಲ ದೇವತೆಗಳಲ್ಲೆಲ್ಲಾ ಶ್ರೇಷ್ಠನೂ, ಸಕಲ ಲೋಕ ನಾಯಕನೂ, ಶಾರ್ಙ್ಗಧನುರ್ಧಾರಿಯೂ, ಪದ್ಮನಾಭನೂ ಆದ ಭಗವಂತನೇ ! ನಿನಗೆ ನಮಸ್ಕಾರ.

೪. ತನ್ನನ್ನು ಮರೆಹೊಕ್ಕವರ ಸಕಲ ದುಃಖನಾಶಕನೂ, ವಿಶ್ವಾಂತರ್ಯಾಮಿಯೂ, ವಿಶ್ವ ನಿಯಾಮಕನೂ ಆದುದರಿಂದ ವಿಶ್ವರೂಪನೆನಿಸಿಕೊಳ್ಳುವವನೂ, ಸಕಲ ದೇವನಿಯಾಮಕನೂ, ದೇವಾಂತರ್ಯಾಮಿಯೂ ಆದುದರಿಂದ ಸರ್ವದೇವಮಯನೆನಿಸುವವನೂ ಆದ ಪದುಮನಾಭನೇ ! ನಿನಗೆ ನಮಸ್ಕಾರ.

೫. ಮಧುಕೈಟಭರೆಂಬ ವೇದಾಪಹಾರಿಗಳಾದ ದೈತ್ಯರನ್ನು ನಾಶಮಾಡಿದವನೂ, ಬ್ರಹ್ಮರುದ್ರ ಪ್ರವರ್ತಕನಾದುದರಿಂದ ಕೇಶವನೆನಿಸಿಕೊಳ್ಳುವವನೂ, ಕೇಶಿಯೆಂಬ ದೈತ್ಯನನ್ನು ಸಂಹರಿಸಿದುದರಿಂದ ಕೇಶವನೆನಿಸಿಕೊಳ್ಳುವವನೂ ಆದ ಶ್ರೀ ನರಹರಿಯೇ ! ನಿನಗೆ ನಮಸ್ಕಾರವು ನಮಸ್ಕಾರವು.

೬. ಎಲ್ಲೈ ಕ್ರೀಡಾದಿಗುಣವಿಶಿಷ್ಟನೂ, ಕರುಣೆಗೆ ನೆಲೆಯೂ ಆದ ಭಗವಂತನೇ ! ನಾವು ಯುದ್ಧದಲ್ಲಿ ಸಾಮರ್ಥ್ಯೋಪೇತರಾದ ದೈತ್ಯರಿಂದ ತಿರಸ್ಕೃತರಾದೆವು (ಸೋತು ಹೋದೆವು) ; ನಮ್ಮಗಳಿಗೆ ಆ ದೈತ್ಯರನ್ನು ಗೆಲ್ಲುವ ಉಪಾಯವನ್ನು ತಿಳಿಸು ; ನಿನಗೆ ನಮಸ್ಕಾರವು.

॥ ಮಾರ್ಕಂಡೇಯ ಉವಾಚ ॥

ಇತಿ ಸ್ತುತೋ ತದಾ ದೇವೈ ರ್ದೇವದೇವೋ ಜನಾರ್ದನಃ ।
ತಾನಬ್ರವೀದ್ಧರಿರ್ದೇವಾ೯ ತೇಷಾಮೇವಾಗ್ರತಃ ಸ್ಥಿತಃ ॥ ೭ ॥

॥ ಶ್ರೀ ಭಗವಾನುವಾಚ ॥

ಗತ್ವಾ ತತ್ರ ಸುರಾಃ ಸರ್ವೇ ಸಂಧಿಂ ಕುರುತ ದಾನವೈಃ ।
ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾ ಚ ವಾಸುಕಿಮ್ ॥ ೮ ॥

ಸರ್ವೌಷಧೀಃ ಸಮಾನೀಯ ಪ್ರಕ್ಷಿಪ್ಯಾಬ್ಧೌ ತ್ವರಾನ್ವಿತಾಃ ।
ದಾನವೈಸ್ಸಹಿತಾ ಭೂತ್ವಾ ಮಂಥಧ್ವಂ ಕ್ಷೀರಸಾಗರಮ್ ॥ ೯ ॥

ಅಹಂ ಚ ತತ್ರ ಸಾಹಾಯ್ಯಂ ಕರಿಷ್ಯಾಮಿ ದಿವೌಕಸಃ ।
ಭವಿಷ್ಯತ್ಯಮೃತಂ ತತ್ರ ತತ್ಪಾನಾದ್ಬಲವತ್ತರಾಃ ॥ ೧೦ ॥

---

೭. ಮಾರ್ಕಂಡೇಯ ಮುನಿಯು ಹೇಳುತ್ತಾನೆ:—'ಆಗ ದೇವತೆಗಳಿಂದ ಇಂತು ಸ್ತುತಿಸಲ್ಪಟ್ಟ, ದುಷ್ಟಜನಸಂಹಾರಕನಾದ ಶ್ರೀಹರಿಯು ಆ ದೇವತೆಗಳ ಎದಿರಿನಲ್ಲಿ ಪ್ರತ್ಯಕ್ಷನಾಗಿದ್ದು, ಅವರಿಗೆ ಇಂತು ನುಡಿದನು.

೮-೯. ಶ್ರೀ ಭಗವಂತನು ಹೀಗೆ ಹೇಳುತ್ತಾನೆ : —'ಎಲೈ ದೇವತೆಗಳಿರಾ ! ನೀವೆಲ್ಲರೂ ದಾನವರೊಡನೆ ಒಪ್ಪಂದವನ್ನು ಮಾಡಿಕೊಳ್ಳಿರಿ ; ಮಂದರಪರ್ವತವನ್ನು ಕಡೆವ ಕೋಲನ್ನಾಗಿಯೂ, ವಾಸುಕಿಯೆಂಬ ನಾಗರಾಜನನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು, ಕ್ಷೀರ ಸಮುದ್ರದಲ್ಲಿ ಸಕಲೌಷಧಿಗಳನ್ನು ತಂದು ಹಾಕಿ, ಬೇಗನೆ ದಾನವರೊಡಗೂಡಿ ಪಾಲ್ಗಡಲನ್ನು ಕಡೆಯಿರಿ.

೧೦-೧೧, ಎಲೈ ದೇವತೆಗಳೇ ! ನಾನೂ ಆ ಕಾಲದಲ್ಲಿ ನೆರವನ್ನೆಸಗುವೆನು. ಅಲ್ಲಿ ಅಮೃತವು ಹುಟ್ಟುವುದು. ಆ ಅಮೃತವನ್ನು ಪಾನಮಾಡುವುದರಿಂದಬಲ

ಭವಿಷ್ಯಂತಿ ಕ್ಷಣಾದ್ದೇವಾ ಅಮೃತಸ್ಯ ಪ್ರಭಾವತಃ ।
ಯೂಯಂ ಸರ್ವೇ ಮಹಾಭಾಗಾಸ್ತೇಜಿಷ್ಠಾ ರಣವಿಕ್ರಮಾಃ ॥ ೧೧ ॥

ಇಂದ್ರಾದ್ಯಾಸ್ತು ಮಹೋತ್ಸಾಹಾಸ್ತಲ್ಲಬ್ಧ್ವಾಮೃತಮುತ್ತಮಮ್ ।
ತತೋ ಹಿ ದಾನವಾಞ್ಜೇತುಂ ಸಮರ್ಥಾ ನಾತ್ರ ಸಂಶಯಃ ॥ ೧೨ ॥

ಇತ್ಯುಕ್ತಾ ದೇವದೇವೇನ ದೇವಾಸ್ಸರ್ವೇ ಜಗತ್ಪತಿಮ್ ।
ಪ್ರಣಮ್ಯಾಗತ್ಯ ನಿಲಯಂ ಸಂಧಿಂ ಕೃತ್ವಾಥ ದಾನವೈಃ ॥ ೧೩ ॥

ಕ್ಷೀರಾಬ್ಧೇರ್ಮಂಥನೇ ಸರ್ವೇ ಚಕ್ರುರುದ್ಯೋಗಮುತ್ತಮಮ್ ।
ಬಲಿನಾ ಚೋದ್ಧೃತೋ ರಾಜನ್ ಮಂದರಾಖ್ಯೋ ಮಹಾಗಿರಿಃ ॥ ೧೪ ॥

ದಿಂದಲೇ ದೇವತೆಗಳಾದ ನೀವು ಅತಿಶಯವಾದ ಸಾಮರ್ಥ್ಯೋಪೇತರಾಗುವಿರಿ. ಎಲೈ ಪುಣ್ಯಶಾಲಿಗಳೇ ಆ ಅಮೃತದ ಮಹಿಮೆಯಿಂದ ನೀವೆಲ್ಲರೂ ಅತಿಶಯವಾದ ತೇಜಸ್ಸುಳ್ಳವರೂ, ಯುದ್ಧಶೂರರೂ ಆಗುವಿರಿ.

೧೨. ದೇವೇಂದ್ರನೇ ಮೊದಲಾದ ದೇವತೆಗಳು ಉತ್ತಮವಾದ ಅಮೃತವನ್ನು ಪಡೆದು ಅತಿಶಯವಾಗಿ ಉತ್ಸಾಹಗೊಂಡು ಅದರಿಂದ ದನುಪುತ್ರರಾದ ಅಸುರರನ್ನು ಗೆಲ್ಲಲು ಸಮರ್ಥರಾಗುವರು. ಈ ವಿಷಯದಲ್ಲಿ ಸಂದೇಹವಿಲ್ಲ.'

೧೩. ದೇವೋತ್ತಮನಾದ ಶ್ರೀಹರಿಯು ಇಂತು ಬೆಸಗೆಯ್ಯಲು, ಆ ದೇವತೆಗಳೆಲ್ಲರೂ ಜಗತ್ಪತಿಯಾದ ಶ್ರೀಮನ್ನಾರಾಯಣನಿಗೆರಗಿ ತಂತಮ್ಮ ವಸತಿಗಳಿಗೆಯ್ದು ದಾನವರೊಡನೆ ಸಂಧಿ ಮಾಡಿಕೊಂಡರು.

೧೪. ಎಲೈ ಸಹಸ್ರಾನೀಕರಾಜನೇ! ಇಂತು ಒಪ್ಪಂದ ಮಾಡಿಕೊಂಡು ದೇವಾಸುರರೆಲ್ಲರೂ ಪಾಲ್ಗಡಲನ್ನು ಕಡೆಯುವುದರಲ್ಲಿ ಉತ್ತಮವಾದುಜ್ಜುಗವನ್ನೆಸಗಿದರು. ಬಲಿಚಕ್ರವರ್ತಿಯು ಮಂದರಪರ್ವತವನ್ನು ಮೇಲಕ್ಕೆ ಎತ್ತಿದನು.

ಕ್ಷೀರಾಬ್ಧೌ ಕ್ಷಪಿತಶ್ಚೈವ ತೇನೈಕೇನ ನೃಪೋತ್ತಮ ।
ಸರ್ವೌಷಧೀಶ್ಚ ಪ್ರಕ್ಷಿಪ್ಯ ದೇವದೈತ್ಯೈಃ ಪಯೋನಿಧೌ ॥ ೧೫ ॥

ವಾಸುಕಿಶ್ಚಾಗತಸ್ತತ್ರ ರಾಜನ್ನಾರಾಯಣಾಜ್ಞಯಾ ।
ಸರ್ವೇ ದೇವಹಿತಾರ್ಥಾಯ ವಿಷ್ಣುಶ್ಚ ಸ್ವಯಮಾಗತಃ ॥ ೧೬ ॥

ತತ್ರವಿಷ್ಣುಂ ಸಮಾಸಾದ್ಯ ತತಃ ಸರ್ವೇ ಸುರಾಸುರಾಃ ।
ಸರ್ವೇ ತೇ ಮೈತ್ರಭಾವೇನ ಕ್ಷೀರಾಬ್ಧೇಸ್ತಟಮಾಶ್ರಿತಾಃ ॥ ೧೭ ॥

ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾ ಚ ವಾಸುಕಿಮ್ ।
ತತೋ ಮಥಿತುಮಾರಬ್ಧಂ ನೃಪತೇ ತರಸಾಽಮೃತಮ್ ॥ ೧೮ ॥

ವಿಷ್ಣುನಾ ಮುಖಭಾಗೇ ತು ಯೋಜಿತಾ ದಾನವಾಸ್ತದಾ ।
ದೇವತಾಃ ಪುಚ್ಛಭಾಗೇ ತು ಮಥನಾಯ ನಿಯೋಜಿತಾಃ ॥ ೧೯ ॥

---

೧೫. ಎಲೈ ರಾಜಶ್ರೇಷ್ಠನೇ! ಕೇಳು; ಅವನೊಬ್ಬನೇ! ಆ ಮಂದರ ಪರ್ವತವನ್ನು ಪಾಲ್ಗಡಲಲ್ಲಿಟ್ಟನು. ದೇವಾಸುರರು ಎಲ್ಲಾ ಔಷಧಿಗಳನ್ನೂ ಆ ಮುನ್ನೀರಲ್ಲಿ ತಂದು ಹಾಕಿದರು.

೧೬. ಶ್ರೀಮನ್ನಾರಾಯಣನ ಆಣತಿಯಂತೆ ವಾಸುಕಿಯೂ ಅಲ್ಲಿಗೆ ಬಂದನು. ಸಕಲ ದೇವತೆಗಳಿಗೂ ಹಿತವನ್ನೆಸಗಲು ಶ್ರೀಮಹಾವಿಷ್ಣುವು ತಾನೇ ಅಲ್ಲಿಗೆ ಬಂದನು.

೧೭. ಅನಂತರದಲ್ಲಿ ದೇವಾಸುರರೆಲ್ಲರೂ ಅಲ್ಲಿಗೆ ಬಂದ ಶ್ರೀಹರಿಯನ್ನು ಆಶ್ರಯಿಸಿ, ಕೆಳತನದಿಂದ ಎಲ್ಲರೂ ಪಾಲ್ಗಡಲ ತಡಿಯನ್ನಾಶ್ರಯಿಸಿದರು.

೧೮. ದೇವಾಸುರರು ಮಂದರಪರ್ವತವನ್ನು ಕಡಗೋಲನ್ನಾಗಿಯೂ, ವಾಸುಕಿಯೆಂಬ ನಾಗರಾಜನನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು, ವೇಗದಿಂದ ಕ್ಷೀರಸಮುದ್ರವನ್ನು ಕಡೆಯಲು ಮೊದಲು ಮಾಡಿದರು.

೧೯. ಶ್ರೀ ಮಹಾವಿಷ್ಣುವು ಆ ವಾಸುಕಿಯ ಮುಖ ಭಾಗದಲ್ಲಿ ದಾನವರನ್ನೂ, ಪುಚ್ಛ ಭಾಗದಲ್ಲಿ ದೇವತೆಗಳನ್ನೂ ಕಡೆಯುವುದಕ್ಕೆ ಯೋಜಿಸಿದನು.

ಏವಂ ಚ ಮಥನಾತ್ತತ್ರ ಮಂದರೋಽಧಃ ಪ್ರವಿಶ್ಯ ಚ ।
ಆಧಾರೇಣ ವಿನಾ ರಾಜನ್ ತಂ ದೃಷ್ಟ್ವಾ ಸಹಸಾ ಹರಿಃ ॥ ೨೦ ॥

ಸರ್ವಲೋಕಹಿತಾರ್ಥಾಯ ಕೂರ್ಮರೂಪಮಧಾರಯತ್ ।
ಆತ್ಮಾನಂ ಸಂಪ್ರವಿಶ್ಯಾಥ ಮಂದರಸ್ಯ ಗಿರೇರಧಃ ॥ ೨೧ ॥

ಪ್ರವಿಶ್ಯ ಧೃತವಾನ್ ಶೈಲಂ ಮಂದರಂ ಮಧುಸೂದನಃ ।
ಉಪರ್ಯಾಕ್ರಾಂತವಾನ್ ಶೈಲಂ ಪ್ರಥಗ್ರೂಪೇಣ ಕೇಶವಃ ॥ ೨೨ ॥

ಚಕರ್ಷ ನಾಗರಾಜಂ ಚ ದೇವೈಃ ಸಾರ್ಧಂ ಜನಾರ್ದನಃ ।
ಸುರೈರದೃಶ್ಯರೂಪೇಣ ದೈತ್ಯಮಧ್ಯೇ ಜನಾರ್ದನಃ ।
ತತಸ್ತೇ ತ್ವರಯಾ ಯುಕ್ತಾ ಮಮಂಥುಃ ಕ್ಷೀರಸಾಗರಮ್ ॥ ೨೩ ॥

೨೦-೨೧. ಎಲೈ ಸಹಸ್ರಾನೀಕರಾಯನೇ! ಕೇಳು; ಆ ಪಾಲ್ಗಡಲಲ್ಲಿ ಇಂತು ದೇವಾಸುರರು ಕಡೆಯುವುದರಿಂದ ಮಂದರಪರ್ವತವು ಆಧಾರವಿಲ್ಲದುದರಿಂದ ಕೆಳಕ್ಕೆ ಹೋಗುತ್ತಿರಲು, ಅದನ್ನು ಕಂಡು ಹಠಾತ್ತಾಗಿ ಶ್ರೀಹರಿಯು ಸಮಸ್ತ ಪ್ರಪಂಚಕ್ಕೆ ಹಿತವನ್ನೆಸಗಲು ಕೂರ್ಮರೂಪ(ಆಮೆ)ವನ್ನು ತಾಳಿದನು.

೨೨. ಅನಂತರದಲ್ಲಿ ತಾನು ಮಂದರಪರ್ವತದ ಕೆಳಗೆ ಪ್ರವೇಶಿಸಿ, ಕೂರ್ಮ ಸ್ವರೂಪವನ್ನು ತಾಳಿದ ಶ್ರೀ ಮಧುಸೂದನನು ಆ ಮಂದರಪರ್ವತವನ್ನು ಹೊತ್ತುಕೊಂಡನು. ಹಾಗೆಯೇ ಮತ್ತೊಂದು ರೂಪದಿಂದ ಪರ್ವತದ ಮೇಲು ಭಾಗವನ್ನು ಆಕ್ರಮಿಸಿದನು.

೨೩. ದುಷ್ಟಜನರ ನಾಶಕನಾದುದರಿಂದ ಜನಾರ್ದನನೆನಿಸುವ ಶ್ರೀಹರಿಯು ದೇವತೆಗಳೊಡನೆಯೂ, ಆ ಅಸುರರ ಮಧ್ಯದಲ್ಲಿಯೂ ಕಾಣಿಸದೆ ಮರೆರೂಪದಿಂದ ಇದ್ದು ಕಡೆದನು. ಶ್ರೀಹರಿಯೇ ತನ್ನ ಸನ್ನಿಧಾನದಿಂದ ಸೆಳೆಯುತ್ತಲಿದ್ದುದರಿಂದ ಆದೇವಾಸುರರೂ ತ್ವರೆಯಿಂದ ಕ್ಷೀರಸಾಗರವನ್ನು ಕಡೆಯುವವರಾದರು.

ಯಾವಚ್ಛಕ್ತ್ಯಾ ನೃಪಶ್ರೇಷ್ಠ ಬಲವಂತಃ ಸುರಾಸುರಾಃ ।
ಮಥ್ಯಮಾನಾತ್ತತಸ್ತಸ್ಮಾತ್ ಕ್ಷೀರಾಬ್ಧೇರಭವನ್ನೃಪ ॥ ೨೪ ॥

ಕಾಲಕೂಟಮಿತಿ ಖ್ಯಾತಂ ವಿಷಮತ್ಯಂತ ದುಃಸಹಮ್ ।
ತಂ ನಾಗಾ ಜಗೃಹುಃ ಸರ್ವೇ ತಚ್ಛೇಷಂ ಶಂಕರೋಽಗ್ರಹೀತ್ ॥ ೨೫ ॥

ನಾರಾಯಣಾಜ್ಞಯಾ ತೇನ ನೀಲಕಂಠತ್ವಮಾಪ್ತವಾನ್ ।
ಐರಾವತಶ್ಚ ನಾಗೇಂದ್ರೋ ಹರಿಶ್ಚೋಚ್ಚೈಃಶ್ರವಾಃ ಪುನಃ ॥ ೨೬ ॥

ದ್ವಿತೀಯಾವರ್ತನಾದ್ರಾಜನ್ನುತ್ಪನ್ನಾವಿತಿ ನಃ ಶ್ರುತಮ್ ।
ತೃತೀಯಾವರ್ತನಾದ್ರಾಜನ್ನಪ್ಸರಾಶ್ಚ ಸುಶೋಭನಾ ।
ಚತುರ್ಥಾತ್ಪಾರಿಜಾತಶ್ಚ ಉತ್ಪನ್ನಃ ಸ ಮಹಾದ್ರುಮಃ ॥ ೨೭ ॥

೨೪-೨೫. ಎಲೈ ರಾಯನೇ! ಕೇಳು; ಅತ್ಯಂತ ಸಾಮರ್ಥ್ಯದಿಂದ ಕೂಡಿಗ ದೇವಾಸುರರು ತಂತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿ ಕಡೆದರು. ಆಗ ಆ ಕ್ಷೀರಸಮುದ್ರದಿಂದ ಅತ್ಯಂತ ದುಃಸಹವಾದ ಕಾಲಕೂಟವೆಂದು ಪ್ರಸಿದ್ಧವಾದ ನಂಜು ಹುಟ್ಟಿತು. ಆ ನಂಜನ್ನು ಹಾವುಗಳೆಲ್ಲವೂ ತೆಗೆದುಕೊಂಡುವು. ಉಳಿದು ದನ್ನು ರುದ್ರದೇವನು ತೆಗೆದುಕೊಂಡನು.

೨೬-೨೭. ಶ್ರೀಮನ್ನಾರಾಯಣನ ಆಣತಿಯಿಂದ ಅಂತು ಕಾಲಕೂಟವನ್ನು ಕುಡಿದುದರಿಂದ ಶಿವನು ನೀಲಕಂಠತ್ವವನ್ನೈದಿದನು. ಮತ್ತು ಆ ಕ್ಷೀರ ಸಮುದ್ರ ದಿಂದ ಐ ರಾ ವ ತ ವೆಂ ಬ ಗಜಶ್ರೇಷ್ಠವೂ, ಉಚ್ಚೈಶ್ರವಸ್ಸೆಂಬ ಉತ್ತಮವಾದ ಕುದುರೆಯೂ ಎರಡನೆಯಸಾರಿ ಕಡೆಯುವುದರಿಂದ ಹುಟ್ಟಿದುವೆಂದು ನಾವು ಕೇಳಿದ್ದೇವೆ. ಮೂರನೆಯ ಸಾರಿ ಕಡೆದುದರಿಂದ ಅಪ್ಸರೆಯರೂ, ನಾಲ್ಕನೆಯಸಾರಿ ಕಡೆದುದರಿಂದ ಪಾರಿಜಾತವೆಂಬ ಮಹಾವೃಕ್ಷವೂ ಹುಟ್ಟಿದುವು.

ಪಂಚಮಾರ್ಥೆ ಹಿಮಾಂಶುಸ್ತು ಪ್ರೋತ್ಥಿತಃ ಕ್ಷೀರಸಾಗರಾತ್ ।
ತಂ ಭವಃ ಶಿರಸಾ ಧತ್ತೇ ನಾರೀವಕ್ಷಸ್ವಸ್ತಿಕಂ ನೃಪ ॥ ೨೮ ॥

ನಾನಾವಿಧಾನಿ ದಿವ್ಯಾನಿ ರತ್ನಾನ್ಯಾಭರಣಾನಿ ಚ ।
ಕ್ಷೀರೋದಧೇರುತ್ಥಿತಾಶ್ಚ ಗಂಧರ್ವಾಶ್ಚ ಸಹಸ್ರಶಃ ॥ ೨೯ ॥

ಏತಾನ್ ದೃಷ್ಟ್ವಾ ತತೋತ್ಪನ್ನಾನಶ್ಚರ್ಯಸಮನ್ವಿತಾನ್ ।
ಅಭವಞ್ಜಾತಹರ್ಷಾಸ್ತೇ ತತ್ರ ಸರ್ವೇ ಸುರಾಸುರಾಃ ॥ ೩೦ ॥

ದೇವಪಕ್ಷೇ ತತೋ ಮೇಘಾಃ ಸ್ವಲ್ಪಂ ವರ್ಷಂತಿ ಸಂಸ್ಥಿತಾಃ ।
ಕೃಷ್ಣಾಜ್ಞಯಾ ಚ ವಾಯುಶ್ಚ ಸುಖಂ ವಾತಿ ಸುರಾನ್ ಪ್ರತಿ ॥ ೩೧ ॥

---

೨೮. ಎಲೈ ರಾಜನೇ ! ಐದನೆಯ ಸಾರಿ ಕಡೆದುದರಿಂದ ಆ ಪಾಲ್ಗಡಲಿಂದ ಶೀತಕಿರಣನಾದ ಚಂದ್ರನು ಹುಟ್ಟಿದನು. ಆ ಚಂದ್ರನನ್ನು ಶಂಕರನು ತನ್ನ ತಲೆಯಿಂದ ಹೆಂಗಸಿನಂತೆ ಸ್ವಸ್ತಿಕ ಒನ್ನೆಯಾಗಿ ಧರಿಸಿರುತ್ತಾನೆ.

೨೯. ಅಂತೆಯೇ ಪಾಲ್ಗಡಲಿಂದ ಅನೇಕವಿಧಗಳಾದ ಉತ್ತಮ ರತ್ನಗಳೂ, ತೊಡವುಗಳೂ, ಸಾವಿರಾರು ಗಂಧರ್ವರೂ ಆವಿರ್ಭವಿಸಿದರು.

೩೦. ಆ ಪಾಲ್ಗಡಲಲ್ಲಿ ಅಂತು ಕಟ್ಟಚ್ಚರಿಯಿಂದ ಕೂಡಿ ಆವಿರ್ಭವಿಸಿದ ಇವನ್ನೆಲ್ಲಾ ಆ ದೇವಾಸುರರೆಲ್ಲರೂ ಕಂಡು ಕಡುಸಂತಸಗೊಂಡವರಾದರು.

೩೧. ಅನಂತರದಲ್ಲಿ ಪೂರ್ಣಸುಖನಾದ ಶ್ರೀಕೃಷ್ಣಪರಮಾತ್ಮನ ಆಣತಿಯಿಂದ ಅಲ್ಲಿದ್ದ ಮೋಡಗಳು ದೇವತೆಗಳ ಪಾರ್ಶ್ವದಲ್ಲಿ ಸ್ವಲ್ಪ ಮಳೆಗರೆದುವು. ವಾಯುವೂ ದೇವತೆಗಳ ಪಕ್ಷದಲ್ಲಿ ಅವರಿಗೆ ಹಿತವಾಗುವಂತೆ ಬೀಸಿತು.

ವಿಷಂ ನಿಶ್ವಾಸವಾತೇನ ವಾಸುಕೇಶ್ಚಾಪರೇ ಹತಾಃ ।
ನಿಸ್ತೇಜಸೋಽಭವನ್ ದೈತ್ಯಾ ನಿರ್ವೀರ್ಯಾಶ್ಚ ಮಹಾಮತೇ ॥ ೩೨ ॥

ತತಃ ಶ್ರೀರುತ್ಥಿತಾ ತಸ್ಮಾತ್ ಕ್ಷೀರೋದಾದ್ಧೃತಪಂಕಜಾ ।
ವಿಭ್ರಾಜಮಾನಾ ರಾಜೇಂದ್ರ ದಿಶಃ ಸರ್ವಾಃ ಸ್ವತೇಜಸಾ ॥ ೩೩ ॥

ತತಸ್ತೀರ್ಥೋದಕೈಃ ಸ್ನಾತಾ ದಿವ್ಯವಸ್ತ್ರೈರಲಂಕೃತಾ ।
ದಿವ್ಯಗಂಧಾನುಲಿಪ್ತಾಂಗೀ ಸುಮನೋಭಿಃ ಸುಭೂಷಣೈಃ ॥ ೩೪ ॥

ದೇವಪಕ್ಷಂ ಸಮಾಸಾದ್ಯ ಸ್ಥಿತ್ವಾ ಕ್ಷಣಮರಿಂದಮ ।
ಹರಿವಕ್ಷಃಸ್ಥಲಂ ಪ್ರಾಪ್ತಾ ತತಃ ಸಾ ಕಮಲಾಲಯಾ ॥ ೩೫ ॥

---

೩೨. ಎಲೈ ಮಹಾಮತಿಯಾದ ರಾಯನೇ ! ಕೇಳು ; ನಂಜಿನಿಂದ ಕೂಡಿದ ವಾಸುಕಿಯ ನಿಟ್ಟುಸಿರಿನಿಂದ ಕೆಲವು ದೈತ್ಯರು ಸತ್ತುಹೋದರು; ಮತ್ತೆ ಕೆಲವರು ತೇಜೋವಿಹೀನರಾದರು; ಇನ್ನೂ ಹಲವರು ನಿರ್ವೀರ್ಯರಾದರು.

೩೩. ಎಲೈ ಸಹಸ್ರಾನೀಕ ರಾಜಶ್ರೇಷ್ಠನೇ ! ಅನಂತರದಲ್ಲಿ ಆ ಕ್ಷೀರಸಮುದ್ರದಿಂದ ಮಹಾಲಕ್ಷ್ಮೀದೇವಿಯು ಕೈಯಲ್ಲಿತಾವರೆಗಳನ್ನು ಹಿಡಿದುಕೊಂಡು ಆವಿರ್ಭವಿಸಿ, ತನ್ನ ಮೈಪೊಗರಿಂದ ಎಲ್ಲಾ ದೆಸೆಗಳನ್ನೂ ಪ್ರಕಾಶಪಡಿಸಿದಳು.

೩೪-೩೫. ಅನಂತರದಲ್ಲಿ ಆ ಮಹಾಲಕ್ಷ್ಮೀದೇವಿಯು ತೀರ್ಥೋದಕಗಳಿಂದ ಮಿಂದು ಉತ್ತಮವಾದ ಪಟ್ಟೆವಸ್ತ್ರಗಳಿಂದ ಅಲಂಕೃತೆಯಾಗಿ, ಉತ್ತಮವಾದ ಗಂಧವನ್ನು ಮೈಗೆ ಹಚ್ಚಿಕೊಂಡು, ಉತ್ತಮವಾದ ಹೂ ತೊಡವುಗಳಿಂದಲಂಕೃತೆಯಾಗಿ, ಸ್ವಲ್ಪ ಹೊತ್ತು ದೇವತೆಗಳ ಕಡೆಗೆ ಹೋಗಿ ನಿಂತುಕೊಂಡಿದ್ದು, ಅನಂತರದಲ್ಲಿ ಕಮಲವೇ ವಾಸಸ್ಥಾನವಾದ ಆ ಲಕ್ಷ್ಮೀದೇವಿಯು ಎಲೈ ಶತ್ರುನಾಶಕನಾದ ರಾಯನೇ ! ಶ್ರೀಹರಿಯ ಎದೆಯನ್ನು ಸೇರಿದಳು.

ತತೋಽಮೃತಘಟಂ ಪೂರ್ಣಂ ದುಗ್ಧಾತ್ತು ಪಯಸೋ ನಿಧೇಃ ।
ಧನ್ವಂತರಿಃ ಸಮುತ್ತಸ್ಥೌ ತತಃ ಪ್ರೀತಾಃ ಸುರಾ ನೃಪ ॥ ೩೬ ॥

ದೈತ್ಯಾಃ ಶ್ರಿಯಾ ಪರಿತ್ಯಕ್ತಾ ದುಃಖಿತಾಸ್ತೇಽಭವನ್ನೃಪ ।
ನೀತ್ವಾಽಮೃತಘಟಂ ಪೂರ್ಣಂ ತೇ ಚ ಜಗ್ಮುರ್ಯಥಾಸುಖಮ್ ॥ ೩೭ ॥

ತತಸ್ತ್ರೀರೂಪಮಕರೋದ್ವಿಷ್ಣುರ್ದೇವಹಿತಾಯ ವೈ ।
ಆತ್ಮಾನಂ ನೃಪಶಾರ್ದೂಲ ಸರ್ವಲಕ್ಷಣಸಂಯುತಮ್ ॥ ೩೮ ॥

ತತೋ ಜಗಾಮ ಭಗವಾನ್ ಸ್ತ್ರೀರೂಪೇಣ ಸುರಾನ್ ಪ್ರತಿ ।
ದಿವ್ಯರೂಪಾಂ ತು ತಾಂ ದೃಷ್ಟ್ವಾ ಮೋಹಿತಾಸ್ತೇ ಸುರದ್ವಿಷಃ ॥ ೩೯ ॥

---

೩೬. ಎಲೈ ರಾಯನೇ ! ಕೇಳು; ಅನಂತರದಲ್ಲಿ ಕ್ಷೀರಸಮುದ್ರದಿಂದ ಅಮೃತದಿಂದ ಪೂರ್ಣವಾದ ಘಟವು ಆವಿರ್ಭವಿಸಿತಲ್ಲದೆ, ಧನ್ವಂತರಿಯೂ ಆವಿರ್ಭವಿಸಿದನು. ಅದರಿಂದ ದೇವತೆಗಳು ಸಂತಸಗೊಂಡರು.

೩೭. ಎಲೈ ನೃಪನೇ ! ಕೇಳು; ಮಹಾಲಕ್ಷ್ಮೀದೇವಿಯು ತಮ್ಮ ಪಕ್ಷಕ್ಕೆ ಬಾರದೆ ಬಿಟ್ಟು ಹೋದುದಕ್ಕೆ ಆ ಅಸುರರು ದುಮ್ಮಾನಗೊಂಡವರಾದರು. ಅವರು ಅಮೃತಪೂರ್ಣವಾದ ಕುಂಭವನ್ನು ತೆಗೆದುಕೊಂಡು ತಮಗೆ ಸುಖವಾಗುವಂತೆ ಹೋದರು.

೩೮. ಎಲೈ ರಾಜಶ್ರೇಷ್ಠನೇ ! ಆ ಬಳಿಕ ಶ್ರೀಮಹಾವಿಷ್ಣುವು ದೇವತೆಗಳಿಗೆ ಹಿತವನ್ನೆಸಗಲು, ತಾನು ಸಕಲ ಲಕ್ಷಣಗಳಿಂದ ಕೂಡಿದ ಸ್ತ್ರೀರೂಪವನ್ನು ತಾಳಿದನು.

೩೯. ಅನಂತರದಲ್ಲಿ ಭಗವಂತನು ಆ ಸ್ತ್ರೀರೂಪದಿಂದ ಅಸುರರ ಬಳಿಗೆ ಹೋದನು. ಆಗ ಆ ಸುರದ್ವೇಷಿಗಳಾದ ದೈತ್ಯರು ಆ ದಿವ್ಯವಾದ ಸ್ತ್ರೀರೂಪವನ್ನು ನೋಡಿ, ಮೋಹಗೊಂಡವರಾದರು.

ಸುಧಾಪೂರ್ಣಘಟಂ ತೇ ತು ಮೋಹಿತ್ವಾಃ ಸಂಸ್ಥಾಪ್ಯ ಸತ್ತಮ ।
ಕಾಮೇನ ಪೀಡಿತಾಹ್ಯಾಸನ್ ಅಸುರಾಸ್ತತ್ರ ತತ್ ಕ್ಷಣಾತ್ ॥ ೪೦ ॥

ಮೋಹಯಿತ್ವಾ ತು ತಾನೇವಮಸುರಾನವನೀಪತೇ ।
ಅಮೃತಂ ತು ಸಮಾದಾಯ ದೇವೇಭ್ಯಃ ಪ್ರದದೌ ಹರಿಃ ॥ ೪೧ ॥

ತತ್ಪೀತ್ವಾ ತು ತತೋ ದೇವಾ ದೇವದೇವಪ್ರಸಾದತಃ ।
ಬಲವಂತೋ ಮಹಾವೀರ್ಯಾ ರಣೇ ಜಗ್ಮುಸ್ತತೋಽಸುರಾನ್ ॥ ೪೨ ॥

ಜಿತ್ವಾ ರಣೇಽಸುರಾನ್ ದೇವಾಃ ಸ್ವಾನಿ ರಾಜ್ಯಾನಿ ಚಕ್ರಿರೇ ।
ಏತತ್ತೇ ಕಥಿತಂ ರಾಜನ್ ಪ್ರಾದುರ್ಭಾವೋ ಹರೇರಯಮ್ ।
ಕೂರ್ಮಾಖ್ಯಃ ಪುಣ್ಯದೋ ನೄಣಾಂ ಶೃಣ್ವತಾಂ ಪಠತಾಮಪಿ ॥ ೪೩ ॥

---

೪೦. ಎಲೈ ಶ್ರೇಷ್ಠನಾದ ದೊರೆಯೇ ! ಆ ಅಸುರರು ಮೋಹದಿಂದ ಅಮೃತ ಪೂರ್ಣವಾದ ಕುಂಭವನ್ನು ಅಲ್ಲಿಯೇ ಬಿಟ್ಟು, ಆ ಕ್ಷಣದಿಂದಲೇ ಕಾಮದಿಂದ ಬಾಧೆಗೊಂಡವರಾದರು.

೪೧. ಎಲೈ ಸಹಸ್ರಾನೀಕರಾಯನೇ ! ಆಗ ಶ್ರೀ ಹರಿಯು ಅಸುರರನ್ನು ಅಂತು ಮೋಹಗೊಳಿಸಿ, ಅಮೃತ ಕಲಶವನ್ನು ತೆಗೆದುಕೊಂಡು ಬಂದು ದೇವತೆಗಳಿಗೆ ಕೊಟ್ಟನು.

೪೨. ದೇವದೇವೋತ್ತಮನಾದ ಶ್ರೀಹರಿಯು ಅನುಗ್ರಹದಿಂದ ಆ ಬಳಿಕ ದೇವತೆಗಳು ಆ ಅಮೃತವನ್ನು ಪಾನಮಾಡಿ ಬಲಿಷ್ಠರೂ, ಮಹಾವೀರ್ಯವುಳ್ಳವರೂ ಆಗಿ, ಅನಂತರದಲ್ಲಿ ಯುದ್ಧದಲ್ಲಿ ರಾಕ್ಷಸರ ಮೇಲೆ ಬಿದ್ದರು.

೪೩-೪೪. ಹಾಗೆ ಬಲಿಷ್ಠರಾದ ದೇವತೆಗಳು ಅಸುರರನ್ನು ಸೋಲಿಸಿ, ದೇವ ರಾಜ್ಯವನ್ನ ಪುನಃ ತಮ್ಮ ವಶವನ್ನಾಗಿ ಮಾಡಿಕೊಂಡರು. ಎಲೈ ರಾಜನೇ ! ನಿನಗೆ ಶ್ರೀ ಹರಿಯು ಈ ಕೂರ್ಮಾವತಾರವನ್ನು ತಾಳಿದ ಬಗೆಯನ್ನರುಹಿದೆನು.

ಆವಿಷ್ಕೃತಂ ಕೌರ್ಮಮನಂತವರ್ಚಸಂ
ನಾರಾಯಣೇನಾದ್ಭುತಕರ್ಮಕಾರಿಣಾ ।
ದಿವೌಕಸಾಂ ಚಾಪಿ ಹಿತಾಯ ಕೇವಲಂ
ರೂಪಂ ಪರಂ ಪಾವನಮೇವ ಕೀರ್ತಿತಮ್ ॥ ೪೪ ॥

ಇತಿ ಶ್ರೀ ನರಸಿಂಹಪುರಾಣೇ ಕೂರ್ಮಪ್ರಾದುರ್ಭಾವೋ ನಾಮಾಷ್ಟತ್ರಿಂಶೋಽಧ್ಯಾಯಃ

ಈ ಕೂರ್ಮಾವತಾರದ ಚರಿತ್ರೆಯನ್ನು ಕೇಳಿದವರಿಗೂ, ಓದಿದವರಿಗೂ ಕೂರ್ಮರೂಪಿಯಾದ ಭಗವಂತನು ಪುಣ್ಯವನ್ನುಂಟುಮಾಡುವನು. ಅಚಿಂತ್ಯಾದ್ಭುತ ಶಕ್ತನಾದ, ಕಟ್ಟಚ್ಚರಿಯ ಕಜ್ಜಗಳನ್ನೆಸಗುವ, ಪೂರ್ಣಗುಣನಾದ, ಶ್ರೀಮನ್ನಾರಾಯಣನು ಅಪಾರವಾದ ಕಾಂತಿಯುಳ್ಳ, ನಿತ್ಯವಾದ ಶ್ರೀ ಕೂರ್ಮರೂಪವನ್ನು ದೇವತೆಗಳಿಗೆ ಹಿತವನ್ನೆಸಗುವುದಕ್ಕೆ ಮಾತ್ರವೇ ಆವಿಷ್ಕರಿಸಿದನು. ಈ ರೂಪವಾದರೋ ಅತ್ಯಂತ ಪಾವನವಾದುದೆಂದು ಜ್ಞಾನಿಗಳು ಹೇಳುತ್ತಾರೆ;' ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ನಿರೂಪಿಸಿದುದನ್ನು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀನರಸಿಂಹಪುರಾಣದಲ್ಲಿ ಕೂರ್ಮಾವತಾರವೆಂಬ
ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

ಮೂವತ್ತೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ 'ದೇವಾಸುರ ಯುದ್ಧದಲ್ಲಿ ದೇವತೆಗಳು ದೈತ್ಯರಿಗೆ ಸೋತು ಹೋಗಿ, ಕ್ಷೀರಾಬ್ಧಿಶಾಯಿಯಾದ ಶ್ರೀಹರಿಯನ್ನು ಮರೆಹೊಕ್ಕು, ಅವನನ್ನು ಸ್ತುತಿಸಿದರು. ಅನಂತರ ತಮಗೆ ದೈತ್ಯರನ್ನು ಗೆಲ್ಲುವ ಉಪಾಯವನ್ನು ಹೇಳಬೇಕೆಂದು ಭಗವಂತನನ್ನು ಬೇಡಿದರು.

ಆಗ ಭಗವಂತನು ದೇವತೆಗಳಿಗೆ, 'ಎಲೈ ದೇವತೆಗಳೇ ! ನೀವು ದೈತ್ಯರೊಡನೆ ಸಂಧಿಯನ್ನು ಮಾಡಿಕೊಂಡು, ಪಾಲ್ಗಡಲನ್ನು ಮಂದರಪರ್ವತವನ್ನು ಕಡಗೋಲನ್ನಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು, ಸಕಲವಾಗ ಔಷಧಿಗಳನ್ನು ಹಾಕಿ ಕಡೆಯಿರಿ. ನಾನೂ ನಿಮಗೆ ನೆರವಾಗುವೆನು. ಅಲ್ಲಿ ಅಮೃತವು ಆವಿರ್ಭವಿಸುವುದು; ಅದನ್ನು ಕುಡಿಯುವುದರಿಂದ ನೀವು ದೈತ್ಯರನ್ನು ಗೆಲ್ಲುವ ಸಾಮರ್ಥ್ಯವನ್ನು ಪಡೆದು ಅಮೃತರಾಗುವಿರಿ; ' ಎಂದನು.

ದೇವತೆಗಳು ಹಾಂತೆಸಗಲು ತೊಡಗಿದರು. ಮಂದರಪರ್ವತವು ಭಾರಕ್ಕೆ ಪಾಲ್ಗಡಲಲ್ಲಿ ಕೆಳಕ್ಕೆ ಇಳಿದು ಹೋಗಲು, ಭಗವಂತನು ತಾನು ಕೂರ್ಮಾವತಾರವನ್ನು ತಾಳಿ, ಆ ಪರ್ವತವನ್ನು ತನ್ನ ಬೆನ್ನಚಿಪ್ಪಿನ ಮೇಲೆ ಹೊತ್ತುಕೊಂಡನು. ಅನಂತರ ದೇವಾಸುರರು ಕಡೆದರು. ಭಗವಂತನು ಉಭಯಪಕ್ಷದಲ್ಲೂ ಇದ್ದು ನೆರವಾದನು. ಆ ಕ್ಷೀರಸಮುದ್ರದಿಂದ ಕ್ರಮವಾಗಿ ವಿಷ, ಐರಾವತ, ಉಚ್ಚೈಶ್ರವಸ್ಸು, ಅಪ್ಸರಸ್ತ್ರೀಯರು, ಪಾರಿಜಾತ, ಚಂದ್ರ, ದಿವ್ಯವಾದ ಆಭರಣಗಳು ಮತ್ತು ಗಂಧರ್ವರು-ಇವರು ಆವಿರ್ಭವಿಸಿದರು.

ಅನಂತರದಲ್ಲಿ ಮಹಾಲಕ್ಷ್ಮಿಯು ಆವಿರ್ಭವಿಸಿ, ದೇವತೆಗಳ ಪಕ್ಷದಲ್ಲಿ ಸ್ವಲ್ಪ ಹೊತ್ತಿದ್ದು, ಶ್ರೀವಿಷ್ಣುವಿನ ವಕ್ಷಸ್ಥಳವನ್ನು ಸೇರಿದಳು. ಅನಂತರದಲ್ಲಿ ಅಮೃತಪೂರ್ಣವಾದ ಕಲಶವಾವಿರ್ಭವಿಸಿತು. ಆ ಲಕ್ಷ್ಮೀದೇವಿಯು ತಮ್ಮ ಪಕ್ಷಕ್ಕೆ ಬಾರದೆ

ಹೋದುದಕ್ಕೆ ಕುಪಿತರಾದ ರಾಕ್ಷಸರು ಅಮೃತ ಕಲಶವನ್ನು ತೆಗೆದುಕೊಂಡು ತಮಗೆ ಸಂತೋಷವಾದ ಕಡೆಗೆ ಹೊರಟರು. ಅದನ್ನು ಕಂಡು, ಭಗವಂತನು ಮೋಹಿನಿಯೆಂಬ ಸ್ತ್ರೀರೂಪವನ್ನು ತಾಳಿ, ದೈತ್ಯರಿಗೆ ಮೋಹಗೊಳಿಸಿ, ಅಮೃತವನ್ನು ತಂದು ದೇವತೆಗಳಿಗೆ ಕೊಟ್ಟನು. ಅದನ್ನು ಪಾನಮಾಡಿ ದೇವತೆಗಳು ಬಲಿಷ್ಠರಾಗಿ ದೈತ್ಯರನ್ನು ಗೆದ್ದರು.

ಇಂತು ಭಗವಂತನು ಕೂರ್ಮಾವತಾರವನ್ನು ಮಾಡಿ, ಶರಣಾಗತರಾದ ದೇವತೆಗಳನ್ನು ಕಾಪಿಟ್ಟುದನ್ನು ಯಾರು ಕೇಳುತ್ತಾರೆಯೋ, ಓದುತ್ತಾರೆಯೋ ಅವರು ಶುದ್ಧರಾಗುತ್ತಾರೆ;' ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ನಿರೂಪಿಸಿದನು.

ಇಂತು ಮೂವತ್ತೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್

ಏಕೋನಚತ್ವಾರಿಂಶೋಽಧ್ಯಾಯಃ

ವರಾಹಪ್ರಾದುರ್ಭಾವಃ

ಅತಃ ಪರಂ ಹರೇಃ ಪುಣ್ಯಂ ಪ್ರಾದುರ್ಭಾವಂ ನರಾಧಿಪ ।
ವರಾಹಂ ತೇ ಪ್ರವಕ್ಷ್ಯಾಮಿ ಸಮಾಹಿತಮನಾಃ ಶೃಣು ॥ ೧ ॥

ಅವಾಂತರಲಯೇ ಪ್ರಾಪ್ತೇ ಬ್ರಹ್ಮಣಸ್ತು ದಿನಕ್ಷಯೇ ।
ತ್ರೈಲೋಕ್ಯಮಖಿಲಂ ವ್ಯಾಪ್ಯ ತಿಷ್ಠಂತ್ಯಂಭಾಂಸಿ ಸತ್ತಮ ॥ ೨ ॥

ಮೂವತ್ತೊಂಬತ್ತನೆಯ ಅಧ್ಯಾಯವು

ವರಾಹಾವತಾರವು

೧. ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ :—' ಎಲೈ ಜನರೊಡೆಯನಾದ ಸಹಸ್ರಾನೀಕರಾಯನೇ ! ಕೇಳು ; ಇನ್ನು ಮುಂದೆ ಶ್ರೀಹರಿಯ ಪುಣ್ಯಪ್ರದವಾದ ವರಾಹವತಾರದ ಕಥೆಯನ್ನು ನಿರೂಪಿಸುವೆನು ; ಸಮಾಧಾನಮನವುಳ್ಳವನಾಗಿ ಅದನ್ನು ಕೇಳು.

೨. ಎಲೈ ಸತ್ತಮನೇ ! ಚತುರ್ಮುಖನ ದಿನವು ಕಳೆಯಲು ಅವಾಂತರ ಪ್ರಳಯವುಂಟಾಗಲು, ಮೂರು ಲೋಕವನ್ನೆಲ್ಲವನ್ನೂ ನೀರು ತುಂಬಿಕೊಂಡಿರುವುದು.

ತ್ರೈಲೋಕ್ಯೇಽಖಿಲಸತ್ವಾನಿ ಯಾನಿ ರಾಜೇಂದ್ರ ತಾನಿ ವೈ ।
ಗ್ರಸ್ತ್ವಾ ವಿಷ್ಣುಸ್ತತಶ್ಶೇತೇ ತಸ್ಮಿನ್ನೇಕಾರ್ಣವೇ ಜಲೇ ॥ ೩ ॥

ಅನನ್ತಭೋಗಶಯನೇ ಸಹಸ್ರಫಣಶೋಭಿತೇ ।
ರಾತ್ರಿಂ ಯುಗಸಹಸ್ರಾಂ ತಾಂ ಬ್ರಹ್ಮರೂಪೀ ಜಗತ್ಪತಿಃ ॥ ೪ ॥

ದಿತೇಃ ಪುತ್ರೋ ಮಹಾನಾಸೀತ್ ಕಶ್ಯಪಾದಿತಿ ನಃ ಶ್ರುತಮ್ ।
ಹಿರಣ್ಯಾಕ್ಷ ಇತಿ ಖ್ಯಾತೋ ಮಹಾಬಲ ಪರಾಕ್ರಮಃ ॥ ೫ ॥

ಪಾತಾಲೇ ನಿವಸನ್ ದೈತ್ಯೋ ದೇವಾನುಪರುರೋಧ ಸಃ ।
ಯಜ್ಞನಾಮುಪಕಾರಾಯ ಯತತೇ ಸ ತು ಭೂತಲೇ ।
ಅಥ ಭೂಮ್ಯುಪರಿ ಸ್ಥಿತ್ವಾ ಮರ್ತ್ಯಾ ಯಕ್ಷ್ಯಂತಿ ದೇವತಾಃ ।
ತೇನ ತೇಷಾಂ ಬಲಂ ವೀರ್ಯಂ ತೇಜಶ್ಚಾಪಿ ಭವಿಷ್ಯತಿ ॥ ೬ ॥

೩-೪. ಎಲೈ ರಾಜೇಂದ್ರನೇ ! ಕೇಳು ; ಈ ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳಲ್ಲಿ ಯಾವ ಚೇತನರಿದ್ದಾರೆಯೋ, ಅವರನ್ನು ಶ್ರೀ ಮಹಾವಿಷ್ಣುವು ತನ್ನ ಉದರದಲ್ಲಿಟ್ಟುಕೊಂಡು, ಒಂದೇ ಅಖಂಡಸಾಗರವಾದ ಆ ಜಲದಲ್ಲಿ ಸಾಸಿರ ಹೆಡೆಗಳಿಂದ ಮನೋಹರವಾದ ಆದಿಶೇಷನ ಒಡಲ ಹಾಸಿಗೆಯಲ್ಲಿ ಸಾಕ್ಷಾತ್ಪರಬ್ರಹ್ಮಸ್ವರೂಪನಾದ ಸಕಲ ಜಗನ್ನಿಯಾಮಕನು ಸಾಸಿರ ಯುಗಪರಿಮಾಣದ ಆ ರಾತ್ರಿಯಲ್ಲಿ ಯೋಗನಿದ್ರಾಸಕ್ತನಾಗಿರುತ್ತಾನೆ.

೫. ನಿರತಿಶಯವಾದ ಬಲಪರಾಕ್ರಮಶಾಲಿಯಾದ ಹಿರಣ್ಯಾಕ್ಷನೆಂದು ಹೆಸರು ಪಡೆದವನು ಕಶ್ಯಪರಿಂದ ದಿತಿದೇವಿಗೆ ಮಗನಾಗಿ ಜನಿಸಿದನೆಂದು ನಾವು ಕೇಳುತ್ತೇವೆ.

೬. ಆ ದೈತ್ಯನು ಪಾತಾಲಲೋಕದಲ್ಲಿ ವಾಸಿಸುತ್ತಾ ದೇವತೆಗಳನ್ನು ಬಾಧಿಸತೊಡಗುತ್ತಾನೆ. ಭೂತಲದಲ್ಲಿ ಯಾಗಶೀಲರಾದವರಿಗೆ ಕೇಡನ್ನೆಸಗಲು ಪ್ರಯತ್ನಿಸುತ್ತಾನೆ. ತರುವಾಯ ಮರ್ತ್ಯರು ಭೂಮಿಯಮೇಲೆ ವಾಸಮಾಡುತ್ತಲಿದ್ದು, ದೇವತೆಗಳನ್ನು ಉದ್ದೇಶಿಸಿ ಯಾಗವನ್ನು ಅನುಷ್ಠಿಸುತ್ತಾರೆ; ಆದ್ದರಿಂದ ಆ ದೇವತೆಗಳಿಗೆ ಬಲ, ವೀರ್ಯ ಮತ್ತು ತೇಜಸ್ಸು ಇವುಗಳುಂಟಾಗುತ್ತವೆ.

ಇತಿ ಮತ್ವಾ ಹಿರಣ್ಯಾಕ್ಷಃ ಕೃತಸರ್ಗಂ ತು ಬ್ರಹ್ಮಣಾ ।
ಭೂಮೇರ್ಯಾ ಧಾರಣಾಶಕ್ತಿಸ್ತಾಂ ನೀತ್ವಾ ಸ ಮಹಾಸುರಃ ॥ ೭ ॥

ವಿವೇಶ ತೋಯಮಧ್ಯೇ ತು ರಸಾತಲತಲಂ ನೃಪ ।
ವಿನಾ ಶಕ್ತ್ಯಾ ಚ ಜಗತೀ ಪ್ರವಿವೇಶ ರಸಾತಲಮ್ ॥ ೮ ॥

ನಿದ್ರಾವಸಾನೇ ಸರ್ವಾತ್ಮಾ ಕ್ವ ಸ್ಥಿತಾ ಮೇದಿನೀತಿ ವೈ ।
ಸಞ್ಚಿಂತ್ಯ ಜ್ಞಾತ್ವಾ ಯೋಗೇನ ರಸಾತಲತಲಂ ಗತಾಮ್ ॥ ೯ ॥

ಅಥ ವೇದಮಯಂ ರೂಪಂ ವರಾಹಂ ವಪುರಾಸ್ಥಿತಮ್ ।
ವೇದಪಾದಂ ಯೂಪದಂಷ್ಟ್ರಂ ಕೇತುವಕ್ತ್ರಂ ನರಾಧಿಪ ॥ ೧೦ ॥

೭-೮. ಇಂತು ಹಿರಣ್ಯಾಕ್ಷನು ತಿಳಿದು ಚತುರ್ಮುಖನು ಭೂಮಿಗೆ ಯಾವ ಧಾರಣಾಶಕ್ತಿಯನ್ನು ಸೃಷ್ಟಿಸಿರುವನೋ, ಆ ಶಕ್ತಿಯನ್ನು ಆ ಮಹಾ ದೈತ್ಯನು ಅಪಹರಿಸಿ, ಎಲೈ ಸಹಸ್ರಾನೀಕನೇ! ನೀರಿನ ಮಧ್ಯದಲ್ಲಿ ರಸಾತಲದೆಡೆಯನು ಪ್ರವೇಶಿಸುತ್ತಾನೆ. ಈ (ಭೂದೇವತೆಯೂ)ಭೂಮಿಯೂ, ಆ ಧಾರಣಾಶಕ್ತಿಯಿಂದ ರಹಿತವಾದುದಾಗಿ ರಸಾತಲವನ್ನೆ ಪ್ರವೇಶಿಸುತ್ತದೆ. (ಮುಳುಗಿರುತ್ತದೆ.)

೯-೧೦. ಸರ್ವಾಂತರ್ಯಾಮಿಯಾದ ಶ್ರೀ ಮಹಾವಿಷ್ಣುವು ಆ ಯೋಗ ನಿದ್ರೆಯು ಕಳೆಯಲು, 'ಮೇದಿನಿಯು ಎಲ್ಲಿರುವಳು?' ಎಂದು ಚಿಂತಿಸಿ, ಯೋಗ ದೃಷ್ಟಿಯಿಂದ ರಸಾತಲವನ್ನೈದಿರುವಳೆಂದು ತಿಳಿದು, ಬಳಿಕ ವೇದಾತ್ಮಕರೂಪವಾದ ವರಾಹ ಶರೀರವನ್ನು ತಾಳುತ್ತಾನೆ. ಆ ವರಾಹ ಶರೀರದಲ್ಲಿ ಯಜ್ಞದ ಪಶುವನ್ನು ಕಟ್ಟತಕ್ಕ ಮೋಟೀಮರವೇ ಕೋರೆಯ ಹಲ್ಲು, ಧ್ವಜವೇ ಮುಖವು.

ವ್ಯೂಢೋರಸ್ಕಂ ಮಹಾಬಾಹುಂ ಪೃಥುವಕ್ತ್ರಂ ನರಾಧಿಪ ।
ಅಗ್ನಿಜಿಹ್ವಂ ಸ್ರುಚಂ ತುಂಡಂ ಚಂದ್ರಾರ್ಕನಯನಂ ಮಹತ್ ।
ಪೂರ್ತೇಷ್ಟಧರ್ಮಶ್ರವಣಂ ದಿವ್ಯಂ ತತ್ಸಾಮನಿಃಸ್ವನವತ್ ॥ ೧೧ ॥

ಪ್ರಾಗ್ವಂಶಕಾಯಂ ಹವಿರ್ನಾಸಂ ಕುಶದರ್ಭತನೂರುಹಮ್ ।
ಸರ್ವವೇದಮಯಂ ತಚ್ಚ ಪುಣ್ಯಸೂಕ್ತಮಹಾಸಟಮ್ ॥ ೧೨ ॥

ತಾರಾನಕ್ಷತ್ರಹಾರಂ ಚ ಪ್ರಲಯಾವರ್ತ ಭೂಷಣಂ ।
ಇತ್ಥಂ ಕೃತ್ವಾ ತು ವಾರಾಹಂ ಪ್ರವಿವೇಶ ವೃಷಾಕಪಿಃ ॥ ೧೩ ॥

ರಸಾತಲಂ ನೃಪಶ್ರೇಷ್ಠ ಸನಕಾದ್ಯೈರಭಿಷ್ಟುತಃ ।
ಪ್ರವಿಶ್ಯ ಚ ಹಿರಣ್ಯಾಕ್ಷಂ ಯುದ್ಧೇ ಜಿತ್ವಾ ವೃಷಾಕಪಿಃ ॥ ೧೪ ॥

೧೧-೧೩. ಎಲೈ ರಾಯನೇ! ಕೇಳು; ಅಗಲವಾದೆದೆಯು, ಮಿನುಗುವ ತೋಳ್ಗಳು, ದೊಡ್ಡಬಾಯಿ, ಅಗ್ನಿಯೇ ನಾಲಿಗೆಯು, ಮರದ ಸಟ್ಟುಗವೇ ಮೂತಿಯು; ಸೂರ್ಯ ಚಂದ್ರರೇ ದೊಡ್ಡ ಕಣ್ಣು; ಖಾತಾದಿ ಕರ್ಮಗಳಾದ ಯಜ್ಞ ಧರ್ಮವೇ ಕಿವಿಗಳು; ಶ್ರೇಷ್ಠ ಸಾಮವೇ ಕೂಗು; ವೇದಿಕೆಯ ಮುಂಗಡೆಯ ಪ್ರದೇಶವೇ ಒಡಲು; ಹವಿಸ್ಸೇ ಮೂಗು; ಕುಶ ದರ್ಭಗಳೇಮೈಕೂದಲು ; ಸಕಲ ವೇದರೂಪಗಳಾದ ;ಪುಣ್ಯಪ್ರದಗಳಾದ ಸೂಕ್ತವೇ (ಮಹಾಸಟ) ಕುತ್ತಿಗೆಯ ಸ್ಕಂಧದ ಸುತ್ತಲೂ ಇರುವ ಕೂದಲು; ನಕ್ಷತ್ರ ತಾರೆಗಳೇ ಹಾರವು; ಪ್ರಲಯ ಕಾಲದ ಸುಳಿಯೇ ತೊಡವು;—ಇಂತು ಭಕ್ತರ ಇಷ್ಟವನ್ನು ವರ್ಷಿಸುವ, ಪೂರ್ಣ ನಾದ, ಅಪ್ರಾಕೃತ ಸುಖವನ್ನು ಅನುಭವಿಸುವ ಶ್ರೀ ವಿಷ್ಣುವು ನಿತ್ಯವಾದ ವರಾಹ (ಹಂದಿ)ದ ಆಕೃತಿಯನ್ನು ಪ್ರಾದುರ್ಭವಿಸಿ ರಸಾತಲವನ್ನುಹೊಗುತ್ತಾನೆ.

೧೪-೧೫. ಎಲೈ ರಾಜಶ್ರೇಷ್ಠನೇ! ಕೇಳು; ಭಕ್ತರಿಗೆ ಇಷ್ಟವನ್ನು ವರ್ಷಿಸುವ, ಪೂರ್ಣಸುಖನಾದ, ಶ್ರೀವರಾಹಮೂರ್ತಿಯಾದ ಶ್ರೀಹರಿಯು ಸನಕಾದಿ ಮುನಿಗಳಿಂದ ಸಂಸ್ತುತನಾಗಿ ರಸಾತಲವನ್ನು ಹೊಕ್ಕು, ಯುದ್ಧದಲ್ಲಿ ಹಿರಣ್ಯಾಕ್ಷ

ದಂಷ್ಟ್ರಾಗ್ರೇಣ ತತಃ ಪೃಥ್ವೀಂ ಸಮುದ್ಧೃತ್ಯ ರಸಾತಲಾತ್ ।
ಸ್ತೂಯಮಾನೋಽಮರಗಣೈಃ ಸ್ಥಾಪಯಾಮಾಸ ಪೂರ್ವವತ್ ॥ ೧೫ ॥

ಸಂಸ್ಥಾಪ್ಯ ಪರ್ವತಾನ್ ಸರ್ವಾನ್ ಯಥಾಸ್ಥಾನಮಕಲ್ಪಯತ್ ।
ವಿಹಾಯ ರೂಪಂ ವಾರಾಹಂ ತೀರ್ಥೇ ಕಾಕೇತಿ ವಿಶ್ರುತೇ ॥ ೧೬ ॥

ವೈಷ್ಣವಾನಾಂ ಹಿತಾರ್ಥಾಯ ಕ್ಷೇತ್ರಂ ತದ್ಗುಪ್ತಮುತ್ತಮಮ್ ।
ಬ್ರಹ್ಮರೂಪಂ ಸಮಾಸ್ಥಾಯ ಪುನಃ ಸೃಷ್ಟಿಂ ಚಕಾರ ಸಃ ॥ ೧೭ ॥

ನೆಂಬ ದೈತ್ಯನನ್ನು ಸೋಲಿಸಿ, ಬಳಿಕ ಕೋರೆಯ ಹಲ್ಲಿನ ತುದಿಯಿಂದ ಭೂಮಿಯನ್ನು ರಸಾತಲದಿಂದ ಮೇಲಕ್ಕೆ ಎತ್ತಿತಂದು, ದೇವತೆಗಳ ತಂಡದಿಂದ ಹೊಗಳಿಸಿಕೊಳ್ಳುತ್ತಾ, ಮೊದಲಿನಂತೆ ಅದನ್ನು ಸ್ಥಾಪಿಸುತ್ತಾನೆ.

೧೬. ಕುಲಪರ್ವತಗಳನ್ನೆಲ್ಲಾ ಮೊದಲಿದ್ದೆಡೆಗಳಲ್ಲಿಯೇ ಇಟ್ಟು ವ್ಯವಸ್ಥಿಸುತ್ತಾನೆ. ಕಾಕವೆಂದು ಪ್ರಸಿದ್ಧವಾದ ತೀರ್ಥದಲ್ಲಿ ಆ ವರಾಹಮೂರ್ತಿಯು ಅದೃಶ್ಯವಾಗುವಂತೆ (ಮೂಲರೂಪದಲ್ಲಿ ಒಂದಾಗುವಂತೆ) ಮಾಡುತ್ತಾನೆ.

೧೭. ಆ ಗುಪ್ತವಾದ, ಶ್ರೇಷ್ಠವಾದ ಕಾಕ ಕ್ಷೇತ್ರವು ವೈಷ್ಣವರಿಗೆ ಸುಖಪ್ರದವಾಗಿರುವುದು. ಆ ವಿಷ್ಣುವು ಮತ್ತೂ ಚತುರ್ಮುಖನಲ್ಲಿ ಬ್ರಹ್ಮರೂಪದಿಂದಿದ್ದು, ಆ ರೂಪವನ್ನು ತಾಳಿ, ಸೃಷ್ಟಿಕಾರ್ಯವನ್ನೆಸಗುತ್ತಾನೆ.

ವಿಷ್ಣುಃ ಪಾತಿ ಜಗತ್ಸರ್ವಮೇವಂ ಭೂಶೋ ಯುಗೇಯುಗೇ ।
ಹಂತಿಚಾಂತೇ ಜಗತ್ಸರ್ವಂ ರುದ್ರರೂಪೀ ಜನಾರ್ದನಃ ॥

ವೇದಾಂತವೇದ್ಯಃ ಪುರುಷೋ ವೃಷಾಕಪೇಃ
ಕಥಾಮಿಮಾಂ ಯಶ್ಚ ಶೃಣೋತಿ ಮಾನವಃ ।
ದೃಢಾಂ ಮತಿಂ ಯಜ್ಞತನೌ ವಿವೇಶ್ಯ ವೈ
ವಿಹಾಯ ಪಾಪಂ ಚ ನರೋ ಹರಿಂ ವ್ರಜೇತ್ ॥ ೧೮ ॥

ಇತಿ ಶ್ರೀ ನರಸಿಂಹಪುರಾಣೇ ವರಾಹ ಪ್ರಾದುರ್ಭಾವೋ ನಾಮ
ಏಕೋನಚತ್ವಾರಿಂಶೋಽಧ್ಯಾಯಃ

---

೧೮. ಪ್ರತಿ ಯುಗದಲ್ಲಿಯೂ ಶ್ರೀಮಹಾವಿಷ್ಣುವು ಈ ವರಾಹಾವತಾರವನ್ನೆಸಗಿ, ಲೋಕವನ್ನೆಲ್ಲವನ್ನೂ ರಕ್ಷಿಸುತ್ತಾನೆ. ಪ್ರಳಯ ಕಾಲದಲ್ಲಿ ದುಷ್ಟಜನರನ್ನು ಸಂಹರಿಸಿ, ಶ್ರೀಹರಿಯು ರುದ್ರನಲ್ಲಿ ರುದ್ರರೂಪದಿಂದಿದ್ದು, ಜಗತ್ತೆಲ್ಲವನ್ನೂ ಲಯ ಮಾಡುತ್ತಾನೆ. ಪೂರ್ಣಸದ್ಗುಣನಾದ ಶ್ರೀಹರಿಯು ವೇದಾಂತಗಳಾದ ಉಪನಿಷತ್ತುಗಳಿಂದರಿಯತಕ್ಕವನು. ಯಾವ ಮಾನವನು ವೃಷಾಕಪಿಯಾದ (ಭಕ್ತಾಭೀಷ್ಟ ವರ್ಷಣ ಮಾಡುವವನೂ, ಅಪ್ರಾಕೃತ ಸುಖಾನುಭವ ಮಾಡುವವನೂ ಆದ) ಶ್ರೀಹರಿಯ ಈ ಕಥೆಯನ್ನು ಕೇಳುತ್ತಾನೆಯೋ, ಅವನು ಯಜ್ಞರೂಪನಾದ ಶ್ರೀಹರಿಯಲ್ಲಿ ಚಲಿಸದ ಬುದ್ಧಿಯುಳ್ಳವನಾಗಿ, ಪಾಪವನ್ನು ಬಿಟ್ಟು, ಶುದ್ಧನಾಗಿ ಶ್ರೀಹರಿಯ ಸಾಮೀಪ್ಯವನ್ನು ಹೊಂದುವನು;' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ಹೇಳಿದರು.

ಇಂತು ಶ್ರೀನರಸಿಂಹಪುರಾಣದಲ್ಲಿ ವರಾಹಾವತಾರವೆಂಬ
ಮೂವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

ಮೂವತ್ತೊಂಬತ್ತನೆಯ ಅಧ್ಯಾಯದ

ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ವರಾಹಾವತಾರದ ಚರಿತ್ರೆಯನ್ನು ಅರುಹಲು ತೊಡಗಿ, ಚತುರ್ಮುಖನ ದಿನದ ಅವಸಾನದಲ್ಲಿ ಅವಾಂತರಪ್ರಳಯವುಂಟಾಗಲು, ಶ್ರೀಹರಿಯು ಮೂರು ಲೋಕಗಳನ್ನೂ, ತದ್ಗತ ಚೇತನರನ್ನೂ ತನ್ನ ಉದರದಲ್ಲಿಟ್ಟುಕೊಂಡು, ಒಂದೇ ಮುನ್ನೀರಿನಲ್ಲಿ ಆದಿಶೇಷತಲ್ಪದಲ್ಲಿ ಯೋಗನಿದ್ರಾಸಕ್ತನಾಗಿರಲು, ಹಿರಣ್ಯಾಕ್ಷನೆಂಬ ದೈತ್ಯನು ಪಾತಾಳದಲ್ಲಿ ವಾಸವಾಗಿದ್ದು, ದೇವತೆಗಳಿಗೆ ಬಾಧೆಗೊಳಿಸುತ್ತಿದ್ದು, ಧಾತ್ರಿಯಲ್ಲಿ ಬ್ರಾಹ್ಮಣರು ದೇವಗಳನ್ನುದ್ದೇಶಿಸಿ ಜನ್ನಗಳನ್ನು ಮಾಡಿ, ಅವರಿಗೆ ಸೊಗವನೆಸಗುವರೆಂದು ತಿಳಿದು, ಚತುರ್ಮುಖ ಸೃಷ್ಟವಾದ, ಆ ಧರಣಿಯ ಧಾರಕತ್ವಶಕ್ತಿಯನ್ನು ಅಪಹರಿಸಿ, ರಸಾತಲಕ್ಕೆ ಹೋದನು. ಆಗ ಭೂಮಿಯೂ ಬಲಗುಂದಿ ರಸಾತಲದಲ್ಲಿ ಮುಳುಗಿತು.

ಯೋಗನಿದ್ರಾವಸಾನದಲ್ಲಿ ಶ್ರೀಹರಿಯು ಧಾರಿಣಿಯೆಲ್ಲಿರುವಳೆಂದು ಚಿಂತಿಸಿ, ತನ್ನ ಅಚಿಂತ್ಯಾದ್ಭುತಶಕ್ತಿಯಿಂದ ರಸಾತಳಗತಳಾಗಿರುವುದನ್ನು ಅರಿತು, ಧಾರಿಣಿಯ ಶಕ್ತಿಯನ್ನಪಹರಿಸಿದ ದೈತ್ಯಸಂಹಾರದ ಸಲುವಾಗಿ, ತಾನು ಯಜ್ಞಾತ್ಮಕವಾದ ಶ್ರೀವರಾಹತನುವನ್ನು ಸ್ವೀಕರಿಸಿ, ರಸಾತಳಕ್ಕೆ ಹೋಗಿ, ಆ ರಾಕ್ಷಸನನ್ನು ಸೋಲಿಸಿ, ಭೂಮಿಯನ್ನು ತನ್ನ ಕೋರೆಯಹಲ್ಲಿನ ತುದಿಯಿಂದ ಎತ್ತಿಕೊಂಡು ಬಂದು, ಯಥಾಸ್ಥಾನದಲ್ಲಿ ಪ್ರತಿಷ್ಠಿಸಿ, ತಾನು ಗುಪ್ತವಾದ ಕಾಕಕ್ಷೇತ್ರಗಲ್ಲಿ ತನ್ನ ಮೂಲರೂಪದಲ್ಲಿಯೇ ವಾರಾಹತನುವು ಸೇರುವಂತೆಸಗಿದನು. ಈ ಕಾಕಕ್ಷೇತ್ರವು ಪರಮಪವಿತ್ರವಾದುದು.

ಶ್ರೀವರಾಹಾವತಾರದ ಕಥೆಯನ್ನು ಭಕ್ತಿಯಿಂದ ಕೇಳಿದವನು ಸಕಲ ಪಾಪಮುಕ್ತನಾಗಿ, ಶುದ್ಧನಾಗಿ ಶ್ರೀಹರಿಯ ಸಾಮೀಪ್ಯವನ್ನೈದುವನು ;' ಎಂದು ನಿರೂಪಿಸಿದುದನ್ನು ಶ್ರೀಸೂತರು ಭಾರದ್ವಾಜನಿಗೆ ಹೇಳುತ್ತಾರೆ.

ಇಂತು ಮೂವತ್ತೊಂಬತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಚತ್ವಾರಿಂಶೋಽಧ್ಯಾಯಃ

ಶ್ರೀ ವಿಷ್ಣೋರ್ನಾಮಸ್ತೋತ್ರಮ್.

॥ ಮಾರ್ಕಂಡೇಯ ಉವಾಚ ॥

ವಾರಾಹಃ ಕಥಿತೋ ಹ್ಯೇವಂ ಪ್ರಾದುರ್ಭಾವೋ ಹರೇಸ್ತವ ।
ಸಾಂಪ್ರತಂ ನಾರಸಿಂಹಂ ತು ಪ್ರವಕ್ಷ್ಯಾಮಿ ನಿಬೋಧ ಮೇ ॥ ೧ ॥

ದಿತೇಃ ಪುತ್ರೋ ಮಹಾನಾಸೀದ್ಧಿರಣ್ಯಕಶಿಪುಃ ಪುರಾ ।
ತಪಸ್ತೇಪೇ ನಿರಾಹಾರೋ ಬಹುವರ್ಷಸಹಸ್ರಕಮ್ ॥ ೨ ॥

ನಲವತ್ತನೆಯ ಅಧ್ಯಾಯವು.

ಶ್ರೀವಿಷ್ಣುವಿನ ನಾಮಸ್ತೋತ್ರವು.

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ;—' ಎಲೈ ಸಹಸ್ರಾನೀಕರಾಯನೇ ! ನಿನಗೆ ಇದುವರೆಗೆ ಇಂತು ವರಹಾವತಾರದ ಚರಿತ್ರೆಯನ್ನು ಹೇಳಿದೆನು. ಇನ್ನು ಶ್ರೀ ನರಸಿಂಹಾವತಾರದ ಚರಿತ್ರೆಯನ್ನು ನಿರೂಪಿಸುವೆನು ; ಇದನ್ನು ಮನಗೊಟ್ಟಾಲಿಸಿ ತಿಳಿಯುವವನಾಗು.

೨. ಪೂರ್ವದಲ್ಲಿ ಹಿರಣ್ಯಕಶಿಪುವೆಂಬ ದೊಡ್ಡ ದೈತ್ಯನಿದ್ದನು. ಅವನು ಆಹಾರವಿಲ್ಲದೇ ಅನೇಕ ಸಹಸ್ರವರ್ಷಗಳವರೆವಿಗೆ ತಪವನ್ನೆಸಗಿದನು.

ತಪತಸ್ತಸ್ಯ ಸಂತುಷ್ಟೋ ಬ್ರಹ್ಮಾ ತಂ ಪ್ರಾಹ ದಾನವಮ್ ।
ವರಂ ವರಯ ದೈತ್ಯೇಂದ್ರ ಯಸ್ತೇ ಮನಸಿ ವರ್ತತೇ ॥ ೩ ॥

ಇತ್ಯುಕ್ತೋ ಬ್ರಹ್ಮಣಾ ದೈತ್ಯೋ ಹಿರಣ್ಯಕಶಿಪುಃ ಪುರಾ ।
ಉವಾಚ ನತ್ವಾ ದೇವೇಶಂ ಬ್ರಹ್ಮಾಣಂ ವಿನಯಾನ್ವಿತಃ ॥ ೪ ॥

॥ ಹಿರಣ್ಯಕಶಿಪುರುವಾಚ ॥

ಯದಿ ತ್ವಂ ವರದಾನಾಯ ಪ್ರವೃತ್ತೋ ಭಗವನ್ಮಮ ।
ಯದ್ಯದ್ವೃಣೋಮ್ಯಹಂ ಬ್ರಹ್ಮಂಸ್ತತ್ತನ್ಮೇ ದಾತುಮರ್ಹಸಿ ॥ ೫ ॥

ನ ಶುಷ್ಕೇಣ ನ ಚಾರ್ದ್ರೇಣ ನ ಜಲೇನ ನ ವಹ್ನಿನಾ ।
ನ ಕಾಷ್ಠೇನ ನ ಕೀಟೇನ ಪಾಷಾಣೇನ ನ ವಾಯುನಾ ॥ ೬ ॥

---

೩. ಇಂತು ತಪವನ್ನು ಗೆಯ್ಯುತ್ತಿರುವ ಆ ದಾನವನಿಗೆ ಪಿತಾಮಹನು ಸಂತುಷ್ಟನಾಗಿ, 'ಎಲೈ ದೈತ್ಯೇಂದ್ರನೆ! ನಿನ್ನ ಮನದಲ್ಲಿ ಯಾವುದಿದೆಯೋ, ಆ ವರವನ್ನು ಕೇಳುವವನಾಗು;' ಎಂದು ಹೇಳಿದನು.

೪. ಇಂತು ಚತುರ್ಮುಖನು ಹೇಳಲು, ಮೊದಲು ಆ ಹಿರಣ್ಯಕಶಿಪುವೆಂಬ ದೈತ್ಯನು ಆ ದೇವತೆಗಳ ನಿಯಾಮಕನಾದ ಚತುರ್ಮುಖಬ್ರಹ್ಮನಿಗೆ ವಿನಯದಿಂದೆರಗಿ, ಇಂತು ಅರಿಕೆ ಮಾಡಿದನು.

೫. ಹಿರಣ್ಯಕಶಿಪುವು ಅರಿಕೆ ಮಾಡುತ್ತಾನೆ;— 'ಎಲೈ ಪೂಜ್ಯನಾದ ಬ್ರಹ್ಮನೇ ನೀನು! ವರಗಳನ್ನು ಈಯಲು ತೊಡಗಿದವನಾಗಿದ್ದರೆ, ನಾನು ಯಾವು ಯಾವುದನ್ನು ಕೇಳುವೆನೋ, ಅವನ್ನೆಲ್ಲಾ ಕೊಡಲು ಅರ್ಹನಾಗಿರುವೆ.

೬-೯. ಒಣಗಿದ ವಸ್ತುವಿನಿಂದಾಗಲೀ, ಒಪ್ಪೆಯಾದ ವಸ್ತುವಿನಿಂದಾಗಲೀ, ಬೆಂಕಿಯಿಂದಾಗಲಿ, ಕಟ್ಟಿಗೆಯಿಂದಾಗಲೀ, ಇರುವೆ ಮುಂತಾದ ವಸ್ತುಗಳಿಂದಾಗಲೀ,

ನಾಯುಧೇನ ನ ಶೂಲೇನ ನ ಶೈಲೇನ ನ ಮಾನುಷೈಃ ।
ನ ಸುರೈರಸುರೈರ್ವಾಪಿ ನ ಗಂಧರ್ವೈರ್ನರಾಕ್ಷಸೈಃ ॥ ೭ ॥

ನ ಕಿನ್ನರೈರ್ನ ಯಕ್ಷೈಸ್ತು ವಿದ್ಯಾಧರಭುಜಂಗಮೈಃ ।
ನ ವಾನರೈರ್ಮೃಗೈರ್ವಾಪಿ ನೈವ ಮಾತೃಗಣೈರಪಿ ॥ ೮ ॥

ನಾಭ್ಯಂತರೇ ನ ಬಾಹ್ಯೇ ತು ನಾನ್ಯೈರ್ಮರಣಹೇತುಭಿಃ ।
ನ ದಿನೇ ನ ಚ ನಕ್ತೋ ಮೇ ತ್ವತ್ಪ್ರಸಾದಾದ್ಭವೇನ್ಮೃತಿಃ ॥ ೯ ॥

ಇತಿ ವೈ ದೇವದೇವೇಶ ವರಂ ತ್ವತ್ತೋ ವೃಣೋಮ್ಯಹಮ್ ।

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತೋ ದೈತ್ಯರಾಜೇನ ಬಹ್ಮಾ ತಂ ಪ್ರಾಹ ಪಾರ್ಥಿವಮ್ ॥ ೧೦ ॥

ತಪಸಾ ತವ ತುಷ್ಟೋಽಹಂ ಮಹತಾ ತು ವರಾನಿಮಾನ್ ।
ದುರ್ಲಭಾನಪಿ ದೈತ್ಯೇಂದ್ರ ದದಾಮಿ ಪರಮಾದ್ಭುತಾನ್ ॥ ೧೧ ॥

ಕಲ್ಲಿನಿಂದಾಗಲೀ, ಗಾಳಿಯಿಂದಾಗಲೀ, ಕೈದುಗಳಿಂದಾಗಲೀ, ಶೂಲದಿಂದಾಗಲೀ, ಬೆಟ್ಟದಿಂದಾಗಲೀ, ಮನುಷ್ಯರಿಂದಾಗಲೀ, ದೇವತೆಗಳಿಂದಾಗಲೀ, ರಾಕ್ಷಸರಿಂದಾಗಲೀ, ಗಂಧರ್ವರಿಂದಾಗಲೀ, ಕಿನ್ನರರಿಂದಾಗಲೀ, ಯಕ್ಷರಿಂದಾಗಲೀ, ವಿದ್ಯಾಧರರಿಂದಾಗಲೀ, ನಾಗರಿಂದಾಗಲೀ, ಕಪಿಗಳಿಂದಾಗಲೀ, ಮೃಗಗಳಿಂದಾಗಲೀ, ಚಾಮುಂಡಾದಿ ಮಾತೃಗಣದಿಂದಾಗಲೀ, ಮನೆಯ ಒಳಗಾಗಲೀ, ಹೊರಗಾಗಲೀ, ಇನ್ನಾವ ಮರಣಕಾರಣಗಳಿಂದಾಗಲೀ, ಹಗಲಿನಲ್ಲಾಗಲೀ, ನಿನ್ನಿಂದಾಗಲೀ, ಮರಣವು ನಿನ್ನ ಅನುಗ್ರಹದಿಂದ ಆಗಬಾರದು. ಎಲೈ ದೇವೋತ್ತಮನೇ ! ಈ ವರವನ್ನು ನಾನು ನಿನ್ನಿಂದ ಅಪೇಕ್ಷಿಸುತ್ತೇನೆ;' ಎಂದು ಬೇಡಿದನು.

ಮಾರ್ಕಂಡೇಯಮುನಿಯು ಹೇಳುತ್ತಾನೆ:— 'ದೈತ್ಯರಾಜನು ಇಂತು ಹೇಳಲು, ಬ್ರಹ್ಮನು ಅವನಿಗೆ ಇಂತು ಹೇಳಿದನು; 'ಎಲೈ ದೈತ್ಯೇಂದ್ರನೇ ! ನಿನ್ನ ಕಠಿಣವಾದ ತಪದಿಂದ ನಾನು ಸಂತಸಗೊಂಡೆನು; ಕಟ್ಟಿಚರಿಯಾದ, ಹೊಂದಲಶಕ್ಯವಾದ ಈ ನಿನ್ನ ವರಗಳನ್ನು ನಾನು ನಿನಗೆ ಸಲ್ಲಿಸುತ್ತೇನೆ.

ಅನ್ಯೇಷಾಂ ನೇದೃಶಂ ದತ್ತಂ ನ ಕೈರಿತ್ಥಂ ತಪಃ ಕೃತಮ್ ।
ತ್ವತ್ಪ್ರಾರ್ಥಿತಂ ಮಯಾ ದತ್ತಂ ಸರ್ವಂ ತೇ ಚಾಸ್ತು ದೈತ್ಯಪ ॥ ೧೨ ॥

ಗಚ್ಛ ಭುಂಕ್ಷ್ವ ಮಹಾಬಾಹೋ ತಪಸಾಮೂರ್ಜಿತಂ ಫಲಮ್ ।
ಇತ್ಯೇವಂ ದೈತ್ಯರಾಜಸ್ಯ ಹಿರಣ್ಯಕಶಿಪೋಃ ಪುರಾ ॥ ೧೩ ॥

ದತ್ವಾ ವರಾನ್ ಯಯೌ ಬ್ರಹ್ಮಾ ಬ್ರಹ್ಮಲೋಕಮನುತ್ತಮಮ್ ।
ಸೋಽಪಿ ಲಬ್ಧವರೋ ದೈತ್ಯೋ ಬಲವಾನ್ ಬಲದರ್ಪಿತಃ ॥ ೧೪ ॥

ದೇವಾನ್ ಸಿಂಹಾನ್ ರಣೇ ಜಿತ್ವಾ ದಿವಃ ಪ್ರಾಚ್ಯಾವಯದ್ಭುವಿ ।
ದಿವಿ ರಾಜ್ಯಂ ಸ್ವಯಂ ಚಕ್ರೇ ಸರ್ವಶಕ್ತಿಸಮನ್ವಿತಮ್ ॥ ೧೫ ॥

ದೇವಾ ಅಪಿ ಭಯಾತ್ತಸ್ಯ ರುದ್ರಾಶ್ಚೈವರ್ಷಯೋ ನೃಪ ।
ವಿಚೇರುರವನೌ ಸರ್ವೇ ಬಿಭ್ರಾಣಾ ಮಾನುಷೀಂ ತನುಮ್ ॥ ೧೬ ॥

---

೧೨. ನಾನು ಇನ್ನಾರಿಗೂ ಇಂತಹ ವರವನ್ನು ಕೊಟ್ಟಿಲ್ಲವು; ಅವರೂ ಇಂತಹಕಠಿಣವಾದ ತಪವನ್ನು ಆಚರಿಸಲಿಲ್ಲವು; ಎಲೈ ದೈತ್ಯರಾಜನೇ! ನೀನು ಬೇಡಿದುದನ್ನು ನಾನು ದಯೆಗೆಯ್ದಿರುತ್ತೇನೆ. ನಿನಗೆಲ್ಲವೂ ಸಿದ್ಧಿಸಲಿ.

೧೩-೧೫. ಅಯ್ಯಾ ಮಹಾಬಾಹುವೇ ! ಹೋಗು; ತಪದಿಂದ ಏಳ್ಗೆವಡೆದ ಫಲವನ್ನು ಅನುಭವಿಸು;' ಇಂತು ಚತುರ್ಮುಖನು ದೈತ್ಯರಾಜನಾದ ಹಿರಣ್ಯಕಶಿಪುವಿಗೆ ಪೂರ್ವೋಕ್ತಗಳಾದ ವರಗಳನ್ನಿತ್ತು, ಅತ್ಯುತ್ತಮವಾದ ಸತ್ಯಲೋಕಕ್ಕೆ ಹೋದನು. ಆ ಮಹಾಬಲಶಾಲಿಯಾದ ದೈತ್ಯನು ವರಗಳನ್ನು ಪಡೆದವನು ಬಲದಿಂದ ಅಹಂಕಾರವುಳ್ಳವನಾಗಿ ದೇವತೆಗಳನ್ನೂ, ಸಿಂಹಗಳನ್ನೂ ಕದನದಲ್ಲಿ ಸೋಲಿಸಿ, ದೇವಲೋಕವನ್ನು ಭೂಮಿಯಲ್ಲಿ ಕೆಡುಹಿದನು. ತಾನೇ ಸಕಲ ಶಕ್ತಿಯಿಂದ ಕೂಡಿದವನಾಗಿ ದೇವಲೋಕದಲ್ಲಿ ರಾಜ್ಯದ ಒಡತನವನ್ನೆಸಗಿದನು.

೧೬. ಎಲೈ ರಾಜನೇ ! ಕೇಳು; ಅವನ ಭಯದಿಂದ ದೇವತೆಗಳೂ, ರುದ್ರರೂ, ಋಷಿಗಳೂ, ಎಲ್ಲರೂ ಮಾನವರೊಡಲನ್ನು ತಾಳಿ ಭೂಮಿಯಲ್ಲಿ ಸಂಚರಿಸಿದರು.

ಪ್ರಾಪ್ತತ್ರೈಲೋಕ್ಯ ರಾಜ್ಯೋಽಸೌ ಹಿರಣ್ಯಕಶಿಪುಃ ಪ್ರಜಾಃ ।
ಆಹೂಯ ಸರ್ವಾ ರಾಜೇಂದ್ರ ವಾಕ್ಯಂ ಚೇದಮುಭಾಷತ ॥ ೧೭ ॥

ನ ಯಷ್ಟವ್ಯಂ ನ ಹೋತವ್ಯಂ ನ ದಾತವ್ಯಂ ಸುರಾನ್ ಪ್ರತಿ ।
ಯುಷ್ಮಾಭಿರಹಮೇವಾದ್ಯ ತ್ರೈಲೋಕ್ಯಾಧಿಪತಿಃ ಪ್ರಜಾಃ ॥ ೧೮ ॥

ಮಮೈವ ಪೂಜಾಂ ಕುರುತ ಯಜ್ಞದಾನಾದಿಕರ್ಮಣಾ ।
ತಾಶ್ಚ ಸರ್ವಾಸ್ತಥಾ ಚಕ್ರುರ್ದೈತ್ಯೇಂದ್ರಸ್ಯ ಭಯಾನ್ನೃಪ ॥ ೧೯ ॥

ಯತ್ರೈವಂ ಕ್ರಿಯಮಾಣೇಷು ತ್ರೈಲೋಕ್ಯಂ ಸಚರಾಚರಮ್ ।
ಅಧರ್ಮಯುಕ್ತಂ ಸಕಲಂ ಬಭೂವ ನೃಪಸತ್ತಮ ॥ ೨೦ ॥

---

೧೭. ಈ ಹಿರಣ್ಯಕಶಿಪುವು ತ್ರೈಲೋಕ್ಯ ರಾಜ್ಯವನ್ನು ಪಡೆದವನು ಎಲೈ ರಾಜೇಂದ್ರನೇ ! ತನ್ನ ಸಕಲ ಪ್ರಜೆಗಳನ್ನೂ ಕರೆದು ಇಂತು ಆಣತಿಗೆಯ್ದನು.

೧೮. 'ಎಲೈ ಪ್ರಜೆಗಳಿರಾ ! ನೀವು ಇನ್ನು ಮುಂದೆ ದೇವತೆಗಳನ್ನುದ್ದೇಶಿಸಿ ಯಾಗವನ್ನು ಬೇಳಬಾರದು ; ಹೋಮವನ್ನೆಸಗಬಾರದು ; ದಾನವನ್ನೀಯಬಾರದು ; ಇಂದು ನಾನೇ ತ್ರೈಲೋಕ್ಯಕ್ಕೆ ಒಡೆಯನಾಗಿರುತ್ತೇನೆ.

೧೯. ನೀವು ಆ ಯಜ್ಞದಾನಾದಿ ಕ್ರಿಯೆಗಳಿಂದ ನನ್ನ ಪೂಜೆಯನ್ನೇ ಮಾಡಿರಿ ;' ಇಂತು ಆ ಹಿರಣ್ಯಕನು ನುಡಿಯಲು, ಆ ಪ್ರಜೆಗಳೆಲ್ಲರೂ, ಎಲೈ ನೃಪನೇ ! ದೈತ್ಯೇಂದ್ರನಾದ ಆ ಹಿರಣ್ಯಕಶಿಪುವಿನ ಭಯದಿಂದ ಹಾಗೆಯೇ ಮಾಡಿದರು.

೨೦. ಎಲೈ ರಾಜಶ್ರೇಷ್ಠನೇ ! ಕೇಳು ; ಪ್ರಜೆಗಳೆಲ್ಲರೂ ಇಂತು ಆಚರಿಸಲು ಯಾವಾಗ ತೊಡಗಿದರೋ, ಆಗ ಮೂರು ಲೋಕವೆಲ್ಲವೂ ಚರಾಚರದೊಡಗೂಡಿ ಅಧರ್ಮಯುಕ್ತವಾಯಿತು.

ಸ್ವಧರ್ಮಲೋಪಾತ್ಸರ್ವೇಷಾಂ ಪಾಪೇ ಮತಿರಜಾಯತ ।
ಗತೇ ಕಾಲೇ ತು ಮಹತಿ ದೇವಾಃ ಸೇಂದ್ರಾ ಬೃಹಸ್ಪತಿಮ್ ॥ ೨೧ ॥

ನೀತಿಜ್ಞಂ ಸರ್ವಶಾಸ್ತ್ರಜ್ಞಂ ಪಪ್ರಚ್ಛುರ್ವಿನಯಾನ್ವಿತಾಃ ।
ಹಿರಣ್ಯಕಶಿಪೋರಸ್ಯ ವಿನಾಶಂ ಮುನಿಸತ್ತಮ ॥ ೨೨ ॥

ತ್ರೈಲೋಕ್ಯಹಾರಿಣಃ ಶೀಘ್ರಂ ವಧೋಪಾಯಂ ವದಸ್ವ ನಃ ।

॥ ಬೃಹಸ್ಪತಿರುವಾಚ ॥

ಶೃಣುಧ್ವಂ ಮಮ ವಾಕ್ಯಾನಿ ಸ್ವಪದಪ್ರಾಪ್ತಯೇ ಸುರಾಃ ॥ ೨೩ ॥

ಪ್ರಾಯೋ ಹಿರಣ್ಯಕಶಿಪುಃ ಕ್ಷೀಣಭಾಗ್ಯೋ ಮಹಾಸುರಃ ।
ಶೋಕೋ ನಾಶಯತಿ ಪ್ರಜ್ಞಾಂ ಶೋಕೋ ನಾಶಯತಿ ಶ್ರುತಮ್ ॥ ೨೪ ॥

೨೧-೨೨. ಸ್ವಧರ್ಮವನ್ನು ಬಿಟ್ಟುದುದರಿಂದ ಸಕಲ ಪ್ರಜೆಗಳಿಗೂ ಪಾಪ ಕಾರ್ಯದಲ್ಲಿ ಬುದ್ಧಿಯುಂಟಾಯಿತು. ಇಂತು ಅನೇಕ ಸಂವತ್ಸರಗಳು ಕಳೆಯಲು, ಇಂದ್ರಸಹಿತರಾದ ದೇವತೆಗಳು ನೀತಿಯನ್ನೂ, ಸಕಲ ಶಾಸ್ತ್ರಗಳನ್ನೂ ಅರಿತ ಬೃಹಸ್ಪತಿಯನ್ನು ನಮ್ರತೆಯೊಡಗೂಡಿ ಇಂತು ಕೇಳಿದರು :— 'ಎಲೈ ಜ್ಞಾನಿ ಶ್ರೇಷ್ಠನೇ ! ಮೂಲೋಕವನ್ನಪಹರಿಸಿರುವ ಈ ಹಿರಣ್ಯಕಶಿಪುವಿನ ಅಳಿವನ್ನೂ, ಇವನನ್ನು ಕೊಲ್ಲುವ ಉಪಾಯವನ್ನೂ ನಮಗೆ ಬೇಗನೆ ತಿಳಿಸು;' ಎಂದು ಬೇಡಿಕೊಂಡರು.

೨೩-೨೬, ಬೃಹಸ್ಪತಿಯು ಇಂತು ಹೇಳುತ್ತಾನೆ:—ಎಲೈ ದೇವತೆಗಳೇ ! ನಿಮ್ಮ ಲೋಕವು ಮತ್ತೂ ನಿಮಗೆ ದೊರೆಯಬೇಕಾದರೆ, ನನ್ನ ಈ ನುಡಿಯನ್ನು ಕೇಳಿರಿ; ಮಹಾ ದೈತ್ಯನಾದ ಹಿರಣ್ಯಕಶಿಪುವು ಬಹುವಾಗಿ ಭಾಗ್ಯವನ್ನು (ಪುಣ್ಯ ವನ್ನು) ಕಳೆದುಕೊಂಡವನಾಗಿರುತ್ತಾನೆ. 'ಅಳಲು ವಿವೇಕವನ್ನು ಅಳಿಯಿಸುತ್ತದೆ; ಶಾಸ್ತ್ರಜ್ಞಾನವನ್ನೂ ನಾಶಮಾಡುತ್ತದೆ; ಲೌಕಿಕ ಜ್ಞಾನವನ್ನೂ ಹಾಳುಮಾಡುತ್ತದೆ;

ಸೋಢುಂ ಶಕ್ಯೋಽಗ್ನಿಸಂಬಂಧಃ ಶಸ್ತ್ರಸ್ಪರ್ಶಶ್ಚ ದಾರುಣಃ ।
ಶೋಕೋ ಮತಿಂ ನಾಶಯತಿ ನಾಸ್ತಿ ಶೋಕಸಮೋ ರಿಪುಃ ॥ ೨೫ ॥

ನನು ಶೋಕಭವಂ ದುಃಖಂ ಸಂಸೋಢುಂ ನೃಪ ಶಕ್ಯತೇ ।
ಕಾಲಾನ್ನಿಮಿತ್ತಾಚ್ಚ ವಯಂ ಲಕ್ಷ್ಯಾಮಸ್ತತ್ಕ್ಷಯಂ ಸುರಾಃ ॥ ೨೬ ॥

ಬುಧಾಶ್ಚ ಸರ್ವೇ ಸರ್ವತ್ರ ಸ್ಥಿತಾ ವಕ್ಷ್ಯಂತಿ ನಿತ್ಯಶಃ ।
ಅಚಿರಾದೇವ ದುಷ್ಟೋಽಸೌ ನಶ್ಯತ್ಯೇವ ಪರಸ್ಪರಮ್ ॥ ೨೭ ॥

ದೇವಾನಾಂ ತು ಪರಾಮೃದ್ಧಿಂ ಸ್ವಪದಪ್ರಾಪ್ತಿಲಕ್ಷಣಮ್ ।
ಹಿರಣ್ಯಕಶಿಪೋರ್ನಾಶಂ ಶಕುನಾನಿ ವದಂತಿ ಮೇ ॥ ೨೮ ॥

ಯತ ಏವಮತೋ ದೇವಾಃ ಸರ್ವೇ ಗಚ್ಛತ ಮಾಚಿರಮ್ ।
ಕ್ಷೀರೋದಸ್ಯೋತ್ತರಂ ತೀರಂ ಪ್ರಸುಪ್ತೋ ಯತ್ರ ಕೇಶವಃ ॥ ೨೯ ॥

ಮಾನವನಿಗೆ ಶೋಕಕ್ಕೆ ಹೋಲುವ ಹಗೆಯಿಲ್ಲವು ; ಲೋಕದಲ್ಲಿ ಬೆಂಕಿಯ ಸಂಬಂಧವಾದರೂ ಸಹಿಸಲು ಸಾಧ್ಯವು ; ಭಯಂಕರವಾದ ಕೈದುಗಳ ಹೊಡೆತವಾದರೂ ಸೈಸಲಾಗುವುದು ; ಎಲೈ ನೃಪನೇ ! ಕೇಳು ; ಶೋಕದಿಂದುಂಟಾದ ದುಃಖವನ್ನು ಸಹಿಸಲು ಎಂದಿಗೂ ಆಗುವುದಿಲ್ಲವಷ್ಟೆ ! ಎಲೈ ಸುರರೇ ! ಕಾಲದಿಂದಲೂ, ಕಾರಣದಿಂದಲೂ ನಾವು ಅವನ ಅಳಿವನ್ನು ಕಾಣುವೆವು.

೨೭. ಎಲ್ಲಾ ಪ್ರದೇಶಗಳಲ್ಲಿಯೂ ಇರುವ ದೇವತೆಗಳೆಲ್ಲರೂ ‘ ಈ ದುಷ್ಟನು ಬೇಗನೇ ಅಳಿಯುತ್ತಾನೆ ’ ಯೆಂದು ನಿತ್ಯದಲ್ಲಿಯೂ ಒಬ್ಬರಿಗೊಬ್ಬರು ಮಾತನಾಡುತ್ತಿರುವರು.

೨೮. ದೇವತೆಗಳಿಗೆ ಪುನಃ ತಮ್ಮ ಲೋಕವು ಸಿಕ್ಕುವುದೆಂಬ ನಿರತಿಶಯವಾದ ಏಳಿಗೆಯನ್ನೂ, ಹಿರಣ್ಯಕಶಿಪುವಿನ ಅಳಿವನ್ನೂ ಶಕುನಗಳು ನನಗೆ ಸೂಚಿಸುತ್ತಲಿವೆ.

೨೯. ಎಲೈ ದೇವತೆಗಳಿರಾ ! ಯಾವ ಕಾರಣದಿಂದ ಇಂತು ಎಲ್ಲವೂ ತಿಳಿದು ಬರುತ್ತಿದೆಯೋ, ಆ ಕಾರಣದಿಂದ ಎಲ್ಲಿ ಬ್ರಹ್ಮ ರುದ್ರ ಪ್ರವರ್ತಕನಾದ ಕೇಶವನು ಮಲಗಿರುತ್ತಾನೆಯೋ, ಆಹಾಲಮುನ್ನೀರ ಬಡಗಣ ದಡಕ್ಕೆ ತಡಮಾಡದೆ ನೀವೆಲ್ಲರೂ ಹೋಗಿರಿ.

ಯುಷ್ಮಾಭಿಸ್ಸಂಸ್ತುತೋ ದೇವಃ ಪ್ರಸನ್ನೋ ಭವತಿ ಕ್ಷಣಾತ್ ।
ಸ ಹಿ ಪ್ರಸನ್ನೋ ದೈತ್ಯಸ್ಯ ವಧೋಪಾಯಂ ವದಿಷ್ಯತಿ ॥ ೩೦ ॥

ಇತ್ಯುಕ್ತಾಸ್ತೇನ ದೇವಾಸ್ತೇ ಸಾಧು ಸಾಧ್ವಿತ್ಯಥಾಬ್ರುವನ್ ।
ಪ್ರೀತ್ಯಾ ಚ ಪರಯಾ ಯುಕ್ತಾ ಗಂತುಂ ಚಕ್ರುರಥೋದ್ಯಮುವಮ್ ॥ ೩೧ ॥

ಪುಣ್ಯೇ ತಿಥೌ ಶುಭೇ ಲಗ್ನೇ ಪುಣ್ಯಾಂ ಸ್ವಸ್ತಿ ಚ ಮಂಗಲಮ್ ।
ಕಾರಯಿತ್ವಾ ಮುನಿವರ್ಯೈಃ ಪ್ರಸ್ಥಿತಾಸ್ತೇ ದಿವೌಕಸಃ ॥ ೩೨ ॥

ನಾಶಾಯ ದುಷ್ಟದೈತ್ಯಸ್ಯ ಸ್ವಭೂತ್ಯೈ ಚ ನೃಪೋತ್ತಮ ।
ತೇ ಶರ್ವಮಗ್ರತಃ ಕೃತ್ವಾ ಕ್ಷೀರಾಬ್ಧೇರುತ್ತರಂ ತಟಮ್ ॥ ೩೩ ॥

ತತ್ರ ಗತ್ವಾ ಸುರಾಸ್ಸರ್ವೇ ವಿಷ್ಣುಂ ಜಿಷ್ಣುಂ ಜನಾರ್ದನಮ್ ।
ಅಸ್ತುವನ್ ವಿವಿಧೈಸ್ತೋತ್ರೈಃ ಪೂಜಯಂತಃ ಪ್ರತಸ್ಥಿರೇ ॥ ೩೪ ॥

---

೩೦. ನಿಮ್ಮಿಂದ ಸಂಸ್ತುತನಾದ, ಕ್ರೀಡಾದಿಗುಣವಿಶಿಷ್ಟನಾದ ಭಗವಂತನು ಚಣದಿಂದಲೇ ಪ್ರಸನ್ನನಾಗುತ್ತಾನೆ. ಪ್ರಸನ್ನನಾದ ಅವನು ದೈತ್ಯನ ಸಂಹಾರದ ಉಪಾಯವನ್ನು ಹೇಳುವನು;' ಎಂದು ಪಿತಾಮಹನು ಹೇಳಿದನು.

೩೧ ಭಗವಂತನಾದ ಪಿತಾಮಹನು ಇಂತು ಹೇಳಲು, ಆ ದೇವತೆಗಳು ಬಳಿಕ ಬಳ್ಳಿತೂಳ್ಳಿತೆಂದು ಹೇಳಿದರು. ಬಳಿಕ ಕಡುಸಂತಸದೊಡಗೂಡಿ ಪಾಲ್ಗಡಲ ಬಡಗತಡಿಗೆ ಹೋಗಲುಜ್ಜುಗಿಸಿದರು.

೩೨-೩೩. ಆ ದೇವತೆಗಳು ಪುಣ್ಯತಿಥಿಯಲ್ಲಿ, ಶುಭಲಗ್ನದಲ್ಲಿ ಪುಣ್ಯಾಹವೂ, ಸ್ವಸ್ತಿಯೂ ಆದ ಮಂಗಲಕರ್ಮವನ್ನು ಮುನಿಗಳಿಂದ ನೆರವೇರಿಸಿ, ಎಲೈ ನೃಪೋತ್ತಮನೇ! ದುಷ್ಟದೈತ್ಯನ ಅಳಿವಿಗೂ, ತಮಗೆ ಕಲ್ಯಾಣವುಂಟಾಗುವುದಕ್ಕೂ ಶಿವನನ್ನು ಮುಂದೆ ಮಾಡಿಕೊಂಡು ಪಾಲ್ಗಡಲ ಉತ್ತರದ ದಡಕ್ಕೆ ಹೊರಟರು.

೩೪. ಸುರರೆಲ್ಲರೂ ಅಲ್ಲಿ ಹೋಗಿ, ವ್ಯಾಪ್ತನಾದುದರಿಂದ ವಿಷ್ಣುವೂ, ಯಾವಾಗಲೂ ಸರ್ವೋತ್ಕೃಷ್ಟನಾಗಿರುವುದರಿಂದ ಜಿಷ್ಣುವೂ, ದುಷ್ಟಜನಸಂಹಾರಕನಾದುದರಿಂದ ಜನಾರ್ದನನೂ--ಆದ ಕೇಶವನನ್ನು ಅನೇಕ ತೆರನಾದ ಸ್ತೋತ್ರಗಳಿಂದ ಕೊಂಡಾಡಿದರು; ಮತ್ತು ಪೂಜಿಸುತ್ತಾ ಇದ್ದರು.

ಭವೋಽಪಿ ಭಗವಾನ್ ಶಕ್ತ್ಯಾ ಭಗವಂತಂ ಜನಾರ್ದನಮ್ ।
ಅಸ್ತುವನ್ ನಾಮಭಿಃ ಪುಣ್ಯೈರೇಕಾಗ್ರಮನಸಾ ಹರಿಮ್ ॥ ೩೫ ॥

॥ ಶ್ರೀ ಮಹಾದೇವ ಉವಾಚ ॥

ವಿಷ್ಣುರ್ಜಿಷ್ಣುರ್ವಿಭುರ್ದೇವೋ ಯಜ್ಞೇಶೋ ಯಜ್ಞಪಾಲಕಃ ।
ಪ್ರಭವಿಷ್ಣುರ್ಗ್ರಸಿಷ್ಣುಶ್ಚ ಲೋಕಾತ್ಮಾ ಲೋಕಪಾಲಕಃ ॥ ೩೬ ॥

ಕೇಶವಃ ಕೇಶಿಹಾ ಕಲ್ಪಃ ಸರ್ವಕಾರಣಕಾರಣಮ್ ।
ಕರ್ಮಕೃದ್ವಾಮತಾಧೀಶೋ ವಾಸುದೇವಃ ಪುರುಷ್ಟುತಃ ॥ ೩೭ ॥

೩೫-೩೭. ಭಗವಂತನಾದ ರುದ್ರದೇವನೂ ಅವ್ಯಾಹತ ಷಡ್ಗುಣೈಶ್ವರ್ಯ ಪೂರ್ಣನಾದ ಜನಾರ್ದನನಾದ ಶ್ರೀ ಹರಿಯನ್ನು ತನಗೆ ಸಾಮರ್ಥ್ಯವಿದ್ದಷ್ಟು ಏಕಾಗ್ರಮನದಿಂದ ಪುಣ್ಯನಾಮಗಳಿಂದ ನುತಿಸಿದನು.

ಶ್ರೀ ಮಹಾದೇವನು ಇಂತು ನುತಿಸುತ್ತಾನೆ;—' ಎಲೈ ಕೇಶವನೇ ! ನೀನೆ ಎಲ್ಲೆಡೆಯಲ್ಲಿ ವ್ಯಾಪ್ತನಾದ ವಿಷ್ಣುವು; ಸರ್ವೋತ್ಕರ್ಷವುಳ್ಳ ಜಿಷ್ಣುವು; ವಿಶೇಷ ಸಾಮರ್ಥ್ಯದಿಂದಿರುವ ವಿಭುವು; ಅಪ್ರಾಕೃತ ಕ್ರೀಡಾದಿಗುಣವಂತನಾದ ದೇವನು; ಸರ್ವಯಜ್ಞಗಳಿಗೆ ನಿಯಾಮಕನಾದ ಯಜ್ಞೇಶ್ವರನು; ಯಜ್ಞಗಳನ್ನು ರಕ್ಷಿಸುವ ಯಜ್ಞ ಪಾಲಕನು; ಸರ್ವಸೃಷ್ಟಿಕರ್ತೃವಾದ ಪ್ರಭವಿಷ್ಣುವು; ಸರ್ವಸಂಹಾರಕನಾದ ಗ್ರಸಿಷ್ಣುವು; ಸರ್ವಲೋಕದಲ್ಲಿ ವ್ಯಾಪ್ತನಾದುದರಿಂದ ಲೋಕಾತ್ಮಕನು; ಸರ್ವಲೋಕ ರಕ್ಷಕನಾದುದರಿಂದ ಲೋಕಪಾಲಕನು; ಬ್ರಹ್ಮರುದ್ರಪ್ರವರ್ತಕನೂ, ಕ್ಷೀರಸಾಗರ ಶಾಯಿಯೂ ಆದುದರಿಂದ ಕೇಶವನೂ, ಕೇಶಿಯೆಂಬ ದೈತ್ಯಸಂಹಾರಕನೂ, ಆದ ಸರ್ವಶಕ್ತನು; ಸಕಲ ಕಾರಣವಾದ ಪ್ರಕೃತಿಗೂ ಕಾರಣತ್ವಪ್ರದನಾದುದರಿಂದ ಸರ್ವಕಾರಣ ಕಾರಣನು; ಸರ್ವ ಕರ್ಮವನ್ನು ಮಾಡಿಸುವ ಮುಖ್ಯ ಕರ್ತೃವು; ಸೌಂದರ್ಯಕ್ಕೆ ಒಡೆಯನು; ಸರ್ವತ್ರ ವಸನಶೀಲನಾದುದರಿಂದ ವಾಸುದೇವನು; ಜನ್ಮಗಳಲ್ಲಿ ಎಲ್ಲರಿಗಿಂತಲೂ ಮೊದಲು ಸ್ತುತನಾದುದರಿಂದ ಪುರುಷ್ಟುತನು;

ಆದಿಕರ್ತಾ ವರಾಹಶ್ಚ ಮಾಧವೋ ಮಧುಸೂದನಃ ।
ನಾರಾಯಣೋ ನರೋ ಹಂಸೋ ವಿಷ್ವಕ್ಸೇನೋ ಹುತಾಶನಃ ॥ ೩೮ ॥

ಜ್ಯೋತಿಷ್ಮಾನ್ ದ್ಯುತಿಮಾನ್ ಶ್ರೀಮಾನಾಯುಷ್ಮಾನ್ ಪುರುಷೋತ್ತಮಃ ।
ವೈಕುಂಠಃ ಪುಂಡರೀಕಾಕ್ಷಃ ಕೃಷ್ಣಃ ಸೂರ್ಯಃ ಸುರಾರ್ಜಿತಃ ॥ ೩೯ ॥

ನರಸಿಂಹೋ ಮಹಾಭೀಮೋ ವಜ್ರದಂಷ್ಟ್ರೋ ನಖಾಯುಧಃ ।
ಆದಿದೇವೋ ಜಗತ್ಕರ್ತಾ ಯೋಗೇಶೋ ಗರುಡಧ್ವಜಃ ॥ ೪೦ ॥

ಗೋವಿಂದೋ ಗೋಪತಿರ್ಗೋಪ್ತಾ ಭೂಪತಿರ್ಭುವನೇಶ್ವರಃ ।
ಪದ್ಮನಾಭೋ ಹೃಷೀಕೇಶೋ ವಿಭುರ್ದಾಮೋದರೋ ಹರಿಃ ॥ ೪೧ ॥

೩೮-೪೪. ಸಕಲ ಜಗತ್ತಿಗೂ ಆದಿಕರ್ತೃವು; ಭೂಮಿಯನ್ನು ಕದ್ದೊಯ್ದ ಹಿರ ಣ್ಯಾಕ್ಷನನ್ನು ಸಂಹರಿಸಿ, ಧರೆಯನ್ನುದ್ಧರಿಸಿದ ವರಾಹನು; ಲಕ್ಷ್ಮೀಪತಿಯು; ವೇದ ವನ್ನು ಕದ್ದ ಮಧುವೆಂಬವನನ್ನು ಸಂಹರಿಸಿ, ವೇದವನ್ನು ಪುನರುಜ್ಜೀವಿಸಿದ ಮಧುಸೂ ದನನು; ಕ್ಷೀರಸಮುದ್ರವೇ ಆಶ್ರಯನಾಗಿರುವವನು; ಮುಕ್ತಾಶ್ರಯನು; ಪೂರ್ಣ ಸದ್ಗುಣನು: ದೋಷರಹಿತನು, ಆದುದರಿಂದ ನಾರಾಯಣನು; ನಾಶರಹಿತನಾದು ದರಿಂದ ನರನು; ಪರಮಹಂಸರಿಂದ ಸ್ತುತನಾದ ಹಂಸ ರೂಪಿಯು; ವಿಷ್ವಕ್ಸೇನನು; ಹೋಮ ಮಾಡಿದ ಹವಿಸ್ಸನ್ನು ಭುಜಿಸುವವನಾದುದರಿಂದ ಹುತಾಶನನು; ಪ್ರಶಸ್ತ ವಾದ ತೇಜಸ್ಸುಳ್ಳವನಾದುದರಿಂದ ಜ್ಯೋತಿಷ್ಮಂತನು; ಪ್ರಶಸ್ತವಾದ ಕಾಂತಿಯುಳ್ಳ ವನು; ಶ್ರೀಮಂತನು; ನಾಶರಹಿತನಾದುದರಿಂದ ಆಯುಷ್ಮಂತನು; ಕ್ಷರಾಕ್ಷರ ಪುರುಷರಿಂದತೀತನಾಗಿ ಸರ್ವೋತ್ಕೃಷ್ಟನಾದುದರಿಂದ ಪುರುಷೋತ್ತಮನು: ವೈಕುಂಠ ವಾಸಿಯು; ತಾವರೆಗಣ್ಣನು; ಭಜಕರ ಪಾಪ ನಾಶಕನಾದುದರಿಂದ, ಪೂರ್ಣ ಸುಖನಾದುದರಿಂದ ಕೃಷ್ಣನು; ಜ್ಞಾನಿಪ್ರಾಪ್ಯನಾದುದರಿಂದ ಸೂರ್ಯನು; ದೇವತೆ ಗಳಿಂದ ಪೂಜಿತನು; ಅಖಂಡನಾದ ನರಸಿಂಹನು: ಪಾಪಿಗಳಾದವರಿಗೆ ಭಯಂ ಕರನು; ವಜ್ರದಂತೆ ಕಠಿಣವಾದ ಕೋರೆಪಲ್ಲುಗಳುಳ್ಳ ವರಾಹವತಾರ ಮಾಡಿ

ತ್ರಿವಿಕ್ರಮಸ್ತ್ರಿಲೋಕೇಶೋ ಬ್ರಹ್ಮೇಶಃ ಪ್ರೀತಿವರ್ಧನಃ ।
ವಾಮನೋ ದುಷ್ಟದಮನೋ ಗೋವಿಂದೋ ಗೋಪವಲ್ಲಭಃ ॥ ೪೩ ॥

ಭಕ್ತಪ್ರಿಯೋಽಚ್ಯುತಃ ಸತ್ಯಃ ಸತ್ಯಕೀರ್ತಿರ್ಧ್ರುವಃ ಶುಚಿಃ ।
ಕಾರುಣ್ಯಃ ಕರುಣೋ ವ್ಯಾಸಃ ಪಾಪಹಾ ಶಾಂತಿವರ್ಧನಃ ॥ ೪೩ ॥

ಸಂನ್ಯಾಸೀ ಶಾಸ್ತ್ರತತ್ತ್ವಜ್ಞೋ ಮಂದಾರಗಿರಿಕೇತನಃ ।
ಬದರೀನಿಲಯಃ ಶಾಂತಸ್ತಪಸ್ವೀ ವೈದ್ಯುತಪ್ರಭಃ ॥ ೪೪ ॥

ದವನು; ನರಸಿಂಹಾವತಾರದಲ್ಲಿ ಹಿರಣ್ಯಕಶಿಪುವನ್ನು ಉಗುರಿನಿಂದ ಸಂಹರಿಸಿದವನು; ನಖಾಯುಧನು; ಸರ್ವಲೋಕಕ್ಕೆ ಮೊದಲಿಗನಾದ ಒಡೆಯನು; ಗರುಡನೇ ವಾಹನವಾಗಿಯುಳ್ಳವನು; ವೇದಗಳಿಂದ ಜ್ಞೇಯನಾದ ಗೋವಿಂದನು; ವೇದಗಳಿಗೂ, ಪಶುಗಳಿಗೂ ನಾಯಕನು; ಲೋಕರಕ್ಷಕನು; ಭೂಮಿಗೆ ಮುಖ್ಯನಾದ ಒಡೆಯನು; ಸಕಲ ಲೋಕಗಳಿಗೂ ಮುಖ್ಯ ಸ್ವಾಮಿಯು; ಚತುರ್ದಶಭುವನಾಕಾರದಪದ್ಮವು ಹೊಕ್ಕಳಲ್ಲಿ ಉಳ್ಳವನು; ಸರ್ವೇಂದ್ರಿಯಗಳಿಗೆ ನಿಯಾಮಕನು; ಸರ್ವೇಶ್ವರನು; ಕೃಷ್ಣಾವತಾರದಲ್ಲಿ ಹಗ್ಗದಿಂದ ಸೊಂಟಕಟ್ಟಿಸಿಕೊಂಡ ದಾಮೋದರನು; ಭಜಕರ ಪಾಪನಾಶಕನಾದ ಶ್ರೀಹರಿಯು; ಬಲಿಯನ್ನು ನಿಗ್ರಹಿಸಿದ ತ್ರಿವಿಕ್ರಮನು; ಮೂರು ಲೋಕಗಳೊಡೆಯನು; ಪಿತಾಮಹನೊಡೆಯನು; ಭಕ್ತರಿಗೆ ಪ್ರೀತಿಯನ್ನು ಹೆಚ್ಚಿಸುವವನು; ವಾಮನಾವತಾರಿಯು; ರಾವಣಾದಿ ದುಷ್ಟರನ್ನು ಸಂಹರಿಸಿದವನು; ಕೃಷ್ಣನಾಗಿ ಗೋಕುಲವನ್ನು ರಕ್ಷಿಸಿದ ಗೋವಿಂದನು; ಗೋವಳರ ಬಲ್ಲಹನು; ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಪ್ರೀತಿಯನ್ನು ಬಯಸುವವನು; ಅಪಕ್ಷಯಾದಿ ನಾಶರಹಿತನು; ಪರಮಸತ್ಯನು; ಸತ್ಯವಾದ ಯಶಸ್ಸುಳ್ಳವನು; ಸದಾ ಏಕರೂಪನಾಗಿರುವವನು; ಪರಮಪವಿತ್ರನು; ಕರುಣಾಪೂರ್ಣನು; ಕರುಣಾತ್ಮಕನು; ವೇದವಿಭಾಜಕನು; ಭಕ್ತರ ಪಾಪವನ್ನು ಕಳೆಯತಕ್ಕವನು; ಮುನಿಗಳ ಶಾಂತಿಯನ್ನು ಹೆಚ್ಚಿಸುವವನು; ಪ್ರಕೃತಿಸಂಗರಹಿತನು; ಸಕಲ ಶಾಸ್ತ್ರಗಳ ಮರ್ಮವನ್ನರಿತವನು; ಮಂದರಪರ್ವತದಲ್ಲಿ ವಾಸಿಸುವವನು; ಬೋರೆಮರದ ಕೆಳಗೆ ವೇದವ್ಯಾಸರೂಪದಿಂದಿರುವವನು; ಶಾಂತನು; ಪೂರ್ಣಜ್ಞಾನಿಯು; ಮಿಂಚಿನ ಪ್ರಕಾಶವುಳ್ಳವನು.

ಭೂತಾವಾಸೋ ಗುಹಾವಾಸಃ ಶ್ರೀನಿವಾಸಃ ಶ್ರಿಯಃ ಪತಿಃ ।
ತಪೋವಾಸೋ ದಮೋವಾಸಃ ಸತ್ಯವಾಸಃ ಸನಾತನಃ ॥ ೪೫ ॥

ಪುರಷಃ ಪುಷ್ಕಲಃ ಪುಣ್ಯಃ ಪುಷ್ಕರಾಕ್ಷೋ ಮಹೇಶ್ವರಃ ।
ಪೂರ್ಣಃ ಪೂರ್ತಿಃ ಪುರಾಣಜ್ಞಃ ಪುಣ್ಯಜ್ಞಃ ಪುಣ್ಯವರ್ಧನಃ ॥ ೪೬ ॥

ಶಂಖೀ ಚಕ್ರೀ ಗದೀ ಶಾರ್ಙ್ಗೀ ಲಾಂಗಲೀ ಮುಸಲೀ ಹಲೀ ।
ಕಿರೀಟೀ ಕುಂಡಲೀ ಹಾರೀ ಮೇಖಲೀ ಕವಚೀ ಧ್ವಜೀ ॥ ೪೭ ॥

ಜಿಷ್ಣುರ್ಜೇತಾ ಮಹಾವೀರಃ ಶತ್ರುಘ್ನಃ ಶತ್ರುತಾಪನಃ ।
ಶಾಂತಃ ಶಾಂತಿಕರಃ ಶಾಸ್ತಾ ಶಂಕರಃ ಶಂತನುಸ್ತುತಃ ॥ ೪೮ ॥

೪೫-೪೮. ಮತ್ತು ನೀನು ಸಕಲ ಪ್ರಾಣಿಗಳಿಗೂ ಆಶ್ರಯನಾದವನು; ಸಕಲ ದೇಹಿಗಳ ಹೃದ್ಗುಹೆಯಲ್ಲಿರುವವನು; ಮಹಾಲಕ್ಷ್ಮೀದೇವಿಯನ್ನು ವಕ್ಷದಲ್ಲಿ ತಾಳಿರುವವನು; ಲಕ್ಷ್ಮೀನಿಯಾಮಕನು; ತನ್ನನ್ನು ಚಿಂತಿಸುವವರಲ್ಲಿ ವಾಸಿಸುವವನು; ವೇದಪ್ರತಿಪಾದ್ಯನು; ಯಾವಾಗಲೂ ಏಕರೂಪನಾಗಿರುವವನು; ಪೂರ್ಣಷಡ್ಗುಣನು; ಪೂರ್ಣಸುಖನು; ಸಕಲ ಶರೀರದಲ್ಲಿರುವವನು; ಪೂರ್ಣನು; ಪುಣ್ಯಸ್ವರೂಪನು; ಪುಂಡರೀಕಾಕ್ಷನು; ಹೆದ್ದೈವವು; ಜ್ಞಾನಾನಂದಾದಿ ಗುಣಪೂರ್ಣನು; ಜಗತ್ತನ್ನೆಲ್ಲಾ ತುಂಬುವವನು; ಸಕಲ ಪುರಾಣಗಳನ್ನು ಅರಿತವನು; ಸಕಲ ಪುಣ್ಯವನ್ನೂ ತಿಳಿದವನು; ಭಜಕರ ಪುಣ್ಯವನ್ನು ಹೆಚ್ಚಿಸುವವನು: ಶಂಖ, ಚಕ್ರ, ಗದಾ, ಶಾರ್ಙ್ಗ, ಲಾಂಗಲ, ಮುಸಲ, ಹಲ-ಇವುಗಳನ್ನು ಧರಿಸಿದವನು; ಕಿರೀಟ, ಕುಂಡಲ, ಹಾರ, ಮೇಖಲ, ಕವಚ-ಇವುಗಳಿಂದಲಂಕೃತನು; ಗರುಡನೇ ಧ್ವಜವಾಗಿ ಉಳ್ಳವನು; ಜಿಷ್ಣುವೂ; ಜೇತನನೂ; ಮಹಾವೀರನೂ, ಶತ್ರುಗಳನ್ನು ಸಂಹರಿಸುವವನೂ, ಶತ್ರುಗಳಿಗೆ ಸಂತಾಪವನ್ನುಂಟುಮಾಡುವವನೂ, ಆಗಿರುವನು; ಶಾಂತನು; ಲೋಕಕ್ಕೆ ಶಾಂತಿಯನ್ನುಂಟು ಮಾಡುವವನು; ದುಷ್ಟಶಾಸಕನು; ಲೋಕಕ್ಕೆ ಕಲ್ಯಾಣವನ್ನುಂಟುಮಾಡುವವನು; ಶಂತನುಚಕ್ರವರ್ತಿಯಿಂದ ಕೊಂಡಾಡಿಸಿಕೊಂಡವನು.

ಸಾರಥಿಃ ಸಾತ್ವಿಕಃ ಸ್ವಾಮೀ ಸಾಮವೇದಪ್ರಿಯಃ ಸಮಃ ।
ಸಾವನಃ ಸಾಹಸೀ ಸತ್ವಃ ಸಂಪೂರ್ಣಾಂಶಃ ಸಮೃದ್ಧಿಮಾನ್ ॥ ೪೯ ॥

ಸ್ವರ್ಗದಃ ಕಾಮದಃ ಶ್ರೀದಃ ಕೀರ್ತಿದಃ ಕೀರ್ತಿನಾಶನಃ ।
ಮೋಕ್ಷದಃ ಪುಂಡರೀಕಾಕ್ಷೋ ಕ್ಷೀರಾಬ್ಧಿಕೃತಕೇತನಃ ॥ ೫೦ ॥

ಸ್ತುತಃ ಸುರಾಸುರೈರೀಶಃ ಪ್ರೇರಕಃ ಪಾಪನಾಶನಃ ।
ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಸ್ತ್ವಮಗ್ನಯಃ ॥ ೫೧ ॥

೪೯-೫೧. ಮತ್ತು ನೀನು ಪಾರ್ಥನ ಸಾರಥಿಯು; ಕೇವಲ ಶುದ್ಧ ಸ್ವರೂಪನು ; ಸರ್ವ ನಿಯಾಮಕನು ; ಸಾಮವೇದದಲ್ಲಿ ಪ್ರೀತಿಯುಳ್ಳವನು ; ಚೇತನರಿಗೆ ಅವರವರ ಕರ್ಮಾನುಗುಣವಾಗಿ ಸುಕೃತದುಷ್ಕೃತಗಳ ಫಲವನ್ನುಣಿಸುವವನಾದುದರಿಂದ ಸಮನು ; ವನಮಾಲಾಸಹಿತನು ; ಅಚಿಂತ್ಯಾದ್ಭುತಶಕ್ತಿಯುಳ್ಳವನು ; ಸತ್ವಾತ್ಮಕನು ; ಪೂರ್ಣಕಾಮನು ; ಪೂರ್ಣೈಶ್ವರ್ಯವುಳ್ಳವನು ; ಜ್ಯೋತಿಷ್ಟೋಮಾದಿಗಳನ್ನೆಸಗಿದವರಿಗೆ ಸ್ವರ್ಗಫಲವನ್ನೀಯುವವನು ; ಭಕ್ತರ ಇಷ್ಟಾರ್ಥವನ್ನು ಸಲ್ಲಿಸುವವನು ; ಐಶ್ವರ್ಯಾಪೇಕ್ಷಿಗಳಿಗೆ ಐಶ್ವರ್ಯವನ್ನೂ, ಕೀರ್ತಿಯನ್ನು ಬಯಸುವವರಿಗೆ ಕೀರ್ತಿಯನ್ನೂ ಕೊಡುವವನು ; ಪಾಪಿಗಳ ಕೀರ್ತಿಗಳನ್ನು ತೊಡೆಯತಕ್ಕವನು ; ಮುಮುಕ್ಷುಗಳಿಗೆ ಸಾಧನ ಪೂರ್ತಿಯಾದ ಮೇಲೆ, ಸ್ವಸ್ವರೂಪಾನಂದಾವಿರ್ಭಾವ ರೂಪಪಾದ ಮೋಕ್ಷವನ್ನು ಕೊಡುವವನು ; ಪುಂಡರೀಕಾಕ್ಷನು ; ಕ್ಷೀರಸಮುದ್ರದಲ್ಲಿ ಮನೆಮಾಡಿಕೊಂಡಿರುವವನು ; ದೇವಾಸುರರಿಂದ ಸಂಸ್ತುತನು ; ಸರ್ವಪ್ರೇರಕನು ಮತ್ತು ನಿಯಾಮಕನು ; ಸೇವಕರ ಅಘಗಳನ್ನು ಕಳೆಯುವವನು ; ನೀನು ಯಜ್ಞದಲ್ಲಿ ಪ್ರಾಧಾನ್ಯದಿಂದ ಪೂಜಿಸಲ್ಪಡತಕ್ಕ ಪುರುಷನಾದುದರಿಂದ ಯಜ್ಞಪುರುಷನು ; ನೀನು ವಷಡೆಂಬ ಮಂತ್ರವನ್ನು ಅಧೀನವಾಗಿ ಉಳ್ಳವನಾದುದರಿಂದ ವಷಟ್ಕಾರನು; ನೀನು ಲೋಕರಕ್ಷಕನಾದುದರಿಂದಲೂ, ಸಕಲ ಗುಣಗಳಿಂದ ಓತನಾದುದರಿಂದಲೂ ಓಂಕಾರನೆನಿಸುವೆ; ನೀನೇ ಅಗ್ನಿಗಳಲ್ಲಿ ಪರಶುರಾಮರೂಪದಿಂದಿರತಕ್ಕವನಾದುದರಿಂದ ಅಗ್ನಿಗಳೆನಿಸುವೆ.

ತ್ವಂ ಸ್ವಾಹಾ ತ್ವಂ ಸ್ವಧಾ ದೇವಸ್ತ್ವಂ ಸುಧಾ ಪುರುಷೋತ್ತಮ ।
ನಮೋ ದೇವಾದಿದೇವಾಯ ವಿಷ್ಣವೇ ಶಾಶ್ವತಾಯ ಚ ॥ ೫೨ ॥

ಅನಂತಯಾಪ್ರಮೇಯಾಯ ನಮಸ್ತೇ ಗರುಡಧ್ವಜ ।

॥ **ಮಾರ್ಕಂಡೇಯ ಉವಾಚ** ॥

ಇತ್ಯೇತೈರ್ನಾಮಭಿರ್ದಿವ್ಯೈಸ್ಸಂಸ್ತುತೋ ಮಧುಸೂದನಃ ॥ ೫೩ ॥

ಉವಾಚ ಪ್ರಕಟೀಭೂತ್ವಾ ದೇವಾನ್ ಸರ್ವಾನಿದಂ ವಚಃ ।

॥ **ಶ್ರೀ ಭಗವಾನುವಾಚ** ॥

ಯುಷ್ಮಾಭಿಃ ಸಂಸ್ತುತೋ ದೇವಾ ನಾಮಭಿಃ ಕೇವಲೈಃ ಶುಭೈಃ ॥ ೫೪ ॥

ಅತ ಏವ ಪ್ರಸನ್ನೋಽಸ್ಮಿ ಕಿಮರ್ಥಂ ಕರವಾಣಿ ವಃ ।

॥ **ದೇವಾ ಊಚುಃ**

ದೇವದೇವ ಹೃಷೀಕೇಶ ಪುಂಡರೀಕಾಕ್ಷ ಮಾಧವ ॥ ೫೫ ॥

೫೨-೫೩. ಎಲೈ ಪುರುಷೋತ್ತಮನೇ ! ನೀನೇ ಸ್ವಾಹೆಯೆಂಬ ವಹ್ನಿಪತ್ನಿಯಲ್ಲಿಯೂ ಪರಶುರಾಮರೂಪದಿಂದಿರುವವನು ; ನೀನೇ ಪಿತೃಗಳಿಗೆ ಪುಷ್ಟಿಕೊಡತಕ್ಕ ಸ್ವಧಾನಿಯಾಮಕನು ; ನೀನೇ ಅಮೃತದಲ್ಲಿ ಅಮೃತತ್ವಶಕ್ತಿ ಕೊಡತಕ್ಕವನಾದುದರಿಂದ ಸುಧೆಯೆನಿಸುವೆ. ಎಲೈ ಗರುಡಧ್ವಜನೇ ! ಬ್ರಹ್ಮಾದಿದೇವತೆಗಳಿಗೂ ಸರ್ವಕ್ಕೂ ಮೊದಲಿಗದೇವನೂ, ವಿಷ್ಣುವೂ, ನಿತ್ಯನೂ, ನಾಶರಹಿತನೂ, ಸಾಕಲ್ಯವಾಗಿ ಯಾರಿಂದಲೂ ತಿಳಿಯದವನೂ ಆದ ನಿನಗೆ ಅನಂತ ನಮಸ್ಕಾರಗಳು ; ' ಎಂದು ರುದ್ರದೇವನು ಶ್ರೀ ಕೇಶವನನ್ನು ನುತಿಸಿದನು. ಮಾರ್ಕಂಡೇಯ ಮುನಿಯು ಹೇಳುತ್ತಾನೆ :—' ಇಂತು ಈ ದಿವ್ಯನಾಮಗಳಿಂದ ರುದ್ರದೇವನಿಂದ ಕೊಂಡಾಡಿಸಿಕೊಳ್ಳಲ್ಪಟ್ಟ ಮಧುಸೂದನಾದ ಕೇಶವನು; ಪ್ರತ್ಯಕ್ಷನಾಗಿ ದೇವತೆಗಳೆಲ್ಲರನ್ನೂ ಕುರಿತು ಈ ನುಡಿಯನ್ನು ಹೇಳಿದನು ;. ಶ್ರೀ ಭಗವಂತನು ಹೇಳುತ್ತಾನೆ ;— ' ಎಲೈ ದೇವತೆಗಳೇ ! ನೀವು ಕೇವಲ ಶುಭನಾಮಗಳಿಂದ ನನ್ನನ್ನು ನುತಿಸಿದಿರಿ ; ಆದುದರಿಂದಲೇ ನಿಮಗೆ ಪ್ರಸನ್ನನಾಗಿರುತ್ತೇನೆ. ನಿಮಗೆ ಯಾವ ಪ್ರಯೋಜನ

ತ್ವಮೇವ ಜಾನಾಸಿ ಹರೇ ಕಿಂ ತಸ್ಮಾತ್ಪರಿಪೃಚ್ಛಸಿ ।

॥ ಶ್ರೀ ಭಗವಾನುವಾಚ ॥

ಯುಷ್ಮದಾಗಮನಂ ಸರ್ವಂ ಜಾನಾಮ್ಯಸುರಸೂದನಾಃ ॥ ೫೬ ॥

ಹಿರಣ್ಯಕವಿನಾಶಾರ್ಥಂ ಸ್ತುತೋಽಹಂ ಶಂಕರೇಣ ತು ।
ಪುಣ್ಯನಾಮಶತೇನೈವ ಸಂಸ್ತುತೋಽಹಂ ಭವೇನ ಚ ॥ ೫೭ ॥

ಏತೇನ ಯಸ್ತು ಮಾಂ ನಿತ್ಯಂ ತ್ವಯೋಕ್ತೇನ ಮಹಾಮತೇ ।
ತೇನಾಹಂ ಪೂಜಿತೋ ನಿತ್ಯಂ ಭವಾಮೀಹ ತ್ವಯಾ ಯಥಾ ॥ ೫೮ ॥

ಪ್ರೀತೋಽಹಂ ಗಚ್ಛ ದೇವ ತ್ವಂ ಕೈಲಾಸಶಿಖರಂ ಶುಭಮ್ ।
ತ್ವಯಾ ಸ್ತುತೋ ಹನಿಷ್ಯಾಮಿ ಹಿರಣ್ಯಕಶಿಪುಂ ಭವ ॥ ೫೯ ॥

ವನ್ನೆಸಗಲಿ ? ' ಎಂದು ಕೇಳಿದನು. ದೇವತೆಗಳು ಹೇಳುತ್ತಾರೆ :—' ಎಲೈ ದೇವೋತ್ತಮನೇ ! ಸರ್ವೇಂದ್ರಿಯ ನಿಯಾಮಕನೇ ! ಪುಂಡರೀಕಾಕ್ಷನೇ ! ರಮಾವಲ್ಲಭನೇ ! ಶ್ರೀಹರಿಯೇ ! ಸರ್ವಜ್ಞನಾದ ನೀನೇ ಎಲ್ಲವನ್ನೂ ತಿಳಿದಿರುತ್ತೀಯೆ ; ಆದುದರಿಂದ ಏಕೆ ನಮ್ಮನ್ನು ಇಂತು ಕೇಳುತ್ತೀಯೆ ? ' ಎಂದು ನುಡಿದರು. ಭಗವಂತನು ಹೇಳುತ್ತಾನೆ :—' ಎಲೈ ಅಸುರನಾಶಕರಾದ ಸುರರೇ ! ನೀವು ಬಂದ ಕಾರ್ಯವೆಲ್ಲವನ್ನೂ ತಿಳಿಯುತ್ತೇನೆ. ಶಂಕರನೂ ಹಿರಣ್ಯಕಶಿಪುವಿನ ಅಳಿವಿಗಾಗಿ ನನ್ನನ್ನು ನುತಿಸಿದನು. ಭವನು ಪುಣ್ಯಪ್ರದಗಳಾದ ಶತಸಂಖ್ಯೆಯ ನಾಮಗಳಿಂದ ನನ್ನನ್ನು ನುತಿಸಿದನು.

೫೮. ಎಲೈ ಮಹಾಮತಿಯಾದ ಶಂಕರನೇ ! ನೀನು ಹೇಳಿದ ಈ ಶತನಾಮಗಳಿಂದ ಯಾವನು ನನ್ನನ್ನು ನುತಿಸುತ್ತಾನೆಯೋ, ನಿನ್ನಿಂದ ಹೇಗೋ ಹಾಗೆ ನಾನು ಅವನಿಂದಲೂ ನಿತ್ಯದಲ್ಲಿಯೂ ಪೂಜಿತನಾಗುತ್ತೇನೆ.

೫೯. ಎಲೈ ಶಾಂತಿಯುಕ್ತನಾದ ರುದ್ರನೇ ! ನಾನು ನಿನ್ನ ನುತಿಗೆ ಮೆಚ್ಚಿದ್ದೇನೆ ; ನೀನು ನಿನ್ನ ಶುಭವಾದ ಕೈಲಾಸಪರ್ವತಕ್ಕೆ ಹೋಗು ; ಎಲೈ ಭವನೇ ! ; ನಿನ್ನಿಂದ ಇಂತು ನುತನಾದ ನಾನು ಹಿರಣ್ಯಕಶಿಪುವನ್ನು ಸಂಹರಿಸುವೆನು.

ಗಚ್ಛಧ್ವಮಧುನಾ ದೇವಾಃ ಕಾಲಂ ಕಂ ಚಿತ್ಪ್ರತೀಕ್ಷತಾವ್ ।
ಯದಾಸ್ಯ ತನಯೋ ಧೀಮಾನ್ ಪ್ರಹ್ಲಾದೋ ನಾಮ ವೈಷ್ಣವಃ ॥ ೬೦ ॥

ತಸ್ಯ ದ್ರೋಹಃ ಯದಾ ದೈತ್ಯಃ ಕರಿಷ್ಯತಿ ಸುರಾಸ್ತದಾ ।
ಹನಿಷ್ಯಾಮಿ ವರೈರ್ಗುಪ್ತಮಜೇಯಂ ದೇವದಾನವೈಃ ।
ಇತ್ಯುಕ್ತಾ ವಿಷ್ಣುನಾ ದೇವಾ ನತ್ವಾ ವಿಷ್ಣುಂ ಯ ಯುರ್ನೃಪ ॥ ೬೧ ॥

ಇತಿ ಶ್ರೀ ನರಸಿಂಹಪುರಾಣೇ ವಿಷ್ಣೋರ್ನಾಮಸ್ತೋತ್ರಂ
ನಾಮ ಚತ್ವಾರಿಂಶೋಽಧ್ಯಾಯಃ

೬೦-೬೧. ಎಲೈ ದೇವತೆಗಳಿರಾ ! ಈಗ ನೀವು ನಿಮ್ಮ ಬೀಡಿಗೆ ಹಿಂದಿರುಗಿ ಹೋಗಿರಿ ; ಕೆಲವು ಕಾಲಪರ್ಯಂತವಾಗಿ ಪರೀಕ್ಷಿಸಿರಿ ; ಎಲೈ ಸುರರೇ ! ಯಾವಾಗ ಈ ಹಿರಣ್ಯಕಶಿಪುವಿಗೆ ಜ್ಞಾನಿಯಾದ, ವಿಷ್ಣುಭಕ್ತನಾದ ಪ್ರಹ್ಲಾದನೆಂಬ ಹೆಸರಿನ ಮಗನು ಜನಿಸುವನೋ, ಆ ದೈತ್ಯನು ಆವನಿಗೆ ಯಾವಾಗ ಕೇಡೆಸಗುವನೋ, ಆಗ ವರಗಳಿಂದ ರಕ್ಷಿತನಾದವನೂ, ಸುರಾಸುರರಿಂದ ಸೋಲಿಸಲಶಕ್ಯನೂ ಆದ ಆ ಹಿರಣ್ಯಕಶಿಪುವನ್ನು ಸಂಹರಿಸುವೆನು ;' ಎಂದು ವಿಷ್ಣುವಿನಿಂದ ಹೇಳಿಸಿಕೊಂಡ ದೇವತೆಗಳು ಆ ಶ್ರೀ ಮಹಾವಿಷ್ಣುವಿಗೆರಗಿ ತಮ್ಮ ಬೀಡಿಗೆ ಹೋದರು ;' ಎಂದು ಮಾರ್ಕಂಡೇಯಮುನಿಯು ಶತಾನೀಕರಾಯನಿಗೆ ಹೇಳಿದುದನ್ನು ಸೂತರು ಭಾರದ್ವಾಜಾದಿಮುನಿಗಳಿಗೆ ಹೇಳಿದರು.

ಇಂತು ಶ್ರೀನರಸಿಂಹಪುರಾಣದಲ್ಲಿ ಶ್ರೀವಿಷ್ಣುವಿನ ನಾಮಸ್ತೋತ್ರವೆಂಬ
ನಲವತ್ತನೆಯ ಅಧ್ಯಾಯವು ಮುಗಿದುದು.

ನಲವತ್ತನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ, ' ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ವರಾಹಾವತಾರ ವೃತ್ತಾಂತವನ್ನು ಹೇಳಿದವನು, ಈಗ ನರಸಿಂಹ ಚರಿತ್ರೆಯನ್ನು ಹೇಳುವುದಾಗಿ ನಿರೂಪಿಸಿ, ಪೂರ್ವದಲ್ಲಿ ಹಿರಣ್ಯಕಶಿಪುವೆಂಬ ದೈತ್ಯೇಂದ್ರನಿದ್ದನು. ಅವನು ಚತುರ್ಮುಖನನ್ನು ಕುರಿತು, ಅತಿಕಠಿನವಾದ ತಪಸ್ಸನ್ನು ಮಾಡಿ, ಪ್ರಪಂಚಗಳಲ್ಲಿ ಯಾವ ಚೇತನರಿಂದಲೂ, ಮನೆಯ ಒಳಗೂ, ಹೊರಗೂ, ಅಂತರಿಕ್ಷದಲ್ಲಿಯೂ, ಭೂಮಿಯಲ್ಲಿಯೂ, ಎಲ್ಲಿಯೂ ತನಗೆ ಮರಣವುಂಟಾಗದಂತೆ ವರವನ್ನನು ಗ್ರಹಿಸಬೇಕೆಂದು ಪ್ರಾರ್ಥಿಸಲು, ಅವನ ತಪಕ್ಕೆ ಪ್ರಸನ್ನನಾದ ಚತುರ್ಮುಖನು ಆ ವರವನ್ನು ಕರುಣಿಸಿದನು.

ತರುವಾಯ ವರದರ್ಪಿತನಾದ ಹಿರಣ್ಯಕಶಿಪುವು ಮೂರುಲೋಕಗಳನ್ನೂ ಗೆದ್ದು, ಪ್ರಭುತ್ವಮಾಡಲು ತೊಡಗಿ, ಯಜ್ಞಯಾಗಾದಿ ಸಕಲ ಕರ್ಮಗಳಿಂದಲೂ ಪ್ರಜೆಗಳು ತನ್ನನ್ನೇ ಆರಾಧಿಸಬೇಕೆಂದು ಕಟ್ಟಾಣತಿ ಮಾಡಿದನು. ಆ ದೈತ್ಯೇಂದ್ರನ ಉಪಟಳದಿಂದ ದುಃಖಿಗಳಾದ ದೇವತೆಗಳು ದೇವ ಗುರುವಾದ ಬೃಹಸ್ಪತಿಗೆ ತಮ್ಮ ದುಃಖವನ್ನರುಹಿ, ಆ ದೈತ್ಯನಾಶೋಪಾಯವನ್ನು ತಿಳಿಯಿಸಬೇಕೆನ್ನಲು, ಆಗ ಬೃಹಸ್ಪತಿಯು ಶೋಕದ ಪರಿಣಾಮವನ್ನು ಹೇಳಿ, ಕಾಲದಿಂದ ನಾವು ಅವನ ವಧೆಯನ್ನು ಸಾಧಿಸಬೇಕು ; ಪ್ರಕೃತ ದೇವತೆಗಳೆಲ್ಲರೂ ಪಾಲ್ಗಡಲ ಉತ್ತರದ ತಡಿಗೆ ಹೋಗಿ, ಅಲ್ಲಿ ಯೋಗನಿದ್ರಾಸಕ್ತನಾದ ಶ್ರೀಕೇಶವನನ್ನು ಮರೆಹೊಕ್ಕರೆ, ಅವನು ಆ ದೈತ್ಯನ ವಧೋಪಾಯವನ್ನರುಹುವನೆನಲು, ದೇವತೆಗಳು ಶ್ರೀ ಮಹಾರುದ್ರ ದೇವನನ್ನು ಮುಂದೆ ಮಾಡಿಕೊಂಡು ಪಾಲ್ಗಡಲ ತಡಿಗೆ ಹೋಗಿ, ಅಲ್ಲಿ ಶ್ರೀಕೇಶವನನ್ನು ನುತಿಸಿದರು.

ಆಗ ಶ್ರೀ ಮಹಾರುದ್ರನೂ ಕೇಶವನ ದಿವ್ಯಶತನಾಮಗಳಿಂದ ಭಗವಂತನನ್ನು ಅನನ್ಯಭಕ್ತಿಯಿಂದ ಸ್ತುತಿಸಲು, ಭಗವಂತನು ಅವರ ಸ್ತೋತ್ರಕ್ಕೆ ಮೆಚ್ಚಿ, ಕಾಣಿಸಿ ಕೊಂಡು, ಅವರ ಇಷ್ಟವನ್ನು ಸಲ್ಲಿಸುವುದಾಗಿ ಹೇಳಲು, ಅವರು ಸರ್ವಜ್ಞನಾದ ಭಗವಂತನಿಗೆ ಅರಿಕೆ ಮಾಡುವುದೇನು ? ಎಲ್ಲವೂ ಅವನಿಗೆ ತಿಳಿದಿದೆಯೆನಲು, ಆಗ ಶ್ರೀಹರಿಯು ಮಹಾರುದ್ರನಿಗೆ ಹಿಂತಿರುಗಲು ಹೇಳಿ, ದೇವತೆಗಳಿಗೆ, 'ಹಿರಣ್ಯಕಶಿಪುವು ತನ್ನ ಮಗನಾದ ಪ್ರಹ್ಲಾದನೆಂಬ ಪರಮ ವೈಷ್ಣವನಿಗೆ ಬಾಧೆ ಕೊಡಲು, ತಾನು ಆ ದೈತ್ಯನನ್ನು ಸಂಹರಿಸುವುದಾಗಿ ಹೇಳಿ, ಶಿವನು ಸ್ತುತಿಸಿದ ದಿವ್ಯನಾಮಗಳಿಂದ ಯಾರು ತನ್ನನ್ನು ಸ್ತುತಿಸುತ್ತಾರೆಯೋ, ಅವರು ನಿತ್ಯದಲ್ಲಿ ತನ್ನನ್ನು ಆರಾಧಿಸಿದವ ರಾಗುವರು ;' ಎಂದು ನುಡಿದನು. ಆಗ ದೇವತೆಗಳು ವಿಷ್ಣುವಿಗೆ ನಮಸ್ಕರಿಸಿ, ತಮ್ಮ ಬೀಡಿಗೆ ಹಿಂತಿರುಗಿ ಬಂದರು ;' ಎಂದು ನಿರೂಪಿಸಿರುವುದನ್ನು ಸೂತರು ಭರದ್ವಾಜಾದಿ ಗಳಿಗೆ ಹೇಳಿರುತ್ತಾರೆ.

ಇಂತು ನಲವತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಏಕಚತ್ವಾರಿಂಶೋಽಧ್ಯಾಯಃ

ಶ್ರೀ ನರಸಿಂಹಪ್ರಾದುರ್ಭಾವಃ (ಅನುವೃತ್ತಃ)

॥ ಸಹಸ್ರಾನೀಕ ಉವಾಚ ॥

ಮಾರ್ಕಂಡೇಯ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಪ್ರಾದುರ್ಭಾವಂ ನೃಸಿಹಂಸ್ಯ ಯಥಾವದ್ವಕ್ತುಮರ್ಹಸಿ ॥ ೧ ॥

ವದ ಪ್ರಹ್ಲಾದಚರಿತಂ ವಿಸ್ತರೇಣ ಮಹಾಮನಃ ।
ಧನ್ಯಾ ವಯಂ ಮಹಾಯೋಗಿನ್ ತ್ವತ್ಪ್ರಸಾದಾನ್ಮಹಾಮುನೇ ॥ ೨ ॥
ಸುಧಾಂ ಪಿಬಾಮೋ ದುರ್ಲಭ್ಯಾಂ ಧನ್ಯಾಃ ಶ್ರೀಶಕಥಾಭಿಧಾನ್ ।

ನಲವತ್ತೊಂದನೆಯ ಅಧ್ಯಾಯವು.

ನರಸಿಂಹಾವತಾರ ಚರಿತ್ರೆಯು (ಮುಂದುವರಿದುದು)

೧. ಸಹಸ್ರಾನೀಕರಾಯನು ಮಾರ್ಕಂಡೇಯಮುನಿಗೆ ಇಂತು ಹೇಳುತ್ತಾನೆ:——'ಎಲೈ ಮಹಾಪ್ರಾಜ್ಞನೂ, ಸಕಲಶಾಸ್ತ್ರಕೋವಿದನೂ ಆದ ಮಾರ್ಕಂಡೇಯಮುನಿಯೇ! ಶ್ರೀನರಸಿಂಹಾವತಾರವನ್ನು ಯಥಾವತ್ತಾಗಿ ನಿರೂಪಿಸಲು ನೀನು ಶಕ್ತನಾಗಿರುತ್ತೀಯೆ.

೨-೪. ಎಲೈ ಪುಣ್ಯಶಾಲಿಯೇ! ಬಿತ್ತರದಿಂದ ಶ್ರೀ ಪ್ರಹ್ಲಾದನ ಚರಿತವನ್ನೂ ಹೇಳು; ಎಲೈ ಮಹಾಜ್ಞಾನಿಯಾದ ಮಹಾಯೋಗಿಯೇ ನಿನ್ನ ಅನುಗ್ರಹದಿಂದ ನಾವು ಧನ್ಯರಾದೆವು. ಈಗ ಪುಣ್ಯವಂತರಾದ ನಾವು ರಮಾವಲ್ಲಭನಾದ ಶ್ರೀನರಸಿಂಹನ ಕಥೆಯೆಂಬ ಅಮೃತವನ್ನು ಪಾನಮಾಡುತ್ತೇವೆ;' ಎಂದು ಹೇಳಿದನು.

॥ ಮಾರ್ಕಂಡೇಯ ಉವಾಚ ॥

ಪುರಾ ಹಿರಣ್ಯಕಶಿಪೋಸ್ತಪೋಽರ್ಥಂ ಗಚ್ಛತೋ ವನಮ್ ॥ ೧ ॥

ದಿಗ್ದಾಹೋ ಭೂಮಿಕಂಪಶ್ಚ ಜಾತಸ್ತಸ್ಯ ಮಹಾತ್ಮನಃ ।
ವಾರಿತೋ ಬಂಧುಭಿರ್ಭೃತ್ಯೈರ್ಮಿತ್ರೈಶ್ಚ ಹಿತಕಾರಿಭಿಃ ॥ ೪ ॥

ಶಕುನಾವಗುಣಾ ರಾಜನ್ ಜಾತಸ್ತತ್ಚ ನ ಶೋಭನಮ್ ।
ತ್ರಿಲೋಕ್ಯಾಧಿಪತಿಸ್ತ್ವಂ ಹಿ ಸರ್ವೇ ದೇವಾಃ ಪರಾಜಿತಾಃ ॥ ೫ ॥

ತವಾಸ್ತಿ ನ ಭಯಂ ಸೌಮ್ಯ ಕಿಮರ್ಥಂ ತಪ್ಯತೇ ತಪಃ ।
ಪ್ರಯೋಜನಂ ನ ಪಶ್ಯಾಮೋ ವಯಂ ಬುದ್ಧ್ಯಾ ಸಮನ್ವಿತಾಃ ॥ ೬ ॥

ಶ್ರೀ ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ:—' ಕೇಳು ಸಹಸ್ರಾನೀಕರಾಯ ! ಪೂರ್ವದಲ್ಲಿ ಹಿರಣ್ಯಕಶಿಪುವೆಂಬ ದೈತ್ಯೇಂದ್ರನು ತಪವನ್ನೆಸಗಲು ವನಕ್ಕೆ ಹೋಗುತ್ತಿರಲು, ಆ ಮಹಾತ್ಮನಿಗೆ ದಿಕ್ಕುಗಳು ಹೊತ್ತಿಕೊಂಡು ಸುಡುವುದೂ, ಭೂಮಿಯು ಕಂಪಿಸುವುದೂ ಉಂಟಾದುವು ; ಇವನ್ನು ಕಂಡು, ಅವನಿಗೆ ಹಿತವನ್ನೆಸಗುವ ಬಂಧು ಮಿತ್ರರು ಅವನನ್ನು ತಪಕ್ಕೆ ಹೋಗಕೂಡದೆಂದು ತಡೆದರು.

೫. ಎಲೈ ರಾಯನೇ ! ಕೇಳು ; ಇನ್ನೂ ಅಪಶಕುನಗಳೂ ಉಂಟಾದುವು. ಆಗ ಬಂಧು ಮಿತ್ರರು ಎಲೈ ಪ್ರಭುವೇ ! ಈಗ ಅಪಶಕುನಗಳುಂಟಾಗುತ್ತಿವೆ; ನೀನು ಮೂಲೋಕಗಳ ಒಡೆಯನು ; ದೇವತೆಗಳನ್ನೆಲ್ಲಾ ಸೋಲಿಸಿರುತ್ತೀಯೆ.

೬. ಎಲೈ ಸೌಮ್ಯನೇ ! ನಿನಗೆ ಯಾರಿಂದಲೂ ಭಯವಿರುವುದಿಲ್ಲ ; ಏತಕ್ಕಾಗಿ ತಪವನ್ನಾಚರಿಸುವೆ ? ನಾವು ಬುದ್ಧಿಪೂರ್ವಕವಾಗಿ ವಿಚಾರಮಾಡಲಾಗಿ, ಈ ತಪೋಽನುಷ್ಠಾನಕ್ಕೆ ಯಾವ ಫಲವನ್ನೂ ಕಾಣುವುದಿಲ್ಲ.

ಯೋ ಭವೇತ್ಸನ್ಯೂನಕಾಮೋ ನ ತಪಶ್ಚರ್ಯಾಂ ಕರೋತಿ ಸಃ ।
ಏವಂ ತೈರ್ವಾರ್ಯಮಾಣೋಽಪಿ ದುರ್ಮದೋ ಮದಮೋಹಿತಃ ॥ ೭ ॥

ಯಾತಃ ಕೈಲಾಸಶಿಖರಂ ದ್ವಿತ್ರೈರ್ಮಿತ್ರೈಃ ಪರಿವೃತಃ ।
ತಸ್ಯ ಸಂತಪ್ಯಮಾನಸ್ಯ ತಪಃ ಪರಮದುಷ್ಕರಂ ॥ ೮ ॥

ಚಿಂತಾ ಜಾತಾ ಮಹೀಪಾಲ ವಿರಿಂಚೇಃ ಪದ್ಮಜನ್ಮನಃ ।
ಕಿಂ ಕರೋಮಿ ಕಥಂ ದೈತ್ಯಸ್ತಪಸೋ ವಿನಿವರ್ತತೇ ॥ ೯ ॥

ಇತಿ ಚಿಂತಾಕುಲಸ್ಯೈವ ಬ್ರಹ್ಮಣೋಽಂಗಸಮುದ್ಭವಃ ।
ಪ್ರಣಮ್ಯ ಪ್ರಾಹ ಭೂಪಾಲ ನಾರದೋ ಮುನಿಸತ್ತಮಃ ॥ ೧೦ ॥

೭-೯. ಯಾವನು ಸಂಸಾರದಲ್ಲಿ ಪೂರ್ಣಕಾಮನಾಗಿರುವನೋ, ಅವನು ತಪವನ್ನೆಸಗುವುದಿಲ್ಲವು; ' ಇಂತು ಆ ಬಂಧು ಮಿತ್ರರು ತಡೆಯುತ್ತಿದ್ದರೂ, ದುರ್ಮದನೂ ಸೊಕ್ಕಿನಿಂದ ವಿವೇಕ ರಹಿತನೂ ಆದ ಹಿರಣ್ಯಕಶಿಪುವು ಈರ್ವರು, ಮೂವರು ಕೆಳೆಯರೊಡಗೂಡಿ ಕೈಲಾಸದ ಶಿಖರಕ್ಕೆ ಹೋದರು. ಅಲ್ಲಿ ಅವನು ಅತ್ಯಂತ ಕಠಿನವಾದ ತಪವನ್ನು ಅನುಷ್ಠಿಸುತ್ತಿರುವಾಗ, ಎಲೈ ಸಹಸ್ರಾನೀಕ ರಾಯನೇ ! ಶ್ರೀ ಮಹಾ ವಿಷ್ಣುವಿನ ಹೊಕ್ಕಳಿನ ತಾವರೆಯಲ್ಲಿ ಹುಟ್ಟಿದವನೂ, ಹಂಸವಾಹನನೂ ಆದ ಚತುರ್ಮುಖನಿಗೆ ' ಏನನ್ನು ಮಾಡಲಿ ? ಈ ದೈತ್ಯನು ತಪದ ದೆಸೆಯಿಂದ ಹೇಗೆ ಹಿಂತಿರುಗುವನು ?' ಎಂದು ಚಿಂತೆಯುಂಟಾಯಿತು.

೧೦. ಎಲೈ ರಾಯನೇ ! ಕೇಳು ; ಇಂತು ಚಿಂತಾಕ್ರಾಂತನಾದ ಬಮ್ಮನಿಗೆ ಅವನ ಒಡಲಿನಿಂದ ಜನಿಸಿದ ಜ್ಞಾನಿಶ್ರೇಷ್ಠನಾದ ನಾರದನು ಪೊಡಮಟ್ಟು ಇಂತು ನುಡಿದನು.

॥ ನಾರದ ಉವಾಚ ॥

ಕಿಮರ್ಥಂ ಖಿದ್ಯತೇ ತಾತ ನಾರಾಯಣಪರಾಯಣ ।
ಯೇಷಾಂ ಮನಸಿ ಗೋವಿಂದಸ್ತೇ ವೈ ನಾರ್ಹಂತಿ ಶೋಚಿತುಮ್ ॥ ೧೧ ॥

ಅಹಂ ತಂ ವಾರಯಿಷ್ಯಾಮಿ ಮತಿಂ ಮೇ ಸಂಪ್ರದಾಸ್ಯತಿ ।
ನಾರಾಯಣೋ ಜಗತ್ಸ್ವಾಮೀ ತಪ್ಯಂತಂ ದಿತಿನಂದನಮ್ ॥ ೧೨ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾsನಮ್ಯ ಪಿತರಂ ವಾಸುದೇವಂ ಹೃದಿ ಸ್ಮರನ್ ।
ಪ್ರಯಾತಃ ಪರ್ವತೇನೈವ ಸಾರ್ಧಂ ಸ ಮುನಿಪುಂಗವಃ ॥ ೧೩ ॥

---

೧೧. ನಾರದನು ಹೇಳುತ್ತಾನೆ:—‘ಎಲೈ ತಂದೆಯೇ! ಯಾವಾಗಲೂ ಶ್ರೀಮನ್ನಾರಾಯಣನನ್ನೇ ಧ್ಯಾನಿಸುವವನೇ! ಏತಕ್ಕೆ ದುಃಖಪಡುತ್ತೀಯೆ? ಯಾರಮನದಲ್ಲಿ ಗೋವಿಂದನಿರುತ್ತಾನೆಯೋ, (ಯಾರು ಶ್ರೀ ಗೋವಿಂದನನ್ನು ಧ್ಯಾನಿಸುತ್ತಾರೆಯೋ) ಅವರು ಶೋಕಿಸಲು ಅರ್ಹರಲ್ಲವು.

೧೨. ತಪವನ್ನೆಸಗುತ್ತಲಿರುವ ಆ ದಿತಿಯ ಮಗನಾದ ಹಿರಣ್ಯಕಶಿಪುವನ್ನು ತಪವನೆಸಗದಂತೆ ನಾನು ತಡೆಯುತ್ತೇನೆ. ಸಕಲ ಪ್ರಪಂಚಕ್ಕೂ ನಿಯಾಮಕನಾದ ಶ್ರೀಮನ್ನಾರಾಯಣನು ನನಗೆ ಆ ಬುದ್ಧಿಯನ್ನು ಕೊಡುವನು;’ ಎಂದು ನಾರದನು ನುಡಿದನು.

೧೩. ಮಾರ್ಕಂಡೇಯಮುನಿಯು ಹೇಳುತ್ತಾನೆ:—‘ಕೇಳು; ಸಹಸ್ರಾನೀಕ ರಾಯ! ಆ ಮುನಿಶ್ರೇಷ್ಠನಾದ ನಾರದನು ಇಂತು ನುಡಿದು, ತಂದೆಯಾದ ವಿರಂಚನಿಗೆರಗಿ, ಹೃದಯದಲ್ಲಿ ಶ್ರೀಮನ್ನಾರಾಯಣನನ್ನು ನೆನೆಯುತ್ತಾ, ಪರ್ವತ ನೆಂಬ ಮುನಿಯೊಡನೆ ಹೊರಟನು.

ಕಲವಿಂಕೌ ತು ತೌ ಭೂತ್ವಾ ಕೈಲಾಸಂ ಪರ್ವತೋತ್ತಮಮ್ ।
ಯತ್ರಾಸ್ತೇ ದಿತಿಜಃ ಶ್ರೇಷ್ಠೋ ದ್ವಿತ್ರ್ಯೈರ್ಮಿತ್ರೈಃ ಪರಿವೃತಃ ॥ ೧೪ ॥

ಕೃತಸ್ನಾತೋ ಮುನಿಸ್ತತ್ರ ವೃಕ್ಷಶಾಖಾ ಸಮಾಶ್ರಿತಃ ।
ಶೃಣ್ವತಸ್ತಸ್ಯ ದೈತ್ಯಸ್ಯ ಪ್ರಾಹ ಗಂಭೀರಯಾ ಗಿರಾ ॥ ೧೫ ॥

ನಮೋ ನಾರಾಯಣಾಯೇತಿ ಪುನಃಪುನರುದಾರಧೀಃ ।
ತ್ರಿವಾರಂ ಪ್ರಜಪಿತ್ವಾ ವೈ ನಾರದೋ ಮೌನಮಾಶ್ರಿತಃ ॥ ೧೬ ॥

ತಚ್ಛ್ರುತ್ವಾ ವಚನಂ ತಸ್ಯ ಕಲವಿಂಕಸ್ಯ ಸಾದರಃ ।
ಹಿರಣ್ಯಕಶಿಪುರ್ದೈತ್ಯಃ ಕ್ರುದ್ಧಶ್ಚಾಪಂ ಸಮಾದಧೇ ॥ ೧೭ ॥

ಬಾಣಂ ಧನುಷಿ ಸಂಧಾಯ ಯಾವನ್ಮುಂಚತಿ ತೌ ಪ್ರತಿ ।
ತಾವದುಡ್ಡೀಯ ತೌ ಭೂಪ ಗತೌ ನಾರದಪರ್ವತೌ ॥ ೧೮ ॥

---

೧೪. ದೈತ್ಯಶ್ರೇಷ್ಠನಾದ ಹಿರಣ್ಯಕಶಿಪುವು ಎಲ್ಲಿ ಇಬ್ಬರು ಮೂವರು ಕೆಳೆಯರೊಡನೆ ಇರುತ್ತಾನೆಯೋ, ಆ ಪರ್ವತೋತ್ತಮವಾದ ಕೈಲಾಸಕ್ಕೆ ಆ ನಾರದ ಪರ್ವತರು (ಕಲವಿಂಕ) ಗುಬ್ಬಚ್ಚಿಯ ರೂಪವನ್ನು ತಾಳಿದವರಾಗಿ ಹೋದರು.

೧೫. ಅಲ್ಲಿ ಮಿಂದ ಮುನಿಯು ಮರದ ರೆಂಬೆಯ ಮೇಲೆ ಕುಳಿತು, ಆ ದೈತ್ಯನಿಗೆ ಕೇಳಿಸುವ ಹಾಗೆ ಗಂಭೀರವಾದ ಮಾತಿನಿಂದ ಇಂತು ಹೇಳಿದನು.

೧೬. ಪರಮ ಜ್ಞಾನಿಯಾದ ನಾರದಮುನಿಯು ಮತ್ತೂ-ಮತ್ತೂ 'ನಮೋ ನಾರಾಯಣಾಯ' (ನಾರಾಯಣನಿಗೆ ನಮಸ್ಕಾರ) ಎಂದು ಮೂರು ಬಾರಿ ಗಟ್ಟಿಯಾಗಿ ಉಚ್ಚರಿಸಿ, ಮೌನವನ್ನು ತಾಳಿದನು.

೧೭. ಹಿರಣ್ಯಕಶಿಪುವೆಂಬ ದೈತ್ಯನು ಆದರದೊಡನೆ ಆ ಗುಬ್ಬಚ್ಚಿಯ ಆ ನುಡಿಯನ್ನು ಕೇಳಿ ಕೋಪಗೊಂಡು, ಬಿಲ್ಲನ್ನು ತೆಗೆದುಕೊಂಡನು.

೧೮. ಎಲೈ ಭೂಪನೇ! ಕೇಳು; ಅವನು ಸರಳನ್ನು ಬಿಲ್ಲಿನಲ್ಲಿ ಜೋಡಿಸಿ, ಅವುಗಳಿಗೆ ಗುರಿಯಿಟ್ಟು ಹೊಡೆಯುವಾಗ, ಆ ನಾರದ ಪರ್ವತರು ಹಾರಿಕೊಂಡು ಹೋದರು.

ಸೋಽಪಿ ಕ್ರೋಧಪರೀತಾಂಗೋ ಹಿರಣ್ಯಕಶಿಪುಸ್ತಥಾ ।
ತ್ಯಕ್ತ್ವಾ ತಮಾಶ್ರಮಂ ಭೂಯೋ ನಗರಂ ಸ್ವಂ ಮಹೀಪತೇ ॥ ೧೯ ॥

ತಸ್ಯಾಪಿ ಭಾರ್ಯಾ ಸುಶ್ರೋಣಿ ಕಯಾಧೂರ್ನಾಮ ನಾಮತಃ ।
ತದಾ ರಜಸ್ವಲಾ ಭೂತ್ವಾ ಸ್ನಾತಾಭೂದ್ದೈವಯೋಗತಃ ॥ ೨೦ ॥

ರಾತ್ರಾವೇಕಾಂತಸಮಯೇ ತಯಾ ಪೃಷ್ಟಃ ಸ ದೈತ್ಯರಾಟ್ ।
ಸ್ವಾಮಿನ್ ಯದಾ ತಪಶ್ಚರ್ಯಾಂ ಕರ್ತುಂ ಗೇಹಾದ್ವನಂಗತಃ ॥ ೨೧ ॥

ತದಾ ತ್ವಯೋಕ್ತಂ ವರ್ಷಾಣಾಮಯುತಂ ಮೇ ತಪಸ್ತ್ವಿದಂ ।
ತತ್ಕಿಮರ್ಥಂ ಮಹಾರಾಜ ಸಾಂಪ್ರತಂ ತ್ಯಕ್ತವಾನ್ ವ್ರತಮ್ ॥ ೨೨ ॥

ತಥ್ಯಂ ಕಥಯ ಮೇ ನಾಥ ಸ್ನೇಹಾತ್ಪೃಚ್ಛಾಮಿ ದೈತ್ಯಪ ।

॥ ಹಿರಣ್ಯಕಶಿಪುರುವಾಚ ॥

ಶೃಣು ಚಾರ್ವಂಗಿ ಮೇ ತಥ್ಯಾಂ ವಾಚಂ ವ್ರತವಿನಾಶಿನೀಮ್ ॥ ೨೩ ॥

---

೧೯. ಎಲೈ ಮಹೀಪತಿಯೇ! ಆಗ ಆ ಹಿರಣ್ಯಕಶಿಪುವೂ ಕಡುಮುನಿಸಿನಿಂದ ಕೂಡಿದವನಾಗಿ, ಆ ತಪೋವನವನ್ನು ಬಿಟ್ಟು, ತನ್ನ ನಗರಕ್ಕೆ ಮರಳಿ ಬಂದನು.

೨೦. ಹೆಸರಿನಿಂದ ಕಯಾಧುವೆಂದು ಖ್ಯಾತಳಾದ, ಗಾಡಿಯ ಹೊರವಾರಿನ ಅವನ ಮಡದಿಯು ದೈವಯೋಗದಿಂದ ಆಗಲೇ ಋತುಸ್ನಾತೆಯಾಗಿದ್ದಳು.

೨೧-೨೨. ಅವಳು ರಾತ್ರಿಯಲ್ಲಿ ಏಕಾಂತದ ಹೊತ್ತಿನಲ್ಲಿ ಆ ದೈತ್ಯರಾಯನನ್ನು ಇಂತು ಕೇಳಿದಳು:—'ಎಲೈ ಸ್ವಾಮಿಯೆ! ಯಾವಾಗ ನೀವು ತಪವನ್ನೆಸಗಲು ಮನೆಯಿಂದ ಪಳುವಕ್ಕೆ ಹೊರಟಿರೋ, ಆಗ ನೀವು ಈ ತಪಸ್ಸು ಪತ್ತುಸಾವಿರ ವರ್ಷಗಳ ಪರ್ಯಂತ ಆಚರಿಸತಕ್ಕದ್ದು ಎಂದು ಹೇಳಿದಿರಿ; ಎಲೈ ಮಹಾರಾಜನೇ!

ಕ್ರೋಧಸ್ಯಾತೀವ ಜನನೀಂ ದೇವಾನಾಂ ಮುದವರ್ಧನೀಮ್ ।
ಕೈಲಾಸಶಿಖರೇ ದೇವಿ ಮಹಾದಾನಂದಕಾನನೇ ॥ ೨೪ ॥

ವ್ಯಾಹರಂತೌ ಶುಭಾಂ ವಾಣೀಂ ನಮೋ ನಾರಾಯಣೇತಿ ಚ ।
ವಾರದ್ವಯಂ ತ್ರಯಂ ಚೇತಿ ವ್ಯಾಹೃತಂ ವಚನಂ ಶುಭೇ ॥ ೨೫ ॥

ತೇನ ಮೇ ಮನಸಿ ಕ್ರೋಧೋ ಜಾತೋಽತೀವ ವರಾನನೇ
ಕೋದಂಡೇ ಶರಮಾಧಾಯ ಯಾವನ್ಮುಂಚಾಮಿ ಭಾಮಿನಿ ॥ ೨೬ ॥

ತಾವಂತೌ ಪಕ್ಷಿಣೌ ಭೀತೌ ಗತೌ ದೇಶಾಂತರಂ ತ್ವಹಮ್।
ತ್ಯಕ್ತ್ವಾ ವ್ರತಂ ಸಮಾಯಾತೋ ಭಾವಿಕಾರ್ಯಬಲೇನ ವೈ ॥ ೨೭ ॥

ಈಗ ಏತಕ್ಕೋಸ್ಕರ ಆ ನಿಯಮವನ್ನು ಬಿಟ್ಟುಬಿಟ್ಟಿರಿ; ಎಲೈ ನಾಥನೇ! ದೈತ್ಯೇಶ್ವರನೇ! ಸ್ನೇಹದಿಂದ ಕೇಳುತ್ತೇನೆ; ದಿಟವಾದುದನ್ನು ಹೇಳಿರಿ;' ಎಂದು ಕಯಾಧುವು ಕೇಳಿದಳು. ಅದಕ್ಕೆ ಹಿರಣ್ಯಕಶಿಪುವು ಇಂತು ಹೇಳುತ್ತಾನೆ:—'ನನ್ನ ನೇಮವನ್ನು ಪಾಳುಗೆಯ್ವ, ಕಡುಮುಳಿಸನ್ನುಂಟುಮಾಡುವ, ಬರ್ದಿಲರ್ಗೆ ಸಂತಸ ವನ್ನು ಬೆಳೆಯಿಸುವ, ನನ್ನ ದಿಟವಾದ ಈ ನುಡಿಯನ್ನು ಎಲೌ ಗಾಡಿವೆತ್ತ ಒಡಲಿ ನವಳೇ! ಕೇಳು; ಎಲೌ ದೇವಿಯೇ! ಕೈಲಾಸಪರ್ವತದ ಶಿಖರದಲ್ಲಿ, ಕಡುಸೊಗದ ಬನದಲ್ಲಿ, ಎರಡು ಗುಬ್ಬಚ್ಚಿಗಳು 'ನಮೋ ನಾರಾಯಣಾಯ;' ('ನಾರಾಯಣನಿಗೆ ನಮಸ್ಕಾರವು') ಎಂಬ ಮಂಗಳದ ನುಡಿಯನ್ನು ಎರಡು ಮೂರು ತಡವೆ ಹೇಳಿದುವು; ಎಲೈ ವರಾನನೆಯೇ! ಅದನ್ನು ಕೇಳಿ, ನನಗೆ ಕಡುಮುನಿಸು ಬಂದಿತು; ಎಲೌ ಭಾಮಿನಿ! ಬಿಲ್ಲಿನಲ್ಲಿ ಬಾಣವನ್ನು ಜೋಡಿಸಿ, ಬಿಡುವ ಹೊತ್ತಿಗೆ ಆ ಎರಡು ಹಕ್ಕಿಗಳೂ ಹೆದರಿದವಾಗಿ, ಬೇರೆಯ ಕಡೆಗೆ ಹಾರಿಹೋದುವು. ನಾನಾದರೊ ಆ ನಿಯಮವನ್ನು ಬಿಟ್ಟು, ಮುಂದೆಸಗುವ ಕಜ್ಜದ ಬಲದಿಂದ ಬಂದೆನು;' ಎಂದನು.

॥ ಮಾರ್ಕಂಡೇಯ ಉವಾಚ ॥

ಇತ್ಯುಚ್ಯಮಾನೇ ವಚನೇ ವೀರ್ಯದ್ರಾವೋಽಭವತ್ತದಾ ।
ಋತುಕಾಲೇ ತು ಸಂಪ್ರಾಪ್ತೇ ಜಾತೋ ಗರ್ಭಸ್ತದೈವ ಹಿ ॥ ೨೮ ॥

ಪುನಃ ಪ್ರವರ್ತಮಾನಸ್ಯ ಗರ್ಭೇ ಗರ್ಭಸ್ಯ ಧೀಮತಃ ॥ ೨೯ ॥

ನಾರದಸ್ಯೋಪದೇಶೇನ ವೈಷ್ಣವಃ ಸಮಜಾಯತ ॥ ೩೦ ॥

ತದಗ್ರೇ ಕಥಯಿಷ್ಯಾಮಿ ಭೂಪ ಶ್ರದ್ಧಾಪರೋ ಭವ ।
ತಸ್ಯ ಸೂನುರಭೂದ್ಭಕ್ತಃ ಪ್ರಹ್ಲಾದೋ ಜನ್ಮವೈಷ್ಣವಃ ॥ ೩೧ ॥

ಸೋಽವರ್ಧತಾಸುರಕುಲೇ ನಿರ್ಮಲೋ ಮಲಿನಾಶ್ರಯೇ ।
ಯಥಾ ಕಲೌ ಹರೇರ್ಭಕ್ತಿಃ ಪಾಶಸಂಸಾರಶೋಚನೀ ॥ ೩೨ ॥

ಮಾರ್ಕಂಡೇಯ ಮುನಿಯು ಹೇಳುತ್ತಾನೆ :—

೨೮. ‘ ಎಲೈ ಭೂಪನೇ ! ಕೇಳು ; ಹಿರಣ್ಯಕಶಿಪುವು ತನ್ನ ಮಡದಿಗೆ ಇಂತು ನುಡಿಯುತ್ತಿರವಾಗಲೇ, ಅವನಿಗೆ ವೀರ್ಯದ್ರವಣವುಂಟಾಯಿತು. ಕಯಾಧುವಿಗೆ ಋತುಕಾಲವು ಇದ್ದುದಾಗಿ, ಆಗಲೇ ಗರ್ಭಧಾರಣವಾಯಿತು.

೨೯-೩೦. ಪುನಃ ಕಯಾಧುವಿನ ಗರ್ಭಕೋಶವಲ್ಲಿದ್ದ, ಜ್ಞಾನಿಯಾದ ಗಬ್ಬಕ್ಕೆ ನಾರದರ ಉಪದೇಶವುಂಟಾದುದರಿಂದ ವೈಷ್ಣವನಾದ ಮಗುವು ಹುಟ್ಟಿದನು.

೩೧. ಎಲೈ ಸಹಸ್ರಾನೀಕರಾಯನೇ ! ಮುಂದೆ ಆ ವಿಷಯವನ್ನು ಹೇಳುವೆನು ; ಶ್ರದ್ಧೆಯುಳ್ಳವನಾಗಿ ಕೇಳು ; ಆ ಹಿರಣ್ಯಕಶಿಪುವಿಗೆ ಪರಮ ಭಗವದ್ಭಕ್ತನಾದ ಪ್ರಹ್ಲಾದನೆಂಬವನು ಮಗನಾಗಿ ಜನಿಸಿದನು. ಅವನು ಹುಟ್ಟಿನಿಂದ ವಿಷ್ಣುಭಕ್ತನು.

೩೨. ಪರಿಶುದ್ಧನಾದ ಆ ಬಾಲಕನು ಪಾಪದೆಡೆಯಾದ ದೈತ್ಯಕುಲದಲ್ಲಿ ಬಳೆದನು. ಎಂತೆನೆ ಕಲಿಗಾಲದಲ್ಲಿ ಶ್ರೀಹರಿಯ ಭಕ್ತಿಯು ತೊಡಕಾಗಿರುವ ಸಂಸಾರ ಬಂಧಕ್ಕೆ ಕೇಡನ್ನೆಸಗುವುದಾಗುವುದು.

ಸ ವರ್ಧಮಾನೋ ವಿರರಾಜ ಬಾಲಃ
ಸಹ ತ್ರಯೀನಾಥಪದೇಷು ಭಕ್ತ್ಯಾ
ಬಾಲೋಽಲ್ಪದೇಹೋಽ ಮಹತೀಂ ಮಹಾತ್ಮಾ
ವಿಸ್ತಾರಯನ್ ಭಾತಿ ಸ ವಿಷ್ಣುಭಕ್ತಿಮ್ ॥ ೩೩ ॥

ಯಥಾ ಚತುರ್ಥಂ ಯುಗಮಾತ್ತಧರ್ಮ
ಕಾಮಾರ್ಥಮೋಕ್ಷಂ ಕಿಲ ಕೀರ್ತಿದಂ ಹಿ ।
ಸ ಬಾಲಲೀಲಾಸು ಸಹಾನ್ಯಡಿಂಭೈಃ
ಪ್ರಹೇಲಿಕಾ ಕ್ರೀಡನಕೇಷು ನಿತ್ಯಮ್ ॥ ೩೪ ॥

ಕಥಾಪ್ರಸಂಗೇಷು ಚ ಕೃಷ್ಣಮೇವ
ಪ್ರೋವಾಚ ಯಸ್ಮಾತ್ತ ಹಿ ತತ್ಸ್ವಭಾವಃ ।
ಇಚ್ಛನ್ನಿಚ್ಛಿಶುತ್ವೇಽಪಿ ವಿಚಿತ್ರಕಾರೀ
ವ್ಯವರ್ಧತೇಶಸ್ಮರಣಾಮೃತಾಶಃ ॥ ೩೫ ॥

---

೩೩. ಆ ಎಳೆಯನು ವೇದನಾಯಕನಾದ ಶ್ರೀ ಹರಿಯ ಚರಣಗಳಲ್ಲಿ ಭಕ್ತಿಯೊಡನೆ ಬೆಳೆಯುತ್ತಾ, ಎಸೆದನು. ಕಿತ್ತೊಡಲಿನ ಮಹಾತ್ಮನಾದ ಆ ಹುಡುಗನು ಹಿರಿದಾದ ಶ್ರೀ ಮಹಾವಿಷ್ಣುವಿನ ಭಕ್ತಿಯನ್ನು ಬಿತ್ತರಿಸುತ್ತಾ ತೊಳಗಿದನು.

೩೪-೩೫. ಎಂತೆನೆ, ನಾಲ್ಕನೆಯ ಯುಗವಾದ ಕಲಿಯುಗವಾದರೋ, ಕೇವಲ ಹರಿಸಂಕೀರ್ತನ ಮಾತ್ರದಿಂದಲೇ ಧರ್ಮಕಾಮಾರ್ಥಮೋಕ್ಷರೂಪವಾದ ನಾಲ್ಕು ಪುರುಷಾರ್ಥಗಳನ್ನೂ ಉಂಟುಮಾಡುವುದಷ್ಟೆ ! ಆ ಪ್ರಹ್ಲಾದ ಕುಮಾರನು ನಿತ್ಯದಲ್ಲಿಯೂ ಇತರ ಮಕ್ಕಳೊಡನೆ ಹುಡುಗಾಟಗಳಲ್ಲಿಯೂ, ಒಗಟಿಯ ಆಟಗಳಲ್ಲಿಯೂ, ಇನ್ನೂ ಇತರ ಕಥೆಗಳನ್ನು ಹೇಳುವಲ್ಲಿಯೂ ಶ್ರೀ ಕೃಷ್ಣನಾಮವನ್ನೇ ಯಾವ ಕಾರಣದಿಂದ ಹೇಳಿದನೋ, ಅದರಿಂದ ಅಂತು ಶ್ರೀ ಕೃಷ್ಣನಾಮವನ್ನುಚ್ಚರಿಸುತ್ತಿರುವುದು ಆ ಬಾಲಕನ ಹುಟ್ಟುಗುಣವು. ಶೈಶವದಲ್ಲಿಯೂ ಎಳಸುತ್ತಾ, ಅಚ್ಚರಿಯನ್ನೆಸಗುತ್ತಾ, ಸರ್ವೇಶ್ವರನಾದ ಶ್ರೀಹರಿಯ ನಾಮಸ್ಮರಣೆಯೆಂಬ ಅಮೃತವನ್ನು ಸವಿಯುವವನಾಗಿ ಬಳೆದನು.

ತಂ ಪದ್ಮವಕ್ತ್ರಂ ದೈತ್ಯೇಂದ್ರಃ ಕದಾ ಚಿತ್ ಸ್ತ್ರೀವೃತಃ ಖಲಃ ।
ಬಾಲಂ ಗುರುಗೃಹಾಯಾತಂ ದದರ್ಶ ಸ್ವಾಯತೇಕ್ಷಣಮ್ ॥ ೩೬ ॥

ಗೃಹೀತ್ವಾ ತು ಕರೇ ಪಾತ್ರಂ ಪಟ್ಟಿಕಾಯಾಃ ಸುಶೋಭನಮ್ ।
ಮೂರ್ಧ್ನಿ ಚಕ್ರಾಂಕಿತಾಃಪಟ್ಟೀ ಕೃಷ್ಣನಾಮಾಂಕಿತಾಽದರಾತ್ ॥ ೩೭ ॥

ತಮಾಹೂಯ ಮುದಾಽವಿಷ್ಣೋ ಲಾಲಯನ್ ಪ್ರಾಹ ಪುತ್ರಕಮ್ ।
ಪುತ್ರ ತೇ ಜನನೀ ನಿತ್ಯಂ ಸುಧೀರ್ಮೇ ಪುತ್ರಶಂಸನೀ ॥ ೩೮ ॥

ಅಥ ತದ್ವದ ಯತ್ಕಿಂಚಿದ್ಗುರುವೇಶ್ಮನಿ ಶಿಕ್ಷಿತಮ್ ।
ವಿಚಾರ್ಯಾನಂದಜನನಂ ಸಮ್ಯಗಾಯಾತಿ ತದ್ವದ ॥ ೩೯ ॥

---

೩೬. ಒಮ್ಮೆ ಖಲನಾದ ದೈತ್ಯೇಂದ್ರನು ಹೆಣ್ಣುಗಳಿಂದ ಬಳಸಿದವನು ಗುರುಗಳ ಮನೆಯಿಂದ ಬಂದ, ಪೆರ್ಗಣ್ಣಿನ, ತಾವರೆಮೊಗದ ಆ ಹುಡುಗನನ್ನು ಕಂಡನು.

೩೭. ಕೈಯಲ್ಲಿ ತಾಂಬೂಲದಿಂದಲಂಕೃತವಾದ ತಟ್ಟೆಯನ್ನು ಹಿಡಿದು, ತಲೆಯಲ್ಲಿ ಶ್ರೀಕೃಷ್ಣನಾಮದಿಂದ ಬರೆದಿರತಕ್ಕ ಸುದರ್ಶನ ಚಕ್ರದಿಂದ ಚಿಹ್ನಿತವಾದ ರೇಶಿಮೆಯ ತಲೆಯ ಪಟ್ಟಿಯನ್ನು ಕಟ್ಟಿಕೊಂಡಿದ್ದನು.

೩೮. ಆಗ ಹಿರಣ್ಯಕಶಿಪುವು ಸಂತಸದೊಡಗೂಡಿ. ಆ ಮಗುವನ್ನು ಕರೆದು, ಮುದ್ದುಗೆಯ್ಯುತ್ತಾ, ಹೇಳಿದನು; 'ಎಲೈ ಪುತ್ರನೇ ! ನಿನ್ನ ತಾಯಿಯು ನಿತ್ಯದಲ್ಲಿಯೂ ತನ್ನ ಮಗನು ಬುದ್ಧಿವಂತನೆಂದು ಮಗನನ್ನೇ ಕೊಂಡಾಡುವಳು.

೩೯. ಇನ್ನು ನೀನು ಗುರುಗಳ ಮನೆಯಲ್ಲಿ ಕಲಿತುದಾವುದನ್ನಾದರೂ ಹೇಳು ; ವಿಚಾರಮಾಡಿ ಚೆನ್ನಾಗಿ ಬಾಯಿಗೆ ಬರುವ, ಅತಿಸುಖವಾಗುವಾವುದಾದರೊಂದನ್ನು ಹೇಳು ; ' ಎಂದು ಕೇಳಿದನು.

ಅಥಾಹ ಪಿತರಂ ಹರ್ಷಾತ್ ಪ್ರಹ್ಲಾದೋ ಜನ್ಮವೈಷ್ಣವಃ ।
ಗೋವಿಂದಂ ತ್ರಿಜಗದ್ವಂದ್ಯಂ ಪ್ರಭುಂ ನತ್ವಾ ಬ್ರವೀಮಿ ತೇ ॥ ೪೦ ॥

ಇತಿ ಶತ್ರೋಃಸ್ತವಂ ಶ್ರುತ್ವಾ ಪುತ್ರೋಕ್ತಂ ಸ್ತ್ರೀವೃತಃ ಖಲಃ ।
ಕ್ರುದ್ಧೋಽಪಿ ತಂ ವಂಚಯಿತುಂ ಜಹಾಸೋಚ್ಚೈಃ ಪ್ರಹೃಷ್ಟವತ್ ॥ ೪೧ ॥

ಆಲಿಂಗ್ಯ ತನಯಂ ಪ್ರಾಹ ಶ್ರುಣು ಬಾಲ ಹಿತಂ ವಚಃ ।
ರಾಮ ಗೋವಿಂದ ಕೃಷ್ಣೇತಿ ವಿಷ್ಣೋ ಮಾಧವ ಶ್ರೀಪತೇ ॥ ೪೨ ॥

ಏವಂ ವದಂತಿ ಯೇ ಸರ್ವೇ ತೇ ಪುತ್ರ ಮಮ ವೈರಿಣಃ ।
ಶಾಸಿತಾಽಸ್ತಿ ಮಯೇದಾನೀಂ ತ್ವಯೇದಂ ಕ್ವ ಶ್ರುತಂ ವಚಃ ॥ ೪೩ ॥

---

೪೦. ಬಳಿಕ ಹುಟ್ಟಿನಿಂದ ವಿಷ್ಣುಭಕ್ತನಾದ ಪ್ರಹ್ಲಾದಬಾಲನು ಸಂತಸದಿಂದ ತಂದೆಯನ್ನು ಕುರಿತು ಇಂತು ಹೇಳಿದನು; ಎಲೈ ತಂದೆಯೇ! ಮೂರು ಲೋಕಕ್ಕೂ ವಂದ್ಯನಾದ ಸರ್ವಸ್ವಾಮಿಯಾದ, ವೇದಗಮ್ಯನಾದ ಶ್ರೀಗೋವಿಂದನಿಗೆರಗಿ ನಿನಗೆ ಹೇಳುತ್ತೇನೆ.

೪೧. ಹೆಂಗುಸರಿಂದ ಬಳಸಿದ ಆ ದುಷ್ಟನಾದ ಹಿರಣ್ಯಕಶಿಪುವು ಇಂತು ಮಗನು ನುಡಿದ ತನ್ನ ವೈರಿಯ ಸ್ತುತಿಯನ್ನು ಕೇಳಿ, ಸಿಟ್ಟುಗೊಂಡವನಾದರೂ, ಆ ಹುಡುಗನಿಗೆ ಮೋಸಮಾಡಲು, ಸಂತಸಗೊಂಡವನಂತೆ ಗಟ್ಟಿಯಾಗಿ ನಕ್ಕನು.

೪೨-೪೩. ಆಗ ಮಗನನ್ನು ಅಪ್ಪಿಕೊಂಡು, 'ಎಲೈ ಬಾಲನೇ! ನನ್ನ ಹಿತವಚನಗಳನ್ನು ಕೇಳು; ರಾಮ, ಗೋವಿಂದ, ಕೃಷ್ಣ, ವಿಷ್ಣು, ಮಾಧವ, ಶ್ರೀಪತೇ-ಇಂತೆಂದು ಯಾರು ಹೇಳುತ್ತಾರೆಯೋ, ಎಲೆ ಮಗನೇ! ಅವರೆಲ್ಲರೂ ನನಗೆ ಹಗೆಗಳು. ಈಗ ನಾನು ನಿನ್ನನ್ನು ದಂಡಿಸುವೆನು. ನೀನು ಈ ಮಾತನ್ನು ಎಲ್ಲಿ ಕೇಳಿದೆ? ಹೇಳಿಕೊಟ್ಟವನಾವನು? ಹೇಳು;' ಎಂದು ಹೇಳಿದನು.

ಪಿತುರ್ವಚನಮಾಕರ್ಣ್ಯ ಧೀಮಾನಭಯಸಂಯುತಃ ।
ಪ್ರಹ್ಲಾದಃ ಪ್ರಾಹ ಹೇ ಆರ್ಯ ಮೈವಂ ಬ್ರೂಯಾಃ ಕದಾ ಚನ ॥ ೪೪ ॥

ಸರ್ವೈಶ್ವರ್ಯಪ್ರದಂ ಮಂತ್ರಧರ್ಮಾದಿಪರಿವರ್ಧನಮ್ ।
ಕೃಷ್ಣೇತಿ ಯೋ ನರೋ ಬ್ರೂಯಾತ್ ಸೋಽಭಯಂ ವಿಂದತೇ ಪರಮ್

ಕೃಷ್ಣನಿಂದಾಸಮುತ್ಥಸ್ಯ ಅಘಸ್ಯಾಂತೋ ನ ವಿದ್ಯತೇ ।
ರಾಮ ಮಾಧವ ಕೃಷ್ಣೇತಿ ಸ್ಮರ ಭಕ್ತ್ಯಾತ್ಮಶುದ್ಧಯೇ ॥ ೪೬ ॥

ಗುರವೇಽಪಿ ಬ್ರವೀಮ್ಯೇತದ್ಯತೋ ಹಿತಕರಂ ಪರಮ್ ।
ಶರಣಂ ವ್ರಜ ಸರ್ವೇಶಂ ಸರ್ವಪಾಪಕ್ಷಯಂಕರಮ್ ॥ ೪೭ ॥

ಅಥಾಹ ಪ್ರಕಟಕ್ರೋಧಃ ಸುರಾರಿರ್ಭರ್ತ್ಸಯನ್ ಸುತಮ್ ।
ಕೇನಾಯಂ ಬಾಲಕೋ ನೀತೋ ದಶಾಮೇನಾಂ ಸುಮಧ್ಯಮಾಮ್ ॥ ೪೮॥

ಳಳ-ಳ೭. ತಂದೆಯು ಹೇಳಿದ ಆ ಮಾತನ್ನು ಕೇಳಿ, ಜ್ಞಾನಿಯಾದ ಪ್ರಹ್ಲಾದನು ಹೆದರಿಕೆಯಿಲ್ಲದವನಾಗಿ, ಎಲೈ ಆರ್ಯನೇ ! ಒಮ್ಮೆಯಾದರೂ ಇಂತು ನುಡಿಯಬೇಡ ; ಶ್ರೀಹರಿನಾಮವು ಸಕಲೈಶ್ವರ್ಯವನ್ನೂ ಕೊಡತಕ್ಕದ್ದು ; ಮಂತ್ರ ಧರ್ಮ- ಇವೇ ಮುಂತಾದುವನ್ನು ಹೆಚ್ಚಿಸತಕ್ಕದ್ದು ; ಶ್ರೀಕೃಷ್ಣನೆಂದು ಯಾವ ಮಾನವನು ಉಚ್ಚರಿಸುವನೋ, ಅವನು ಭಯರಹಿತನಾಗಿ ಮೋಕ್ಷವನ್ನು ಐದುವನು. ಶ್ರೀಕೃಷ್ಣನನ್ನು ದೂಷಿಸುವುದರಿಂದ ಹುಟ್ಟುವ ಪಾಪಕ್ಕೆ ಪಾರವೇ ಇಲ್ಲವು. ನಿನ್ನ ಆತ್ಮವು ಪವಿತ್ರವಾಗುವ ಸಲುವಾಗಿ ಕೃಷ್ಣ, ರಾಮ, ಮಾಧವ, ಎಂದು ಭಕ್ತಿಯಿಂದ ಶ್ರೀಹರಿಯನ್ನು ಸ್ಮರಿಸು ; ಯಾವ ಕಾರಣದಿಂದ ಈ ಹರಿನಾಮೋಚ್ಚಾರಣವು ಅತ್ಯಂತ ಸುಖಕರವೋ, ಅದರಿಂದ ಇದನ್ನು ನಮ್ಮ ಗುರುಗಳಿಗೂ ಮಾಡಿರೆಂದು ಹೇಳುತ್ತೇನೆ. ಸರ್ವನಿಯಾಮಕನೂ, ಸಕಲದುರಿತ ನಾಶಕನೂ ಆದ ಶ್ರೀಹರಿಯನ್ನು ಶರಣುಹೊಂದುವವನಾಗು ;' ಎಂದು ಹೇಳಿದನು.

ಳ೮-೫೧. ಅನಂತರದಲ್ಲಿ ಸುರವೈರಿಯಾದ ಹಿರಣ್ಯಕಶಿಪುವು ತನ್ನ ಕ್ರೋಧವನ್ನು ಹೊರಗಾಣಿಸಿ, ಮಗನನ್ನು ಗದರಿಸುತ್ತಾ, 'ಈ ಬಾಲನಿಗೆ ಈ ಮಧ್ಯಮಾವಸ್ಥೆಯನ್ನು ತಂದವರಾರು ? ದುಃಪುತ್ರನೇ ! ನಿನಗೆ ಧಿಕ್ಕಾರ ; ಧಿಕ್ಕಾರ ;

ಧಿಗ್ಧಿಕ್ ಹಾಹೇತಿ ದುಃಪುತ್ರ ಕಿಂ ಮೇ ಕೃತಮಘಂ ಮಹತ್ ।
ಯಾಹಿ ಯಾಹಿ ದುರಾಚಾರ ಪಾಪಿಷ್ಠ ಪುರುಷಾಧಮ ।
ಉಕ್ತ್ವೇತಿ ಪರಿತೋ ವೀಕ್ಷ್ಯ ಪುನರಾಹ ಶಿಶೋರ್ಗುರುಃ ॥ ೪೯ ॥

ಬದ್ಧ್ವಾ ಚಾನೀಯತಾಂ ದೈತ್ಯೈಃ ಕ್ರೂರೈಃ ಕ್ರೂರಪರಾಕ್ರಮೈಃ ।
ಇತಿ ಶ್ರುತ್ವಾ ತತೋ ದೈತ್ಯಾಃ ತಮಾನೀಯ ನ್ಯವೇದಯನ್ ।
ಧೀಮಾನೂಚೇ ಖಲಂ ಭೂಪ ದೇವಾಂತಕ ಪರೀಕ್ಷತಾಮ್ ॥ ೫೦ ॥

ಲೀಲಯೈವ ಜಿತಂ ದೇವ ತ್ರೈಲೋಕ್ಯಂ ನಿಖಿಲಂ ತ್ವಯಾ ।
ಅಸಕೃನ್ನಹಿ ದೋಷೇಣ ಕಿಂ ಕ್ರುದ್ಧಸ್ಯಾಲ್ಪಕೇ ಮಯಿ ॥ ೫೧ ॥

ಇತಿ ಸಾಮವಚಃ ಶ್ರುತ್ವಾ ದ್ವಿಜೋಕ್ತಂ ಪ್ರಾಹ ದೈತ್ಯರಾಟ್ ।
ವಿಷ್ಣುಸ್ತವಂ ಮಮ ಸುತಂ ಪಾಪ ಬಾಲಮಪೀಪಠಃ ॥ ೫೨ ॥

ಹಾ, ಹಾ, ನಾನೇನು ಮಹಾಪಾಪವನ್ನೆಸಗಿದೆನೋ! ದುರಾಚಾರನೂ, ಪಾಪಿಷ್ಠನೂ, ಪುರುಷಾಧಮನೂ ಆದ ಮಗನೇ! ಹೋಗು; ಹೋಗು,' ಎಂದು ಹೇಳಿ, ಸುತ್ತಲೂ ನೋಡಿ, ಮತ್ತೆ ನುಡಿದನು; 'ಕ್ರೂರರೂ, ಕ್ರೂರಪರಾಕ್ರಮರೂ ಆದ ದೈತ್ಯರು ಈ ಬಾಲನ ಗುರುವನ್ನು ಕಟ್ಟಿತರುವುದು;' ಎಂದು ಅಪ್ಪಣೆ ಮಾಡಲು, ದೈತ್ಯರು ಇದನ್ನು ಕೇಳಿ, ಬಳಿಕ ಆ ಗುರುವನ್ನು ಕಟ್ಟಿ ತಂದೊಪ್ಪಿಸಿದರು. ಆಗ ಮಹಾಮತಿಯಾದ ಆಚಾರ್ಯನು 'ಎಲೈ ದೇವಾಂತಕನಾದ ಪ್ರಭುವೇ! ಸ್ವಾಮಿಯೇ! ಪರೀಕ್ಷಿಸು; ತ್ರೈಲೋಕ್ಯವೆಲ್ಲವನ್ನೂ ನೀನು ವಿಲಾಸದಿಂದಲೇ ಗೆದ್ದಿರುತ್ತೀಯೆ; ಅದೂ ಅನೇಕಬಾರಿ; ಕೋಪದಿಂದಲ್ಲವು; ಅಲ್ಪನಾದ ನನ್ನ ವಿಷಯದಲ್ಲಿ ಕೋಪಗೊಂಡು ನಿನಗೇನು ಪ್ರಯೋಜನವಾಗುವುದು?' ಎಂದು ಆ ಖಲನನ್ನು ಕುರಿತು ಹೇಳಿದನು.

೫೨-೫೩. ಇಂತು ಆ ಬ್ರಾಹ್ಮಣನು ಹೇಳಿದ ಸಾಮೋಕ್ತಿಯನ್ನು ಕೇಳಿ, ಆ ದೈತ್ಯರಾಜನು ಹೇಳಿದನು;—'ಎಲೈ ಪಾಪಾತ್ಮನೇ! ನೀನು ನನ್ನ ಮಗನಾದ

ಉಕ್ತ್ವೇತಿ ತನಯಂ ಪ್ರಾಹ ರಾಜಾ ಸಾಮ್ನಾಮಲಂ ಸುತಮ್ ।
ಮಮಾತ್ಮಜಸ್ಯ ಕಿಂ ಜಾಡ್ಯಂ ತವಚ್ಚೈತದ್ದ್ವಿಜೈಃ ಕೃತಮ್ ॥ ೫೩ ॥

ವಿಷ್ಣುಪಕ್ಷೈರ್ಧ್ರುವಂ ಧೂರ್ತೈರ್ಗೂಢಂ ನಿತ್ಯಂ ಪರಿತ್ಯಜ ।
ತ್ಯಜ ದ್ವಿಜಪ್ರಸಂಗಂ ಹಿ ದ್ವಿಜಸಂಗೋ ಹ್ಯಭಾವನಃ ॥ ೫೪ ॥

ಅಸತ್ಕುಲೋಚಿತಂ ತೇಜೋ ಯೈರ್ದ್ವಿಜೈಸ್ತು ತಿರೋಹಿತಮ್ ।
ಯಸ್ಯ ಯತ್ಸಂಗತಿಃ ಪುಂಸೋ ಮಣಿವತ್ಸ್ಯಾತ್ಸ ತದ್ಗುಣಃ ॥ ೫೫ ॥

ಸಕಲರ್ದ್ಧ್ಯೈ ತತೋ ಧೀಮಾನ್ ಸ್ವಯೂಥಾನೇವ ಸಂಶ್ರಯೇತ್ ।
ಮತ್ಸುತಸ್ಯೋಚಿತಂ ತ್ಯಕ್ತ್ವಾ ವಿಷ್ಣುಪಕ್ಷೀಯನಾಶನಮ್ ॥ ೫೬ ॥

ಸ್ವಯಮೇವ ಭಜನ್ ವಿಷ್ಣುಂ ಮಂದ ಕಿಂ ತ್ವಂ ನ ಲಜ್ಜಸೇ ।
ವಿಶ್ವನಾಥಸ್ಯ ಮೇ ಸೂನುರ್ಭೂತ್ವಾನ್ಯಂ ನಾಥಮಿಚ್ಛಸಿ ॥ ೫೭ ॥

ಹುಡುಗನಿಗೆ ವಿಷ್ಣುಸ್ತೋತ್ರವನ್ನು ಕಲಿಸಿದೆ;' ಎಂದು ಹೇಳಿ, ರಾಜನು ಮತ್ತು ಹೇಳಿದನು; 'ನನ್ನ ಮಗನಾದ ನಿನಗೆ ಈ ಬ್ರಾಹ್ಮಣರು ಏನುಜಾಡ್ಯವನ್ನುಂಟು ಮಾಡಿದರು?

೫೪. ಈ ಬ್ರಾಹ್ಮಣರು ನಿತ್ಯವಾಗಿಯೂ, ಖಂಡಿತವಾಗಿಯೂ ಗುಟ್ಟಾಗಿ ವಿಷ್ಣುಪಕ್ಷಪಾತಿಗಳು. ವಂಚಕರಾದ ಇವರನ್ನು ಬಿಟ್ಟುಬಿಡು; ಬ್ರಾಹ್ಮಣ ಪ್ರಸಂಗವನ್ನೇ ಬಿಡು; ಬ್ರಾಹ್ಮಣರ ಸಂಬಂಧವು ನಮಗೆ ಅಮಂಗಳಕರವಾದುದು.

೫೫. ಯಾವ ಈ ಬ್ರಾಹ್ಮಣರಿಂದ ನಮ್ಮ ಅಸುರ ಕುಲೋಚಿತವಾದ ತೇಜಸ್ಸು ಮರೆಮಾಚಲ್ಪಟ್ಟಿತು. ಯಾವ ಮನುಷ್ಯನಿಗೆ ಯಾರ ಸಂಬಂಧವು ರತ್ನದಂತೆ ಉತ್ಕರ್ಷಕ್ಕೆ ಕಾರಣವಾಗುತ್ತದೆಯೋ, ಅದು ಅವನಿಗೆ ಗುಣವಾದುದು.

೫೬-೫೭. ಆದುದರಿಂದ ಬುದ್ಧಿವಂತನು ತನ್ನ ಕುಲದ ಏಳ್ಗೆಯಿಂದ ತನ್ನ ಗುಂಪಿನವರನ್ನೇ ಆಶ್ರಯಿಸುವುದು; ನನ್ನ ಮಗನಾದ ನಿನಗೆ ಯೋಗ್ಯವಾದ ವಿಷ್ಣು ಪಕ್ಷೀಯರ ನಾಶಗೈವುದನ್ನು ಬಿಟ್ಟು, ಎಲೈ ಮೂಢನೇ! ನೀನೇ ವಿಷ್ಣುವನ್ನು ಸೇವಿಸುತ್ತಾ ಇರುವೆ; ನೀನು ಈ ಕೃತ್ಯಕ್ಕೆ ಲಜ್ಜೆಪಡುವುದಿಲ್ಲ? ಈ ವಿಶ್ವಕ್ಕೆ ಒಡೆಯನಾದ ನನ್ನ ಮಗನಾಗಿದ್ದು, ಬೇರೆ ನಾಥನನ್ನು ಅಪೇಕ್ಷಿಸುತ್ತೀಯೆ?

ಶೃಣು ವತ್ಸ ಜಗತ್ತತ್ತ್ವಂ ಕಶ್ಚಿನ್ನಾಸ್ತಿ ನಿಜಃ ಪ್ರಭುಃ ।
ಯಃ ಶೂರಃ ಸ ಶ್ರಿಯಂ ಭುಙ್ಕ್ತೇ ಸ ಪ್ರಭುಃ ಸ ಮಹೇಶ್ವರಃ ॥ ೫೮ ॥

ಸ ದೇವಃ ಸಕಲಾಧ್ಯಕ್ಷಃ ಯಥಾಽಹಂ ತ್ರಿಜಗಜ್ಜಯೀ ।
ತ್ಯಜ ಜಾಡ್ಯಮತಃ ಶೌರ್ಯಂ ಭಜ ತ್ವಂ ಸ್ವಕುಲೋಚಿತಮ್ ॥ ೫೯ ॥

ಅನ್ಯೇಽಪಿ ತ್ವಾಂ ಹನಿಷ್ಯಂತಿ ವದಿಷ್ಯಂತಿ ಜನಾಸ್ತ್ವಿದಂ ।
ಅಸುರೋಽಯಂ ಸುರಾಂಸ್ತೌತಿ ಮಾರ್ಜಾರ ಇವ ಮೂಷಕಾನ್ ॥ ೬೦ ॥

ದ್ವೇಷ್ಯಾನ್ ಶಿಖೀವ ಫಣಿನೋ ದುರ್ನಿಮಿತ್ತಮಿದಂ ಧ್ರುವಮ್ ।
ಲಬ್ಧ್ವಾಽಪಿ ಮಹದೈಶ್ವರ್ಯಂ ಲಾಘವಂ ಯಾಂತ್ಯಬುದ್ಧಯಃ ॥ ೬೧ ॥

ಯಥಾಽಯಂ ಮತ್ಸುತಃ ಸ್ತುತ್ಯಸ್ತಾವಕಾನ್ ಸ್ತೌತಿ ನೀಚವತ್ ।
ರೇ ಮೂಢ ದೃಷ್ಟ್ವಾಽಪ್ಯೈಶ್ವರ್ಯಂ ಮಮ ಬ್ರೂಷೇ ಪುರೋ ಹರಿಮ್ ॥

೫೮-೫೯. ಎಲೈ ಮಗುವೆ! ಲೋಕತತ್ತ್ವವನ್ನು ಕೇಳು; ಈ ಜಗತ್ತಿಗೆ ನಿಜವಾದ ಪ್ರಭುವಾದವನಾವನೂ ಇಲ್ಲವು. ಯಾವನು ಪರಾಕ್ರಮಿಯೋ, ಅವನು ಸಂಪತ್ತನ್ನನುಭವಿಸುತ್ತಾನೆ; ಅವನೇ ಪ್ರಭುವು; ಅವನೇ ಮಹೇಶ್ವರನು; ಅವನೇ ದೇವನು; ಅವನೇ ಎಲ್ಲದಕ್ಕೂ ಮೂರು ಲೋಕವನ್ನೂ ಗೆದ್ದಿರುವವನಂತೆ ಅಧ್ಯಕ್ಷನು. ಆದುದರಿಂದ ನೀನು ಜಾಡ್ಯವನ್ನು ಬಿಡು; ನಮ್ಮ ಕುಲೋಚಿತವಾದ ಶೌರ್ಯವನ್ನಾಶ್ರಯಿಸು.

೬೦-೬೧. ಹಾಗಿಲ್ಲದಿದ್ದರೆ, ಇತರರೂ ನಿನ್ನನ್ನು ಸಂಹರಿಸುತ್ತಾರೆ. ಜನರು ಇದನ್ನು ಹೇಳುತ್ತಾರೆ;—'ಬೆಕ್ಕು ಇಲಿಯನ್ನು ಹೇಗೋ, ನವಿಲು ಶತ್ರುಗಳಾದ ಹಾವುಗಳನ್ನು ಹೇಗೋ, ಹಾಗೆ ಈ ಅಸುರನು ಸುರರನ್ನು ಕೊಂಡಾಡುತ್ತಾನೆ;' ಎಂದು. ಇದು ನಿಶ್ಚಯವಾಗಿಯೂ ಅಪಶಕುನವು. ಅವಿವೇಕಿಗಳು ಅಪಾರವಾದ ಐಶ್ವರ್ಯವನ್ನು ಪಡೆನೂ, ಅಲ್ಪತೆಯನ್ನು ಹೊಂದುತ್ತಾರೆ.

೬೨. ಸರ್ವರಿಂದಲೂ ಹೊಗಳಿಸಿಕೊಳ್ಳತಕ್ಕ ನನ್ನ ಈ ಮಗನು ಹೀಗೆ ನಿನ್ನವರನ್ನು (ಆಚಾರ್ಯಪಕ್ಷೀಯರಾದ ಸುರರನ್ನು) ನೀಚರಂತೆ ಸ್ತುತಿಸುತ್ತಾನೆ. ಎಲೈ ಮೂಢನಾದ ಪುತ್ರನೇ! ನನ್ನ ಐಶ್ವರ್ಯವನ್ನು ನೋಡಿಯೂ, ನನ್ನ ಮುಂದೆ ಹರಿಯನ್ನು ಹೇಳುತ್ತೀಯೆ.

ಅಸದೃಶಸ್ಯ ತು ಹರೇಸ್ತುತಿ ರೇಷಾ ವಿಡಂಬನಾ ।
ಇತ್ಯುಕ್ತ್ವಾ ತನಯಂ ಭೂಪೋ ಜಾತಕ್ರೋಧೋ ಭಯಾನಕಃ ॥ ೬೩ ॥

ಜಿಹ್ಮಂ ನಿರೀಕ್ಷ್ಯ ಚ ಪ್ರಾಹ ತದ್ಗುರುಂ ಕಂಪಯನ್ ರುಷಾ ।
ಯಾಹಿ ಯಾಹಿ ದ್ವಿಜಪಶೋ ಸಾಧು ಶಾಧಿ ಸುತಂ ಮಮ ॥ ೬೪ ॥

ಪ್ರಸಾದ ಇತ್ಯೇಷ ವದನ್ ಸ ವಿಪ್ರೋ
ಜಗಾಮ ಗೇಹಂ ಖಲರಾಜಸೇವೀ ।
ವಿಷ್ಣುಂ ವಿಸೃಜ್ಯಾನ್ವಸರಚ್ಚ ದೈತ್ಯಂ
ಕಿಂ ವಾ ನ ಕುರ್ಯುರ್ಭರಣಾಯ ಲುಬ್ಧಾಃ ॥ ೬೫ ॥

ಇತಿ ಶ್ರೀ ನರಸಿಂಹಪುರಾಣೇ ನೃಸಿಂಹಪ್ರಾದುರ್ಭಾವೇ
ಏಕಚತ್ವಾರಿಂಶೋಽಧ್ಯಾಯಃ

೬೩-೬೪. ನನಗೆ ಅಸಮಾನನಾದ ಆ ಹರಿಯ ಸ್ತುತಿಯು ವಿಡಂಬನೆಯು ;' ಇಂತು ಮಗನನ್ನು ಕುರಿತು ಹೇಳಿ, ಆ ದೈತ್ಯರಾಯನು ಮುನಿಸುಗೊಂಡು, ಭಯಾನಕನಾಗಿ ಕುಟಿಲವಾಗಿ ನೋಡಿ, ಆ ಶಂಡಾಮರ್ಕಾಚಾರ್ಯರನ್ನು ನಡುಗಿಸುತ್ತಾ, ಕೋಪದಿಂದ ಇಂತು ನುಡಿದನು ; 'ಎಲೈ ದ್ವಿಜಪಶುವೇ ! ಹೋಗು ; ಹೋಗು ; ನನ್ನ ಮಗನಿಗೆ ಯೋಗ್ಯವಾದುದನ್ನು ಕಲಿಸು ; ' ಎಂದನು.

೬೫. ನೀಚನಾದ ದೈತ್ಯರಾಜನಾದ ಹಿರಣ್ಯಕಶಿಪುವನ್ನು ಸೇವಿಸುತ್ತಿರುವ ಆ ಬ್ರಾಹ್ಮಣನು, 'ಇದು ಅನುಗ್ರಹವು ; ' ಎಂದೇ ಹೇಳುತ್ತಾ, ತನ್ನ ಮನೆಗೆ ಹೋದನು ; ಮತ್ತು ಶ್ರೀಮಹಾವಿಷ್ಣುವನ್ನುಳಿದು ಆ ದೈತ್ಯನನ್ನೆ ಅನುಸರಿಸಿದನು.

ಅತ್ಯಾಸೆಯುಳ್ಳ ಲುಬ್ಧರು ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳಲು (ಏನನ್ನು) ಯಾವದನ್ನು ತಾನೇ ಎಸಗುವುದಿಲ್ಲ ? (ಎಲ್ಲವನ್ನೂ ಮಾಡಬಾರದ ಕೆಲಸವನ್ನೂ ಮಾಡಿಯೆ ಬಿಡುವರು ;) ' ಎಂದು ಮಾರ್ಕಂಡೇಮುನಿಯು ಸಹಸ್ರಾನೀಕನಿಗೆ ಹೇಳಿದುದನ್ನು ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀ ನೃಸಿಂಹಾವತಾರ ಕಥೆಯಲ್ಲಿ
ನಲವತ್ತೊಂದನೆಯ ಅಧ್ಯಾಯವು ಮುಗಿದುದು.

ನಲವತ್ತೊಂದನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, 'ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನ ಪ್ರಾರ್ಥನೆಯಂತೆ ಶ್ರೀ ನೃಸಿಂಹಾವತಾರದ ಚರಿತ್ರೆಯನ್ನೂ, ಪ್ರಹ್ಲಾದ ಚರಿತ್ರೆಯನ್ನೂ ಬಿತ್ತರದಿಂದ ಹೇಳತೊಡಗಿ, ಪೂರ್ವದಲ್ಲಿ ಹಿರಣ್ಯಕಶಿಪುವು ತಾನು ತ್ರೈಲೋಕ್ಯಾಧಿಪತಿಯಾಗಿದ್ದರೂ, ಮತ್ತೂ ತಪವನ್ನಾಚರಿಸಲು, ವನಕ್ಕೆ ಹೋಗ ಬಯಸುತ್ತಾನೆ. ಆಗ ದೈತ್ಯರು ತಡೆದರೂ, ಅವನು ಅವರ ಮಾತನಾಲಿಸದೆ ಇಬ್ಬರು ಮೂವರು ಕೆಳೆಯರೊಡನೆ ಹೋಗುವನು. ಅಂತು ಹೋಗಿ ಅವನು ಕೈಲಾಸ ಶಿಖರದಲ್ಲಿ ತಪವನ್ನೆಸಗುತ್ತಿರಲು, ಚತುರ್ಮುಖನು ಅವನ ತಪದ ಬೇಗೆಗೆ ಚಿಂತಾಕ್ರಾಂತನಾಗುವನು. ಅದನ್ನು ಕಂಡು, ನಾರದನು ತನ್ನ ತಂದೆಯಾದ ಚತುರ್ಮುಖನಿಗೆ ತಾನು ಆ ದೈತ್ಯರಾಜನ ತಪಕ್ಕೆ ವಿಘ್ನವನ್ನೆಸಗುವುದಾಗಿ ಹೇಳಿ, ತನ್ನ ಗೆಳೆಯನಾದ ಪರ್ವತಮುನಿಯೊಡನೆ ಗುಬ್ಬಚ್ಚಿಯಾಗಿ ಬಂದು, ಕೈಲಾಸದ ಶಿಖರದಲ್ಲಿ ಹಿರಣ್ಯಕಶಿಪುವು ತಪವನ್ನೆಸಗುತ್ತಿರುವೆಡೆ, ಮರದಮೇಲೆ ಕುಳಿತು, 'ನಮೋ ನಾರಾಯಣಾಯ,' ಎಂದು ಮೂರು ಬಾರಿ ಉಚ್ಚರಿಸಲು, ಆ ದೈತ್ಯನು ಕುಪಿತನಾಗಿ ಆ ಹಕ್ಕಿಗಳಿಗೆ ಬಾಣವನ್ನು ಹೊಡೆಯಲು, ಆ ಬಾಣವು ತಗಲುವುದಕ್ಕೆ ಮುಂಚೆಯೇ, ಅವು ಹಾರಿಹೋದುವು.

ಇತ್ತ ತಪಕ್ಕೆ ಅಡ್ಡಿಯಾಗಲು, ಭಾವಿಕಾರ್ಯಚಿಂತೆಯಿಂದ ಆ ದೈತ್ಯರಾಜನು ಊರಿಗೆ ಹಿಂತಿರುಗುವ ಸಮಯಕ್ಕೆ ಅವನ ಮಡದಿಯಾದ ಕಯಾಧುವು ಋತುಸ್ನಾತೆಯಾಗಿರುತ್ತಾಳೆ. ಆ ರಾತ್ರಿ ಏಕಾಂತದಲ್ಲಿರುವಾಗ ಆಕೆಯು ಪತಿಗೆ ಹತ್ತು ಸಾಸಿರ ವರ್ಷಪರ್ಯಂತ ವ್ರತವೆಸಗಲು ಹೋದವನು ಅಷ್ಟು ತೀವ್ರವಾಗಿ ಬಂದುದರ ಕಾರಣವನ್ನು ದಿಟವಾಗಿ ಹೇಳಬೇಕೆನಲು, ಎಲ್ಲವನ್ನೂ ಹಿರಣ್ಯಕನು ಹೇಳುವ ವೇಳೆಗೆ, ಅವನಿಗೆ ವೀರ್ಯದ್ರವಣವುಂಟಾಗಿ, ಕಯಾಧುವು ಗರ್ಭವತಿಯಾಗಿ, ಕಾಲ ತುಂಬಲು ಜನ್ಮವೈಷ್ಣವನಾದ ಪ್ರಹ್ಲಾದನೆಂಬ ಮಗುವನ್ನು ಪ್ರಸವಿಸಿದಳು. ಆ ಬಾಲಕನು ಶ್ರೀಹರಿಯ ಧ್ಯಾನದಿಂದಲೇ ಬೆಳೆಯುತ್ತಿದ್ದು ಬಾಲ್ಯದ ಗುರುಕುಲವಾಸದಲ್ಲಿದ್ದನು.

ಒಮ್ಮೆ ರಾಯನು ಹೆಂಗಳಿಂದ ಬಳಸಿರುವಾಗ, ಆ ಬಾಲಕನು ಬರಲು, ಅವನನ್ನು ಕಂಡು ಹಿಗ್ಗಿ, ಆ ಹಿರಣ್ಯಕನು ಆ ಬಾಲನನ್ನು ಕುಲಗುರುಗಳಲ್ಲಿ ಚೆನ್ನಾಗಿ ಕಲಿತ ಯಾವುದಾದರೊಂದು ಪಾಠವನ್ನೊಪ್ಪಿಸೆನಲು, ಆ ಬಾಲನು ಶ್ರೀ ಮಹಾ ವಿಷ್ಣುವನ್ನು ಧ್ಯಾನಮಾಡಿ, ಅನಂತರ ಹೇಳುವುದಾಗಿ ಹೇಳಲು, ಅದಕ್ಕೆ ಆ ದೈತ್ಯೇಶ್ವರನು ಕುಪಿತನಾಗಿ, ಆ ಬಾಲನನ್ನೇ ಆ ಅವಸ್ಥೆಗೆ ತಂದವರಾರೆಂದು ಕೇಳಿ, ಆ ಗುರವನ್ನು ಕರೆಯಿಸಿ, ಅವನನ್ನು ತಿರಸ್ಕರಿಸಿ ನುಡಿದು, 'ಬ್ರಾಹ್ಮಣರೆಲ್ಲರೂ ವಿಷ್ಣುಪಕ್ಷೀಯರಾದ, ಗೂಢವಿಷ್ಣುಭಕ್ತರು ಮತ್ತು ಅಸುರ ವಿರೋಧಿಗಳು ; ಅವರ ಸಂಗವು ದೈತ್ಯರಿಗೆ ಅಮಂಗಳಕರ' ವೆಂದು ಹೇಳಿ, ತನ್ನ ಮಗನಿಗೂ ವಿಷ್ಣುವನ್ನು ಸೇವಿಸಬಾರದು ; ತಾನೇ ಪ್ರಭುವು ; ತನ್ನನ್ನೇ ಸೇವಿಸುವುದು ; ಲೋಕದಲ್ಲಿ ಯಾವನು ನಿಜವಾದ ಪ್ರಭುವಿರುವನು? ಶೌರ್ಯವೇ ಪ್ರಭುತ್ವ ಸಂಪಾದಕ ವಾದುದು ; ಶೂರನೇ ಪ್ರಭುವು ; ಆದುದರಿಂದ ತನ್ನ ಮಗನು ಶೌರ್ಯಗಳಿಸ ಬೇಕೆಂದು ಹೇಳಿ, ಆ ಸಲಕ್ಕೆ ಆ ಗುರುವನ್ನು ಬಿಟ್ಟಿರುವುದಾಗಿ ತಿಳಿಸಿ, ಮುಂದೆ ಅಸುರಕುಲೋಚಿತ ವಿದ್ಯೆಯನ್ನು ಕಲಿಸಬೇಕೆಂದು ಆಣೆಯಿತ್ತು, ಬೀಳ್ಕೊಡಲು, ಆ ಆಚಾರ್ಯನು ಅದು ಸಾಧುವೆಂದೇ ತಿಳಿದು, ವಿಷ್ಣುವನ್ನುಳಿದು, ಆ ದೈತ್ಯ ನನ್ನೇ ಅನುವರ್ತಿಸಿದನು. ಲೋಕದಲ್ಲಿ ಲುಬ್ಧರು, ಉದರಂಭರಣಕ್ಕಾಗಿ ಯಾವು ದನ್ನು ತಾನೇ ಮಾಡುವುದಿಲ್ಲ ?' ಎಂದು ಹೇಳಿದುದನ್ನು ಸೂತರು ಭಾರದ್ವಾಜಾದಿ ಗಳಿಗೆ ನಿರೂಪಿಸಿರುತ್ತಾರೆ.

ಇಂತು ನಲವತ್ತೊಂದನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್

ದ್ವಿಚತ್ವಾರಿಂಶೋಽಧ್ಯಾಯಃ

ಶ್ರೀ ನರಸಿಂಹಪ್ರಾದುರ್ಭಾವಃ (ಅನುವೃತ್ತಃ)

ಸೋಽಪ್ಯಾಶು ನೀತೋ ಸುರುಪೇಕ್ಷ್ಯ ದೈತ್ಯೈ-
ರ್ದೈತ್ಯೇಂದ್ರಸೂನುರ್ಹರಿಭಕ್ತಿಭೂಷಃ ।
ಅಶೇಷವಿದ್ಯಾನಿವಹೇನ ಸಾಕಂ
ಕಾಲೇನ ಕೌಮಾರಮುಪಾಪ ಯೋಗೀ ॥ ೧ ॥

ನಲವತ್ತೆರಡನೆಯ ಅಧ್ಯಾಯವು.

ಶ್ರೀ ನರಸಿಂಹಾವತಾರವು (ಮುಂದುವರಿದುದು)

೧. ಅಸುರರು ಶ್ರೀಹರಿಯ ಭಕ್ತಿಯೇ ತೊಡವಾಗಿರುವ ದೈತ್ಯರಾಜನ ಮಗನಾದ ಆ ಪ್ರಹ್ಲಾದನನ್ನು ಗುರುವಿನ ನಿಲಯಕ್ಕೆ (ಮಠಕ್ಕೆ) ಒಯ್ದರು. ಜ್ಞಾನಿಯಾದ ಆ ಬಾಲನು ಸಕಲ ವಿದ್ಯೆಗಳ ಸಮುದಾಯದೊಡನೆ ಕಾಲದಿಂದ ಕೌಮಾರಾವಸ್ಥೆಯನ್ನು ಹೊಂದಿದನು.

ಪ್ರಾಯೇಣ ಕೌಮಾರಮವಾಪ್ಯ ಲೋಕಃ
ಪುಷ್ಣಾತಿ ನಾಸ್ತಿಕ್ಯಮಸದ್ಗತಿಂ ಚ ।
ತಸ್ಮಿನ್ ವಯಸ್ಯಸ್ಯ ಬಹಿರ್ವಿರಕ್ತಿ-
ರ್ಯುರ್ವತ್ಯಭೂಚ್ಚಿತ್ರಮಜೇ ಚ ಭಕ್ತಿಃ ॥ ೨ ॥

ಅಥ ಸಂಪೂರ್ಣವಿದ್ಯಂ ತಂ ಕದಾ ಚಿದ್ದಿತಿಜೇಶ್ವರಃ ।
ಆನಾಯ್ಯ ಪ್ರಣತಂ ಪ್ರಾಹ ಪ್ರಹ್ಲಾದಂ ವಿದಿತೇಶ್ವರಮ್ ॥ ೩ ॥

ಸಾಧ್ವಜ್ಞಾನನಿಧೇರ್ಬಾಲ್ಯಾತ್ ಮುಕ್ತೋಽಸಿ ಸುರಸೂದನ ।
ಇದಾನೀಂ ಭ್ರಾಜಸೇ ಭ್ರಾಸ್ವಾನ್ ನೀಹಾರಾದಿವ ನಿರ್ಗತಃ ॥ ೪ ॥

---

೨. ಲೋಕದಲ್ಲಿ ಸಾಮಾನ್ಯವಾಗಿ ಜನರು ಕೌಮಾರಾವಸ್ಥೆಯನ್ನು ಹೊಂದಿ, ದುರ್ಗತಿಗೆ ಸಾಧನವಾದ ನಾಸ್ತಿಕ್ಯವನ್ನು ಬೆಳೆಸುತ್ತಾರೆ. ಆದರೆ, ಈ ಬಾಲಕನಿಗೆ ಆ ವಯಸ್ಸಿನಲ್ಲಿ ಹೊರಗಣ ವಿಷಯಗಳಲ್ಲಿ ವೈರಾಗ್ಯವೂ, ಉತ್ಪತ್ತಿ ಶೂನ್ಯನಾದ ಶ್ರೀಹರಿಯಲ್ಲಿ ಮಾಹತ್ಮ್ಯ ಜ್ಞಾನಪೂರ್ವಕ ಸುದೃಢಸ್ನೇಹವೂ, ಹರಯಗೊಂಡುವು. (ಸ್ಪಷ್ಟವಾಗಿ ಬಳೆದುವು.)

೩. ಅನಂತರದಲ್ಲಿ ಆ ದೈತ್ಯಚಕ್ರವರ್ತಿಯು ಒಂದಾನೊಂದು ಕಾಲದಲ್ಲಿ ಸಂಪೂರ್ಣ ವಿದ್ಯಾವಂತನೂ, ಶ್ರೀ ಹರಿಯನ್ನು ಸಾಕ್ಷಾತ್ಕರಿಸಿಕೊಂಡವನೂ ಆದ ಪ್ರಹ್ಲಾದ ಬಾಲಕನನ್ನು ಮನಗೆ ಬರಮಾಡಿಕೊಂಡು, ತನಗೆರಗಿದ ಅವನಿಗೆ ಇಂತು ಹೇಳಿದನು.

೪. 'ಎಲೈ ಸುರಾಂತಕನಾದ ಪ್ರಹ್ಲಾದನೇ ! ನೀನು ಅಜ್ಞಾನಕ್ಕೆ ಆಶ್ರಯ ವಾಗಿದ್ದ ಬಾಲ್ಯಾವಸ್ಥೆಯಿಂದ ಬಿಡುಗಡೆಯನ್ನು ಹೊಂದಿದೆ. ಈ ನೀನು ಮಂಜಿನಿಂದ ಹೊರಗೆ ಬಂದ ಸೂರ್ಯನಂತೆ ಪ್ರಕಾಶಿಸುತ್ತೀಯೆ.

ಬಾಲ್ಯೇ ವಯಂ ಚ ತ್ವಮಿವ ದ್ವಿಜೈರ್ಜಾಡ್ಯಾಯ ಮೋಹಿತಾಃ ।
ವಯಸಾ ವರ್ಧಮಾನೇನ ಪುತ್ರಕೈವಂ ಸುಶಿಕ್ಷಿತಾಃ ॥ ೫ ॥

ತದದ್ಯ ತ್ವಯಿ ಧೂರ್ಯೋಹಂ ಸಸಕಂಟಕತಾ ಧುರಮ್ ।
ವಿನ್ಯಸ್ಯ ಸ್ವಾಂ ಚಿರಧೃತೀ ಸುಖೀ ಪಶ್ಯೇ ಶ್ರಿಯಂ ತವ ॥ ೬ ॥

ಯದಾ ಯದಾ ಹಿ ನೈಪುಣ್ಯಂ ಪಿತಾ ಪುತ್ರಸ್ಯ ಪಶ್ಯತಿ ।
ತದಾ ತದಾಽಧಿಂ ತ್ಯಕ್ತ್ವಾನು ಮಹತ್ಸೌಖ್ಯಮವಾಪ್ನುಯಾತ್ ॥ ೭ ॥

ಗುರುಶ್ಚಾತೀವ ನೈಪುಣ್ಯಂ ಮಮಾಗ್ರೇಽವರ್ಣಯತ್ತವ ।
ನ ಚಿತ್ರಂ ಪುತ್ರ ತಚ್ಛ್ರೋತುಂ ಕಿಂ ನು ಮೇ ವಾಞ್ಛತಃ ಶ್ರುತೀ ॥ ೮ ॥

---

೫. ಎಲೈ ಮಗನೇ! ಕೇಳು; ಕಿರಿಯ ತನದಲ್ಲಿ ನಾವೂ ನಿನ್ನಂತೆಯೇ ಬ್ರಾಹ್ಮಣರಿಂದ ಜಾಡ್ಯಕ್ಕೆ ಮೋಹಗೊಳಿಸಲ್ಪಟ್ಟೆವು. ಆದರೆ, ಬೆಳೆಯುತ್ತಲಿದ್ದ ವಯಸ್ಸಿನಿಂದ ಇಂತು ಯೋಗ್ಯವಾದ ವಿದ್ಯೆಯನ್ನು ಕಲಿತೆವು.

೬. ಆದುದರಿಂದ ಇಂದು ಭಾರವಹಿಸಲು ಶಕ್ತನಾದ ನಿನ್ನಲ್ಲಿ ಈ ರಾಜ್ಯದ ಒಡೆತನದ ಹೊರೆಯನ್ನಿರಿಸಿ, ನಾನು ನಿನ್ನ ಸಂಪತ್ತನ್ನು ನೋಡುತ್ತಾ, ಬಹುಕಾಲ ಪ್ರಾಣಧಾರಣ ಮಾಡಿಕೊಂಡು, ಸುಖದಿಂದ ಇರುವೆನು.

೭. ತಂದೆಯು ಯಾವಾಗ ಯಾವಾಗ ಮಗನ ನಿಪುಣತೆಯನ್ನು ಅರಿಯುತ್ತಾನೆಯೋ, ಆಗ ತನ್ನ ಮನೋವ್ಯಥೆಯನ್ನು ಕಳೆದು, ವಿಶೇಷವಾಗಿ ಸೌಖ್ಯವನ್ನು ಹೊಂದುವನು.

೮. ಎಲೈ ಮಗನೇ! ಆಚಾರ್ಯನು ನನ್ನ ಮುಂದೆ ನಿನ್ನ ಅತ್ಯಧಿಕವಾದ ನಿಪುಣತೆಯನ್ನು ಬಣ್ಣಿಸಿದನು. ಅದನ್ನು ಕೇಳಲು ಆಶ್ಚರ್ಯವಲ್ಲ; ನನ್ನ ಕಿವಿಗಳು ಇನ್ನೇನನ್ನು ಅಪೇಕ್ಷಿಸುತ್ತವೆ? (ನಿನ್ನ ನಿಪುಣತೆಯನ್ನು ಹೊರತು ಕೇಳಲೆಳಸುವುದಾವುದೂ ಇಲ್ಲವು.)

ನೇತ್ರಯೋಃ ಶತ್ರುದಾರಿದ್ರ್ಯಂ ಶ್ರೋತ್ರಯೋಃ ಸೂತಸೂಕ್ತಯಃ ।
ಯುದ್ಧವ್ರಣಂ ಚ ಗಾತ್ರೇಷು ಮಾಯಿನಾಂ ಚ ಮಹೋತ್ಸವಃ ॥ ೯ ॥

ಶ್ರುತ್ವೇತಿ ನಿಕೃತಿಪ್ರಜ್ಞಂ ದೈತ್ಯಾಧಿಪವಚಸ್ತತಃ ।
ಜಗಾದ ಯೋಗೀ ನಿಃಶಂಕಂ ಪ್ರಹ್ಲಾದಃ ಪ್ರಣತೋ ಗುರುಮ್ ॥ ೧೦ ॥

ಸೂಕ್ತಯಃ ಶ್ರೋತ್ರಯೋಃ ಸತ್ಯಂ ಮಹಾರಾಜ ಮಹೋತ್ಸವಃ ।
ಕಿಂ ತು ವಾ ವೈಷ್ಣವೀರ್ವಾಚೋ ಮುಕ್ತ್ವಾ ನಾನ್ಯಾ ವಿಚಾರಯ ॥ ೧೧ ॥

ನೀತಿಃ ಸೂಕ್ತಿಃ ಕಥಾಃ ಶ್ರಾವ್ಯಂ ಶ್ರಾವ್ಯಂ ಕಾವ್ಯಂ ಚ ತದ್ವಚಃ ।
ಯತ್ರ ಸಂಸೃತಿದುಃಖೌಘಕಕ್ಷಾಗ್ನಿರ್ಗೀಯತೇ ಹರಿಃ ॥ ೧೨ ॥

---

೯. ಮಾಯಿಗಳಾದ ಅಸುರರಿಗೆ ಶತ್ರುಗಳಿಲ್ಲದಿರುವುದು ಕಣ್ಣುಗಳಿಗೂ, ಸೂತರ ಹೊಗಳಿಕೆಯ ನುಡಿಗಳು ಕಿವಿಗಳಿಗೂ, ಯುದ್ಧದ ಗಾಯಗಳು ಒಡಲಲ್ಲಿಯೂ ಮಹೋತ್ಸವವನ್ನೀಸಗುವುವು.

೧೦. ಯೋಗಿಯಾದ ಪ್ರಹ್ಲಾದನು ಬಳಿಕ ಇಂತು ಅಸದ್ಬುದ್ಧಿಯಾದ ದೈತ್ಯೇಂದ್ರನ ನುಡಿಗಳನ್ನು ಕೇಳಿ, ತಂದೆಗೆರಗಿ, ನಿರ್ಭಯನಾಗಿ ಇಂತು ನುಡಿದನು.

೧೧. ' ಎಲೈ ಮಹಾರಾಜನೇ ! ಸೂಕ್ತಿಗಳು ಕಿವಿಗಳಿಗೆ ಮಹೋತ್ಸವವನ್ನುಂಟುಮಾಡುವುವು ; ಇದು ದಿಟ ; ಆದರೆ ವಿಚಾರ ಮಾಡಲಾಗಿ ವೈಷ್ಣವ ವಾಕ್ಯಗಳನ್ನು ಬಿಟ್ಟು, ಬೇರೆ ವಾಕ್ಯಗಳು ಮಹೋತ್ಸವಕರಗಳಲ್ಲವು.

೧೨. ಯಾವ ವಾಕ್ಯಗಳಲ್ಲಿ ಸಂಸಾರ ದುಃಖ ಸಮುದಾಯಗಳಿಗೆ ದಾವಾಗ್ನಿಯಾದ ಶ್ರೀಹರಿಯು ಕೊಂಡಾಡಲ್ಪಡುವನೊ, ಸಂಪೂರ್ಣವಾಗಿ ಅರಿಯಲಾಗದ, ಸೇವಿಸುವವರ ಇಷ್ಟವನ್ನು ಸಲ್ಲಿಸುವ ಶ್ರೀಹರಿಯು ಸ್ತುತಿಸಲ್ಪಡುತ್ತಾನೆಯೋ, ಆ ನೀತಿವಚನಗಳು, ಆ ಸೂಕ್ತಿಗಳು, ಆ ಕಥೆಗಳು, ಶ್ರಾವ್ಯವಾದ ಆ ಕಾವ್ಯಗಳು ಮತ್ತು ಆ ನುಡಿಗಳು ಕೇಳುವುದಕ್ಕೆ ಅತ್ಯಂತ ಯೋಗ್ಯಗಳಾಗಿರುವುವು.

ಅಚಿಂತ್ಯಃ ಸ್ತೂಯತೇ ಯತ್ರ ಭಕ್ತ್ಯಾ ಭಕ್ತೇಪ್ಸಿತಪ್ರದಃ ।
ಅರ್ಥಶಾಸ್ತ್ರೇಣ ಕಿಂ ತಾತ ಯತ್ರ ಸಂಸೃತಿಸಂತತಿಃ ॥ ೧೩ ॥

ಶಾಸ್ತ್ರಶ್ರಮೇಣ ಕಿಂ ತಾತ ಯೇನಾತ್ಮೈವ ವಿಹಿಂಸ್ಯತೇ ।
ವೈಷ್ಣವಂ ವಾಙ್ಮಯಂ ತಸ್ಮಾಚ್ಛ್ರಾವ್ಯಂ ಸೇವ್ಯಂ ಚ ಸರ್ವದಾ ॥ ೧೪ ॥

ಮುಮುಕ್ಷುಭಿರ್ಭವಕ್ಲೇಶಾನ್ನೋ ಚೇನ್ನೈವ ಸುಖೀ ಭವೇತ್ ।
ಇತಿ ತಸ್ಯ ವಚಃ ಶ್ರುತ್ವಾ ಹಿರಣ್ಯಕಶಿಪುಸ್ತದಾ ॥ ೧೫ ॥

ಜಜ್ವಾಲ ದೈತ್ಯರಾಟ್ ತಪ್ತಸರ್ಪಿರದ್ಭಿರಿವಾಧಿಕಮ್ ।
ಪ್ರಹ್ಲಾದಸ್ಯ ಗಿರಂ ಪುಣ್ಯಾಂ ಜನಸಂಸೃತಿನಾಶಿನೀಮ್ ॥ ೧೬ ॥

ನಾಮೃಷ್ಯತಾಸುರಃ ಕ್ಷುದ್ರೋ ಘೂಕೋ ಭಾನುಪ್ರಭಾಮಿವ ।
ಪರಿತೋ ವೀಕ್ಷ್ಯ ಸಂಪ್ರಾಹ ಕ್ರುದ್ಧೋ ದೈತ್ಯಭಟಾನಿದಮ್ ॥ ೧೭ ॥

---

೧೩. ಎಲೈ ತಂದೆಯೇ ! ಎಲ್ಲಿ ಸಂಸಾರಪರಂಪರೆಯ ವಿಚಾರವು ಹೇಳುವುದೋ, ಅಂತಹ ಅರ್ಥಶಾಸ್ತ್ರದಿಂದೇನು ಪ್ರಯೋಜನವು ? (ಯಾವ ಪ್ರಯೋಜನವೂ ಇಲ್ಲವು.)

೧೪-೧೫. ಎಲೈ ತಂದೆಯೇ ! ಯಾವುದರಿಂದ ಕೇವಲ ಮನಸ್ಸು ಬಾಧೆಗೊಳ್ಳುತ್ತದೆಯೋ, ಆ ಶಾಸ್ತ್ರದ ವ್ಯಾಸಂಗಶ್ರಮದಿಂದ ಏನು ಪ್ರಯೋಜನ ? ಆದುದರಿಂದ ಯಾವಾಗಲೂ ಶ್ರೀಮಹಾವಿಷ್ಣುವಿನ ಮಹತ್ವವನ್ನು ನಿರೂಪಿಸುವ ವಾಙ್ಮಯವು ಸಂಸಾರ ಕ್ಲೇಶದಿಂದ ಮೋಕ್ಷವನ್ನು ಅಪೇಕ್ಷಿಸುವವರಿಂದ ಆವಶ್ಯಕವಾಗಿ ಕೇಳತಕ್ಕದ್ದು ಮತ್ತು ಸೇವಿಸತಕ್ಕದ್ದು.

ಹಾಗೆ ಸೇವಿಸದಿದ್ದಲ್ಲಿ ಅವನು ಎಂದಿಗೂ ಸುಖಿಯಾಗಲಾರನು.' ಇಂತು ಆಡಿದ ಪ್ರಹ್ಲಾದನ ನುಡಿಗಳನ್ನು ಕೇಳುತ್ತಾ, ಆಗ ದೈತ್ಯರಾಜನಾದ ಹಿರಣ್ಯಕಶಿಪುವು ನೀರಿನಿಂದ ಕಾದ ತುಪ್ಪದಂತೆ ಅತ್ಯಂತ ಕೋಪದಿಂದ ಉರಿದನು. ಆ ಅಸುರನು ಸೂರ್ಯನ ಪ್ರಕಾಶವನ್ನು ತುಚ್ಛವಾದ ಗೂಬೆ ಸಹಿಸದಿರುವಂತೆ, ಪುಣ್ಯಪ್ರದವೂ, ಜನರ ಸಂಸಾರವನ್ನು ಕೊನೆಗಾಣಿಸುವುದೂ ಆದ ಪ್ರಹ್ಲಾದನ ಆ ಮಾತನ್ನು ಸಹಿಸಲಿಲ್ಲವು. ಆಗ ಅವನು ಸುತ್ತಲೂ ನೋಡಿ ದೈತ್ಯಭಟರನ್ನು ಕುರಿತು ಇದನ್ನು ಹೇಳಿದನು.

ಹನ್ಯತಾಮೇಷ ಕುಟಿಲಃ ಶಸ್ತ್ರಪಾತೈಃ ಸುಭೀಷಣೈಃ ।
ಉತ್ಕೃತ್ಯೋತ್ಕೃತ್ಯ ಮರ್ಮಾಣಿ ರಕ್ಷಿತಾಽಸ್ತು ಹರಿಃ ಸ್ವಯಮ್ ॥ ೧೮ ॥

ಪಶ್ಯತ್ವಿದಾನೀಮೇವೈಷ ಹರಿಸಂಸ್ತವಜಂ ಫಲಮ್ ।
ಕಾಕೋಲಕಂಕಗೃಧ್ರೇಭ್ಯೋ ಹ್ಯಸ್ಯಾಂಗಂ ಸಂವಿಭಜ್ಯತಾಮ್ ॥ ೧೯ ॥

ಅಪ್ಯುದ್ಧೃತಾಸ್ತ್ರದೈತೇಯಾಸ್ತರ್ಜಯಂತಃ ಪ್ರಗರ್ಜಿತೈಃ ।
ಅಚ್ಯುತಸ್ಯ ಪ್ರಿಯಂ ಭಕ್ತಂ ತಂ ಜಘ್ನುಃ ಪತಿನೋದಿತಾಃ ॥ ೨೦ ॥

ಪ್ರಹ್ಲಾದೋಽಪಿ ಪ್ರಭುಂ ನತ್ವಾ ಧ್ಯಾನವಜ್ರಂ ಸಮಾದಧೇ ।
ಅಕೃತ್ರಿಮರಸಂ ಭಕ್ತಂ ತಮಿತ್ಥಂ ಧ್ಯಾನನಿಶ್ಚಲಮ್ ॥ ೨೧ ॥

---

೧೮. 'ಎಲೈ ಭಟರೇ ! ನೀವು ಈ ಕುಟಿಲನನ್ನು ಭಯಂಕರಗಳಾದ ಶಸ್ತ್ರಗಳ ಹೊಡೆತದಿಂದ ಮರ್ಮಗಳನ್ನು ಕತ್ತರಿಸಿ ಕೊಲ್ಲಿರಿ; ಹರಿಯು ತಾನೇ ಬಂದು ಕಾಪಾಡುವವನಾಗಲಿ.

೧೯. ಇವನು ಹರಿಯನ್ನು ನುತಿಸಿದುದಕ್ಕೆ ಉಂಟಾದ ಫಲವನ್ನು ಈಗಲೇ ಅನುಭವಿಸಲಿ ; ಇವನ ಒಡಲನ್ನು ಕಾಗೆ, ಕಂಕ, ಹದ್ದು-ಈ ಹಕ್ಕಿಗಳಿಗೆ ಸೋವತ ಮಾಡಿರಿ, ಎಂದು ಹಿರಣ್ಯಕಶಿಪುವು ನುಡಿದನು.

೨೦. ಆಗ ಒಡೆಯನಿಂದ ಪ್ರೇರಿತರಾದ ರಕ್ಕಸರು ಅಸ್ತ್ರ ಶಸ್ತ್ರಗಳನ್ನು ಮೇಲಕ್ಕೆತ್ತಿ, ಅಚ್ಯುತನ ಪ್ರಿಯಭಕ್ತನಾದ ಪ್ರಹ್ಲಾದನನ್ನು ಅಬ್ಬರದ ನುಡಿಗಳಿಂದ ಬೆದರಿಸುತ್ತಾ ಹೊಡೆದರು.

೨೧-೨೩. ಆಗ ಪ್ರಹ್ಲಾದನೂ ಸರ್ವಶಕ್ತನಾದ ಶ್ರೀಪತಿಗೆ ನಮಸ್ಕರಿಸಿ, ಭಗವಂತನ ಧ್ಯಾನವೆಂಬ ಕವಚವನ್ನು ತಾಳಿದನು. ಭಕ್ತರ ದುಃಖವನ್ನು ನಾಶಗೊಳಿಸತಕ್ಕ ಭಗವಂತನಾದ ವಿಷ್ಣುವು ಕಪಟವಲ್ಲದ ಭಾವವುಳ್ಳ, ಭಕ್ತನಾದ, ಇಂತು

ರರಕ್ಷ ಭಗವಾನ್ ವಿಷ್ಣುಃ ಪ್ರಹ್ಲಾದಂ ಭಕ್ತದುಃಖಸತ್ ।
ಅಥಾಲಬ್ಧಪದಾನ್ಯಸ್ಯ ಗಾತ್ರೇ ಶಸ್ತ್ರಾಣಿ ರಕ್ಷಸಾಮ್ ॥ ೨೨ ॥

ನೀಲಾಬ್ಜಶಕಲಾನೀವ ಪೇತುಃ ಛಿನ್ನಾನ್ಯನೇಕಧಾ ।
ಕಿಂ ಪ್ರಾಕೃತಾನಿ ಶಸ್ತ್ರಾಣಿ ಕರಿಷ್ಯಂತಿ ಹರಿಪ್ರಿಯಮ್ ॥ ೨೩ ॥

ತಾಪತ್ರಯಮಹಾಸ್ತ್ರೌಘಃ ಸರ್ವೋಽಸ್ಯಸ್ಮಾದ್ಬಿಭೇತಿ ವೈ ।
ಪೀಡಯಂತಿ ಜನಾಂಸ್ತಾವತ್ ವ್ಯಾಧಯೋ ರಾಕ್ಷಸಾ ಗ್ರಹಾಃ ॥ ೨೪ ॥

ಯಾವದ್ಗುಹಾಶಯಂ ವಿಷ್ಣುಂ ಸೂಕ್ಷ್ಮಂ ಚೇತೋ ನ ವಿಂದತಿ ।
ತೇ ತು ಭಗ್ನಾಸ್ತ್ರಶಕಲೈಃ ಪ್ರತೀಪೋಕ್ಷೈರಿತಸ್ತತಃ ॥ ೨೫ ॥

ಹನ್ಯಮಾನಾ ನ್ಯವರ್ತಂತ ಸದ್ಯಃ ಫಲದದ್ಯೈರಿವ ।
ನ ಚಿತ್ರಂ ವಿಬುಧಾನಾಂ ತದಜ್ಞಾನಾಂ ವಿಸ್ಮಯಾವಹಮ್ ॥ ೨೬ ॥

ಧ್ಯಾನದಿಂದ ಹೊರಗಣ ವ್ಯಾಪಾರ ರಹಿತನಾದ ಆ ಪ್ರಹ್ಲಾದನನ್ನು ರಕ್ಷಿಸಿದನು. ಅನಂತರದಲ್ಲಿ ಇವನ ಶರೀರದಲ್ಲಿ ಎಡೆಗೊಂಡು ತಗುಲಿದ ರಕ್ಕಸರ ಶಸ್ತ್ರಗಳು ಅನೇಕ ತೆರನಾಗಿ ಕತ್ತರಿಸಿದ ಕನ್ನೈದಿಲೆಯ ತುಣುಕುಗಳಂತೆ ಕೆಳಗೆ ಬಿದ್ದುವು. ಪ್ರಾಕೃತ ಶಸ್ತ್ರಗಳು ಅಪ್ರಾಕೃತನಾದ ಶ್ರೀಹರಿಯಿಂದ ರಕ್ಷಿತನಾದ, ಶ್ರೀಹರಿಯ ಪ್ರಿಯನಾದ ಭಕ್ತನನ್ನು ಏನು ತಾನೇ ಮಾಡುತ್ತವೆ? (ಏನೂ ಮಾಡಲಾರದೆ ಹೋದುವು.)

೨೪-೨೬. ಸಕಲವಾದ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಗಳೆಂಬ ತಾಪ ತ್ರಯಗಳೆಂಬ ಮಹಾಸ್ತ್ರಗಳ ತಂಡವೂ ಈ ಶ್ರೀಹರಿಯಿಂದ ಅಂಜುವುವಷ್ಟೆ? ಮಾನವರ ಮನಸ್ಸು ಎಲ್ಲಿಯವರೆಗೆ ತಮ್ಮ ಹೃದಯಗುಹೆಯಲ್ಲಿರುವ ಅಚಿಂತ್ಯಾದ್ಭುತಶಕ್ತಿಯಿಂದ ಅತ್ಯಂತ ಸೂಕ್ಷ್ಮನಾಗಿರುವ ಶ್ರೀಮಹಾವಿಷ್ಣುವನ್ನು ಸರಣುಹೋಗುವುದಿಲ್ಲವೋ, ಅಲ್ಲಿಯವರೆವಿಗೆ ರೋಗಗಳು, ರಕ್ಕಸರು, ಶನಿಯೇ ಮೊದಲಾದ ಕ್ರೂರ ಗ್ರಹಗಳು ಜನರನ್ನು ಹಿಂಸಿಸುತ್ತವೆ, ಆ ರಕ್ಕಸರು ತತ್‌ಕ್ಷಣದಲ್ಲಿ ಫಲವನ್ನುಕೊಟ್ಟವುಗಳಿಂದಲೋ ಎಂಬಂತೆ ಅಲ್ಲಿ ಅಲ್ಲಿ (ಎಲ್ಲೆಡೆಗಳಲ್ಲಿಯೂ) ಎದುರಾಗಿ ಎಗರಿದ, ಮುರಿದ ಅಸ್ತ್ರಗಳ ತುಣುಕುಗಳಿಂದ ಹೊಡೆಯಲ್ಪಡುತ್ತಿರುವವರಾಗಿ ಹಿಂತಿರುಗಿದರು. ಇದೇನೂ ಜ್ಞಾನಿಗಳಿಗೆ ಆಶ್ಚರ್ಯಕರವಲ್ಲವು; ಅಜ್ಞರಿಗೆ ವಿಸ್ಮಯವನ್ನೆಸಗುತ್ತಲಿದ್ದುವು.

ವೈಷ್ಣವಂ ಬಲಮಾಲೋಕ್ಯ ರಾಜಾ ನೂನಂ ಭಯಂ ದಧೌ ।
ಪುನಸ್ತಸ್ಯ ವಧೋಪಾಯಂ ಚಿಂತಯರ್ನ್ ಸ ಸುದುರ್ಮತಿಃ ॥ ೨೭ ॥

ಸಮಾದಿಶತ್ಸಮಾಹೂಯ ದಂದಶೂಕಾರ್ನ್ ಸದುರ್ವಿಷಾರ್ನ್ ।
ಅಶಸ್ತ್ರವಧಯೋಗ್ಯೋಽಯಮಸ್ಮಯೋ ಹರಿತೋಷಕೃತ್ ॥ ೨೮ ॥

ತಸ್ಮಾದ್ಭವದ್ಭಿರಚಿರಾದ್ಧನ್ಯತಾಂ ಗರಲಾಯುಧಾಃ ।
ಹಿರಣ್ಯಕಶಿಪೋಃ ಶ್ರುತ್ವಾ ವಚನಂ ತೇ ಭುಜಂಗಮಾಃ ।
ತಸ್ಯಾಜ್ಞಾಂ ಜಗೃಹುರ್ಮೂರ್ಧ್ನಾ ಪ್ರಹರ್ಷಾದ್ದೇಶವರ್ತಿನಃ ॥ ೨೯ ॥

ಅಥ ಜ್ವಲದ್ದಶನಕರಾಲದಂಷ್ಟ್ರಿಣಃ
ಸ್ಫುಟಸ್ಫುರದ್ದಶಸಹಸ್ರಭೀಷಣಾಃ ।
ಅಕರ್ಷಕಾ ಹರಿಮುಹಿಸ್ವಕರ್ಷಕಾಃ
ಹರಿಪ್ರಿಯಂ ದ್ರುತತರಮಾಪತನ್ರುಷಾ ॥ ೩೦ ॥

೨೭-೨೯. ಆ ದೈತ್ಯೇಶ್ವರನು ವೈಷ್ಣವಶಕ್ತಿಯನ್ನು ಕಂಡು ನಿಶ್ಚಯವಾಗಿಯೂ ಹೆದರಿದನು; ಆದರೂ, ಆ ದುರ್ಮತಿಯು ಮತ್ತೂ ಆ ಪ್ರಹ್ಲಾದನ ಕೊಲೆಯ ಉಪಾಯವನ್ನು ಚಿಂತಿಸುತ್ತಾ, ಅತಿಕ್ರೂರವಾದ ವಿಷಗಳುಳ್ಳ ದಂದಶೂಕಗಳನ್ನು (ಕುತ್ಸಿತವಾಗಿ ಕಚ್ಚುವ ಹಾವುಗಳನ್ನು) ಕರೆದು ಅಪ್ಪಣೆಮಾಡಿದನು. 'ಎಲೈ ನಂಜೇ ಆಯುಧವಾಗಿವುಳ್ಳ ದಂದಶೂಕಗಳಿರಾ ! ಕೇಳಿರಿ ; ಹರಿಗೆ ಸಂತಸವನ್ನೀಸಗುವ, ಗರ್ವರಹಿತನಾದ ಈ ಬಾಲಕನು ಶಸ್ತ್ರಗಳ ಕೊಲೆಗೆ ಯೋಗ್ಯನಲ್ಲವು. ಆದುದರಿಂದ ನೀವೇ ಇವನನ್ನು ಬೇಗನೆ ಕೊಲ್ಲಿರಿ;' ಎಂದು ಹೇಳಿದ ಹಿರಣ್ಯಕಶಿಪುವಿನ ಮಾತನ್ನು ಕೇಳಿ, ಆ ಪ್ರದೇಶದಲ್ಲಿದ್ದ ಸರ್ಪಗಳು ಅವನ ಆಜ್ಞೆಯನ್ನು ಸಂತಸದಿಂದ ತಲೆಬಾಗಿ ಸ್ವೀಕರಿಸಿದುವು.

೩೦. ಬಳಿಕ ಪ್ರಕಾಶಿಸುವ ಹಲ್ಲುಗಳೂ, ಕ್ರೂರಗಳಾದ ಕೋರೆಹಲ್ಲುಗಳೂ ಇರುವ, ವ್ಯಕ್ತವಾಗಿ ಸ್ಫುರಿಸುವ, ಹತ್ತುಸಾವಿರ ಸಂಖ್ಯೆಯ, ಭಯಂಕರಗಳಾದ, ಇನ್ನಾರಿಂದಲೂ ಸೆಳೆಯಲಾಗದ ಇತರ ವಸ್ತುವನ್ನು ತಾವಿದ್ದೆಡೆಗೆ ಸೆಳೆಯುವ ಸಾಮರ್ಥ್ಯವುಳ್ಳ ಆ ದಂದಶೂಕಗಳು ಕೋಪದಿಂದ ಕಡುಬೇಗನೆ ಹರಿಗೆ ಪ್ರಿಯನಾದ, ಶ್ರೀಹರಿಯ ವಿಶೇಷ ಸನ್ನಿಧಾನದ ಆ ಪ್ರಹ್ಲಾದನು ಇರುವೆಡೆಗೆ ಬಂದುವು.

ಗರಾಯುಧಾಸ್ತ್ವಚಮಪಿ ಭೇತ್ತುಮಲ್ಪಿಕಾಂ
ವಪುಷ್ಯಜಸ್ಯಪ್ರತಿ ಬಲದುರ್ಭಿದಕೃತೇ ।
ಅಲಂ ನ ತೇ ಹರಿವಪುಷಂ ತು ಕೇವಲಂ
ವಿದಶ್ಯ ತಂ ನಿಜದಶನೈರ್ವಿನಾ ಕೃತಾಃ ॥ ೩೧ ॥

ತತಃ ಸ್ರವತ್ ಕ್ಷತಜ ವಿಷಣ್ಣಮೂರ್ತಯೋ
ದ್ವಿಧಾಕೃತಾದ್ಭುತದಶನಾ ಭುಜಂಗಮಾಃ ।
ಸಮೇತ್ಯ ತೇ ದಿತಿಜಪತಿಂ ವ್ಯಜಿಜ್ಞಪರ್
ವಿನಿಃಶ್ವಸರ್ ಪ್ರಚಲಫಣಾ ಭುಜಂಗಮಾಃ ॥ ೩೨ ॥

ಪ್ರಭೋ ಮಹೀಧ್ರಾನಪಿ ಭಸ್ಮಶೇಷಾನ್
ತಸ್ಮಿನ್ನಶಕ್ತಾಸ್ತು ತದೈವ ವಧ್ಯಾಃ ।

---

೩೧. ವಿಷಾಯುಧಗಳಾದ ಆ ಸರ್ಪಗಳು ಉತ್ಪತ್ತಿರಹಿತನೂ, ಅನಾದಿಯೂ ಆದ ಶ್ರೀಹರಿಯ ಧ್ಯಾನಸಾಮರ್ಥ್ಯದಿಂದ ಭೇದಿಸಲಶಕ್ಯನಾಗಿರತಕ್ಕ ಆ ಪ್ರಹ್ಲಾದನ ಶರೀರದಲ್ಲಿ ಸ್ವಲ್ಪ ಚರ್ಮವನ್ನೂ ಕಚ್ಚಲು ಸಾಮರ್ಥ್ಯವುಳ್ಳವುಗಳಾಗಲಿಲ್ಲ. ಶ್ರೀಹರಿಯ ವಿಶೇಷ ಸಾಮರ್ಥ್ಯವ್ಯಕ್ತಿಗೆಡೆಯಾದ (ವಿಭೂತಿಯಾದ) ಆ ಪ್ರಹ್ಲಾದನ ದೇಹವನ್ನು ಮಾತ್ರ ಕಚ್ಚುವ ವ್ಯಾಪಾರದಿಂದ ತಮ್ಮ ಹಲ್ಲುಗಳನ್ನೇ ಮುರಿದುಕೊಂಡುವು.

೩೨. ಅನಂತರದಲ್ಲಿ ನೆತ್ತರು ಬಸಿವುದರಿಂದ ದುಃಖಗೊಂಡ ಆಕಾರವುಳ್ಳ, ಇಬ್ಭಾಗವಾಗಿ ಮುರಿದುಹೋದ, ಭಯಂಕರಗಳಾದ ಕೋರೆಹಲ್ಲುಗಳುಳ್ಳ, ಕಂಪಿಸುತ್ತಲಿರುವ ಹೆಡೆಗಳುಳ್ಳ ಆ ಸರ್ಪಗಳೆಲ್ಲವೂ ಒಟ್ಟುಗೂಡಿಕೊಂಡು ಬಂದು, ನಿಟ್ಟುಸಿರು ಬಿಡುತ್ತಾ , ಆ ದೈತ್ಯರಾಜನಿಗೆ ಇಂತು ಬಿನ್ನವಿಸಿದುವು.

೩೩. ಎಲೈ ಪ್ರಭುವೇ! ನಾವು ನಮ್ಮ ವಿಷಜ್ವಾಲೆಯಿಂದ ಮಹಾವೃಕ್ಷಗಳನ್ನೂ ಸುಟ್ಟು ಬೂದಿಯುಳಿಯುವಂತೆ ಎಸಗಿರುತ್ತೇವೆ. ಮಹಾಮಹಿಮೆಯುಳ್ಳ

ಮಹಾನುಭಾವಸ್ಯ ತವಾತ್ಮಜಸ್ಯ
ವಧೇ ನಿಯುಕ್ತಾ ದಶನೈರ್ವಿನಾಕೃತಾಃ ॥ ೩೩ ॥

ಇತ್ಥಂ ದ್ವಿಜಿಹ್ವಾಃ ಕಠಿನಂ ನಿವೇದ್ಯ
ಯಯುರ್ವಿಸೃಷ್ಟಾಃ ಪ್ರಭುಣಾ ಕೃತಾರ್ಥಾಃ ।
ವಿಚಿಂತಯಂತಃ ಪೃಥು ವಿಸ್ಮಯೇನ
ಪ್ರಹ್ಲಾದ ಸಾಮರ್ಥ್ಯ ನಿದಾನಮೇವ ॥ ೩೪ ॥

॥ ಮಾರ್ಕಂಡೇಯ ಉವಾಚ ॥

ಅಥಾಸುರೇಶಃ ಸಚಿವೈರ್ವಿಚಾರ್ಯ
ನಿಶ್ಚಿತ್ಯ ಸೂನುಂ ತಮದಂಡಸಾಧ್ಯಮ್ ।
ಆಹೂಯ ಸಾಮ್ನಾ ಪ್ರಣತಂ ಜಗಾದ
ವಾಕ್ಯಂ ಸದಾ ನಿರ್ಮಲಪುಣ್ಯಚಿತ್ತಮ್ ॥ ೩೫ ॥

ನಿನ್ನ ಮಗನ ಕೊಲೆಯಲ್ಲಿ ನಿಯುಕ್ತರಾದ ನಾವು ಅವನನ್ನು ಸಂಹರಿಸಲು ಸಮರ್ಥರಾಗದೆ, ನಮ್ಮ ಹಲ್ಲುಗಳನ್ನೆಲ್ಲಾ ಮುರಿದು ಕಳೆದುಕೊಂಡು, ಸಾಯುವ ಹಾಗೆ ಆಗಿದ್ದೇವೆ. '

೩೪. ಆ ದ್ವಿಜಿಹ್ವಗಳಾದ ಸರ್ಪಗಳು ಕಠಿನವಾಗಿ ದೈತ್ಯರಾಯನಿಗೆ ಇಂತು ಬಿನ್ನವಿಸಿ, ಕೃತಾರ್ಥರಾಗದೆ, ಒಡೆಯನಿಂದ ಬೀಳ್ಕೊಟ್ಟವರಾಗಿ, ಪ್ರಹ್ಲಾದನ ಶಕ್ತಿಯ ಕಾರಣವನ್ನೇ ಕಟ್ಟಚ್ಚರಿಯಿಂದ ಆಲೋಚಿಸುತ್ತಾ, ಹೋದುವು.

೩೫. ಮಾರ್ಕಂಡೇಯಮುನಿಯು ಹೇಳುತ್ತಾನೆ:—' ಎಲೈ ಸಹಸ್ರಾನೀಕ ರಾಯನೇ ! ಕೇಳು ; ಅನಂತರದಲ್ಲಿ ರಕ್ಕಸರೊಡೆಯನಾದ ಹಿರಣ್ಯಕಶಿಪುವು ಮಂತ್ರಿಗಳಿಂದ ಕೂಡಿ, ಆಲೋಚನೆಯನ್ನು ಮಾಡಿ, ಆ ತನ್ನ ಮಗನು ದಂಡಸಾಧ್ಯನಲ್ಲವೆಂಬುದನ್ನು ಗೊತ್ತುಮಾಡಿ, ಯಾವಾಗಲೂ ಪವಿತ್ರನೂ, ಪುಣ್ಯಸ್ವರೂಪನೂ ಆದ ಶ್ರೀಹರಿಯನ್ನು ಚಿಂತಿಸುವ ಮನದ ಬಾಲಕನನ್ನು ಕರೆದು, ತನಗೆರಗಿದ ಅವನಿಗೆ ಸಾಂತ್ವನವಚನವನ್ನಾಡಿದನು.

ಪ್ರಹ್ಲಾದ ದುಷ್ಟೋಽಸಿ ನಿಜಾಂಗ ಜಾತೋ-

ನ ವಧ್ಯ ಇತ್ಯದ್ಯ ಕೃಪಾ ಮಮಾಭೂತ್ ।
ತತಸ್ತೂರ್ಣಂ ಸಮಾಗತ್ಯ ದೈತ್ಯರಾಜ ಪುರೋಹಿತಾಃ ॥ ೩೬ ॥

ಮೂಢಾಃ ಪ್ರಾಂಜಲಯಃ ಪ್ರಾಹುರ್ದ್ವಿಜಾಃ ಶಾಸ್ತ್ರವಿಶಾರದಾಃ ।
ತ್ರೈಲೋಕ್ಯಂ ಕಂಪತೇ ದೇವ ಭೃಶಂ ತ್ವಯ್ಯಭಿಕಾಂಕ್ಷಿಣಿ ॥ ೩೭ ॥

ಪ್ರಹ್ಲಾದಸ್ತ್ವಾಂ ನ ಜಾನಾತಿ ಕ್ರುದ್ಧಂ ಸ್ವಲ್ಪೋ ಮಹಾಬಲಮ್ ।
ತದಲಂ ದೇವ ರೋಷೇಣ ದಯಾಂ ಕರ್ತುಂ ತ್ವಮರ್ಹಸಿ ॥ ೩೮ ॥

ಪುತ್ರಃ ಕುಪುತ್ರತಾಮೇತಿ ನ ಮಾತಾಪಿತರೌ ಕದಾ ।
ಉಕ್ತ್ವೇತಿ ಕುಟಿಲಪ್ರಜ್ಞಂ ದೈತ್ಯಂ ದೈತ್ಯಪುರೋಹಿತಾಃ ॥ ೩೯ ॥

---

೩೬. "ಎಲೈ ಪ್ರಹ್ಲಾದನೇ! ಕೇಳು; 'ನನ್ನ ಅಂಗದಿಂದ ಜನಿಸಿದ ಮಗನು ದುಷ್ಟನಾದರೂ, ವಧಾರ್ಹನಲ್ಲವು;' ಎಂಬ ಇಂದು ನನಗೆ ಕರುಣೆ ಯುಂಟಾಯಿತು;" ಎಂದು ಹೇಳುತ್ತಿರಲು, ಬಳಿಕ ಬೇಗನೆ ದೈತ್ಯರಾಜನ ಪುರೋಹಿತರು ಓಡಿಬಂದರು.

೩೭. ಶಾಸ್ತ್ರಜ್ಞರಾದರೂ, ವಿವೇಕ ಶೂನ್ಯರಾದ ಆ ಬ್ರಾಹ್ಮಣರು ಬೊಗಸೆ ಯನ್ನು ಜೋಡಿಸಿ, ದೀನರಾಗಿ ಇಂತು ಬಿನ್ನವಿಸುತ್ತಾರೆ:—'ಎಲೈ ದೇವನೇ! ನೀನು ಬಯಸಿದರಾಯಿತು. ಮೂಲೋಕವೇ ಅತ್ಯಂತವಾಗಿ ನಡುಗುತ್ತದೆ.

೩೮-೪೦. ಈ ಮಗುವಾದ ಪ್ರಹ್ಲಾದನು ಕೋಪಗೊಂಡ, ಬಲಿಷ್ಠನಾದ ನಿನ್ನನ್ನು ಅರಿಯಲಾರನು. ಸ್ವಾಮಿಯೇ! ದಯಮಾಡಿ ಕುಪಿತನಾಗಬೇಡ. ಕರುಣೆಯನ್ನು ತೋರು; ಮಕ್ಕಳು ಕೆಲವು ವೇಳೆ ಅಯೋಗ್ಯ ಮಕ್ಕಳಾಗುತ್ತಾರೆ. ಯಾವಾಗಲೂ ತಾಯಿತಂದೆಗಳು ಅಯೋಗ್ಯರಾಗುವುದಿಲ್ಲ;' ಎಂದು ದೈತ್ಯ ಪುರೋಹಿತರು ಅಸದ್ಬುದ್ಧಿಯುಳ್ಳ ದೈತ್ಯನಾದ ಹಿರಣ್ಯಕಶಿಪುವಿಗೆ ಹೇಳಿ, ಅವನಿಂದ

ಆದಾಯ ತದನುಜ್ಞಾತಾ ಪ್ರಹ್ಲಾದಂ ಧೀಧನಂ ಯಯುಃ ॥ ೪೦ ॥

ಇತಿ ಶ್ರೀ ನರಸಿಂಹಪುರಾಣೇ ನರಸಿಂಹಪ್ರಾದುರ್ಭಾವೇ ದ್ವಿಚತ್ವಾರಿಂಶೋಽಧ್ಯಾಯಃ

ಅಪ್ಪಣೆ ಪಡೆದು, ಜ್ಞಾನಧನನಾದ ಪ್ರಹ್ಲಾದನನ್ನು ಕರೆದುಕೊಂಡು ಹೋದರು ;' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀ ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀ ನರಸಿಂಹಾವತಾರ ಚರಿತ್ರೆಯಲ್ಲಿ ನಲವತ್ತೆರಡನೆಯ ಅಧ್ಯಾಯವು ಮುಗಿದುದು.

ನಲವತ್ತೆರಡನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, 'ಮಾರ್ಕಂಡೇಯನು ಸಹಸ್ರಾನೀಕರಾಯನಿಗೆ ಶ್ರೀ ನೃಸಿಂಹಾವತಾರ ಕಥೆಯನ್ನು ಮುಂದುವರಿಸುತ್ತಾ ಪುನಃಪ್ರಹ್ಲಾದನನ್ನು ಗುರುಗಳ ಮಠಕ್ಕೆ ವಿದ್ಯಾಭ್ಯಾಸಕ್ಕಾಗಿ ಕರೆದೊಯ್ದರು. ಅಲ್ಲಿ ಅವನು ವಿದ್ಯೆಗಳನ್ನೆಲ್ಲಾ ಅಭ್ಯಾಸ ಮಾಡಿದನು. ಕಾಲದಿಂದ ಬಾಲ್ಯವು ಕಳೆದು ಕೌಮಾರಾವಸ್ಥೆಯನ್ನು ಹೊಂದಿದನು.

ಸಾಮಾನ್ಯವಾಗಿ ಲೋಕದಲ್ಲಿ ಕೌಮಾರಾವಸ್ಥೆಯಲ್ಲಿ ಮಾನವರು ನಾಸ್ತಿಕರಾಗುತ್ತಾರೆ. ಆದರೆ ಈ ವಯಸ್ಸಿನಲ್ಲಿ, ಈ ಬಾಲಕನಲ್ಲಿ ವಾತ್ಸ್ಯವಿರಕ್ತಿ ಮತ್ತು ಶ್ರೀ ಹರಿಭಕ್ತಿ-ಇವೆರಡೂ ಪ್ರಾಯಗೊಂಡುವು.

'ಒಮ್ಮೆ ದೈತ್ಯೇಂದ್ರನು ವಿನಯದಿಂದ ಬಾಗಿ, ಸಮೀಪಕ್ಕೆ ಬಂದ ಪ್ರಹ್ಲಾದ ಕುಮಾರನಿಗೆ ತಾನು ರಾಜ್ಯಭಾರವನ್ನು ಅವನಲ್ಲಿ ಇರಿಸುವುದಾಗಿ ಹೇಳಿದನು. ಅವನ ಗುರುವೂ ಅವನ ಪಾಂಡಿತ್ಯವನ್ನೂ ವಿಶೇಷವಾಗಿ ಬಣ್ಣಿಸಿದ್ದನು. ತಂದೆಗೆ ಮಕ್ಕಳು ಅಭಿವೃದ್ಧಿಗೆ ಬಂದುದನ್ನು ಕೇಳುವುದಕ್ಕಿಂತ, ಬೇರೆ ಕಿವಿಗೆ ಸವಿಯಾದುದು ಇಲ್ಲವು ;—ಇವೇ ಮೊದಲಾಗಿ ಹೇಳಲು, ಪ್ರಹ್ಲಾದನು ಶ್ರೀಹರಿಯ ವಿಚಾರದಲ್ಲಿ ಹೇಳಿದ ನುಡಿಯು ತಂದೆಯ ಕಿವಿಗೆ ಇನಿದಾಗುವುದಿಲ್ಲ ; ಶ್ರೀಹರಿಯ ವಿಷಯಕವಲ್ಲದ ನೀತಿ, ಸೂಕ್ತಿ, ಕಥೆ, ಕಾವ್ಯ, ನುಡಿ,—ಇವೇ ಶ್ರಾವ್ಯವಾದುವು. ಅವು ಸಂಸಾರ ದುಃಖಕ್ಕೆ ದಾವಾಗ್ನಿಯಂತಿರುವುವು. ಶ್ರೀಹರಿಯ ವಿಚಾರವಿಲ್ಲದ ಕೇವಲ ಅರ್ಥಶಾಸ್ತ್ರಾದಿಗಳಿಂದೇನು ? ಅವು ಕೇವಲ ಸಂಸಾರದ ಬಂಧನವನ್ನೆಸಗುವುವು. ಆದುದರಿಂದ ಮುಮುಕ್ಷುಗಳು ಯಾವಾಗಲೂ ಸಂಸಾರನಾಶಕವಾದ ವೈಷ್ಣವ ವಾಙ್ಮಯವನ್ನು ಕೇಳಬೇಕೆಂದನು.

ಆಗ ದೈತ್ಯೇಂದ್ರನು ಕಡುಕನಲ್ದು, ಸುತ್ತಲೂ ನೋಡಿ, ದೈತ್ಯಭಟರಿಗೆ ಅವನ ಶರೀರವನ್ನು ಕತ್ತರಿಸಿ ಕಾಕ, ಕಂಕ, ಗೃಧ್ರಗಳಿಗೆ ಹಾಕಬೇಕೆಂದು ಆಣತಿ ಕೊಡಲು, ಆ ಭಟರು ಕಠಿನಗಳಾದ ಅಸ್ತ್ರ ಶಸ್ತ್ರಗಳಿಂದ ಹೊಡೆಯಲು, ಅವು ಅವನ ಶರೀರದ ಚರ್ಮಕ್ಕೂ ಘಾಸಿ ಮಾಡಲಾರದೆ, ತಾವೇ ಚೂರುಚೂರಾಗಿ ಮುರಿದು ಹಿಂದಕ್ಕೆ ಆ ಭಟರಿಗೇ ತಗುಲಲು, ಅವರು ತಮ್ಮ ಶ್ರಮವು ವ್ಯರ್ಥವೆಂದೂ, ಅವನು ಅವಧ್ಯನೆಂದೂ ಹೇಳಲು, ಕ್ರೂರವಿಷಗಳಿಂದ ಕೂಡಿದ ದಂದಶೂಕಗಳಿಗೆ ಅವನನ್ನು ಕಚ್ಚಲು ಹೇಳಲು, ಅವು ರೋಷದಿಂದ ಹೋಗಿ ಕಚ್ಚಿ, ತಮ್ಮ ಕೋರೆ ಹಲ್ಲು ಗಳನ್ನೇ ಮುರಿದುಕೊಂಡು ಬಂದು, ರಾಯನಿಗೆ ಅವನ ಕೊಲೆಯು ಅಶಕ್ಯವೆಂದು ಹೇಳಲು, ಆ ಹಿರಣ್ಯಕಶಿಪುವು ಆ ಪ್ರಹ್ಲಾದನು ಅವಧ್ಯನೆಂದೇ ತಿಳಿದು, ಅವನನ್ನು ಕರೆದು, ತಂದೆಯು ತನ್ನ ಶರೀರದಿಂದ ಜನಿಸಿದ ಮಗನನ್ನು ಸಂಹರಿಸಲು ಬಯಸುವುದಿಲ್ಲ. ಆದುದರಿಂದ ಅವನಲ್ಲಿ ಕರುಣೆತೋರಿ, ಬಿಟ್ಟಿರುವುದಾಗಿ ಹೇಳಿ, ಆ ಗುರುಗಳ ಪ್ರಾರ್ಥನೆಯಂತೆ ಪುನಃ ಅವರ ಮಠಕ್ಕೆ ದೈತ್ಯಕುಲೋಚಿತವಾದ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದನು ;' ಎಂದು ಹೇಳಿದುದನ್ನು ಸೂತರು ಭಾರದ್ವಾಜಾದಿಗಳಿಗೆ ಕಥಿತವಾದುದು ನಿರೂಪಿತವಾಗಿದೆ.

ಇಂತು ನಲವತ್ತೆರಡನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ತ್ರಯಶ್ಚತ್ವಾರಿಂಶೋಽಧ್ಯಾಯಃ

ಶ್ರೀ ನರಸಿಂಹ ಪ್ರಾದುರ್ಭಾವಃ (ಅನುವೃತ್ತಃ)

ಅಥ ಸ ಗುರುಗೃಹೇಽಪಿ ವರ್ತಮಾನಃ
ಸಕಲವಿದಚ್ಯುತಸಕ್ತ ಪುಣ್ಯಚೇತಾಃ ।
ಜಡ ಇವ ವಿಚಚಾರ ಬಾಹ್ಯಕೃತ್ಯೇ
ಸತತಮನಂತಮಯಂ ಜಗತ್ಪ್ರಪಶ್ಯನ್ ॥ ೧ ॥

ನಲವತ್ತುಮೂರನೆಯ ಅಧ್ಯಾಯವು.

ಶ್ರೀ ನರಸಿಂಹಾವತಾರವು (ಮುಂದುವರಿದು)

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ನಿರೂಪಿಸುತ್ತಾನೆ:— ' ಎಲೈ ಸಹಸ್ರಾನೀಕರಾಯನೇ! ಕೇಳು; ಅನಂತರವಲ್ಲಿ ತಿಳಿಯಬೇಕಾದುದೆಲ್ಲವನ್ನೂ ಅರಿತ, ಶ್ರೀ ನಾಶರಹಿತನಾದ ಪರಿಯಲ್ಲಿ ನಿಂತ ಪುಣ್ಯಹೃದಯವುಳ್ಳ ಆ ಪ್ರಹ್ಲಾದನು ಆ ಆಚಾರ್ಯರ ಮನೆಯಲ್ಲಿ (ಮಠದಲ್ಲಿ) ಇರುವವನಾದರೂ ಯಾವಾಗಲೂ ಅನಂತನಾದ ಶ್ರೀಹರಿಯಿಂದ ರಕ್ಷಿತವಾದುದಾಗಿಯೂ, ವ್ಯಾಪ್ತವಾದುದಾಗಿಯೂ, ಈ ಜಗತ್ತನ್ನು ತಿಳಿದು, ಹೊರಗಿನ ಕೆಲಸಗಳಲ್ಲಿ ಜಡನಂತೆ ನಡೆದುಕೊಂಡನು.

ಸಹಗುರುಕುಲವಾಸಿನಃ ಕದಾ ಚಿತ್
ಶ್ರುತಿವಿರತಾ ಹ್ಯವದತ್ಸಮೇತ್ಯ ಬಾಲಾಃ ।
ತವ ಚರಿತಮಹೋ ವಿಚಿತ್ರಮೇತತ್
ಕ್ಷಿತಿಪತಿಪುತ್ರ ಯತೋಽಸ್ಯ ಭೋಗಲುಬ್ಧಃ ॥ ೨ ॥

ಹೃದಿ ಕಿಮಪಿ ವಿಚಿಂತ್ಯ ಹೃಷ್ಟರೋಮಾ
ಭವಸಿ ಸದಾ ಚ ವದಾಂಗ ಪದ್ಯಗುಹ್ಯಮ್ ।
ಇತಿ ಗದಿತವತಃ ಸ ಮಂತ್ರಿಪುತ್ರಾ-
ನವದದಿತಿ ನೃಪ ಸರ್ವವತ್ಸಲತ್ವಾತ್ ॥ ೩ ॥

ಶೃಣುತ ಸುಮನಸಃ ಸುರಾರಿಪುತ್ರಾ-
ಯದಹಮನನ್ಯರತಿರ್ವದಾಮಿ ಸ್ಪಷ್ಟಃ ।
ಧನಜನತರುಣೀ ವಿಲಾಸರಮ್ಯೋ
ಭವ ವಿಭವಃ ಕಿಲ ಭಾತಿ ಯಸ್ತಮೇನಮ್ ॥ ೪ ॥

---

೨. ಇಂತಿರಲು, ಒಮ್ಮೆ ಗುರುಕುಲದಲ್ಲಿ ಪ್ರಹ್ಲಾದನ ಸಹವಾಸಿಗಳಾದ ಬಾಲಕರು ಪಾಠವೆಲ್ಲವೂ ಮುಗಿದಮೇಲೆ, ಒಟ್ಟುಗೂಡಿದವರಾಗಿ ಇವನ ಹತ್ತಿರಕ್ಕೆ ಬಂದು, ಇಂತು ಹೇಳಿದರು:—' ಎಲೈ ಭೂಪತಿಪುತ್ರನೇ! ಕೇಳು; ನೀನು ಯಾವ ಕಾರಣದಿಂದ ಈ ಸುಖದಲ್ಲಿ ಅತ್ಯಂತಾಸಕ್ತನಾಗಿರುತ್ತೀಯೆ? ಅದರಿಂದ ನಿನ್ನ ಈ ನಡವಳಿಕೆಯು ವಿಚಿತ್ರವಾಗಿರುತ್ತದೆ.

೩. ಅಯ್ಯೋ! ಮನದಲ್ಲಿ ಏನನ್ನೋ ಯೋಚಿಸಿ, ಯಾವಾಗಲೂ ರೋಮಾಂಚಿತಗಾತ್ರನಾಗಿರುತ್ತೀಯೆ; ನೀನು ಹೇಳಿದ ಪದ್ಯದ ರಹಸ್ಯವೇನು? ಹೇಳು;" ಎಂದು ಕೇಳಲು; ಎಲೈ ರಾಯನೇ! ಸರ್ವವಾತ್ಸಲ್ಯದಿಂದ ಆ ಪ್ರಹ್ಲಾದನು ಇಂತು ಕೇಳಿದ ಮಂತ್ರಿಕುವರರಿಗೆ ಮುಂದೆ ಹೇಳುವಂತರುಹಿದನು.

೪. ' ಎಲೈ (ಸುಮನಸ್ಕರಾದ) ದೈತ್ಯಬಾಲಕರೇ! ಇನ್ನಾವುದರಲ್ಲಿಯೂ ಮನವಿಡದೆ, ನಾನು ಹೇಳುವುದನ್ನು ಕೇಳಿರಿ; ಹಣ, ಜನ, ತರುಣಿಯರ ಆಟ-ಇವುಗಳಿಂದ ಮನೋಹರವಾಗಿ ಕಾಣುವ ಯಾವ ಈ ಸಂಸಾರದ ಐಶ್ವರ್ಯವು ರಂಜಿಸುತ್ತಿರುವುದಷ್ಟೆ! ಇದನ್ನು ವಿಮರ್ಶಿರಿ.

ವಿಮೃಶತ ಸುಬುಧ್ಯೈರುತೈಷ ಸೇವ್ಯೋ
ದ್ರುತಮಥವಾ ಪರಿವರ್ಜ್ಯ ಏವ ದೂರಾತ್ ।
ಪ್ರಥಮಮಿಹ ವಿಚಾರ್ಯತಾಂ ಯದಂಬಾ
ಜಠರಗತೈರನುಭೂಯತೇ ಸುದುಃಖಃ ॥ ೫ ॥

ಸಕುಟಿಲತನುಭಿಸ್ತದಗ್ನಿತಪ್ತೈಃ
ವಿವಿದಪುರಾ ಜನನಾನಿ ಸಂಸ್ಮರದ್ಭಿಃ ।
ಕಾರಾಗೃಹೇ ವಸ್ಯುರಿವಾಸ್ಮಿ ಬದ್ಧೋ
ಜರಾಯುಣಾ ವಿಟ್ಕೃಮಿ ಮೂತ್ರಗೇಹೇ ॥
ಪಶ್ಯಾಮಿ ಗರ್ಭೇಽಪಿ ಸಕೃನ್ಮುಕುಂದ
ಪಾದಾಬ್ಜಯೋರಸ್ಮರಣೇನ ಕಷ್ಟಮ್ ॥ ೬ ॥

೫-೬. ಈ ಭೋಗಸಾಧನವು ವಿವೇಕಿಗಳಿಂದ ಸೇವಿಸಲ್ಪಡತಕ್ಕದ್ದೋ? ಅಥವಾ ಬೇಗನೆ ದೂರದಿಂದಲೇ ಬಿಡಲ್ಪಡತಕ್ಕದ್ದೋ? ಇಲ್ಲಿ ಮೊದಲು ವಿಚಾರ ಮಾಡವುದು. ಸೊಟ್ಟಸೊಟ್ಟಾದ ಮುರಿದೊಡಲುಳ್ಳ, ಬೆಂಕಿಯ ಬೇಗೆಯುಳ್ಳ, ನಾನಾ ತೆರನಾದ ಹಿಂದಿನ ಹುಟ್ಟುಗಳನ್ನು ನೆನೆಯುತ್ತಲಿರುವ, ತಾಯಿಯ ಜಠರದಲ್ಲಿರುವ ನಮ್ಮಿಂದ ಅತಿಶಯವಾದ ದುಃಖವು ಅನುಭವಿಸಲ್ಪಡುತ್ತದೆ. ಕಾರಾಗೃಹದಲ್ಲಿ ಕಳ್ಳನಂತೆ ಮಲ ಕೃಮಿ ಮೂತ್ರಗಳ ಬೀಡಾದ ಗರ್ಭಕೋಶದಲ್ಲಿ ಜರಾಯುವೆಂಬ ಗರ್ಭವನ್ನು ಸುತ್ತಿರುವ ಚರ್ಮದ ಚೀಲದಿಂದ ಜೀವನು ಬಂಧಿತನಾಗಿರುತ್ತಾನೆ. ಒಮ್ಮೆಯೂ ಶ್ರೀ ಮುಕುಂದನ ಪಾದಕಮಲಗಳನ್ನು ಸ್ಮರಿಸದುವರಿಂದ, ಗರ್ಭಕೋಶದಲ್ಲಿಯೂ ಕಷ್ಟಗಳನ್ನು ಕಾಣುತ್ತಾನೆ.

ತಸ್ಮಾತ್ಸುಖಂ ಗರ್ಭಶಯಸ್ಯ ನಾಸ್ತಿ
ಬಾಲ್ಯೇ ತಥಾ ಯೌವನವಾರ್ಧಕೇ ವಾ ।
ಏವಂ ಭವೇಽಸ್ಮಿನ್ ಪರಿಮೃಗ್ಯಮಾಣೋ
ವೀಕ್ಷಾಮಹೇ ನೈವ ಸುಖಾಂಶಲೇಶಮ್ ॥ ೭ ॥

ಯಥಾ ಯಥಾ ಸಾಧು ವಿಚಾರಯಾಮ-
ಸ್ತಥಾ ತಥಾ ದುಃಖತರಂ ಚ ವಿದ್ಮಃ ।
ತಸ್ಮಾದ್ಭವೇಽಸ್ಮಿನ್ ಕಿಲ ಚಾರು ರೂಪೇ
ದುಃಖಾಕರೇ ನೈವ ಪತಂತಿ ಸಂತಃ ॥ ೮ ॥

ಪತಂತ್ಯಧೋಽತತ್ತ್ವವಿದಃ ಸುಮೂಢಾಃ
ವಹ್ನೌ ಪತಂಗಾ ಇವ ದರ್ಶನೀಯೇ ।
ಯದ್ಯಸ್ತಿ ನಾನ್ಯಚ್ಛರಣಂ ಸುಖಾಯ
ಯುಕ್ತಂ ತದೈತತ್ಪತನಂ ಸುಖಾಭೇ ॥ ೯ ॥

---

೭. ಆದುದರಿಂದ ಗರ್ಭದಲ್ಲಿರುವವನಿಗೆ ಸುಖವಿಲ್ಲವು ; ಹಾಗೆಯೇ ಮಾನವರಿಗೆ ಬಾಲ್ಯದಲ್ಲಿಯೂ, ಹರೆಯದಲ್ಲಿಯೂ, ಮುಪ್ಪಿನಲ್ಲಿಯೂ ಸುಖವಿಲ್ಲವು. ಇಂತು ಈ ಸಂಸಾರದಲ್ಲಿ ನಾವು ಎಷ್ಟು ಹುಡುಕುವವರಾದರೂ, ಸೊಗದ ಅಂಶದ ಒಂದು ಪಾಲನ್ನೂ ಕಾಣುವುದಿಲ್ಲವು.

೮. ಎನಿತೆನಿತು ಚೆನ್ನಾಗಿ ವಿಚಾರ ಮಾಡುತ್ತೇವೆಯೋ, ಅನಿತನಿತು ಅತಿಶಯವಾದ ದುಃಖವನ್ನೇ ತಿಳಿಯುತ್ತೇವೆ. ಆದುದರಿಂದ ಮೇಲೆ ಸುಂದರವಾಗಿ ತೋರುವ, ದುಃಖದ ಗಣಿಯಾದ ಈ ಸಂಸಾರದಲ್ಲಿ ಸತ್ಪುರುಷರು (ಸಿಕ್ಕಿಕೊಳ್ಳುವುದಿಲ್ಲ.) ಬೀಳುವುದಿಲ್ಲ.

೯. ಎದಿರಿಗೆ ಕಾಣುತ್ತಲಿರುವ, ಮನೋಹರವಾಗಿರುವ ಬೆಂಕಿಯಲ್ಲಿ ಪತಂಗದ ಹುಳುಗಳಂತೆ ತತ್ತ್ವಜ್ಞಾನರಹಿತರಾದ ಮೂಢರು ಈ ಭವದಲ್ಲಿ ಕೆಳಗೆ ಬೀಳುತ್ತಾರೆ. ಇನ್ನೊಂದು ಸುಖಾಶ್ರಯವು ಇಲ್ಲದಿದ್ದಲ್ಲಿ, ಆಗ ಸುಖದಂತೆ ತೋರುವ ಈ ಸಂಸಾರದಲ್ಲಿ ಬೀಳುವುದುಚಿತವು.

ಅವಿಂದತಾಮನ್ನಮಹೋ ಕೃಶಾನಾಂ
ಯುಕ್ತಂ ಹಿ ಪಿಣ್ಯಾಕತುಷಾದಿಭಕ್ಷಣಮ್ ।
ಅಸ್ತಿ ತ್ವಜಂ ಶ್ರೀಪತಿಪಾದಪದ್ಮ-
ದ್ವಂದ್ವಾರ್ಚನ ಪ್ರಾಪ್ಯಮನಂತಮಾದ್ಯಮ್ ॥ ೧೦ ॥

ಅಕ್ಲೇಶತಃ ಪ್ರಾಪ್ಯಮಿದಂ ವಿಸೃಜ್ಯ
ಮಹಾಸುಖಂ ಯೋಽನ್ಯಸುಖಾನಿ ವಾಞ್ಛೇತ್ ।
ರಾಜ್ಯಂ ಕರಸ್ಥಂ ಸ್ವಮಸೌ ವಿಸೃಜ್ಯ
ಭಿಕ್ಷಾಮಟೇದ್ದೀನಮನಾಃ ಸುಮೂಢಃ ॥ ೧೧ ॥

ತಚ್ಚಾರ್ಚ್ಯತೇ ಶ್ರೀಪತಿಪಾದಪದ್ಮ-
ದ್ವಂದ್ವಂ ನವಸ್ತ್ರೈರ್ನಧನೈಃ ಶ್ರಮೈರ್ನ ।
ಅನನ್ಯಚಿತ್ತೇನ ನರೇಣ ಕಿಂ ನು
ಉಚ್ಚಾರ್ಯತೇ ಕೇಶವ ಮಾಧವೇತಿ ॥ ೧೨ ॥

---

೧೦. ಅನ್ನವನ್ನು ಹೊಂದಲಾಗದ ಕೃಶರಾದವರು ಹಿಂಡಿ, ತೌಡು–ಇವೇ ಮೊದಲಾದುವನ್ನು ತಿನ್ನುವುದುಚಿತವು; ಓಹೋ! ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ ಚರಣನಳಿನಯುಗಳಗಳ ಪೂಜೆಯಿಂದ ಹೊಂದಲಾಗುವ, ಉತ್ಪತ್ತಿನಾಶರಹಿತವಾದ (ಅನಾದಿಯಾದ) ಮೊದಲಿಂದಲೂ ಇರುವ ವಸ್ತುವಿದೆಯಷ್ಟೆ!

೧೧. ಶ್ರಮವಿಲ್ಲದೆಯೆ ಹೊಂದಲಾಗುವ, ಈ ಮಹಾ ಸುಖಸಾಧನವೂ, ಸುಖಸ್ವರೂಪವೂ, ಆದ ವಸ್ತುವನ್ನುಳಿದು ಯಾವನು ತಾನೇ ಬೇರೆ ಸುಖಸಾಧನಗಳನ್ನು ಅಪೇಕ್ಷಿಸುವನು! ಇವನು ಕರಗತವಾದ ತನ್ನ ರಾಜ್ಯವನ್ನು ಬಿಟ್ಟು, ದೀನವಾದ ಮನಸ್ಸುಳ್ಳವನಾಗಿ, ಅವಿವೇಕಿಯಾದವನಾಗಿ ಭಿಕ್ಷೆಯನ್ನು ತಿರಿಯುವವನಾಗುವನು.

೧೨. ಶ್ರೀಪತಿಯಾದ ಹರಿಯ ಚರಣನಳಿನಯುಗಳಗಳು ವಸ್ತ್ರಗಳಿಂದಲೂ, ಹಣಗಳಿಂದಲೂ, ಶ್ರಮಗಳಿಂದಲೂ ಪೂಜಿಸಲ್ಪಡತಕ್ಕದ್ದಲ್ಲವು; ಆದರೆ, ಮತ್ತಾವುವನ್ನೂ ನೆನೆಯದ, ಅವನಲ್ಲಿಯೇ ಇಟ್ಟಿರುವ ಮನದ ಮಾನವನಿಂದ ' ಶ್ರೀಕೇಶವ, ಮಾಧವ,' ಎಂದು ಉಚ್ಚರಿಸಲ್ಪಟ್ಟಿದ್ದಾದರೆ, ಆಗ ಆ ಭಗವಂತನ ಪಾದಗಳನ್ನು ಸೇವಿಸಿದುದಾಗುವುದು.

ಏವಂ ಭವಂ ದುಃಖಮಯಂ ವಿದಿತ್ವಾ
ದೈತ್ಯಾತ್ಮಜಾಃ ಸಾಧು ಹರಿಂ ಭಜಧ್ವಮ್ ।
ಏವಂ ಜನೋ ಜನ್ಮಫಲಂ ಲಭೇತ
ನೋಚ್ಚೇದ್ಭವಾಬ್ಧೌ ಪ್ರಪತೇದಧೋಽಧಃ ॥ ೧೩ ॥

ತಸ್ಮಾದ್ಭವೇಽಸ್ಮಿನ್ ಹೃದಿ ಶಂಖ ಚಕ್ರ
ಗದಾಧರಂ ದೇವಮನಂತಮೀಡ್ಯಮ್ ।
ಸ್ಮರಂಸ್ತು ನಿತ್ಯಂ ವರದಂ ಮುಕುಂದಂ
ಸದ್ಭಕ್ತಿಯೋಗೇನ ನಿವೃತ್ತಿಕಾಮಾಃ ॥ ೧೪ ॥

ಅನಾಸ್ತಿಕತ್ವಾತ್ಕೃಪಯಾ ಭವದ್ಭ್ಯೋ
ವದಾಮಿ ಗುಹ್ಯಂ ಭವಸಿಂಧುಸಂಸ್ಥಾಃ ।
ಸರ್ವೇಷು ಭೂತೇಷು ಚ ಮಿತ್ರಭಾವಂ
ಭಜಂತ್ವಯಂ ಸರ್ವಗತೋ ಹಿ ವಿಷ್ಣುಃ ॥ ೧೫ ॥

---

೧೩. ಎಲೈ ಅಸುರ ಬಾಲಕರೇ! ಇಂತು ಸಂಸಾರವನ್ನು ದುಃಖದಿಂದ ತುಂಬಿದುದನ್ನಾಗಿ ತಿಳಿದು, ಶ್ರೀಹರಿಯನ್ನು ಚೆನ್ನಾಗಿ ಸೇವಿಸಿರಿ; ಇಂತೆಸಗಿದರೆ ಮಾನವನು ತನ್ನ ಹುಟ್ಟಿಗೆ ಫಲವನ್ನು ಹೊಂದುವನು. ಹಾಗಿಲ್ಲದಿದ್ದಲ್ಲಿ ಈ ಸಂಸಾರ ಸಾಗರದಲ್ಲಿ ಕೆಳಕೆಳಗೆ ಬೀಳುವನು.

೧೪. (ಎಲೈ ನಿವೃತ್ತಿಕಾಮರೇ!) ಸುಖಾಪೇಕ್ಷಿಗಳಾದವರೇ! ಕೇಳಿರಿ; ಆದುದರಿಂದ ಈ ಜನ್ಮದಲ್ಲಿ ಮನದಲ್ಲಿ ಶಂಖಚಕ್ರಗದಾಪಾಣಿಯೂ, ಕ್ರೀಡಾದಿಗುಣ ವಿಶಿಷ್ಟನೂ, ನಾಶರಹಿತನೂ, ಸರ್ವರಿಂದ ಸ್ತುತ್ಯನೂ, ನಿತ್ಯನೂ, ಭಕ್ತರ ಇಷ್ಟವನ್ನು ಕೊಡುವವನೂ, ಮೋಕ್ಷವನ್ನು ಕೊಡುವವನೂ, ಆದ ಶ್ರೀಹರಿಯನ್ನು ಭಕ್ತಿಯೋಗದಿಂದ ಸ್ಮರಿಸಿರಿ.

೧೫. ಸಂಸಾರಸಾಗರದಲ್ಲಿ ಸಿಕ್ಕಿರುವ ಕೆಳೆಯರೇ!—ದೇವರು, ವೇದಾದಿಗಳು–ಇವುಗಳಲ್ಲಿ ಪ್ರಾಮಾಣ್ಯಬುದ್ಧಿಯಿಂದ, ಕರುಣೆಯಿಂದ ಗುಟ್ಟನ್ನು ಹೇಳುತ್ತೇನೆ. ಸರ್ವ ಪ್ರಾಣಿಗಳಲ್ಲಿಯೂ ಕೆಳೆತನವನ್ನು ಹೊಂದಿರಿ; ಶ್ರೀ ಮಹಾವಿಷ್ಣುವು ಚೇತನಾಚೇತನಾತ್ಮಕವಾದ ಈ ಜಗತ್ತಿನಲ್ಲಿ ಎಲ್ಲೆಡೆಗಳಲ್ಲಿ ಸೂಕ್ಷ್ಮರೂಪದಿಂದಿರುವನಷ್ಟೆ!' ಎಂದು ಪ್ರಹ್ಲಾದನು ಹೇಳಿದನು.

॥ ತಂದ್ದೈತ್ಯಪುತ್ರಾ ಊಚುಃ ॥

ಪ್ರಹ್ಲಾದ ತ್ವಂ ವಯಂ ಚಾಪಿ ಬಾಲ ಭಾವಾನ್ಮಹಾಮತೇ ।
ಶಣ್ಡಾಮರ್ಕಾತ್ಪರಂ ಮಿತ್ರಂ ಗುರುಂ ಚಾನ್ಯಂ ನ ವಿದ್ಮಹೇ ॥ ೧೬ ॥

ತ್ವಯ್ಯೈತಚ್ಛಿಕ್ಷಿತಂ ಕುತ್ರ ತಥ್ಯಂ ನೋ ವದ ನಿಸ್ತುಷಮ್ ।

॥ ಪ್ರಹ್ಲಾದ ಉವಾಚ ॥

ಯದಾ ತಾತಃ ಪ್ರಯಾತೋ ನೋ ತಪೋಽರ್ಥಂ ಕಾನನಂ ಮಹತ್ ॥ ೧೭ ॥

ತದಾ ಚೇಂದ್ರಃ ಸಮಾಗತ್ಯ ಪುರಂ ತಸ್ಯ ರುರೋಧ ಹ ।
ಮೃತಂ ವಿಜ್ಞಾಯ ದೈತ್ಯೇಂದ್ರಂ ಹಿರಣ್ಯಕಶಿಪುಂ ತದಾ ॥ ೧೮ ॥

ಇಂದ್ರೋ ನೋ ಜನನೀಂ ಗೃಹ್ಯ ಪ್ರಯಾತೋ ಮನ್ಮಥಾಗ್ನಿನಾ ।
ದಹ್ಯಮಾನೋ ಮಹಾಭಾಗಾ ಮಾರ್ಗೇ ಗಚ್ಛತಿ ಸತ್ವರಮ್ ॥ ೧೯ ॥

---

೧೬. ಆಗ ನೀಚರಾದ ದೈತ್ಯರ ಮಕ್ಕಳು ಹೇಳುತ್ತಾರೆ :— 'ಎಲೈ ಮಹಾಮತಿಯಾದ ಪ್ರಹ್ಲಾದನೇ ! ನಾವು ಹುಡುಗತನದಿಂದ ಶಂಡಾಮರ್ಕನಿಂದ ಉತ್ತಮನಾದ ಮಿತ್ರನನ್ನೂ, ಬೇರೆ ಗುರುವನ್ನೂ ತಿಳಿಯಲಾರೆವು. ನಿನ್ನಿಂದಲಾದರೋ ಇಂತು ಕಲಿಸಲ್ಪಟ್ಟೆವು ; ಯಾವುದರಲ್ಲಿ ಸತ್ಯವಿದೆ ? ನಮಗೆ ಮರೆಮಾಚದೆ ಹೇಳು ; ಎಂದು ಕೇಳಿದರು.

೧೭-೧೯. ಪ್ರಹ್ಲಾದನು ಹೇಳುತ್ತಾನೆ :— 'ಎಲೈ ದೈತ್ಯಕುಮಾರರೇ ! ಕೇಳಿರಿ ; ಯಾವಾಗ ನನ್ನ ತಂದೆಯಾದ ಹಿರಣ್ಯಕಶಿಪುವು ತಪವನ್ನಾಚರಿಸಲು ಗೊಂಡಾರಣ್ಯಕ್ಕೆ ಹೋದನೋ, ಆಗ ದೇವೇಂದ್ರನು ಬಂದು ನಮ್ಮ ತಂದೆಯ ಪಟ್ಟಣವನ್ನು ಮುತ್ತಿದನು. ಆಗ ದೈತ್ಯೇಂದ್ರನಾದ ಹಿರಣ್ಯಕಶಿಪುವು ಸತ್ತು ಹೋಗಿರುವನೆಂದು ತಿಳಿದು, ಎಲೈ ಪುಣ್ಯಶಾಲಿಗಳೇ ! ಇಂದ್ರನು ಮನ್ಮಥಾಗ್ನಿಯಿಂದ ಸುಡುತ್ತಾ, ನನ್ನ ತಾಯಿಯನ್ನು ಹೊತ್ತುಕೊಂಡು ಹಾದಿಯಲ್ಲಿ ಬೇಗನೆ ಹೋಗುತ್ತಿದ್ದನು.

ತದಾ ಮಾಂ ಗರ್ಭಗಂ ಜ್ಞಾತ್ವಾ ನಾರದೋ ದೇವದರ್ಶನಃ ।
ಆಗತ್ಯೇಂದ್ರ ಜಗಾದೋಚ್ಚೈಃ ಮೂಢ ಮುಞ್ಚ ಪತಿವ್ರತಾಮ್ ॥ ೨೦ ॥

ಅಸ್ಯಾ ಗರ್ಭೇ ಸ್ಥಿತೋ ಯೋಽಸೌ ಸ ವೈ ಭಾಗವತೋತ್ತಮಃ ।
ತಚ್ಛ್ರುತ್ವಾ ನಾರದವಚೋ ಮಾತರಂ ಪ್ರಣಿಪತ್ಯ ಮೇ ॥ ೨೧ ॥

ವಿಷ್ಣುಭಕ್ತ್ಯಾ ಪ್ರಮುಚ್ಯಾಥ ಗತಃ ಸ್ವಂ ಭವನಂ ಹರಿಃ ।
ನಾರದಸ್ತಾಂ ಸಮಾನೀಯ ಆಶ್ರಮಂ ಸ್ವಂ ಶುಭವ್ರತಃ ॥ ೨೨ ॥

ಮಾಮುದ್ದಿಶ್ಯ ಮಹಾಭಾಗ ಏತದ್ವೈ ಕಥಿತಂ ತದಾ ।
ತಥಾ ಮೇ ವಿಸ್ಮೃತಂ ನೈವ ಬಾಲ್ಯಾಭ್ಯಾಸಾದ್ದನೋಃ ಸುತಾಃ ॥ ೨೩ ॥

ವಿಷ್ಣೋಶ್ಚಾನುಗ್ರಹೇಣೈವ ನಾರದಸ್ಯೋಪದೇಶತಃ ॥ ೨೪ ॥

೨೦-೨೪. ಆಗ ದಿವ್ಯಜ್ಞಾನಿಯಾದ ನಾರದನು ನಾನು ಗರ್ಭದಲ್ಲಿ ಇದ್ದುದನ್ನು ತಿಳಿದು ಬಂದು, ಇಂದ್ರನಿಗೆ ಅಬ್ಬರಿಸಿ, ಇಂತು ಹೇಳಿದನು. 'ಎಲೈ ಮೂಢನೇ! ಈ ಪತಿವ್ರತೆಯನ್ನು ಬಿಡು.

ಇವಳ ಗರ್ಭದಲ್ಲಿ ಯಾವನಿರುವನೋ, ಅವನು ಭಾಗವತರಲ್ಲಿ ಉತ್ತಮನು ;' ಎಂದು ಹೇಳಲು, ಆಗ ಇಂದ್ರನು ಆ ನಾರದನ ನುಡಿಯನ್ನು ಕೇಳಿ, ನನ್ನ ತಾಯಿಗೆ ನಮಸ್ಕರಿಸಿ, ಅನಂತರದಲ್ಲಿ ಶ್ರೀ ವಿಷ್ಣುವಿನಲ್ಲಿ ಭಕ್ತಿಯಿಂದ ಕೂಡಿ, ಅವಳನ್ನು ಬಿಟ್ಟು, ತನ್ನ ಲೋಕಕ್ಕೆ ತೆರಳಿದನು. ಶುಭವ್ರತನಾದ ನಾರದನು ಅವಳನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಬಂದು, 'ಎಲೈ ಪುಣ್ಯಶಾಲಿಗಳಿರಾ! ಆಗ ನನ್ನನ್ನುದ್ದೇಶಿಸಿ, ಇವನ್ನು ಈಗ ನಿಮಗೆ ಹೇಳಿದುದನ್ನು ಹೇಳಿದನು.

ಎಲೈ ದಾನವರೇ! ಹಾಗೆಯೇ ಕಿರಿಯತನದಲ್ಲಿ ಕಲಿತುದರಿಂದಲೂ, ಶ್ರೀ ಮಹಾವಿಷ್ಣುವಿನ ಅನುಗ್ರಹದಿಂದಲೂ, ನಾರದಮುನಿಯ ಉಪದೇಶದ ಹಿರಿಮೆಯಿಂದಲೂ, ನಾನು ಮರೆಯಲಿಲ್ಲವು ; ಎಂದು ಪ್ರಹ್ಲಾದನು ಹೇಳಿದನು.

॥ ಮಾರ್ಕಂಡೇಯ ಉವಾಚ ॥

ಏಕದಾ ನಿಷ್ಪ್ರಚರ್ಯಾಯಾಂ ಗತೋಽಸೌ ರಾಕ್ಷಸಾಧಿಪಃ ॥ ೨೫ ॥

ಶೃಣೋತಿ ರಾತ್ರೌ ನಗರೇ ಜಯರಾಮೇತಿ ಕೀರ್ತನಮ್ ।
ಅನ್ವೈತ್ಪುತ್ರಕೃತಂ ಸರ್ವಂ ಬಲವಾನ್ ದಾನವೇಶ್ವರಃ ॥ ೨೬ ॥

ಅಥಾಹೂಯಾಽಽಹ ದೈತ್ಯೇಂದ್ರಃ ಕ್ರೋಧಾಂಧಃ ಸ ಪುರೋಹಿತಾನ್ ।
ರೇ ರೇ ಕ್ಷುದ್ರದ್ವಿಜಾ ಯೂಯಂ ಮತಿಜ್ಞಾ ಮೂರ್ಖತಾಂ ಗತಾಃ ॥ ೨೭ ॥

ಪ್ರಹ್ಲಾದೋಽಯಂ ಮೃಷಾಽಽಲಾಪಾನ್ ವಕ್ತ್ಯನ್ಯಾನ್ ಪಾತಯಂತಿ ಚ ।
ಇತಿ ನಿರ್ಭರ್ತ್ಸ್ಯ ತಾನ್ ವಿಪ್ರಾನ್ ಶ್ವಸನ್ ರಾಜಾಽವಿಶದ್ಗೃಹಮ್ ॥ ೨೮ ॥

೨೫-೨೬. ಮಾರ್ಕಂಡೇಯಮುನಿಯು ಹೇಳುತ್ತಾನೆ :–' ಒಮ್ಮೆ ಈ ರಕ್ಕಸರೊಡೆಯನಾದ ಹಿರಣ್ಯಕಶಿಪುವು ಜನಗಳ ವ್ಯಾಪಾರ ಶೂನ್ಯವಾದ ರಾತ್ರಿಯ ಹೊತ್ತಿನಲ್ಲಿ ಪಟ್ಟಣದಲ್ಲಿ ಸಂಚಾರ ಹೊರಟವನು ' ಜಯರಾಮ ' (ಶ್ರೀರಾಮನೇ ! ಸರ್ವೋತ್ಕೃಷ್ಟನಾಗಿರು ; ಶ್ರೀರಾಮನೇ ! ನಿನಗೆ ನಮಸ್ಕಾರ !) ಎಂಬ ಕೀರ್ತನವನ್ನು (ನಾಮೋಚ್ಚಾರಣೆಯನ್ನು) ಕೇಳಿದನು. ಆ ಬಲಿಷ್ಠನಾದ ದಾನವೇಂದ್ರನು ಅದೆಲ್ಲವೂ ಮಗನಾದ ಪ್ರಹ್ಲಾದನ ಮಾಟವೆಂದರಿತನು.

೨೭. ಅನಂತರದಲ್ಲಿ ಮುನಿಸುಗುರುಡನಾದ ಆ ರಕ್ಕಸರೊಡೆಯನು ಪುರೋಹಿತರನ್ನು ಕುರಿತು ಇಂತು ಹೇಳಿದನು–' ಎಲೈ, ಎಲೈ, ಚತುರರಾದ ಕ್ಷುದ್ರದ್ವಿಜರೇ ! ನೀವು ಹಿಂಸಕರಾದಿರಿ.

೨೮. ' ಈ ಪ್ರಹ್ಲಾದನು ಅನೃತವಚನಗಳನ್ನಾಡುತ್ತಾನೆ ; ಇತರರನ್ನೂ ಮೋಸಗೊಳಿಸಿ ಕೆಡಹುತ್ತಾನೆ ; ಇಂತು ಆ ಬ್ರಾಹ್ಮಣರನ್ನು ಕೊಕ್ಕರಿಸಿ ನುಡಿದು, ರಾಯನು ನಿಡುಸುಯ್ದು, ತನ್ನ ಮನೆಯನ್ನು ಹೊಕ್ಕನು.

ನ ಚ ಪುತ್ರವಧೇ ಚಿಂತಾಂ ಜಹೌ ಸ್ವವಧಕಾರಿಣೀಮ್ ।
ಆಸನ್ನಮರಣೋಽಮರ್ಷಃ ಕೃತ್ಯಮೇಕೋ ವಿಮೃಶ್ಯ ಸಃ ॥ ೨೯ ॥

ಅಕೃತ್ಯಮೇವ ದೈತ್ಯಾದೀನ್ ಆಹೂಯೋಪಾದಿಶದ್ರಹಃ ।
ಅದ್ಯ ಕ್ಷಪಾಯಾಂ ಪ್ರಹ್ಲಾದಂ ಪ್ರಸುಪ್ತಂ ದುಷ್ಟಮುಲ್ಬಣೈಃ ॥ ೩೦ ॥

ನಾಗಪಾಶೈರ್ದೃಢಂ ಬದ್ಧ್ವಾ ಮಧ್ಯೇ ನಿಕ್ಷಿಪತಾಂಬುಧೇಃ ।
ತದಾಜ್ಞಾಂ ಶಿರಸಾಽಽದಾಯ ದದೃಶುಸ್ತಮುಪೇತ್ಯ ತೇ ॥ ೩೧ ॥

ರಾತ್ರಿಪ್ರಿಯಂ ಸಮಾಧಿಸ್ಥಂ ಪ್ರಬುದ್ಧಂ ಸುಪ್ತವತ್ ಸ್ಥಿತಮ್ ।
ಸಂಭಿನ್ನರಾಗಲೋಭಾದಿಮಹಾಬಂಧಂ ಕ್ಷಪಾಚರಾಃ ॥ ೩೨ ॥

೨೯-೩೧. ಸಾವು ಹತ್ತಿರಕ್ಕೆ ಬಂದಿರುವ ಆ ಹಿರಣ್ಯಕಶಿಪುವು ಸಹನೆಯಿಲ್ಲದವನಾಗಿ ತನ್ನ ಕೊಲೆಯನ್ನೆಸಗುವ ಮಗನ ಕೊಲೆಯ ಚಿಂತೆಯನ್ನು ಬಿಡಲೇ ಇಲ್ಲ. ಅವನೊಬ್ಬನೇ ಬಂದು, ಕೆಲಸವನ್ನು ವ್ಯವಸ್ಥಿಸಿ, ಭಟರು, ರಕ್ಕಸರು — ಇವರೇ ಮೊದಲಾದವರನ್ನು ಕರೆದು ಗುಟ್ಟಿನಲ್ಲಿ ಮಾಡಬಾರದ ಕೆಲಸವನ್ನೇ ಉಪದೇಶಿಸಿದನು.

'ಎಲೈ ರಕ್ಕಸಭಟರೇ ! ಇಂದು ರಾತ್ರಿಯಲ್ಲಿ ನಿದ್ರೆಗೆಯ್ಯುತ್ತಿರುವ ಪ್ರಹ್ಲಾದನನ್ನು ಸಮರ್ಥಗಳಾದ ನಾಗಪಾಶಗಳಿಂದ ಬಲವಾಗಿ ಕಟ್ಟಿ, ಸಮುದ್ರದ ನಡುವೆ ಎಸೆದುಬಿಡಿರಿ ;' ಎಂದು ಹಿರಣ್ಯಕಶಿಪುವು ಅಪ್ಪಣೆಮಾಡಿದನು. ಆ ಭಟರು ಆ ಅಣತಿಯನ್ನು ತಲೆಯಲ್ಲಿ ಧರಿಸಿ, (ಪ್ರಹ್ಲಾದನು ಮಲಗಿದ್ದೆಡೆಗೆ) ಬಂದು, ಅವನನ್ನು ನೋಡಿದರು.

೩೨-೪೨. ಪ್ರಾಣಿಗಳಿಗೆ ರಾತ್ರಿಯಂತಿರುವ ಭಗವತ್ಸ್ವರೂಪವು ಇಷ್ಟವಾಗಿವುಳ್ಳ, ಭಗವಂತನ ಅಖಂಡವಾದ ಧ್ಯಾನರೂಪವಾದ ಸಮಾಧ್ಯವಸ್ಥೆಯಲ್ಲಿರುವ, ಎಚ್ಚೆತ್ತಿದ್ದವನಾದರೂ ಮಲಗಿದವನಂತೆ ಇದ್ದ, ವಿಷಯಾಸಕ್ತಿ, ಅತ್ಯಾಶೆ- ಇವೇ ಮೊದಲಾದ ದೊಡ್ಡ ಕಟ್ಟನ್ನು ಕತ್ತರಿಸುವ, ಮಹಾತ್ಮನಾದ ಆ ಪ್ರಹ್ಲಾದನನ್ನು

ಬಬಂಧುಸ್ತಂ ಮಹಾಬಾಹುಂ ಫಲ್ಗುಭಿಃ ಸರ್ಪರಜ್ಜುಭಿಃ ।
ಗರುಡಧ್ವಜಭಕ್ತಂ ತಂ ಬದ್ಧ್ವಾಽಹಿಭಿರಬುದ್ಧಯ ॥ ೩೩ ॥

ಜಲಶಾಯಿಪ್ರಿಯಂ ನೀತ್ವಾ ಜಲರಾಶೌ ನಿಚಿಕ್ಷಿಪುಃ ।
ಬಲಿನಸ್ತೇಽಚಲಾನ್ ದೈತ್ಯಾಸ್ತಸ್ಯೋಽಪರಿ ನಿಧಾಯ ಚ ॥ ೩೪ ॥

ಶಶಂಸುಸ್ತಂ ಪ್ರಿಯಂ ರಾಜ್ಞೇ ದ್ರುತಂ ತಾನ್ ಸೋಽಪ್ಯಮಾನಯತ್ ।
ಪ್ರಹ್ಲಾದಂ ಚಾಬ್ಧಿಮಧ್ಯಸ್ಥಂ ತಮೌರ್ವಾಗ್ನಿಮಿವಾಪರಮ್ ॥ ೩೫ ॥

ಜ್ವಲಂತಂ ತೇಜಸಾ ವಿಷ್ಣೋರ್ಗ್ರಾಹಾ ಭೂರಿಭಿಯಾಽತ್ಯಜನ್ ।
ಸ ಚಾಭಿನ್ನಚಿದಾನಂದಸಿಂಧುಮಧ್ಯಃ ಸಮಾಹಿತಃ ॥ ೩೬ ॥

ಆ ನಿಶಾಚರರು ದುರ್ಬಲವಾದ ನಾಗಪಾಶಗಳಿಂದ ಕಟ್ಟಿದರು. ವಿವೇಕವಿಲ್ಲದ ಆ ದೈತ್ಯರು ಗರುಡಧ್ವಜನಾದ ಶ್ರೀ ಮಹಾವಿಷ್ಣುವಿನ ಭಕ್ತನಾದ ಆ ಪ್ರಹ್ಲಾದನನ್ನು ಹಾವುಗಳಿಂದ ಕಟ್ಟಿದವರಾಗಿ, ಜಲಶಾಯಿಯಾದ ಶ್ರೀಮನ್ನಾರಾಯಣನಿಗೆ ಪ್ರಿಯನಾದವನನ್ನು ಒಯ್ದು, ಮುನ್ನೀರಿನಲ್ಲಿ ಎಸೆದರು. ಆ ದೈತ್ಯರು ಅವನ ಮೇಲೆ ಬಲವಾದ ಪರ್ವತಗಳನ್ನು ಹೇರಿ, ಬೇಗನೆ ಹಿಂದಕ್ಕೆ ಬಂದು, ಆ ಹಿತವಾದ ಸಮಾಚಾರವನ್ನು ದೈತ್ಯೇಂದ್ರನಾದ ಹಿರಣ್ಯಕಶಿಪುವಿಗೆ ಬಿನ್ನವಿಸಿದರು. ಆ ರಾಜನೂ ಆ ದೈತ್ಯಭಟರಿಗೆ ಬಹುಮಾನವಿತ್ತನು.

ಸಮುದ್ರದ ಒಳಗೆ ಅಡಗಿರತಕ್ಕ ಬೇರೆಯಾದ ಬಡಬಾಗ್ನಿಯಂತೆ, ಶ್ರೀಮಹಾವಿಷ್ಣುವಿನ, ತೇಜದಿಂದ ಜ್ವಲಿಸುತ್ತಾ, ಮುನ್ನೀರ ನಡುವೆಯಿದ್ದ ಪ್ರಹ್ಲಾದನನ್ನು ಕಂಡು, ಜಲಜಂತುಗಳಾದ ತಿಮಿಂಗಿಲಾದಿಗಳು ಬಹು ಭಯದಿಂದ ಬಿಟ್ಟು, ದೂರ ಹೋದುವು.

ಸಮಾಧಿಗೊಂಡು, ಅಖಂಡವಾದ ಬ್ರಹ್ಮಜ್ಞಾನದಿಂದುಂಟಾದ ಸಂತಸದಿಂದ ಸಮುದ್ರದ ನಡುವೆಯಿದ್ದ ಆ ಪ್ರಹ್ಲಾದನಾದರೋ, ತಾನು ನಾಗಪಾಶಗಳಿಂದ ಕಟ್ಟಿಸಿಕೊಂಡು, ಲವಣೋದಕಸಮುದ್ರದ ನಡುವೆ ಇರುವುದನ್ನು ಅರಿಯಲಿಲ್ಲ.

ನ ವೇದ ಬದ್ಧಮಾತ್ಮಾನಂ ಲವಣಾಂಬುಧಿ ಮಧ್ಯಗವ್ ।
ಅಥ ಬ್ರಹ್ಮಾಪ್ಯುತಾಂಭೋಧಿನಯೋ ಸ್ವಸ್ಮಿನ್ ಸ್ಥಿತೇ ಮುನೌ ॥ ೩೭ ॥

ಯಯೌ ಕ್ಷೋಭಂ ದ್ವಿತೀಯಾಬ್ಧಿಪ್ರವೇಶಾದಿವ ಸಾಗರಃ ।
ಕ್ಲೇಶಾನ್ ಕ್ಲೇಶಾನಿವೋದ್ಧೂಯ ಪ್ರಹ್ಲಾದಮಥವೀಚಯಃ ॥ ೩೮ ॥

ನಿನ್ಯುಸ್ತರಿಪ್ಲವೋಂಭೋಧೇಃ ಗುರೂಕ್ತಯ ಇವಾಂಬುಧಿಃ ।
ಧ್ಯಾನೇನ ವಿಷ್ಣುಭೂತಂ ತಂ ಭಗವಾನ್ ವರುಣಾಲಯಃ ॥ ೩೯ ॥

ವಿನ್ಯಸ್ಯ ತೀರೇ ರತ್ನಾನಿ ಗೃಹೀತ್ವಾ ದ್ರಷ್ಟುಮಾಯಯೌ ।
ತಾವದ್ಭಗವತಾಽಽದಿಷ್ಟಃ ಪ್ರಹೃಷ್ಟಃ ಪನ್ನಗಾಶನಃ ॥ ೪೦ ॥

ಬಂಧನಾದೀನ್ ಸಮಭ್ಯೇತ್ಯ ಭಕ್ಷಯಿತ್ವಾ ಪುನರ್ಯಯೌ ।
ಅಥಾಬಭಾಷೇ ಪ್ರಹ್ಲಾದಂ ಗಂಭೀರಧ್ವನಿರರ್ಣವಃ ॥ ೪೧ ॥

ಅನಂತರದಲ್ಲಿ ಜ್ಞಾನಿಯಾದ ಪ್ರಹ್ಲಾದನು ಸಮುದ್ರದಂತಿರುವ ಪರಬ್ರಹ್ಮನ ಅಪರೋಕ್ಷಾಮೃತದಿಂದ ತನ್ನಲ್ಲಿ ಉಂಟಾದ ಆನಂದದಲ್ಲಿರುತ್ತಿರಲು, ಸಾಗರವು ಎರಡನೆಯ ಸಮುದ್ರವು ಒಳಹೊಕ್ಕಂತೆ ಉಲ್ಲೋಲಕಲ್ಲೋಲವಾಗಿ ಕಲಕಿ ಹೋಯಿತು. ಅನಂತರದಲ್ಲಿ ತರಂಗಗಳು ಪ್ರಹ್ಲಾದನನ್ನು ಸಕಲ ಸಂಕಷ್ಟಗಳನ್ನೂ ಕೊಡಹಿ, ಶ್ರಮವನ್ನು ಗುರೂಪದೇಶಗಳಂತೆ ಸಮುದ್ರರಾಜನು ಹಡಗುಗಳಿಂದ ದಾಟತಕ್ಕ ವಾರಿಧಿಯನ್ನು ದಾಟಿಸಿದನು.

ಪೂಜ್ಯನಾದ ಸಮುದ್ರರಾಜನು ಧ್ಯಾನದಿಂದ ಶ್ರೀಮಹಾವಿಷ್ಣುವಿನ ವಿಶೇಷ ಸನ್ನಿಧಾನಕ್ಕೆ ಒಡೆಯನಾದ ಆ ಪ್ರಹ್ಲಾದನನ್ನು ತೀರದಲ್ಲಿರಿಸಿ, ರತ್ನಗಳನ್ನು ತೆಗೆದುಕೊಂಡು ನೋಡಲು ಬಂದನು. ಅಷ್ಟರಲ್ಲಿ ಶ್ರೀಮಹಾವಿಷ್ಣುವಿನಿಂದ ಆಜ್ಞಪ್ತನಾದ, ಸರ್ಪಗಳೇ ಆಹಾರವಾಗಿ ಉಳ್ಳ ಗರುಡದೇವನು ಸಂತಸಗೊಂಡವನಾಗಿ ಅಲ್ಲಿಗೆ

ಪ್ರಣಮ್ಯ ದಿವ್ಯರೂಪಃ ಸನ್ ಶಯನಾಧಿಷ್ಠಿತಂ ಹರೇಃ ಪ್ರಿಯಮ್ ।
ಪ್ರಹ್ಲಾದ ಭಗವದ್ಭಕ್ತ ಪುಣ್ಯಾತ್ಮನ್ನರ್ಣವೋಽಸ್ಮ್ಯಹಮ್ ॥ ೪೨ ॥

ಚಕ್ಷುರ್ಭ್ಯಾಮಥ ಮಾಂ ದೃಷ್ಟ್ವಾ ಪಾವಯಾರ್ಥಿನಮಾಗತಮ್ ।
ಇತ್ಯಂಬುಧೇರ್ಗಿರಃ ಶ್ರುತ್ವಾ ಸ ಮಹಾತ್ಮಾ ಹರೇಃ ಪ್ರಿಯಃ ॥ ೪೩ ॥

ಉದ್ವೀಕ್ಷ್ಯ ಸಹಸಾ ದೇವಂ ತಂ ನತ್ವಾಹಾಸುರಾತ್ಮಜಃ ।
ಕದಾಗತಂ ಭಗವತಾ ತಮಥಾಂಬುಧಿರಬ್ರವೀತ್ ॥ ೪೪ ॥

ಯೋಗಿನ್ನಜ್ಞಾತವೃತ್ತಸ್ತ್ವಮಪರಾದ್ಧಂ ತವಾಸುರೈಃ ।
ಬದ್ಧಸ್ತ್ವಮಹಿಭಿರ್ದೈತ್ಯೈರ್ಮಯಿ ಕ್ಷಿಪ್ತೋಽದ್ಯ ವೈಷ್ಣವ ॥ ೪೫ ॥

ಬಂದು, ಪ್ರಹ್ಲಾದನಿಗೆ ಕಟ್ಟಿದ್ದ ಸರ್ಪಗಳೇ ಮುಂತಾದುವುಗಳನ್ನು ಕತ್ತರಿಸಿ ತಿಂದು, ಮತ್ತು ತನ್ನೆಡೆಗೆ ಹೊರಟುಹೋದನು. ಅನಂತರದಲ್ಲಿ ಸಮುದ್ರರಾಯನು ಗಂಭೀರ ಧ್ವನಿಯುಳ್ಳವನಾಗಿ ಪ್ರಹ್ಲಾದನಿಗೆ ಇಂತು ಹೇಳಿದನು.

೪೩-೪೪. ಸಮುದ್ರರಾಜನು ಉತ್ತಮವಾದ ಆಕಾರವನ್ನು ಹೊಂದಿ ಶ್ರೀಹರಿಗೆ ಪ್ರಿಯನಾದ ಸಮಾಧ್ಯವಸ್ಥೆಯಲ್ಲಿದ್ದ ಪ್ರಹ್ಲಾದನಿಗೆ ನಮಸ್ಕರಿಸಿ, ‘ ಎಲೈ ಭಗವದ್ಭಕ್ತನಾದ ಪ್ರಹ್ಲಾದನೇ ! ಪುಣ್ಯಾತ್ಮನೇ ! ನಾನು ಸಮುದ್ರರಾಯನು ; ನಿನ್ನ ಸಮೀಪಕ್ಕೆ ಬಂದಿರುವ, ನಿನ್ನ ಕರುಣೆಯನ್ನು ಬೇಡುತ್ತಲಿರುವ ನನ್ನನ್ನು ಕಣ್ದೆರದು ನೋಡಿ, ಪುನೀತನನ್ನಾಗಿ ಮಾಡು ; ’ ಎಂದು ನುಡಿಯಲು, ಶ್ರೀಹರಿಯ ಪ್ರಿಯನೂ, ಮಹಾತ್ಮನೂ ಆದ ಪ್ರಹ್ಲಾದನು ಇಂತು ಸಮುದ್ರರಾಜನ ನುಡಿಯನ್ನಾಲಿಸಿ, ತತ್‌ಕ್ಷಣವೇ ಮೇಲೆ ನೋಡಿ, ಅಸುರಕುಮಾರನು ಆ ಸಮುದ್ರರಾಜನಿಗೆರಗಿ, ‘ ಪೂಜ್ಯನೇ !ಯಾವಾಗ ಬಂದೆ?’ ಎಂದು ಕೇಳಿದನು. ಸಮುದ್ರನು ಬಳಿಕ ಅವನಿಗೆ ಇಂತೆಂದನು :—

೪೫. ‘ ಎಲೈ ವಿಷ್ಣುಭಕ್ತನಾದ ಜ್ಞಾನಿಯೇ ! ನೀನು ಈಗ ನಡೆದ ಯಾವ ಸಮಾಚಾರವನ್ನೂ ಅರಿಯೆ ; ರಕ್ಕಸರು ನಿನಗೆ ಅಪರಾಧವನ್ನೆಸಗಿದರು ; ಆ ದೈತ್ಯರು ನಿನ್ನನ್ನು ಸರ್ಪಪಾಶದಿಂದ ಕಟ್ಟಿ, ಇಂದು ನನ್ನಲ್ಲಿ ಎಸೆದರು.

ತತಸ್ತೂರ್ಣಂ ಮಯಾ ತೀರೇ ನ್ಯಸ್ತಸ್ತ್ವಂ ಫಣಿನಶ್ಚ ತಾನ್ ।
ಇದಾನೀಮೇವ ಗರುಡೋ ಭಕ್ಷಯಿತ್ವಾ ಗತೋ ಮಹಾನ್ ॥ ೪೬ ॥

ಮಹಾತ್ಮನ್ನನುಗೃಹ್ಣೀಷ್ವ ತ್ವಂ ಮಾಂ ಸತ್ಸಂಗಮರ್ಥಿನಮ್ ।
ಗೃಹಾಣೇಮಾನಿ ರತ್ನಾನಿ ಪೂಜ್ಯಸ್ತ್ವಂ ಮೇ ಹರಿರ್ಯಥಾ ॥ ೪೭ ॥

ಯದ್ಯಪ್ಯೇತೈರ್ನ ತೇ ಕೃತ್ಯಂ ರತ್ನೈರ್ದಾಸ್ಯಾಮ್ಯಥಾಪ್ಯಹಮ್ ।
ದೀಪಾನ್ನಿವೇದಯತ್ಯೇವ ಭಾಸ್ಕರಸ್ಯಾಪಿ ಭಕ್ತಿಮಾನ್ ॥ ೪೮ ॥

ತ್ವಮಾಪತ್ಸ್ವಪಿ ಘೋರಾಸು ವಿಷ್ಣುನೈವ ಹಿ ರಕ್ಷಿತಃ ।
ತ್ವಾದೃಶಾ ನಿರ್ಮಲಾತ್ಮಾನೋ ನ ಸಂತಿ ಬಹವೋಽರ್ಕವತ್ ॥ ೪೯ ॥

---

೪೬. ಬಳಿಕ ನಾನು ನಿನ್ನನ್ನು ತಡಿಯಲ್ಲಿ ಬೇಗನೆ ತಂದು ಇಟ್ಟೆನು. ಈಗ ತಾನೇ ಶ್ರೇಷ್ಠನಾದ ಗರುಡದೇವನು ಕಟ್ಟಿದ್ದ ನಿನಗೆ ಆ ನಾಗಪಾಶಗಳನ್ನು ಕತ್ತರಿಸಿ ತಿಂದು, ಹೊರಟುಹೋದನು.

೪೭. ಎಲೈ ಮಹಾತ್ಮನೇ ! ಸಜ್ಜನರ ಸಹವಾಸವನ್ನು ಬಯಸುವ ನನ್ನನ್ನು ನೀನು ಅನುಗ್ರಹಿಸು ; ಈ ರತ್ನಗಳನ್ನು ತೆಗೆದುಕೊ, ಶ್ರೀಹರಿಯಂತೆ ನೀನೂ ನನಗೆ ಪೂಜ್ಯನು.

೪೮. ನಿನಗೆ ಈ ರತ್ನಗಳಿಂದ ಯಾವ ಪ್ರಯೋಜನವೂ ಇಲ್ಲವು ; ಆದರೂ ನಾನು ಕೊಡುವೆನು ; ಭಕ್ತಿಯುಳ್ಳವನು ಸೂರ್ಯದೇವನಿಗೂ ದೀಪಗಳನ್ನು ಅರ್ಪಿಸಿಯೇ ತೀರುತ್ತಾನೆ.

೪೯. ಬಹು ಭಯಂಕರಗಳಾದ ಕೇಡುಗಳಲ್ಲಿಯೂ ಶ್ರೀ ಮಹಾವಿಷ್ಣುವೇ ನಿನ್ನನ್ನು ರಕ್ಷಿಸಿದನು. ಅರ್ಕನಂತೆ ನಿನ್ನಂಥ ಪವಿತ್ರಾತ್ಮರು ಅನೇಕರು ಇಲ್ಲವು.

ಬಹುನಾ ಕಿಂ ಕೃತಾರ್ಥೋಽಸ್ಮಿ ಯತ್ತಿಷ್ಠಾಮಿ ತ್ವಯಾ ಸಹ ।
ಆಲಪಾಮಿ ಕ್ಷಣಮಪಿ ನೇಕ್ಷೇ ಹ್ಯೇತತ್ಫಲೋಪಮಾಮ್ ॥ ೫೦ ॥

ಇತ್ಯಬ್ಧಿನಾ ಸ್ತುತಃ ಶ್ರೀಶಮಾಹತ್ಮ್ಯವಚನೈಃ ಸ್ವಯಮ್ ।
ಯಯೌ ಲಜ್ಜಾಂ ಪ್ರಹರ್ಷಂ ಚ ಪ್ರಹ್ಲಾದೋ ಭಗವತ್ಪ್ರಿಯಃ ॥ ೫೧ ॥

ಪ್ರತಿಗೃಹ್ಯ ಸ ರತ್ನಾನಿ ವತ್ಸಲಃ ಪ್ರಾಹ ವಾರಿಧಿಮ್ ।
ಮಹಾತ್ಮನ್ ಸುತರಾಂ ಧನ್ಯಃ ಶೇತೇ ತ್ವಯಿ ಹಿ ಸ ಪ್ರಭುಃ ॥ ೫೨ ॥

ಕಲ್ಪಾಂತೇಽಪಿ ಜಗತ್ಕೃತ್ಸ್ನಂ ಗ್ರಸಿತ್ವಾ ಸ ಜಗನ್ಮಯಃ ।
ತ್ವಯ್ಯೇವೈಕಾರ್ಣವೀಭೂತೇ ಶೇತೇ ಕಿಲ ಮಹಾತ್ಮನಿ ॥ ೫೩ ॥

---

೫೦. ಬಹೂಕ್ತಿಯಿಂದೇನು? ಯಾವ ಕಾರಣದಿಂದ ನಿನ್ನ ಸಂಗಡ ಚಣವಾದರೂ ಮಾತನಾಡುತ್ತಾ ಇರುತ್ತೇನೆಯೋ, ಅದರಿಂದ ನಾನು ಕೃತಾರ್ಥನಾದೆನು. ಈ ಫಲಕ್ಕೆಣೆಯಾದುದನ್ನು ನಾನು ನೋಡುವುದಿಲ್ಲವು.

೫೧. ಇಂತು ಕಡಲೊಡೆಯನಿಂದ ದೇವರ ಮಹಾತ್ಮ್ಯೆಯ ನುಡಿಗಳಿಂದ ಕೊಂಡಾಡಿಸಿಕೊಂಡ, ಭಗವಂತನಿಗೆ ಪ್ರಿಯನಾದ ಪ್ರಹ್ಲಾದನು ತಾನೇ ನಾಚಿಕೆಯನ್ನೂ, ಆನಂದವನ್ನೂ ಹೊಂದಿದನು.

೫೨. ವತ್ಸಲನಾದ ಪ್ರಹ್ಲಾದನು ಆ ರತ್ನಗಳನ್ನು ಸ್ವೀಕರಿಸಿ, ಆ ಮುನ್ನೀರೊಡೆಯನಿಗೆ, ಎಲೈ ಮಹಾತ್ಮನೆ ! ಆ ಪ್ರಭುವಾದ ಶ್ರೀಹರಿಯು ನಿನ್ನಲ್ಲಿ ಮಲಗಿರುತ್ತಾನೆ. ನೀನೇ ಧನ್ಯನು. (ಪುಣ್ಯವಂತನು.)

೫೩. ಆ (ಜಗನ್ಮಯನಾದ) ವಿರಾಡ್ರೂಪನಾದ ಶ್ರೀಹರಿಯು ಬ್ರಹ್ಮಕಲ್ಪದ ಕೊನೆಯಲ್ಲಿ, ಈ ಜಗತ್ತನ್ನೆಲ್ಲಾ ನುಂಗಿ, ಒಂದೇ ಮುನ್ನೀರಾದ ನಿನ್ನಲ್ಲಿ ಮಲಗುತ್ತಾನಷ್ಟೆ !

ಲೋಚನಾಭ್ಯಾಂ ಜಗನ್ನಾಥಂ ದ್ರಷ್ಟುಮಿಚ್ಛಾಮಿ ವಾರಿಧೇ ।
ತ್ವಂ ಪಶ್ಯಸಿ ಸದಾಧನ್ಯಸ್ತತ್ರೋಪಾಯಂ ಪ್ರಯಚ್ಛ ಮೇ ॥ ೫೪ ॥

ಉಕ್ತ್ವೇತಿ ಪಾದಾವನತಂ ತೂರ್ಣಮುತ್ಥಾಪ್ಯ ಸಾಗರಃ ।
ಪ್ರಹ್ಲಾದಃ ಪ್ರಾಹ ಯೋಗೀಂದ್ರ ತ್ವಂ ಪಶ್ಯಸಿ ಸದಾ ಹೃದಿ ॥ ೫೫ ॥

ದ್ರಷ್ಟುಮಿಚ್ಛಸ್ಯಥಾಕ್ಷಿಭ್ಯಾಂ ಸ್ತುಹಿ ತಂ ಭಕ್ತವತ್ಸಲಮ್ ।
ಉಕ್ತ್ವೇತಿ ಸಿಂಧುಃ ಪ್ರಹ್ಲಾದಮಥ ಚ ಸ್ವಜಲೇಽವಿಶತ್ ॥ ೫೬ ॥

ಗತೇ ನದೀಂದ್ರೇ ಸ್ಥಿತ್ವೈಕೋ ಹರಿಂ ರಾತ್ರೌ ಸ ದೈತ್ಯಜಃ ।
ಭಕ್ತ್ಯಾಽಸ್ತೌದಿತಿ ಮನ್ವಾನಃ ತದ್ದರ್ಶನಮಸಂಭವಮ್ ॥ ೫೭ ॥

---

೫೪. ಎಲೈ ವಾರಿಧಿಯೇ ! ಈ ಕಂಗಳಿಂದ ಜಗದೊಡೆಯನಾದ ಶ್ರೀಮಹಾವಿಷ್ಣುವನ್ನು ನೋಡಲೆಳಸುತ್ತೇನೆ. ನೀನಾದರೋ ಯಾವಾಗಲೂ ಅವನನ್ನು ನೋಡುತ್ತಿರುತ್ತೀಯೆ; ನೀನೇ ಧನ್ಯನು; ಶ್ರೀಹರಿಯನ್ನು ಕಾಣುವ ವಿಷಯದಲ್ಲಿ ನನಗೆ ಉಪಾಯವನ್ನು ಹೇಳು ;' ಎಂದು ಕೇಳಿದನು.

೫೫-೫೬. ಇಂತು ನುಡಿದ, ತನ್ನ ಅಡಿಗಳಿಗೆರಗಿದ ಆ ಪ್ರಹ್ಲಾದನನ್ನು ಆ ಸಾಗರನು ಮೇಲಕ್ಕೆ ಎತ್ತಿ, 'ಎಲೈ ಯೋಗಿಗಳೊಡೆಯನೇ ! ನೀನು ಯಾವಾಗಲೂ ಹೃದಯದಲ್ಲಿ ನೋಡುತ್ತಿರುತ್ತೀಯೆ; ಈಗ ಕಂಗಳಿಂದ ಕಾಣಲೆಳಸುವೆಯಾದರೆ, ಭಕ್ತವತ್ಸಲನಾದ ಶ್ರೀಹರಿಯನ್ನು ಸ್ತುತಿಸು ;' ಎಂದು ಹೇಳಿದನು. ಸಿಂಧುರಾಜನು ಇಂತು ಪ್ರಹ್ಲಾದನಿಗೆ ನುಡಿದು, ಬಳಿಕ ತನ್ನ ನೀರಿನಲ್ಲಿ ಹೊಕ್ಕನು.

೫೭. ನದಿಗಳ ಪತಿಯಾದ ಕಡಲೊಡೆಯನು ಅದೃಶ್ಯನಾಗಿ ಹೋಗಲು, ಆ ದೈತ್ಯಕುಮಾರನಾದ ಪ್ರಹ್ಲಾದನು ರಾತ್ರಿಯಲ್ಲಿ ಓರ್ವನೇ ಇದ್ದು, ಶ್ರೀಹರಿಯ ದರ್ಶನವು ದೊರೆಯುವುದು ಕಷ್ಟವೆಂದು ತಿಳಿಯುತ್ತಾ, ಅವನನ್ನು ಇಂತು ಭಕ್ತಿಯಿಂದ ಸ್ತುತಿಸಿದನು.

॥ ಪ್ರಹ್ಲಾದ ಉವಾಚ ॥

ವೇದಾಂತವಾಕ್ಯಶತಮಾರುತ ಸಂಪ್ರವೃದ್ಧ
ವೈರಾಗ್ಯ ವಹ್ನಿಶಿಖಯಾ ಪರಿತಾಪ್ಯ ಚಿತ್ತಮ್ ।
ಸಂಶೋಧಯಂತಿ ಯದವೇಕ್ಷಣ ಯೋಗ್ಯತಾಯೈ
ಧೀರಾಸ್ಸದೈವ ಸ ಕಥಂ ಮಮ ಗೋಚರಃ ಸ್ಯಾತ್ ॥ ೫೮ ॥

ಮಾತ್ಸರ್ಯರೋಷಸ್ಮರಲೋಭಮೋಹ-
ಮದಾದಿಭಿರ್ನಾ ಸುದೃಢೈಃ ಸುಷಡ್ಭಿಃ ।
ಉಪರ್ಯುಪರ್ಯಾಚರಣೈಃ ಸುಬದ್ಧ-
ಮಂಧಂ ಮನೋ ಮೇ ಕ್ವ ಹರಿಃ ಕ್ವ ವಾಹಮ್ ॥ ೫೯ ॥

---

೫೮. ಪ್ರಹ್ಲಾದನು ಹೇಳುತ್ತಾನೆ,— ‘ (ವಿಕಾರಕಾರಣವಿದ್ದರೂ ವಿಕಾರಕ್ಕೊಳಗಾದವರು) ಧೀರರು ನೂರಾರು ಉಪನಿಷದ್ವಚನಗಳೆಂಬ ವಾಯುವಿನಿಂದ ಉರಿಗೊಂಡ ವೈರಾಗ್ಯವೆಂಬ ಅಗ್ನಿಯ ಜ್ವಾಲೆಯಿಂದ ಚಿತ್ತವನ್ನು ಸುಟ್ಟು ಯಾವ ಶ್ರೀಹರಿಯನ್ನು ಕಾಣುವ ಅರ್ಹತೆಗಾಗಿ ಯಾವಾಗಲೂ ಅದನ್ನು ಶೋಧಿಸುತ್ತಾರೆಯೋ, ಆ ಶ್ರೀಹರಿಯು ನನಗೆ ಹೇಗೆ ಕಾಣಿಸುವನು ? (ಕಾಣಿಸುವುದು ಕಷ್ಟವು).

೫೯. ನನ್ನ ಮನವಾದರೋ ಮೇಲಿಂದಮೇಲೆ ಆಚರಿಸುವುದರಿಂದ ಬಲವಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ಕಟ್ಟುಗಳಿಂದ ಕಟ್ಟಲ್ಪಟ್ಟು ಕುರುಡಾಗಿರುವುದು. ಇಂತಿರುವ ಮನದ ನಾವೆಲ್ಲಿ? ಆ ಶ್ರೀಹರಿಯೆಲ್ಲಿ ? (ನನಗೂ ಶ್ರೀಹರಿಗೂ ಬಹುದೂರವಿರುವುದು.)

ಯಂ ಧಾತೃಮುಖ್ಯಾ ವಿಬುಧಾ ಭಯೇಷು
ಶಾಂತ್ಯರ್ಥಿನಃ ಕ್ಷೀರನಿಧೇರುಪಾಂತಮ್ ।
ಗತ್ವೋತ್ತಮ ಸ್ತೋತ್ರ ಕೃತಃ ಕಥಂಚಿ-
ತ್ಪಶ್ಯಂತಿ ತಂ ದ್ರಷ್ಟುಮಹೋ ಮಮಾಶಾ ॥ ೬೦ ॥

ಅಯೋಗ್ಯಮಾತ್ಮಾನಮಿತೀಶದರ್ಶನೇ
ಸ ಮನ್ಯಮಾನಃ ತದನಾಪ್ತಿಕಾತರಃ ।
ಉದ್ವೇಗದುಃಖಾರ್ಣವಮಗ್ನಮಾನಸಃ
ಸ್ರುತಾಶ್ರುಧಾರೋ ನೃಪಮೂರ್ಛಿತೋಽಪತತ್ ॥ ೬೧ ॥

ಅಥ ಕ್ಷಣಾತ್ಸರ್ವಗತಶ್ಚತುರ್ಭುಜಃ
ಶುಭಾಕೃತಿರ್ಭಕ್ತ ಜನೈಕವಲ್ಲಭಃ ।

---

೬೦. ಭಯಕಾಲಗಳಲ್ಲಿ ಚತುರ್ಮುಖಬ್ರಹ್ಮನೇ ಮುಂದಾಳಾದ ದೇವತೆಗಳು ಶಾಂತಿಯನ್ನೆಳಸುವವರಾಗಿ, ಪಾಲ್ಗಡಲ ತಡಿಗೆ ಹೋಗಿ, ಉತ್ತಮವಾದ ಸ್ತೋತ್ರಗಳನ್ನು ಹಾಡಿದವರಾಗಿ, ಯಾವ ಶ್ರೀಹರಿಯನ್ನು ಬಹು ಪ್ರಯಾಸದಿಂದ ನೋಡುತ್ತಾರೆಯೋ, ಅಂತಹ ಶ್ರೀಹರಿಯನ್ನು ನೋಡಲು ನನಗೆ ಆಸೆಯು; ಇದು ಆಶ್ಚರ್ಯವು;' ಎಂದು ಪ್ರಹ್ಲಾದನು ಚಿಂತಿಸುತ್ತಿದ್ದನು.

೬೧. ಎಲೈ ಸಹಸ್ರಾನೀಕರಾಯನೇ ಆ ಪ್ರಹ್ಲಾದನು ತಾನು ಶ್ರೀಹರಿಯನ್ನು ಕಾಣುವುದಕ್ಕೆ ಅಯೋಗ್ಯನು; ಎಂದು ತಿಳಿಯುತ್ತಾ, ಆ ಈ ದರ್ಶನವನ್ನು ಹೊಂದದೆ ಕಂಗೆಟ್ಟವನಾಗಿ, ಉಬ್ಬೆಗದಿಂದುಂಟಾದ ದುಮ್ಮಾನವೆಂಬ ಮುನ್ನೀರೊಳಗೆ ಮುಳುಗಿದ ಮನವುಳ್ಳವನಾಗಿ, ಎಡಬಿಡದೆ ಕಂಬನಿಗರೆಯುತ್ತಾ, ಮೂರ್ಛೆಗೆ ಸಂದು, ಕೆಳಗೆ ಬಿದ್ದನು.

೬೨. ಎಲೈ ಭೂಪತಿಯೇ ! ಕೇಳು ಬಳಿಕ ಚಣದಿಂದಲೇ ಸರ್ವವಸ್ತುಗಳಲ್ಲಿ, ಸರ್ವ ಪ್ರದೇಶಗಳಲ್ಲಿ ಇರುವುವನೂ, ನಾಲ್ಕು ತೋಳಿನವನೂ, ಮಂಗಳಾಕಾರನೂ,

ದುಃಸ್ಥಂ ತಮಾಶ್ಲಿಷ್ಯ ಸುಧಾಮಯೈರ್ಭುಜೈ-
ಸ್ತತ್ರೈವ ಭೂಪಾವಿರಭೂದ್ದಯಾನಿಧಿಃ ॥ ೬೨ ॥

ಸ ಲಬ್ಧಸಂಜ್ಞೋಽಥ ತದಂಗಸಂಗಾ-
ದುನ್ಮೀಲಿತಾಕ್ಷಃ ಸಹಸಾ ದದರ್ಶ ।
ಪ್ರಸನ್ನವಕ್ತ್ರಂ ಕಮಲಾಯತಾಕ್ಷಂ
ಸುದೀರ್ಘಬಾಹುಂ ಯಮುನಾಸವರ್ಣಮ್ ॥ ೬೩ ॥

ಉದಾರತೇಜೋಮಯಮಪ್ರಮೇಯಂ
ಗದಾರಿಶಂಖಾಂಬುಜಚಾರುಚಿಹ್ನಿತಮ್ ।
ಸ್ಥಿತಂ ಸಮಾಲಿಂಗ್ಯ ವಿಭುಂ ಸ ದೃಷ್ಟ್ವಾ
ಪ್ರಕಂಪಿತೋ ವಿಸ್ಮಯಭೀತಿಹರ್ಷೈಃ ॥ ೬೪ ॥

ಬಕುತ ಜನರಲ್ಲಿ ಹೆಚ್ಚಾಗಿ ಪ್ರೀತಿಯುಳ್ಳವನೂ, ಕರುಣೆಯ ನಿಧಿಯೂ ಆದ ಶ್ರೀ ಹರಿಯು ಅಲ್ಲಿಯೇ ಆವಿರ್ಭವಿಸಿ, ಎಚ್ಚರಿಕೆಯಿಲ್ಲದೆ ಬಿದ್ದಿದ್ದ ಆ ಪ್ರಹ್ಲಾದನನ್ನು ಅಮೃತಮಯಗಳಾದ ತನ್ನ ತೋಳ್ಗಳಿಂದ ತಕ್ಕೈಸಿದನು.

೬೩-೬೪. ಅನಂತರ ಆ ಪ್ರಹ್ಲಾದನು ಶ್ರೀಹರಿಯ ಒಡಲು ತಗುಲಿದುದರಿಂದ ಎಚ್ಚರಗೊಂಡವನಾಗಿ, ಕಣ್ಗಳನ್ನು ತೆರೆದು, ಇದ್ದಕ್ಕಿದ್ದ ಹಾಗೆಯೇ ಸಂತಸದ ಮೊಗದ, ತಾವರೆಯಂತೆ ಅಗಲಿತಾದ ಕಣ್ಗಳ, ನಿಡಿದಾದ ತೋಳ್ಗಳ, ಜಗುನೆಯ ಬಣ್ಣದ, ತೇಜದೊಬ್ಬುಳಿಯ, ಸಂಪೂರ್ಣವಾಗಿ ಅರಿಯಲಾಗದ, ಗದೆ, ಚಕ್ರ, ಸಂಕು, ತಾವರೆ ಗಳಿಂದ ಗಾಡಿವೆತ್ತಿರುವ, ತನ್ನನ್ನು ತಕ್ಕೈಸಿರುವ, ಒಡೆಯನಾದ ಶ್ರೀಹರಿಯನ್ನು ಕಂಡನು. ಇಂತು ಕಂಡು ಆ ಬಾಲಕನು ಅಚ್ಚರಿಯಂಜಿಕೆಯದುಕುಳಿಗಳಿಂದ ನಡುಗಿದನು.

ತತ್ಸ್ವಪ್ನಮೇವಾಥ ಸ ಮನ್ಯಮಾನಃ
ಸ್ವಪ್ನೇಽಪಿ ಪಶ್ಯಾಮಿ ಹರಿಂ ಕೃತಾರ್ಥಮ್ ।
ಇತಿ ಪ್ರಹರ್ಷಾರ್ಣವಮಗ್ನ ಚೇತಾಃ
ಸ್ವಾನಂದಮೂರ್ತಿಂ ಸ ಪುನಶ್ಚ ಭೇಜೇ ॥ ೬೫ ॥

ತತಃ ಕ್ಷಿತಾವೇವ ನಿವಿಶ್ಯ ನಾಥಃ
ಕೃತ್ವಾ ತಮಂಕೇ ಸ್ವಜನೈಕಬಂಧುಃ ।
ಶನೈರ್ವಿಧುನ್ವನ್ ಕರಪಲ್ಲವೇನ
ಸ್ಪೃಶನ್ ಮುಹುರ್ಮಾತೃವದಾಲಿಲಿಂಗ ॥ ೬೬ ॥

ತತಶ್ಚಿರೇಣ ಪ್ರಹ್ಲಾದಃ ಸನ್ಮುಖೋನ್ಮೀತೇಕ್ಷಣಃ ।
ಆಲುಲೋಕ ಜಗನ್ನಾಥಂ ವಿಸ್ಮಯಾವಿಷ್ಟಚೇತಸಾ ॥ ೬೭ ॥

---

೬೫. ಅನಂತರದಲ್ಲಿ ಪ್ರಹ್ಲಾದನು ಆ ಹರಿದರ್ಶನವನ್ನೂ ಸ್ವಪ್ನವನ್ನಾಗಿ ತಿಳಿಯುತ್ತಾ, ಕನಸಿನಲ್ಲಿಯೂ ಪೂರ್ಣನಾದ ಹರಿಯನ್ನು ಕಾಣುತ್ತೇನೆಂದು ಸುಮ್ಮಾನಗಡಲಲ್ಲಿ ಮುಳುಗಿದ ಮನವುಳ್ಳವನಾಗಿ, ಮತ್ತೂ ತನ್ನ ಆನಂದ ರೂಪವಾದ ಮೂರ್ತಿಯನ್ನೈದಿದನು.

೬೬. ಬಳಿಕ ತನ್ನವರಲ್ಲಿ ಮುಖ್ಯ ನಂಟನಾದ, ಒಡೆಯನಾದ, ಶ್ರೀಹರಿಯು ನೆಲದಲ್ಲಿಯೇ ಕುಳಿತು, ಆ ಪ್ರಹ್ಲಾದನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಮೆಲ್ಲಗೆ ತಳಿರಂತಿರುವ ಕೈಯಿಂದ ಗಾಳಿ ಹಾಕುತ್ತಾ, ಅಡಿಗಡಿಗೆ ಮುಟ್ಟುತ್ತಾ, ತಾಯಂತೆ ಅಪ್ಪಿದನು.

೬೭. ಸಮನಂತರದಲ್ಲಿ ಪ್ರಹ್ಲಾದನು ಮನೋಹರವಾದ ಮೊಗವಲ್ಲಿ ಬಹು ಹೊತ್ತಿನಮೇಲೆ, ತೆರೆದ ಕಂಗಳುಳ್ಳವನಾಗಿ ಆಚ್ಚರಿಗೊಂಡ ಮನದಿಂದ ಜಗದ ಒಡೆಯನನ್ನು ನೋಡಿದನು.

ತತಶ್ಚಿರಾತ್ತಂ ಸಂಭಾವ್ಯ ಧೀರಃ ಶ್ರೀಶಾಂಕಶಾಯಿನಮ್ ।
ಆತ್ಮಾನಂ ಸಹಸೋತ್ತಸ್ಥೌ ಸದ್ಯಃ ಸಭಯಸಂಭ್ರಮಃ ॥ ೬೮ ॥

ಪ್ರಣಾಮಾಯಾಪತಚ್ಛೋರ್ವ್ಯಾಂ ಪ್ರಸೀದೇತಿ ವದನ್ ಮುಹುಃ ।
ಸಂಭ್ರಮಾತ್ಸ ಬಹುಜ್ಞೋಽಪಿ ನಾನ್ಯಾಂ ಪೂಜೋಕ್ತಿಮಸ್ಮರತ್ ॥ ೬೯ ॥

ತಮುಥಾಭಯಹಸ್ತೇನ ಗದಾಶಂಖಾರಿಧೃಕ್ ಪ್ರಭುಃ ।
ಗೃಹೀತ್ವಾ ಸ್ಥಾಪಯಾಮಾಸ ಪ್ರಹ್ಲಾದಂ ಸ ದಯಾನಿಧಿಃ ॥ ೭೦ ॥

ಕರಾಬ್ಜಸ್ಪರ್ಶನಾಹ್ಲಾದಗಲದಶ್ರುಂ ಸವೇಪಥುಮ್ ।
ಭೂಯೋಽಥಾಹ್ಲಾದಯನ್ ಸ್ವಾಮೀ ತಂ ಜಗಾದೇತಿ ಸಾಂತ್ವಯನ್ ॥ ೭೧ ॥

---

೬೮. ಬಳಿಕ ಧೀರನಾದ ಪ್ರಹ್ಲಾದನು ಬಹು ಹೊತ್ತಾದಮೇಲೆ, ತಾನು ಶ್ರೀಹರಿಯ ತೊಡೆಯ ಮೇಲೆ ಮಲಗಿರುವುದನ್ನು ಅರಿತು, ತತ್ಕ್ಷಣವೇ ಅಂಜಿಕೆ ಸಡಗರಗಳೊಡನೆ ದಿಮ್ಮನೆದ್ದನು.

೬೯. ಆ ಪ್ರಹ್ಲಾದನು 'ಭಗವಂತನೇ! ಪ್ರಸನ್ನನಾಗು ;' ಎಂದು ಪದೇ ಪದೇ ಬೇಡುತ್ತಾ, ಪೊಡಮೊಡಲು ನೆಲದ ಮೇಲೆ ಬಿದ್ದನು. ಬಹುಜ್ಞನಾದರೂ ಸಂಭ್ರಮದಿಂದ ಇತರವಾದ ಪೂಜೋಕ್ತಿಗಳನ್ನು ನೆನೆಯಲಿಲ್ಲ.

೭೦. ಶಂಖಚಕ್ರಗದಾಪದ್ಮಧರನಾದ, ಕರುಣಾನಿಧಿಯಾದ ಆ ಸ್ವಾಮಿಯು ಆ ಪ್ರಹ್ಲಾದನನ್ನು ತನ್ನ ಅಭಯಹಸ್ತದಿಂದ ಹಿಡಿದು ನಿಲ್ಲಿಸಿದನು.

೭೧. ಭಗವಂತನೂ, ಸಕಲ ಲೋಕಸ್ವಾಮಿಯೂ ಆದ ಶ್ರೀಹರಿಯು ಕೈದಾವರೆಯ ಸೋಂಕಿನಿಂದಾದ ಸಂತಸದಿಂದ ಸುರಿಯುತ್ತಲಿರುವ ಕಂಬನಿಯ, ನಡುಕದ ಬಾಲನನ್ನು ಮತ್ತೂ ಸಂತೋಷಗೊಳಿಸುತ್ತ, ಇಂತು ನುಡಿದನು.

ಸಭಯಂ ಸಂಭ್ರಮಂ ವತ್ಸ ಮದ್ಗೌರವಕೃತಂ ತ್ಯಜ ।
ನೈವಂ ಪ್ರಿಯೋ ಮೇ ಭಕ್ತೇಷು ಸ್ವಾಧೀನಪ್ರಣಯೀ ಭವ ॥ ೭೨ ॥

ನಿತ್ಯಂ ಸಂಪೂರ್ಣಕಾಮಸ್ಯ ಜನ್ಮಾನಿ ವಿವಿಧಾನಿ ಮೇ ।
ಭಕ್ತಸರ್ವೇಷ್ಟದಾನಾಯ ತಸ್ಮಾತ್ಕಿಂ ತೇ ಪ್ರಿಯಂ ವದ ॥ ೭೩ ॥

ಅಥ ವ್ಯಜಿಜ್ಞಪದ್ವಿಷ್ಣುಂ ಪ್ರಹ್ಲಾದಃ ಪ್ರಾಂಜಲಿರ್ನಮ್ರ ।
ಸಲೌಲ್ಯಮುತ್ಫುಲ್ಲದೃಶಾ ಪಶ್ಯನ್ನೇವಂ ಚ ತನ್ಮುಖಮ್ ॥ ೭೪ ॥

ನಾಪ್ಯಯಂ ವರದಾನಾಯ ಕಾಲೋ ನೈಷ ಪ್ರಸೀದ ಮೇ ।
ತ್ವದ್ದರ್ಶನಾಮೃತಾಸ್ವಾದಾದಂತರಾತ್ಮಾ ನ ತೃಪ್ಯತಿ ॥ ೭೫ ॥

---

೭೨. ‘ಎಲೈ ವತ್ಸನೇ ! ನನ್ನಲ್ಲಿ ನಿನಗಿರುವ ಗೌರವದಿಂದುಂಟಾದ ಭಯ ಸಂಭ್ರಮಗಳನ್ನು ಬಿಡು; ನನಗೆ ಭಕ್ತರಲ್ಲಿ ನಿನ್ನಷ್ಟು ಪ್ರಿಯನಾದವನಾವನೂ ಇಲ್ಲವು; ನಾನು ನಿನಗೆ ಒಗ್ಗಿದ ಒಡೆಯನು.

೭೩. ನಿತ್ಯದಲ್ಲಿಯೂ ಪೂರ್ಣಕಾಮನಾದ ನಾನು ಬಕುತರೆಳಿಸಿದುದನ್ನು ಈವುದಕ್ಕಾಗಿ ನಿತ್ಯಗಳಾದ ಅನೇಕಾವತಾರಗಳುಳ್ಳವನಾಗಿದ್ದೇನೆ. (ಅವೂ ಪೂರ್ಣಕಾಮುಗಳು) ಆದುದರಿಂದ ನಿನಗಿಷ್ಟವಾದುದಾವುದೋ, ಅದನ್ನು ಹೇಳು; ಕೊಡುವೆನು.

೭೪. ಬಳಿಕ ಆ ಪ್ರಹ್ಲಾದನು ಬೊಗಸೆಗೊಂಡು ಬಾಗಿದವನಾಗಿ, ಅರಳಿದ ಕಣ್ಗಳಿಂದ ಚಂಚಲತೆಯೊಡಗೂಡಿ, ಶ್ರೀ ಮ ಹಾ ವಿ ಷ್ಣು ವಿ ನ ಮೊಗವನ್ನೇ ನೋಡುತ್ತಾ, ಇಂತು ಬಿನ್ನವಿಸಿದನು.

೭೫. ‘ಎಲೈ ಸರ್ವೇಶ್ವರನೇ ! ಈ ಸಮಯವು ವರಗಳನ್ನೀವ ಸಮಯವಲ್ಲವು; ಪ್ರಸನ್ನನಾಗು; ನನ್ನ ಮನವು ನಿನ್ನ ದರ್ಶನಾಮೃತದ ಸವಿಯಿಂದ ತೃಪ್ತಿಯನ್ನೈಯ್ದುವುದಿಲ್ಲವು.

ಬ್ರಹ್ಮಾದಿದೇವೈರ್ದುರ್ಲಕ್ಷಂ ತ್ವಾಮೇವಂ ಪಶ್ಯತಃ ಪ್ರಭೋ ।
ತೃಪ್ತಿಂ ನೇಷ್ಯತಿ ಮೇ ಚಿತ್ತಂ ಕಲ್ಪಾಯುತಶತೈರಪಿ ॥ ೭೬ ॥

ನೈವ ಮಾತರ್ಜ್ಞತಸ್ತಸ್ಯ ತ್ವಾಂ ದೃಷ್ಟ್ವಾಽನ್ಯದ್ವೃಣೋಮಿ ಕಿಮ್ ।
ತತಃ ಸ್ಮಿತಸುಧಾಪೂರೈಃ ಪೂರಯನ್ ಸ ಪ್ರಿಯಂ ಪ್ರಿಯಾತ್ ॥ ೭೭ ॥

ಯೋಜಯನ್ ಮೋಕ್ಷಲಕ್ಷ್ಮ್ಯೈವ ತಂ ಜಗಾದ ಜಗತ್ಪತಿಃ ।
ಸತ್ಯಂ ಮದ್ದರ್ಶನಾದನ್ಯದ್ವತ್ಸ ನೈವಾಸ್ತಿ ತೇ ಪ್ರಿಯಮ್ ॥ ೭೮ ॥

ಕಿಂ ಚಿತ್ರೇ ದಾತುಮಿಷ್ಟಂ ಮೇ ಮತ್ಪ್ರಿಯಾರ್ಥಂ ವೃಣೀಷ್ವ ತತ್ ।
ಪ್ರಹ್ಲಾದೋಽಥಾಽಬ್ರವೀದ್ಧೀಮಾನ್ ದೇವ ಜನ್ಮಾಂತರೇಷ್ವಪಿ ॥ ೭೯ ॥

೭೬.೭೮. ಬ್ರಹ್ಮಾದಿದೇವತೆಗಳಿಗೂ ನೋಡಲಸಾಧ್ಯವಾದ ನಿನ್ನನ್ನು ಇಂತು ನೋಡುತ್ತಲಿರುವ ನನ್ನ ಮನಸ್ಸು ಹತ್ತುಲಕ್ಷ ಬ್ರಹ್ಮಕಲ್ಪಗಳಿಂದಲೂ ತೃಪ್ತಿಪಡೆವುದಿಲ್ಲವು. ಅನೇಕ ತೆರನಾದ ಮನವಬೇಗೆಯಿಂದ ಸಂತಾಪಗೊಂಡವನಿಗೆ ಇದು ಇಂತಲ್ಲವು. ನಿನ್ನನ್ನು ಕಂಡು ಬೇರೆ ಯಾವುದನ್ನಾದರೂ ಬೇಡುವೆನೇನು ? (ಇಲ್ಲವು.) ಎಂದು ಪ್ರಹ್ಲಾದನು ಬಿನ್ನವಿಸಿದನು.

ಅನಂತರದಲ್ಲಿ ಜಗತ್ಪತಿಯಾದ ಶ್ರೀಹರಿಯು ಮುಗುಳ್ನಗೆಯ ಸೊದೆಯ ಹೊನಲಿನಿಂದ ಇನಿದರಿಂದಿನಿದಾದುದನ್ನು ತುಂಬುತ್ತಾ, ಅವನನ್ನು ಮುಕುತಿಲಕುಮಿಯಿಂದ ಸೇರಿಸುವನಂತೆ ಇಂತೆಂದನು. ‘ ಎಲೈ ವತ್ಸನೇ ! ನನ್ನ ನೋಟಕ್ಕಿಂತಲೂ ಬೇರೆ ಇನಿದಾದುದು ನಿನಗೆ ಯಾವುದೂ ಇಲ್ಲವು. ಇದು ದಿಟವು.

೭೯-೮೦. ನನಗಾದರೋ, ನಿನಗೇನನ್ನಾದರೂ ಕೊಡಬೇಕೆಂದಿಷ್ಟವಿದೆ. ನನಗೆ ಪ್ರಿಯವನ್ನುಂಟುಮಾಡುವ ಸಲುವಾಗಿಯಾದರೂ ಅದನ್ನು ಕೇಳು ;’ ಎಂದು ಭಗವಂತನು ಹೇಳಿದನು. ಅನಂತರದಲ್ಲಿ ಜ್ಞಾನಿಯಾದ ಪ್ರಹ್ಲಾದನು ಹೇಳಿದನು :—

ದಾಸಸ್ತ್ವಾಹಂ ಭೂಯಾಸಂ ಗುರುತ್ಮಾನಿವ ಭಕ್ತಿಮಾನ್ ।
ಅಥಾಹ ನಾಥಃ ಪ್ರಹ್ಲಾದಂ ಸಂಕಟಂ ಖಲ್ವಿದಂ ಕೃತಮ್ ॥ ೮೦ ॥

ಅಹಂ ತವಾತ್ಮದಾನೇಚ್ಛುಸ್ತ್ವಂ ತು ಭೃತ್ಯತ್ವಮಿಚ್ಛಸಿ ।
ವರಾನನ್ಯಾಂಶ್ಚ ವರಯ ಧೀರ್ಮನ್ ದೈತ್ಯೇಶ್ವರಾತ್ಮಜ ॥ ೮೧ ॥

ಪ್ರಹ್ಲಾದೋऽಪಿ ಪುನಃ ಪ್ರಾಹ ಭಕ್ತೇಕಾಮುಪ್ರದಂ ಹರಿಮ್ ।
ಪ್ರಸೀದ ಸಾऽಸ್ತು ಮೇ ನಾಥ ತ್ವದ್ಭಕ್ತಿಃ ಸ್ವಾತ್ವಿಕೀ ಸ್ಥಿರಾ ॥ ೮೨ ॥

ಅಥಾನಯಾ ಚ ತ್ವಾಂ ನೌಮಿ ನೃತ್ಯಾಮಿ ತ್ವತ್ಪರಸ್ಸದಾ ।
ಅಥಾಭಿತುಷ್ಟೋ ಭಗವಾನ್ ಪ್ರಿಯಮಾಹ ಪ್ರಿಯಂವದಮ್ ॥ ೮೩ ॥

'ಎಲೈ ದೇವನೇ! ಭಕ್ತಿವಂತನಾದ ಗರುಡನಂತೆ, ಮುಂದಣ ಜನ್ಮಗಳಲ್ಲಿಯೂ ನಾನು ನಿನಗೆ ದಾಸನಾಗಲೆಳಸುವೆನು;' ಎಂದನು. ಬಳಿಕ ಭಗವಂತನು ಪ್ರಹ್ಲಾದನಿಗೆ 'ಎಲೈ ವತ್ಸನೇ! ನೀನು ನನಗೆ ಈ ಸಂಕಟವನ್ನುಂಟುಮಾಡಿದೆಯಷ್ಟೆ!

೮೧. ನಾನು ನನ್ನನ್ನು ನಿನಗೆ ಕೊಡಲು ಇಚ್ಛೆಪಡುತ್ತೇನೆ. ನೀನಾದರೋ ಸೇವಕತ್ವವನ್ನು ಬಯಸುತ್ತೀಯೆ! ಎಲೈ ದೈತ್ಯೇಶ್ವರನ ಮಗನಾದ ಜ್ಞಾನಿಯೇ! ಬೇರೆ ಮತ್ತಾವ ವರಗಳನ್ನಾದರೂ ಬೇಡು;' ಎಂದು ಹೇಳಿದನು.

೮೨. ಪುನಃ ಪ್ರಹ್ಲಾದನೂ ಭಕುತರ ಅಪೇಕ್ಷೆಯನ್ನು ಈವ ಶ್ರೀ ಹರಿಯನ್ನು ಕುರಿತು ಇಂತು ಹೇಳಿದನು:— 'ಎಲೈ ನಾಥನೇ! ಪ್ರಸನ್ನನಾಗು; ನನಗೆ ಸಾತ್ವಿಕವೂ, ಸ್ಥಿರವೂ ಆದ ಆ ಬಕುತಿಯು ನಿನ್ನಲ್ಲಿ ಉಂಟಾಗಲಿ.

೮೩. ಬಳಿಕ ಈ ಬಕುತಿಯಿಂದ ಯಾವಾಗಲೂ ನಿನ್ನಲ್ಲಿ ಆಸಕ್ತನಾಗಿ, ನಿನಗೆ ವಂದಿಸುತ್ತೇನೆ; ಸಂತಸದಿಂದ ಕುಣಿಯುತ್ತೇನೆ;' ಎಂದು ಪ್ರಹ್ಲಾದನು ಬೇಡಿದನು. ಅನಂತರ ಭಗವಂತನು ಪ್ರಹ್ಲಾದನ ವಿಷಯದಲ್ಲಿ ಸಂತಸಗೊಂಡವನಾಗಿ, ಪ್ರಿಯಂವದನಾದ ಅವನಿಗೆ ಹಿತವಾದುದನ್ನು ಹೇಳಿದನು.

ವತ್ಸ ಯದ್ಯದಭೀಷ್ಟಂ ತೇ ತತ್ತದಸ್ತು ಸುಖೀ ಭವ ।
ಅಂತರ್ಹಿತೇ ಚ ಮಯ್ಯತ್ರ ಮಾ ಖಿದ ತ್ವಂ ಮಹಾಮತೇ ॥ ೮೪ ॥

ತ್ವಚ್ಚಿತ್ತಾನ್ನಾಪಯಾಸ್ಯಾಮಿ ಕ್ಷೀರಾಬ್ಧೇರಿವ ಸುಪ್ರಿಯಾತ್ ।
ಪುನರ್ದ್ವಿತ್ರಿರ್ದಿನೈಸ್ತ್ವಂ ಮಾಂ ದ್ರಷ್ಟಾ ದುಷ್ಟವಧೋದ್ಯತಮ್ ॥ ೮೫ ॥

ಅಪೂರ್ವಾವಿಷ್ಕೃತಾಕಾರಂ ನೃಸಿಹಂ ಪಾಪಭೀಷಣಮ್ ।
ಉಕ್ತ್ವೇತ್ಯತಃ ಪ್ರಣಮತಃ ಪಶ್ಯತಶ್ಚಾತಿಲಾ ಲಸಮ್ ॥ ೮೬ ॥

ಅತುಷ್ಟಸ್ಯೈವ ತಸ್ಯೇಶೋ ಮಾಯಯಾಽಂತರ್ದಧೇ ಹರಿಃ ।
ತತೋ ಹತಾದದೃಷ್ಟ್ವಾ ತಂ ಸರ್ವತೋ ಭಕ್ತವತ್ಸಲಮ್ ॥ ೮೭ ॥

ಹಾಹೇತ್ಯಶ್ರುಪ್ಲುತಃ ಪ್ರೋಚ್ಯ ವಪಂದೇ ಸ ಚಿರಾದಿತಿ ।
ಶ್ರೂಯಮಾಣೋಽಥ ಪರಿತಃ ಪ್ರತಿಬುದ್ಧಜನಸ್ವನಮ್ ॥ ೮೮ ॥

೮೪-೮೭. ' ಎಲೈ ವತ್ಸನೇ ! ನಿನಗೆ ಯಾವುದು ಇಷ್ಟವಾದುದೋ ಅವೆಲ್ಲವೂ ಸಿದ್ಧಿಸಲಿ ; ಸುಖಿಯಾಗಿರು ; ಎಲೈ ಮಹಾಮತಿಯೆ ! ಇಲ್ಲಿ ಈಗ ನಾನು ಕಣ್ಮರೆಯಾಗಲು, ನೀನು ದುಮ್ಮಾನಗೊಳ್ಳಬೇಡ.

ನನಗೆ ಪ್ರಿಯವಾದ ಪಾಲ್ಗಡಲಿಂದೆಂತೋ ಅಂತೆ ನಿನ್ನ ಮನಸ್ಸಿನಿಂದ ದೂರವಾಗಿರುವುದಿಲ್ಲವು ; ದುಷ್ಟನ ಕೊಲೆಯಲ್ಲಿ ತೊಡಗುವ, ಪಾಪಾತ್ಮರಿಗೆ ಭಯವನ್ನೆಸಗುವ, ಹಿಂದೆಯೆಂದೂ ತೋರದ ಆಕಾರವನ್ನು ಕಾಣಿಸುವ ನೃಸಿಂಹನಾದ ನನ್ನನ್ನು ನೀನು ಇನ್ನು ಎರಡು ಮೂರು ದಿನಗಳಲ್ಲಿ ನೋಡುವವನಾಗುವೆ ; ' ಎಂದು ಹೇಳಿ, ಅನಂತರದಲ್ಲಿ ಪೊಡಮಡುತ್ತಲಿರುವ, ತೃಪ್ತಿಪಡೆಯದ ಆ ಪ್ರಹ್ಲಾದನನ್ನು ಬಿಟ್ಟು, ಸರ್ವೇಶ್ವರನಾದ ಶ್ರೀಹರಿಯು ತನ್ನ ಇಚ್ಛೆಯಿಂದ ಮರೆಯಾದನು.

೮೮. ಅನಂತರದಲ್ಲಿ ಪ್ರಹ್ಲಾದನು ಎಲ್ಲಿಯೂ ಭಕ್ತವತ್ಸಲನಾದ ಶ್ರೀಹರಿಯನ್ನು ಕಾಣದೆ, ಕಂಬನಿಯಿಂದ ನನೆದವನಾಗಿ, ಹಾ ! ಹಾ ! ಎಂದು ಗಟ್ಟಿಯಾಗಿ ಕೂಗಿ ಎರಗಿದನು. ಬಳಿಕ ಪ್ರಹ್ಲಾದನು ಬಹುಕಾಲದ ಮೇಲೆ, ಸುತ್ತಲೂ ಎಚ್ಚರಗೊಂಡಿದ್ದ ಜನರ ಶಬ್ದವನ್ನು ಕೇಳಿದನು.

ಉತ್ಥಾಯಾಬ್ಧಿತಟಾದ್ಧೀಮಾನ್ ಪ್ರಹ್ಲಾದಃ ಸ್ವಪುರಂ ಯಯೌ ॥ ೮೯ ॥

ಅಥ ದಿತಿಜಸುತಶ್ಚಿರಂ ಪ್ರಹೃಷ್ಟಃ
ಸ್ಮೃತಿಬಲತಃ ಪರಿತಸ್ತಮೇವಪಶ್ಯನ್ ।
ಹರಿಮನು ಜಗತಿ ತ್ವಲಂ ಚ ಪಶ್ಯನ್
ಗುರುಗೃಹಮುತ್ಫಲಕಃ ಶನೈರವಾಪ ॥ ೯೦ ॥

ಇತಿ ಶ್ರೀ ನರಸಿಂಹಪುರಾಣೇ ನರಸಿಂಹಪ್ರಾದುರ್ಭಾವೇ
ತ್ರಿಚತ್ವಾರಿಂಶೋಽಧ್ಯಾಯಃ

---

೮೯. ಅನಂತರದಲ್ಲಿ ಜ್ಞಾನಿಯಾದ ಪ್ರಹ್ಲಾದನು ಸಮುದ್ರದ ದಡದಿಂದ ಮೇಲಕ್ಕೆ ಎದ್ದು, ತನ್ನ ಪಟ್ಟಣಕ್ಕೆ ಹೋದನು.

೯೦. ಸಮುದ್ರದಲ್ಲಿ ಮುಳುಗುವವನು ಹಲಗೆಯಿಂದ ದಡ ಸೇರುವಂತೆ, ಪಟ್ಟಣಕ್ಕೆ ಬಂದ ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನು ಬಹುಕಾಲ ಸಂತಸಗೊಂಡವನಾಗಿ, ಸ್ಮರಣಸಾಮರ್ಥ್ಯದಿಂದ ಸುತ್ತಲೂ ಶ್ರೀಹರಿಯನ್ನೇ ನೋಡುತ್ತಾ, ಮೆಲ್ಲನೆ ಗುರುವಿನ ಮನೆಯನ್ನು ಹೊಂದಿದನು ; ' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ನರಸಿಂಹಾವತಾರ ಚರಿತ್ರೆಯಲ್ಲಿ
ನಲವತ್ತುಮೂರನೆಯ ಅಧ್ಯಾಯವು ಮುಗಿದುದು.

ನಲವತ್ತುಮೂರನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಮಾರ್ಕಂಡೇಯಮುನಿಯು, ಸಹಸ್ರಾನೀಕರಾಯನಿಗೆ 'ಪ್ರಹ್ಲಾದನು ಗುರುಕುಲವಾಸದಲ್ಲಿರುವಾಗ, ಯಾವಾಗಲೂ ಶ್ರೀಹರಿಯನ್ನೇ ಧ್ಯಾನಿಸುತ್ತಾ, ಹೊರಗಣ ವ್ಯಾಪಾರದಲ್ಲಿ ಜಡನಂತೆ ವರ್ತಿಸಿ, ಜಗತ್ತನ್ನೆಲ್ಲಾ ಅನಂತಮಯನನ್ನಾಗಿ ತಿಳಿದು ಹರ್ಷಿಸುತ್ತಿರಲು, ದೈತ್ಯಬಾಲಕರು ಅವನೊಡನೆ ಓದಿದವರು ಅವನ ನಡತೆಗೆ ಅಚ್ಚರಿಗೊಂಡು, ಅವನು ಹಾಗಿರಲು ಕಾರಣವೇನು ? ಮರವಾಜದೆ ಹೇಳಬೇಕೆನಲು, ಪ್ರಹ್ಲಾದನು ಆ ಬಾಲಕರಿಗೆ ' ಲೋಕದ ಯಾವ ಭೋಗಸಾಧನವೂ ನಿಜವಾದ ಸುಖವನ್ನುಂಟುಮಾಡತಕ್ಕದ್ದಲ್ಲ; ಗರ್ಭದಲ್ಲಿಯೂ, ಬಾಲ್ಯ, ಯೌವನ, ವಾರ್ಧಕಗಳಲ್ಲಿಯೂ ವಿಚಾರ ಮಾಡಿದರೆ ಕ್ಲೇಶವೇ ಹೊರತು ಸುಖಲೇಶವೂ ಇಲ್ಲವು.

ಅನ್ನ ಸಿಕ್ಕದೆ ಇರುವವನು ಹಿಂಡಿ ಮುಂತಾದುವನ್ನು ತಿನ್ನುವಂತೆ, ಬೇರೆ ಸುಖಸಾಧನವಿಲ್ಲದವನು ಐಹಿಕಗಳಾದ ಆಭಾಸಸುಖಸಾಧನಗಳನ್ನು ಬಯಸಬೇಕು. ಆದರೆ, ಯಾವ ದ್ರವ್ಯಾದಿಗಳ ಅಪೇಕ್ಷೆಯೂ ಇಲ್ಲದೆ, ಅನನ್ಯ ಭಕ್ತಿಯಿಂದ ಶ್ರೀ ಮಹಾ ವಿಷ್ಣುವಿನ ಶ್ರವಣ ಮನನ ನಿದಿಧ್ಯಾಸನಾದಿಗಳನ್ನೆಸಗಿದರೆ, ಅವನು ಪರಮಪ್ರೀತನಾಗಿ ಶಾಶ್ವತಸುಖವನ್ನುಂಟುಮಾಡುವನು; ' ಎಂದು ಹೇಳಲು, ಆ ಬಾಲಕರು ' ಶಂಡಾ ಮರ್ಕರೆಂಬ ಗುರುಗಳೇ ತಮಗೆ ಪೂಜ್ಯರು; ಹಿತರು; ಎಂದು ತಾವು ತಿಳಿದಿರುವುದಾಗಿಯೂ, ಅವನು ಹೇಳಿದುದು ಬೇರೆ ತೆರನಾಗಿದ್ದುದಾಗಿಯೂ ಹೇಳಿ ತಮಗೆ ದಿಟವಾವುದೋ ಅದನ್ನು ಹೇಳಿ, ಸಂಶಯವನ್ನು ಕಳೆಯಬೇಕು; ' ಎನಲು. ಆಗ ಪ್ರಹ್ಲಾದನು ' ಶ್ರೀ ವಿಷ್ಣುವೇ ಗತಿ; ಅವನು ಸರ್ವರಲ್ಲಿಯೂ ವ್ಯಾಪ್ತನಾಗಿನುವನು; ಇಂತು ತಿಳಿದು ತಾವು ಎಲ್ಲರಲ್ಲಿ ಪ್ರೀತಿಮಾಡತಕ್ಕದ್ದು; ' ಎಂದು ಕಲಿಸಿದನು. ಈ ಸಂಗತಿಯನ್ನು ತಾನು ತನ್ನ ತಾಯಿಯ ಗರ್ಭದಲ್ಲಿದ್ದಾಗ ದೇವಮುನಿಗಳಾದ ನಾರದರ ಉಪದೇಶದಿಂದ ಕಲಿತು ಭಗವದನುಗ್ರಹದಿಂದ ಮರೆಯದಿರುವೆನು; ಎಂದು ಹೇಳಿದನು.

ಒಮ್ಮೆ ರಾತ್ರಿ ಜನಗಳ ವ್ಯಾಪಾರವೆಲ್ಲಾ ಮುಗಿಗ ವೇಳೆಯಲ್ಲಿ ದೈತ್ಯೇಶ್ವರನು ಪಟ್ಟಣದಲ್ಲಿ ಸಂಚರಿಸಲು ಹೋದಾಗ, 'ಜಯರಾಮ; ಜಯರಾಮ;' ಎಂದು ಜನರು ಭಜನಮಾಡುತ್ತಿರುವುದನ್ನು ಕೇಳಿ, ಅದು ತನ್ನ ಮಗನ ಕೆಲಸವೆಂದರಿತು, ಅವನ ಗುರುವನ್ನು ಕರೆಗು ಹೀಯಾಳಿಸಿ, ಗೂಢವಾಗಿ ಪ್ರಹ್ಲಾದನ ಕೊಲೆಗೆಳಸಿ, ದೈತ್ಯಭಟರಿಗೆ ಅವನನ್ನು ನಾಗಪಾಶದಿಂದ ನಿದ್ರೆಮಾಡುತ್ತಿರುವಾಗ ಕಟ್ಟಿ, ಸಮುದ್ರದ ನಡುವೆ ಹಾಕಿ, ಮತ್ತೆ ಏಳದಂತೆ ಪರ್ವತವನ್ನೇ ಹೇರುವಂತೆ ಆಣತಿ ಈಯಲು, ಅವರು ಅಂತೆಯೇ ಎಸಗಿದರು. ಪ್ರಹ್ಲಾದನಾದರೋ ಯಾವಾಗಲೂ ಎಚ್ಚತ್ತಿರುತ್ತಿದ್ದರೂ, ಜನಗಳೆಲ್ಲರೂ ನಿದ್ರೆಗೆಯ್ಯುವಂತಿರುವ ರಾತ್ರಿಪ್ರಾಯನಾದ ಶ್ರೀಹರಿಯ ಧ್ಯಾನಾಸಕ್ತನಾಗಿ, ಸಮಾಧಿ ಪಡೆದಿದ್ದನು. ಅವನಿಗೆ ಇದೊಂದರ ಅರಿವೂ ಇಲ್ಲ; ಆಗ ಸಮುದ್ರರಾಜನು ಅವನನ್ನು ತನ್ನ ತೆರೆಗೈಯಿಂದ ದಡಕ್ಕೆ ಕರೆದುಕೊಂಡು ಬಂದು ಎಚ್ಚರಗೊಳಿಸಿ, ರತ್ನಗಳನ್ನು ಕಾಣಿಕೆಯಾಗಿ ಕೊಟ್ಟನು.

ಪ್ರಹ್ಲಾದನು ಅವನಿಗೆರಗಿ, ಸಮುದ್ರರಾಜನು ಯಾವಾಗಲೂ ಶ್ರೀಹರಿಗೆ ತಾನಿಂಬಾಗಿ, ಅವನನ್ನು ನೋಡುತ್ತಲೇ ಇರುವುದಾಗಿ ಹೇಳಿ, ತನಗೂ ಅವನನ್ನು ಹೊರಗಣ್ಣಿನಿಂದ ನೋಡುವ ಉಪಾಯವನ್ನು ತಿಳಿಸಬೇಕೆನಲು, ಸಮುದ್ರನು ಶ್ರೀಹರಿಯನ್ನು ಅನನ್ಯಭಕ್ತಿಯಿಂದ ಧ್ಯಾನ ಮಾಡುವಂತೆ ಹೇಳಿ ತನ್ನ ನೀರಿನಲ್ಲಿ ಮರೆಯಾದನು. ಇತ್ತ ಪ್ರಹ್ಲಾದನು ಭಗವಂತನನ್ನು ಸ್ತುತಿಸಲು, ಶ್ರೀಹರಿಯು ಪ್ರತ್ಯಕ್ಷನಾಗಲು, ಅವನನ್ನು ಕಣ್ಣಾರ ಕಂಡು, ಆನಂದಪಡುವುದಕ್ಕಾರಂಭಿಸಿದನು. ಆಗ ಶ್ರೀಹರಿಯು ಅವನಿಗೆ ಯಾವ ವರ ಬೇಕೆನಲು, ತನಗೆ ಯಾವುದೂ ಬೇಡ: ಅವನ ದಾಸ್ಯವೊಂದೇ ಬೇಕೆನಲು, ಹರಿಯು 'ತನಗೆ ಯಾವುದಾದರದನ್ನೂ ಕೊಡುವ ಇಚ್ಛೆಯಿದೆ; ಬೇಡು;' ಎನಲು ಆಗ ಪ್ರಹ್ಲಾದನು ಶ್ರೀಹರಿಯಲ್ಲಿ ಗರುಡನಂತೆ ಭಕ್ತಿಯನ್ನು ಮಾಡಲು ಜನ್ಮಾಂತರಗಳಲ್ಲಿ ಅನುಗ್ರಹಿಸೆನಲು, ದೇವರು ಹಾಗೆಯೇ ಆಗಲೆಂದು ಹೇಳಿ, ಇನ್ನು ಎರಡು ಮೂರು ದಿನಗಳಲ್ಲಿ ಮತ್ತೊಮ್ಮೆ ದುಷ್ಟನಾದ ನಿನ್ನ ತಂದೆಯ ವಧೆಗಾಗಿ ಅವತರಿಸುವ ಅತ್ಯಾಶ್ಚರ್ಯಕರವಾದ ನೃಸಿಂಹರೂಪನಾದ ತನ್ನನ್ನು ನೋಡಿಸುವುದಾಗಿಯೂ, ತಾನು ಯಾವಾಗಲೂ ಅವನ ಹೃದಯದಲ್ಲಿ

ಕಾಣಿಸುವವನಾಗಿಯೂ, ಆಗ ಮರೆಯಾಗುವುದಕ್ಕೆ ದುಃಖಪಡಬಾರದೆಂದೂ ಹೇಳಿ, ತನ್ನ ಇಚ್ಛಾರೂಪವಾದ ಮಾಯೆಯಿಂದ ಮರೆಯಾದನು. ಅನಂತರ ಪ್ರಹ್ಲಾದನು ದೇವರನ್ನು ಕಾಣದೆ ಹಾಹಾಕಾರಮಾಡಿ, ಭಗವಂತನನ್ನೇ ನೆನೆಯುತ್ತಾ, ಆನಂದಿಸಿದನು.

ತರುವಾಯ ಪ್ರಾತಃಕಾಲದಲ್ಲಿ ಜನರು ಎಚ್ಚತ್ತು ಮಾತನಾಡುವ ಧ್ವನಿಯನ್ನು ಕೇಳಿ, ಪ್ರಹ್ಲಾದನೂ ಸಮುದ್ರದ ಕರೆಯಿಂದೂರಿಗೆ ಬಂದು, ಮೆಲ್ಲನೆ ಗುರು ಗೃಹವನ್ನು ಸೇರಿ, ಶ್ರೀಹರಿಸರ್ವೋತ್ತಮತ್ವವನ್ನೂ, ಶ್ರೀಹರಿಯೇ ಸರ್ವಥಾ ಸೇವ್ಯನೆಂಬುದನ್ನೂ ದೈತ್ಯಬಾಲಕರಿಗೆ ಉಪದೇಶಿಸಿ, ಶ್ರೀಹರಿಯ ಧ್ಯಾನದಲ್ಲಿರುತ್ತಿದ್ದನು;" ಎಂದು ನಿರೂಪಿಸಿದುದನ್ನು ಸೂತರು ಭಾರದ್ವಾಜನಿಗೆ ಹೇಳಿರುತ್ತಾರೆ.

ಇಂತು ನಲವತ್ತುಮೂರನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಚತುಶ್ಚತ್ವಾರಿಂಶೋಽಧ್ಯಾಯಃ

ಶ್ರೀ ನರಸಿಂಹ ಪ್ರಾದುರ್ಭಾವಃ (ಅನುವೃತ್ತಃ)

॥ ಮಾರ್ಕಂಡೇಯ ಉವಾಚ ॥

ಅಥಾಗತಂ ತೇ ಪ್ರಹ್ಲಾದಂ ದೃಷ್ಟ್ವಾ ದೈತ್ಯಾಃ ಸುವಿಸ್ಮಿತಾಃ ।
ಶಶಂಸುರ್ದೈತ್ಯಪತಯೇ ಯಃ ಕ್ಷಿಪ್ತಃ ಸ ಮಹಾರ್ಣವೇ ॥ ೧ ॥

ಸ್ವಸ್ಥಂ ತಮಾಗತಂ ಶ್ರುತ್ವಾ ದೈತ್ಯರಾಡ್ವಿಸ್ಮಯಾಕುಲಃ ।
ಆಹೂಯತಾಂ ಸ ಇತ್ಯಾಹ ಕ್ರೋಧಾನ್ಮೃತ್ಯುವಶೇ ಸ್ಥಿತಃ ॥ ೨ ॥

ನಲವತ್ತುನಾಲ್ಕನೆಯ ಅಧ್ಯಾಯವು

ಶ್ರೀನರಸಿಂಹಾವತಾರವು (ಮುಂದುವರಿದುದು.)

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ:—'ಕೇಳು; ಸಹಸ್ರಾನೀಕರಾಯನೇ! ಯಾವ ರಕ್ಕಸರು ಪ್ರಹ್ಲಾದನನ್ನು ಮುನ್ನೀರಿನಲ್ಲಿ ನಾಗಪಾಶಗಳಿಂದ ಕಟ್ಟಿ ಎಸೆದರೋ, ಅವರು ಪ್ರಹ್ಲಾದನು ಹಿಂದಕ್ಕೆ ಬಂದಿರುವುದನ್ನು ಕಂಡು ಬೆರಗಾಗಿ, ದೈತ್ಯೇಂದ್ರನಾದ ಹಿರಣ್ಯಕಶಿಪುವಿಗೆ ಬಿನ್ನವಿಸಿದರು.

೨. ಮಾರಿಯ ಬಸದಲ್ಲಿದ್ದ ಆ ದೈತ್ಯರಾಯನು ಆ ಪ್ರಹ್ಲಾದನು ಯಾವ ಗಾಸಿಯಿಲ್ಲದೇ ಹಿಂದಕ್ಕೆ ಬಂದುದನ್ನು ಕೇಳಿ, ಕಟ್ಟಚ್ಚರಿಯಿಂದ ಕಲಕಿದವನಾಗಿ, ಮುಳಿಸಿನಿಂದ 'ಅವನನ್ನು ಕರೆಯಿರಿ;' ಎಂದನು.

ತಥಾ ಸುರೈರ್ದುರಾನೀತಃ ಸಮಾಸೀನಂ ಸ ದಿವ್ಯದೃಕ್ ।
ಆಸನ್ನಮೃತ್ಯುಂ ದೈತ್ಯೇಂದ್ರಂ ದದರ್ಶಾನೂರ್ಜಿತಶ್ರಿಯಮ್ ॥ ೩ ॥

ನೀಲಾಂಶುಮಿಶ್ರಮಾಣಿಕ್ಯದ್ಯುತಿಛನ್ನವಿಭೂಷಣಮ್ ।
ಸಧೂಮಾಗ್ನಿಮಿವ ವ್ಯಾಪ್ತಮುಚ್ಚಾಸನಚಿತಿಸ್ಥಿತಮ್ ॥ ೪ ॥

ದಂಷ್ಟ್ರೋತ್ಕಟೈರ್ಘೋರತರೈರ್ಘನಭವಿಭಿರುದ್ಭವೈಃ ।
ಕುಮಾರ್ಗದರ್ಶಿಭಿರ್ದೈತ್ಯೈಃ ಯಮದೂತೈರಿವಾವೃತಮ್ ॥ ೫ ॥

ದೂರಾತ್ಪ್ರಣಮ್ಯ ಪಿತರಂ ಪ್ರಾಂಜಲಿಸ್ತು ತಥಾ ಸ್ಥಿತಃ ।
ಅಥಾಹಾಕಾರಣಕ್ರೋಧಃ ಸ ಖಲೋ ಭರ್ತ್ಸಯನ್ ಸುತಮ್ ॥ ೬ ॥

ಭಗವತ್ಪ್ರಿಯಮತ್ಯುಚ್ಚೈರ್ಮೃತ್ಯುಮೇವಾಹ್ವಯನ್ನಿವ ।
ಮೂಢ ರೇ ಶೃಣು ಮದ್ವಾಕ್ಯಮೇತದೇವಾಂತಿಮಂ ಧ್ರುವಮ್ ॥ ೭ ॥

೩-೫. ಅಂತು ಅಸುರರಿಂದ ದುಃಖದಿಂದ ಕರೆತರಲ್ಪಟ್ಟ, ದಿವ್ಯಜ್ಞಾನಿಯಾದ ಆ ಪ್ರಹ್ಲಾದನು ಬಂದುದನ್ನು ಕೇಳಿ, ಕಟ್ಟಚ್ಚರಿಯಿಂದ ಕಲಕಿದವನಾಗಿ ಸನ್ನಿಹಿತವಾದ ಮೃತ್ಯುವುಳ್ಳವನೂ, ಏಳ್ಗಿವಡೆಯದ ಐಸಿರಿಯವನೂ ಆಗಿ ಕುಳಿತಿರುವ, ನೀಲಕಿರಣಗಳಿಂದ ಬೆರೆತ ಕೆಂಪಿನಕಾಂತಿಯಿಂದ ಮುಚ್ಚಿದ ತೊಡವುಗಳ, ಹಬ್ಬಿದ ಹೊಗೆಯ ಬೆಂಕಿಯಂತಿರುವ, ಎತ್ತರವಾದ ಗದ್ದುಗೆಯೆಂಬ ಸಿದ್ದಿಗೆಯಲ್ಲಿರುವ, ನಿಡಿದಾದ ಕೋರೆಹಲ್ಲುಗಳ, ಕಟ್ಟಂಜಿಕೆಯೆಸಗುವ, ಹುಟ್ಟನಿಂದ ಮೇಘವರ್ಣದ, ಕೆಟ್ಟ (ನಡತೆಯ) ಹಾದಿಯನ್ನು ತೋರಿಸುವ ಯಮನ ಭಟರಂತೆ ಕ್ರೂರಸ್ವಭಾವದ, ದೈತ್ಯರಿಂದ ಸುತ್ತುವರಿದವನಾದ ದೈತ್ಯೇಂದ್ರನನ್ನು ಕಂಡನು.

೬-೭. ಪ್ರಹ್ಲಾದನು ದೂರದಿಂದಲೇ ತಂದೆಗೆರಗಿ, ಬೊಗಸೆಯನ್ನು ತಾಳಿದ್ದನು. ಅನಂತರದಲ್ಲಿ ಕಾರಣವಿಲ್ಲದೆ ಕೋಪಮಾಡತಕ್ಕ ಆ ದುಷ್ಟನು ಮೃತ್ಯುವನ್ನೇ ಗಟ್ಟಿಯಾಗಿ ಕೂಗುವಂತೆ ಭಗವಂತನಿಗೆ ಇಷ್ಟನಾದ ಮಗನನ್ನು ಕೂಗಿ, ಜಬರಿಸುತ್ತಾ ಇಂತು ಹೇಳಿದನು :—'ಎಲೋ ಮೂಢ! ನನ್ನ ಮಾತನ್ನು ಕೇಳು; ನಿಶ್ಚಯವಾಗಿಯೂ ಇದೇ ನಿನಗೆ ಹೇಳುವ ಕಡೆಯ ಮಾತು.

ಇತೋ ನ ತ್ವಾಂ ಪ್ರವಕ್ಷ್ಯಾಮಿ ಶ್ರುತ್ವಾ ಕುರು ಯಥೇಪ್ಸಿತಮ್ ।
ಉಕ್ತ್ವೇತಿ ದ್ರುತಮಾಕೃಷ್ಯ ಚಂದ್ರಹಾಸಾಸಿಮುದ್ಧೃತಮ್ ॥ ೮ ॥

ಸಂಭ್ರಮಾದ್ವೀಕ್ಷಿತಃ ಸರ್ವೈಶ್ಚಾಲಯನ್ನಾಹ ತಂ ಪುನಃ ।
ಕ್ವ ಚಾಸ್ತಿ ಮೂಢ ತೇ ವಿಷ್ಣುಃ ಸ ತ್ವಾಮದ್ಯ ಪ್ರರಕ್ಷತು ॥ ೯ ॥

ತ್ವಯೋಕ್ತಂ ಸ ಹಿ ಸರ್ವತ್ರ ಕಸ್ಮಾತ್ಸ್ತಂಭೇ ನ ದೃಶ್ಯತೇ ।
ಯದಿ ಪಶ್ಯಾಮಿ ತಂ ವಿಷ್ಣುಮಧುನಾ ಸ್ತಂಭಮಧ್ಯಗಮ್ ॥ ೧೦ ॥

ತರ್ಹಿ ತ್ವಾಂ ನ ವಧಿಷ್ಯಾಮಿ ಭವಿಷ್ಯಸಿ ದ್ವಿಧಾಽನ್ಯಥಾ ।
ಪ್ರಹ್ಲಾದೋಽಪಿ ತಥಾ ದೃಷ್ಟ್ವಾ ದಧ್ಯೌ ತಂ ಪರಮೇಶ್ವರಮ್ ॥ ೧೧ ॥

ಪುರೋಕ್ತಂ ತದ್ವಚಃ ಸ್ಮೃತ್ವಾ ಪ್ರಣನಾಮ ಕೃತಾಂಜಲಿಃ ।
ತಾವತ್ಪ್ರಸ್ಫುಟಿತಸ್ತಂಭೋ ವೀಕ್ಷಿತೋ ದೈತ್ಯಸೂನುನಾ ॥ ೧೨ ॥

೮-೧೧. ಇನ್ನು ಮುಂದೆ ನಿನಗೆ ಏನನ್ನೂ ಹೇಳುವುದಿಲ್ಲ. ಇದನ್ನು ಕೇಳಿ. ನಿನಗೆ ಇಷ್ಟವಿದ್ದಂತೆ ಮಾಡು ;' ಎಂದು ಹೇಳಿ, ಅದ್ಭುತವಾದ ಚಂದ್ರಹಾಸವೆಂಬ ಕತ್ತಿಯನ್ನು ಬೇಗನೆ ಒರೆಯಿಂದ ಸೆಳೆದು, ಎಲ್ಲರಿಂದಲೂ ಸಡಗರದಿಂದ ನೋಡುವವನಾಗಿ ಕಂಪಿಸುತ್ತಾ, ಮತ್ತೂ ಪ್ರಹ್ಲಾದನನ್ನು ಕುರಿತು, ಇಂತು ಹೇಳಿದನು ;– 'ಎಲೋ ಮೂಢ! ನಿನ್ನ ವಿಷ್ಣುವೆಲ್ಲಿರುವನು? ಅವನು ಈಗ ನಿನ್ನನ್ನು (ಕಾಪಾಡಲಿ) ಸಲಹಲಿ; ಅವನು ಎಲ್ಲೆಡೆಗಳಲ್ಲಿಯೂ ಇರುವನೆಂದು ನೀನು ಹೇಳಿದ್ದೆ; ಯಾವ ಕಾರಣದಿಂದ ಈ ಕಂಬದಲ್ಲಿ ಕಾಣಿಸುವುದಿಲ್ಲ; ಈಗ ಕಂಬದ ನಡುವೆಯಿರುವ ಅವನನ್ನು ನೋಡುತ್ತೇನೆಯಾದರೆ, ನಿನ್ನನ್ನು ನಾನು ಕೊಲ್ಲುವುದಿಲ್ಲ; ಹಾಗಿಲ್ಲದಿದ್ದರೆ ನೀನು ಇಬ್ಭಾಗವಾಗುವೆ;' ಎಂದನು- ಆಗ ಪ್ರಹ್ಲಾದನೂ ಹಾಗೆಯೇ ನೋಡಿ ಸರ್ವೇಶ್ವರನಾದ ಶ್ರೀಹರಿಯನ್ನು ಧ್ಯಾನಿಸಿದನು.

೧೨. ಹಿಂದೆ ಸಮುದ್ರದ ತಡಿಯಲ್ಲಿ ಹೇಳಿದ ಭಗವಂತನ ಆ ನುಡಿಯನ್ನು ನೆನೆದು, ಕೈಜೋಡಿಸಿ ನಮಸ್ಕರಿಸಿದನು. ಅಷ್ಟುಹೊತ್ತಿಗೆ ಕಂಬವು ಒಡೆದು ಅಲ್ಲಿ ಮೂಡಿದ ಶ್ರೀ ನರಸಿಂಹರೂಪು ದೈತ್ಯಪುತ್ರನಾದ ಪ್ರಹ್ಲಾದನಿಂದ ನೋಡಲ್ಪಟ್ಟನು.

ಆದರ್ಶರೂಪೋ ದೈತ್ಯಸ್ಯ ಖಡ್ಗಜೋ ಯಃ ಪ್ರತಿಷ್ಠಿತಃ ।
ತನ್ಮಧ್ಯೇ ದೃಶ್ಯತೇ ರೂಪಂ ಬಹುಯೋಜನಮಾಯತಮ್ ॥ ೧೩ ॥

ಅತಿರೌದ್ರಂ ಮಹಾಕಾಯಂ ದಾನವಾನಾಂ ಭಯಂಕರಮ್ ।
ಮಹಾನೇತ್ರಂ ಮಹಾವಕ್ತ್ರಂ ಮಹಾದಂಷ್ಟ್ರಂ ಮಹಾಭುಜಮ್ ॥ ೧೪ ॥

ಮಹಾನಖಂ ಮಹಾಪಾದಂ ಕಾಲಾಗ್ನಿಸದೃಶಾನನಮ್ ।
ಕರ್ಣಾಂತಕೃತ ವಿಸ್ತಾರವದನಂ ಚಾತಿಭೀಷಣಮ್ ॥ ೧೫ ॥

ಕೃತ್ವೇತ್ಥಂ ನಾರಸಿಂಹಂ ತು ಯಯೌ ವಿಷ್ಣುಸ್ತ್ರಿವಿಕ್ರಮಃ ।
ನರಸಿಂಹಃ ಸ್ತಂಭಮಧ್ಯಾನ್ನಿರ್ಗತ್ಯ ಪ್ರಣನಾದ ಚ ॥ ೧೬ ॥

ನಿನಾದಶ್ರವಣಾದ್ದೈತ್ಯಾ ನರಸಿಂಹಮವೇಷ್ಟಯನ್ ।
ತಾನ್ ಹತ್ವಾ ಸಕಲಾಂಸ್ತತ್ರ ಸ್ವಪೌರುಷಪ್ರರಾಕ್ರಮಾತ್ ॥ ೧೭ ॥

---

೧೩. ಕತ್ತಿಯಲ್ಲಿ ಕಂಡ ಹಿರಣ್ಯಕಶಿಪುವಿನ ಯಾವ ಪ್ರತಿಬಿಂಬಾಕೃತಿ ನೆಲೆಗೊಂಡಿತೋ, ಅದರ ನಡುವೆ, ಅನೇಕ ಗಾವುದದಷ್ಟು ದೊಡ್ಡದಾದ ರೂಪವು ಕಾಣಲ್ಪಡುತ್ತಿದೆ.

೧೪-೧೬. ಅತ್ಯಂತ ಕ್ರೋಧಗೊಂಡ, ಪೇರೊಡಲಿನ, ರಕ್ಕಸರಿಗೆ ಬೆಕ್ಕಸವನ್ನೆಸಗುವ, ದೊಡ್ಡಗಣ್ಣಿನ, ಅಗಲವಾದ ಬಾಯು, ದೊಡ್ಡಕೋರೆಯಹಲ್ಲಿನ, ನಿಡಿದಾದ ತೋಳ್ಗಳ, ದೊಡ್ಡ ಉಗುರುಗಳ, ದೊಡ್ಡ ಅಡಿಯ, ಪ್ರಳಯಕಾಲದ ಅಗ್ನಿಗೆ ಸಮನಾದ ಮೊಗದ, ಕಿವಿಗಳವರೆಗೆ ಬಿತ್ತರಿಸಿದ ಬಾಯು, ಕಡುಬಿಗುರ್ವಿನ-ಈ ತೆರನಾದ ಶ್ರೀನರಸಿಂಹರೂಪವನ್ನು ತ್ರಿವಿಕ್ರಮನಾದ ಶ್ರೀವಿಷ್ಣುವು ಪ್ರಕಟಿಸಿ ಬಂದನು. ಶ್ರೀನರಸಿಂಹಸ್ವಾಮಿಯು ಕಂಬದ ನಡುವಣಿಂದ ಹೊರಗೆ ಆವಿರ್ಭವಿಸಿ ಬಂದನು.

೧೭-೧೮. ಎಲೈ ಸಹಸ್ರಾನೀಕರಾಯನೇ ! ಕೇಳು ; ಅಬ್ಬರವನ್ನು ಕೇಳಿಸಿದುದರಿಂದ ರಕ್ಕಸರು ಶ್ರೀನರಸಿಂಹನನ್ನು ಮುತ್ತಿದರು. ಅಲ್ಲಿ ಶ್ರೀನರಸಿಂಹನು ತನ್ನ

ಬಭಂಜ ಚ ಸಭಾಂ ದಿವ್ಯಾಂ ಹಿರಣ್ಯಕಶಿಪೋರ್ನೃಪ ।
ವಾರಯಾಮಾಸುರಭ್ಯೇತ್ಯ ನರಂಸಿಂಹಂ ಮಹಾಭಟಾಃ ॥ ೧೮ ॥

ತೇ ತು ರಾಜನ್ ಕ್ಷಣಾದೇವ ನರಸಿಂಹೇನ ವೈ ಹತಾಃ ।
ತತಃ ಶಸ್ತ್ರಾಣಿ ವರ್ಷಂತಿ ನರಸಿಂಹೇ ಪ್ರತಾಪಿನಿ ॥ ೧೯ ॥

ಸ ತು ಕ್ಷಣೇನ ಭಗವಾನ್ ಹತ್ವಾ ತದ್ಬಲಮೋಜಸಾ ।
ನನಾದ ಚ ಮಹಾನಾದಂ ದಿಶಃ ಶಬ್ದೇನ ಪೂರಯನ್ ॥ ೨೦ ॥

ಅಷ್ಟಾಶೀತಿ ಸಹಸ್ರಾಣಿ ಹೇತಿಹಸ್ತಾನ್ ಸಮಾದಿಶತ್ ।
ತೇಽಪ್ಯಾಗತ್ಯ ಚ ತಂ ದೇವಂ ರುರುಧುಃ ಸರ್ವತೋ ದಿಶಮ್ ॥ ೨೧ ॥

ಪುನಃ ಸಭಾಂ ಬಭಂಜಾಸೌ ಹಿರಣ್ಯಕಶಿಪೋಃ ಶುಭಾಮ್ ।
ತಾನ್ ಮೃತಾನಪಿ ವಿಜ್ಞಾಯ ಪುನರನ್ಯಾನ್ಮಹಾಸುರಃ ॥ ೨೨ ॥

ಪನ್ನತಿಕೆಯಿಂದ ಅವರೆಲ್ಲರನ್ನೂ ಕೊಂದು, ಹಿರಣ್ಯಕಶಿಪುವಿನ ಉತ್ತಮವಾದ ಓಲಗವನ್ನು ಚದುರಿಸಿದನು. ಕಡುಗಲಿಗಳಾದ ಭಟರು ನರಸಿಂಹನ ಸಮೀಪಕ್ಕೆ ಬಂದು ತಡೆಗಟ್ಟಿದರು.

೧೯-೨೦. ಶ್ರೀನರಸಿಂಹನು ಅವರನ್ನೆಲ್ಲಾ ಕ್ಷಣಕಾಲದೊಳಗೆ ಸಂಹರಿಸಿದನು. ಎಲೈ ರಾಯನೇ! ಕೇಳು; ಬಳಿಕ ಪ್ರತಾಪಶಾಲಿಯಾದ ಶ್ರೀನರಸಿಂಹನಲ್ಲಿ ಅಸುರರು ಆಯುಧಗಳನ್ನು ಮಳೆಗರೆಯುತ್ತಿರಲು, ಆ ಭಗವಂತನು ಆ ಸೈನ್ಯವನ್ನೂ ತನ್ನ ವಿಶೇಷವಾದ ಪನ್ನತಿಕೆಯಿಂದ ಕೊಂದು, ಎಲ್ಲ ದಿಕ್ಕುಗಳನ್ನೂ ದನಿಯಿಂದ ತುಂಬುತ್ತಾ, ಮಹಾನಾದವನ್ನು ಮಾಡಿದನು.

೨೧. ಅನಂತರದಲ್ಲಿ ಹಿರಣ್ಯಕನು ಎಂಬತ್ತೆಂಟುಸಾಸಿರದೆಣಿಕೆಯ ಆಯುಧಪಾಣಿಗಳನ್ನು ಶ್ರೀನರಸಿಂಹನ ಮೇಲೆ ಬೀಳಲು ಅಪ್ಪಣೆ ಮಾಡಿದನು. ಅವರೂ ಬಂದು, ಸುತ್ತಲೂ ಆ ದೇವನನ್ನು ಎಲ್ಲ ದಿಕ್ಕುಗಳನ್ನೂ (ತಡೆದರು) ಆವರಿಸಿದರು.

೨೨. ಈ ಭಗವಂತನು ಪುನಹ ಮನೋಹರವಾಗಿದ್ದ ಹಿರಣ್ಯಕಶಿಪುವಿನ ಸಭೆಯನ್ನು ಬನ್ನಪಡಿಸಿದನು. ಹಿರಣ್ಯಕಶಿಪುವು ಆ ದೈತ್ಯರೆಲ್ಲರೂ ಮೃತರಾದರೆಂದು ತಿಳಿದು, ಮತ್ತು ಬೇರೆ ರಕ್ಕಸರನ್ನು ಕಳುಹಿಸಿದನು.

ಹತ್ವಾ ತಾನಖಿಲಾನ್ ಯುದ್ಧೇ ಯುದ್ಧ್ಯಮಾನೋ ನನಾದ ಸಃ ।
ತಾನ್ ಹತಾನಪಿ ವಿಜ್ಞಾಯ ಕ್ರೋಧಸಂರಕ್ತಲೋಚನಃ ॥ ೨೩ ॥

ತತೋ ಹಿರಣ್ಯಕಶಿಪುರ್ನಿಶ್ಚಕ್ರಾಮ ಮಹಾಬಲಃ ।
ಉವಾಚ ಚ ಮಹೀಪಾಲ ದಾನವಾನ್ ಬಲದರ್ಪಿತಾನ್ ॥ ೨೪ ॥

ಹನ್ಯತಾಂ ಹನ್ಯತಾಮೇಷ ಗೃಹ್ಯತಾಂ ಗೃಹ್ಯತಾಮಯಮ್ ।
ಇತ್ಯೇವಂ ವದತಸ್ತಸ್ಯ ಪ್ರಮುಖೇ ತು ಮಹಾಸುರಾನ್ ॥ ೨೫ ॥

ಯುದ್ಧ್ಯಮಾನಾನ್ ರಣೇ ಹತ್ವಾ ನರಸಿಂಹೋ ನನಾದ ಚ ।
ತತೋಽತಿದುದ್ರುವುರ್ದೈತ್ಯಾ ಹತಶೇಷಾ ದಿಶೋ ದಶ ॥ ೨೬ ॥

ಯಾವದ್ಧತಾಃ ಯುದ್ಧ್ಯಮಾನಾ ದೈತ್ಯಾಃ ಕೋಟಿಸಹಸ್ರಶಃ ।
ನರಸಿಂಹೇನ ತಾವಚ್ಚ ತಿರೋಭಾವಂ ಗತೋ ರವಿಃ ॥ ೨೭ ॥

೨೩-೨೪. ಆ ದೇವನು ಹೋರಾಟಮಾಡುವವನಾಗಿ, ಅವರೆಲ್ಲರನ್ನೂ ಕೊಂದು, ಸಿಂಹನಾದ ಮಾಡಿದನು. ಅವರನ್ನೂ ಹತರನ್ನಾಗಿ ತಿಳಿದು, ಹಿರಣ್ಯಕಶಿಪು ಕ್ರೋಧದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ, ಆ ಮಹಾಬಲನೇ ಹೊರಗೆ ಬಂದನು. ಎಲೈ ಸಹಸ್ರಾನೀಕರಾಯನೇ ! ಕೇಳು; ಆಗ ಬಲದಿಂದ ಸೊಕ್ಕಿದ್ದ ರಕ್ಕಸರಿಗೆ ಇಂತೆಂದನು.

೨೫-೨೬. ‘ಇವನನ್ನು ಕೊಲ್ಲಿರಿ; ಕೊಲ್ಲಿರಿ; ಇವನನ್ನು ಹಿಡಿಯಿರಿ; ಇಂತು ಹೇಳುತ್ತಿರುವ ಆ ಹಿರಣ್ಯಕಶಿಪುವಿನ ಎದುರಿನಲ್ಲಿಯೇ, ಶ್ರೀ ನರಸಿಂಹನು ಹೋರಾಡುತ್ತಿರುವ ದೊಡ್ಡ ರಕ್ಕಸರನ್ನು ಕಳನಲ್ಲಿ ಕೊಂದು, ಅಬ್ಬರಿಸಿದನು. ಅನಂತರದಲ್ಲಿ ಇಂತು ಸತ್ತು ಉಳಿದಿದ್ದ ರಾಕ್ಷಸರು ಹತ್ತು ದಿಕ್ಕುಗಳಿಗೂ ಕಡುವೇಗದಿಂದೋಡಿದರು.

೨೭. ಶ್ರೀ ನರಸಿಂಹಸ್ವಾಮಿಯೊಡನೆ ಹೋರಾಡುತ್ತಿದ್ದ ರಕ್ಕಸರು ಸಾವಿರಾರು ಕೋಟಿ ಸಂಖ್ಯಾಕರು ಎಷ್ಟು ಹೊತ್ತಿಗೆ ಸತ್ತುಹೋದರೋ, ಅಷ್ಟು ಹೊತ್ತಿಗೆ ಸೂರ್ಯನೂ ಮುಳುಗಿದನು. (ಕಣ್ಮರೆಯಾದನು.)

ಶಸ್ತ್ರಾಸ್ತ್ರವರ್ಷ ಚತುರಂ ಹಿರಣ್ಯಕಶಿಪುಂ ಜವಾತ್ ।
ಪ್ರಗೃಹ್ಯ ತು ಬಲಾದ್ರಾಜರ್ಷ ನರಸಿಂಹೋ ಮಹಾಬಲಃ ॥ ೨೮ ॥

ಸಂಧ್ಯಾಕಾಲೇ ಗೃಹದ್ವಾರಿ ಸ್ಥಿತ್ವೋರೌ ಸ್ಥಾಪ್ಯ ತಂ ರಿಪುಮ್ ।
ವಜ್ರತುಲ್ಯಮಹೋರಸ್ಕಂ ಹಿರಣ್ಯಕಶಿಪುಂ ರುಷಾ ॥ ೨೯ ॥

ಯತ್ರಾಽಖಂಡಲದಂತಿದಂತಮುಸಲಾನ್ಯಾಖಂಡಿತಾನ್ಯಾಹವೇ
ಧಾರಾ ಯತ್ರ ಪಿನಾಕಪಾಣಿಪರಶೋರಾಕುಂಠತಾಮಾಗತಾಃ ।
ತನ್ಮೇ ತಾವದುರೋ ನೃಸಿಂಹಕರಜೈರ್ವ್ಯಾದೀರ್ಯತೇ ಸಾಂಪ್ರತಂ
ದೇವೇ ದುರ್ಜನತಾಂ ಗತೇ ತೃಣಮಪಿ ಪ್ರಾಯೋಽಸ್ಯವಜ್ಞಾಯತೇ ॥೩೦॥

ಏವಂ ವದತಿ ದೈತ್ಯೇಂದ್ರೇ ದದಾರ ನರಕೇಸರೀ ।
ಹೃದಯಂ ದೈತ್ಯರಾಜಸ್ಯ ಪದ್ಮಪತ್ರಮಿವ ದ್ವಿಜಃ ॥ ೩೧ ॥

೨೮-೩೧. ಎಲೈ ರಾಯನೇ! ಕೇಳು; ಅಚಿಂತ್ಯಾದ್ಭುತ ಶಕ್ತಿಯುಳ್ಳ ಶ್ರೀ ನರಸಿಂಹನು ಶಸ್ತ್ರಾಸ್ತ್ರಗಳನ್ನು ಮಳೆಗರೆಯುವುದರಲ್ಲಿ ನಿಪುಣನಾದ ಹಿರಣ್ಯಕಶಿಪುವನ್ನು ಬೇಗನೆ ಬಲದಿಂದ ಹಿಡಿದುಕೊಂಡವನಾಗಿ, ಆ ಶತ್ರುವನ್ನು ಸಂಜೆಯ ಹೊತ್ತಿನಲ್ಲಿ ಮನೆಯ ಹೊಸತಿಲಲ್ಲಿ ಕುಳಿತು, ತೊಡೆಯ ಮೇಲೆ ಇಟ್ಟುಕೊಂಡು, ಸಿಟ್ಟಿನಿಂದ ವಜ್ರಕ್ಕೆ ಸಮವಾದ ಪೇರೆದೆಯ ಆ ಹಿರಣ್ಯಕಶಿಪುವನ್ನು ಉಗುರುಗಳಿಂದ ಚಿಗುರನ್ನು ಹೇಗೋ ಹಾಗೆ ಬಗಿಯಲು ತೊಡಗಲು, ಆಗ ಆ ರಕ್ಕಸನಾದ ಹಿರಣ್ಯಕಶಿಪುವು, ಯಾವ ಎದೆಯಲ್ಲಿ ಯುದ್ಧಗಳಲ್ಲಿ ದೇವೇಂದ್ರನ ಐರಾವತದ ಕೊಂಬುಗಳೆಂಬೊನಕೆಗಳು ತಗುಲಿ ಮುರಿಯಲ್ಪಟ್ಟುವೋ, ಮತ್ತು ಪಿನಾಕಪಾಣಿಯಾದ ಶಿವನ ಕೊಡಲಿಯ ಅಲಗೂ ತಗುಲಿ ಮುರಿಯಲ್ಪಟ್ಟಿತೋ, ಆ ನನ್ನ ಎದೆಯು ಈಗ ನರಸಿಂಹನ ಕೈಬೆರಲ ಉಗುರುಗಳಿಂದ (ಬಗಿಯಲ್ಪಡುತ್ತಿದೆ) ಸೀಳಲ್ಪಡುತ್ತಲಿದೆ. ದೈವವು ಕೆಟ್ಟುಹೋದರೆ, ಹುಲ್ಲುಕಡ್ಡಿಯೂ ತಿರಸ್ಕರಿಸುತ್ತದೆಯಷ್ಟೆ!' ಎಂದು ದೈತ್ಯೇಂದ್ರನು ಹೇಳುತ್ತಿರಲು, ಹಂಸವು ತಾವರೆಯರೇಕನ್ನು ಹೇಗೋ ಹಾಗೆ ಶ್ರೀನರಕೇಸರಿಯು ರಕ್ಕಸರೊಡೆಯನಾದ ಹಿರಣ್ಯಕಶಿಪುವಿನ ಹೃದಯವನ್ನು ಸೀಳಿದನು.

ಶಕಲೇ ದ್ವೇ ತಿರೋಭೂತೇ ನಖರಂಧ್ರೇ ಮಹಾತ್ಮನಃ ।
" ತತಃ ಕ್ವ ಯಾತೋ ದುಷ್ಟೋಽಸಾವಿತಿ ದೇವೋಽತಿವಿಸ್ಮಿತಃ " ॥ ೩೨ ॥

ನಿರೀಕ್ಷ್ಯ ಸರ್ವತೋ ರಾಜನ್ ವೃಥೈತತ್ಕರ್ಮ ಮೇಽಭವತ್ ।
ಇತಿ ಸಂಚಿಂತ್ಯ ರಾಜೇಂದ್ರ ನರಸಿಂಹೋ ಮಹಾಬಲಃ ॥ ೩೩ ॥

ವ್ಯಧೂನಯತ್ಕರಾವುಚ್ಚೈಸ್ತತಸ್ತೇ ಶಕಲೇ ನೃಪ ।
ನಖರಂಧ್ರಾನ್ನಿಪತಿತೇ ಭೂಮೌ ರೇಣುಸಮೇ ಹರಿಃ ॥ ೩೪ ॥

ದೃಷ್ಟ್ವಾ ಸಂಜಾತಸಂರೋಷೋ ಜಹಾಸ ಪರಮೇಶ್ವರಃ ।
ಪುಷ್ಪವರ್ಷಂ ಚ ವರ್ಷಂತೋ ನರಸಿಂಹಸ್ಯ ಮೂರ್ಧನಿ ॥ ೩೫ ॥

ದೇವಾಃ ಸಬ್ರಹ್ಮಕಾಸ್ಸರ್ವೇ ಆಗತಾಃ ಪ್ರೀತಿಸಂಯುತಾಃ ।
ಆಗತ್ಯ ಪೂಜಯಾಮಾಸುರ್ನರಸಿಂಹಂ ಪರಂ ಪ್ರಭುಮ್ ॥ ೩೬ ॥

---

೩೨. ಆ ಎರಡು ಹೋಳುಗಳೂ ಮಹಾತ್ಮನಾದ ಶ್ರೀನರಹರಿಯ ಉಗುರುಗಳ ಸಂದಿನಲ್ಲಿ ಸಿಕ್ಕಿಕೊಂಡು ಕಾಣದಂತಾದುವು.

೩೩–೩೪. ಅನಂತರದಲ್ಲಿ ಭಗವಂತನು ಈ 'ದುಷ್ಟನೆಲ್ಲಿಹೋದನು?' ಎಂದು ಅಚ್ಚರಿಗೊಂಡನು. ಎಲೈ ರಾಯನೇ! ಕೇಳು; ಸುತ್ತಲೂ ನೋಡಿ ಈ ನನ್ನ ಕೆಲಸವು ವ್ಯರ್ಥವಾಯಿತು;' ಎಂದು ಯೋಚಿಸಿ ಮಹಾಬಲನಾದ ಶ್ರೀನರಸಿಂಹನು ತನ್ನ ಎರಡು ಕೈಗಳನ್ನೂ ಮೇಲಕ್ಕೆ ಎತ್ತಿ ಬಲವಾಗಿ ಕೊಡಹಿದನು. ಬಳಿಕ ಎಲೈ ನೃಪನೇ! ಧೂಳಿಗೆ ಸಮವಾಗಿ ಆ ಎರಡು ಹೋಳುಗಳೂ ಉಗುರಿನ ಸಂದಿನಿಂದ ನೆಲದ ಮೇಲೆ ಬಿದ್ದುವು.

೩೫. ಕೋಪಿಸಿಕೊಂಡಿದ್ದ ಸರ್ವೇಶ್ವರನಾದ ಶ್ರೀಹರಿಯು ಇದನ್ನು ನೋಡಿ ನಕ್ಕನು. ಚತುರ್ಮುಖನಿಂದ ಕೂಡಿ, ದೇವತೆಗಳು ಎಲ್ಲರೂ ಶ್ರೀನರಸಿಂಹನ ತಲೆಯ ಮೇಲೆ ಹೂಮಳೆಯನ್ನು ಕರೆಯುತ್ತಾ, ಸಂತಸದೊಡಗೂಡಿ ಬಂದರು. ಇಂತು ಬಂದು ಸರ್ವೋತ್ತಮನಾದ ಸ್ವಾಮಿಯಾದ ಶ್ರೀನರಸಿಂಹನನ್ನು ಪೂಜಿಸಿದರು.

ಬ್ರಹ್ಮಾ ಚ ದೈತ್ಯರಾಜಾನಂ ಪ್ರಹ್ಲಾದಮಭಿಷೇಚಯತ್ ।
ಧರ್ಮೇ ರತಿಃ ಸಮಸ್ತಾನಾಂ ಜನಾನಾಮಭವತ್ತದಾ ॥ ೩೭ ॥

ಇಂದ್ರೋಽಪಿ ಸರ್ವದೇವೈಸ್ತು ಹರಿಣಾ ಸ್ಥಾಪಿತೋ ದಿವಿ ।
ನರಸಿಂಹೋಽಪಿ ಭಗವಾನ್ ಸರ್ವಲೋಕಹಿತಾಯ ವೈ ॥ ೩೮ ॥

ಶ್ರೀಶೈಲಶಿಖರಂ ಪ್ರಾಪ್ಯ ವಿಶ್ರುತಃ ಸುರಪೂಜಿತಃ ।
ಸ್ಥಿತೋ ಭಕ್ತಹಿತಾರ್ಥಾಯ ಅಭಕ್ತಾನಾಂ ಕ್ಷಯಾಯ ಚ ॥ ೩೯ ॥

ಇತ್ಯೇತನ್ನರಸಿಂಹಸ್ಯ ಮಾಹಾತ್ಮ್ಯಂ ಯಃ ಪಠೇನ್ನರಃ ।
ಶೃಣೋತಿ ವಾ ನೃಪಶ್ರೇಷ್ಠ ಮುಚ್ಯತೇ ಸರ್ವಪಾತಕೈಃ ॥ ೪೦ ॥

---

೩೭. ಪ್ರಜಾಪತಿಯಾದ ಬ್ರಹ್ಮನೂ ಪ್ರಹ್ಲಾದನನ್ನು ದೈತ್ಯರೊಡೆಯನನ್ನಾಗಿ ಪಟ್ಟಾಭಿಷೇಕ ಮಾಡಿದನು. ಆಗ ಸಕಲ ಜನರಿಗೂ ಧರ್ಮದಲ್ಲಿ ಆಸಕ್ತಿಯುಂಟಾಯಿತು.

೩೮-೩೯. ಇಂದ್ರನೂ ಸಕಲ ದೇವತೆಗಳೊಡಗೂಡಿ, ದೇವಲೋಕದಲ್ಲಿ ಶ್ರೀಹರಿಯಿಂದ ಸ್ಥಾಪಿಸಲ್ಪಟ್ಟನು. ಭಗವಂತನಾದ ಶ್ರೀನರಸಿಂಹನೂ ಎಲ್ಲಾ ಲೋಕಗಳಿಗೆ ಸೊಗವನ್ನುಂಟುಮಾಡಲು, ಶ್ರೀಶೈಲದ ಶಿಖರವನ್ನು ಹೊಂದಿ, ಲೋಕಪ್ರಸಿದ್ಧನಾಗಿ ದೇವತೆಗಳಿಂದ ಸೇವಿತನಾಗಿರುತ್ತಾನಲ್ಲದೆ, ಭಕ್ತರಿಗೆ ಹಿತವನ್ನುಂಟುಮಾಡುವುದಕ್ಕೂ, ಅಭಕ್ತರಿಗೆ ಹಾನಿಯನ್ನೆಸಗುವುದಕ್ಕೂ ಅಲ್ಲಿ ಸನ್ನಿಹಿತನಾಗಿರುತ್ತಾನೆ.

೪೦. ಎಲೈ ಸಹಸ್ರಾನೀಕನೇ! ಯಾವ ನರನು ಇಂತೀ ಶ್ರೀನರಸಿಂಹನ ಮಹಿಮೆಯನ್ನು ಪಠಿಸುವನೋ, ಅಥವಾ ಕೇಳುವನೋ, ಅವನು ಎಲ್ಲಾ ಪಾಪಗಳಿಂದ ಮುಕ್ತನಾಗುವನು.

ನರೋ ವಾ ಯದಿ ವಾ ನಾರೀ ಶೃಣೋತ್ಯಾಖ್ಯಾನಮುತ್ತಮಮ್ ।
ವೈಧವ್ಯಾದ್ದುಃಖಶೋಕಾಚ್ಚ ದುಷ್ಟಸಂಗಾತ್ಪ್ರಮುಚ್ಯತೇ ॥ ೪೧ ॥

ದುಃಶೀಲೋಽಪಿ ದುರಾಚಾರೋ ದುಃಪ್ರಜೋ ದೋಷಕರ್ಮಕೃತ್ ।
ಧರ್ಮಿಷ್ಠೋ ದಾನಭೋಗೀ ಚ ಶೃಣ್ವನ್ನಾಧ್ಯೋ ಭವೇನ್ನರಃ ॥ ೪೨ ॥

ಹರಿಃ ಸುರೇಶೋ ನರಲೋಕಪೂಜಿತೋ
ಹಿತಾಯ ಲೋಕಸ್ಯ ಚರಾಚರಸ್ಯ ।

---

೪೧. ಪುರುಷನಾಗಲೀ, ಸ್ತ್ರೀಯಾಗಲೀ, ಯಾರು ಈ ಉತ್ತಮವಾದ ನೃಸಿಂಹ ಚರಿತ್ರೆಯನ್ನು ಕೇಳುತ್ತಾರೆಯೋ, ಅವರು ವೈಧವ್ಯದಿಂದಲೂ, ದುಃಖ ಶೋಕಗಳಿಂದಲೂ, ಕೆಟ್ಟವರ ಸಂಬಂಧದಿಂದಲೂ, ಬಿಡಲ್ಪಡುತ್ತಾರೆ.

೪೨. ಕೆಟ್ಟ ಸ್ವಭಾವದವನು, ಕೆಟ್ಟ ನಡವಳಿಕೆಯುಳ್ಳವನು, ಕೆಟ್ಟಸಂಗವುಳ್ಳವನು, ಅಕಾರ್ಯವನ್ನು ಮಾಡುವವನು, ಧರ್ಮಿಷ್ಟನಲ್ಲದವನು, ಮತ್ತು ಸುಖಿಯಲ್ಲದವನು-ಈ ಯಾವ ಮಾನವನೇ ಆಗಲಿ, ಶ್ರೀ ನರಸಿಂಹೋಪಾಖ್ಯಾನವನ್ನು ಕೇಳುತ್ತಲೇ ಶುದ್ಧನಾಗುವನು.

೪೩. ದೇವತೆಗಳೆಲ್ಲರಿಗೂ ಒಡೆಯನೂ, ಮನುಷ್ಯಲೋಕದಿಂದ ಪೂಜಿತನೂ ಆದ ಶ್ರೀಹರಿಯು ಚರಾಚರಾತ್ಮಕವಾದ ಜಗತ್ತಿಗೆ ಹಿತವನ್ನೆಸಗಲು, ಪೂರ್ವದಲ್ಲಿ ತನ್ನ ಇಚ್ಛಾರೂಪವಾದ ಮಾಯೆಯಿಂದ, ಇಂತಹ ಅಪೂರ್ವವಾಗಿ ಲೋಕಕ್ಕೆ ಕಾಣುವ, ತನ್ನ ನಿತ್ಯವೂ, ಪೂರ್ಣವೂ, ಸ್ವರೂಪಾಂಶವೂ, ಆದ ಶ್ರೀ ನೃಸಿಂಹಾವತಾರವನ್ನು ಪ್ರಾದುರ್ಭವಿಸಿ, ಲೋಕಕ್ಕೆ ದುಃಖವನ್ನುಂಟುಮಾಡುತ್ತಲಿದ್ದ ಹಿರಣ್ಯ

ಪದ್ಯವತ್ಸರಾದಿ ನಿರೂಪಣ ; ನಲವತ್ತುನಾಲ್ಕನೆಯ ಅಧ್ಯಾಯವು

ಕೃತ್ವಾ ವಿರೂಪಂ ಚ ಪುರಾತ್ಮಮಾಯಯಾ

ಹಿರಣ್ಯಕಂ ದುಃಖಕರಂ ನಖೈಶ್ಶಿನತ್ ॥ ೪೩ ॥

ಇತಿ ಶ್ರೀ ನರಸಿಂಹಪುರಾಣೇ ನರಸಿಂಹ ಪ್ರಾದುರ್ಭಾವೋ ನಾಮ

ಚತುಶ್ಚತ್ವಾರಿಂಶೋಽಧ್ಯಾಯಃ

ಕಶಿಪುವನ್ನು ತನ್ನ ಕೈಯುಗುರುಗಳಿಂದ ಕತ್ತರಿಸಿದನು ; ' ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀ ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀ ನರಸಿಂಹಾವತಾರವೆಂಬ
ನಲವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

ನಲವತ್ತುನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ, ' ಸಮುದ್ರಗಲ್ಲಿ ನಾಗಪಾಶದಲ್ಲಿ ಬಂಧಿತನಾಗಿ ಕೆಡವಲ್ಪಟ್ಟ ಪ್ರಹ್ಲಾದನು ಮತ್ತೂ ಸುರಕ್ಷಿತನಾಗಿ ಬಂದು, ಗುರುಕುಲದಲ್ಲಿರುವ ಸಂಗತಿಯನ್ನು ದೈತ್ಯಭಟರು ದೈತ್ಯೇಂದ್ರನಾದ ಹಿರಣ್ಯಕಶಿಪುವಿಗೆ ಹೇಳಲು, ಅವನು ಪ್ರಹ್ಲಾದನನ್ನು ಬರಮಾಡಿಕೊಂಡು ಅಕಾರಣವಾಗಿ ಕೋಪಮಾಡಿ, ತನ್ನ ಮಾತನ್ನು ಕೇಳಿಕೊಂಡಿದ್ದರೆ ಸರಿ; ಇಲ್ಲವಾದರೆ ಅವನನ್ನು ಸಂಹರಿಸುವುದಾಗಿ ಅಬ್ಬರಿಸಿ, ತನ್ನ ಚಂದ್ರಹಾಸವೆಂಬ ಕತ್ತಿಯನ್ನು ಹಿರಿದು, ' ಇದೋ ನೀನು ಹರಿಯು ಎಲ್ಲೆಡೆಯಲ್ಲಿಯೂ ಇರುವನೆಂದು ಹೇಳಿದ್ದೆ; ಈ ಅವನು ಕಂಡುಬಂದರೆ ಸರಿ; ಇಲ್ಲವಾಗರೆ ನೀನು ಇಬ್ಭಾಗವಾಗುವೆ; ' ಎಂದು ಹೇಳಿ, ಈ ' ಕಂಬದಲ್ಲಿ ಏಕೆ ಕಾಣುವುದಿಲ್ಲ; ' ಎಂದು ಆಕ್ಷೇಪಿಸುವನು.

ಆಗ ಭಾಗವತ ಶಿರೋಮಣಿಯಾದ ಪ್ರಹ್ಲಾದನು ಶ್ರೀ ಭಗವಂತನು ಸಮುದ್ರದ ತಡಿಯಲ್ಲಿ ಹೇಳಿದ ನುಡಿಯನ್ನು ನೆನೆದು, ಅವನನ್ನು ಹೃದಯದಲ್ಲಿ ಧ್ಯಾನಿಸಲು, ತತ್‌ಕ್ಷಣದಲ್ಲಿಯೇ ಲೋಕವಿಚಿತ್ರವಾದ ಶ್ರೀ ನೃಸಿಂಹರೂಪದಿಂದ ಕಂಬದ ನಡುವೆ ಹರಿಯು ಪ್ರತ್ಯಕ್ಷನಾದನು. ಬಳಿಕ ದೈತ್ಯೇಂದ್ರನು ಆ ಹರಿಯ ಅತಿಶಯವಾದ ದೊಡ್ಡ ಆ ನರಸಿಂಹಾಕೃತಿಯನ್ನು ಕತ್ತಿಯಲ್ಲಿ ಬಿದ್ದಿದ್ದ ತನ್ನ ಪ್ರತಿಬಿಂಬದ ನಡುವೆ ನೋಡಿ, ಕಡುಮುಳಿದು ಅನೇಕ ಸಂಖ್ಯಾಕರಾದ ಆಯುಧಪಾಣಿಗಳಾದ ದೈತ್ಯಪಡೆಗಳನ್ನು ಕಳುಹಿಸಲು, ಅವರು ಶ್ರೀನರಸಿಂಹನನ್ನು ಮುತ್ತಲು, ಅವನು ಅವರನ್ನೆಲ್ಲಾ ಅಲ್ಪಕಾಲದಲ್ಲಿಯೆ ವಿಲಾಸದಿಂದ ಸಂಹರಿಸಿ ಅಬ್ಬರಿಸಲು, ಆ ಹೊತ್ತಿಗೆ ರವಿ ಕಣ್ಮರೆಯಾದನು. ತರುವಾಯ ಹಿರಣ್ಯಕಶಿಪುವು, " ಇವನನ್ನು ಕೊಲ್ಲಿರಿ, ಹಿಡಿಯಿರಿ;" ಎಂದು ಕೂಗುತ್ತಾ ಬರಲು, ಭಗವಂತನಾದ ಶ್ರೀಹರಿಯು ಅವನನ್ನು ಹಿಡಿದು, ಸಂಜೆಯ ಹೊತ್ತಿನಲ್ಲಿ ಹೊಸತಿಲಿನ ಮೇಲೆ ಕುಳಿತು, ತನ್ನ ತೊಡೆಯ ಮೇಲೆ ಇಟ್ಟುಕೊಂಡು, ಹಂಸಪಕ್ಷಿಯು ತಾವರೆಯ ರೇಕನ್ನು ಸೀಳುವಂತೆ ಅವನೆದೆಯನ್ನು ಸೀಳಿ

ದನು. ಅವನ ದೇಹದ ಶಕಲಗಳು ಉಗುರಿನಲ್ಲಿ ಅಡಗಿಕೊಂಡಿರಲು, ಭಗವಂತನು 'ಎಲ್ಲಿ ಹೋದನು? ತನ್ನ ಕೆಲಸವು ವ್ಯರ್ಥವಾಯಿತೇ?' ಎಂದು ಕೈಯನ್ನೆತ್ತಿ ಕೊಡುಹಲು, ಆ ಶಕಲಗಳು ಧೂಳಿನಂತೆ ನೆಲದ ಮೇಲೆ ಬಿದ್ದುವು.

ಆಗ ದೇವತೆಗಳು ಪೂಮಳೆಗರೆದರು. ಬ್ರಹ್ಮಾದಿ ದೇವತೆಗಳು ಅಲ್ಲಿಗೆ ಬಂದು ಪ್ರಹ್ಲಾದನನ್ನು ದೈತ್ಯರಾಜನನ್ನಾಗಿ ಪಟ್ಟಾಭಿಷೇಕ ಮಾಡಿದರು; ಪ್ರಜೆಗಳು ಧರ್ಮಪರರಾದರು. ಅತ್ತ ಶ್ರೀಹರಿಯು ದೇವತೆಗಳನ್ನೂ ದೇವೇಂದ್ರನೊಡನೆ ದೇವಲೋಕದಲ್ಲಿ ಸ್ಥಾಪಿಸಿದನು. ಇಂತು ಶ್ರೀಹರಿಯು ವಿಲಕ್ಷಣವಾದ ಶ್ರೀನರಸಿಂಹಾವತಾರವನ್ನು ಅಭಿವ್ಯಂಜನ ಮಾಡಿ, ಲೋಕವನ್ನು ರಕ್ಷಿಸಿ, ಭಕ್ತರ ಹಿತಕ್ಕಾಗಿಯೂ, ದುಷ್ಟರ ನಾಶಕ್ಕಾಗಿಯೂ ಶ್ರೀಶೈಲದಲ್ಲಿರುತ್ತಾನೆ. ಈ ಉಪಾಖ್ಯಾನವನ್ನು ಪಠಿಸಿದವರು ಮತ್ತು ಕೇಳಿದವರು ಸಕಲ ಪಾಪಗಳಿಂದ ಮುಕ್ತರಾಗುತ್ತಾರೆ;' ಎಂದು ನಿರೂಪಿಸಿದುದನ್ನು ಸೂತರು ಭರದ್ವಾಜನಿಗೆ ಹೇಳಿರುತ್ತಾರೆ.

ಇಂತು ನಲವತ್ತುನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹಃ.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್

ಪಂಚಚತ್ವಾರಿಂಶೋಽಧ್ಯಾಯಃ

ಶ್ರೀ ವಾಮನ ಪ್ರಾದುರ್ಭಾವಃ

॥ ಮಾರ್ಕಂಡೇಯ ಉವಾಚ ॥

ಶೃಣು ರಾಜನ್ ಸಮಾಸೇನ ವಾಮನಸ್ಯ ಪರಾಕ್ರಮಮ್ ।
ಬಲಿಯಾಗೇ ಪುರಾ ಯೇನ ಹತಾ ದೈತ್ಯಾಃ ಸಹಸ್ರಶಃ ॥ ೧ ॥

ವಿರೋಚನಸುತಃ ಪೂರ್ವಂ ಮಹಾಬಲಪರಾಕ್ರಮಃ ।
ತ್ರೈಲೋಕ್ಯಂ ಬುಭುಜೇ ಜಿತ್ವಾ ದೇವಾನಿಂದ್ರಪುರೋಗಮಾನ್ ॥ ೨ ॥

ನಲವತ್ತೈದನೆಯ ಅಧ್ಯಾಯವು.

ಶ್ರೀ ವಾಮನಾವತಾರವು.

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ :— 'ಎಲೈ ರಾಯನೇ ! ಕೇಳು; ಪೂರ್ವದಲ್ಲಿ ಯಾವನಿಂದ ಸಾವಿರಾರು ಮಂದಿ ರಕ್ಕಸರು ಬಲಿಯ ಯಾಗದಲ್ಲಿ ಸಂಹರಿಸಲ್ಪಟ್ಟರೋ, ಆ ವಾಮನಮೂರ್ತಿಯ ಪರಾಕ್ರಮವನ್ನು ಸಂಕ್ಷೇಪದಿಂದರುಹುವೆನು.

೨. ಪೂರ್ವದಲ್ಲಿ ಅತ್ಯಂತ ಬಲಿಷ್ಠನೂ, ಪರಾಕ್ರಮಿಯೂ ಆದ ವಿರೋಚನನೆಂಬ ರಕ್ಕಸನ ಕುಮಾರನಾದ ಬಲಿಯೆಂಬವನು ದೇವೇಂದ್ರನೇ ಮೊದಲಾದ ದೇವತೆಗಳನ್ನು ಗೆದ್ದು, ತ್ರೈಲೋಕ್ಯವನ್ನು ಪಾಲಿಸಿ ಅನುಭವಿಸಿದನು.

ತತಃ ಕೃಶತರಾ ದೇವಾ ಬಭೂವುಸ್ತೇನ ಖಂಡಿತಾಃ ।
ಇಂದ್ರಂ ಕೃಶತರಂ ದೃಷ್ಟ್ವಾ ನಷ್ಟರಾಜ್ಯಂ ನೃಪೋತ್ತಮ ॥ ೩ ॥

ಅದಿತಿರ್ದೇವಮಾತಾ ಯಾ ಸಾಽತಪ್ಯತ್ಪರಮಂ ತಪಃ ।
ತುಷ್ಟಾವ ವಾಗ್ಭಿರಿಷ್ಟಾಭಿಃ ಪ್ರಣಿಪತ್ಯ ಜನಾರ್ದನಮ್ ॥ ೪ ॥

ತತಸ್ತುತ್ಯಾಽಭಿಸಂತುಷ್ಟೋ ದೇವದೇವೋ ಜನಾರ್ದನಃ ।
ಸ್ಥಿತ್ವಾ ತತ್ಪುರತೋ ವಾಚಮುವಾಚ ಮಧುಸೂದನಃ ॥ ೫ ॥

ತವ ಪುತ್ರೋ ಭವಿಷ್ಯಾಮಿ ಸುಭಗೆ ಬಲಿಬಂಧನಃ ।
ಇತ್ಯುಕ್ತ್ವಾ ತಾಂ ಗತೋ ವಿಷ್ಣುಃ ಸ್ವಗೃಹಂ ಸಾ ಸಮಾಯಯೌ ॥ ೬ ॥

೩-೪. ಎಲೈ ನೃಪಶ್ರೇಷ್ಠನೇ ! ಬಳಿಕ ಅವನಿಂದ ತಿರಸ್ಕೃತರಾದ ದೇವತೆಗಳು ಅತ್ಯಂತ ಕೃಶರಾದರು. ದೇವತೆಗಳ ತಾಯಿಯಾದ ಯಾವ ಅದಿತಿದೇವಿಯೋ, ಅವಳು ಇಂದ್ರನು ರಾಜ್ಯವನ್ನು ಕಳೆದುಕೊಂಡು, ಬಹು ಕೃಶನಾಗಿರುವುದನ್ನು ಕಂಡು, ಉತ್ತಮವಾದ ತಪವನ್ನೆಸಗಿದಳು ; ದುಷ್ಟಜನಸಂಹಾರಕನಾದ ಶ್ರೀಹರಿಯನ್ನು ಅವನಿಗಿಷ್ಟಗಳಾದ ಸಾಮವಾಕ್ಕುಗಳಿಂದೆರಗಿ ನುತಿಸಿದಳು.

೫. ಅನಂತರದಲ್ಲಿ ಅದಿತಿಯ ಸ್ತುತಿಯಿಂದ ಪ್ರಸನ್ನನಾದ ದೇವೋತ್ತಮನೂ, ದುಷ್ಟಜನಸಂಹಾರಕನೂ, ಆದ ಮಧುಸೂದನನು ಅವಳ ಎದುರಿನಲ್ಲಿ ನಿಂತು ಇಂತು ಹೇಳಿದನು.

೬. 'ಎಲೌ ಪುಣ್ಯವತಿಯೇ ! ನಾನು ಬಲಿಯನ್ನು ಬಂಧಿಸತಕ್ಕ ನಿನ್ನ ಮಗನಾಗುವೆನು ;' ಎಂದು ಅವಳಿಗೆ ಹೇಳಿ, ವಿಷ್ಣುವು ಹೊರಟುಹೋಗಲು- ಅದಿತಿಯೂ ತನ್ನ ಮನೆಗೆ ಬಂದಳು.

ತತಃ ಕಾಲೇನ ಸಾ ಗರ್ಭಮವಾಪ ನೃಪ ಕಶ್ಯಪಾತ್ ।
ಅಜಾಯತ ಸ ವಿಶ್ವೇಶೋ ಭಗವಾನ್ ವಾಮನಾಕೃತಿಃ ॥ ೭ ॥

ತಸ್ಮಿನ್ ಜಾತೇ ಸಮಾಗತ್ಯ ಬ್ರಹ್ಮಾ ಲೋಕಪಿತಾಮಹಃ ।
ಜಾತಕರ್ಮಾದಿಕಾಃ ಸರ್ವಾಃ ಕ್ರಿಯಾಸ್ತತ್ರ ಚಕಾರ ವೈ ॥ ೮ ॥

ಕೃತೋಪನಯನೋ ದೇವೋ ಬ್ರಹ್ಮಚಾರೀ ಸನಾತನಃ ।
ಅದಿತಿಂ ಚಾಪ್ಯನುಜ್ಞಾಪ್ಯ ಯಜ್ಞಶಾಲಾಂ ಬಲೇರ್ಯಯೌ ॥ ೯ ॥

ಗಚ್ಛತಃ ಪಾದವಿಕ್ಷೇಪಾತ್ ಚಚಾಲ ಸಕಲಾ ಮಹೀ ।
ಯಜ್ಞಭಾಗಾನ್ನ ಯಚ್ಛಂತಿ ದಾನವಾಶ್ಚ ಬಲೇರ್ಮಖಾತ್ ॥ ೧೦ ॥

---

೭. ಎಲೈ ನೃಪನೇ ! ಕೇಳು; ಬಳಿಕ ಅದಿತಿಯು ಕೆಲವುಕಾಲದಿಂದ ಕಶ್ಯಪನಿಂದ ಗರ್ಭವನ್ನು ತಾಳಿದಳು. ಅಲ್ಲಿ ಚರಾಚರಾತ್ಮಕವಾದ ಪ್ರಪಂಚಕ್ಕೆಲ್ಲಾ ನಿಯಾಮಕನಾದ, ಅವ್ಯಾಹತ ಷಡ್ಗುಣೈಶ್ವರ್ಯಪೂರ್ಣನಾದ ಆ ಶ್ರೀಮಹಾವಿಷ್ಣುವು ಶ್ರೀವಾಮನಾಕಾರದಿಂದ ಅಭಿವ್ಯಕ್ತನಾದನು.

೮. ಅಂತು ಭಗವದವತಾರವಾಗಲು, ಲೋಕಪಿತಾಮಹನಾದ ಚತುರ್ಮುಖನು ಅಲ್ಲಿಗೆ ಬಂದು, ಅಲ್ಲಿ ಜಾತಕರ್ಮವೇ ಮೊದಲಾದ ಎಲ್ಲಾ ಸಂಸ್ಕಾರಗಳನ್ನೂ ಮಾಡಿದನು.

೯. ಸನಾತನನಾದ, ಉಪನಯನಗೊಂಡ, ಬ್ರಹ್ಮಚಾರಿಯಾದ, ಭಗವಂತನಾದ ವಾಮನನು ಅದಿತಿದೇವಿಯ ಅಪ್ಪಣೆವಡೆದು, ಬಲಿಚಕ್ರವರ್ತಿಯ ಯಜ್ಞಶಾಲೆಗೆ ಹೋದನು.

೧೦. ನಡೆದುಹೋಗುತ್ತಲಿದ್ದ ವಾಮನಮೂರ್ತಿಯು ಹೆಜ್ಜೆಯನ್ನಿಡುವುದರಿಂದ ಭೂಮಿಯೆಲ್ಲವೂ ಚಲಿಸಿತು. ಆಗ ಬಲಿಯ ಯಾಗದಿಂದ ದಾನವರು ಜನ್ನದ ಪಾಲುಗಳನ್ನು ದೇವತೆಗಳಿಗೆ ಕೊಡುತ್ತಿರಲಿಲ್ಲವು.

ಪ್ರಶಾಂತಾಶ್ಚಾಗ್ನಯಸ್ತತ್ರ ಋತ್ವಿಜೋ ಮಂತ್ರತಶ್ಚ್ಯುತಾಃ ।
ವಿಪರೀತಮಿದಂ ದೃಷ್ಟ್ವಾ ಶುಕ್ರಮಾಹ ಮಹಾಬಲಃ ॥ ೧೧ ॥

ನ ಗೃಹ್ಣಂತಿ ಮುನೇ ಕಸ್ಮಾದ್ಧವಿರ್ಭಾಗಂ ಮಹಾಸುರಾಃ ।
ಕಸ್ಮಾಚ್ಚ ವಹ್ನಯಃ ಶಾಂತಾಃ ಕಸ್ಮಾದ್ಭೂಶ್ಚಲತಿ ದ್ವಿಜ ॥ ೧೨ ॥

ಕಸ್ಮಾಚ್ಚ ಮಂತ್ರತೋ ನಷ್ಟಾ ಋತ್ವಿಜಃ ಸಕಲಾ ಅಮೀ ।
ಇತ್ಯುಕ್ತೋ ಬಲಿನಾ ಶುಕ್ರೋ ದಾನವೇಂದ್ರ ವಚೋಽಬ್ರವೀತ್ ॥ ೧೩ ॥

॥ ಶುಕ್ರ ಉವಾಚ ॥

ಹೇ ಬಲೇ ಶೃಣು ಮೇ ವಾಕ್ಯಂ ತ್ವಯಾ ದೇವಾ ನಿರಾಕೃತಾಃ ।
ತೇಷಾಂ ರಾಜ್ಯಪ್ರದಾನಾಯ ಅದಿತ್ಯಾಮಚ್ಯುತೋಽಸುರ ॥ ೧೪ ॥

---

೧೧. ಆ ಯಜ್ಞಶಾಲೆಯಲ್ಲಿ ಅಗ್ನಿಗಳೆಲ್ಲವೂ ನಂದಿಹೋದುವು ; ಋತ್ವಿಜರು ಹೇಳುತ್ತಿದ್ದ ಮಂತ್ರವು ತಪ್ಪಿದವರಾದರು. ಮಹಾಬಲನಾದ ಬಲಿಯು ಈ ಬಾಧೆಯನ್ನು ಕಂಡು ಶುಕ್ರಾಚಾರ್ಯರಿಗೆ ಇಂತು ಹೇಳಿದನು :—

೧೨. 'ಎಲೈ ಜ್ಞಾನಿಯಾದ ದ್ವಿಜನೇ ! ಕೇಳು ; ಮಹಾಸುರರು ಏಕೆ ಹವಿರ್ಭಾಗಗಳನ್ನು ಕೈಕೊಳ್ಳುವುದಿಲ್ಲ ? ಏತರಿಂದ ವಹ್ನಿಗಳು ಆರಿಹೋದುವು ? ಭೂಮಿಯು ಚಲಿಸಲು ಕಾರಣವೇನು ?

೧೩. ಈ ಋತ್ವಿಜರೆಲ್ಲರೂ ಯಾವ ಕಾರಣದಿಂದ ಮಂತ್ರವನ್ನು ಹೇಳಲಾರದವರಾದರು ?' ಎಂದು ಬಲಿಯು ಕೇಳಲು ; ಶುಕ್ರಾಚಾರ್ಯರು ದಾನವರೊಡೆಯನಾದ ಬಲಿಚಕ್ರವರ್ತಿಗೆ ಈ ನುಡಿಯನ್ನು ಹೇಳಿದರು.

೧೪-೧೬. ಶುಕ್ರಾಚಾರ್ಯರು ಇಂತು ನುಡಿಯುತ್ತಾರೆ :—'ಎಲೈ ಅಸುರನಾದ ಬಲಿಯೇ ! ನನ್ನ ಈ ನುಡಿಯನ್ನು ಕೇಳು ; ನೀನು ದೇವತೆಗಳನ್ನು ತಿರಸ್ಕರಿಸುತ್ತಿರುತ್ತೀಯೆ ; ಅವರಿಗೆ ದೇವರಾಜ್ಯವನ್ನು ಹಿಂಪಕ್ಕೆ ಕೊಡುವ ಸಲುವಾಗಿ, ಅದಿತಿದೇವಿಯಲ್ಲಿ ಅಚ್ಯುತನೂ, ದೇವೋತ್ತಮನೂ, ಜಗತ್ಕಾರಣನೂ, ಆದ ಶ್ರೀಪತಿಯು

ದೇವದೇವೋ ಜಗದ್ಯೋನಿಃ ಸಂಜಾತೋ ವಾಮನಾಕೃತಿಃ ।
ಸ ತ್ವಾಗಚ್ಛತಿ ತೇ ಯಜ್ಞಂ ತತ್ಪಾದನ್ಯಾಸಕಂಪಿತಾ ॥ ೧೫ ॥

ಚಲತೀಯಂ ಮಹೀ ಸರ್ವಾ ತೇನಾದ್ಯಾಸುರಭೂಪತೇ ।
ತತ್ಸಂನಿಧಾನಾದಸುರಾ ನ ಗೃಹ್ಣಂತಿ ಹವಿರ್ಮಖೇ ॥ ೧೬ ॥

ತವಾಗ್ನಯೋಽಪಿ ವೈ ಶಾಂತಾ ವಾಮನಾಗಮನಾದ್ಧಿ ಭೋ ।
ಋತ್ವಿಜಶ್ಚ ನ ಭಾಸಂತಿ ಹೋಮಮಂತ್ರಾ ಬಲೇಽಧುನಾ ॥ ೧೭ ॥

ಅಸುರಾಣಾಂ ಶ್ರಿಯೋ ಹಂತಿ ಸುರಾಣಾಂ ಭೂತಿರುತ್ತಮಾ ।
ಇತ್ಯುಕ್ತಃ ಸ ಬಲಿಃ ಪ್ರಾಹ ಶುಕ್ರಂ ನೀತಿಮತಾಂ ವರಮ್ ॥ ೧೮ ॥

ಶೃಣು ಬ್ರಹ್ಮನ್ ವಚೋ ಮಹ್ಯಮಾಗತೇ ವಾಮನೇ ಮಖೇ ।
ಯನ್ಮಯಾ ಚಾದ್ಯ ಕರ್ತವ್ಯಂ ವಾಮನಸ್ಯಾಸ್ಯ ಧೀಮತಃ ॥ ೧೯ ॥

ಶ್ರೀವಾಮನಮೂರ್ತಿಯಾಗಿ ಪ್ರಾದುರ್ಭವಿಸಿದ್ದಾನೆ. ಅವನು ಈಗ ನಿನ್ನ ಯಜ್ಞಶಾಲೆಗೆ ಬರುತ್ತಿದ್ದಾನೆ. ಅವನು ಹೆಜ್ಜೆಯಿಡುವುದರಿಂದ ನಡುಗಿ ಈ ಪೊಡವಿಯೆಲ್ಲವೂ ಚಲಿಸುತ್ತಲಿದೆ. ಎಲೈ ಅಸುರರೊಡೆಯನೇ ! ಈಗ ಅದರಿಂದ ಆ ವಾಮನಮೂರ್ತಿಯ ಸನ್ನಿಧಾನದಿಂದ ಅಸುರರು ಜನ್ನದಲ್ಲಿ ಹವಿರ್ಭಾಗಗಳನ್ನು ತೆಗೆದುಕೊಳ್ಳುತ್ತಿಲ್ಲವು.

೧೭. ಅಯ್ಯಾ ! ವಾಮನಮೂರ್ತಿಯ ಬರುವಿಕೆಯಿಂದಲೇ ನಿನ್ನ ಯಜ್ಞಶಾಲೆಯ ಅಗ್ನಿಗಳೂ ನಂದಿಹೋದುವು. ಈಗ ಎಲೈ ಬಲಿಯೇ ! ಋತ್ವಿಜರಿಗೆ ಹೋಮಮಂತ್ರಗಳೂ ಸ್ಫುರಿಸುತ್ತಿಲ್ಲವು.

೧೮. ಅವನು ಅಸುರರ ಸಂಪತ್ತೆಲ್ಲವನ್ನೂ ನಾಶಪಡಿಸುವನು. ದೇವತೆಗಳಿಗೆ ಉತ್ತಮವಾದೈಶ್ವರ್ಯವನ್ನೀಯುವನು;' ಎಂದು ಶುಕ್ರಾಚಾರ್ಯರು ಹೇಳಲು, ಬಲಿಯು ನೀತಿಜ್ಞರಲ್ಲಿ ಶ್ರೇಷ್ಠನಾದ ಶುಕ್ರಾಚಾರ್ಯರಿಗೆ ಇಂತು ಪೇಳುತ್ತಾನೆ;—

೧೯. 'ಎಲೈ ಬ್ರಹ್ಮಜ್ಞಾನಿಯಾದ ಆಚಾರ್ಯರೇ ! ನನ್ನ ನುಡಿಯನ್ನಾಲಿಸಿರಿ; ವಾಮನಮೂರ್ತಿ ನನ್ನ ಯಜ್ಞವಾಟಕ್ಕೆ ಬರಲು, ಈ ಹೊತ್ತು ಈ ಜ್ಞಾನಿಯಾದ ವಾಮನಮೂರ್ತಿಗೆ ನಾನೆಸಗಬೇಕಾದುದೇನು ?

ತನ್ಮೇ ವದ ಮಹಾಭಾಗ ತ್ವಂ ಹಿ ನಃ ಪರಮೋ ಗುರುಃ ।

॥ ಮಾರ್ಕಂಡೇಯ ಉವಾಚ ॥

ಇತಿ ಸಂಚೋದಿತಃ ಶುಕ್ರಃ ಸ ರಾಜ್ಞಾ ಬಲಿನಾ ನೃಪ ॥ ೨೦ ॥

ತಮುವಾಚ ಬಲಿಂ ವಾಕ್ಯಂ ಮಮಾಪಿ ಶೃಣು ಸಾಂಪ್ರತಮ್ ।
ದೇವಾನಾಮುಪಕಾರಾಯ ಭವತಾಂ ಸಂಕ್ಷಯಾಯ ಚ ॥ ೨೧ ॥

ಸ ನೂನಮಾಯಾತಿ ಬಲೇ ತವ ಯಜ್ಞೇ ನ ಸಂಶಯಃ ।
ಆಗತೇ ವಾಮನೇ ದೇವೇ ತ್ವಯಾ ತಸ್ಯ ಮಹಾತ್ಮನಃ ॥ ೨೨ ॥

ಪ್ರತಿಜ್ಞಾ ನೈವ ಕರ್ತವ್ಯಾ ದದಾಮ್ಯೇತತ್ತವೇತಿ ವೈ ।
ಇತಿ ಶ್ರುತ್ವಾ ವಚಸ್ತಸ್ಯ ಬಲಿರ್ಬಲವತಾಂ ವರಃ ॥ ೨೩ ॥

೨೦–೨೧. ಎಲೈ ಪುಣ್ಯಾತ್ಮರೇ ! ನೀವು ನಮಗೆ ಹಿರಿಯ ಗುರುಗಳಷ್ಟೆ ! ಅದನ್ನು ನನಗೆ ಹೇಳಿರಿ ; ' ಎಂದು ಕೇಳಿದನು.

ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳುತ್ತಾನೆ :—'ಕೇಳು ಭೂಪತಿ ! ಇಂತು ಬಲಿಚಕ್ರವರ್ತಿಯಿಂದ ಪ್ರೇರಿಸಲ್ಪಟ್ಟ ಶುಕ್ರಾಚಾರ್ಯರು ಆ ಬಲಿಯನ್ನು ಕುರಿತು ಈ ಮಾತನ್ನು ಹೇಳಿದರು ;—' ಎಲೈ ಬಲಿಚಕ್ರವರ್ತಿಯೇ ಈಗ ನಾನು ಹೇಳುವುದನ್ನು ಕೇಳು ; ಆ ವಾಮನಮೂರ್ತಿಯು ದೇವತೆಗಳಿಗೆ ಉಪಕಾರವನ್ನು ಮಾಡುವುದಕ್ಕೂ, ರಕ್ಕಸರಿಗೆ ಅಪಕಾರವನ್ನೆಸಗುವುದಕ್ಕೂ ನಿನ್ನ ಯಜ್ಞಕ್ಕೆ ಬರುತ್ತಾನೆ.

೨೨-೨೩. ಈ ವಿಷಯದಲ್ಲಿ ಸಂದೇಹವಿಲ್ಲವು. ಶ್ರೀವಾಮನದೇವನು ಬರಲು, ನೀನು ಆ ಮಹಾತ್ಮನಿಗೆ ' ಅಯ್ಯಾ ! ನಿನಗೆ ನಾನು ಇದನ್ನು ದಾನಮಾಡುತ್ತೇನೆ ; ' ಎಂದು ಆಣೆಮಾಡಬಾರದು ; ' ಎಂಬ ಆ ಶುಕ್ರಾಚಾರ್ಯರ ಮಾತನ್ನು ಬಲಿಗಳಲ್ಲಿ ಕಲಿಯಾದ ಬಲಿಚಕ್ರವರ್ತಿಯು ಕೇಳಿ, ತಮ್ಮ ಪುರೋಹಿತರಾದ ಶುಕ್ರಾಚಾರ್ಯರಿಗೆ

ಉವಾಚ ತಾಂ ಶುಭಾಂ ವಾಣೀಂ ಶುಕ್ರಮಾತ್ಮ ಪುರೋಹಿತಮ್ ।
ಆಗತೇ ವಾಮನೇ ಶುಕ್ರ ಯಜ್ಞೇ ಮೇ ಮಧುಸೂದನೇ ॥ ೨೪ ॥

ನ ಶಕ್ಯತೇ ಪ್ರತಿಖ್ಯಾತುಂ ದಾನಂ ಪ್ರತಿ ಮಯಾ ಗುರೋ ।
ಅನ್ಯೇಷಾಮಪಿ ಜಂತೂನಾಮಿತ್ಯುಕ್ತಂ ತೇ ಮಯಾಽಧುನಾ ॥ ೨೫ ॥

ಕಿಂ ಪುನರ್ವಾಸುದೇವಸ್ಯ ಆಗತಸ್ಯ ತು ಶಾರ್ಙ್ಗಿಣಃ ।
ತ್ವಯಾ ವಿಘ್ನೋ ನ ಕರ್ತವ್ಯೋ ವಾಮನೇಽತ್ರಾಗತೇ ದ್ವಿಜ ॥ ೨೬ ॥

ಯದ್ಯದ್ದ್ರವ್ಯಂ ಪ್ರಾರ್ಥಯತೇ ತತ್ತದ್ದ್ರವ್ಯಂ ದದಾಮ್ಯಹಮ್ ।
ಕೃತಾರ್ಥೋಽಹಂ ಮುನಿಶ್ರೇಷ್ಠ ಯದ್ಯಾಗಚ್ಛತಿ ವಾಮನಃ ॥ ೨೭ ॥

ಇತ್ಯೇವಂ ವದತಸ್ತಸ್ಯ ಯಜ್ಞಶಾಲಾಂ ಸ ವಾಮನಃ ।
ಆಗತ್ಯ ಪ್ರವಿವೇಶಾಥ ಪ್ರಶಶಂಸ ಬಲೇರ್ಮಖಮ್ ॥ ೨೮ ॥

ಆ ಮಂಗಳಕರ ನುಡಿಗಳನ್ನು ನುಡಿದನು. ‘ ಎಲೈ ಶುಕ್ರಾಚಾರ್ಯರೇ ! ಮಧುವೆಂಬ ರಕ್ಕಸನನ್ನು ಕೊಂದ ವಾಮನಮೂರ್ತಿಯು ನನ್ನ ಯಜ್ಞಕ್ಕೆ ಬರಲು, ಎಲೈ ಗುರುವೇ ! ದಾನವಿಷಯವನ್ನು ಕುರಿತು ವಿರೋಧವಾಗಿ ನುಡಿಯಲು (ನಿಷೇಧಿಸಲು) ಸಾಧ್ಯವಿಲ್ಲವು. ಇಂತು ಇತರ ಪ್ರಾಣಿಗಳಿಗೂ ದಾನವನ್ನು ನಿಷೇಧಿಸಲಾಗುವುದಿಲ್ಲ ವೆಂದು ನಿಮಗೂ ಈಗ ಹೇಳುವೆನು.

೨೬. ಇಂತಿರಲು ಶಾರ್ಙ್ಗವೆಂಬ ಬಿಲ್ಲನ್ನು ತಾಳಿಗ, ಸರ್ವತ್ರ ವ್ಯಾಪ್ತನಾಗ, ಬೇಡಲು ಬಂದ ವಾಸುದೇವನಿಗೆ ಹೇಳಲಾಗುವುದಿಲ್ಲವೆಂದು ಹೇಳುವುದೇನು ? ಎಲೈ ದ್ವಿಜನೇ ! ವಾಮನನು ಇಲ್ಲಿಗೆ ಬರಲು ನೀವು ಅಡ್ಡಿಮಾಡಬಾರದು.

೨೭. ಆ ಶ್ರೀವಾಮನನು ಯಾವ ವಸ್ತುವನ್ನು ಬೇಡುವನೋ, ಆ ವಸ್ತು ವೆಲ್ಲವನ್ನೂ ನಾನು ಕೊಡುವೆನು. ಶ್ರೀವಾಮನನು ಬಂದ ಪಕ್ಷದಲ್ಲಿ ಎಲೈ ಮುನಿ ಶ್ರೇಷ್ಠನೇ ! ನಾನು ಕೃತಾರ್ಥನಾದನಷ್ಟೆ ! ’

೨೮. ಎಂದು ಹೇಳುತ್ತಲಿದ್ದ ಆ ಬಲಿಚಕ್ರವರ್ತಿಯ ಜನ್ನವಾಡಕ್ಕೆ ಶ್ರೀವಾಮನನು ಬಂದು ಒಳಹೊಕ್ಕನು. ಅನಂತರದಲ್ಲಿ ಬಲಿಯು ಜನ್ನವನ್ನು ಕೊಂಡಾಡಿದನು.

ತಂ ದೃಷ್ಟ್ವಾ ಸಹಸಾ ರಾಜನ್ ರಾಜಾ ದೈತ್ಯಾಧಿಪೋ ಬಲಿಃ ।
ಉಪಚಾರೇಣ ಸಂಪೂಜ್ಯ ವಾಕ್ಯಮೇತದುವಾಚ ಹ ॥ ೨೯ ॥

ಯದ್ಯತ್ಪ್ರಾರ್ಥಯಸೇ ಮಾಂ ತ್ವಂ ದೇವದೇವ ಧನಾದಿಕಮ್ ।
ತತ್ಸರ್ವಂ ತವ ದಾಸ್ಯಾಮಿ ಮಾಂ ಯಾಚಸ್ವಾದ್ಯ ವಾಮನ ॥ ೩೦ ॥

ಇತ್ಯುಕ್ತೋ ವಾಮನಸ್ತತ್ರ ನೃಪೇಂದ್ರ ಬಲಿನಾ ತದಾ ।
ಯಾಚಯಾಮಾಸ ದೇವೇಶೋ ಭೂಮೇರ್ದೇಹಿ ಪದತ್ರಯಮ್ ॥ ೩೧ ॥

ಮಮಾಗ್ನಿಶರಣಾರ್ಥಾಯ ನ ಮೇಽನ್ಯೋಽಸ್ತಿ ಪ್ರಯೋಜನಮ್ ।
ಇತ್ಯುಕ್ತೋ ವಾಮನೇನಾಥ ಬಲಿಃ ಪ್ರಾಹ ಚ ವಾಮನಮ್ ॥ ೩೨ ॥

ಪದತ್ರಯೇಣ ಚೇತ್ತೃಪ್ತಿರ್ಮಯಾ ದತ್ತಂ ಪದತ್ರಯಮ್ ।
ಏವಮುಕ್ತೇ ತು ಬಲಿನಾ ವಾಮನೋ ಬಲಿಮಬ್ರವೀತ್ ॥ ೩೩ ॥

---

೨೯. ಎಲೈ ರಾಯನೇ ! ಕೇಳು ; ದೈತ್ಯರೊಡೆಯನಾದ ಬಲಿಚಕ್ರವರ್ತಿಯು ಇದ್ದಕ್ಕಿದ್ದಂತೆಯೇ ಬಂದ ಆ ವಾಮನದೇವನನ್ನು ಕಂಡು, ಉಪಚಾರದಿಂದ ಪೂಜಿಸಿ, ಈ ಮಾತನ್ನು ನುಡಿದನು.

೩೦. 'ಎಲೈ ದೇವೋತ್ತಮನಾದ ಶ್ರೀವಾಮನಸ್ವಾಮಿಯೇ ! ನೀನು ದ್ರವ್ಯವೇ ಮೊದಲಾದ ಯಾವ ಯಾವ ವಸ್ತುವನ್ನು ಕೇಳುವೆಯೋ, ಅವೆಲ್ಲವನ್ನೂ ನಿನಗೆ ಕೊಡುವೆನು. ಇಂದು ನನ್ನನ್ನು ಬೇಡು;' ಎಂದು ಹೇಳಿದನು.

೩೧. ಎಲೈ ನೃಪೇಂದ್ರನೇ ! ಕೇಳು ; ಅಲ್ಲಿ ಆಗ ಇಂತು ಬಲಿಯು ಇಂತು ಹೇಳಲು, ಸರ್ವದೇವನಿಯಾಮಕನಾದ ಶ್ರೀವಾಮನನು ಬಲಿಯನ್ನು ಭೂಮಿಯ ಮೂರು ಹೆಜ್ಜೆಗಳನ್ನು ದಾನ ಮಾಡೆಂದು ಬೇಡಿದನು.

೩೨-೩೩. ನನಗೆ ಅಗ್ನಿಯನ್ನಿಡಲು ಅಲ್ಲವು; ನನಗೆ ಪ್ರಯೋಜನ ವಿಷಯವು ಬೇರೆಯಿದೆ, ಎಂದು ವಾಮನನು ಹೇಳಲು, ಬಲಿಯು ವಾಮನನಿಗೆ ಹೇಳುತ್ತಾನೆ :- 'ಅಯ್ಯಾ ವಾಮನದೇವ ! ನಿನಗೆ ಮೂರು ಹೆಜ್ಜೆಗಳಿಂದಲೇ ಸಂತೋಷವಾಗುವು ದಾದರೆ, ನಾನು ಆ ಮೂರು ಹೆಜ್ಜೆಗಳ ಭೂಮಿಯನ್ನು ಇತ್ತೆನು ;' ಎಂದು ಬಲಿಯು

ದೀಯತಾಂ ಮೇ ಕರೇ ತೋಯಂ ಯದಿ ದತ್ತಂ ಪದತ್ರಯಮ್ ।
ಇತ್ಯುಕ್ತೇ ದೇವದೇವೇನ ತದಾ ತತ್ರ ಸ್ವಯಂ ಬಲಿಃ ॥ ೧೪ ॥

ಸಜಲಂ ಹೇಮಕಲಶಂ ಗೃಹೀತ್ವೋತ್ಥಾಯ ಭಕ್ತಿತಃ ।
ಯಾವತ್ಸ ವಾಮನಕರೇ ತೋಯಂ ದಾತುಮುಪಸ್ಥಿತಃ ॥ ೧೫ ॥

ತಾವಚ್ಛುಕ್ರಃ ಕಲಶಗೋ ಜಲಧಾರಾಂ ರುರೋಧ ಹ ।
ತತಶ್ಚ ವಾಮನಃ ಕ್ರುದ್ಧಃ ಪವಿತ್ರಾಗ್ರೇಣ ಸತ್ತಮ ॥ ೧೬ ॥

ಉದಕೇ ಕಲಶದ್ವಾರೇ ತಚ್ಛುಕ್ರಾಕ್ಷಿಮವೇಧಯತ್ ।
ತತೋ ವ್ಯಪಗತಃ ಶುಕ್ರೋ ವಿದ್ಧೈಕಾಕ್ಷೋ ನರೋತ್ತಮ ॥ ೧೭ ॥

ತೋಯಧಾರಾ ನಿಪತಿತಾ ವಾಮನಸ್ಯ ಕರೇ ಪುನಃ ।
ಕರೇ ನಿಪತಿತೇ ತೋಯೇ ವಾಮನೋ ವವೃಧೇ ಕ್ಷಣಾತ್ ॥ ೧೮ ॥

ಹೇಳಲು, ಶ್ರೀ ವಾಮನನು ಬಲಿಗೆ ಇಂತು ಹೇಳಿದನು :—'ಎಲೈ ಬಲಿಯೇ! ಮೂರು ಹೆಜ್ಜೆಯ ಭೂಮಿಯನ್ನು ಕೊಟ್ಟೆಯಾದರೆ, ನನ್ನ ಕೈಯಲ್ಲಿ ಜಲಧಾರೆಯನ್ನೆರೆ;' ಎಂದು ದೇವೋತ್ತಮನಾದ ಶ್ರೀವಾಮನನು ಹೇಳಲು, ಆಗ ಅಲ್ಲಿ ಬಲಿಚಕ್ರವರ್ತಿಯು ತಾನೇ ಜಲದಿಂದ ಕೂಡಿದ ಚಿನ್ನದ ಗಿಂಡಿಯನ್ನು ತೆಗೆದುಕೊಂಡು, ಭಕ್ತಿಯಿಂದ ಎದ್ದು, ಯಾವಾಗ ವಾಮನನ ಕೈಯಲ್ಲಿ ಜಲವನ್ನೆರೆಯಲು ನಿಂತನೋ, ಆವಾಗ ಶುಕ್ರಾಚಾರ್ಯನು ಕಲಶದೊಳಗಿದ್ದು ನೀರಿನ ಧಾರೆಯನ್ನು ಅಡ್ಡಿಪಡಿಸಿದನು. ಅನಂತರದಲ್ಲಿ ಎಲೈ ಸತ್ತಮನೇ! ಕೇಳು; ಶ್ರೀ ವಾಮನನು ಕೋಪಗೊಂಡವನಾಗಿ ತನ್ನ ಕೈಯ ಪವಿತ್ರದ ತುದಿಯಿಂದ ಕಲಶದ ಮೂತಿಯಲ್ಲಿ ನೀರಿನಲ್ಲಿ ಆ ಶುಕ್ರನ ಕಣ್ಣನ್ನು ಚುಚ್ಚಿದನು. ಎಲೈ ನರೋತ್ತಮನೇ! ಬಳಿಕ ಇಂತು ಚುಚ್ಚಿಸಿಕೊಂಡ ಒಂದು ಕಣ್ಣುಳ್ಳ ಶುಕ್ರಾಚಾರ್ಯನು ಕಲಶದಿಂದ ಹೊರಹೊರಡಲು ಹೋದನು.

೧೮. ಮತ್ತು ವಾಮನನ ಕೈಯಲ್ಲಿ ನೀರಿನಧಾರೆಯು ಬಿದ್ದಿತು. ಕೈಯಲ್ಲಿ ದಾನವಾರಿಯು ಬೀಳಲು, ಕ್ಷಣದಿಂದಲೇ ವಾಮನನು ಬೆಳೆದನು.

ಪಾದೇನೈಕೇನ ವಿಕ್ರಾಂತಾ ತೇನೈವ ಸಕಲಾಮಹೀ ।
ಅಂತರಿಕ್ಷಂ ದ್ವಿತೀಯೇನ ದ್ಯೌಸ್ತೃತೀಯೇನ ಸತ್ತಮ ॥ ೩೯ ॥

ಅನೇಕಾನ್ ದಾನವಾನ್ ಹತ್ವಾ ಹೃತ್ವಾ ತ್ರಿಭುವನಂ ಬಲೇಃ ।
ಪುರಂದರಾಯ ತ್ರೈಲೋಕ್ಯಂ ದತ್ವಾ ಬಲಿಮುವಾಚ ಹ ॥ ೪೦ ॥

ಯಸ್ಮಾತ್ತೇ ಭಕ್ತಿತೋ ದತ್ತಂ ಪಾತಾಲತಲಮುತ್ತಮಮ್ ।
ತಸ್ಮಾತ್ತೇ ಸಾಂಪ್ರತಂ ದತ್ತಂ ತೋಯಮದ್ಯ ಕರೇ ಮಮ ॥ ೪೧ ॥

ತತ್ರ ಗತ್ವಾ ಮಹಾಭಾಗ ಭುಙ್ಕ್ಷ್ವ ತ್ವಂ ಮತ್ಪ್ರಸಾದತಃ ।
ವೈವಸ್ವಂತೇಽಂತರೇಽತೀತೇ ಪುನರಿಂದ್ರೋ ಭವಿಷ್ಯಸಿ ॥ ೪೨ ॥

ಪ್ರಣಮ್ಯ ಚ ತತೋ ಗತ್ವಾ ತಲಂ ಭೋಗಮವಾಪ್ತವಾನ್ ॥ ೪೩ ॥

---

೩೯. ಒಂದು ಹೆಜ್ಜೆಯಿಂದಲೇ ಭೂಮಿಯೆಲ್ಲವೂ ಆಕ್ರಮಿಸಲ್ಪಟ್ಟಿತು. ಎರಡನೆಯ ಹೆಜ್ಜೆಯಿಂದ ಅಂತರಿಕ್ಷವೂ, ಮೂರನೆಯ ಹೆಜ್ಜೆಯಿಂದ ಸ್ವರ್ಗಲೋಕವೂ ಆಕ್ರಮಿಸಲ್ಪಟ್ಟುವು.

೪೦. ಇಂತು ಶ್ರೀವಾಮನಸ್ವಾಮಿಯು ಅನೇಕ ರಕ್ಕಸರನ್ನು ಕೊಂದು, ಬಲಿಚಕ್ರವರ್ತಿಯಿಂದ ಮೂರು ಲೋಕಗಳನ್ನೂ ಅಪಹರಿಸಿಕೊಂಡು, ಪುರಂದರನಾದ ದೇವೇಂದ್ರನಿಗೆ ತ್ರೈಲೋಕ್ಯವನ್ನೂ ಕೊಟ್ಟು, ಬಲಿಗೆ ಇಂತು ನುಡಿದನು.

೪೧-೪೨. 'ಎಲೈ ಬಲೀಂದ್ರನೇ! ನೀನು ಭಕ್ತಿಯಿಂದ ದಾನಜಲವನ್ನು ಇಂದು ನನ್ನ ಕೈಯಲ್ಲಿತ್ತುದರಿಂದ, ಎಲೈ ಪುಣ್ಯವಂತನೇ! ನಿನಗೆ ಈಗ ಉತ್ತಮವಾದ ಪಾತಾಲಲೋಕವನ್ನಿತ್ತಿದ್ದೇನೆ; ಅಲ್ಲಿ ಹೋಗಿ ನನ್ನ ಅನುಗ್ರಹದಿಂದ ಸುಖವನ್ನನುಭವಿಸು. ಈವೈವಸ್ವತಮನ್ವಂತರವು ಕಳೆಯಲು, ನೀನು ಪುನಃ ಇಂದ್ರನಾಗುವೆ;' ಎಂದು ಅನುಗ್ರಹಿಸಿದನು.

೪೩. ಬಲಿಚಕ್ರವರ್ತಿಯು ಶ್ರೀವಾಮನದೇವನಿಗೆರಗಿ, ಪಾತಾಳಕ್ಕೆ ಹೋಗಿ ಭೋಗವನ್ನೈದಿದನು.

ಶಕ್ರೋಽಪಿ ಸ್ವರ್ಗಮಾರುಹ್ಯ ಪ್ರಸಾದಾದ್ವಾಮನಸ್ಯ ವೈ ।
ಸಮಾಗತಸ್ತ್ರಿಭುವನಂ ರಾಜನ್ ದೇವಸಮನ್ವಿತಃ ॥ ೪೪ ॥

ಯಃ ಸ್ಮರೇತ್ಪ್ರಾತರುತ್ಥಾಯ ವಾಮನಸ್ಯ ಕಥಾಮಿಮಾಮ್ ।
ಸರ್ವಪಾಪ ವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥ ೪೫ ॥

ಇತ್ಥಂ ಪುರಾ ವಾಮನರೂಪಮಾಸ್ಥಿತೋ
ಹರಿರ್ಬಲೇರ್ಹೃತ್ಯ ಜಗತ್ತ್ರಯಂ ನೃಪ ।
ಕೃತ್ವಾ ಪ್ರಸಾದಂ ಚ ದಿವೌಕಸಾಂ ಪತೇಃ
ದತ್ವಾ ತ್ರಿಲೋಕಂ ಸ ಯಯೌ ಮಹೋದಧಿಮ್ ॥ ೪೬ ॥

ಇತಿ ಶ್ರೀ ನರಸಿಂಹಪುರಾಣೇ ವಾಮನ ಪ್ರಾದುರ್ಭಾವೋ
ನಾಮ ಪಞ್ಚಚತ್ವಾರಿಂಶೋಽಧ್ಯಾಯಃ

---

೪೪. ದೇವೇಂದ್ರನೂ ಶ್ರೀ ವಾಮನನ ಅನುಗ್ರಹದಿಂದ ಸ್ವರ್ಗವನ್ನೇರಿ, ಎಲೈ ರಾಯನೇ ! ದೇವತೆಗಳೊಡಗೂಡಿ ತ್ರಿಭುವನವನ್ನು ಹೊಂದಿದನು.

೪೫. ಯಾವ ಮಾನವನು ಹೊತ್ತಾರೆಯೆದ್ದು ಶ್ರೀ ವಾಮನನ ಈ ಕಥೆಯನ್ನು ಸ್ಮರಿಸುವನೋ, ಅವನು ಎಲ್ಲಾ ಪಾಪಗಳಿಂದಲೂ ಮುಕ್ತನಾಗಿ ಶ್ರೀ ಮಹಾವಿಷ್ಣುವಿನ ಲೋಕದಲ್ಲಿ ಮಾನ್ಯನಾಗುತ್ತಾನೆ.

೪೬. ಇಂತು ಪೂರ್ವದಲ್ಲಿ ಸ್ವರೂಪಾಂಶವಾದ ವಾಮನಾವತಾರವನ್ನು ಅಭಿವ್ಯಕ್ತಿಮಾಡಿದ ಶ್ರೀಹರಿಯು, ಎಲೈ ಸಹಸ್ರಾನೀಕರಾಯನೇ ! ಬಲಿಚಕ್ರವರ್ತಿಯಿಂದ ಮೂಲೋಕವನ್ನೂ ಕಿತ್ತುಕೊಂಡು, ಅವನಿಗೆ ಅನುಗ್ರಹವನ್ನೆಸಗಿ, ದೇವತೆಗಳೊಡೆಯನಾದ ಇಂದ್ರನಿಗೆ ಮೂರು ಲೋಕವನ್ನೂ ಇತ್ತು, ತನ್ನ ಮೂಲ ರೂಪವನ್ನೇ ಹೊಂದಲು, ಕಡುಮುನ್ನೀರನ್ನು ಹೊಂದಿದನು ;' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀ ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ವಾಮನಾವತಾರವೆಂಬ
ನಲವತ್ತೈದನೆಯ ಅಧ್ಯಾಯವು ಮುಗಿದುದು.

ನಲವತ್ತೈದನೆಯ ಅಧ್ಯಾಯದವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, 'ಮಾರ್ಕಂಡೇಯಮುನಿಯು ಸಹಸ್ರಾನೀಕರಾಜನಿಗೆ ತಾನು ಸಂಕ್ಷೇಪವಾಗಿ ಶ್ರೀ ವಾಮನಾವತಾರವನ್ನು ನಿರೂಪಿಸುವುದಾಗಿ ಹೇಳಿ, ಪೂರ್ವದಲ್ಲಿ ವಿರೋಚನನ ಮಗನಾದ, ಕಲಿಯಾದ ಬಲಿಯು ತನ್ನ ಬಲವಿನಿಂದ ತ್ರಿಲೋಕ ವನ್ನೂ ಗೆದ್ದು, ಯಜ್ಞಯಾಗಾದಿಗಳಲ್ಲಿಯೂ ದೇವತೆಗಳಿಗೆ ಹವಿಸ್ಸನ್ನು ಕೊಡದೆ, ಅಸುರರಿಗೆ ಮಾತ್ರ ಕೊಡುತ್ತಿರಲು, ದೇವತೆಗಳೂ, ದೇವೇಂದ್ರನೂ, ಅತಿಕೃಶರಾದು ದನ್ನು ಕಂಡು, ಅದಿತಿದೇವಿಯು ಕಠಿನವಾದ ತಪಸ್ಸನ್ನೆಸಗಿ, ಶ್ರೀಹರಿಯನ್ನು ಅವನಿಗಿಷ್ಟವಾದ ಸಾಮಗಳಿಂದ ನುತಿಸಿದಳು. ಅವಳ ಸ್ತುತಿಗೆ ಭಗವಂತನು ಪ್ರತ್ಯಕ್ಷ ನಾಗಿ, ತಾನು ಪ್ರಾದುರ್ಭವಿಸಿ, ಬಲಿಯನ್ನು ಬಂಧಿಸಿ, ತ್ರೈಲೋಕ್ಯವನ್ನು ಪುನಃ ದೇವೇಂದ್ರನಿಗೆ ಕೊಡುವುದಾಗಿ ಹೇಳಿ, ಮರೆಯಾದನು.

ಬಳಿಕ ಅದಿತಿಯು ಕಶ್ಯಪನಿಂದ ಗರ್ಭವನ್ನು ಧರಿಸಲು, ಕಾಲದಿಂದ ಭಗವಂತನು ಅವಳಲ್ಲಿ ಅವತರಿಸಿದನು. ಕೂಡಲೇ ಚತುರ್ಮುಖನು ಜಾತಕರ್ಮಾದಿ ಸಂಸ್ಕಾರಗಳನ್ನೆಸಗಿದನು. ತರುವಾಯ ಉಪನಯನಗೊಂಡ ವಾಮನನು ತಾಯಿಯ ಅನುಮತಿಯನ್ನು ಪಡೆದು, ಬೇಳುತ್ತಿದ್ದ ಬಲಿಯ ಜನ್ನವಾಡಕ್ಕೆಂದು ಬರುತ್ತಿರಲು, ಧರೆಯು ಕಂಪಿಸಲು, ಜನ್ನವಾಡದಲ್ಲಿ ಬೆಂಕಿಗಳಾರಿದುವು ; ಋತ್ವಿಜರು ಮಂತ್ರ ತಪ್ಪಿದರು ; ಅಸುರರು ಹವಿರ್ಭಾಗಗೊಳ್ಳದಂತಾದರು ; ಆಗ ದೈತ್ಯರಾಜನು ತನ್ನ ಗುರುವಾದ ಶುಕ್ರಾಚಾರ್ಯರನ್ನು ಕೇಳಲು, ಅಂತಾಗಲು ಕಾರಣವನ್ನರಿತು, ಶ್ರೀವಾಮನನು ಯಜ್ಞಶಾಲೆಗೆ ಬರುತ್ತಲಿರುವುದರಿಂದ ಹಾಗೆ ಆಗುತ್ತಲಿರುವುದು ; ಅವನು ಬಂದು ಬೇಡಿದರೆ, ಯಾವುದನ್ನೂ ಕೊಡಕೂಡದೆಂದು ಶುಕ್ರಾಚಾರ್ಯರು ಹೇಳಲು, ಅಂತು ನಿರೋಧಿಸಕೂಡದೆಂದು ಬಲಿಯು ಹೇಳುವಷ್ಟರಲ್ಲಿ, ವಾಮನನ, ಜನ್ನವಾಡಕ್ಕೈತಂದನು.

ಆಗ ಬಲಿಯು ಕಂಡು ಸತ್ಕರಿಸಿ, ಯಾವುದನ್ನು ಕೇಳಿದರೂ ಕೊಡಲು ತಾನು ಸಿದ್ಧನೆನಲು, ಶ್ರೀವಾಮನನು ಮೂರು ಹೆಜ್ಜೆಯ ಭೂಮಿಯನ್ನು ಬೇಡಲು,

ಬಲಿಯು ಕೊಟ್ಟೆನೆಂದನು. ಆಗ ಅಂತು ಕೊಟ್ಟವನಾದರೆ, ಕೈಗೆ ಧಾರಾಜಲವನ್ನೆರೆಯಬೇಕೆಂದು ವಾಮನನು ಹೇಳಲು, ಭಕ್ತಿಯಿಂದ ಹೊನ್ನ ಕಲಶವನ್ನೇ ತೆಗೆದುಕೊಂಡು ನೀರೆರೆಯಲು ತೊಡಗಲು, ಶುಕ್ರನು ಆ ಕಲಶದ ಮೂತಿಯಲ್ಲಿ ಅಡ್ಡಗಟ್ಟಲು, ಬಲಿಯು ತನ್ನ ಪವಿತ್ರದ ಕುಶದಿಂದ ತಿವಿಯಲು, ಒಂದು ಕಣ್ಣು ಕುರುಡಾಗಿ ಶುಕ್ರಾಚಾರ್ಯನು ಓಡಿಹೋಗನು. ಆಗ ಜಲವು ವಾಮನನ ಕೈಗೆ ಬೀಳಲು, ಕೂಡಲೆ ಅವನು ಬಳೆದು ಒಂದು ಹೆಜ್ಜೆಯಿಂದ ಭೂಮಿಯನ್ನೂ, ಇನ್ನೊಂದರಿಂದ ಆಗಸವನ್ನೂ, ಮೂರನೆಯ ಹೆಜ್ಜೆಯಿಂದ ಸ್ವರ್ಗವನ್ನೂ ಆಕ್ರಮಿಸಿ, ಬಲಿಗೆ ಪಾತಾಲದಲ್ಲಿ ಭೋಗಪಟ್ಟು, ವೈವಸ್ವತಮನ್ವಂತರ ಕಳೆಯಲು, ಮಹೇಂದ್ರನಾಗುವುದಾಗಿ ಅನುಗ್ರಹಿಸಿ, ದೇವೇಂದ್ರನಿಗೆ ತ್ರೈಲೋಕ್ಯವನ್ನಿತ್ತನು. ತರುವಾಯ ದೇವೇಂದ್ರನು ದೇವತೆಗಳೊಡನೆ ತ್ರಿಭುವನಾಧಿಪತಿಯಾಗಿದ್ದನು.

ಇಂತು ಶ್ರೀವಾಮನಾವತಾರಿಯಾದ ಶ್ರೀಹರಿಯು ದುಷ್ಟರಕ್ಕಸರನ್ನು ಸಂಹರಿಸಿಯೂ, ಬಂಧಿಸಿಯೂ, ದೇವತೆಗಳನ್ನು ರಕ್ಷಿಸಿದನು. ಈ ಚರಿತ್ರೆಯನ್ನು ಬೆಳಗ್ಗೆ ಸ್ಮರಿಸುವವನು ವಿಷ್ಣುಲೋಕದಲ್ಲಿ ಮಾನ್ಯನಾಗುವನು ;' ಎಂದು ನಿರೂಪಿಸಿರುವುದನ್ನು ಶ್ರೀಸೂತರು ಭಾರದ್ವಾಜನಿಗೆ ನಿರೂಪಿಸಿರುತ್ತಾರೆ.

ಇಂತು ನಲವತ್ತೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್

ಷಟ್ಚತ್ವಾರಿಂಶೋಽಧ್ಯಾಯಃ

ಶ್ರೀ ಪರಶುರಾಮ ಪ್ರಾದುರ್ಭಾವಃ

॥ ಮಾರ್ಕಂಡೇಯ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ಪ್ರಾದುರ್ಭಾವಂ ಹರೇಃ ಶುಭಮ್ ।
ಜಮದಗ್ನೇಃ ಪುರಾ ಯೇನ ಕ್ಷತ್ರಮುತ್ಸಾದಿತಂ ಶೃಣು ॥ ೧ ॥

ನಲವತ್ತಾರನೆಯ ಅಧ್ಯಾಯವು.

ಶ್ರೀಪರಶುರಾಮಾವತಾರವು.

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ನಿರೂಪಿಸುತ್ತಾನೆ ;—'ಎಲೈ ಸಹಸ್ರಾನೀಕರಾಯನೇ ! ಕೇಳು ; ಪೂರ್ವದಲ್ಲಿ ಯಾವನಿಂದ ದುಷ್ಟಕ್ಷತ್ರಿಯ ಕುಲವೆಲ್ಲವೂ ಅಳಿವನೆಯ್ದಿತೋ, ಜಮದಗ್ನಿಮುನಿಯಿಂದಾದ ಶ್ರೀಹರಿಯ ಆ ಪರಶುರಾಮಾವತಾರ ಚರಿತ್ರೆಯನ್ನು ಇನ್ನು ಮುಂದೆ ಹೇಳುವೆನು. ಅದನ್ನು ಮನಗೊಟ್ಟಾಲಿಸು.

ಪುರಾದೇವಗಣೈರ್ವಿಷ್ಣುಃ ಸ್ತುತಃ ಕ್ಷೀರೋದಧೌ ನೃಪ ।
ಋಷಿಭಿಶ್ಚ ಮಹಾಭಾಗೈರ್ಜಮದಗ್ನೇಃ ಸುತೋಽಭವತ್ ॥ ೨ ॥

ಪರಶುರಾಮ ಇತಿ ಖ್ಯಾತಃ ಸರ್ವಲೋಕೇಷು ಸ ಪ್ರಭುಃ ।
ದುಷ್ಟಾನಾಂ ನಿಗ್ರಹಂ ಕರ್ತುಮವತೀರ್ಣೋ ಮಹೀತಲೇ ॥ ೩ ॥

ಕೃತವೀರ್ಯಸುತಃ ಶ್ರೀಮಾನ್ ಕಾರ್ತವೀರ್ಯೋಽಭವತ್ಪುರಾ ।
ದತ್ತಾತ್ರೇಯಂ ಸಮಾರಾಧ್ಯ ಚಕ್ರವರ್ತಿತ್ವಮಾಪ್ತವಾನ್ ॥ ೪ ॥

ಸ ಕದಾ ಚಿನ್ಮಹಾಭಾಗೋ ಜಮದಗ್ನ್ಯಾಶ್ರಮಂ ಯಯೌ ।
ಜಮದಗ್ನಿಸ್ತು ತಂ ದೃಷ್ಟ್ವಾ ಚತುರಂಗಬಲಾನ್ವಿತಮ್ ॥ ೫ ॥

ಉವಾಚ ಮಧುರಂ ವಾಕ್ಯಂ ಕಾರ್ತವೀರ್ಯಂ ನೃಪೋತ್ತಮಮ್ ।
ಮುಚ್ಯತಾಮತ್ರ ತೇ ಸೇನಾ ಅತಿಥಿಸ್ತ್ವಂ ಸಮಾಗತಃ ॥ ೬ ॥

---

೨. ಎಲೈ ನೃಪನೇ ! ಕೇಳು ; ಪೂರ್ವದಲ್ಲಿ ದೇವತೆಗಳ ಗಡಣವೂ, ಪುಣ್ಯಶಾಲಿಗಳಾದ ಋಷಿಗಳತಂಡವೂ, ಪಾಲ್ಗಡಲತಡಿಗೆ ಹೋಗಿ, ಶ್ರೀಮಹಾವಿಷ್ಣುವನ್ನು ಕೊಂಡಾಡಿದರು. ಅವರ ಸ್ತೋತ್ರಕ್ಕೆ ಮೆಚ್ಚಿದ ಶ್ರೀಹರಿಯು ಲೋಕಭಾರವನ್ನು ಕಳೆದು, ಸಜ್ಜನರನ್ನು ರಕ್ಷಿಸುವ ಸಲುವಾಗಿ, ಜಮದಗ್ನಿಮುನಿಯ ಮಗನಾಗಿ (ಪರಶುರಾಮನಾಗಿ) ಅವತರಿಸಿದನು.

೩. ಆ ಪ್ರಭುವು ದುಷ್ಟರನ್ನು ಶಿಕ್ಷಿಸಲು ಭೂತಲದಲ್ಲಿ ಅವತರಿಸಿದವನಾಗಿ ಲೋಕಗಳಲ್ಲೆಲ್ಲಾ 'ಪರಶುರಾಮ'ನೆಂದು ಪ್ರಸಿದ್ಧಿ ಪಡೆದನು.

೪. ಪೂರ್ವದಲ್ಲಿ ಕೃತವೀರ್ಯನ ಮಗನು ಶ್ರೀಮಂತನಾದ ಕಾರ್ತವೀರ್ಯನೆಂಬವನು ದತ್ತಾತ್ರೇಯನನ್ನು ಸೇವಿಸಿ, ಚಕ್ರವರ್ತಿಯ ಪದವಿಯನ್ನು ಹೊಂದಿದನು.

೫-೬. ಆ ಪುಣ್ಯವಂತನು ಒಮ್ಮೆ ಜಮದಗ್ನಿಮುನಿಯ ಆಶ್ರಮಕ್ಕೆ ಹೋದನು. ಜಮದಗ್ನಿಮುನಿಯಾದರೋ ಚತುರಂಗ ಸೇನೆಯೊಡಗೂಡಿರುವ ಆ ರಾಯನನ್ನು ಕಂಡು, ಆ ರಾಯನಾದ ಕಾರ್ತವೀರ್ಯನಿಗೆ ಇಂತು ಹಿತವಚನವನ್ನಾಡಿದನು ; 'ಅಯ್ಯಾ ! ರಾಯನೇ ! ಇಲ್ಲಿ ನಿನ್ನ ಸೇನೆಯು ಬೀಡು ಬಿಡಲಿ ; ನೀನು ಅತಿಥಿ

ವನ್ಯಾದಿಕಂ ಮಯಾ ದತ್ತಂ ಭುಕ್ತ್ವಾ ಗಚ್ಛ ಮಹಾಮತೇ ।
ಪ್ರಮುಚ್ಯ ಸೇನಾಂ ಮುನಿವಾಕ್ಯಗೌರವಾತ್-
ಸ್ಥಿತೋ ನೃಪಸ್ತತ್ರ ಮಹಾನುಭಾವಃ ॥ ೭ ॥

ಆಮಂತ್ರ್ಯ ರಾಜಾನಮಲಂಘ್ಯ ಕೀರ್ತಿ-
ರ್ಮುನಿಃ ಸ ಧೇನುಂ ಚ ದುದೋಹ ದೋಗ್ಧ್ರೀಮ್ ।
ಹಸ್ತ್ಯಶ್ವಶಾಲಾ ವಿವಿಧಾ ನರಾಣಾಂ
ಗೃಹಾಣಿ ಚಿತ್ರಾಣಿ ಚ ತೋರಣಾನಿ ॥ ೮ ॥

ಸಾಮಂತಯೋಗ್ಯಾನಿ ಶುಭಾನಿ ರಾಜನ್
ಸಮಿಚ್ಛತಾಂ ಯಾನಿ ಸುಖಾನನಾನಿ ।
ಗೃಹಂ ವರಿಷ್ಠಂ ಬಹುಭೂಮಿಕಂ ಪುನಃ
ಸಮನ್ವಿತಂ ಸಾಧುಗಣೈರುಪಸ್ಕರೈಃ ॥ ೯ ॥

ಯಾಗಿ ಬಂದಿರುವೆ; ಎಲೈ ಮಹಾಮತಿಯೇ ! ನಾವು ಈವ ಗೆಡ್ಡೆಗೆಣಸುಗಳನ್ನು ಭೋಜನಮಾಡಿಕೊಂಡು, ಮುಂದೆ ಪ್ರಯಾಣಮಾಡು;' ಎಂದು ಜಮದಗ್ನಿ ಮುನಿಯು ಹೇಳಲು, ಆ ಮಹಾನುಭಾವನಾದ ಕಾರ್ತವೀರ್ಯಾರ್ಜುನನು ಜಮದಗ್ನಿಮುನಿಗಳ ಮಾತಿನಲ್ಲಿ ಪೂಜ್ಯತಾಬುದ್ಧಿಯಿಂದ, ಸೇನೆಯನ್ನು ಅಲ್ಲಿಯೇ ಬೀಡು ಬಿಟ್ಟು ನಿಂತನು.

೮–೧೧. ಗೌರವಾರ್ಹನಾದ, ಕೀರ್ತಿಶಾಲಿಯಾದ ಜಮದಗ್ನಿಮುನಿಯು ಇಂತು ಕಾರ್ತವೀರ್ಯನನ್ನು ಆಮಂತ್ರಿಸಿ, ಸುರಭಿಯೆಂಬ ಹಸುವನ್ನು ಕರೆದನು. ಅನೇಕತೆರೆಗಳಾದ ಆನೆಗಳ ಮನೆ, ಕುದುರೆಗಳ ಮನೆ, ಮಾನವರಿಗೆ ಯೋಗ್ಯವಾದ ಮನೆಗಳು, ಚಿತ್ರಗಳಾದ ಹೊರಬಾಗಿಲುಗಳುಳ್ಳ, ಸಾಮಂತರಾಜರಿಗೆ ಯೋಗ್ಯಗಳಾದ ಸೌಧಗಳು, ಅಪೇಕ್ಷಿಸುವವರಿಗೆ ಬೇಕಾದ ಅಗ್ರ್ಯಪ್ರವೇಶಗಳು, ಅತ್ಯಂತ ದೊಡ್ಡ ಪ್ರದೇಶಗಳನ್ನೊಳಗೊಂಡ ಅತ್ಯುತ್ತಮವಾದ ಮನೆ-ಇವುಗಳನ್ನೆಲ್ಲಾ ಸಜ್ಜನರು

ದುಗ್ಧ್ವಾ ಪ್ರಕಲ್ಪನ್ಮುನಿರಾಹ ಪಾರ್ಥಿವಂ
ಗೃಹಂ ಕೃತಂ ತೇ ಪ್ರವಿಶೇಹ ರಾಜನ್ ।
ಇಮೇ ಚ ಮಂತ್ರಿಪ್ರವರಾ ಜನಾಸ್ತೇ
ಗೃಹೇಷು ದಿವ್ಯೇಷು ವಿಶಂತು ಶೀಘ್ರಮ್ ॥ ೧೦ ॥

ಹಸ್ತ್ಯಶ್ವಜಾತ್ಯಶ್ಚ ವಿಶಂತು ಶಾಲಾಂ
ಭೃತ್ಯಾಶ್ಚ ನೀಚೇಷು ಗೃಹೇಷು ಸಂತು ।
ಇತ್ಯುಕ್ತಮಾತ್ರೇ ಮುನಿನಾ ನೃಪೋಽಸೌ
ಗೃಹಂ ವರಿಷ್ಠಂ ಪ್ರವಿವೇಶ ರಾಜಾ ॥ ೧೧ ॥

ಅನ್ಯೇಷು ಚಾನ್ಯೇಷು ಗೃಹೇಷು ಸಂಸ್ಥಿತೋ
ಮುನಿಃ ಪುನಃ ಪಾರ್ಥಿವಮಾಬಭಾಷೇ ।

ಮತ್ತು ಭೋಗಸಾಮಗ್ರಿಗಳು ಇವುಗಳಿಂದ ಕೂಡಿ ಕರೆದು (ದೋಹನಮಾಡಿ) ಉಂಟುಮಾಡುತ್ತಲಿದ್ದ ಮುನಿಯು ‘ ಎಲೈ ಕಾರ್ತವೀರ್ಯಾರ್ಜುನರಾಯನೇ! ನಿಮ್ಮೆಲ್ಲರ ವಾಸಕ್ಕೆ ಯೋಗ್ಯಗಳಾದ ಮನೆಗಳನ್ನು ಸಿದ್ಧಪಡಿಸಲಾಗಿದೆ; ಇಲ್ಲಿ ಪ್ರವೇಶಿಸುವುದು;—ಈ ಮಂತ್ರಿಶ್ರೇಷ್ಠರು, ಆ ಜನರು, ಎಲ್ಲರೂ ಬೇಗನೇ ದಿವ್ಯ ಗೃಹಗಳಲ್ಲಿ ಪ್ರವೇಶಿಸಲಿ; ಆನೆ; ಕುದುರೆಗಳ ತಂಡಗಳು ತಬೇಲಿಗಳನ್ನು ಹೊಗಲಿ; ಸೇವಕರೂ ಸಾಮಾನ್ಯವಾದ ಮನೆಗಳಲ್ಲಿರಲಿ; ’ ಎಂದು ಹೇಳಿದನು. ಮುನಿಯು ಇಂತು ಹೇಳಿದುದೇ ಸರಿ; ಕೂಡಲೇ ಈ ಪ್ರಜಾರಂಜಕನಾದ ಜನರೊಡೆಯನಾದ ಕಾರ್ತವೀರ್ಯಾರ್ಜುನನು ಶ್ರೇಷ್ಠವಾದ ಪ್ರಾಸಾದವನ್ನು ಪ್ರವೇಶಿಸಿದನು.

೧೨-೧೩. ಬೇರೆ ಬೇರೆ ಮನೆಗಳಲ್ಲಿ ವಾಸಿಸುತ್ತಿದ್ದ ಮುನಿಯು ಮತ್ತೂ ಆ ರಾಯನಿಗೆ ಹೇಳಿದನು:—‘ ಎಲೈ ನೃಪನೇ! ನಿನಗೆ ಸ್ನಾನ ಮಾಡಿಸುವ

ಸ್ನಾನಪ್ರದಾನಾರ್ಥಮಿದಂ ಮಯಾ ತೇ
ಪ್ರಕಲ್ಪಿತಂ ಸ್ತ್ರೀಶತಮುತ್ತಮಂ ನೃಪ ॥ ೧೨ ॥

ಸ್ನಾಹಿ ತ್ವಮದ್ಯಾತ್ರ ಯಥಾಪ್ರಕಾಮಂ
ಯಥಾ ಸುರೇಂದ್ರೋ ದಿವಿ ನೃತ್ಯಗೀತೈಃ ।
ಸ ಸ್ನಾತವಾಂಸ್ತತ್ರ ಸುರೇಂದ್ರವನ್ನೃಪೋ
ಗೀತ್ಯಾದಿಶಬ್ದೈರ್ಮಧುರೈಶ್ಚ ವಾದ್ಯೈಃ ॥ ೧೩ ॥

ಸ್ನಾತಸ್ಯ ತಸ್ಯಾಶು ಶುಭೇ ಚ ವಸ್ತ್ರೇ
ದದೌ ಮುನಿರ್ಭೂಪ ವಿಭೂಷಿತೇ ದ್ವೇ ।
ಕೃತೋತ್ತರೀಯಃ ಪರಿಧಾಯ ವಸ್ತ್ರಂ
ಕೃತಕ್ರಿಯೋ ವಿಷ್ಣುಪೂಜಾಂ ಚಕಾರ ॥ ೧೪ ॥

ಮುನಿಶ್ಚ ದುಗ್ಧಾನ್ನಮಯಂ ಮಹಾಗಿರಿಂ
ನೃಪಾಯ ಭೃತ್ಯಾಯ ಚ ದತ್ತವಾನಸೌ ।
ಯಾವತ್ಸ ರಾಜಾ ಬುಭುಜೇ ಸಭೃತ್ಯ-
ಸ್ತಾವಚ್ಚ ಸೂರ್ಯೋ ಗತವಾನ್ ನೃಪಾಸ್ತಮ್ ॥ ೧೫ ॥

ಸಲುವಾಗಿ ಈ ಉತ್ತಮವಾದ ನೂರು ಮಂದಿ ಹೆಣ್ಣುಗಳ ತಂಡವು ವ್ಯವಸ್ಥೆಗೊಳಿಸಿರುತ್ತದೆ. ಸ್ವರ್ಗದಲ್ಲಿ ದೇವೇಂದ್ರನಂತೆ, ಈ ಹೊತ್ತು ನೀನು ಇಲ್ಲಿ ನಿನಗೆ ಇಷ್ಟ ಬಂದಂತೆ ಸ್ನಾನವನ್ನು ಮಾಡು ;' ಎಂದು ಹೇಳಿದನು. ಅಲ್ಲಿ ಆ ರಾಜನು ದೇವೇಂದ್ರನಂತೆ ಸಂಗೀತ ಮೊದಲಾದ ಶಬ್ದಗಳಿಂದಲೂ, ವಾದ್ಯಗಳ ಮೊಳಗಿನಿಂದಲೂ ಕೂಡಿ ಮಿಂದನು.

೧೪. ಎಲೈ ಸಹಸ್ರಾನೀಕನೇ ! ಕೇಳು ; ಸ್ನಾನಮಾಡಿದ ಆ ಕಾರ್ತವೀರ್ಯನಿಗೆ ಆ ಮುನಿಯು ಅಲಂಕೃತಗಳಾದ ಎರಡು ಪೀತಾಂಬರಗಳನ್ನು ಇತ್ತನು. ಆ ಪೀತಾಂಬರಗಳನ್ನು ಅವನು ಉಟ್ಟು ಮತ್ತೂ ಹೊದೆದು, ಸಂಧ್ಯಾದಿಕ್ರಿಯೆಗಳನ್ನು ಅನುಷ್ಠಿಸಿ, ಶ್ರೀಹರಿಯ ಆರಾಧನೆಯನ್ನು ಆಚರಿಸಿದನು.

೧೫. ಈ ಮುನಿಯು ಅನ್ನಮಯವಾದ ದೊಡ್ಡ ಬೆಟ್ಟವನ್ನು ಕರೆದು, ಆ ರಾಯನಿಗೂ, ಸೇವಕರಿಗೂ ದಾನಮಾಡಿದನು. ಭೃತ್ಯರೊಡಗೂಡಿದ ಆ ರಾಜನು ಊಟ ಮಾಡುವ ಹೊತ್ತಿಗೆ ಎಲೈ ಸಹಸ್ರಾನೀಕರಾಯನೇ ! ಸೂರ್ಯನು ಮುಳುಗಿದನು.

ರಾತ್ರೌ ಚ ಗೀತಾದಿ ವಿನೋದಯುಕ್ತಃ
ಶೇತೇ ಸ ರಾಜಾ ಮುನಿ ನಿರ್ಮಿತೇ ಗೃಹೇ ॥ ೧೬ ॥

ತತಃ ಪ್ರಭಾತೇ ವಿಮಲೇ ಸ್ವಪ್ನಲಬ್ಧಮಿವಾಭವತ್ ।
ಭೂಮಿಭಾಗಂ ತತಃ ಕಿಞ್ಚಿದ್ದೃಷ್ಟ್ವಾಽಸೌ ಚಿಂತಯನ್ನೃಪ ॥ ೧೭ ॥

ಕಿಮಿಯಂ ತಪಸಶ್ಶಕ್ತಿರ್ಮುನೇರಸ್ಯ ಮಹಾತ್ಮನಃ ।
ಸುರಭ್ಯಾ ವಾ ಮಹಾಭಾಗ ತ್ವಂ ಬ್ರವೀಹಿ ಪುರೋಹಿತ ॥ ೧೮ ॥

ಇತ್ಯುಕ್ತಃ ಕಾರ್ತವೀರ್ಯೇಣ ತಮುವಾಚ ಪುರೋಹಿತಃ ।
ಮುನೇಃ ಸಾಮರ್ಥ್ಯಮಪ್ಯಸ್ತಿ ಸಿದ್ಧಿಶ್ಚೇಯಂ ಹಿ ಗೋರ್ನೃಪ ॥ ೧೯ ॥

---

೧೬. ಆ ರಾಜನು ಮುನಿಯು ಕಟ್ಟಿಸಿರುವ ಅರಮನೆಯಲ್ಲಿ ರಾತ್ರಿಯಲ್ಲಿ ಸಂಗೀತವೇ ಮೊದಲಾದ ವಿನೋದಗಳನ್ನು ಕೇಳುತ್ತಾ ಮಲಗಿದನು.

೧೭. ಅನಂತರದಲ್ಲಿ ನಿರ್ಮಲವಾದ ಪ್ರಭಾತಕಾಲದಲ್ಲಿ ಯಾವುದೋ ಒಂದು ಭೂಪ್ರದೇಶವನ್ನು ಕನಸಿನಲ್ಲಿ ಸಾರಿಗಂತಾಯಿತು; ಬಳಿಕ ರಾಯನು ಇದನ್ನು ಕಂಡು ಆಲೋಚಿಸಿದನು.

೧೮.೧೯. ' ಇದೇನು ? ಇದು ಮಹಾತ್ಮನಾದ ಈ ಮುನಿಯ ತಪಸ್ಸಿನ ಶಕ್ತಿಯೇ ? ಅಥವಾ ಸುರಭಿ ಶಕ್ತಿಯೇ ? ಪುಣ್ಯಶಾಲಿಯಾದ ಪುರೋಹಿತನೇ ! ನೀನು ಹೇಳು ; ' ಎಂದು ಕಾರ್ತವೀರ್ಯನು ಕೇಳಲು, ಪುರೋಹಿತನು ಅವನಿಗೆ ಹೇಳಿದನು ' ಎಲೈ ರಾಯನೇ ! ಮುನಿಗೂ ಸಾಮರ್ಥ್ಯವಿದೆ; ಆದರೆ, ಇದು ಹಸು ವಿನ ಸಾಮರ್ಥ್ಯದ ಸಿದ್ಧಿಯು.

ತಥಾಪಿ ನಾನ್ನ ಹರ್ತವ್ಯಾ ತ್ವಯಾ ಲೋಭಾನ್ನರಾಧಿಪ ।
ಯಸ್ತ್ವೇತಾಂ ಹರ್ತುಮಿಚ್ಛೇದ್ವೈ ತಸ್ಯ ನಾಶೋ ಧ್ರುವಂ ಭವೇತ್ ॥ ೨೦ ॥

ಅಥ ಮಂತ್ರಿವರಃ ಪ್ರಾಹ ಬ್ರಾಹ್ಮಣೋ ಬ್ರಾಹ್ಮಣಪ್ರಿಯಃ ।
ರಾಜಕಾರ್ಯಂ ನ ಪಶ್ಯೇದ್ವೈ ಸ್ವಪಕ್ಷಸ್ಯೈವ ಪೋಷಣಾತ್ ॥ ೨೧ ॥

ಹೇ ರಾಜಂಸ್ತ್ವಯಿ ತಿಷ್ಠಂತಿ ಗೃಹಾಣಿ ವಿವಿಧಾನಿ ಚ ।
ತಥಾ ಸುವರ್ಣಪಾತ್ರಾಣಿ ಶಯನಾದೀನಿ ಚ ಸ್ತ್ರಿಯಃ ॥ ೨೨ ॥

ತಾಂ ಧೇನುಂ ಪ್ರಾಪ್ಯ ರಾಜೇಂದ್ರ ದೀಯಮಾನಾನಿ ತತ್ಕ್ಷಣಾತ್ ।
ಅಸ್ಮಾಭಿರತ್ರ ದೃಷ್ಟಾನಿ ನೀಯತಾಂ ಧೇನುರುತ್ತಮಾ ॥ ೨೩ ॥

೨೦-೨೧. ಎಲೈ ಜನಾಧಿಪತಿಯೇ! ನೀನು ಅತ್ಯಾಸೆಯಿಂದ ಅವಳನ್ನು ಅಪಹರಿಸಬಾರದು. ಯಾವನು ಆ ಸುರಭಿಯನ್ನು ಎಳೆದೊಯ್ಯಲೆಳಸುವನೋ, ಅವನಿಗೆ ಅವಶ್ಯವಾಗಿಯೂ ಕೇಡುಂಟಾಗುವುದು ;' ಎಂದು ಹೇಳಿದನು.

ಬ್ರಾಹ್ಮಣರಿಗೆ ಇಷ್ಟನೂ, ಸ್ವಯಂ ಬ್ರಾಹ್ಮಣನೂ ಆದ ಮಂತ್ರಿಶ್ರೇಷ್ಠನು ಇಂತು ನುಡಿದನು. 'ಪುರೋಹಿತನು ತನ್ನ ಪಕ್ಷವನ್ನೇ ಪೋಷಿಸುವುದರಿಂದ ರಾಜ ಕಾರ್ಯವನ್ನು ಅರಿಯುವುದಿಲ್ಲವಷ್ಟೆ!

೨೨. 'ಎಲೈ ರಾಯನೇ! ನಾನಾತೆರಗಳಾದ ಸೌಧಗಳೂ, ಹೊನ್ನಿನ ಪಾತ್ರಗಳೂ, ಮಂಚವೇ ಮೊದಲಾದುವೂ, ಹೆಣ್ಣಾಳೂ, ನಿನ್ನರಮನೆಯಲ್ಲಿ ಇರು ತ್ತಾರೆಯಷ್ಟೆ.

೨೩. ಎಲೈ ರಾಜನೇ! ಆ ಸುರಭಿಯನ್ನು ಹೊಂದಿ, ಅದು ಅಪೇಕ್ಷಿಸಿದ ಕೂಡಲೇ ವಸ್ತುಗಳನ್ನು ಕರೆದುದು ಇಲ್ಲಿ ಕಾಣಲಾಯಿತು. ಆದುದರಿಂದ ಈ ಉತ್ತಮ ವಾದ ಸುರಭಿಯು ಒಯ್ಯಲ್ಪಡಲಿ.

ತವೇಯಂ ಯೋಗ್ಯಾ ರಾಜೇಂದ್ರ ಯದೀಚ್ಛಸಿ ಮಹಾಮತೇ ।
ಗತ್ವಾಹಮಾನಯಿಷ್ಯಾಮಿ ಆಜ್ಞಾಂ ಮೇ ದೇಹಿ ಭೂಭುಜ ॥ ೨೪ ॥

ಇತ್ಯುಕ್ತೋ ಮಂತ್ರಿಣಾ ರಾಜಾ ತಥೇತ್ಯಾಹ ನೃಪೋತ್ತಮ ।
ಸಚಿವಸ್ತತ್ರ ಗತ್ವಾಥ ಸುರಭಿಂ ಹರ್ತುಮಾರಭತ್ ॥ ೨೫ ॥

ಮಂತ್ರಿಣಂ ವಾರಯಾಮಾಸ ಜಮದಗ್ನಿಃ ಸಮಂತತಃ ।
ರಾಜಯೋಗ್ಯಾಮಿಮಾಂ ಬ್ರಹ್ಮನ್ ದೇಹಿ ರಾಜ್ಞೇ ಮಹಾಮತೇ ॥ ೨೬ ॥

ತ್ವಂ ತು ಶಾಕಫಲಾಹಾರೀ ಕಿಂ ಧೇನ್ವಾ ತೇ ಪ್ರಯೋಜನಮ್ ।
ಇತ್ಯುಕ್ತ್ವಾ ತಾಂ ಬಲಾದ್ಧೃತ್ವಾ ನೇತುಂ ಮಂತ್ರೀ ಪ್ರಚಕ್ರಮೇ ॥ ೨೭ ॥

---

೨೪. – ಎಲೈ ಮಹಾಮತಿಯಾಗ ಮಾರಾಯನೇ ! ಈ ಸುರಭಿಯು ನಿನಗೇ ಸೇರತಕ್ಕುದುಚಿತವು. ಎಲೈ ಪುಣ್ಯಾತ್ಮನೇ ! ನಾನು ಹೋಗಿ ತರುವೆನು ; ನನಗೆ ಆಣತಿ ಕೊಡು ;' ಎಂದು ಹೇಳಿದನು.

೨೫. ಎಲೈ ಸಹಸ್ರಾನೀಕರಾಯನೇ ! ಕೇಳು ; ಮಂತ್ರಿಯು ಇಂತು ಹೇಳಲು, ' ರಾಜನು ಹಾಗೆಯೇ ಆಗಲಿ ;' ಎಂದು ಹೇಳಿದನು. ಅನಂತರದಲ್ಲಿ ಮಂತ್ರಿಯು ಅಲ್ಲಿಗೆ ಹೋಗಿ, ಹಸುವನ್ನು ಎಳೆದು ತರಲು ಮೊದಲು ಮಾಡಿದನು.

೨೬. ಜಮದಗ್ನಿಯು ಆ ಮಂತ್ರಿಯನ್ನು ಎಲ್ಲ ತೆರದಿಂದಲೂ ತಡೆದನು. ಆಗ ಆ ಮಂತ್ರಿಯು ' ಎಲೈ ಮಹಾಜ್ಞಾನಿಯಾದ ಜಮದಗ್ನಿಯೇ ! ರಾಜರಿಗೆ ಉಚಿತವಾದ ಈ ಹಸುವನ್ನು ನಮ್ಮ ರಾಯನಿಗೆ ಕೊಡು.

೨೭. ನೀನಾದರೋ ಸೊಪ್ಪು, ಹಣ್ಣು–ಇವುಗಳನ್ನು ಮಾತ್ರ ಆಹಾರವಾಗಿ ಯುಳ್ಳವನು. ನಿನಗೆ ಈ ಹಸುವಿನಿಂದೇನು ಪ್ರಯೋಜನ ?' ಎಂದು ಹೇಳಿ, ಆ ಸುರಭಿಯನ್ನು ಮತ್ತೂ ಬಲಾತ್ಕಾರದಿಂದ ಹಿಡಿದು ಒಯ್ಯಲು ಮೊದಲು ಮಾಡಿದನು.

ಪುನಃ ಸ ಭಾರ್ಯಃ ಸಮುನಿರ್ವಾರಯಾಮಾಸ ತಂ ನೃಪಮ್।
ತತೋ ಮಂತ್ರೀ ಸುದುಷ್ಟಾತ್ಮಾ ಮುನಿಂ ಹತ್ವಾ ತು ತಂ ನೃಪ ॥ ೨೮ ॥

ಬ್ರಹ್ಮಹಾ ನೇತುಮಾರೇಭೇ ವಾಯುಮಾರ್ಗೇಣ ಸಾ ಗತಾ ।
ರಾಜಾ ಚ ಕ್ಷುಬ್ಧಹೃದಯೋ ಯಯೌ ಮಾಹಿಷ್ಮತೀಂ ಪುರೀಮ್ ॥ ೨೯ ॥

ಮುನಿಪತ್ನೀ ಸುದುಃಖಾರ್ತಾ ರೋದಯಂತೀ ಭೃಶಂ ತದಾ ।
ತ್ರಿಃಸಪ್ತಕೃತ್ವಃ ಸ್ವಾಂ ಕುಕ್ಷಿಂ ತಾಡಯಾಮಾಸ ಪಾರ್ಥಿವ ॥ ೩೦ ॥

ತಚ್ಛೃಣ್ವನ್ನಾಗತೋ ರಾಮೋ ಗೃಹೀತಪರಶುಸ್ತದಾ ।
ಪುಷ್ಪಾದೀನಿ ಗೃಹೀತ್ವಾ ತು ವನಾನ್ಮಾತರಮಬ್ರವೀತ್ ॥ ೩೧ ॥

೨೮-೨೯. ಮಡದಿಯೊಡಗೂಡಿದ ಆ ಮುನಿಯು ಆ ರಾಯನನ್ನು ತಡೆಗಟ್ಟಿದನು. ಎಲೈ ರಾಯನೇ ! ಬಳಿಕ ಅತ್ಯಂತ ಕೇಡಾಳಿಯಾದ ಆ ಸಚಿವನು ಆ ಜಮದಗ್ನಿಮುನಿಯನ್ನು ಕೊಂದು, ಆ ಬ್ರಹ್ಮಹತಿಯನ್ನೆಸಗಿದವನು ಅದನ್ನು ಒಯ್ಯಲು ತೊಡಗಿದನು. ಆ ಧೇನುವಾದರೋ ವಾಯುಮಾರ್ಗದಿಂದ (ಆಗಸದಿಂದ) ಹೊರಟುಹೋಯಿತು. ಆಗ ರಾಜನು ದುಃಖಗೊಂಡ ಮನವುಳ್ಳವನಾಗಿ, ಮಾಹಿಷ್ಮತೀ ಪುರಿಗೆ ಹೋದನು.

೩೦. ಆಗ ಪತಿಯ ಅಪಮೃತ್ಯುವಿನಿಂದುಂಟಾದ ದುಃಖದಿಂದ ಪೀಡಿತಳಾದ ಮುನಿಯ ಮಡದಿಯಾದ ರೇಣುಕಾದೇವಿಯು ಬಹುವಾಗಿ ಅಳುತ್ತಾ, ಎಲೈ ರಾಯನೇ ! ಕೇಳು ; ಇಪ್ಪತ್ತೊಂದುಬಾರಿ ತನ್ನ ಹೊಟ್ಟೆಯನ್ನು ಬಡಿದುಕೊಂಡಳು

೩೧. ಆಗ ಪರಶುರಾಮನು ಆ ತಾಯಿಯು ಹೊಟ್ಟೆಯನ್ನು ಹೊಡೆದು ಕೊಂಡು ಅಳುತ್ತಲಿದ್ದ ದನಿಯನ್ನು ಆಲಿಸುತ್ತಾ, ಪರಶುವನ್ನು ಹಿಡಿದುಕೊಂಡವನು ಕಾಡಿನಿಂದ ಹೂ ಮುಂತಾದುವನ್ನು ಹಿಡಿದುಕೊಂಡು ಬಂದವನು ತಾಯಿಗೆ ಇಂತು ಹೇಳಿದನು.

ಅಲಮಂಬ ಪ್ರಹಾರೇಣ ನಿಮಿತ್ತಾದ್ವಿದಿತಂ ಮಯಾ ।
ಹನಿಷ್ಯಾಮಿ ದುರಾಚಾರಮರ್ಜುನಂ ದುಷ್ಟಮಂತ್ರಿಣಂ ॥ ೩೨ ॥

ತ್ವಯ್ಯೇಕವಿಂಶವಾರೇಣ ಯಸ್ಮಾತ್ಕುಕ್ಷಿಶ್ಚ ತಾಡಿತಾ ।
ತ್ರಿಃಸಪ್ತಕೃತ್ವಸ್ತಸ್ಮಾತ್ತು ಹನಿಷ್ಯೇ ಭುವಿ ಪಾರ್ಥಿವಾನ್ ॥ ೩೩ ॥

ಇತಿ ಕೃತ್ವಾ ಪ್ರತಿಜ್ಞಾಂ ಸ ಗೃಹೀತ್ವಾ ಪರಶುಂ ಯಯೌ ।
ಮಾಹಿಷ್ಮತೀಂ ಪುರೀಂ ಪ್ರಾಪ್ಯ ಕಾರ್ತವೀರ್ಯಮಥಾಹ್ವಯತ್ ॥ ೩೪ ॥

ಯುದ್ಧಾರ್ಥಮಾಗತಸ್ಸೋಽಥ ವಿಂಶೈಕಾಕ್ಷೌಹಿಣೀಯುತಃ ।
ತಯೋರ್ಯುದ್ಧಮಭೂತ್ತತ್ರ ಭೈರವಂ ರೋಮಹರ್ಷಣಮ್ ॥ ೩೫ ॥

ಪಿಶಿತಾಶಿಜನಾನಂದಂ ಶಸ್ತ್ರಾಸ್ತ್ರಶತಸಂಕುಲಮ್ ।
ತತಃ ಪರಶುರಾಮೋಽಭೂನ್ಮಹಾಬಲಪರಾಕ್ರಮಃ ॥ ೩೬ ॥

---

೩೨. 'ಎಲೌ ತಾಯಿಯೇ ! ಹೊಟ್ಟೆ ಬಡಿದುಕೊಳ್ಳುವುದು ಸಾಕು. ಅಪಶಕುನಗಳಿಂದ ನಾನು ಇಲ್ಲಿ ನಡೆದ ಸಂಗತಿಯನ್ನರಿತೆನು. ಕೆಟ್ಟ ನಡತೆಯ ಆ ಕಾರ್ತವೀರ್ಯಾರ್ಜುನನನ್ನೂ, ಅವನ ಮಂತ್ರಿಯನ್ನೂ ಸಂಹರಿಸುವೆನು.

೩೩. ನೀನು ಇಪ್ಪತ್ತೊಂದುಸಲ ಹೊಟ್ಟೆಯನ್ನು ಬಡಿದುಕೊಂಡುದರಿಂದ ನಾನು ಭೂಮಂಡಲದಲ್ಲಿ ದುಷ್ಟರಾದ ಕ್ಷತ್ರಿಯರಾದ ರಾಯರನ್ನು ಇಪ್ಪತ್ತೊಂದು ಬಾರಿ ಕೊಲ್ಲುವೆನು.

೩೪. ಇಂತು ಆಣೆಮಾಡಿ ಆ ರಾಮನು ಕೊಡಲಿಯನ್ನು ಪಿಡಿದು ಹೊರಟನು. ಬಳಿಕ ಮಾಹಿಷ್ಮತೀನಗರಿಗೆ ಬಂದು, ಕಾರ್ತವೀರ್ಯನನ್ನು ಯುದ್ಧಕ್ಕೆ ಕರೆದನು.

೩೫-೩೬. ಬಳಿಕ ಆ ಕಾರ್ತವೀರ್ಯನು ಇಪ್ಪತ್ತೊಂದು ಅಕ್ಷೋಹಿಣಿ ಸೈನ್ಯದೊಡನೆ ಯುದ್ಧಸನ್ನದ್ಧನಾದನು. ಆ ರಾಮ ಕಾರ್ತವೀರ್ಯರಿಗೆ ರೋಮಾಂಚವಾಗತಕ್ಕ, ಬಹು ಭಯಂಕರವಾದ, ಮಾಂಸವನ್ನು ತಿನ್ನತಕ್ಕ ಬೇತಾಳಾದಿಗಳಿಗೆ ಸಂತಸಜನಕವಾದ, ನೂರಾರು ಕೈದು ಕೋಲುಗಳ ಸಂಕುಲ ಯುದ್ಧವು ಅಲ್ಲಿ ನಡೆಯಿತು. ಅಲ್ಲಿ ಪರಶುರಾಮನು ಹೆಚ್ಚು ಪನ್ನತಿಕೆಯುಳ್ಳವನಾದನು.

ಪರಂ ಜ್ಯೋತಿರದೀನಾತ್ಮಾ ವಿಷ್ಣುಃ ಕಾರಣ ಮೂರ್ತಿಮಾನ್ ।
ಕಾರ್ತವೀರ್ಯಬಲಂ ಸರ್ವಮನೇಕೈಃ ಕ್ಷತ್ರಿಯೈಸ್ಸಹ ॥ ೩೭ ॥

ಹತ್ವಾ ನಿಪಾತ್ಯ ಭೂಮೌ ತು ಪರಮಾದ್ಭುತವಿಕ್ರಮಃ ।
ಕಾರ್ತವೀರ್ಯಸ್ಯ ಬಾಹೂನಾಂ ವನಂ ಚಿಚ್ಛೇದ ರೋಷವಾನ್ ॥ ೩೮ ॥

ಛಿನ್ನೇ ಬಾಹುವನೇ ತಸ್ಯ ಶಿರಶ್ಚಿಚ್ಛೇದ ಭಾರ್ಗವಃ ।
ವಿಷ್ಣುಹಸ್ತಾದ್ವಧಂ ಪ್ರಾಪ್ಯ ಚಕ್ರವರ್ತೀ ಸ ಪಾರ್ಥಿವಃ ॥ ೩೯ ॥

ದಿವ್ಯರೂಪಧರಃ ಶ್ರೀಮಾನ್ ದಿವ್ಯಗಂಧಾನುಲೇಪನಃ ।
ದಿವ್ಯಂ ವಿಮಾನಮಾರುಹ್ಯ ವಿಷ್ಣುಲೋಕಮವಾಪ್ತವಾನ್ ।
ಕ್ರೋಧಾತ್ಪರಶುರಾಮೋಽಪಿ ಮಹಾಬಲಪರಾಕ್ರಮಃ ॥ ೪೦ ॥

೩೭-೩೮. ಉತ್ತಮವಾದ ಜ್ಯೋತಿಯೂ, ಪರಮನಾದ ಆತ್ಮನೂ, ವ್ಯಾಪ್ತನಾದ ವಿಷ್ಣುವೂ, ನಿಮಿತ್ತದಿಂದ ತನ್ನ ಅವತಾರಗಳನ್ನು ಅಭಿವ್ಯಕ್ತಿಪಡಿಸುವವನೂ, ಆದ ಪರಶುರಾಮನು ಕಾರ್ತವೀರ್ಯಾರ್ಜುನನ ಸೈನ್ಯವನ್ನೆಲ್ಲಾ ಕ್ಷತ್ರಿಯರೊಡನೆ ಕೊಂದು, ತಿರೆಯಲ್ಲಿ ಕೆಡಹಿ, ಕಟ್ಟಚ್ಚರಿಯ ಪನ್ನತಿಕೆಯುಳ್ಳವನಾಗಿ, ಕಾರ್ತವೀರ್ಯಾರ್ಜುನನ ತೋಳ್ಗಳ ಕಾಡನ್ನು ರೋಷವುಳ್ಳವನಾಗಿ ಕತ್ತರಿಸಿದನು.

ಇಂತು ಭಾರ್ಗವರಾಮನು ಅವನ ತೋಳ್ಗಳೆಂಬ ಕಾಡನ್ನು ತರಿದು, ಅವನ ತಲೆಯನ್ನೂ ಕತ್ತರಿಸಿದನು.

೩೯-೪೧. ಆ ತಿರೆಯೊಡ್ಡನಾದ, ಚಕ್ರವರ್ತಿಯಾದ ಕಾರ್ತವೀರ್ಯನೂ ಶ್ರೀಮಹಾವಿಷ್ಣುವಿನ ಕೈಯಿಂದ ಮರಣವನ್ನು ಹೊಂದಿ, ಕಾಂತಿವಂತನಾಗಿ, ಅಮಾನುಷರೂಪವನ್ನು ತಾಳಿಯೂ, ಅಮಾನುಷವಾದ ಬಾವನ್ನವನ್ನು ಪೂಸಿಯೂ ಅಮಾನುಷವಾದ ಗಾಳಿದೇರನ್ನು ಹತ್ತಿ, ಶ್ರೀಮಹಾವಿಷ್ಣುಲೋಕವನ್ನೈದಿದನು.

ತ್ರಿಃಸಪ್ತಕೃತ್ವೋ ಭೂಮ್ಯಾಂ ವೈ ಪಾರ್ಥಿವಾನ್ನಿಜಘಾನ ಸಃ ।
ಕ್ಷತ್ರಿಯಾಣಾಂ ವಧಾತ್ತೇನ ಭೂಮೇರ್ಭಾರೋಽವತಾರಿತಃ ॥ ೪೧ ॥

ಭೂಮಿಶ್ಚ ಸಕಲಾ ದತ್ತಾ ಕಶ್ಯಪಾಯ ಮಹಾತ್ಮನೇ ।
ಇತ್ಯೇಷ ಜಾಮದಗ್ನ್ಯಾಖ್ಯಃ ಪ್ರಾದುರ್ಭಾವೋ ಮಯೋದಿತಃ ॥ ೪೨ ॥

ಯಶ್ಚೈತಚ್ಛೃಣುಯಾದ್ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ ॥ ೪೩ ॥

ಅವತೀರ್ಯ ಭೂವೌ ಹರಿರೇವ ಸಾಕ್ಷಾತ್
ತ್ರಿಃಸಪ್ತಕೃತ್ವಃ ಕ್ಷಿತಿಪಾನ್ನಿಹತ್ಯ ಸಃ ।

ಅತ್ಯಂತ ಬಲಪರಾಕ್ರಮಗಳುಳ್ಳ ಪರಶುರಾಮನೂ ಕಡುಮುಳಿಸಿನಿಂದ ಇಪ್ಪತ್ತೊಂದು ಬಾರಿ ಕೆಟ್ಟ ಪೊಡವಿಯ ಅರಸರನ್ನು ಕೊಂದನು. ಆ ದುಷ್ಟ ಕ್ಷತ್ರಿಯರ ಕೊಲೆಯಿಂದ ನೆಲದ ಹೊರೆಯು (ಇಳಿಸಲ್ಪಟ್ಟಿತು.) ಕಡಿಮೆಮಾಡಲ್ಪಟ್ಟಿತು.

೪೨. ಬಳಿಕ ಕೊಡಲಿಯುವನಾದ ರಾಮನು ಪೊಡವಿಯೆಲ್ಲವನ್ನೂ ಮಹಾತ್ಮನಾದ ಕಶ್ಯಪನಿಗೆ ದಾನ ಮಾಡಿದನು. ಎಲೈ ಅರಸೇ! ಇಂತು ಈ ಪರಶುರಾಮಾವತಾರವು ನನ್ನಿಂದ ನಿನಗೆ ಹೇಳಲ್ಪಟ್ಟಿತು.

೪೩. ಯಾವ ಮಾನವನು ಇದನ್ನು ಬಕುತಿಯಿಂದ ಕೇಳುವನೋ, ಅವನು ಎಲ್ಲಾ ಪಾಪಗಳಿಂದಲೂ ಮುಕ್ತನಾಗುತ್ತಾನೆ.

೪೪. ಅಪ್ರಾಕೃತಾನಂತ ನಿರವದ್ಯ ಕಲ್ಯಾಣ ಗುಣ ಪರಿಪೂರ್ಣನಾದ ಶ್ರೀಹರಿಯು ತಾನೇ ಭೂಮಿಯಲ್ಲಿ, ಮೂಲರೂಪಕ್ಕೆ ಯಾವರೀತಿಯಲ್ಲಿಯೂ ನ್ಯೂನವಾಗದ, ಮೂಲರೂಪದಷ್ಟೇ ಪೂರ್ಣವಾದ, ನಿತ್ಯವಾದ ಪರಶುರಾಮಾವತಾರವನ್ನು ಅಭಿವ್ಯಕ್ತಪಡಿಸಿ ಇಪ್ಪತ್ತೊಂದುಬಾರಿ ದುಷ್ಟರಾದ ಕ್ಷತ್ರಿಯರನ್ನು ಸಂಹರಿಸಿದನು. ಎಲೈ ಸಹಸ್ರಾನೀಕರಾಯನೇ! ಕೇಳು; ಇಂತು ಕ್ಷತ್ರಿಯ ತೇಜವನ್ನು ಕಡಿಮೆ

ಕ್ಷಾತ್ರಂ ಚ ತೇಜೋ ಪ್ರವಿಭಜ್ಯ ರಾಜ್ಞ

ರಾಮಃ ಸ್ಥಿತೋಽದ್ಯಾಪಿ ಗಿರೌ ಮಹೇಂದ್ರೇ ॥ ೪೪ ॥

ಇತಿ ಶ್ರೀ ನರಸಿಂಹಪುರಾಣೇ ಪರಶುರಾಮ ಪ್ರಾದುರ್ಭಾವೋ
ನಾಮ ಷಟ್ಚತ್ವಾರಿಂಶೋಽಧ್ಯಾಯಃ

ಮಾಡಿ, ಶ್ರೀಪರಶುರಾಮನು ಈಗಲೂ ಮಹೇಂಗ್ರಪರ್ವತದಲ್ಲಿರುತ್ತಾನೆ;' ಎಂದ ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗ ನಿರೂಪಿಸಿದುದನ್ನು ಶ್ರೀಸೂತರು ಭಾರದ್ವಾಜಾದಿಗಳಿಗೆ ಹೇಳಿದರು.

ಇಂತು ಶ್ರೀನರಸಿಂಹಪುರಾಣದಲ್ಲಿ ಶ್ರೀಪರಶುರಾಮಾವತಾರವೆಂಬ
ನಲವತ್ತಾರನೆಯ ಅಧ್ಯಾಯವು ಮುಗಿದುದು.

ನಲವತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಶ್ರೀಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಶ್ರೀಪರಶುರಾಮ ಚರಿತ್ರೆಯನ್ನು ತಿಳಿಸುವುದಾಗಿ ಹೇಳಿ, 'ಪೂರ್ವದಲ್ಲಿ ದುಷ್ಟ ಕ್ಷತ್ರಿಯರ ಹೊರೆಯಿಂದ ಭೂದೇವಿಯು ದುಃಖಪಡಲು, ದೇವತೆಗಳೂ, ಮುನಿಗಳೂ ಪಾಲ್ಗಡಲತಡಿಗೆ ಹೋಗಿ, ಶ್ರೀಮನ್ನಾರಾಯಣನಿಗೆ ತುಳಿಲ್ಗೆಯ್ದು, ನುತಿಸಿ, ಬಿನ್ನವಿಸಲು, ಆಗ ಶ್ರೀಹರಿಯು ಜಮದಗ್ನಿಮುನಿಯಿಂದ ರೇಣುಕೆಯಲ್ಲಿ ತನ್ನ ನಿತ್ಯವೂ, ಪೂರ್ಣವೂ ಆದ ಪರಶುರಾಮಾವತಾರವನ್ನು ಕಾಣಿಸಿ ದುಷ್ಟರನ್ನು ಸಂಹರಿಸುವುದಾಗಿ ಹೇಳಿ, ಅದರಂತೆ ಅವತರಿಸಿದನು.

ಒಮ್ಮೆ ಕಾರ್ತವೀರ್ಯಾರ್ಜುನನು ಸೇನಾಸಮೇತನಾಗಿ ಜಮದಗ್ನಿಮುನಿಯಾಶ್ರಮಕ್ಕೆ ಬರಲು, ಮುನಿಯು ಆ ರಾಯನಿಗೆ ತನ್ನ ಆಶ್ರಮದಲ್ಲಿ ನಿಂತು ಸತ್ಕಾರಗೊಂಡು ಹೋಗಬೇಕೆಂದು ಆಮಂತ್ರಿಸಲು, ರಾಯನೂ ಅದಕ್ಕೆ ಒಪ್ಪಲು, ಮುನಿಯು ತನ್ನ ಸುರಭಿಗೆ ರಾಯಪರಿವಾರ ಮತ್ತು ಸೇನೆ- ಇವುಗಳಿಗೆ ಉಚಿತವಾದ ವಾಸಸ್ಥಾನಾದಿಗಳನ್ನು ಕಲ್ಪಿಸಿ ಉಪಚರಿಸಲು, ಆ ರಾಯನು 'ಆ ಮುನಿಯು ತನಗೆಸಗಿದ ಆತಿಥ್ಯವು ಮುನಿಯ ತಪಶ್ಶಕ್ತಿಯೋ ಅಥವಾ ಸುರಭಿಯ ಸಿದ್ಧಿಯೋ?' ಎಂದು ತನ್ನ ಪುರೋಹಿತನನ್ನು ಕೇಳಲು, ಅವನು 'ಮುನಿಯೂ ಶಕ್ತನು; ಆದರೆ, ಇದು ಸುರಭಿಯ ಸಿದ್ಧಿ;' ಎಂದೂ, 'ಆ ಸುರಭಿಯನ್ನು ರಾಯನು ಕಾಮಿಸಿ, ಅಪಹರಿಸಿದರೆ ಕೇಡಾಗುವುದು;' ಎಂದೂ ಹೇಳಿದನು.

ಅದಕ್ಕೆ ಮಂತ್ರಿಯು 'ಈ ಪುರೋಹಿತನು ಕೇವಲ ಬ್ರಾಹ್ಮಣ ಪಕ್ಷಪಾತದಿಂದ ಹೇಳುವನು; ರಾಜ್ಯದೃಷ್ಟಿ ಈತನಿಗಿಲ್ಲ; ರಾಯನೇನೊ ಸಕಲೈಶ್ವರ್ಯಪೂರ್ಣನಾಗಿದ್ದರೂ, ಈ ಸುರಭಿಯು ಇಚ್ಛಿಸಿದ ತತ್‍ಕ್ಷಣದಲ್ಲಿಯೇ ಎಲ್ಲವನ್ನೂ ಕರೆವುದು. ಆದುದರಿಂದ ರಾಯನು ಆಣತಿಯಿತ್ತರೆ ಅದನ್ನು ಎಳೆದುಕೊಂಡು ಬರುವೆನು; ಎಂದು ಹೇಳಲು, ರಾಯನೂ ಅದಕ್ಕೊಪ್ಪಲು, ಆ ಮಂತ್ರಿಯು ಅಂತೆಸಗಲು

ತೊಡಗಿದನು. ಮುನಿಯು ಸತಿಯೊಡನೆ ಧೇನುವನ್ನೀಯಲು ಎಡಗೊಡದೇ ತಡೆಯಲು, ಆ ಮಂತ್ರಿಯು ಮುನಿವಧೆಯನ್ನು ಮಾಡಿ, ತೆಗೆದುಕೊಂಡುಹೋಗಲು ತೊಡಗಿದನು. ಆದರೆ ಆ ಧೇನುವು ಆಗಸದಿಂದ ಹಾರಿ ಎಲ್ಲಿಯೋ ಮಾಯ ವಾಯಿತು. ಆಗ ಕಾರ್ತವೀರ್ಯನು ಖಿನ್ನನಾಗಿ ಮಾಹಿಷ್ಮತಿಗೆ ಹಿಂದಿರುಗಿದನು. ಅಂತು ಆದ ಪತಿಯ ಮರಣದುಃಖದಿಂದ ರೇಣುಕೆಯು ತನ್ನ ಹೊಟ್ಟೆಯನ್ನು ಇಪ್ಪತ್ತೊಂದುಸಲ ಬಡಿದುಕೊಳ್ಳಲು, ಹೂಮುಂತಾದುವುಗಳಿಗಾಗಿ ಅರಣ್ಯಕ್ಕೆ ಹೋಗಿದ್ದ ರಾಮನು ಬಂದು, ನಿಮಿತ್ತದಿಂದ ಮಿಂಚಿದ ಕಾರ್ಯವನ್ನರಿತು, ತಾನು ಇಪ್ಪತ್ತೊಂದುಸಲ ದುಷ್ಟ ಕ್ಷತ್ರಿಯರನ್ನು ಸಂಹರಿಸುವುದಾಗಿ ಮಾತೆಗೆ ಹೇಳಿ, ಪರಶುಧರನಾಗಿ ಮಾಹಿಷ್ಮತಿಗೆ ಹೋಗಿ, ಆ ರಾಯನನ್ನು ಮಂತ್ರಿಸಹಿತ ಯುದ್ಧಕ್ಕೆ ಕರೆದು, ಅನೇಕ ದುಷ್ಟ ಕ್ಷತ್ರಿಯರೊಡನೆ ಅವನ ಮಹಾಸೇನೆಯನ್ನೂ ಮಂತ್ರಿಯೊಡನೆ ಅವನನ್ನೂ ಸಂಹರಿಸಿದುದಲ್ಲದೆ, ಪೊಡವಿಯಲ್ಲಿದ್ದ ಕ್ಷತ್ರಿಯರನ್ನೆಲ್ಲಾ ಇಪ್ಪತ್ತೊಂದುಸಲ ಸೋಲಿಸಿ ಸಂಹರಿಸಿ, ಪೊಡವಿಯನ್ನು ಕಶ್ಯಪಮುನಿಗೆ ದಾನ ವಿತ್ತನು. ಈ ರೀತಿ ಭಗವಂತನು ಶ್ರೀಪರಶುರಾಮನಾಗಿ ಅವತರಿಸಿ, ದುಷ್ಟಸಂಹಾರ ಮಾಡಿ, ಈಗಲೂ ಮಹೇಂದ್ರಪರ್ವತದಲ್ಲಿರುತ್ತಾನೆ, ಈ ಪರಶುರಾಮಚರಿತ್ರೆಯನ್ನು ಭಕ್ತಿಯಿಂದ ಕೇಳುವವನು ಸಕಲಪಾಪ ವಿಮುಕ್ತನಾಗಿ, ಶ್ರೀವಿಷ್ಣುಲೋಕದಲ್ಲಿ ಮಾನ್ಯನಾಗುತ್ತಾನೆ ;' ಎಂದು ನಿರೂಪಿಸಿದುದನ್ನು ಶ್ರೀಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿರುತ್ತಾರೆ.

ಇಂತು ನಲವತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಸಪ್ತಚತ್ವಾರಿಂಶೋಽಧ್ಯಾಯಃ

ಅಥ ಶ್ರೀ ರಾಮಚರಿತೇ ಬಾಲ ಕಾಣ್ಡಕಥಾ

॥ ಮಾರ್ಕಂಡೇಯ ಉವಾಚ ॥

ಶೃಣು ರಾಜನ್ಪ್ರವಕ್ಷ್ಯಾಮಿ ಪ್ರಾದುರ್ಭಾವಂ ಹರೇಃ ಶುಭಮ್ ।
ನಿಹತೋ ರಾವಣೋ ಯೇನ ಸಗಣೋ ದೇವಕಂಟಕಃ ॥ ೧ ॥

ಬ್ರಹ್ಮಣೋ ಮಾನಸಃ ಪುತ್ರಃ ಪುಲಸ್ತ್ಯೋಽಭೂನ್ಮಹಾಮುನಿಃ ।
ತಸ್ಯ ವಿಶ್ರವಸೋ ನಾಮ ಪುತ್ರೋಽಭೂತ್ಸ ಚ ರಾಕ್ಷಸಃ ॥ ೨ ॥

ನಲವತ್ತೇಳನೆಯ ಅಧ್ಯಾಯವು

ಇನ್ನು ಶ್ರೀ ರಾಮಚರಿತೆಯಲ್ಲಿ ಬಾಲಕಾಂಡ ಕಥೆಯು.

೧. ಶ್ರೀ ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ನಿರೂಪಿಸುತ್ತಾನೆ :—' ಎಲೈ ರಾಯನೇ ! ಕೇಳು; ಯಾವನಿಂದ ದೇವತೆಗಳಿಗೆ ಕಂಟಕನಾಗಿದ್ದ ರಾವಣನು ತನ್ನ ಪರಿವಾರದೊಡನೆ ಸಂಹರಿಸಲ್ಪಟ್ಟನೋ, ಆ ಶ್ರೀಹರಿಯ ಮಂಗಳಕರವಾದ ಪೂರ್ಣಾವತಾರವಾದ ಆ ಶ್ರೀರಾಮಾವತಾರ ಚರಿತ್ರೆಯನ್ನು ನಿರೂಪಿಸುವೆನು. ಮನಗೊಟ್ಟು ಆಲಿಸು.

೨. ' ಚತುರ್ಮುಖನಿಗೆ ಮಹಾಜ್ಞಾನಿಯಾದ ಪುಲಸ್ತ್ಯನೆಂಬ ಮಾನಸ ಪುತ್ರನಿದ್ದನು. ಅವನಿಗೆ ವಿಶ್ರವಸವೆಂಬ ಹೆಸರಿನ ರಕ್ಕಸನ ಮಗನಾದನು.

ತಸ್ಮಾಜ್ಜಾತೋ ಮಹಾವೀರೋ ರಾವಣೋ ಲೋಕರಾವಣಃ ।
ತಪಸಾ ಮಹತಾ ಯುಕ್ತಃ ಸ ತು ಲೋಕಾನುಪಾದ್ರವತ್ ॥ ೩ ॥

ಸೇಂದ್ರಾ ದೇವಾ ಜಿತಾಸ್ತೇನ ಗಂಧರ್ವಾಃ ಕಿನ್ನರಾಸ್ತಥಾ ।
ಯಕ್ಷಾಶ್ಚ ದಾನವಾಶ್ಚೈವ ತೇನ ರಾಜನ್ ವಿನಿರ್ಜಿತಾಃ ॥ ೪ ॥

ಸ್ತ್ರಿಯಶ್ಚೈವ ಸುರೂಪಿಣ್ಯೋ ಹೃತಾಸ್ತೇನ ದುರಾತ್ಮನಾ ।
ದೇವಾದೀನಾಂ ನೃಪಶ್ರೇಷ್ಠ ರತ್ನಾನಿ ವಿವಿಧಾನಿ ಚ ॥ ೫ ॥

ರಣೇ ಕುಬೇರಂ ನಿರ್ಜಿತ್ಯ ರಾವಣೋ ಬಲದರ್ಪಿತಃ ।
ತತ್ಪುರೀಂ ಜಗೃಹೇ ಲಂಕಾಂ ವಿಮಾನಂ ಚಾಪಿ ಪುಷ್ಪಕಮ್ ॥ ೬ ॥

---

೩. ಅವನಿಂದ ಸಕಲ ಲೋಕಕ್ಕೂ ದುಃಖವನ್ನುಂಟುಮಾಡತಕ್ಕ ಮಹಾವೀರನಾದ ರಾವಣನೆಂಬ ಮಗನು ಹುಟ್ಟಿದನು. ಅವನು ಕಠಿನವಾದ ತಪವನ್ನೆಸಗಿ, ವರದರ್ಪಿತನಾಗಿ, ಎಲ್ಲಾ ಲೋಕಗಳನ್ನೂ ಬಾಧಿಸತೊಡಗಿದನು.

೪. ಎಲೈ ರಾಯನೇ! ಆ ರಾವಣನು ಇಂದ್ರಸಹಿತರಾದ ಸಕಲ ದೇವತೆಗಳನ್ನೂ, ಗಂಧರ್ವರನ್ನೂ, ಕಿನ್ನರರನ್ನೂ, ಹಾಗೆಯೇ ಯಕ್ಷರನ್ನೂ, ದಾನವರನ್ನೂ ಗೆದ್ದನು.

೫. ಎಲೈ ರಾಜಶ್ರೇಷ್ಠನೇ! ಆ ದುರಾತ್ಮನಾದ ರಾವಣನು ದೇವತೆಗಳೇ ಮೊದಲಾದವರ ರೂಪವತಿಯರಾದ ಪೆಣ್ಗಳನ್ನೂ, ನಾನಾವಿಧಗಳಾದ ರತ್ನಗಳನ್ನೂ ಅಪಹರಿಸಿದನು.

೬. ತರುವಾಯ ಬಲದರ್ಪಿತನಾದ ರಾವಣನು ಕೊಳುಗುಳದಲ್ಲಿ ಕುಬೇರನನ್ನು ಸೋಲಿಸಿ, ಅವನ ಲಂಕಾನಗರಿಯನ್ನೂ, ಪುಷ್ಪಕವೆಂಬ ಗಾಳಿದೇರನ್ನೂ ತೆಗೆದುಕೊಂಡನು.

ತಸ್ಯಾಂ ಪುರ್ಯಾಂ ದಶಗ್ರೀವೋ ರಕ್ಷಸಾಮಧಿಪೋಽಭವತ್ ।
ಪುತ್ರಾಶ್ಚ ಬಹವಸ್ತಸ್ಯ ಬಭೂವುರಮಿತೌಜಸಃ ॥ ೭ ॥

ರಾಕ್ಷಸಾಶ್ಚ ತಮಾಶ್ರಿತ್ಯ ಮಹಾಬಲ ಪರಾಕ್ರಮಾಃ ।
ಅನೇಕ ಕೋಟಯೋ ರಾಜನ್ ಲಂಕಾಯಾಂ ನಿವಸಂತಿ ಯೇ ॥ ೮ ॥

ದೇವಾನ್ ಪಿತೄನ್ಮನುಷ್ಯಾಂಶ್ಚ ವಿದ್ಯಾಧರಗಣಾನಪಿ ।
ಯಕ್ಷಾಂಶ್ಚೈವ ತತಃ ಸರ್ವೇ ಘಾತಯಂತಿ ದಿವಾನಿಶಮ್ ॥ ೯ ॥

ಸಂತ್ರಸ್ತಂ ತದ್ಭಯಾದೇವ ಜಗದಾಸೀಚ್ಚರಾಚರಮ್ ।
ದುಃಖಾಭಿಭೂತಮತ್ಯರ್ಥಂ ಸಂಬಭೂವ ನರಾಧಿಪ ॥ ೧೦ ॥

ಏತಸ್ಮಿನ್ನೇವ ಕಾಲೇ ತು ದೇವಾಃ ಸೇಂದ್ರಾ ಮಹರ್ಷಯಃ ।
ಸಿದ್ಧಾ ವಿದ್ಯಾಧರಾಶ್ಚೈವ ಗಂಧರ್ವಾಃ ಕಿನ್ನರಾಸ್ತಥಾ ॥ ೧೧ ॥

---

೭. ಆ ಲಂಕಾಪಟ್ಟಣದಲ್ಲಿ ಹತ್ತು ತಲೆಯ ರಾವಣನು ರಕ್ಕಸರೊಡೆಯನಾದನು. ಅವನಿಗೆ ಕಡುಪನ್ನತಿಕೆಯ ಅನೇಕಮಂದಿ ಮಕ್ಕಳು ಜನಿಸಿದರು.

೮-೯ ಎಲೈ ರಾಯನೇ! ಕೇಳು; ಯಾವ ಅತ್ಯಂತ ಪರಾಕ್ರಮಶಾಲಿಗಳಾದ ರಕ್ಕಸರು ಆ ರಾವಣನನ್ನು ಆಶ್ರಯಿಸಿಕೊಂಡು, ಅನೇಕಕೋಟಿ ಸಂಖ್ಯಾಕರು ಲಂಕೆಯಲ್ಲಿ ವಾಸಮಾಡುತ್ತಾರೆಯೋ, ಅವರೆಲ್ಲರೂ ದೇವತೆಗಳನ್ನೂ, ಪಿತೃಗಳನ್ನೂ ಮನುಷ್ಯರನ್ನೂ, ಬಿಜ್ಜೋದರರ ತಂಡವನ್ನೂ ಯಕ್ಷರನ್ನೂ ಹಗಲಿರುಳೂ ಹಿಂಸೆಪಡಿಸುತ್ತಿರುತ್ತಾರೆ.

೧೦. ಎಲೈ ನರಾಧಿಪನೇ ! ಕೇಳು ; ಈ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಅವನ ಭಯದಿಂದ ಕಂಪಿಸಿತು; ಅಲ್ಲದೇ ಬಹುವಾಗಿ ದುಃಖದಿಂದ ವ್ಯಾಪ್ತವಾದುದಾಯಿತು.

೧೧-೧೩. ಎಲೈ ದೊರೆಯೆ ! ಕೇಳು ; ಈ ಹೊತ್ತಿನಲ್ಲಿ ಇಂದ್ರನೊಡಗೂಡಿದ ಸುರರು, ಮಹರ್ಷಿಗಳು, ಸಿದ್ಧರು, ಕಿನ್ನರು, ವಿದ್ಯಾಧರರು, ಗಂಧರ್ವರು ಹಾಗೆಯೇ

ಗುಹ್ಯಕಾ ಭುಜಗಾ ಯಕ್ಷಾ ಯೇ ಚಾನ್ಯೇ ಸ್ವರ್ಗವಾಸಿನಃ ।
ಬ್ರಹ್ಮಾಣಮಗ್ರತಃ ಕೃತ್ವಾ ಶಂಕರಂ ಚ ನರಾಧಿಪ ॥ ೧೨ ॥

ತೇ ಯಯುರ್ಹತವಿಕ್ರಾಂತಾಃ ಕ್ಷೀರಾಬ್ಧೇಸ್ತಟಮುತ್ತಮಮ್ ।
ತತ್ರಾರಾಧ್ಯ ಹರಿಂ ದೇವಾಸ್ತಸ್ಥುಃ ಪ್ರಾಞ್ಜಲಯಸ್ತದಾ ॥ ೧೩ ॥

ಬ್ರಹ್ಮಾ ಚ ವಿಷ್ಣುಮಾರಾಧ್ಯ ಗಂಧಪುಷ್ಪಾದಿಭಿಃ ಶುಭೈಃ ।
ಪ್ರಾಞ್ಜಲಿಃ ಪ್ರಣತೋ ಭೂತ್ವಾ ವಾಸುದೇವಮಥಾಸ್ತುವತ್ ॥ ೧೪ ॥

॥ ಬ್ರಹ್ಮೋವಾಚ ॥

ನಮಃ ಕ್ಷೀರಾಬ್ಧಿವಾಸಾಯ ನಾಗಪರ್ಯಙ್ಕಶಾಯಿನೇ ।
ನಮಃ ಶ್ರೀಕರಸಂಸ್ಪೃಷ್ಟದಿವ್ಯಪಾದಾಯ ವಿಷ್ಣವೇ ॥ ೧೫ ॥

ಗುಹ್ಯಕರು, ಭುಜಗರು, ಯಕ್ಷರು ಮತ್ತು ಯಾವ ಸ್ವರ್ಗವಾಸಿಗಳಾದ ಇತರರು ಯಾರೋ, ಅವರೂ ಬ್ರಹ್ಮನನ್ನು, ಶಂಕರನನ್ನೂ ಮುಂದುಮಾಡಿಕೊಂಡು, ಪಾಳಾದ ಪನ್ನತಿಕೆಯುಳ್ಳವರೆಲ್ಲರೂ ಪಾಲ್ಗಡಲ ಉತ್ತಮವಾದ ಕರೆಯನ್ನು ಸಾರಿದರು. ಅಲ್ಲಿ ಸುರರು ಶ್ರೀಹರಿಯನ್ನು ಪೂಜಿಸಿ, ಆಗ ಬೊಗಸೆಯುಳ್ಳವರಾಗಿ ನಿಂತರು.

೧೪. ಚತುರ್ಮುಖಬ್ರಹ್ಮನೂ, ಮಂಗಳವಾದ ಗಂಧಪುಷ್ಪಾದಿಗಳಿಂದ ಶ್ರೀ ಮ ಹಾ ವಿ ಷ್ಣು ವ ನ್ನು ಪೂಜಿಸಿ, ಬೊಗಸೆಯುಳ್ಳವನಾಗಿ, ಎರಗಿದ್ದು, ಶ್ರೀವಾಸುದೇವನನ್ನು ಇಂತು ನುತಿಸಿದನು.

೧೫. ಚತುರ್ಮುಖನು ಇಂತು ಸ್ತುತಿಸುತ್ತಾನೆ :—‘ ಪಾಲ್ಗಡಲಲ್ಲಿರುವ ಆದಿಶೇಷನ ಮಂಚದಮೇಲೆ ಮಲಗಿದವನಿಗೆ ನಮಸ್ಕಾರವು. ಮಹಾಲಕುಮಿಯ ಕೈಗಳಿಂದ ಒತ್ತಲ್ಪಡುತ್ತಲಿರುವ ಶ್ರೇಷ್ಠವಾದ ಪಾದಗಳುಳ್ಳ ಶ್ರೀ ಮಹಾವಿಷ್ಣು ವಿಗೆ ನಮಸ್ಕಾರವು.

ನಮಸ್ತೇ ಯೋಗನಿದ್ರಾಯ ಯೋಗಾಂತರ್ಭಾವಿತಾಯ ಚ ।
ತಾರ್ಕ್ಷ್ಯಾಸನಾಯ ದೇವಾ ಯ ಗೋವಿಂದಾಯ ನಮೋನಮಃ ॥ ೧೬ ॥

ನಮಃ ಕ್ಷೀರಾಬ್ಧಿ ಕಲ್ಲೋಲಸ್ಪೃಷ್ಟಗಾತ್ರಾಯ ಶಾರ್ಙ್ಗಿಣೇ ।
ನಮೋಽರವಿಂದ ಪಾದಾಯ ಪದ್ಮನಾಭಾಯ ವಿಷ್ಣವೇ ॥ ೧೭ ॥

ಭಕ್ತಾರ್ಚಿತಸುಪಾದಾಯ ನಮೋ ಯೋಗಪ್ರಿಯಾಯ ವೈ ।
ಶುಭಾಂಗಾಯ ಸುನೇತ್ರಾಯ ಮಾಧವಾಯ ನಮೋನಮಃ ॥ ೧೮ ॥

ಸುಕೇಶಾಯ ಸುನೇತ್ರಾಯ ಸುಲಲಾಟಾಯ ಚಕ್ರಿಣೇ ।
ಸುವಕ್ತ್ರಾಯ ಸುಕರ್ಣಾಯ ಶ್ರೀಧರಾಯ ನಮೋನಮಃ ॥ ೧೯ ॥

---

೧೬. ಯೋಗನಿದ್ರೆಯಲ್ಲಿ ತೊಡಗಿರುವವನಿಗೂ, ಅಚಿಂತ್ಯಾದ್ಭುತಶಕ್ತಿಯಿಂದ ಒಳಗೆ ಎಲ್ಲವನ್ನೂ ಕಾಣುವವನಿಗೂ ನಮಸ್ಕಾರ; ಗರುಡವಾಹನನೂ ಕ್ರೀಡಾದಿ ಗುಣವಿಶಿಷ್ಟನೂ, ಸಕಲ ವೇದಗಳಿಂದ ಜ್ಞೇಯನೂ ಆದ ಶ್ರೀಭಗವಂತನಿಗೆ ನಮಸ್ಕಾರ ನಮಸ್ಕಾರವು.

೧೭. ಪಾಲ್ಗಡಲ ಅಲೆಗಳಿಂದ ಮುಟ್ಟಲ್ಪಟ್ಟ ಒಡಲವನಿಗೆ ನಮಸ್ಕಾರ; ಶಾರ್ಙ್ಗವೆಂಬ ಬಿಲ್ಲನ್ನು ತಾಳಿದವನಿಗೆ ನಮಸ್ಕಾರವು; ತಾವರೆಯ ಕಾಲ್ಗಳ, ತಾವರೆಯನ್ನು ಹೊಕ್ಕಳಲ್ಲಿ ಉಳ್ಳ ಶ್ರೀಮಹಾವಿಷ್ಣುವಿಗೆ ನಮಸ್ಕಾರ.

೧೮. ಬಕುತಜನರಿಂದ ಪೂಜಿಸಿದ ಅಡಿಗಳುಳ್ಳವನಿಗೆ, ಕರ್ಮ, ಜ್ಞಾನ, ಭಕ್ತಿಗಳು ಇಷ್ಟವಾಗಿರುವವನಿಗೆ ನಮಸ್ಕಾರವು. ಮಂಗಳದೊಡಲಿನ ಮನೋಹರಗಳಾದ ಕಣ್ಗಳ, ರಮಾವಲ್ಲಭನಾದ ಶ್ರೀಹರಿಗೆ ಅನೇಕ ನಮಸ್ಕಾರಗಳು.

೧೯. ಒಳ್ಳೆಯ ಕೇಶವುಳ್ಳವನೂ, ಮನೋಹರಗಳಾದ ಕಣ್ಗಳುಳ್ಳವನೂ, ಒಳ್ಳೆಯ ಹಣೆಯುಳ್ಳವನೂ, ಸುದರ್ಶನವೆಂಬ ಚಕ್ರವನ್ನು ಧರಿಸಿರುವವನೂ, ಒಳ್ಳೆಯ ಮೊಗನೂ, ಬಳ್ಳಿತಾದ ಕಿವಿಗಳುಳ್ಳವನೂ ಆದ ಶ್ರೀಹರಿಗೆ ನಮಸ್ಕಾರ ನಮಸ್ಕಾರ.

ಸುಬಾಹವೇ ಸುಗಣ್ಡಾಯ ಸುಕಂಠಾಯ ನಮೋನಮಃ ।
ಸುವಕ್ಷಸೇ ಸುನಾಭಾಯ ಪದ್ಮನಾಭಾಯ ವೈ ನಮಃ ॥ ೨೦ ॥

ಸುಭ್ರುವೇ ಚಾರುದೇಹಾಯ ಚಾರುದಂತಾಯ ಶಾಙ್ರ್ಗಿಣೇ ।
ಚಾರುಜಂಘಾಯ ದಿವ್ಯಾಯ ಕೇಶವಾಯ ನಮೋನಮಃ ॥ ೨೧ ॥

ಸುನಖಾಯ ಸುಶಾಂತಾಯ ಸುವಿದ್ಯಾಯ ಗದಾಭೃತೇ ।
ಧರ್ಮಪ್ರಿಯಾಯ ದೇವಾಯ ವಾಮನಾಯ ನಮೋನಮಃ ॥ ೨೨ ॥

ಅಸುರಘ್ನಾಯ ಚೋಗ್ರಾಯ ರಕ್ಷೋಘ್ನಾಯ ನಮೋನಮಃ ।
ದೇವಾನಾಮಾರ್ತಿನಾಶಾಯ ಭೀಮಕರ್ಮಕೃತೇ ನಮಃ ॥ ೨೩ ॥

---

೨೦. ನಳಿದೋಳ್ಗಳ, ಮನೋಹರವಾದ ಕದಂಪುಗಳ, ಶೋಭಿಪ ಕಂಠದ, ಶ್ರೀಹರಿಗೆ ನಮಸ್ಕಾರ, ನಮಸ್ಕಾರ. ಸುಂದರವಾದೆದೆಯ, ಮನೋಹರವಾದ ಹೊಕ್ಕುಳ ಪದ್ಮನಾಭನಿಗೆ ನಮಸ್ಕಾರವು.

೨೧. ಒಳ್ಳೆಯ ಹುಬ್ಬಿನ, ಗಾಡಿಯೊಡಲಿನ, ಸುಲಿವಲ್ಗಳ, ಸರ್ವೋತ್ತಮನಾದ, ಬ್ರಹ್ಮರುದ್ರಪ್ರವರ್ತಕನಾದ ಕೇಶವನಿಗೆ ನಮಸ್ಕಾರ; ನಮಸ್ಕಾರವು.

೨೨. ಉತ್ತಮವಾದ ಉಗುರುಳ್ಳವನೂ, ಶಾಂತಮೂರ್ತಿಯೂ, ಸರ್ವವಿದ್ಯಾಪ್ರತಿಪಾದ್ಯನೂ, ಸರ್ವಜ್ಞನೂ, ಗದಾಧರನೂ, ಧರ್ಮಪ್ರಿಯನೂ, ಅಪ್ರಾಕೃತಕಾಂತಿಯುಕ್ತನೂ, ವಾಮನನೂ, ಆದವನಿಗೆ ನಮಸ್ಕಾರವು.

೨೩. ಅಸುರ ಸಂಹಾರಕನೂ, ದುಷ್ಟರಿಗೆ ಭಯಂಕರಸ್ವರೂಪನೂ, ರಾಕ್ಷಸ ಸಂಹಾರಕನೂ, ಆದ ಶ್ರೀಹರಿಗೆ ನಮಸ್ಕಾರ; ನಮಸ್ಕಾರವು. ದೇವತೆಗಳ (ದುಷ್ಟ ರಕ್ಕಸರಿಂದುಂಟಾದ) ಬಾಧೆಯನ್ನು ಅಳಿಯುಸುವವನಿಗೆ, ಭಯಂಕರವಾದ ಕಜ್ಜ ವೆಸಗುವವನಿಗೆ ನಮಸ್ಕಾರವು.

ನಮಸ್ತೇ ಲೋಕನಾಥಾಯ ರಾವಣಾಂತಕೃತೇ ನಮಃ ।

॥ ಮಾರ್ಕಂಡೇಯ ಉವಾಚ ॥

ಇತಿ ಸ್ತುತೋ ಹೃಷೀಕೇಶಸ್ತುತೋಷ ಪರಮೇಷ್ಠಿನಾ ॥ ೨೪ ॥

ಸ್ವರೂಪಂ ದರ್ಶಯಿತ್ವಾ ತು ಪಿತಾಮಹಮುವಾಚ ಹ ।
ಕಿಮರ್ಥಂ ತು ಸುರೈಸ್ಸಾರ್ಧಮಾಗತಸ್ತ್ವಂ ಪಿತಾಮಹ ॥ ೨೫ ॥

ಯತ್ಕಾರ್ಯಂ ಬ್ರೂಹಿ ಮೇ ಬ್ರಹ್ಮನ್ ಯದರ್ಥಂ ಸಂಸ್ತುತಸ್ತ್ವಯಾ ।
ಇತ್ಯುಕ್ತೋ ದೇವದೇವೇನ ವಿಷ್ಣುನಾ ಪ್ರಭವಿಷ್ಣುನಾ ॥ ೨೬ ॥

ಸರ್ವದೇವಗಣೈಸ್ಸಾರ್ಧಂ ಬ್ರಹ್ಮಾ ಪ್ರಾಹ ಜನಾರ್ದನಮ್ ।

॥ ಬ್ರಹ್ಮೋವಾಚ ॥

ನಾಶಿತಂ ತು ಜಗತ್ಸರ್ವಂ ರಾವಣೇನ ದುರಾತ್ಮನಾ ॥ ೨೭ ।

೨೪-೨೭. ಚರಾಚರವಾದ ಸಕಲ ಲೋಕದ ಒಡೆಯನಾದ ನಿನಗೆ ನಮಸ್ಕಾರವು. ಹಿಂದಿನ ಕಲ್ಪದಲ್ಲಿ ರಾವಣನನ್ನು ಸಂಹಾರ ಮಾಡಿದವನಿಗೆ ನಮಸ್ಕಾರವು;' ಎಂದು ಚತುರ್ಮುಖನು ಸ್ತುತಿಸಿದನು.

ಮಾರ್ಕಂಡೇಯಮುನಿಯು ಹೇಳುತ್ತಾನೆ :—' ಎಲೈ ರಾಯನೇ ! ಕೇಳು ; ಇಂತು ಉತ್ತಮವಾದ ಸತ್ಯಲೋಕದಲ್ಲಿ ಸ್ಥಿತನಾದ ಚತುರ್ಮುಖನಿಂದ ಕೊಂಡಾಡಿಸಿ ಕೊಳ್ಳಲ್ಪಟ್ಟ, ಸರ್ವೇಂದ್ರಿಯಪ್ರೇರಕನಾದ ಶ್ರೀಮನ್ನಾರಾಯಣನು ತನ್ನ ಸ್ವರೂಪವನ್ನು ಕಾಣಿಸಿ, ಪಿತಾಮಹನಿಗೆ ಇಂತು ಹೇಳಿದನು :—' ಎಲೈ ಪಿತಾಮಹನೇ ! ನೀನು ದೇವತೆಗಳೊಡನೆಯೇಕೆ ಬಂದೆ? ಎಲೈ ಬ್ರಹ್ಮನೇ! ಬಂದ ಕಾರ್ಯವಾವುದೋ, ಅದನ್ನು ಹೇಳು; ಏತಕ್ಕೆ ನೀನು ನನ್ನನ್ನು ಸ್ತುತಿಸಿದೆ?' ಎಂದು ದೇವೋತ್ತಮನಾದ, ಲೋಕಸ್ರಷ್ಟೃವಾದ, ಶ್ರೀಮಹಾವಿಷ್ಣುವು ಕೇಳಲು, ಬ್ರಹ್ಮನು ಎಲ್ಲ ದೇವತೆಗಳ ತಂಡದೊಡನೆ ದುಷ್ಟಜನಾಂತಕನಾದ ಶ್ರೀಮಹಾವಿಷ್ಣುವಿಗೆ ಇಂತು ಹೇಳಿದನು. ಬ್ರಹ್ಮನು ಹೇಳುತ್ತಾನೆ;—' ಕೆಟ್ಟಸ್ವಭಾವದ ರಾವಣನು ಲೋಕವನ್ನೆಲ್ಲಾ ಹಾಳುಮಾಡಿದನು.

ಸೇಂದ್ರಾಃ ಪರಾಜಿತಾಸ್ತೇನ ಬಹುಶೋ ರಕ್ಷಸಾ ವಿಭೋ ।
ರಾಕ್ಷಸೈರ್ಭಕ್ಷಿತಾ ಮರ್ತ್ಯಾ ಯಜ್ಞಾಶ್ಚಾಪಿ ವಿದೂಷಿತಾಃ ॥ ೨೮ ॥

ದೇವಕನ್ಯಾ ಹೃತಾಸ್ತೇನ ಬಲಾಚ್ಛತಸಹಸ್ರಶಃ ।
ತ್ವಾಮೃತೇ ಪುಂಡರೀಕಾಕ್ಷ ರಾವಣಸ್ಯ ವಧಂ ಪ್ರತಿ ॥ ೨೯ ॥

ನ ಸಮರ್ಥಾ ಯತೋ ದೇವಾಸ್ತ್ವಮತಸ್ತದ್ವಧಂ ಕುರು ।
ಇತ್ಯುಕ್ತೋ ಬ್ರಹ್ಮಣಾ ವಿಷ್ಣುರ್ಬ್ರಹ್ಮಾಣಮಿದಮಬ್ರವೀತ್ ॥ ೩೦ ॥

ಶೃಣುಷ್ವಾವಹಿತೋ ಬ್ರಹ್ಮನ್ ಯದ್ವದಾಮಿ ಹಿತಂ ವಚಃ ।
ಸೂರ್ಯವಂಶೋದ್ಭವಃ ಶ್ರೀಮಾನ್ ರಾಜಾಽಽಸೀದ್ಭುವಿ ವೀರ್ಯವಾನ್

---

೨೮. ಎಲೈ ವಿಭುವೇ! ಅವನು ಬಹುವಾಗಿ ಮಹೇಂದ್ರನೊಡಗೂಡಿದ ದೇವತೆಗಳನ್ನೆಲ್ಲಾ ಸೋಲಿಸಿದನು. ರಕ್ಕಸರು ಮಾನವರನ್ನು ತಿಂದರು; ಮತ್ತು ಜನ್ನಗಳನ್ನು ಕೆಡಿಸಿದರು.

೨೯-೩೦. ಅವನು ಬಲಾತ್ಕಾರದಿಂದ ನೂರಾರು ಸಾಸಿರ ದೇವಕನ್ನಿಕೆಯರನ್ನಪಹರಿಸಿದನು. ಎಲೈ ತಾವರೆಗಣ್ಣನೇ! ಆ ರಾವಣನ ಕೊಲೆಯನ್ನು ನಿನ್ನನ್ನುಳಿದು ದೇವತೆಗಳೆಲ್ಲರೂ ಸೇರಿ ಮಾಡಲು ಸಮರ್ಥರಲ್ಲವಾದುದರಿಂದ, ನೀನೇ ಅವನ ಸಂಹಾರವನ್ನೆಸಗು;' ಎಂದು ಚತುರ್ಮುಖನು ಬಿನ್ನವಿಸಲು, ಶ್ರೀಮಹಾವಿಷ್ಣುವು ಚತುರ್ಮುಖಬ್ರಹ್ಮನಿಗೆ ಇಂತು ಹೇಳಿದನು.

೩೧. 'ಎಲೈ ಬ್ರಹ್ಮನೇ! ನಾನು ಹೇಳುವ ಯಾವ ಸೊಗದ ನುಡಿಯೋ, ಅದನ್ನು ಮನಗೊಟ್ಟು ಆಲಿಸು; ಸೂರ್ಯವಂಶದಲ್ಲಿ ಒಗೆದ ಶ್ರೀಮಂತನೂ, ಪನ್ನತಿಕೆಯುಳ್ಳವನೂ ಆದ ಅರಸು ಇರುವನು.

ನಾಮ್ನಾ ದಶರಥಖ್ಯಾತಸ್ತಸ್ಯ ಪುತ್ರೋ ಭವಾಮ್ಯಹಮ್ ।
ರಾವಣಸ್ಯ ವಧಾರ್ಥಾಯ ಚತುರ್ಥಾಂಶೇನ ಸತ್ತಮ ॥ ೩೨ ॥

ಸ್ವಾಂಶೈರ್ವಾನರರೂಪೇಣ ಸಕಲಾ ದೇವತಾ ಗಣಾಃ ।
ಅವನ್ಯಾಮವತೀರ್ಯಾಥ ಸ್ಯಾದೇವಂ ರಾವಣಕ್ಷಯಃ ॥ ೩೩ ॥

ಇತ್ಯುಕ್ತೋ ದೇವದೇವೇನ ಬ್ರಹ್ಮಾ ಲೋಕಪಿತಾಮಹಃ ।
ದೇವಾಶ್ಚ ತೇ ಪ್ರಣಮ್ಯಾಥ ಮೇರುಪೃಷ್ಠಂ ತದಾ ಯಯುಃ ॥ ೩೪ ॥

ಸ್ವಾಂಶೈರ್ವಾನರರೂಪೇಣ ಅವತೇರುಶ್ಚ ಭೂತಲೇ ।
ಅಥಾಪುತ್ರೋ ದಶರಥೋ ಮುನಿಭಿರ್ವೇದಪಾರಗೈಃ ॥ ೩೫ ॥

---

೩೨. ಅವನು ಹೆಸರಿನಿಂದ ದಶರಥನೆಂದು ಪ್ರಸಿದ್ಧಿಪಡೆದಿರುತ್ತಾನೆ. ನಾನು ರಾವಣನ ಕೊಲೆಗಾಗಿ, ಎಲೈ ಸತ್ತಮನೇ! ನಾಲ್ಕನೆಯ ಸ್ವರೂಪಾಂಶದಿಂದ ಆ ದಶರಥನಿಗೆ ಮಗನಾಗಿ ಅಭಿವ್ಯಕ್ತನಾಗುವೆನು.

೩೩. ಎಲೈ ಸಕಲ ಪ್ರಪಂಚಸೃಷ್ಟಿಕರ್ತೃವಾದ ಬ್ರಹ್ಮನೇ! ದೇವತೆಗಳ ಗಣಗಳೆಲ್ಲವೂ ತಂತಮ್ಮ ಅಂಶದಿಂದ ವಾನರಾದಿ ರೂಪದಿಂದ ಅವತರಿಸಲಿ; ಇಂತು ಆಗಲು ರಾವಣನ ಕ್ಷಯವುಂಟಾಗುವುದು.

೩೪. ದೇವೋತ್ತಮನಾದ ಶ್ರೀಮಹಾವಿಷ್ಣುವು ಇಂತು ಹೇಳಲು, ಲೋಕಪಿತಾಮಹನಾದ ಬ್ರಹ್ಮನೂ, ಆ ದೇವತೆಗಳೂ ಶ್ರೀಹರಿಗೆ ವಂದಿಸಿ, ಆಗ ಮೇರು ಪರ್ವತದ ಹಿಂಭಾಗಕ್ಕೆ ಹೋದರು.

೩೫-೩೬. ದೇವತೆಗಳು ತಮ್ಮ ಅಂಶಗಳಿಂದ ಭೂಮಂಡಲದಲ್ಲಿ ವಾನರಾದಿ ರೂಪದಿಂದ ಅವತರಿಸಿದರು. ಬಳಿಕ ಸಂತತಿಯಿಲ್ಲದ ದಶರಥರಾಯನು ಋಗಾದಿ ವೇದಗಳಲ್ಲಿ ನಿಷ್ಣಾತರಾದ ಮುನಿಗಳಿಂದ ಎಲೈ ಸಹಸ್ರಾನೀಕನೇ! ಮಕ್ಕಳನ್ನು

ಇಷ್ಟಿಂ ತು ಕಾರಯಾಮಾಸ ಪುತ್ರಪ್ರಾಪ್ತಿಕರೀಂ ನೃಪ ।
ತತಃ ಸೌವರ್ಣಪಾತ್ರಸ್ಥಂ ಹವಿರಾದಾಯ ಪಾಯಸವತ್ ॥ ೩೬ ॥

ವಹ್ನಿಕುಂಡಾತ್ಸಮುತ್ತಸ್ಥೌ ನೂನಂ ದೇವೇನ ನೋದಿತಃ ।
ಆದಾಯ ಮುನಯೋ ಮಂತ್ರಾಚ್ಚಕ್ರುಃ ಪಿಂಡದ್ವಯಂ ಶುಭಮ್ ॥ ೩೭ ॥

ದತ್ತೇ ಕೌಸಲ್ಯ ಕೈಕೇಯ್ಯೋಃ ದ್ವೇ ಪಿಂಡೇ ಮಂತ್ರಮಂತ್ರಿತೇ ।
ತೇ ಪಿಂಡಪ್ರಾಶನೇ ಕಾಲೇ ಸುಮಿತ್ರಾಯಾ ಮಹಾಮತೇ ॥ ೩೮ ॥

ಪಿಂಡಾಭ್ಯಾಮಲ್ಪಮಲ್ಪಂ ತು ಸುಭಾಗಿನ್ಯಾಃ ಪ್ರಯಚ್ಛತಃ ।
ತತಸ್ತಾಃ ಪ್ರಾಶಯಾಮಾಸೂ ರಾಜಪತ್ನ್ಯೋ ಯಥಾವಿಧಿ ॥ ೩೯ ॥

ಪಿಂಡಾನ್ ದೇವಕೃತಾನ್ಪ್ರಾಶ್ಯ ಪ್ರಾಪುರ್ಗರ್ಭಾನನಿಂದಿತಾನ್ ।
ಏವಂ ವಿಷ್ಣುರ್ದಶರಥಾಜ್ಜಾತಸ್ತತ್ಪತ್ನಿಷು ತ್ರಿಷು ॥ ೪೦ ॥

ಸಂಪಾದಿಸಿಕೊಡತಕ್ಕ ಪುತ್ರಕಾಮೇಷ್ಟಿಯನ್ನು ಮಾಡಿದನು. ಅನಂತರದಲ್ಲಿ ಶ್ರೀಹರಿಯಿಂದ ಪ್ರೇರಿತನಾದ ಪ್ರಾಜಾಪತ್ಯನೆಂಬ ಯಜ್ಞೇಶ್ವರನು ಹೊನ್ನಬಟ್ಟಲಲ್ಲಿದ್ದ, ಪಾಯಸರೂಪವಾದ ಹವಿಯನ್ನು ತೆಗೆದುಕೊಂಡು, ಕುಂಡದಿಂದ ಮೇಲಕ್ಕೆ ಬಂದನು. ಆ ಹವಿಯನ್ನು ಮುನಿಗಳು ತೆಗೆದುಕೊಂಡು, ಮಂತ್ರದಿಂದ ಮಂಗಳವಾದ ಎರಡು ಉಂಡೆಗಳನ್ನು ಮಾಡಿದರು.

೩೮-೩೯. ಇಂತು ಮಂತ್ರದಿಂದ ಅಭಿಮಂತ್ರಿತಗಳಾದ ಎರಡು ಉಂಡೆಗಳೂ ಕೌಸಲ್ಯಾ ಕೈಕೇಯರಿಗೆ ಕೊಡಲ್ಪಟ್ಟುವು. ಎಲೈ ಮಹಾಮತಿಯೇ! ಕೇಳು; ಆ ಕೌಸಲ್ಯಾ ಕೈಕೇಯಿಯರು ಉಂಡೆಯನ್ನು ತಿನ್ನುವ ಹೊತ್ತಿನಲ್ಲಿ ತಮ್ಮಂತೆ ಭಾಗಾರ್ಹಳಾದ ಸುಮಿತ್ರಾದೇವಿಗೆ ಆ ಎರಡು ಪಿಂಡಗಳಿಂದ ಸ್ವಲ್ಪ ಸ್ವಲ್ಪ ಭಾಗಗಳನ್ನಿತ್ತರು. ಬಳಿಕ ಆ ಅರಸಿನ ಮಡದಿಯರು ವಿಧ್ಯನುಸಾರ ಅವನ್ನು ತಿಂದರು.

೪೦. ಆ ಅರಸಿಯರು ದೇವಕೃತವಾದ ಹವಿಸ್ಸಿನ ಉಂಡೆಗಳನ್ನು ತಿಂದು, ಉತ್ತಮವಾದ ಗರ್ಭವನ್ನು ಧರಿಸಿದರು. ಇಂತು ಶ್ರೀಮಹಾವಿಷ್ಣುವು ಆ ಮೂವರು ಮಡದಿಯರಲ್ಲಿ ದಶರಥಚಕ್ರವರ್ತಿಯಿಂದ ಆವಿರ್ಭವಿಸಿದನು.

ಸ್ವಾಂಶೈರ್ಲೋಕಹಿತಾಯೈವ ಚತುರ್ಧಾ ಜಗತೀಪತೇ ।
ರಾಮಶ್ಚ ಲಕ್ಷ್ಮಣಶ್ಚೈವ ಭರತಃ ಶತ್ರುಘ್ನ ಏವ ಚ ॥ ೪೧ ॥

ಜಾತಕರ್ಮಾದಿಕಂ ಪ್ರಾಪ್ಯ ಸಂಸ್ಕಾರಂ ಮುನಿಸಂಸ್ಕೃತಮ್ ।
ಮಂತ್ರಪಿಂಡವಶಾದ್ಯೋಗಂ ಪ್ರಾಪ್ಯ ಚೇರುರ್ಯಥಾರ್ಭಕಾಃ ॥ ೪೨ ॥

ರಾಮಶ್ಚ ಲಕ್ಷ್ಮಣಶ್ಚೈವ ಸಹ ನಿತ್ಯಂ ವಿಚೇರತುಃ ।
ಜನ್ಮಾದಿಕೃತಸಂಸ್ಕಾರೌ ಪಿತುಃ ಪ್ರೀತಿಕರೌ ನೃಪ ॥ ೪೩ ॥

---

೪೧. ಎಲೈ ರಾಯನೇ! ಕೇಳು; ಲೋಕಕ್ಕೆ ಹಿತವನ್ನೆಸಗಲು ಸ್ವರೂಪಾಂಶದಿಂದ ಪೂರ್ಣನಾಗಿ ಶ್ರೀರಾಮನಾಗಿಯೂ, ಶ್ರೀಸಂಕರ್ಷಣಾವಿಷ್ಟನಾದ ಶೇಷನ ಅಂಶದಿಂದ ಲಕ್ಷ್ಮಣನಾಗಿಯೂ, ಶ್ರೀಪ್ರದ್ಯುಮ್ನಾವಿಷ್ಟನಾದ, ವರದಿಂದ ಚಕ್ರತ್ವವನ್ನೈದಿದ ಕಾಮಾಂಶದಿಂದ ಭರತನಾಗಿಯೂ, ಅನಿರುದ್ಧಾವಿಷ್ಟನಾದ ಶಂಖತನುವಾದ, ಕಾಮತನಯನಾದ ಪ್ರದ್ಯುಮ್ನನ ಅಂಶದಿಂದ ಶತ್ರುಘ್ನನಾಗಿಯೂ, ಇಂತು ನಾಲ್ಕು ವಿಧವಾಗಿ ಸ್ವರೂಪಾಂಶ ಮತ್ತು ಆವಿಷ್ಟಗಳಾದ ಭಿನ್ನಾಂಶ–ಇವುಗಳಿಂದ ರಾಮ, ಲಕ್ಷ್ಮಣ, ಭರತ ಶತ್ರುಘ್ನರಾಗಿ ಶ್ರೀ ವಿಷ್ಣುವು ಅವತರಿಸಿದನು.

೪೨. ಶ್ರೀವಸಿಷ್ಠಮುನಿಸಂಸ್ಕೃತವಾದ ಜಾತಕರ್ಮವೇ ಮೊದಲಾದ ಸಂಸ್ಕಾರವನ್ನು ಹೊಂದಿ, ಆ ಮಂತ್ರದಿಂಗುಂಟಾದ ವಿಶೇಷಸಾಮರ್ಥ್ಯವನೆಯ್ದಿ, ಆ ಮಕ್ಕಳು ಕ್ರಮದಲ್ಲಿ ಸಂಚರಿಸಿದರು.

೪೩. ಎಲೈ ನೃಪನೇ! ಕೇಳು; ನೆರವೇರಿದ ಜಾತಕರ್ಮವೇ ಮೊದಲಾದ ಸಂಸ್ಕಾರಗಳುಳ್ಳ, ತಂದೆಗೆ ಪ್ರೀತಿಯನ್ನುಂಟುಮಾಡತಕ್ಕ, ಶ್ರೀರಾಮನೂ, ಲಕ್ಷ್ಮಣನೂ ನಿತ್ಯದಲ್ಲಿಯೂ ಜತೆಯಾಗಿಯೇ ಸಂಚರಿಸುತ್ತಿದ್ದರು.

ವವೃಧಾತೇ ಮಹಾವೀರ್ಯೌ ಶ್ರುತಿಶಬ್ದಾದಿಲಕ್ಷಣೌ ।
ಭರತಃ ಕೈಕಯೋ ರಾಜನ್ ಭ್ರಾತ್ರಾ ಸಹ ಗೃಹೇಽವಸತ್ ॥ ೪೪ ॥

ವೇದಶಾಸ್ತ್ರಾಣಿ ಬುಬುಧೇ ಶಸ್ತ್ರಶಾಸ್ತ್ರಂ ನೃಪೋತ್ತಮ ।
ಏತಸ್ಮಿನ್ನೇವ ಕಾಲೇ ತು ವಿಶ್ವಾಮಿತ್ರೋ ಮಹಾತಪಾಃ ॥ ೪೫ ॥

ಯಾಗೇನ ಯಷ್ಟುಮಾರೇಭೇ ವಿಧಿನಾ ಮಧುಸೂದನಮ್ ।
ಸ ತು ವಿಘ್ನೇನ ಯಾಗೋಽಭೂದ್ರಾಕ್ಷಸೈರ್ಬಹುಶಃ ಪುರಾ ॥ ೪೬ ॥

ನೇತುಂ ಸ ಯಾಗರಕ್ಷಾರ್ಥಂ ಸಂಪ್ರಾಪ್ತೋ ರಾಮಲಕ್ಷ್ಮಣೌ ।
ವಿಶ್ವಾಮಿತ್ರೋ ನೃಪಶ್ರೇಷ್ಠ ತತ್ಪಿತುರ್ಮಂದಿರಂ ಶುಭಮ್ ॥ ೪೭ ॥

---

೪೪. ವೇದದಲ್ಲಿ ಹೇಳಿರುವ, ಉತ್ತಮಲಕ್ಷಣಗಳುಳ್ಳ, ಮಹಾವೀರ್ಯರಾದ ರಾಮಲಕ್ಷ್ಮಣರು ಅಭಿವೃದ್ಧಿಯನ್ನೈದಿದರು. ಕೈಕಯೀದೇವಿಯ ಮಗನಾದ ಭರತನು ಎಲೈ ರಾಯನೇ! ತಮ್ಮನಾದ ಶತ್ರುಘ್ನನೊಡನೆ ರಾಜಗೃಹದಲ್ಲಿ ವಾಸ ಮಾಡಿದನು.

೪೫-೪೬. ಎಲೈ ರಾಜಶ್ರೇಷ್ಠನೇ! ಕೇಳು ; ಆ ಮಕ್ಕಳು ವೇದಗಳೇ ಮೊದಲಾದ ಶಾಸ್ತ್ರಗಳನ್ನೂ ಕಲಿತರು. ಅಷ್ಟರಲ್ಲಿ ಮಹಾತಪಸ್ವಿಯಾದ ವಿಶ್ವಾಮಿತ್ರನು ಯಾಗವಿಧಿಯಿಂದ ಮಧುದೈತ್ಯಸಂಹಾರಕನಾದ ಶ್ರೀಹರಿಯನ್ನು ಪೂಜಿಸಲು ಮೊದಲು ಮಾಡಿದನು. ಹಿಂದೆ ಆ ಯಾಗವು ರಕ್ಕಸರಿಂದ ಅನೇಕ ವಿಘ್ನಗಳಿಂದ ಕೂಡಿದುದಾಯಿತು.

೪೭. ಎಲೈ ನೃಪನೇ! ಆ ವಿಶ್ವಾಮಿತ್ರಮುನಿಯು ಆ ಯಜ್ಞವನ್ನು ರಕ್ಷಿಸಲು, ರಾಮಲಕ್ಷ್ಮಣರನ್ನು ಕರೆದೊಯ್ಯಲು, ಅವರ ತಂದೆಯಾದ ದಶರಥನ ಮಂಗಳ ಗೃಹಕ್ಕೆ ಬಂದನು.

ದಶರಥಸ್ತು ತಂ ದೃಷ್ಟ್ವಾ ಪ್ರತ್ಯುತ್ಥಾಯ ಮಹಾಮತಿಃ ।
ಅರ್ಘ್ಯಪಾದ್ಯಾದಿವಿಧಿನಾ ವಿಶ್ವಾಮಿತ್ರಮಪೂಜಯತ್ ॥ ೪೮ ॥

ಸ ಪೂಜಿತೋ ಮುನಿಃ ಪ್ರಾಹ ರಾಜಾನಂ ರಾಜಸನ್ನಿಧೌ ।
ಶೃಣು ರಾಜನ್ ದಶರಥ ಯದರ್ಥಮಹ ಮಾಗತಃ ॥ ೪೯ ॥

ತತ್ಕಾರ್ಯಂ ನೃಪಶಾರ್ದೂಲ ಕಥಯಾಮಿ ತವಾಗ್ರತಃ ।
ರಾಕ್ಷಸೈರ್ನಾಶಿತೋ ಯಾಗೋ ಬಹುಶೋ ಮೇ ದುರಾಸದೈಃ ॥ ೫೦ ॥

ಯಜ್ಞಸ್ಯ ರಕ್ಷಣಾರ್ಥಂ ಮೇ ದೇಹಿ ತ್ವಂ ರಾಮಲಕ್ಷ್ಮಣೌ ।
ರಾಜಾ ದಶರಥಃ ಶ್ರುತ್ವಾ ವಿಶ್ವಾಮಿತ್ರವಚೋ ನೃಪ ॥ ೫೧ ॥

---

೪೮. ಮಹಾಮತಿಯಾದ ದಶರಥನು ಆ ವಿಶ್ವಾಮಿತ್ರಮುನಿಯನ್ನು ಕಂಡು ಇದಿರೆದ್ದು, ಅರ್ಘ್ಯಪಾದ್ಯಾದಿವಿಧಿಗಳಿಂದ ಪೂಜಿಸಿದನು.

೪೯-೫೦. ಇಂತು ಸತ್ಕೃತನಾದ ಆ ಮುನಿಯು ರಾಜರ ಸಮಕ್ಷದಲ್ಲಿ ದಶರಥರಾಯನನ್ನು ಕುರಿತು ಇಂತು ಹೇಳಿದನು:—'ಎಲೈ ದಶರಥರಾಯನೇ! ಕೇಳು; ಯಾವ ಕೆಲಸದ ಸಲುವಾಗಿ ನಾನು ಬಂದೆನೋ, ಎಲೈ ನೃಪಶಾರ್ದೂಲ! ಆ ಕೆಲಸವನ್ನು ನಿನ್ನ ಮುಂದೆ ಹೇಳುತ್ತೇನೆ. ನನ್ನ ಯಾಗವು ನಿಗ್ರಹಿಸಲಾಗದ ರಕ್ಕಸರಿಂದ ಬಹುವಾಗಿ ಹಾಳುಮಾಡಲ್ಪಟ್ಟಿತು.

೫೧-೫೩. ನಾನು ಅನುಷ್ಠಿಸುವ ಯಾಗದ ರಕ್ಷಣೆಗಾಗಿ, ನೀನು ರಾಮ ಲಕ್ಷ್ಮಣರನ್ನು ಕಳುಹಿಸಿಕೊಡು;' ಎಂದು ನುಡಿದ ವಿಶ್ವಾಮಿತ್ರಮುನಿಯ ನುಡಿಯನ್ನು ದಶರಥರಾಯನು ಕೇಳಿ, ಎಲೈ ನೃಪನೇ! ದುಃಖಗೊಂಡ ಮುಖವುಳ್ಳವನಾಗಿ, ವಿಶ್ವಾಮಿತ್ರನಿಗೆ ಇಂತು ಹೇಳಿದನು:—ಎಲೈ ಮುನಿಯೇ! ಬಾಲರಾದ

ವಿಷಣ್ಣವದನೋ ಭೂತ್ವಾ ವಿಶ್ವಾಮಿತ್ರಮುವಾಚ ಹ ।
ಬಾಲಾಭ್ಯಾಂ ಮಮ ಪುತ್ರಾಭ್ಯಾಂ ಕಿಂ ತೇ ಕಾರ್ಯಂ ಭವಿಷ್ಯತಿ ॥ ೫೨ ॥

ಅಹಂ ತ್ವಯಾ ಸಹಾಗತ್ಯ ಶಕ್ತ್ಯಾ ರಕ್ಷಾಮಿ ತೇ ಮಖಮ್ ।
ರಾಜ್ಞಸ್ತು ವಚನಂ ಶ್ರುತ್ವಾ ರಾಜಾನಂ ಮುನಿರಬ್ರವೀತ್ ॥ ೫೩ ॥

ರಾಮೋಽಪಿ ಶಕ್ಯತೇ ನೂನಂ ಸರ್ವಾನ್ನಾಶಯಿತುಂ ನೃಪ ।
ರಾಮೇಣೈವ ಹಿ ತೇ ಶಕ್ಯಾ ನ ತ್ವಯಾ ರಾಕ್ಷಸಾ ನೃಪ ॥
ಅತೋ ಮೇ ದೇಹಿ ರಾಮಂ ಚ ನ ಚಿಂತಾಂ ಕರ್ತುಮರ್ಹಸಿ ।
ಇತ್ಯುಕ್ತೋ ಮುನಿನಾ ತೇನ ವಿಶ್ವಾಮಿತ್ರೇಣ ಧೀಮತಾ ।
ತೂಷ್ಣೀಂ ಸ್ಥಿತ್ವಾ ಕ್ಷಣಂ ರಾಜಾ ಮುನಿವರ್ಯಮುವಾಚ ಹ ॥ ೫೪ ॥

ಈ ನನ್ನ ಮಕ್ಕಳಿಂದ ನಿಮಗೆ ಯಾವ ಕೆಲಸವು ನೆರವೇರುವುದು? ನಾನೇ ನಿಮ್ಮೊಡನೆ ಬಂದು ಸಾಮರ್ಥ್ಯದಿಂದ ನಿಮ್ಮ ಜನ್ನವನ್ನು ರಕ್ಷಿಸುತ್ತೇನೆ;' ಎಂದು ನುಡಿದ ರಾಯನ ನುಡಿಯನ್ನು ಕೇಳಿ, ಮುನಿಯು ರಾಯನಿಗೆ ಇಂತೆಂದನು.

೫೪. 'ಎಲೈ ನೃಪನೇ! ಆ ದುಷ್ಟರೆಲ್ಲರನ್ನೂ ಅಳಿಯಿಸಲು ರಾಮನೂ ಸಮರ್ಥನಾಗಿರುತ್ತಾನೆ. ಆ ರಾಕ್ಷಸನ ಸಂಹಾರವನ್ನೆಸಗಲು ರಾಮನೇ ಶಕ್ತನು; ನೀನಲ್ಲವು; ಆದುದರಿಂದ ನನಗೆ ರಾಮನನ್ನು ಕೊಡು; ಚಿಂತೆಯನ್ನೆಸಗಬೇಡ;' ಎಂದು ಜ್ಞಾನಿಯಾದ ಆ ವಿಶ್ವಾಮಿತ್ರನು ಹೇಳಲು, ಆಗ ದಶರಥರಾಯನು ಒಂದು ಚಣಕಾಲ ಸುಮ್ಮನಿದ್ದು, ಮುನಿವರ್ಯನಿಗೆ ಇಂತು ನುಡಿದನು.

ಯದ್ಬ್ರವೀಮಿ ಮುನಿಶ್ರೇಷ್ಠ ಪ್ರಸನ್ನಸ್ತ್ವಂ ನಿಬೋಧ ಮೇ ।
ರಾಜೀವಲೋಚನಂ ರಾಮಮಹಂ ದಾಸ್ಯೇ ಸಹಾನುಜಮ್ ॥ ೫೫ ॥

ಕಿಂ ತ್ವಸ್ಯ ಜನನೀ ಬ್ರಹ್ಮನ್ ಅದೃಷ್ಟ್ವೈನಂ ಮರಿಷ್ಯತಿ ।
ಅತೋಽಹಂ ಚತುರಂಗೇಣ ಬಲೇನ ಸಹಿತೋ ಮುನೇ ॥ ೫೬ ॥

ಆಗತ್ಯ ರಾಕ್ಷಸಾನ್ ಹನ್ಮೀತ್ಯೇವಂ ಮೇ ಮನಸಿ ಸ್ಥಿತಮ್ ।
ವಿಶ್ವಾಮಿತ್ರಃ ಪುನಃ ಪ್ರಾಹ ರಾಜಾನಮಮಿತೌಜಸಮ್ ॥ ೫೭ ॥

ನಾಜ್ಞೋ ರಾಮೋ ನೃಪಶ್ರೇಷ್ಠ ಸ ಸರ್ವಜ್ಞಃ ಸಮಃ ಕ್ಷಮಃ ।
ಶೇಷನಾರಾಯಣಾವೇತೌ ತವ ಪುತ್ರೌ ನ ಸಂಶಯಃ ॥ ೫೮ ॥

---

೫೫. 'ಎಲೈ ಮುನಿಶ್ರೇಷ್ಠನೇ! ನಾನು ಏನನ್ನು ಹೇಳುತ್ತೇನೆಯೋ, ಅದನ್ನು ನೀನು ಪ್ರಸನ್ನನಾಗಿ ತಿಳಿಯುವನಾಗು; ನಾನು ತಮ್ಮನಾದ ಲಕ್ಷ್ಮಣ ನೊಡಗೂಡಿದ ತಾವರೆಗಣ್ಣನಾದ ರಾಮನನ್ನು ನಿನಗೆ ಒಪ್ಪಿಸುವೆನು.

೫೬–೫೭. ಎಲೈ ಬ್ರಹ್ಮಜ್ಞಾನಿಯೇ! ಆದರೆ ಇವನ ತಾಯಿಯು ಇವನನ್ನು ಕಾಣದಿದ್ದರೆ ಸಾಯುವಳು. ಆದುದರಿಂದ ಎಲೈ ಮುನಿಯೇ ನಾನು ಚತುರಂಗ ಬಲದಿಂದ ಕೂಡಿ ಬಂದು, ರಕ್ಕಸರನ್ನು ಕೊಲ್ಲುತ್ತೇನೆಂದು ನನ್ನ ಮನದಲ್ಲಿದೆ;' ಎಂದನು. ಪುನಹ ವಿಶ್ವಾಮಿತ್ರನು ಮಹಾಶೂರನಾದ ರಾಯನಿಗೆ ಇಂತು ಹೇಳಿದನು.

೫೮. 'ಎಲೈ ನೃಪಶ್ರೇಷ್ಠನೇ! ಶ್ರೀರಾಮನು ಅರಿಯದವನಲ್ಲ; ಅವನು ಸರ್ವಜ್ಞನು, ಮತ್ತು ಸಮನು, ಸಮರ್ಥನು. ಈ ನಿನ್ನ ಮಕ್ಕಳಾದ ಲಕ್ಷ್ಮಣನು ಮತ್ತು ರಾಮನು ಶೇಷನಾರಾಯಣರು. ಈ ವಿಷಯದಲ್ಲಿ ಸಂದೇಹವಿಲ್ಲವು.

ದುಷ್ಟಾನಾಂ ನಿಗ್ರಹಾರ್ಥಾಯ ಶಿಷ್ಟಾನಾಂ ಪಾಲನಾಯ ಚ ।
ಅವತೀರ್ಣೌ ನ ಸಂದೇಹೋ ಗೃಹೇ ತವ ನರಾಧಿಪ ॥ ೫೯ ॥

ನ ಮಾತ್ರಾ ನ ತ್ವಯಾ ರಾಜನ್ ಶೋಕಃ ಕಾರ್ಯೋಽತ್ರ ಚಾಣ್ವಪಿ ।
ನಿಃಕ್ಷೇಪೇ ಚ ಮಹಾರಾಜ ಅರ್ಪಯಿಷ್ಯಾಮಿ ತೇ ಸುತೌ ॥ ೬೦ ॥

ಇತ್ಯುಕ್ತೋ ದಶರಥಸ್ತೇನ ವಿಶ್ವಾಮಿತ್ರೇಣ ಧೀಮತಾ ।
ತಚ್ಛಾಪಭೀತೋ ಮನಸಾ ನೀಯತಾಮಿತ್ಯಭಾಷತ ॥ ೬೧ ॥

ಕೃಚ್ಛ್ರಾತ್ ಪ್ರಿತ್ರಾ ವಿನಿರ್ಮುಕ್ತಂ ರಾಮಮಾದಾಯ ಸಾನುಜಮ್ ।
ತತಃ ಸಿದ್ಧಾಶ್ರಮಂ ರಾಜನ್ ಸ ಪ್ರತಸ್ಥೇ ಚ ಕೌಶಿಕಃ ॥ ೬೨ ॥

---

೫೯. ಎಲೈ ನರಾಧಿಪನೇ ಕೇಳು ; ಇವರೀರ್ವರೂ, ದುಷ್ಟನಿಗ್ರಹದ ಸಲುವಾಗಿಯೂ, ಶಿಷ್ಟರನ್ನು ರಕ್ಷಿಸುವ ಸಲುವಾಗಿಯೂ, ನಿನ್ನ ಮನೆಯಲ್ಲಿ ಅವತರಿಸಿರುತ್ತಾರೆ. ಈ ವಿಷಯದಲ್ಲಿ ಸಂದೇಹವಿಲ್ಲ.

೬೦-೬೧. ಎಲೈ ರಾಯನೇ ! ತಾಯಿಯರಿಂದಾಗಲಿ, ನಿನ್ನಿಂದಾಗಲಿ ಸ್ವಲ್ಪವೂ ದುಃಖಪಡತಕ್ಕದ್ದಲ್ಲವು ; ಎಲೈ ಮಹಾರಾಜನೇ ! ನಿನ್ನ ಮಕ್ಕಳನ್ನು ನನ್ನಲ್ಲಿ ಒಪ್ಪಿಸಿದಲ್ಲಿ, ಮತ್ತೂ ನಿನಗೆ ನಿಃಕ್ಷೇಪದಂತೆ ಹಿಂದಕ್ಕೆ ಅರ್ಪಿಸುವೆನು ; ' ಎಂದು ಜ್ಞಾನಿಯಾದ ಆ ವಿಶ್ವಾಮಿತ್ರನಿಂದ ಹೇಳಿಸಿಕೊಳ್ಳಲ್ಪಟ್ಟ ದಶರಥರಾಯನು ಮನಸ್ಸಿನಲ್ಲಿ ಆತನ ಶಾಪಕ್ಕೆ ಹೆದರಿ, ಕರೆದುಕೊಂಡು ಹೋಗಬಹುದೆಂದು ಹೇಳಿದನು.

೬೨. ಎಲೈ ಸಹಸ್ರಾನೀಕನೇ ! ಕೇಳು ; ಬಳಿಕ ಆ ವಿಶ್ವಾಮಿತ್ರನು ಕಷ್ಟದಿಂದ ತಂದೆಯಾದ ದಶರಥನು ಬಿಟ್ಟುಕೊಟ್ಟ, ತಮ್ಮನಾದ ಲಕ್ಷ್ಮಣನೊಡಗೂಡಿದ ಶ್ರೀರಾಮಚಂದ್ರನನ್ನು ಕರೆದುಕೊಂಡು, ಸಿದ್ಧಾಶ್ರಮಕ್ಕೆ ಹೊರಟನು.

ತಂ ಪ್ರಸ್ಥಿತಮಾಲೋಕ್ಯ ರಾಜಾ ದಶರಥಸ್ತದಾ ।
ಅನುವ್ರಜ್ಯಾಬ್ರವೀದೇತದ್ವಚೋ ದಶರಥಸ್ತಥಾ ॥ ೬೩ ॥

ಅಪುತ್ರೋಽಹಂ ಪುರಾ ಬ್ರಹ್ಮನ್ ಬಹುಭಿಃ ಕಾಮ್ಯ ಕರ್ಮಭಿಃ ।
ಮುನಿಪ್ರಸಾದಾದಧುನಾ ಪುತ್ರವಾನಸ್ಮಿ ಸತ್ತಮ ॥ ೬೪ ॥

ಮನಸಾ ತದ್ವಿಯೋಗಂ ತು ನ ಶಕ್ಷ್ಯಾಮಿ ವಿಶೇಷತಃ ।
ತ್ವಮೇವ ಜಾನಾಸಿ ಮುನೇ ನೀತ್ವಾ ಶೀಘ್ರಂ ಪ್ರಯಚ್ಛ ಮೇ ॥ ೬೫ ॥

ಇತ್ಯೇವಮುಕ್ತೋ ರಾಜಾನಂ ವಿಶ್ವಾಮಿತ್ರೋಽಬ್ರವೀತ್ಪುನಃ ।
ಸಮಾಪ್ತಯಜ್ಞಶ್ಚ ಪುನರ್ನೇಷ್ಯೇ ರಾಮಂ ಚ ಲಕ್ಷ್ಮಣಮ್ ॥ ೬೬ ॥

ಸತ್ಯಪೂರ್ವಂ ತು ದಾಸ್ಯಾಮಿ ನ ಚಿಂತಾಂ ಕರ್ತುಮರ್ಹಸಿ ।
ಇತ್ಯುಕ್ತಃ ಪ್ರೇಷಯಾಮಾಸ ರಾಮಂ ಲಕ್ಷ್ಮಣಸಂಯುತಮ್ ॥ ೬೭ ॥

---

೬೩. ಆಗ ದಶರಥರಾಯನು ಅಂತು ಹೊರಟ ವಿಶ್ವಾಮಿತ್ರನನ್ನು ಸ್ವಲ್ಪ ದೂರ ಹಿಂಬಾಲಿಸಿ, ಈ ಮಾತನ್ನು ಹೇಳಿದನು.

೬೪. 'ಎಲೈ ಬ್ರಹ್ಮಜ್ಞಾನಿಯಾದ, ಶ್ರೇಷ್ಠನಾದ ವಿಶ್ವಾಮಿತ್ರನೇ ! ಪೂರ್ವದಲ್ಲಿ ಅನೇಕ ವರ್ಷಗಳಕಾಲ ಮಕ್ಕಳಿಲ್ಲದ ನಾನು ಅನೇಕ ಕಾಮ್ಯಕರ್ಮಗಳ ಅನುಷ್ಠಾನದಿಂದ, ಈಗ ಪುತ್ರವಂತನಾಗಿರುತ್ತೇನೆ.

೬೫. ಮನಸ್ಸಿನಿಂದ ಅವರ ವಿರಹವನ್ನು ಸಹಿಸಲಾರೆನು. ಎಲೈ ಮುನಿಯೇ ! ನೀನು ವಿಶೇಷಜ್ಞನಾಗಿರುತ್ತೀಯೆ; ಕರೆಕೊಂಡು ಹೋದವನು ಬೇಗನೆ ನನಗೆ ಕರೆತಂದುಕೊಡವನಾಗು.' ಎಂದು ಹೇಳಲು,

೬೬-೬೭. ಸತ್ಯಪುರಸ್ಸರವಾಗಿ ಕರೆಮುಕೊಂಡು ಬಂದು ಒಪ್ಪಿಸುವೆನು. ಆಲೋಚನೆಯನ್ನು ಮಾಡಬೇಡ;' ಎಂದು ವಿಶ್ವಾಮಿತ್ರನು ಹೇಳಲು, ದಶರಥ

ಅನಿಚ್ಛನ್ನಪಿ ರಾಜಾಽಸೌ ಮುನಿಶಾಪಭಯಾನ್ನೃಪಃ ।
ವಿಶ್ವಾಮಿತ್ರಸ್ತು ತೌ ಗೃಹ್ಯ ಅಯೋಧ್ಯಾಯಾ ಯಯೌ ಶನೈಃ ॥ ೬೮ ॥

ಸರಯ್ವಾಸ್ತೀರಮಾಸಾದ್ಯ ಗಚ್ಛನ್ನೇಕಃ ಸ ಕೌಶಿಕಃ ।
ತಯೋಃ ಪ್ರೀತ್ಯಾ ಸ ರಾಜೇಂದ್ರ ದ್ವೇ ವಿದ್ಯೇ ಪ್ರಥಮಂ ದದೌ ॥ ೬೯ ॥

ಬಲಾಮತಿಬಲಾಂ ಚೈವ ಸಮಂತ್ರೇ ಚ ಸ ಸಂಗ್ರಹೇ ।
ಕ್ಷುತ್ಪಿಪಾಸಾಪನಯನೇ ಪುನಶ್ಚೈವ ಮಹಾಮತಿಃ ॥ ೭೦ ॥

ಅಸ್ತ್ರಗ್ರಾಮಮಶೇಷಂ ತು ಶಿಕ್ಷಯಿತ್ವಾ ತು ತೌ ತದಾ ।
ಆಶ್ರಮಾಣಿ ಚ ದಿವ್ಯಾನಿ ಮುನೀನಾಂ ಭಾವಿತಾತ್ಮನಾಮ್ ॥ ೭೦ ॥

ದರ್ಶಯಿತ್ವಾ ಉಷಿತ್ವಾ ಚ ಪುಣ್ಯಸ್ಥಾನೇಷು ಸತ್ತಮ ।
ಗಂಗಾಮುತ್ತೀರ್ಯ ಶೋಣಸ್ಯ ತೀರಮಾಸಾದ್ಯ ಪಶ್ಚಿಮಮ್ ॥ ೭೨ ॥

ರಾಯನು ಲಕ್ಷ್ಮಣನೊಡಗೂಡಿದ ಶ್ರೀರಾಮಚಂದ್ರನನ್ನು ತನಗೆ ಕಳುಹಿಸುವ ಇಚ್ಛೆಯಿಲ್ಲದಿದ್ದರೂ, ಮುನಿಶಾಪಭಯದಿಂದ ಕಳುಹಿಸಿಕೊಟ್ಟನು. ವಿಶ್ವಾಮಿತ್ರನೂ ಅವರನ್ನು ಕರೆದುಕೊಂಡು, ಅಯೋಧ್ಯೆಯಿಂದ ಮೆಲ್ಲನೆ ಹೊರಟನು.

೬೯-೭೨. ಎಲೈ ರಾಜೇಂದ್ರನೇ ! ಕೇಳು ; ಆ ಕೌಶಿಕನೊಬ್ಬನೇ ಸರಯೂ ನದಿಯ ದಡವನ್ನು ಹೊಂದಿ, ಹೋಗುತ್ತಾ ಆ ರಾಮಲಕ್ಷ್ಮಣರಿಗೆ ಪ್ರೀತಿಯಿಂದ ಮೊದಲು ಹಸಿವು ನೀರಡಿಕೆಗಳನ್ನು ಕಳೆಯುವ ಮಂತ್ರಸಹಿತಗಳಾದ, ಚಿಕ್ಕವುಗಳಾದ 'ಬಲಾ, ಅತಿಬಲಾ,' ಎಂಬೆರಡು ವಿದ್ಯೆಗಳನ್ನು ಉಪದೇಶಿಸಿದನು. ಮತ್ತು ಮಹಾಮತಿಯಾದ ವಿಶ್ವಾಮಿತ್ರನು ಸಕಲವಾದ ಅಸ್ತ್ರಗಳನ್ನೂ ಆ ರಾಮ ಲಕ್ಷ್ಮಣರಿಗೆ ಕಲಿಸಿಕೊಟ್ಟನು. ತರುವಾಯ ಪರಮಾತ್ಮನ ಧ್ಯಾನಾಸಕ್ತರಾದ ಮುನಿಗಳ ಉತ್ತಮಗಳಾದ ಆಶ್ರಮಗಳನ್ನು ತೋರಿಸಿ, ಆ ಪುಣ್ಯಸ್ಥಾನಗಳಲ್ಲಿ ವಾಸಮಾಡಿ, ಗಂಗೆಯನ್ನು ದಾಟಿ, ಶೋಣಾನದಿಯ ಪಡುವಣ ದಡವನ್ನು ಹೊಂದಿದರು.

ಮುನಿಧಾರ್ಮಿಕಾ ಸಿದ್ಧಾಂಶ್ಚ ಪಶ್ಯಂತೌ ರಾಮಲಕ್ಷ್ಮಣೌ ।
ಋಷಿಭ್ಯಶ್ಚ ವರಾನ್ ಪ್ರಾಪ್ಯ ತೇನ ನೀತೌ ನೃಪಾತ್ಮಜೌ ॥ ೭೩ ॥

ತಾಟಕಾಯಾ ವನಂ ಘೋರಂ ಮೃತ್ಯೋರ್ಮುಖಮಿವಾಪರಮ್ ।
ಗತೇ ತತ್ರ ನೃಪಶ್ರೇಷ್ಠ ವಿಶ್ವಾಮಿತ್ರೋ ಮಹಾತಪಾಃ ॥ ೭೪ ॥

ರಾಮಮಕ್ಲಿಷ್ಟ ಕರ್ಮಾಣಮಿದಂ ವಚನಮಬ್ರವೀತ್ ।
ರಾಮ ರಾಮ ಮಹಾಬಾಹೋ ತಾಟಕಾ ನಾಮ ರಾಕ್ಷಸೀ ॥ ೭೫ ॥

ರಾವಣಸ್ಯ ನಿಯೋಗೇನ ವಸತ್ಯಸ್ಮಿನ್ ಮಹಾವನೇ ।
ತಯಾ ಮನುಷ್ಯಾ ಬಹವೋ ಮುನಿಪುತ್ರಾ ಮೃಗಾಸ್ತಥಾ ॥ ೭೬ ॥

ನಿಹತಾ ಭಕ್ಷಿತಾಶ್ಚೈವ ತಸ್ಮಾತ್ತಾಂ ವಧ ಸತ್ತಮ ।
ಇತ್ಯೇವಮುಕ್ತೋ ಮುನಿನಾ ರಾಮಸ್ತಂ ಮುನಿಮಬ್ರವೀತ್ ॥ ೭೭ ॥

---

೭೩. ಅಲ್ಲಿ ಅರಗುವರರಾದ ರಾಮಲಕ್ಷ್ಮಣರು ಮುನಿಗಳಾದವರನ್ನೂ, ಧಾರ್ಮಿಕರನ್ನೂ, ಸಿದ್ಧರನ್ನೂ, ನೋಡುತ್ತಾ ಋಷಿಗಳಿಂದ ವರಗಳನ್ನು ಪಡೆದು ಕೊಂಡರು. ವಿಶ್ವಾಮಿತ್ರಮುನಿಯು ಅವರನ್ನು ಮುಂದೆ ಕರೆದುಕೊಂಡು ಹೋದನು.

೭೪–೭೬. ಎರಡನೆಯದಾದ ಮೃತ್ಯುವಿನ ಮುಖದಂತಿದ್ದ ತಾಟಕೆಯ ಭಯಂಕರವಾದ ಕಾಡಿಗೆ ಹೋಗಲು, ಎಲೈ ರಾಯನೇ ! ಅಲ್ಲಿ ಮಹಾತಪಸ್ವಿಯಾದ ವಿಶ್ವಾಮಿತ್ರಮುನಿಯು ಕಷ್ಟದ ಕೆಲಸವನ್ನೇ ಕಾಣದ ಶ್ರೀರಾಮನಿಗೆ ಈ ಮಾತನ್ನು ಹೇಳಿದನು :—' ಮಹಾಬಾಹುವಾದ ರಾಮನೇ ! ತಾಟಕೆಯೆಂಬ ರಕ್ಕಸಿಯು ರಾವಣನ ಅಪ್ಪಣೆಯಿಂದ ಈ ಕಾಡಿನಲ್ಲಿ ವಾಸಿಸುತ್ತಿದ್ದಾಳೆ ; ಅವಳು ಅನೇಕರಾದ ಮುನಿಗಳ ಮಕ್ಕಳನ್ನೂ, ಮೃಗಗಳನ್ನೂ ಕೊಂದಳು ಮತ್ತು ತಿಂದಳು.

೭೭. ಆದುದರಿಂದ ಆ ಕ್ರೂರಸ್ವಭಾವದವಳನ್ನು ಎಲೈ ಸತ್ತಮನೇ ! ಸಂಹರಿಸು ;' ಎಂದು ವಿಶ್ವಾಮಿತ್ರಮುನಿಯು ಹೇಳಲು, ಶ್ರೀರಾಮನು ಆ ಮುನಿಗೆ ಇಂತು ಹೇಳಿದನು.

ಕಥಂ ಹಿ ಸ್ತ್ರೀವಧಂ ಕುರ್ಯಾಮಹಮದ್ಯ ಮಹಾಮುನೇ ।
ಸ್ತ್ರೀವಧೇ ತು ಮಹಾಪಾಪಂ ಪ್ರವದಂತಿ ಮನೀಷಿಣಃ ॥ ೭೮ ॥

ಇತಿ ರಾಮವಚಃ ಶ್ರುತ್ವಾ ವಿಶ್ವಾಮಿತ್ರ ಉವಾಚ ತಮ್ ।
ಯಸ್ಯಾಸ್ತು ನಿಧನಾದ್ರಾಮ ಜನಾಸ್ಸರ್ವೇ ಶವಾಕುಲಾಃ ॥ ೭೯ ॥

ಭವಂತಿ ಸತತಂ ತಸ್ಮಾತ್ತಸ್ಯಾಃ ಪುಣ್ಯಪ್ರದೋ ವಧಃ ।
ಇತ್ಯೇವಂ ವಾದಿನಿ ಮುನೌ ವಿಶ್ವಾಮಿತ್ರೇ ನಿಶಾಚರೀ ॥ ೮೦ ॥

ಆಗತಾ ಸುಮಹಾ ಘೋರಾ ತಾಟಕಾ ವಿವೃತಾನನಾ ।
ಮುನಿನಾ ಪ್ರೇರಿತೋ ರಾಮಸ್ತಾಂ ದೃಷ್ಟ್ವಾ ವಿವೃತಾನನಾಮ್ ॥ ೮೧ ॥

---

೭೮. 'ಎಲೈ ಮಹಾಮುನಿಯೇ! ಈ ನಾನು ಹೆಂಗುಸನ್ನು ಹೇಗೆ ಸಂಹರಿಸಲಿ? ಜ್ಞಾನಿಗಳು ಹೆಂಗೊಲೆಮಾಡಿದಲ್ಲಿ ಮಹಾಪಾಪವುಂಟಾಗುವುದೆಂದು ಹೇಳುತ್ತಾರೆ.'

೭೯–೮೧. ಶ್ರೀರಾಮನ ಈ ನುಡಿಯನ್ನು ವಿಶ್ವಾಮಿತ್ರಮುನಿಯು ಕೇಳಿ, ಅವನಿಗೆ ಇಂತು ಹೇಳಿದನು; 'ಎಲೈ ರಾಮನೇ! ಕೇಳು; ಯಾವ ದುಷ್ಟಳಾದ ತಾಟಕೆಯ ಸಂಹಾರದಿಂದ ಜನರೆಲ್ಲರೂ ಯಾವಾಗಲೂ ನಿಶ್ಚಿಂತರಾಗಿರುವರೋ, ಅದರಿಂದ ಅವಳ ವಧೆಯು ಪುಣ್ಯವನ್ನುಂಟುಮಾಡತಕ್ಕದ್ದು;' ಎಂದು ವಿಶ್ವಾಮಿತ್ರಮುನಿಯು ಹೇಳುವ ಸಮಯಕ್ಕೆ ನಿಶಾಚರಿಯಾದ, ಅತಿಭಯಂಕರಳಾದ ತಾಟಕೆಯು ಬಾಯನ್ನು ತೆರೆದುಕೊಂಡು ಬಂದಳು. ಆಗ ವಿಶ್ವಾಮಿತ್ರನಿಂದ ಪ್ರೇರಿತನಾದ ಶ್ರೀರಾಮಚಂದ್ರನು ಅಂತು ಬಾಯ್ದೆರೆದು ಬಂದ, ಆ ದುಷ್ಟಳಾದ ರಕ್ಕಸಿಯನ್ನು ಕಂಡನು.

ಉದ್ಯತೈಕಭುಜಯಷ್ಟಿಮಾಯತೀಂ
ಶ್ರೋಣಿ ಲಂಬ ಪುರಷಾಂತ್ರ ಮೇಖಲಾಮ್ ।
ತಾಂ ವಿಲೋಕ್ಯ ವನಿತಾವಧೇ ಘೃಣಾಂ
ಪತ್ರಿಣಾ ಸಹ ಮುಮೋಚ ರಾಘವಃ ॥ ೮೨ ॥

ಶರಂ ಸಂಧಾಯ ವೇಗೇನ ತೇನ ತಸ್ಯಾ ಉರಃಸ್ಥಲಮ್ ।
ವಿಪಾಟಿತಂ ದ್ವಿಧಾ ರಾಜನ್ ಸಾ ಪಪಾತ ಮಮಾರ ಚ ॥ ೮೩ ॥

ಘಾತಯಿತ್ವಾ ತು ತಾಮೇವಂ ತಾವಾನೀಯ ಮುನಿಸ್ತುತೌ ।
ಪ್ರಾಪಯಾಮಾಸ ತಂ ತತ್ರ ನಾನಾಋಷಿನಿಷೇವಿತಮ್ ॥ ೮೪ ॥

ನಾನಾದ್ರುಮಲತಾಕೀರ್ಣಂ ನಾನಾಪುಷ್ಪೋಪಶೋಭಿತಮ್ ॥ ೮೫ ॥

---

೮೨. ಮೇಲಕ್ಕೆತ್ತಿದ, ಕೋಲಿನಂತಿರುವ ತೋಳುಗಳುಳ್ಳವಳಾಗಿಯೂ, ಪೊರವಾರಿನಲ್ಲಿ ಜೋಲಾಡುತ್ತಿರುವ ಗಂಡುಸರ ಕರುಳಮಾಲೆಯುಳ್ಳವಳಾಗಿಯೂ ಬರುತ್ತಲಿದ್ದ ಆ ತಾಟಕೆಯನ್ನು ನೋಡಿ, ಶ್ರೀರಾಮಚಂದ್ರನು ಸ್ತ್ರೀಹತ್ಯೆಯ ವಿಷಯದಲ್ಲಿ ಕರುಣೆಯನ್ನು ಗರಿಯಂಬಿನೊಡನೆ ಬಿಟ್ಟನು. (ಎಂದರೆ ಕರುಣೆ ತೊರೆದು ಆ ದುಷ್ಟೆಯನ್ನು ಬಾಣದಿಂದ ಹೊಡೆದನು.)

೮೩. ಎಲೈ ಸಹಸ್ರಾನೀಕರಾಯನೇ ! ಕೇಳು ; ಆ ಶ್ರೀರಾಮನು ಬೇಗನೆ ಬಿಲ್ಲಿನಲ್ಲಿ ಬಾಣವನ್ನು ಹೂಡಿ ಹೊಡೆದು, ಆ ತಾಟಕೆಯ ಎದೆಯನ್ನು ಎರಡಾಗಿ ಸೀಳಿದನು. ಆಗ ಅವಳು ನೆಲದಮೇಲೆ ಬಿದ್ದು ಸತ್ತಳು.

೮೪-೮೫. ವಿಶ್ವಾಮಿತ್ರನು ಇಂತು ಅವಳನ್ನು ಕೊಲ್ಲಿಸಿ, ಮುನಿಗಳಿಂದ ಕೊಂಡಾಡಲ್ಪಟ್ಟ ಆ ರಾಮ ಲಕ್ಷ್ಮಣರನ್ನು ಕರೆದುಕೊಂಡು, ಅಲ್ಲಿ ಅನೇಕ ಋಷಿಗಳಿಂದ ಸೇವಿತವಾದ, ಅನೇಕವಾದ ಮರ ಬಳ್ಳಿಗಳಿಂದ ವ್ಯಾಪಿಸಿರುವ, ಅನೇಕವಾದ

ನಾನಾನಿರ್ಝರಶೋಭಾಢ್ಯಂ ವಿಂಧ್ಯಶೈಲಾಂತರಸ್ಥಿತಮ್ ॥ ೮೬ ॥

ಶಾಕಮೂಲ ಫಲೋಪೇತಂ ದಿವ್ಯಂ ಸಿದ್ಧಾಶ್ರಮಂ ಸ್ವಕಮ್ ।
ರಕ್ಷಾರ್ಥಂ ತಾವುಭೌ ಸ್ಥಾಪ್ಯ ಶಿಕ್ಷಯಿತ್ವಾ ವಿಶೇಷತಃ ॥ ೮೭ ॥

ತತಶ್ಚಾರಬ್ಧವಾನ್ ಯಾಗಂ ವಿಶ್ವಾಮಿತ್ರೋ ಮಹಾತಪಾಃ ।
ದೀಕ್ಷಾಂ ಪ್ರವಿಷ್ಟೇ ಚ ಮುನೌ ವಿಶ್ವಾಮಿತ್ರೇ ಮಹಾತ್ಮನಿ ॥ ೮೮ ॥

ಯಜ್ಞೇ ತು ವಿತತೇ ತತ್ರ ಕರ್ಮ ಕುರ್ವಂತಿ ಋತ್ವಿಜಃ ।
ಮಾರೀಚಶ್ಚ ಸುಬಾಹುಶ್ಚ ತ್ವನ್ಯೇ ಚ ಬಹುರಾಕ್ಷಸಾಃ ॥ ೮೯ ॥

ಆಗತಾ ಯಾಗನಾಶಾಯ ರಾವಣೇನ ನಿಯೋಜಿತಾಃ ।
ತಾನಾಗತಾನ್ ಸ ವಿಜ್ಞಾಯ ರಾಮಃ ಕಮಲಲೋಚನಃ ॥ ೯೦ ॥

ಹೂಗಳಿಂದ ಅಂದಗೊಂಡಿರುವ, ಅನೇಕ ಗಿರಿ-ನದಿಯ ನೀರಿನಿಂದ ಪೂರ್ಣವಾದ, ವಿಂಧ್ಯಪರ್ವತದ ನಡುವೆಯಲ್ಲಿರುವ, ಸೊಪ್ಪು, ಗೆಣಸು, ಹಣ್ಣುಗಳಿಂದ ಕೂಡಿರುವ, ಅಮಾನುಷವಾದ, ತನ್ನ ಸಿದ್ಧಾಶ್ರಮಕ್ಕೆ ಬಂದನು. ಯಜ್ಞರಕ್ಷಣೆಗಾಗಿ ವಿಶೇಷ ವಾಗಿ ತಿಳಿವಳಿಕೆಯನ್ನು ಹೇಳಿ, ಅವರಿಬ್ಬರನ್ನೂ ಕಾವಲಾಗಿಟ್ಟು, ಮಹಾತಪಸ್ವಿ ಯಾದ ವಿಶ್ವಾಮಿತ್ರಮುನಿಯು ಬಳಿಕ ಯಜ್ಞವನ್ನು ಪ್ರಾರಂಭ ಮಾಡಿದನು. (ಎಂದರೆ ಮಹಾತ್ಮನಾದ ವಿಶ್ವಾಮಿತ್ರಮುನಿಯು ದೀಕ್ಷೆಯನ್ನು ಕೈಕೊಂಡನು.)

೮೯-೯೦. ಅಲ್ಲಿ, ಬಹು ದೊಡ್ಡದಾದ ಯಾಗದಲ್ಲಿ ಋತ್ವಿಜರು ಕರ್ಮವನ್ನೆಸ ಗುತ್ತಿರಲು, ಮಾರೀಚನು, ಸುಬಾಹುವು ಮತ್ತು ಇತರರಾದ ರಕ್ಕಸರು ರಾವಣನಿಂದ ಪ್ರೇರಿತರಾಗಿ ಯಾಗವನ್ನು ಕೆಡಿಸಲು ಬಂದರು. ತಾವರೆಗಣ್ಣನಾದ ಶ್ರೀರಾಮನು ಅವರು ಬಂದುದನ್ನು ಅರಿತನು.

ಶರೇಣ ಪಾತಯಾಮಾಸ ಸುಬಾಹುಂ ಧರಣೀತಲೇ ।
ಆಸ್ಪೃಕ್ಪ್ರವಾಹಂ ವರ್ಷಂತಂ ಮಾರೀಚಂ ಭಲ್ಲಕೇನ ತು ॥
ಪ್ರಕಾಶ್ಯ ನೀತವಾನಬ್ಧಿಂ ಯಥಾ ಪೂರ್ಣಂ ತು ವಾಯುನಾ ।
ಶೇಷಾಂಸ್ತು ಹತವಾನ್ ರಾಮೋ ಲಕ್ಷ್ಮಣಶ್ಚ ನಿಶಾಚರಾನ್ ॥ ೯೧ ॥

ರಾಮೇಣ ರಕ್ಷಿತಮಖೋ ವಿಶ್ವಾಮಿತ್ರೋ ಮಹಾಯಶಾಃ ।
ಸಮಾಪ್ಯ ಯಾಗಂ ವಿಧಿವತ್ ಪೂಜಯಾಮಾಸ ಋತ್ವಿಜಃ ॥ ೯೨ ॥

ಸದಸ್ಯಾನಪಿ ಸಂಪೂಜ್ಯ ಯಥಾರ್ಹಂ ಚ ಹ್ಯರಿಂದಮ ।
ರಾಮಂ ಚ ಲಕ್ಷ್ಮಣಂ ಚೈವ ಪೂಜಯಾಸ ಭಕ್ತಿತಃ ॥ ೯೩ ॥

ತತೋ ದೇವಗಣಸ್ತುಷ್ಟೋ ಯಜ್ಞಭಾಗೇನ ಸತ್ತಮ ।
ವವರ್ಷ ಪುಷ್ಪವರ್ಷಂ ತು ರಾಮದೇವಸ್ಯ ಮೂರ್ಧನಿ ॥ ೯೪ ॥

---

೯೧. ಆಗ ಶ್ರೀರಾಮನು ಬಾಣದಿಂದ ಸುಬಾಹುವನ್ನು ಭೂತಲದಲ್ಲಿ ಕೆಡಹಿದನು. ನೆತ್ತರ ಹೊನಲನ್ನು ಮಳೆಗರೆಯುತ್ತಿದ್ದ ಮಾರೀಚನನ್ನು (ಭಲ್ಲಕದಿಂದ) ಈಟಿಯಂತಿರುವ ಬಾಣದಿಂದ ಹೊಡೆದು, ಬಿರುಗಾಳಿಯಿಂದ ಪೂರ್ಣವಾಗಿರುವಂತೆ ವಾಯುವ್ಯಾಸ್ತ್ರವನ್ನು ಪ್ರಯೋಗಿಸಿ, ಸಮುದ್ರದಲ್ಲಿ ಕೆಡಹಿದನು. ಅನಂತರದಲ್ಲಿ ರಾಮ ಲಕ್ಷ್ಮಣರು ಉಳಿದ ರಾತ್ರಿಂಚರರನ್ನು ಸಂಹರಿಸಿದರು.

೯೨. ಇಂತು ಶ್ರೀರಾಮಚಂದ್ರನು ಜನ್ನವನ್ನು ಕಾಪಾಡಲು, ಪೆರ್ಜಸವಾಂತ ವಿಶ್ವಾಮಿತ್ರಮುನಿಯು ನೇಮದಂತೆ ಜನ್ನವನ್ನು ಮುಗಿಸಿ, ಋತ್ವಿಜರನ್ನು ಪೂಜಿಸಿದನು.

೯೩. ಎಲೈ ಶತ್ರು ಸಂಹಾರಕನಾದ ಸಹಸ್ರಾನೀಕರಾಯನೇ! ಕೇಳು; ವಿಶ್ವಾಮಿತ್ರನು ಅವರವರ ಯೋಗ್ಯತಾನುಗುಣವಾಗಿ ಸದಸ್ಯರನ್ನು ಪೂಜಿಸಿ, ಭಕ್ತಿಯಿಂದ ರಾಮ ಲಕ್ಷ್ಮಣರನ್ನೂ ಪೂಜಿಸಿದನು.

೯೪. ಎಲೈ ಸತ್ತಮನೇ! ಅನಂತರದಲ್ಲಿ ಜನ್ನದಲ್ಲಿತ್ತ ಹವಿರ್ಭಾಗಗಳಿಂದ ಸಂತಸಗೊಂಡ ದೇವತೆಗಳ ತಂಡವು ಶ್ರೀರಾಮಚಂದ್ರದೇವನ ತಲೆಯಮೇಲೆ ಹೂಮಳೆಯನ್ನು ಕರೆದರು.

ನಿವಾರ್ಯ ರಾಕ್ಷಸಭಯಂ ಕಾರಯಿತ್ವಾ ತು ತನ್ಮಖಮ್ ।
ಶ್ರುತ್ವಾ ನಾನಾ ಕಥಾಃ ಪುಣ್ಯಾ ರಾಮೋ ಭ್ರಾತೃಸಮನ್ವಿತಃ ॥ ೯೫

ತೇನ ನೀತೋ ವಿನೀತಾತ್ಮಾ ಅಹಲ್ಯಾ ಯತ್ರ ತಿಷ್ಠತಿ ।
ವ್ಯಭಿಚಾರಾನ್ಮಹೇಂದ್ರೇಣ ಭರ್ತ್ರಾ ಶಪ್ತಾ ಹಿ ಸಾ ಪುರಾ ॥ ೯೬ ॥

ಪಾಷಾಣಭೂತಾ ರಾಜೇಂದ್ರ ತಸ್ಯ ರಾಮಸ್ಯ ದರ್ಶನಾತ್ ।
ಅಹಲ್ಯಾ ಮುಕ್ತಶಾಪಾ ಚ ಜಗಾಮ ಗೌತಮಂ ಪ್ರತಿ ॥ ೯೭ ॥

ವಿಶ್ವಾಮಿತ್ರಸ್ತತಸ್ತತ್ರ ಚಿಂತಯಾಮಾಸ ವೈ ಕ್ಷಣಮ್ ।
ಕೃತದಾರೋ ಮಯಾ ನೇಯೋ ರಾಮಃ ಕಮಲಲೋಚನಃ ॥ ೯೮ ॥

ಇತಿ ಸಂಚಿಂತ್ಯ ತೌ ಗೃಹ್ಯ ವಿಶ್ವಾಮಿತ್ರೋ ಮಹಾತಪಾಃ ।
ಶಿಷ್ಯೈಃ ಪರಿವೃತೋಽನೇಕೈರ್ಜಗಾಮ ಮಿಥಿಲಾಂ ಪ್ರತಿ ॥ ೯೯ ॥

೯೫-೯೬. ತರುವಾಯ ವಿಶ್ವಾಮಿತ್ರಮುನಿಯು ಇಂತು ರಕ್ಕಸರ ಭಯವನ್ನು ಕಳೆದ, ಆ ಯಜ್ಞವನ್ನು ಆಗುಮಾಡಿಸಿದ, ತನ್ನೊಡಗೂಡಿದ ಶ್ರೀರಾಮನಿಗೆ ಅನೇಕ ಕಥೆಗಳನ್ನು ಹೇಳಿ, ಹಿಂದೆ ಮಹೇಂದ್ರನೊಡನೆ ವ್ಯಭಿಚಾರಮಾಡಿದುದರಿಂದ ಗಂಡನಾದ ಗೌತಮಮುನಿಯಿಂದ ' ಶಿಲೆಯಾಗು,' ಎಂದು ಶಾಪಗೊಂಡ ಅಹಲ್ಯೆಯು ಪಾಷಾಣಭೂತಳಾಗಿದ್ದೆಡೆಗೆ ಅವರೀರ್ವರನ್ನೂ ಕರೆದೊಯ್ದನು.

೯೭. ಎಲೈ ರಾಜೇಂದ್ರನೇ ! ಕೇಳು; ಅಂತು ಶಿಲೆಯಾಗಿದ್ದ ಅಹಲ್ಯೆಯು ಆ ಶ್ರೀರಾಮಚಂದ್ರನ ದರ್ಶನದಿಂದ ಶಾಪದಿಂದ ಬಿಡುಗಡೆಯನ್ನುಹೊಂದಿ, ಗೌತಮನ ಸಮೀಪಕ್ಕೆ ತೆರಳಿದಳು.

೯೮-೯೯. ಆ ಬಳಿಕ ಅಲ್ಲಿ ವಿಶ್ವಾಮಿತ್ರಮುನಿಯು ಚಣಕಾಲ ಇಂತು ಯೋಚಿಸಿದನು; ' ನಾನು ತಾವರೆಗಣ್ಣನಾದ ಶ್ರೀರಾಮನಿಗೆ ಮದುವೆಯನ್ನು ಮಾಡಿಸಿಯೇ, ಅಯೋಧ್ಯೆಗೆ ಕರೆದೊಯ್ಯಬೇಕು;' ಎಂದು ಆಲೋಚಿಸಿ, ಮಹಾ ತಪಸ್ವಿಯಾದ ವಿಶ್ವಾಮಿತ್ರನು ರಾಮ ಲಕ್ಷ್ಮಣರನ್ನು ಕರೆದುಕೊಂಡು, ಅನೇಕಶಿಷ್ಯರೊಡಗೂಡಿ, ಮಿಥಿಲಾಪಟ್ಟಣವನ್ನು ಕುರಿತು ಹೋದನು.

ನಾನಾದೇಶಾದಥಾಯಾತಾ ಜನಕಸ್ಯ ನಿವೇಶನಮ್ ।
ರಾಜಪುತ್ರಾ ಮಹಾವೀರ್ಯಾಃ ಪೂರ್ವಂ ಸೀತಾಭಿಕಾಂಕ್ಷಿಣಃ ॥ ೧೦೦ ॥

ತಾನ್ ದೃಷ್ಟ್ವಾ ಪೂಜಯಿತ್ವಾ ತು ಜನಕಸ್ತು ಯಥಾರ್ಹತಃ ।
ಯತ್ಸೀತಾಯಾಃ ಸಮುತ್ಪನ್ನಂ ಧನುರ್ಮಾಹೇಶ್ವರಂ ಮಹತ್ ॥ ೧೦೧ ॥

ಅರ್ಚಿತಂ ಗಂಧಮಾಲಾಭೀ ರಮ್ಯಶೋಭಾಸಮನ್ವಿತೇ ।
ರಂಗೇ ಮಹತಿ ವಿಸ್ತೀರ್ಣೇ ಸ್ಥಾಪಯಾಮಾಸ ತದ್ಧನುಃ ॥ ೧೦೨ ॥

ಉವಾಚ ಚ ನೃಪಾನ್ ಸರ್ವಾಂಸ್ತದೋಚ್ಚೈರ್ಜನಕೋ ನೃಪಃ ।
ಆಕರ್ಷಣಾದಿದಂ ಯೇನ ಧನುರ್ಭಗ್ನಂ ನೃಪಾತ್ಮಜಾಃ ॥ ೧೦೩ ॥

ತಸ್ಯೇಯಂ ಧರ್ಮತೋ ಭಾರ್ಯಾ ಸೀತಾ ಸರ್ವಾಂಗ ಶೋಭನಾ ।
ಇತ್ಯೇವಂ ಶ್ರಾವಿತೇ ತೇನ ಜನಕೇನ ಮಹಾತ್ಮನಾ ॥ ೧೦೪ ॥

---

೧೦೦. ಅನಂತರದಲ್ಲಿ ಮೊದಲೇ ಸೀತೆಯಲ್ಲಿ ಅಪೇಕ್ಷೆಯಿದ್ದ ಕಡುಗಲಿಗಳಾದ ಅರಗುವರರು ಜನಕನ ಅರಮನೆಗೆ ಬಂದರು.

೧೦೧-೧೦೨. ಜನಕರಾಯನು ಆ ರಾಜಕುಮಾರರನ್ನು ಎದಿರ್ಗೊಂಡು, ಅವರವರಿಗೆ ತಕ್ಕಂತೆ ಮರ್ಯಾದೆಮಾಡಿ, ಸೀತಾದೇವಿಯ ಸಲುವಾಗಿಯೆ ಪೂ ವಾಗಿಟ್ಟಿದ್ದ ಯಾವ ಈಶ್ವರನ ಪೆರ್ಬಿಲ್ಲುಂಟೋ, ಅದನ್ನು ಗಂಧಮಾಲ್ಯಾದಿಗಳಿಂದ ಪೂಜಿಸಿ, ಸೊಬಗಿನಿಂದ ಗಾಡಿವೆತ್ತ, ಬಿತ್ತರದ ಹಿರಿಯರಂಗಮಂಟಪದಲ್ಲಿ ಇಡಿಸಿದನು.

೧೦೩-೧೦೪. ಆಗ ಜನಕರಾಯನು ಅಲ್ಲಿ ನೆರದ ರಾಯರನ್ನೆಲ್ಲಾ ಸಂಬೋಧಿಸಿ, ಗಟ್ಟಿಯಾಗಿ ಹೇಳಿದನು :—'ಎಲೈ ನೃಪತನಯರೇ! ಯಾವನು ಈ ಬಿಲ್ಲನ್ನು ಬಗ್ಗಿಸಿ ಹೆದೆಯನ್ನೇರಿಸುವನೋ, ಅವನಿಗೆ ಸರ್ವಾವಯವ ಸುಂದರಿ ಯಾದ ಈ ಸೀತಾದೇವಿಯು ಧರ್ಮದಿಂದ ಮಡದಿಯಾಗುವಳು ;' ಎಂದು ಮಹಾತ್ಮ ನಾದ ಜನಕರಾಯನು ಕೇಳಿಸಿದನು.

ಕ್ರಮಾದಾದಾಯ ತೇ ತತ್ತು ಸಜ್ಜೀಕರ್ತುಮಥಾಭವನ್ ।
ಧನುಷಾ ತಾಡಿತಾಸ್ಸರ್ವೇ ಕ್ರಮಾತ್ತೇನ ಮಹೀಪತೇ ॥ ೧೦೫ ॥

ವಿಧೂಯ ಪತಿತಾ ರಾಜನ್ ವಿಲಜ್ಜಾಸ್ತತ್ರ ಪಾರ್ಥಿವಾಃ ।
ತೇಷು ಭಗ್ನೇಷು ಜನಕಃ ತದ್ಧನುಸ್ತ್ರ್ಯಂಬಕಂ ನೃಪ ॥ ೧೦೬ ॥

ಸಂಸ್ಥಾಪ್ಯ ಸ್ಥಿತವಾನ್ ವೀರೋ ರಾಮಾಗಮನಕಾಂಕ್ಷಯಾ ।
ವಿಶ್ವಾಮಿತ್ರಸ್ತತಃ ಪ್ರಾಪ್ತೋ ಮಿಥಿಲಾಧಿಪತೇರ್ಗೃಹಮ್ ॥ ೧೦೭ ॥

ಜನಕೋಽಪಿ ಚ ತಂ ದೃಷ್ಟ್ವಾ ವಿಶ್ವಾಮಿತ್ರಂ ಗೃಹಾಗತಮ್ ।
ರಾಮಲಕ್ಷ್ಮಣಸಂಯುಕ್ತಂ ಶಿಷ್ಯೈಶ್ಚಾಭಿಗತಂ ತದಾ ॥ ೧೦೮ ॥

ತಂ ಪೂಜಯಿತ್ವಾ ವಿಧಿವತ್ ಪ್ರಾಹ ವಿಪ್ರಾನುಯಾಯಿನಮ್ ।
ರಾಮಂ ರಘುಪತಿಂ ಚಾಪಿ ಲಾವಣ್ಯಾದಿಗುಣೈರ್ಯುತಮ್ ॥ ೧೦೯ ॥

---

೧೦೫. ಎಲೈ ಮಹೀಪತಿಯೇ ! ಕೇಳು ; ಆ ರಾಜಕುಮಾರರು ಕ್ರಮವಾಗಿ ಆ ಧನುವನ್ನು ತೆಗೆದುಕೊಂಡು, ಹೆದೆಯೇರಿಸಲು ತೊಡಗಿ, ಕ್ರಮದಿಂದೆಲ್ಲರೂ ಅದರಿಂದ ಏಟನ್ನು ತಿಂದರು.

೧೦೬–೧೦೭. ಎಲೈ ರಾಯನೇ ! ಅಲ್ಲಿ ರಾಯರೆಲ್ಲಾ ನಾಚಿಕೆಗೆಟ್ಟು ಕೊಡಹಿ, ನೂಕಲ್ಪಟ್ಟು ಬಿದ್ದರು. ಆ ರಾಯಕುವರರು ಅಂತು ಬನ್ನಬಡಲು, ಜನಕರಾಯನು ಆ ಶೈವಧನುವನ್ನು ಇಟ್ಟು, ಶ್ರೀರಾಮನು ಬರುವುದರ ಆಸೆಯಿಂದಿದ್ದನು. ಬಳಿಕ ಮಿಥಿಲಾಧಿಪತಿಯಾದ ಜನಕನ ಮನೆಗೆ ವಿಶ್ವಾಮಿತ್ರನು ಬಂದನು.

೧೦೮-೧೧೧. ಜನಕನೂ, ಶಿಷ್ಯರು ಮತ್ತು ರಾಮ ಲಕ್ಷ್ಮಣರು ಬೆರಸು ಮನೆಗೆ ಬಂದ ಆ ವಿಶ್ವಾಮಿತ್ರಮುನಿಯನ್ನು ನೇಮದಂತೆ ಪೂಜಿಸಿ, ಬ್ರಾಹ್ಮಣರನ್ನು ಹಿಂಬಾಲಿಸಿ ಬಂದ ಲಾವಣ್ಯಾದಿಗುಣಗಳಿಂದ ಕೂಡಿದ, ರಘುಪತಿಯಾದ ಶ್ರೀರಾಮನನ್ನೂ, ಸ್ವಭಾವ, ನಡತೆ, ಗುಣ-ಇವುಗಳಿಂದ ಯುತನಾದ, ಮಹಾಮತಿಯಾದ

ಶೀಲಾಚಾರಗುಣೋಪೇತಂ ಲಕ್ಷ್ಮಣಂ ಚ ಮಹಾಮತಿಮ್ ।
ಪೂಜಯಿತ್ವಾ ಯಥಾನ್ಯಾಯಂ ಜನಕಃ ಪ್ರೀತಮಾನಸಃ ॥ ೧೧೦ ॥

ಹೇಮಪೀಠೇ ಸುಖಾಸೀನಂ ಶಿಷ್ಯೈಃ ಪೂರ್ವಾಪರೈರ್ವೃತಮ್ ।
ವಿಶ್ವಾಮಿತ್ರಮುವಾಚಾಥ ಕಿಂ ಕರ್ತವ್ಯಂ ಮಯೇತಿ ಸಃ ॥ ೧೧೧ ॥

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯ ಮುನಿಃ ಪ್ರಾಹ ಮಹೀಪತಿಮ್ ।
ಏಷ ರಾಮೋ ಮಹಾರಾಜ ವಿಷ್ಣುಃ ಸಾಕ್ಷಾನ್ಮಹೀಪತಿಃ ॥ ೧೧೨ ॥

ರಕ್ಷಾರ್ಥಂ ವಿಷ್ಟಪಾನಾಂ ತು ಜಾತೋ ದಶರಥಾತ್ಮಜಃ ।
ಅಸ್ಮೈ ಸೀತಾಂ ಪ್ರಯಚ್ಛ ತ್ವಂ ದೇವಕನ್ಯಾಮಿವ ಸ್ಥಿತಾಮ್ ॥ ೧೧೩ ॥

ಅಸ್ಯಾ ವಿವಾಹೇ ರಾಜೇಂದ್ರ ಧನುರ್ಭಂಗಮುದೀರಿತಮ್ ।
ತದಾನಯ ಭವಧನುರರ್ಚಯಸ್ವ ಜನಾಧಿಪ ॥ ೧೧೪ ॥

ಲಕ್ಷ್ಮಣನನ್ನೂ ಕ್ರಮವರಿತು ಪೂಜಿಸಿ, (ಸತ್ಕರಿಸಿ) ಸಂತಸಗೊಂಡಮನವುಳ್ಳವನಾಗಿ, ಮುಂದೆಯೂ, ಹಿಂದೆಯೂ ಶಿಷ್ಯರಿಂದ ಪರಿವೃತನಾಗಿ, ಹೊನ್ನಮಣೆಯಲ್ಲಿ ಸೊಗದಿಂದ ಕುಳಿತ ವಿಶ್ವಾಮಿತ್ರಮುನಿಯನ್ನು ಕುರಿತು, 'ನಾನೀಗೇನೆಸಗಬೇಕು,' ಎಂದು ಕೇಳಿದನು.

೧೧೨-೧೧೪. ಮಾರ್ಕಂಡೇಯಮುನಿಯು ಹೇಳುತ್ತಾನೆ ;—ವಿಶ್ವಾಮಿತ್ರ ಮುನಿಯು ಜನಕರಾಜನ ಆ ನುಡಿಯನ್ನು ಕೇಳಿ, ಆ ರಾಯನಿಗಿಂತು ಹೇಳಿದನು ; 'ಎಲೈ ಮಹಾರಾಜನೇ ! ಕೇಳು ; ಈ ರಾಮಚಂದ್ರನು ಸಾಕ್ಷಾದ್ಭೂಪತಿಯಾದ ಶ್ರೀ ಮಹಾವಿಷ್ಣುವು ; ಜಗತ್ತನ್ನು (ಲೋಕವನ್ನು) ಸಂರಕ್ಷಿಸುವುದಕ್ಕಾಗಿ ದಶರಥನ ಮಗನಾಗಿ ಅವತರಿಸಿದನು ; ನೀನು ದೇವಕನ್ನೆಯಂತಿರುವ ಸೀತೆಯನ್ನು ಇವನಿಗೆ ದಾನಮಾಡು. ಎಲೈ ರಾಜೇಂದ್ರನೇ ! ಇವಳ ವಿವಾಹದಲ್ಲಿ ಶೈವಧನುವು ಭಂಗವಾಗುವುದೆಂದು ಅಶರೀರವಾಣಿಯು ನುಡಿಯಿತು. ಎಲೈ ಜನಾಧಿಪನೇ ! ಆ ಶಿವಧನುವನ್ನು ತೆಗೆದುಕೊಂಡು ಬಾ ; ಅದನ್ನು ಪೂಜಿಸು ;' ಎಂದನು.

ತಥೇತ್ಯುಕ್ತ್ವಾ ಚ ರಾಜಾ ಹಿ ಭವಚಾಪಂ ತದದ್ಭುತಮ್ ।
ಅನೇಕಭೂಭುಜಾಂ ಭಜ್ಞಿ ಸ್ಥಾಪಯಾಮಾಸ ಪೂರ್ವವತ್ ॥ ೧೧೫ ॥

ತತೋ ದಶರಥಸುತೋ ವಿಶ್ವಾಮಿತ್ರೇಣ ಚೋದಿತಃ ।
ತೇಷಾಂ ಮಧ್ಯೇ ಸಮುತ್ಥಾಯ ರಾಮಃ ಕಮಲಲೋಚನಃ ॥ ೧೧೬ ॥

ಪ್ರಣಮ್ಯ ವಿಪ್ರಾನ್ ದೇವಾಂಶ್ಚ ಧನುರಾದಾಯ ತತ್ತದಾ ।
ಸಜ್ಜಂ ಕೃತ್ವಾ ಮಹಾಬಾಹುರ್ಜ್ಯಾಘೋಷಮಕರೋತ್ತದಾ ॥ ೧೧೭ ॥

ಆಕೃಷ್ಯಮಾಣಂ ತು ಬಲಾತ್ತೇನ ಭಗ್ನಂ ಮಹದ್ಧನುಃ ।
ಸೀತಾ ಚ ಮಾಲಾಮಾದಾಯ ಶುಭಾಂ ರಾಮಸ್ಯ ಮೂರ್ಧನಿ ॥ ೧೧೮ ॥

ಕ್ಷಿಪ್ತ್ವಾ ಸಂವರಯಾಮಾಸ ಸರ್ವಕ್ಷತ್ರಿಯಸನ್ನಿಧೌ ।
ತತಸ್ತೇ ಕ್ಷತ್ರಿಯಾಃ ಕ್ರುದ್ಧಾಃ ರಾಮಮಾಸಾದ್ಯ ಸರ್ವಶಃ ॥ ೧೧೯ ॥

---

೧೧೫. ಇಂತು ವಿಶ್ವಾಮಿತ್ರನು ಹೇಳಲು, ಆಗ ಜನಕರಾಯನು ಅಂತೆಯೇ ಆಗಲೆಂದು ಹೇಳಿ, ಆ ಅದ್ಭುತವಾದ, ಅನೇಕ ರಾಯರನ್ನು ಬನ್ನವಡಿಸಿದ ಶಿವಧನುವನ್ನು ಮೊದಲಿನಂತೆ ಪಣವಾಗಿ ಇರಿಸಿದನು.

೧೧೬–೧೧೭. ಅನಂತರದಲ್ಲಿ ವಿಶ್ವಾಮಿತ್ರಮುನಿಯಿಂದ ಪ್ರೇರಿತನಾದ, ದಶರಥ ತನಯನಾದ, ತಾವರೆಗಣ್ಣನಾದ ಶ್ರೀರಾಮಚಂದ್ರನು ಅವರ ನಡುವೆ ಎದ್ದು, ಬ್ರಾಹ್ಮಣರಿಗೂ, ದೇವತೆಗಳಿಗೂ ಎರಗಿ, ಆಗ ಬಿಲ್ಲನ್ನು ತೆಗೆದುಕೊಂಡು ಹೆದೆಯೇರಿಸಿ, ಸಿದ್ಧಪಡಿಸಿ, ಆ ಮಹಾಬಾಹುವು ಟಂಕಾರವನ್ನು ಮಾಡಿದನು.

೧೧೮–೧೨೧. ರಾಮನು ಬಲದಿಂದ ಹೆದೆಯನ್ನು ಸೆಳೆಯುತ್ತಿರಲು, ಆ ಪೆರ್ಬಿಲ್ಲುಡಿದುದು. ಸೀತೆಯೂ ಮಂಗಳವಾದ ವರಣ ಮಾಲೆಯನ್ನು ತೆಗೆದುಕೊಂಡು, ಶ್ರೀರಾಮನ ಶಿರದಲ್ಲಿ (ಶಿರದ ಮೂಲಕ ಕಂಠದಲ್ಲಿ) ಹಾಕಿ ಎಲ್ಲಾ ಕ್ಷತ್ರಿಯರ ಎದುರಿನಲ್ಲಿ ವರಣಮಾಡಿದಳು. ಅನಂತರದಲ್ಲಿ ಬಲಶಾಲಿಗಳಾದ ಕ್ಷತ್ರಿಯರು ಕೋಪಗೊಂಡು ಶ್ರೀರಾಮನನ್ನು ಸುತ್ತಲೂ ಮುತ್ತಿ ಅಬ್ಬರಿಸುತ್ತಾ, ಬಾಣಗಳ ಮಳೆಯನ್ನು ಸುರಿಸಿದರು.

ಮುಮುಚುಃ ಶರಜಾಲಾನಿ ಗರ್ಜಯಂತೋ ಮಹಾಬಲಾಃ ।
ತಾನ್ನಿರೀಕ್ಷ್ಯ ತತೋ ರಾಮೋ ಧನುರಾದಾಯ ವೇಗವಾನ್ ॥ ೧೨೦ ॥

ಜ್ಯಾಘೋಷತಲಘೋಷೇಣ ಕಂಪಯಾಮಾಸ ತಾನ್ ನೃಪಾನ್ ।
ಚಿಚ್ಛೇದ ಶರಜಾಲಾನಿ ತೇಷಾಂ ಸ್ವಾಸ್ತ್ರೈರಥಾಂಸ್ತತಃ ॥ ೧೨೧ ॥

ಧನೂಂಷಿ ಚ ಪತಾಕಾಶ್ಚ ರಾಮಶ್ಚಿಚ್ಛೇದ ಲೀಲಯಾ ।
ಸಂನಹ್ಯ ಸ್ವಬಲಂ ಸರ್ವಂ ಮಿಥಿಲಾಧಿಪತಿಸ್ತತಃ ॥ ೧೨೨ ॥

ಜಾಮಾತರಂ ರಣೇ ರಕ್ಷನ್ ಪಾರ್ಷ್ಣಿಗ್ರಾಹೋ ಬಭೂವ ಹ ।
ಲಕ್ಷ್ಮಣಶ್ಚ ಮಹಾವೀರೋ ವಿದ್ರಾವ್ಯ ಯುಧಿ ತಾನ್ನೃಪಾನ್ ॥ ೧೨೩ ॥

ಹಸ್ತ್ಯಶ್ವಾನ್ಜಗೃಹೇ ತೇಷಾಂ ಸ್ಯಂದನಾನಿ ಬಹೂನಿ ಚ ।
ವಾಹನಾನಿ ಪರಿತ್ಯಜ್ಯ ಪಲಾಯನಪರಾನ್ನೃಪಾನ್ ॥ ೧೨೪ ॥

ಬಳಿಕ ಶ್ರೀರಾಮನು ಅವರನ್ನು ನೋಡಿ, ವೇಗವುಳ್ಳವನಾಗಿ ಬಿಲ್ಲನ್ನು ಹಿಡಿದು, ಧನುಷ್ಟಂಕಾರನಾದ ಮತ್ತು ನೆಲದ ಉಗ್ಗಡಣೆ-ಇವುಗಳಿಂದ ಆ ರಾಯರನ್ನು ನಡುಗಿಸಿದನು. ಬಳಿಕ ತನ್ನ ಬಾಣಗಳಿಂದ ಅವರು ಬಿಟ್ಟ ಬಾಣಗಳ ಗುಂಪನ್ನೂ, ಅವರ ತೇರುಗಳನ್ನೂ ಕತ್ತರಿಸಿದನು.

೧೨೨-೧೨೫. ಇಂತು ಶ್ರೀರಾಮನು ಮೇಲೆ ಬಿದ್ದ, ಆ ರಾಯರ ಬಿಲ್ಲುಗಳನ್ನೂ, ಪಳವಿಗೆಗಳನ್ನೂ ಆಟದಿಂದಲೇ (ಶ್ರಮವಿಲ್ಲದೇ) ಕತ್ತರಿಸಿದನು. ಬಳಿಕ ಮಿಥಿಲೆಯ ಒಡೆಯನಾದ ಜನಕನು ತನ್ನ ಸೇನೆಯೆಲ್ಲವನ್ನೂ ಸಿದ್ಧಪಡಿಸಿ, ಅಳಿಯನನ್ನು ಯುದ್ಧದಲ್ಲಿ ರಕ್ಷಿಸುತ್ತಾ, ಹಿಂದೆ ಬಂದವರನ್ನು ಬಡಿಯುತ್ತಾ, ಬೆಂಗಾವಲಾಗಿದ್ದನು.

ಕಡುಗಲಿಯಾದ ಲಕ್ಷ್ಮಣನೂ ಕಳನಲ್ಲಿ ಆ ರಾಯರನ್ನು ಓಡಿಸಿ, ಅವರ ಬಹುವಾದ ಆನೆ, ಕುದುರೆ, ತೇರು-ಇವುಗಳನ್ನು ವಶಪಡಿಸಿಕೊಂಡನು. ಇನ್ನೂ ತಮ್ಮ

ತಾನ್ನಿಹಂತುಂ ಚ ಧಾವತ್ಸಃ ಸ್ಪಷ್ಟತೋ ಲಕ್ಷ್ಮಣಸ್ತದಾ ।
ಮಿಥಿಲಾಧಿಪತಿಸ್ತಂ ಚ ವಾರಯಾಮಾಸ ಕೌಶಿಕಃ ॥ ೧೨೫ ॥

ಜಿತಸೇನಂ ಮಹಾವೀರಂ ರಾಮಂ ಭ್ರಾತ್ರಾ ಸಮನ್ವಿತಮ್ ।
ಆದಾಯ ಪ್ರವಿವೇಶಾಥ ಜನಕಃ ಸ್ವಗೃಹಂ ಶುಭಮ್ ॥ ೧೨೬ ॥

ದೂತಂ ಚ ಪ್ರೇಷಯಾಮಾಸ ತದಾ ದಶರಥಾಯ ಸಃ ।
ಶ್ರುತ್ವಾ ದೂತಮುಖಾತ್ಸರ್ವಂ ವಿದಿತಾರ್ಥಃ ಸ ಪಾರ್ಥಿವಃ ॥ ೧೨೭ ॥

ಸಭಾರ್ಯಃ ಸಸುತಶ್ರೀಮಾನ್ ಹಸ್ತ್ಯಶ್ವರಥವಾಹನಃ ।
ಮಿಥಿಲಾಮಾಜಗಾಮಾಶು ಸ್ವಬಲೇನ ಸಮನ್ವಿತಃ ॥ ೧೨೮ ॥

ಜನಕೋಽಪ್ಯಸ್ಯ ಸತ್ಕಾರಂ ಕೃತ್ವಾ ಸ್ವಾಂ ಚ ಸುತಾಂ ತತಃ ।
ವಿಧಿವತ್ಕೃತಶುಲ್ಕಾಂ ತಾಂ ದದೌ ರಾಮಾಯ ಪಾರ್ಥಿವಃ ॥ ೧೨೯ ॥

ವಾಹನಗಳನ್ನು ಯುದ್ಧರಂಗದಲ್ಲಿಯೇ ಬಿಟ್ಟು, ಓಡಲುಜ್ಜುಗಿಸಿದ ರಾಯರನ್ನು ಕೊಲ್ಲಲು, ಅವನು ಬೆಂಗೊಂಡೋಡಿದನು. ಆಗ ಅವನನ್ನು ಮಿಥಿಲಾಧಿಪತಿಯಾದ ಜನಕರಾಯನೂ, ವಿಶ್ವಾಮಿತ್ರಮುನಿಯೂ ತಡೆಗಟ್ಟಿದರು.

೧೨೬. ಬಳಿಕ ಜನಕನು ಶತ್ರುಸೇನೆಯನ್ನು ಗೆದ್ದ, ತಮ್ಮನೊಡಗೂಡಿದ ಮಹಾವೀರನನ್ನು ಕರೆದುಕೊಂಡು ತನ್ನ ಮಂಗಳದ ಅರಮನೆಯನ್ನು ಹೊಕ್ಕನು.

೧೨೭–೧೨೮. ಬಳಿಕ ಜನಕನು ಸೀತಾಸ್ವಯಂವರವನ್ನು ತಿಳಿಸಲು, ದಶರಥನ ಸಮೀಪಕ್ಕೆ ದೂತರನ್ನು ಕಳುಹಿಸಿದನು. ಆ ದಶರಥರಾಯನು ದೂತ ಮುಖದಿಂದ ಎಲ್ಲವನ್ನೂ ಕೇಳಿ, ವಿಷಯವನ್ನರಿತವನಾಗಿ, ಶ್ರೀಮಂತನು ಮಡದಿಯರು, ಮಕ್ಕಳು, ಆನೆ, ಕುದುರೆ, ರಥವಾಹನಗಳು ಮತ್ತು ಸೇನೆ-ಇವು ಗಳಿಂದೊಡಗೂಡಿ, ಬೇಗನೆ ಮಿಥಿಲೆಗೆ ಬಂದನು.

೧೨೯. ಅನಂತರದಲ್ಲಿ ಜನಕರಾಯನೂ ಈ ಪರಿವಾರದೊಡಗೂಡಿದ ದಶರಥ ರಾಯನಿಗೆ ಸತ್ಕಾರವನ್ನೆಸಗಿ, ಶಾಸ್ತ್ರೋಕ್ತಕ್ರಮದಿಂದ ನೆರವೇರಿದ ಧನುರ್ಭಂಗ ರೂಪವಾದ ಕನ್ಯಾಶುಲ್ಕದಿಂದ ಪಡೆದ, ತನ್ನ ಆ ಮಗಳಾದ ಸೀತಾದೇವಿಯನ್ನು ಶ್ರೀರಾಮನಿಗೆ ದಾನಮಾಡಿದನು.

ಅಪರಾಶ್ಚ ಸುತಾಸ್ತಿಸ್ರೋ ರೂಪವತ್ಯಸ್ತ್ವಲಂಕೃತಾಃ ।
ತ್ರಿಭ್ಯಸ್ತು ಲಕ್ಷ್ಮಣಾದಿಭ್ಯಃ ಸ್ವ ಕನ್ಯಾ ವಿಧಿವದ್ದದೌ ॥ ೧೩೦ ॥

ಏವಂ ಕೃತವಿವಾಹೋಽಸೌ ರಾಮಃ ಕಮಲಲೋಚನಃ ।
ಭ್ರಾತೃಭಿಃ ಮಾತೃಭಿಸ್ಸಾರ್ಧಂ ಪಿತ್ರಾ ಬಲವತಾ ಸಹ ॥ ೧೩೧ ॥

ದಿನಾನಿ ಕತಿಚಿತ್ತತ್ರ ಸ್ಥಿತೋ ವಿವಿಧಭೋಜನೈಃ ।
ತತೋಽಯೋಧ್ಯಾಂ ಪುರೀಂ ಗಂತುಮುತ್ಸುಕಂ ಸಸುತಂ ನೃಪಮ್ ॥ ೧೩೨॥

ದೃಷ್ಟ್ವಾ ದಶರಥಂ ರಾಜಾ ಸೀತಾಯಾಃ ಪ್ರದದೌ ವಸು ।

ರತ್ನಾನಿ ದಿವ್ಯಾನಿ ಬಹೂನಿ ದತ್ವಾ
ರಾಮಸ್ಯ ವಸ್ತ್ರಾಣ್ಯತಿಶೋಭನಾನಿ ।
ಹಸ್ತ್ಯಶ್ವ ದಾಸಾನಪಿ ಕರ್ಮಯೋಗ್ಯಾನ್
ದಾಸೀಜನಾಂಶ್ಚ ಪ್ರವರಾಃ ಸ್ತ್ರಿಯಶ್ಚ ॥ ೧೩೩ ॥

---

೧೩೦. ಅನಂತರದಲ್ಲಿ ಲಕ್ಷ್ಮಣ, ಭರತ, ಶತ್ರುಘ್ನ- ಈ ಮೂವರಿಗೆ ರೂಪವತಿಯರೂ, ಶೃಂಗೆಯ್ದುವರೂ ಆದ ತನ್ನ ಮತ್ತು ತನ್ನ ತಮ್ಮನ ಹೆಣ್ಣುಮಕ್ಕಳು ಮೂವರನ್ನೂ ವಿಧ್ಯನುಸಾರವಾಗಿ ದಾನಮಾಡಿದನು.

೧೩೧. ಇಂತು ಮದುವೆಗೊಂಡ, ತಾವರೆಗಣ್ಣನಾದ ಈ ಶ್ರೀರಾಮಚಂದ್ರನು ತಮ್ಮಂದಿರು, ತಾಯಿಯರು ಮತ್ತು ಸೇನೆ-ಇವುಗಳಿಂದಕೂಡಿದ ತಂದೆ ಇವರೊಡನೆ ಆ ಮಿಥಿಲೆಯಲ್ಲಿ ಜನಕನ ಗೃಹದಲ್ಲಿ ನಾನಾ ತೆರನಾದ ಊಟ--ಉಪಚಾರಗಳಿಂದ ಕೆಲವು ದಿನಗಳಿದ್ದನು.

೧೩೨-೧೩೩. ಅನಂತರದಲ್ಲಿ ಜನಕಮಹಾರಾಜನು ಅಯೋಧ್ಯೆಗೆ ಹೋಗಬೇಕೆಂಗು ಉತ್ಸಾಹಗೊಂಡ, ಮಕ್ಕಳೊಡಗೂಡಿದ ದಶರಥರಾಯನನ್ನು ಕಂಡು, ಸೀತಾದೇವಿಗೆ ಐಶ್ವರ್ಯವನ್ನು ಬಳುವಳಿಗೊಟ್ಟನು. ಇಂತು ಸೀತೆಗೆ ಅಮಾನುಷವಾದ ಅನೇಕ ರತ್ನಗಳನ್ನು ಕೊಟ್ಟು, ಶ್ರೀರಾಮನಿಗೆ ಕಡುಸೊಬಗಿನ ಬಟ್ಟೆಗಳನ್ನೂ, ಕೆಲಸಕ್ಕೆ ಬರುವ ಆನೆ, ಕುದುರೆ, ಆಳುಗಳು, ಇವರನ್ನೂ, ದಾಸೀಜನರನ್ನೂ, ಒಳ್ಳೆಯ ಕುಲದ ಪೆಣ್ಗಳನ್ನೂ, ಬಳುವಳಿಯಾಗಿ ಇತ್ತನು.

ಸೀತಾಂ ಸುಶೀಲಾಂ ಬಹುರತ್ನಭೂಷಿತಾಂ
ರಥಂ ಸಮಾರೋಪ್ಯ ಸುತಾಂ ಸ್ವರೂಪಾಮ್ ।
ವೇದಾದ್ಯಘೋಷೈರ್ಬಹುಮಂಗಲೈಶ್ಚ
ಸಂಪ್ರೇಷಯಾಮಾಸ ಸ ಪಾರ್ಥಿವೋ ಬಲೀ ॥ ೧೩೪ ॥

ಪ್ರೇಷಯಿತ್ವಾ ಸ ತಾಂ ದಿವ್ಯಾಂ ಸಮರ್ಪ್ಯ ದಾಶರಥೇಃ ಸುತಾಮ್ ।
ವಿಶ್ವಾಮಿತ್ರಂ ನಮಸ್ಕೃತ್ಯ ಜನಕಃ ಸ ನಿವೃತ್ತವಾನ್ ॥ ೧೩೫ ॥

ತಸ್ಯ ಪತ್ನ್ಯೋ ಮಹಾಭಾಗ ಶಿಕ್ಷಯಿತ್ವಾ ಸುತಾಂ ತದಾ ।
ಭರ್ತೃಭಕ್ತಿಂ ಕುರು ಶುಭೇ ಶ್ವಶ್ರೂಣಾಂ ಶ್ವಶುರಸ್ಯ ಚ ॥ ೧೩೬ ॥

ಶ್ವಶ್ರೂಣಾಮರ್ಪಯಿತ್ವಾ ತಾಂ ನಿವೃತ್ತಾ ವಿವಿಶುಃ ಪುರಮ್ ।
ತತಸ್ತು ರಾಮಂ ಗಚ್ಛಂತಮಯೋಧ್ಯಾಂ ಪ್ರಬಲಾನ್ವಿತಮ್ ॥ ೧೩೭ ॥

---

೧೩೪. ಕಲಿಯಾದ ಆ ಜನಕರಾಯನು ಸುಶೀಲೆಯೂ, ಬಹುರತ್ನಭೂಷಿತೆಯೂ, ಕಡುಚಲುವೆಯೂ ಆದ ಮಗಳಾದ ಸೀತೆಯನ್ನು ತೇರಿನಲ್ಲಿ ಕೂಡಿಸಿ, ಬಹುಮಂಗಲವಾದ ವೇದಾದಿಘೋಷಗಳನ್ನೂ ಮೊಳಗಿಸಿ ಬೀಳ್ಕೊಟ್ಟನು.

೧೩೫. ಆ ಜನಕರಾಯನು ಅಯೋನಿಜೆಯೂ, ಅಮಾನುಷಳೂ ಆದ ಆ ಮಗಳನ್ನು ದಶರಥಕುವರನಾದ ಶ್ರೀರಾಮನಿಗೆ ಸಮರ್ಪಿಸಿ, ಬೀಳ್ಕೊಟ್ಟು, ವಿಶ್ವಾಮಿತ್ರಮುನಿಗೆ ನಮಸ್ಕರಿಸಿ, ಹಿಂತಿರುಗಿದನು.

೧೩೬-೧೩೭. ಅವನ ಪುಣ್ಯಶಾಲಿನಿಯರಾದ ಮಡದಿಯರು ಮಗಳಿಗೆ 'ಗಂಡನಲ್ಲಿಯೂ, ಅತ್ತೆಯವರಲ್ಲಿಯೂ, ಮಾವನವರಲ್ಲಿಯೂ ಭಕ್ತಿಯನ್ನು ಮಾಡು;' ಎಂದು ಬುದ್ಧಿಗಲಿಸಿ, ಕೌಸಲ್ಯಾದಿ ಅತ್ತೆಯವರಿಗೆ ಒಪ್ಪಿಸಿ, ಹಿಂತಿರುಗಿ ಪಟ್ಟಣವನ್ನು ಒಳಹೊಕ್ಕರು.

ಶ್ರುತ್ವಾ ಪರಶುರಾಮೋ ವೈ ಪಂಥಾನಂ ಸ ರುರೋಧ ವೈ ॥ ೧೩೮ ॥

ತಂ ದೃಷ್ಟ್ವಾ ರಾಜಪುರುಷಾಃ ಸರ್ವೇ ತೇ ದೀನಮಾನಸಾಃ ।
ಆಸೀದ್ದಶರಥಶ್ಚಾಪಿ ದುಃಖಶೋಕಪರಿಪ್ಲುತಃ ॥ ೧೩೯ ॥

ಸ ಭಾರ್ಯಾಃ ಸಪರೀವಾರೋ ಭಾರ್ಗವಸ್ಯ ಭಯಾನ್ನೃಪ ।
ತತೋಽಬ್ರವೀಜ್ಜನಾನ್ ಸರ್ವಾನ್ ರಾಜಾನಂ ಚ ಸುದುಃಖಿತಮ್ ॥ ೧೪೦ ॥

ವಸಿಷ್ಠಶ್ಚೋರ್ಜಿತತಪಾಃ ಬ್ರಹ್ಮಚಾರೀ ಮಹಾಮುನಿಃ ।

॥ ವಸಿಷ್ಠ ಉವಾಚ ॥

ಯುಷ್ಮಾಭಿರತ್ರ ರಾಮಾರ್ಥೇ ನ ಕಾರ್ಯಂ ದುಃಖಮಣ್ವಪಿ ॥ ೧೪೧ ॥

ಅನಂತರದಲ್ಲಿ ದೊಡ್ಡಸೇನೆಯೊಡಗೂಡಿ ಅಯೋಧ್ಯೆಗೆ ಶ್ರೀ ರಾಮನು ಹೋಗುತ್ತಲಿರುವುದನ್ನು ಜಮದಗ್ನಿ ಪುತ್ರನಾದ, ಸಾಕ್ಷಾದ್ಭಗವದವತಾರನಾದ ಪರಶುರಾಮನು ಕೇಳಿ, ಬಂದು, ಹಾದಿಯನ್ನಡ್ಡಕಟ್ಟಿದನು.

೧೩೯. ಆ ರಾಜಭಟರೆಲ್ಲರೂ ಅವನನ್ನು ಕಂಡು, ಬೆದರಿದ ಮನವುಳ್ಳವರಾದರು; ದಶರಥರಾಯನೂ ದುಃಖಶೋಕಗಳಿಂದ ವ್ಯಾಪ್ತನಾದವನಾದನು.

೧೪೦.-೧೪೧. ಎಲೈ ಸಹಸ್ರಾನೀಕನೇ! ಕೇಳು; ತಪದಿಂದ ಏಳ್ಗೆಪಡೆದ, ವೇದಾಧ್ಯಯನ ಸಂಪನ್ನನಾದ, ಮಹಾಜ್ಞಾನಿಯಾದ ವಸಿಷ್ಠಮುನಿಯು, ಭಾರ್ಗವನ ಭಯದಿಂದ ಹೆಂಡಿರ ಮತ್ತು ಪರಿವಾರದವರೊಡಗೂಡಿದವನಾಗಿ, ಅತ್ಯಂತ ದುಃಖಗೊಂಡ, ಎಲ್ಲ ಜನರನ್ನೂ ರಾಯನನ್ನೂ ಕುರಿತು ಇಂತು ಹೇಳಿದನು:—

ವಸಿಷ್ಠಮುನಿಯು ಹೇಳುತ್ತಾನೆ:– 'ಎಲೈ ರಾಯನೆ! ಜನರೇ! ಇಲ್ಲಿ ನೀವು ಶ್ರೀ ರಾಮನ ವಿಷಯದಲ್ಲಿ ಸ್ವಲ್ಪವೂ ಹೆದರಿ ದುಃಖ ಪಡಬೇಕಾದುದಿಲ್ಲ.

ಪಿತ್ರಾ ವಾ ಮಾತೃಭಿರ್ವಾಽಪಿ ಅನ್ಯೈರ್ಭೃತ್ಯಜನೈರಪಿ ।
ಅಯಂ ಹಿ ನೃಪತೇ ರಾಮಃ ಸಾಕ್ಷಾದ್ವಿಷ್ಣುಸ್ತು ತೇ ಗೃಹೇ ॥ ೧೪೨ ॥

ಜಗತಃ ಪಾಲನಾರ್ಥಾಯ ಜನ್ಮ ಪ್ರಾಪ್ತೋ ನ ಸಂಶಯಃ ।
ಯಸ್ಯ ಸಂಕೀರ್ತನಮಪಿ ಭವಭೀತಿಃ ಪ್ರಣಶ್ಯತಿ ॥ ೧೪೩ ॥

ಸ್ವಯಂ ಮೂರ್ತಂ ಬ್ರಹ್ಮ ನೃಪ ಭಯಾದೇಸ್ತತ್ರ ಕಾ ಕಥಾ ।
ಯತ್ರ ಸಂಕೀರ್ತ್ಯತೇ ರಾಮಕಥಾಮಾತ್ರಮಪಿ ಪ್ರಭೋ ॥ ೧೪೪ ॥

ನೋಪಸರ್ಗಭಯಂ ತತ್ರ ನಾಕಾಲಮರಣಂ ನೃಣಾಮ್ ।
ಇತ್ಯುಕ್ತೇ ಭಾರ್ಗವೋ ರಾಮೋ ರಾಮಮಾಹಾಗ್ರತಃ ಸ್ಥಿತಮ್ ॥ ೧೪೫ ॥

ತ್ಯಜ ತ್ವಂ ರಾಮಸಂಜ್ಞಾಂ ತು ಮಯಾ ವಾ ಸಂಗರಂ ಕುರು ।
ಇತ್ಯುಕ್ತೇ ರಾಘವಃ ಪ್ರಾಹ ಭಾರ್ಗವಂ ತಂ ಪಥಿ ಸ್ಥಿತಮ್ ॥ ೧೪೬ ॥

೧೪೨-೧೪೩. ಎಲೈ ಜನರೊಡೆಯನೆ! ಈ ರಾಮನು ಸಾಕ್ಷಾದ್ವಿಷ್ಣುವು! ನಿನ್ನ ಮನೆಯಲ್ಲಿ ಲೋಕವನ್ನು ರಕ್ಷಿಸುವಸಲುವಾಗಿ ಅವತಾರವನ್ನು ಅಭಿವ್ಯಕ್ತ ಮಾಡಿರುವನು. ಈ ವಿಷಯದಲ್ಲಿ ಸಂಶಯವಿಲ್ಲವು; ಯಾವ ಶ್ರೀ ರಾ ಮ ನ ನಾಮೋಚ್ಚಾರಣೆಯೂ ಸಂಸಾರದಿಂದ ಭಯವೇ ಇಲ್ಲದಂತೆ ಮಾಡುವುದು.

೧೪೪-೧೪೫. ಎಲೈ ನೃಪನೇ! ಶ್ರೀರಾಮನು ಅವತಾರವೆತ್ತ ಪರಬ್ರಹ್ಮನು. ಪರಬ್ರಹ್ಮನಲ್ಲಿ ಭಯವೇ ಮೊದಲಾದುವುಗಳ ಕಥೆಯೆಲ್ಲಿಯದು? ಎಲೈ ಪ್ರಭುವೇ; ಎಲ್ಲಿ ಶ್ರೀರಾಮನ ಕಥೆಯು ಮಾತ್ರವಾದರೂ ಹೇಳಲ್ಪಡುತ್ತದೆಯೋ; ಆ ಯೆಡೆಯಲ್ಲಿ ದುರ್ಭಿಕ್ಷದ ಹೆಗರಿಕೆಯಾಗಲೀ, ಅಕಾಲಮರಣವಾಗಲೀ, ಮಾನವರಿಗೆ ಇಲ್ಲವು;' ಎಂದು ವಸಿಷ್ಠರು ಹೇಳಲು, ಭಾರ್ಗರಾಮನು ಎದುರಿನಲ್ಲಿ ನಿಂತು ಶ್ರೀರಾಮನಿಗೆ ಇಂತು ಹೇಳಿದನು.

೧೪೬. 'ಎಲೈ! ನೀನು ರಾಮನೆಂಬ ಹೆಸರನ್ನು ಬಿಡು; ಅಥವಾ ನನ್ನೊಡನೆ ಯುದ್ಧವನ್ನು ಮಾಡು;' ಎಂದು ಭಾರ್ಗವರಾಮನು ಹೇಳಲು, ರಾಘವನು ದಾರಿಯಲ್ಲಿ ಅಡ್ಡಗಟ್ಟಿದ ಭಾರ್ಗವನಿಗೆ ಇಂತು ಹೇಳಿದನು.

ರಾಮಸಂಜ್ಞಾಂ ಕುತಸ್ತ್ಯಕ್ಷ್ಯೇ ತ್ವಯಾ ಯೋತ್ಸ್ಯೇ ಸ್ಥಿರೋ ಭವ ।
ಇತ್ಯುಕ್ತ್ವಾ ತಂ ಪೃಥಕ್ ಸ್ಥಿತ್ವಾ ರಾಮೋ ರಾಜೀವಲೋಚನಃ ॥ ೧೪೭ ॥

ಜ್ಯಾಘೋಷಮಕರೋದ್ವೀರೋ ವೀರಸ್ಯೈವಾಗ್ರತಸ್ತದಾ ।
ತತಃ ಪರಶುರಾಮಸ್ಯ ದೇಹಾನ್ನಿಷ್ಕ್ರಮ್ಯ ವೈಷ್ಣವಮ್ ॥ ೧೪೮ ॥

ಪಶ್ಯತಾಂ ಸರ್ವಭೂತಾನಾಂ ತೇಜೋ ರಾಮಮುಖೇಽವಿಶತ್ ।
ದೃಷ್ಟ್ವಾ ತಂ ಭಾರ್ಗವೋ ರಾಮಃ ಪ್ರಸನ್ನವದನೋಽಬ್ರವೀತ್ ॥ ೧೪೯ ॥

ರಾಮ ರಾಮ ಮಹಾಬಾಹೋ ರಾಮಸ್ತ್ವಂ ನಾತ್ರ ಸಂಶಯಃ ।
ವಿಷ್ಣುರೇವ ಭವಾನ್ ಜಾತೋ ಜ್ಞಾತೋಽಸ್ಯದ್ಯ ಮಯಾ ವಿಭೋ ॥ ೧೫೦ ॥

೧೪೭-೧೪೯. 'ಎಲೈ ಭಾರ್ಗವನೇ! ರಾಮನೆಂಬ ಹೆಸರನ್ನೇಕೆ ಬಿಡುವೆನು? ನಿನ್ನೊಡನೆ ಯುದ್ಧಮಾಡುವೆನು. (ಸ್ಥಿರನಾಗಿ) ಬಲವಾಗಿ ನಿಲ್ಲು;' ಎಂದು ಅವನಿಗೆ ಹೇಳಿ, ಕಲಿಯೂ, ತಾವರೆಗಣ್ಣನೂ ಆದ ರಘುರಾಮನು ಗುಂಪಿನಿಂದ ಬೇರೆಯಾಗಿ ನಿಂತು, ಆಗ ಕಡುಗಲಿಯಾದ ಭಾರ್ಗವನೆದುರಿನಲ್ಲಿ ಧನುಷ್ಟಂಕಾರಮಾಡಿದನು. ಅನಂತರದಲ್ಲಿ ಪರಶುರಾಮನ ಒಡಲಿನಿಂದ ವೈಷ್ಣವತೇಜವು ಎಲ್ಲಾ ಚೇತನರೂ ನೋಡುತ್ತಿರುವಾಗಲೇ ರಘುರಾಮನ ಮುಖದಲ್ಲಿ ಹೊಕ್ಕಿತು. ಆಗ ಭಾರ್ಗವ ರಾಮನು ಶ್ರೀರಘುರಾಮನನ್ನು ನೋಡಿ, ಪ್ರಸನ್ನವದನನಾಗಿ ಇಂತೆಂದನು.

೧೫೦. 'ಎಲೈ ರಾಮ! ರಾಮ! ಮಹಾಬಾಹುವೇ! ನೀನು ರಾಮನು. (ಯೋಗಿಗಳು ಧ್ಯಾನಿಸಿ ನಿನ್ನಲ್ಲಿ ವಿಹರಿಸುವರು.) ಈ ವಿಷಯದಲ್ಲಿ ಸಂಶಯವಿಲ್ಲವು; ವಿಷ್ಣುವೇ ನಿನ್ನ ರೂಪದಿಂದ ಅವತಾರ ಮಾಡಿದ್ದಾನೆ. ಎಲೈ ವಿಭುವೇ! ಈಗ ನೀನಾರೆಂದು ತಿಳಿದೆನು. (ಅಜ್ಞರಿಗೆ ಮೋಹಗೊಳಿಸಲು, ಭಾರ್ಗವನು ಇಂತು ಹೇಳಿರುವನು. ಸರ್ವಜ್ಞನಾದ ಭಾರ್ಗವರಾಮನೂ, ಶ್ರೀರಘುರಾಮನೂ ಅಭಿನ್ನರು; ಪೂರ್ಣರು; ಶ್ರೀಮಹಾವಿಷ್ಣುವಿನ ಸ್ವರೂಪಾಂಶಾವತಾರಿಗಳಾಗಿರುವರು.)

ಗಚ್ಛ ವೀರ ಯಥಾಕಾಮಂ ದೇವಕಾರ್ಯಂ ಚ ವೈ ಕುರು ।
ದುಷ್ಟಾನಾಂ ನಿಧನಂ ಕೃತ್ವಾ ಶಿಷ್ಟಾಂಶ್ಚ ಪರಿಪಾಲಯ ॥ ೧೫೧ ॥

ಯಾಹಿ ತ್ವಂ ಸ್ವೇಚ್ಛಯಾ ರಾಮ ಅಹಂ ಯಾಸ್ಯೇ ತಪೋವನಂ ।
ಇತ್ಯುಕ್ತ್ವಾ ಪೂಜಿತಸ್ತೈಸ್ತು ಮುನಿಭಾವೇನ ಭಾರ್ಗವಃ ॥ ೧೫೨ ॥

ಮಹೇಂದ್ರಾದ್ರಿಂ ಜಗಾಮಾಥ ತಪಸೇ ಧೃತಮಾನಸಃ ।
ತತಸ್ತು ಜಾತಹರ್ಷಾಸ್ತೇ ಜನಾ ದಶರಥಶ್ಚ ಹ ॥ ೧೫೩ ॥

ಪುರೀಮಯೋಧ್ಯಾಂ ಸಂಪ್ರಾಪ್ಯ ರಾಮೇಣ ಸಹ ಪಾರ್ಥಿವಃ ।
ದಿವ್ಯಶೋಭಾಂ ಪುರೀಂ ಕೃತ್ವಾ ಸರ್ವತೋ ಭದ್ರಶಾಲಿನೀಮ್ ॥ ೧೫೪ ॥

ಪ್ರತ್ಯುತ್ಥಾಯ ತತಃ ಪೌರಾಃ ಶಂಖತೂರ್ಯಾದಿಭಿಸ್ಸ್ವನೈಃ ।
ವಿಶಂತಂ ರಾಮಮಾಗತ್ಯ ಕೃತದಾರಂ ರಣೇ ಜಿತಮ್ ॥ ೧೫೫ ॥

---

೧೫೧. ಎಲೈ ಕಲಿಯೇ! ನಿನ್ನ ಇಷ್ಟದಂತೆ ಹೋಗು; ದೇವತೆಗಳ ಕೆಲಸವನ್ನು ಸಾಧಿಸು; ದುಷ್ಟಸಂಹಾರವನ್ನೆಸಗಿ ಶಿಷ್ಟರನ್ನು ಪರಿಪಾಲಿಸು.

೧೫೨. ಎಲೈ ರಾಮನೇ! ನೀನು ಮನಬಂದಂತೆ ಹೋಗು; ನಾನು ತಪೋವನಕ್ಕೆ ಹೋಗುತ್ತೇನೆ;' ಎಂದು ಭಾರ್ಗವನು ಹೇಳಲು, ಅವರೆಲ್ಲರೂ ಪರಶುರಾಮನನ್ನು ಜ್ಞಾನಿಯಾದ ಮುನಿಯೆಂಬ ಭಾವದಿಂದ ಪೂಜಿಸಿದರು.

೧೫೩. ಬಳಿಕ ಭಾರ್ಗವನು ತಪವನ್ನೆಸಗಲು ಮನವೆಸಗಿ ಮಹೇಂದ್ರ ಪರ್ವತಕ್ಕೆ ಹೊರಟುಹೋದನು. ತರುವಾಯ ಆ ಜನರೂ, ದಶರಥರಾಯನೂ ಸಂತಸಗೊಂಡರು.

೧೫೪-೧೫೫. ದಶರಥರಾಜನು ಶ್ರೀರಾಮನೊಡನೆ ಅಯೋಧ್ಯಾಪಟ್ಟಣಕ್ಕೆ ಬಂದನು. ಬಳಿಕ ಪಟ್ಟಣಿಗರು ಕಡುಹಾಳದ ಪೊಳಲನ್ನು ಎಲ್ಲೆಡೆಯಲ್ಲಿಯೂ ಮಂಗಳತೋರಣಗಳಿಂದ ಮನೋಹರವನ್ನಾಗಿ ಮಾಡಿಸಿ, ಶಂಖತೂರ್ಯ ಮೊದಲಾದ ವಾದ್ಯಗಳನ್ನು ಮೊಳಗಿಸಿ, ಎದುರುಗೊಂಡು, ವಿವಾಹವನ್ನು ಮಾಡಿಕೊಂಡು, ಯುದ್ಧದಲ್ಲಿ ಹಗೆಗಳನ್ನು ಜಯಿಸಿ ಬಂದು, ಪೊಳಲನ್ನು ಹುಗುತ್ತಲಿರುವ ಶ್ರೀರಾಮ

ತಂ ವೀಕ್ಷ್ಯ ಹರ್ಷಿತಾಸ್ಸಂತೋ ವಿವಿಶುಸ್ತೇನ ವೈ ಪುರೀಮ್ ।
ತೌ ಸಮರ್ಪ್ಯ ಮುನಿಶ್ರೇಷ್ಠಸ್ತೇನ ರಾಜ್ಞಾ ಚ ಪೂಜಿತಃ ॥ ೧೫೬ ॥

ದಶರಥಾಯ ತತ್ಪಿತ್ರೇ ಮಾತೃಭ್ಯಶ್ಚ ವಿಶೇಷತಃ ।
ತೌ ಸಮರ್ಪ್ಯ ಮುನಿಶ್ರೇಷ್ಠಸ್ತೇನ ರಾಜ್ಞಾ ಚ ಪೂಜಿತಃ ॥ ೧೫೭ ॥

ವಿಶ್ವಾಮಿತ್ರಶ್ಚ ಸಹಸಾ ಪ್ರತಿಗಂತುಂಮನೋದಧೇ ॥ ೧೫೮ ॥

ಸಮರ್ಪ್ಯ ರಾಮಂ ಸ ಮುನಿಃ ಸಹಾನುಜಂ
ಸಭಾರ್ಯಮಗ್ರೇ ಪಿತುರೇಕವಲ್ಲಭಮ್ ।

ನನ್ನು ನೋಡಿ, ಸಂತಸಗೊಂಡವರಾಗಿ, ಅವನೊಡನೆ ತಾವೂ ಪುರವನ್ನು ಪ್ರವೇಶಿಸಿದರು. ಆ ವಿಶ್ವಾಮಿತ್ರಮುನಿಯು ತನ್ನ ಸಮೀಪಕ್ಕೆ ಬಂದ ಶ್ರೀರಾಮ ಮತ್ತು ಲಕ್ಷ್ಮಣ ಅವರೀರ್ವರನ್ನೂ ಕಂಡು, ಅವರ ತಂದೆಯಾದ ದಶರಥರಾಯನಿಗೂ, ವಿಶೇಷವಾಗಿ ಅವರ ತಾಯಂದಿರಿಗೂ (ಅವರೀರ್ವರನ್ನೂ) ಒಪ್ಪಿಸಿದನು. ಆ ದಶರಥರಾಯನು ಆ ಶ್ರೇಷ್ಠನಾದ ವಿಶ್ವಾಮಿತ್ರಮುನಿಯನ್ನೂ ವಿ ಧ್ಯು ಕ್ತ ಕ್ರ ಮ ದಿಂ ದ ಪೂಜಿಸಿದನು.

ಕೂಡಲೆ ವಿಶ್ವಾಮಿತ್ರಮುನಿಯೂ ತನ್ನ ಆಶ್ರಮಕ್ಕೆ ಹಿಂದಿರುಗಬೇಕೆಂದು ಮನಸ್ಸು ಮಾಡಿದನು. ಇಂತು ಆ ವಿಶ್ವಾಮಿತ್ರಮುನಿಯು ಮಡದಿ ತಮ್ಮಂದಿರಿಂದ ಕೂಡಿದ, ತಂದೆಗೆ ಮುಖ್ಯಪ್ರಿಯನಾದ ಶ್ರೀರಾಮನನ್ನು ಎಲ್ಲರೆದುರಿನಲ್ಲಿ ಒಪ್ಪಿಸಿ, ಅಡಿಗಡಿಗೆ 'ಒಪ್ಪಿಸಿರುವೆನು, ಒಪ್ಪಿಸಿರುವೆನು;' ಎಂದು ಕೇಳಿಸಿ ನಗುತ್ತಾ, ಆ ಮಹಾಜ್ಞಾನಿಯಾದ ವಿಶ್ವಾಮಿತ್ರಮುನಿಯು ತನ್ನ ಶ್ರೇಷ್ಠವಾದ ಸಿದ್ಧಾಶ್ರಮಕ್ಕೆ

ಪುನಃ ಪುನಃ ಶ್ರಾವ್ಯ ಹಸನ್ಮಹಾಮತಿ
ರ್ಜಗಾಮ ಸಿದ್ಧಾಶ್ರಮಮಗ್ರ್ಯಮಾತ್ಮನಃ ॥ ೧೫೯ ॥

ಇತಿ ಶ್ರೀ ನರಸಿಂಹಪುರಾಣೇ ಶ್ರೀರಾಮಚರಿತೇ ಶ್ರೀ ಬಾಲಕಾಣ್ಡ
ಕಥಾ ನಿರೂಪಣಂ ನಾಮ ಸಪ್ತಚತ್ವಾರಿಂಶೋಽಧ್ಯಾಯಃ
ಇತಿ ಶ್ರೀ ರಾಮಚರಿತೇ ಬಾಲಕಾಣ್ಡಮ್.

ಹಿಂದಿರುಗಿಹೋದನು;' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀರಾಮಚರಿತ್ರೆಯಲ್ಲಿ ಬಾಲಕಾಣ್ಡ
ಕಥಾ ನಿರೂಪಣವೆಂಬ ನಲವತ್ತೇಳನೆಯ ಅಧ್ಯಾಯವು ಮುಗಿದುದು.

ಇಂತು ಶ್ರೀರಾಮಚರಿತ್ರೆಯಲ್ಲಿ ಬಾಲಕಾಂಡವು.

ನಲವತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಶ್ರೀರಾಮಾವತಾರಕಥೆಯನ್ನು ನಿರೂಪಿಸುವುದಾಗಿ ಹೇಳಿ, 'ಪೂರ್ವದಲ್ಲಿ ಬ್ರಹ್ಮನ ಮಾನಸಪುತ್ರನಾದ ಪುಲಸ್ತ್ಯಮುನಿಗೆ ವಿಶ್ರವಸನೆಂಬ ರಕ್ಕಸನು ಮಗನಾದನು. ಆ ವಿಶ್ರವಸ್ಸಿನ ಮಗನೇ ಲೋಕಕಂಟಕನಾದ ರಾವಣನು. ಅವನು ಬಹು ಕಠಿನ ವಾದ ತಪವನ್ನೆಸಗಿ, ವರದರ್ಪಿತನಾಗಿ, ತ್ರೈಲೋಕ್ಯವನ್ನೂ ಗೆದ್ದು, ಕುಬೇರನಿಂದ ಲಂಕಾಪಟ್ಟಣವನ್ನು ಕಿತ್ತುಕೊಂಡು, ಅಲ್ಲಿ ಸಕಲ ರಕ್ಕಸರೊಡೆಯನಾಗಿ ಪ್ರಭುತ್ವ ವನ್ನು ಮಾಡುತ್ತಿದ್ದನು.

ಸಕಲ ದೇವತೆಗಳನ್ನೂ ತನ್ನ ಊಳಿಗಕ್ಕೆ ನಿಯಮಿಸಿಕೊಳ್ಳುತ್ತಿದ್ದುದಲ್ಲದೆ, ಉತ್ತಮರಾದ ದೇವತಾಸ್ತ್ರೀಯರನ್ನೂ, ನಿರ್ಬಂಧದಿಂದ ತನ್ನ ಉಪಭೋಗಕ್ಕಾಗಿ ಸೆರೆಗೆಯ್ದನು.

ಅವನ ಉಪಟಳವನ್ನು ತಡೆಯಲಾರದೆ, ಚತುರ್ಮುಖನು ಸಕಲ ದೇವತೆ ಗಳೊಡಗೂಡಿ, ಪಾಲ್ಗಡಲ ದಡಕ್ಕೆ ಹೋಗಿ ಕ್ಷೀರಸಾಗರಶಾಯಿಯಾದ ಶ್ರೀಮನ್ನಾರಾಯಣನನ್ನು ಸ್ತುತಿಸಿದನು. ಭಗವಂತನು ಪಿತಾಮಹನ ಸ್ತುತಿಗೆ ಮೆಚ್ಚಿ, ತಾನು ಸರ್ವಜ್ಞನಾದರೂ, ವಿಡಂಬನೆಯಿಂದ ಅವನಿಂದ ರಾವಣನು ಜಗತ್ತಿಗೆ ಕೊಡುತ್ತಿರುವ ಬಾಧೆಯನ್ನು ಅರಿತು, ಅಭಯವನ್ನಿತ್ತನು. ತಾನು ಭೂಲೋಕದಲ್ಲಿ ಸೂರ್ಯಕುಲದ ಅರಸಾದ ದಶರಥನ ಮಡದಿಯಲ್ಲಿ ನಾಲ್ಕುರೂಪ ದಿಂದ ಅವತರಿಸಿ, ಆ ದುಷ್ಟರನ್ನು ಸಂಹರಿಸುವುದಾಗಿ ಹೇಳಿ, ದೇವತೆಗಳೂ ವಾನ ರಾದಿ ರೂಪದಿಂದ ಅವತರಿಸಲಿ;' ಎಂದು ಆಣತಿಯಿತ್ತನು. ತರುವಾಯ ಅವ ನಾಣತಿಯಂತೆ ದೇವತೆಗಳು ವಾನರರಾಗಿ ತಮ್ಮ ಅಂಶದಿಂದ ಅವತರಿಸಿದರು.

ಇತ್ತ ಭೂಮಿಯಲ್ಲಿ ಅನೇಕ ಸಂವತ್ಸರಗಳಿಂದ ಸಂತಾನವಿಲ್ಲದೆ ಚಿಂತಿಸುತ್ತ ಲಿದ್ದ ದಶರಥರಾಯನು ತನ್ನ ಗುರುಗಳ ಅಪ್ಪಣೆಯಂತೆ, ಪುತ್ರಕಾಮೇಷ್ಟಿಯಾಗ ವನ್ನು ಪೇಳಲು, ಪ್ರಾಜಾಪತ್ಯದೇವತೆಯು ಭಗವದಾಜ್ಞಾಪ್ರಕಾರ ಪಾಯಸವನ್ನು

ತಂದುಕೊಡಲು, ಅದನ್ನು ಮುನಿಗಳು ತೆಗೆದುಕೊಂಡು, ಆ ಮಂತ್ರಪೂತವಾದ ಪಾಯಸವನ್ನುಎರಡುಂಡೆಗಳಾಗಿ ಮಾಡಿ, ಕೌಸಲ್ಯಾ ಕೈಕೆಯರಿಗೆ ಕೊಡಲು, ಅವರೂ ತಮಗೆ ಕೊಟ್ಟ ಉಂಡೆಯ ಸ್ವಲ್ಪ ಸ್ವಲ್ಪ ಭಾಗವನ್ನು ಸುಮಿತ್ರಾದೇವಿಗೆ ಕೊಟ್ಟರು ಅನಂತರ ಮೂವರು ಮಡದಿಯರೂ ಗರ್ಭಿಣಿಯರಾಗಿ ನವಮಾಸವಾಗಲು ಮಕ್ಕಳನ್ನು ಹೆತ್ತರು. ಅವರಲ್ಲಿ ಕೌಸಲ್ಯಾದೇವಿಯಲ್ಲಿ ಶ್ರೀಮಹಾವಿಷ್ಣುವೂ, ತನ್ನ ಪೂರ್ಣವಾದ ಸ್ವರೂಪಾಂಶದಿಂದ ಶ್ರೀರಾಮನಾಗಿ ಅವತರಿಸಿದನು. ಶ್ರೀಸಂಕರ್ಷಣಾ ವಿಷ್ಟನಾದ ಶೇಷನು ಸುಮಿತ್ರೆಯಲ್ಲಿ ಲಕ್ಷ್ಮಣನಾಗಿಯೂ, ಪ್ರದ್ಯುಮ್ನಾವಿಷ್ಟನಾದ, ವರದಿಂದ ಶಂಖತನುವಾದ, ಕಾಮಪುತ್ರನಾದ ಅನಿರುದ್ಧನು ಶತ್ರುಘ್ನನಾಗಿಯೂ, ಕೈಕೇಯಿಯಲ್ಲಿ ಅನಿರುದ್ಧಾವಿಷ್ಟನಾದ ವರದಿಂದ ಚಕ್ರರೂಪನಾದ ಕಾಮನು ಭರತ ನಾಗಿಯೂ ಆವಿರ್ಭವಿಸಿದರು.

ಕಾಲಕ್ರಮದಲ್ಲಿ ಈ ಮಕ್ಕಳು ಬಳಿಪು ಅಸ್ತ್ರ ಶಸ್ತ್ರಾದಿವಿದ್ಯೆಗಳಲ್ಲಿಯೂ, ವೇದಾದಿವಿದ್ಯೆಗಳಲ್ಲಿಯೂ ಶಿಕ್ಷಿತರಾಗಲು, ವಿಶ್ವಾಮಿತ್ರಮುನಿಯು ತಾನು ಕೈಕೊಂಡ ಜನ್ನಕ್ಕೆ ರಾವಣ ಪ್ರೇರಿತರಾದ ರಕ್ಕಸರು ಬನ್ನಪಡಿಸುತ್ತಿರಲು, ಈ ಮಕ್ಕ ರಕ್ಕಸರ ವಧೆಗೆ ಶ್ರೀರಾಮ ಲಕ್ಷ್ಮಣರನ್ನು ಕರೆತರಲು ಅಯೋಧ್ಯೆಗೆ ಹೋಗಿ, ಕ್ಲೇಶ ದಿಂದ ದಶರಥನನ್ನು ಒಪ್ಪಿಸಿ, ಅವರೀರ್ವರನ್ನೂ ಒಡಗೊಂಡು ಬರುತ್ತಾ, ಸರಯೂ ತೀರದಲ್ಲಿ ಕ್ಷುತ್ತೃಷೆಗಳ ಬಾಧೆಯಾಗುತ್ತಿರಲು, ಆ ಮಕ್ಕಳಿಗೆ ಬಲಾತಿಬಲ ಗಳೆಂಬೆರಡು ವಿದ್ಯೆಗಳನ್ನು ಕಲಿಸಿಪರಿಹರಿಸಿ, ತರುವಾಯ ಅನೇಕಾಸ್ತ್ರವಿದ್ಯೆಯನ್ನೂ ಉಪದೇಶಿಸಿ, ತಾಟಕೆಯೆಂಬ ರಕ್ಕಸಿಯಿರುವ ಬನದೆಡೆಗೆ ಅನೇಕ ಕಥೆಗಳನ್ನು ಹೇಳುತ್ತಾ ಕರೆತಂದು, ಆ ರಕ್ಕಸಿಯು ಉದ್ವಾಹುವಾಗಿ ಬಾಯ್ದೆರದು ಅಬ್ಬರಿಸಿ ಬರಲು, ವಿಶ್ವಾಮಿತ್ರನು ಅವಳನ್ನು ಸಂಹರಿಸಬೇಕೆಂದುಸಲು, ಶ್ರೀ ರಾಮನು ಸ್ತ್ರೀಹತ್ಯಾಪಾತಕನೆಂದನು. ಆಗ ಮುನಿಯು ಬ್ರಾಹ್ಮಣರ ರಕ್ಷಣೆಗಾಗಿ ಆತತಾಯಿನಿ ಯಾದವಳಾದವಳ ಹತ್ಯೆಯು ಪಾಪಸಾಧನವಲ್ಲ; ಮತ್ತು ಪುಣ್ಯಸಾಧನವೆನಲು, ಶ್ರೀರಾಮನು ಲೀಲೆಯಿಂದ ಅವಳನ್ನು ಸಂಹರಿಸಿ, ಸುಬಾಹುವನ್ನು ಕೊಂದು, ಮಾರೀಚನುಸಮುದ್ರದಲ್ಲಿ ಬೀಳುವಂತೆ ಮಾಡಿ, ಇತರ ರಕ್ಕಸರನ್ನೆಲ್ಲಾ ಸಂಹರಿಸಿ,

ಶ್ರಮಕ್ಕೆ ಬಂದು, ವಿಶ್ವಾಮಿತ್ರನು ಯಜ್ಞದೀಕ್ಷಿತನಾದನು. ಆಗ ರಾಮ ಲಕ್ಷ್ಮಣರು ಯಜ್ಞೇಶ್ವರನನ್ನು ರಕ್ಷಿಸಿ, ಜನ್ನವು ಪೂರೈಸುವಂತೆ ಮಾಡಿದರು, ಬಳಿಕ ವಿಶ್ವಾಮಿತ್ರರು ಮುಂದೆ ರಾಮ ಲಕ್ಷ್ಮಣರನ್ನು ಕರೆದುಕೊಂಡು ಬಂದು, ಗೌತಮ ಪತ್ನಿಯಾದ ಅಹಲ್ಯೆಯು ಮುನಿಶಾಪದಿಂದ ಶಿಲಾರೂಪದಲ್ಲಿರಲು, ಅವಳನ್ನು ಪತಿ ಶಾಪದಿಂದ ಮುಕ್ತಳನ್ನಾಗಿ ಮಾಡಿ, ಮುಂದೆ ಮಿಥಿಲೆಗೆ ಬಂದು, ಶಿವಧನುರ್ಭಂಗ ಮಾಡಿಸಿ, ಶ್ರೀರಾಮನಿಗೆ ಸೀತಾದೇವಿಯೊಡನೆ ಸ್ವಯಂವರವನ್ನೂ, ಭರತ, ಲಕ್ಷ್ಮಣ ಶತ್ರುಘ್ನರಿಗೆ ಜನಕನ ಮತ್ತು ಅವನ ತಮ್ಮನ ಕುವರಿಯರೊಡನೆ ವಿವಾಹವನ್ನೂ ಮಾಡಿಸಿ, ತರುವಾಯ ಜನಕನಿಂದ ಬೀಳ್ಕೊಂಡು, ಮಡದಿಯರು, ಮಾತಾಪಿತೃಗಳು, ಸೈನಿಕರು, ಪರಿವಾರದವರು ಇವರೊಡನೆ ಶ್ರೀ ರಾಮನು ಅಯೋಧ್ಯೆಗೆ ಬರುತ್ತಿರಲು, ಮಧ್ಯ ಮಾರ್ಗದಲ್ಲಿ ಭಾರ್ಗವನು ಬಂದು ತಡೆದು ರಾಮನಾಮವನ್ನು ತ್ಯಜಿಸಬೇಕು ; ಇಲ್ಲವೇ ಯುದ್ಧಮಾಡಬೇಕೆಂದಬ್ಬರಿಸಿ ನುಡಿದನು. ಆಗ ಶ್ರೀ ರಾಮನು ಯುದ್ಧ ಮಾಡುವುದಾಗಿ ನಿಲ್ಲಲು, ಭಾರ್ಗವನು ಶ್ರೀ ವಿಷ್ಣುವೇ ಶ್ರೀ ರಾಮನಾಗಿ ಅವತರಿಸಿರುವ ನೆಂದು ಹೇಳಲು ; ಭಾರ್ಗವನ ಒಡಲಿನಿಂದ ವೈಷ್ಣವ ತೇಜವು ಶ್ರೀ ರಾಮನ ಮುಖ ವನ್ನು ಹೊಕ್ಕಿತು. ಆಗ ದಶರಥಾದಿಗಳು ಭಾರ್ಗವನನ್ನು ಮುನಿಯೆಂದು ಪೂಜಿಸಿ ದರು. ತರುವಾಯ ಭಾರ್ಗವನು ಶ್ರೀ ರಾಮನಿಗೆ ದುಷ್ಟಸಂಹಾರ, ಶಿಷ್ಟರಕ್ಷಣ ಕಾರ್ಯವನ್ನೆಸಗುವಂತೆ ಹೇಳಿ ತಾನು ಮಹೇಂದ್ರಪರ್ವತಕ್ಕೆ ತಪಸ್ಸಿಗಾಗಿ ಹೋದನು.

"ಇತ್ತ ದಶರಥಾದಿಗಳೊಡನೆ ಶ್ರೀ ರಾಮನು ಅಯೋಧ್ಯೆಗೆ ಬಂದು, ಪುರಜನ ರಿಂದ ಸಂಹಿತನಾಗಿ ಸುಖದಿಂದಿದ್ದನು," ಎಂದು ನಿರೂಪಿಸಿದುದನ್ನು ಸೂತರು ಭಾರದ್ವಾಜಾದಿಗಳಿಗೆ ಹೇಳಿರುತ್ತಾರೆ.

ಇಂತು ನಲವತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಅಷ್ಟಚತ್ವಾರಿಂಶೋಽಧ್ಯಾಯಃ

ಅಥ ಶ್ರೀ ರಾಮಾವತಾರ ಚರಿತೇ ಅಯೋಧ್ಯಾಕಾಣ್ಡಕಥಾ ನಿರೂಪಣಮ್

॥ ಶ್ರೀ ಮಾರ್ಕಂಡೇಯ ಉವಾಚ ॥

ಕೃತದಾರೋ ಮಹಾತೇಜಾ ರಾಮಃ ಕಮಲಲೋಚನಃ ।
ಪಿತ್ರೇ ಸುಮಹತೀಂ ಪ್ರೀತಿಂ ಜನಾನಾಮುಪಪಾದಯನ್ ॥ ೧ ॥

ಅಯೋಧ್ಯಾಯಾಂ ಸ್ಥಿತೋ ರಾಮಃ ಸರ್ವಭೋಗ ಸಮನ್ವಿತಃ ।
ಪ್ರೀತ್ಯಾ ನಂದತ್ಯಯೋಧ್ಯಾಯಾಂ ರಾಮೋ ರಘುಪತೌ ನೃಪ ॥ ೨ ॥

ನಲವತ್ತೆಂಟನೆಯ ಅಧ್ಯಾಯವು.

ಇನ್ನು ಶ್ರೀರಾಮಾವತಾರ ಚರಿತ್ರೆಯಲ್ಲಿ ಅಯೋಧ್ಯಾಕಾಣ್ಡ ಕಥಾ ನಿರೂಪಣೆ

೧-೯. ಶ್ರೀಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ:—' ಎಲೈ ರಾಯನೇ! ಕೇಳು; ಮದುವೆಗೊಂಡು, ಮಡದಿಯರೊಡಗೂಡಿದ, ಕಡುತೇಜದ, ತಾವರೆಗಣ್ಣ ರಾಮನು ತಂದೆಗೂ, ಜನರಿಗೂ ಹೆಚ್ಚಾದ ಒಲವನ್ನುಂಟುಮಾಡುತ್ತಾ, ಸಕಲ ಭೋಗಗಳೊಡಗೂಡಿ, ಅಯೋಧ್ಯೆಯಲ್ಲಿದ್ದನು. ರಘುಪತಿಯಾದ ರಾಮನು ಇಂತು ಅಯೋಧ್ಯೆಯಲ್ಲಿ ಪ್ರೀತಿಯಿಂದ ಸುಖಿಸುತ್ತಿರಲು,

ಭ್ರಾತಾ ಶತ್ರುಘ್ನ ಸಹಿತೋ ಭರತೋ ಮಾತುಲಂ ಯಯೌ ।
ತತೋ ದಶರಥೋ ರಾಜಾ ಪ್ರಸಮೀಕ್ಷ್ಯ ಸುಶೋಭನಮ್ ॥ ೩ ॥

ಯುವಾನಂ ಬಲಿನಂ ಯೋಗ್ಯಂ ಭೂಪಸಿದ್ಧ್ಯೈ ಕವಿಂ ಸುತಮ್ ।
ಅಭಿಷಿಚ್ಯ ರಾಜ್ಯಭಾರಂ ರಾಮೇ ಸಂಸ್ಥಾಪ್ಯ ವೈಷ್ಣವಮ್ ॥ ೪ ॥

ಪದಂ ಪ್ರಾಪ್ತುಂ ಮಹದ್ಯತ್ನಂ ಕರಿಷ್ಯಾಮೀತ್ಯಚಿಂತಯತ್ ।
ಸಂಚಿಂತ್ಯ ತತ್ಪರೋ ರಾಜಾ ಸರ್ವದಿಕ್ಷು ಸಮಾದಿಶತ್ ॥ ೫ ॥

ಪ್ರಾಜ್ಞಾನ್ ಭೃತ್ಯಾನ್ ಮಹೀಪಾಲಾನ್ ಮಂತ್ರಿಣಶ್ಚ ತ್ವರಾನ್ವಿತಾನ್ ।
ರಾಮಾಭಿಷೇಕ ದ್ರವ್ಯಾಣಿ ಋಷಿಪ್ರೋಕ್ತಾನಿ ಯಾನಿ ವೈ ॥
ತಾನಿ ಭೃತ್ಯಾಃ ಸಮಾಹೃತ್ಯ ಶೀಘ್ರಮಾಗಂತುಮರ್ಹಥ ।
ದೂತಾಮಾತ್ಯಾಃ ಸಮಾದೇಶಾತ್ಸರ್ವದಿಕ್ಷು ನರಾಧಿಪಾನ್ ॥ ೬ ॥

ಆಹೂಯ ತಾನ್ ಸಮಾಹೃತ್ಯ ಶೀಘ್ರಮಾಗಂತು ಮರ್ಹಥ ।
ಅಯೋಧ್ಯಾಪುರಮತ್ಯರ್ಥಂ ಸರ್ವಶೋಭಾಸಮನ್ವಿತಮ್ ॥ ೭ ॥

ಶತ್ರುಘ್ನ ಸಹಿತನಾದ ಭ್ರಾತೃವಾದ, ಭರತನು ಸೋದರಮಾವನಾದ ಯುಧಾಜಿತನ ಊರಿಗೆ ಹೋದನು. ಬಳಿಕ ದಶರಥರಾಯನು ಚೆಲುವನೂ, ಹರಯದವನೂ, ಪನ್ನತಿಕೆಯವನೂ, ತಕ್ಕವನೂ, ಬುದ್ಧಿವಂತನೂ, ಆದ ಮಗನಾದ ಶ್ರೀರಾಮನನ್ನು ಒಡೆತನಕೆಲಸಕ್ಕೆ ಬರುವನೆಂದರಿತು, ಪಟ್ಟಾಭಿಷೇಕ ಮಾಡಿ, ಶ್ರೀರಾಮನಲ್ಲಿ ರಾಜ್ಯ ಭಾರವನ್ನಿಟ್ಟು, ತಾನು ವಿಷ್ಣುಲೋಕವಾದ ಮುಕ್ತಿಯೆಂಬ ಸದ್ಗತಿಯನ್ನು ಪಡೆಯಲು ವಿಶೇಷವಾದ ಯತ್ನವನ್ನೆಸಗುವೆನೆಂದು ಆಲೋಚಿಸಿದನು. ಇಂತು ಆಲೋಚಿಸಿ, ರಾಯನು ಆ ಕಾರ್ಯದಲ್ಲಿಯೇ ಆಸಕ್ತನಾಗಿ, ಪಂಡಿತರನ್ನೂ, ಆಳುಗಳನ್ನೂ, ಸಾಮಂತಭೂಪತಿಗಳನ್ನೂ, ಮಂತ್ರಿಗಳನ್ನೂ ಬೇಗನೆ ಬರಬೇಕೆಂದು ಅಪ್ಪಣೆಮಾಡಿದನು. 'ವಸಿಷ್ಠಾದಿ ಮುನಿಗಳು ಹೇಳಿದ, ಶ್ರೀರಾಮಪಟ್ಟಾಭಿಷೇಕಕ್ಕೆ ಯಾವ ಯಾವ ಪದಾರ್ಥಗಳು ಆವಶ್ಯಕವಾದುವುಗಳೋ, ಅವನ್ನು ಎಲೈ ಭೃತ್ಯರೇ! ತೆಗೆದು

ಜನಾಃ ಕುರುತ ಸರ್ವತ್ರ ನೃತ್ಯಗೀತಾದಿನಂದಿತಮ್ ।
ಪುರವಾಸಿಜನಾನಂದಂ ದೇಶವಾಸಿ ಮನಃ ಪ್ರಿಯಮ್ ॥ ೮ ॥

ರಾಮಾಭಿಷೇಕಂ ವಿಪುಲಂ ಶ್ವೋ ಭವಿಷ್ಯತಿ ಜಾನಥ ।
ಶ್ರುತ್ವೇತ್ಥಂ ಮಂತ್ರಿಣಃ ಪ್ರಾಹುಸ್ತಂ ನೃಪಂ ಪ್ರಣಿಪತ್ಯ ಚ ॥ ೯ ॥

ಶೋಭನಂ ತೇ ಮತಂ ರಾಜನ್ ಯದಿದಂ ಪರಿಭಾಷಿತಮ್ ।
ರಾಮಾಭಿಷೇಕಮಸ್ಮಾಕಂ ಸರ್ವೇಷಾಂ ಚ ಪ್ರಿಯಂಕರಮ್ ॥ ೧೦ ॥

ಇತ್ಯುಕ್ತೋ ದಶರಥಸ್ತೈಸ್ತು ತಾನ್ ಸರ್ವಾನ್ ಪುನರಬ್ರವೀತ್ ।
ಆನೀಯತಾಂ ದ್ರುತಂ ಸರ್ವೇ ಸಂಭಾರಾ ಮಮ ಶಾಸನಾತ್ ॥ ೧೧ ॥

ಕೊಂಡು ಬರಲು ಯೋಗ್ಯರಾಗಿರುತ್ತೀರಿ. ಎಲೈ ದೂತಾಮಾತ್ಯರೇ ! ನಮ್ಮ ಅಪ್ಪಣೆಯಿಂದ ಎಲ್ಲ ದಿಕ್ಕುಗಳಲ್ಲೂ ಇರುವ ರಾಯರನ್ನು ಕರೆದು ಅವರನ್ನು ಒಡನೆ ಕೊಂಡು ಬೇಗನೆ ಬರಲು ತಕ್ಕವರಾಗಿರುತ್ತೀರಿ. ಎಲೈ ನಾಗರಿಕರೇ ! ಎಲ್ಲೆಡೆಯಲ್ಲಿಯೂ ಆಯೋಧ್ಯಾನಗರಿಯನ್ನು, ಎಲ್ಲಾ ಸೊಬಗಿನಿಂದ ಕೂಡಿರುವನ್ನಾಗಿ ಮಾಡಿರಿ. ನೃತ್ಯಗೀತಗಳಿಂದ ಸೊಗಸಾದ, ನಗರವಾಸಿಗಳಾದ ಜನರಿಗೆ ಸಂತಸವನ್ನೆಸಗುವ, ನಾಡಿಗರ ಮನಕ್ಕೆ ಹಿತವಾದ, ಹಿರಿದಾದ, ಶ್ರೀರಾಮಾಭಿಷೇಕವು ನಾಳೆ ನಡೆಯಲಿರುವುದು. ಇದನ್ನು ತಿಳಿಯಿರಿ;' ಎಂಬ ದಶರಥರಾಯನ ಈ ಅಪ್ಪಣೆಯನ್ನು ಕೇಳಿ, ಮಂತ್ರಿಗಳು ಆ ರಾಜನಿಗೆ ಎರಗಿ ಇಂತು ನುಡಿದರು.

೧೦. 'ಎಲೈ ಮಹಾರಾಯನೇ ! ನಿನ್ನ ಅಭಿಪ್ರಾಯವು ಕಲ್ಯಾಣಕರವಾದದ್ದು. ಯಾವ ಈ ರಾಮಾಭಿಷೇಕವಚನವು ನಮ್ಮೆಲ್ಲರಿಗೂ ಪ್ರಿಯವನ್ನುಂಟು ಮಾಡತಕ್ಕದ್ದು.

೧೧. ಇಂತು ಅವರು ದಶರಥನಿಗೆ ಬಿನ್ನವಿಸಲು, ದಶರಥನು ಅವರೆಲ್ಲರಿಗೂ ಪುನಃ ಇಂತು ನುಡಿದನು ;—'ಎಲೈ ! ನೀವೆಲ್ಲರೂ ನನ್ನ ಅಪ್ಪಣೆಯಿಂದ ಬೇಗನೆ ಪಟ್ಟಾಭಿಷೇಕದ ಸಾಮಗ್ರಿಗಳನ್ನು ತೆಗೆದುಕೊಂಡು ಬನ್ನಿರಿ.

ಸರ್ವತಃ ಸಾರಭೂತಾ ಚ ಪುರೀ ಚೇಯಂ ಸಮಂತತಃ ।
ಅದ್ಯ ಶೋಭಾನ್ವಿತಾ ಕಾರ್ಯಾ ಕರ್ತವ್ಯಂ ಯಾಗಮಂಟಪಮ್ ॥ ೧೨ ॥

ಇತ್ಯೇವಮುಕ್ತಾ ರಾಜ್ಞಾ ತೇ ಮಂತ್ರಿಣಃ ಶೀಘ್ರಕಾರಿಣಃ ।
ತಥೈವ ಚಕ್ರುಸ್ತೇ ಸರ್ವೇ ಪುನಃಪುನರುದೀರಿತಾಃ ॥ ೧೩ ॥

ಪ್ರಾಪ್ತಹರ್ಷಃ ಸ ರಾಜಾ ಚ ಶುಭಂ ದಿನಮುದೀಕ್ಷಯನ್ ।
ಕೌಸಲ್ಯಾ ಲಕ್ಷ್ಮಣಶ್ಚೈವ ಸುಮಿತ್ರಾ ನಾಗರೋ ಜನಃ ॥ ೧೪ ॥

ರಾಮಾಭಿಷೇಕಮಾಕರ್ಣ್ಯ ಮುದಂ ಪ್ರಾಪ್ಯಾತಿಹರ್ಷಿತಾಃ ।
ಶ್ವಶ್ರೂಶ್ವಶುರಯೋಃ ಸಮ್ಯಕ್ ಶುಶ್ರೂಷಣಪರಾ ತು ಸಾ ॥ ೧೫ ॥

ಮುದಾನ್ವಿತಾ ಸ್ಥಿತಾ ಸೀತಾ ಭರ್ತುರಾಕರ್ಣ್ಯ ಶೋಭನಮ್ ।
ಶ್ವೋ ಭಾವಿನ್ಯಭಿಷೇಕೇ ತು ರಾಮಸ್ಯ ವಿದಿತಾತ್ಮನಃ ॥ ೧೬ ॥

---

೧೨. ಎಲ್ಲದರಲ್ಲೂ ಶ್ರೇಷ್ಠವಾದ ಈ ಅಯೋಧ್ಯಾಪುರಿಯು ಇಂದು ಎಲ್ಲೆಡೆಗಳಲ್ಲಿಯೂ ಅಲಂಕಾರಗೊಂಡುದಾಗಿಮಾಡತಕ್ಕದ್ದು. ಹಾಗೆಯೇ ಯಾಗಮಂಟಪವೂ ರಚಿಸಲ್ಪಡಲಿ.'

೧೩. ಇಂತು ರಾಜನು ಅಪ್ಪಣೆ ಮಾಡಲು, ಬೇಗನೆ ಕೆಲಸ ಮಾಡುವಸ್ವಭಾವದ ಆ ಮಂತ್ರಿಗಳೆಲ್ಲರೂ ಅಡಿಗಡಿಗೆ ಹೇಳಿಸಿಕೊಂಡವರಾಗಿ, ಹಾಗೆಯೇ ಎಲ್ಲವನ್ನೂ ನೆರವೇರಿಸಿದರು.

೧೪–೧೬. ಸಂತಸಗೊಂಡ ದಶರಥರಾಯನೂ, ಆ ಮಂಗಳದ ದಿನವನ್ನು ಇದಿರು ನೋಡುತ್ತಿದ್ದನು. ಕೌಸಲ್ಯೆ, ಲಕ್ಷ್ಮಣ, ಸುಮಿತ್ರೆ, ಪೌರರು ಹೀಗೆ ಇವರೆಲ್ಲರೂ ಶ್ರೀರಾಮನ ಅಭಿಷೇಕ ವೃತ್ತಾಂತವನ್ನು ಕೇಳಿ, ಆನಂದವನ್ನೈದಿ, ಕಡುಸಂತಸಗೊಂಡರು. ಅತ್ತೆ ಮಾವಂದಿರ ಸೇವೆಯಲ್ಲಿ ಅತ್ಯಂತಾಸಕ್ತೆಯಾದ ಆ ಸೀತಾದೇವಿಯೂ ಗಂಡನಿಗೆ ಮಂಗಳವಾಗುವುದನ್ನು ಕೇಳಿ, ಆನಂದದಿಂದ ಕೂಡಿದ್ದಳು. ಸರ್ವಜ್ಞನಾದ ಶ್ರೀರಾಮನ ಪಟ್ಟಾಭಿಷೇಕವು ಮರುದಿವಸ ನಡೆಯಲಿದ್ದಿತು.

ದಾಸೀ ತು ಮಂಥರಾ ನಾಮ್ನಾ ಕೈಕೇಯ್ಯಾಃ ಕುಬ್ಜರೂಪಿಣೀ ।
ಸ್ವಾಂ ಸ್ವಾಮಿನೀಂ ತು ಕೈಕೇಯೀಮಿದಂ ವಚನಮಬ್ರವೀತ್ ॥ ೧೭ ॥

ಶೃಣು ರಾಜ್ಞಿ ಮಹಾಭಾಗೇ ವಚನಂ ಮಮ ಶೋಭನಮ್ ।
ತ್ವತ್ಪತಿಸ್ತು ಮಹಾರಾಜಸ್ತವ ನಾಶಾಯ ಚೋದ್ಯತಃ ॥ ೧೮ ॥

ರಾಮೋಽಸೌ ಕೋಸಲೀ ಪುತ್ರಃ ಶ್ವೋ ಭವಿಷ್ಯತಿ ಭೂಪತಿಃ ।
ವಸ್ತುವಾಹನಕೋಶಾದಿರಾಜ್ಯಂ ಚ ಸಕಲಂ ಶುಭೇ ॥ ೧೯ ॥

ಭವಿಷ್ಯತ್ಯದ್ಯ ರಾಮಸ್ಯ ಭರತಸ್ಯ ನ ಕಿಂಚನ ।
ಭರತೋಽಪಿ ಗತೋ ದೂರಂ ಮಾತುಲಸ್ಯ ಗೃಹಂ ಪ್ರತಿ ॥ ೨೦ ॥

ಹಾ ! ಕಷ್ಟಂ ಮಂದಭಾಗ್ಯಾಽಸಿ ಸಾಪತ್ನ್ಯಾ ದುಃಖಿತಾ ಭೃಶಮ್ ।
ಸೈವಮಾಕರ್ಣ್ಯ ಕೈಕೇಯೀ ಕುಬ್ಜಾಮಿದಮಥಾಬ್ರವೀತ್ ॥ ೨೧ ॥

---

೧೭. ಕುಬ್ಜೆಯಾಕಾರದ 'ಮಂಥರೆ,' ಎಂಬ ಹೆಸರಿನ ಕೈಕೇಯಿಯ ದಾಸಿಯು ತನ್ನ ಒಡತಿಯಾದ ಕೈಕೇಯಿಗೆ ಈ ಮಾತನ್ನು ಹೇಳಿದಳು.

೧೮. "ಎಲೌ ಪುಣ್ಯಶಾಲಿನಿಯಾದ ರಾಣಿಯೇ ! ನನ್ನ ಈ ಮಂಗಳವ ನುಡಿಯನ್ನು ಕೇಳು; ನಿನ್ನ ಪತಿಯಾದ ಮಹಾರಾಜನು ನಿನಗೆ ಕೇಡನ್ನೆಸಗಲು ತೊಡಗಿದ್ದಾನೆ.

೧೯–೨೦. ಎಲೌ ಮಂಗಳಕರಳೇ ! ಕೌಸಲ್ಯೆಯ ಮಗನಾದ ಈ ರಾಮನು ನಾಳೆ ಭೂಪತಿಯಾಗುವನು. ದ್ರವ್ಯ, ವಾಹನ, ಕೋಶ— ಇವೇ ಮೊದಲಾದ ರಾಜ್ಯವೆಲ್ಲವೂ ಇಂದು ರಾಮನದಾಗುವುದು ; ಭರತನಿಗೇನೂ ಇಲ್ಲವು. ಭರತನೂ ಬಹುದೂರದ ಸೋದರ ಮಾವನ ಮನೆಗೆ ಹೋಗಿರುತ್ತಾನೆ.

೨೧. ಅಯ್ಯೋ ! ಕಷ್ಟವು; ಸವತಿಯಿಂದ ಅತಿ ದುಃಖಗೊಂಡವಳಾಗಿ ಅಪುಣ್ಯವತಿಯಾಗಿರುತ್ತೀಯೆ; ಎಂಬ ನುಡಿಯನ್ನು ಆ ಕೈಕೇಯಿಯು ಕೇಳಿ, ಬಳಿಕ ಕಬ್ಜೆಗೆ ಇಂತೆಂದಳು :—

ಪಶ್ಯ ಮೇ ದಕ್ಷತಾಂ ಕುಬ್ಜೇ ಅದ್ಯ ವಾ ತ್ವಂ ವಿಚಕ್ಷಣೇ ।
ಯಥಾ ತು ಸಕಲಂ ರಾಜ್ಯಂ ಭರತಸ್ಯ ಭವಿಷ್ಯತಿ ॥ ೨೨ ॥

ರಾಮಸ್ಯ ವನವಾಸಶ್ಚ ತಥಾ ಯತ್ನಂ ಕರೋಮ್ಯಹಮ್ ।
ಇತ್ಯುಕ್ತ್ವಾ ಮಂಥರಾಂ ಸಾ ತು ಉನ್ಮುಚ್ಯ ಸ್ವಾಂಗಭೂಷಣಮ್ ॥ ೨೩ ॥

ವಸ್ತ್ರ ಪುಷ್ಪಾಣಿ ಚೋನ್ಮುಚ್ಯ ಸ್ಥೂಲವಾಸೋಧರಾಽಭವತ್ ।
ನಿರ್ಮಾಲ್ಯ ಪುಷ್ಪಧೃಕ್ಕಷ್ಟಾ ಕಶ್ಮಲಾಂಗೀ ವಿರೂಪಿಣೀ । ೨೪ ॥

ಭಸ್ಮಧೂಲ್ಯಾವದಿಗ್ಧಾಂಗೀ ಭಸ್ಮಧೂಲಿತುಷಾವೃತಾ ।
ಭೂಭಾಗೇ ಶಾಂತದೀಪೇ ಸಾ ಸಂಧ್ಯಾಕಾಲೇ ಸುದುಃಖಿತಾ ॥ ೨೫ ॥

ಲಲಾಟೇ ಶ್ವೇತಚೈಲಂ ತು ಬಧ್ವಾ ಸುಷ್ವಾಪ ಭಾಮಿನೀ ।
ಮಂತ್ರಿಭಿಃ ಸಹ ಕಾರ್ಯಾಣಿ ಸಂಮಂತ್ರ್ಯ ಸಕಲಾನಿ ತು ॥ ೨೬ ॥

೨೨-೩೦. "ಎಲೈ ಬುದ್ಧಿಮತಿಯಾದ ಕುಬ್ಜೆಯೇ! ಇಂದು ನೀನು ನನ್ನ ಸಾಮರ್ಥ್ಯವನ್ನು ನೋಡು. ರಾಜ್ಯವೆಲ್ಲವೂ ಹೇಗೆ ಭರತನದಾಗುವುದೋ, ರಾಮನಿಗೆ ವನವಾಸವೆಂತಾಗುವುದೋ, ಹಾಗೆ ನಾನು ಯತ್ನವನ್ನು ಮಾಡುತ್ತೇನೆ;" ಎಂದು ಆ ಕೈಕೇಯಿಯು ಮಂಥರೆಗೆ ಹೇಳಿ, ತನ್ನ ಅವಯವಗಳಲ್ಲಿ ತೊಟ್ಟ ತೊಡಿಗೆಗಳನ್ನೆಲ್ಲಾ ತೆಗೆದು ಹಾಕಿ, ಪೀತಾಂಬರ, ಹೂ, ಇವುಗಳನ್ನು ತ್ಯಜಿಸಿ, ದಪ್ಪನಾದ ಒರಟು ಬಟ್ಟೆಯನ್ನುಟ್ಟುಕೊಂಡಳು. ಹಳಸಿದ ಹೂವನ್ನು ಮುಡಿದು, ಕಷ್ಟೆಯಾಗಿ, ಕೊಳಕಾದ ದೇಹವುಳ್ಳವಳೂ, ವಿರೂಪವತಿಯೂ, ಬೂದಿ, ಮಣ್ಣುಹುಡಿಗಳೇ ಮೊದಲಾದುವುಗಳಿಂದ ಬಳಿದ ದೇಹವುಳ್ಳವಳಾಗಿಯೂ, ಬೂದಿ, ಹುಡಿ, ಹೊಟ್ಟು-ಇವುಗಳಿಂದ ಕವಿದವಳಾಗಿಯೂ, ದೀಪವು ಆರಿರುವ ಪ್ರದೇಶದಲ್ಲಿ, ಸಂಜೆಯ ಹೊತ್ತಿನಲ್ಲಿ, ಅವಳು ಅತ್ಯಂತ ದುಃಖಿತೆಯಾದವಳಾಗಿ, ಆ ಭಾಮಿನಿ ಹಣೆಗೆ ಬಿಳಿದಾದ ನಾರು ಬಟ್ಟೆಯನ್ನು ಕಟ್ಟಿಕೊಂಡು, ಮಲಗಿಕೊಂಡಳು.

ಪುಣ್ಯಾಹಃ ಸ್ವಸ್ತಿಮಾಂಗಲ್ಯೈಃ ಸ್ಥಾಪ್ಯ ರಾಮಂ ತು ಮಂಡಲೇ ।
ಋಷಿಭಿಸ್ತು ವಸಿಷ್ಠಾದ್ಯೈಃ ಸಾರ್ಧಂ ಸಂಭಾರ ಮಂಡಪೇ ॥ ೨೭ ॥

ವೃದ್ಧಿಜಾಗರಣೀಯೈಶ್ಚ ಸರ್ವತಸ್ತೂರ್ಯನಾದಿತೇ ।
ಗೀತನೃತ್ಯಸಮಾಕೀರ್ಣೇ ಶಂಖಕಾಹಲನಿಃಸ್ವನೈಃ ॥ ೨೮ ॥

ಸ್ವಯಂ ದಶರಥಸ್ತತ್ರ ಸ್ಥಿತ್ವಾ ಪ್ರತ್ಯಾಗತಃ ಪುನಃ ।
ಕೈಕೇಯ್ಯಾ ವೇಶ್ಮನೋ ದ್ವಾರಂ ಜರದ್ಭಿಃ ಪರಿರಕ್ಷಿತಮ್ ॥ ೨೯ ॥

ರಾಮಾಭಿಷೇಕಂ ಕೈಕೇಯ್ಯೈ ಕಥನಾಯ ಚ ಪಾರ್ಥಿವಃ ।
ಕೈಕೇಯ್ಯಾ ಭವನಂ ವೀಕ್ಷ್ಯ ಸಾಂಧಕಾರ ಮಥಾಬ್ರವೀತ್ ॥ ೩೦ ॥

ಅಂಧಕಾರಮಿದಂ ಕಸ್ಮಾದದ್ಯ ತೇ ಮಂದಿರೇ ಪ್ರಿಯೇ ।
ರಾಮಾಭಿಷೇಕಂ ಹರ್ಷಾಯ ಅಂತ್ಯಜಾ ಅಪಿ ಮೇನಿರೇ ॥ ೩೧ ॥

ಅಷ್ಟು ಹೊತ್ತಿಗೆ ದಶರಥನು ಮಾಡಬೇಕಾದ ಕಾರ್ಯಗಳೆಲ್ಲವನ್ನೂ ಮಂತ್ರಿಗಳೊಡನೆ ಯೋಚಿಸಿ, ಪುಣ್ಯಾಹ ಸ್ವಸ್ತಿ ಮಾಂಗಲ್ಯವಚನಾದಿಗಳಿಂದ ಶ್ರೀ ರಾಮನನ್ನು ಯಾಗ ಮಂಡಪದಲ್ಲಿ ಕೂರಿಸಿ, ವಸಿಷ್ಠರೇ ಮೊದಲಾದ ಮುನಿಗಳಿಂದ ಕೂಡಿ, ಸಾಮಗ್ರಿಗಳಿರುವ ಮಂಡಪದಲ್ಲಿ ಆ ಏಳ್ಗೆಯೆಚ್ಚರಗಳಿಂದ ಎಲ್ಲೆಡೆಗಳಲ್ಲಿಯೂ ತೂರ್ಯವು ಮೊಳಗುತ್ತಿರಲು, ಹಾಡು, ಕುಣಿತಗಳಿಂದ ತುಂಬಿರಲು, ಸಂಕು, ಕಹಳೆ- ಇವುಗಳ ಮೊಳಗಿನಿಂದ ದಶರಥರಾಯನು ತಾನೇ ಅಲ್ಲಿದ್ದು, ತರುವಾಯ ಮುದುಕರಾಗ ಕಂಚುಕಿಗಳಿಂದ ಕಾದಿದ್ದ ಕೈಕೇಯಿಯ ಪ್ರಾಸಾದದ ಬಾಗಿಲಿಗೆ ಶ್ರೀ ರಾಮಾಭಿಷೇಕವನ್ನು ಅವಳಿಗೆ ಹೇಳುವುದಕ್ಕಾಗಿ ಹಿಂದಿರುಗಿ ಬಂದನು. ಆಗ ಕೈಕೇಯಿಯ ಮಂದಿರವು ಕತ್ತಲಾಗಿರುವುದನ್ನು ಕಂಡು, ಆ ರಾಯನು ಇಂತು ಹೇಳಿದನು.

೩೧. "ಎಲೌ ಪ್ರೇಯಸಿಯೇ ! ಇಂದು ನಿನ್ನ ಮನೆಯಲ್ಲಿ ಈ ಅಂಧಕಾರವೇಕೆ ? ಚಂಡಾಲರೂ ಕೂಡ ಶ್ರೀ ರಾಮಾಭಿಷೇಕವು ಸಂತೋಷಕರವೆಂದು ತಿಳಿದಿರುತ್ತಾರೆ.

ಗೃಹಾಲಂಕರಣಂ ಕುರ್ವಂತ್ಯದ್ಯ ಲೋಕಾ ಮನೋಹರಮ್ ।
ತ್ವಯಾಽದ್ಯ ನ ಕೃತಂ ಕಸ್ಮಾತ್ ಇತ್ಯುಕ್ತ್ವಾ ಚ ಮಹೀಪತಿಃ ॥ ೩೨ ॥

ಜ್ವಾಲಯಿತ್ವಾ ಗೃಹೇ ದೀಪಾನ್ ಪ್ರವಿವೇಶ ಗೃಹಂ ನೃಪಃ ।
ಅಶೋಭನಾಂಗೀಂ ಕೈಕೇಯೀಂ ಸ್ವಪಂತೀಂ ಪತಿತಾಂ ಭುವಿ ॥ ೩೩ ॥

ದೃಷ್ಟ್ವಾ ದಶರಥಃ ಪ್ರಾಹ ತಸ್ಯಾಃ ಪ್ರಿಯಮಿದಂ ತ್ವಿತಿ ।
ಆಶ್ಲಿಷ್ಯೋಚ್ಚಾರ್ಯ್ಯ ತಾಂ ರಾಜಾ ಶೃಣು ಮೇ ಪರಮಂ ವಚಃ ॥ ೩೪ ॥

ಸ್ವಮಾತುರಧಿಕಾಂ ನಿತ್ಯಾಂ ಯಸ್ತೇ ಭಕ್ತಿಂ ಕರೋತಿ ವೈ ।
ತಸ್ಯಾಭಿಷೇಕಂ ರಾಮಸ್ಯ ಶ್ವೋ ಭವಿಷ್ಯತಿ ಶೋಭನೇ ॥ ೩೫ ॥

ಇತ್ಯುಕ್ತೇ ಪಾರ್ಥಿವೇ ತಸ್ಮಿನ್ ಕಿಂ ಚಿನ್ನೋವಾಚ ಸಾಽಶುಭಾ ।
ಮುಂಚತೀ ದೀರ್ಘಮುಷ್ಣಂ ಚ ರೋಷೋಚ್ಛ್ವಾಸಂ ಮುಹುರ್ಮುಹುಃ ॥

ತಸ್ಮಾನ್ಮಾಶ್ಲಿಷ್ಯ ಹಸ್ತಾಭ್ಯಾಂ ಪಾರ್ಥಿವಃ ಪ್ರಾಹ ರೋಷಿತಾಮ್ ।
ಕೈಕೇಯಿ ತವ ದುಃಖಸ್ಯ ಕಾರಣಂ ವದ ಶೋಭನೇ ॥ ೩೭ ॥

೩೨-೩೫. ಜನರೆಲ್ಲರೂ ತಮ್ಮ ತಮ್ಮ ಮನೆಯನ್ನು ಮನೋಹರವಾಗಿ ಸಿಂಗರಿಸುತ್ತಿರುತ್ತಾರೆ. ನೀವೇಕೆ ಈ ದಿವಸ ಅಲಂಕರಿಸಲಿಲ್ಲವು ಎಂದು ಭೂಪತಿಯು ಹೇಳಿ, ಆ ಮನೆಯಲ್ಲಿ ಸೇವಕರಿಂದ ದೀಪವನ್ನು ಹೊತ್ತಿಸಿ, ಮನೆಯನ್ನು ಪ್ರವೇಶಿಸಿದನು.

ಅಮಂಗಲಾಕಾರದ ಕೈಕೇಯಿಯು ನೆಲದಲ್ಲಿ ಬಿದ್ದು ಮಲಗಿರುವುದನ್ನು ದಶರಥರಾಯನು ಕಂಡು, ಈ ರಾಮಾಭಿಷೇಕವು ಅವಳಿಗೆ ಹಿತವಾದುದೆಂದು ಅವಳಿಗೆ ಹೇಳಿದನು. ಬಳಿಕ ರಾಯನು ಅವಳನ್ನು ಮೇಲಕ್ಕೆತ್ತಿ, ಆಲಿಂಗಿಸಿಕೊಂಡು, ಎಲಾ ಮಂಗಳಾಂಗಿಯೇ, ನನ್ನ ಒಳ್ಳೆಯ ನುಡಿಯನ್ನಾಲಿಸು; ಯಾವನು ತನ್ನ ತಾಯಿಗಿಂತಲೂ ನಿನ್ನಲ್ಲಿ ಹೆಚ್ಚಿನ ಭಕ್ತಿಯನ್ನು ತೋರಿಸುತ್ತಿರುವನೋ, ಆ ರಾಮನ ಪಟ್ಟಾಭಿಷೇಕವು ನಾಳೆ ನಡೆಯುವುದು.

೩೬-೩೭. ಆ ರಾಯನು ಇಂತು ಹೇಳಲು, ಆ ಅಮಂಗಳೆಯಾದ ಕೈಕೇಯಿಯು ಏನನ್ನೂ ಆಡಲಿಲ್ಲ. ಪದೇ ಪದೇ ರೋಷದಿಂದ ನಿಡಿದಾಗಿ ಬಿಸುಸುಯ್ದು,

ವಸ್ತ್ರಾಭರಣರತ್ನಾದಿ ಯದ್ಯದಿಚ್ಛಸಿ ಶೋಭನೇ ।
ತತ್ತ್ವಂ ಗೃಹೀಷ್ವ ನಿಃಶಂಕಂ ಭಾಂಡಾರಾತ್ಸುಖಿನೀ ಭವ ॥ ೩೮ ॥

ಭಾಂಡಾರೇಣ ಮಮ ಶುಭೇ ಶ್ವೋಃ ಸಿದ್ಧಿಶ್ಚ ಭವಿಷ್ಯತಿ ।
ಯದಾಭಿಷೇಕಂ ಸಂಪ್ರಾಪ್ತೇ ರಾಮೇ ರಾಜೀವಲೋಚನೇ ॥ ೩೯ ॥

ಭಾಂಡಾಗಾರಸ್ಯ ಮೇ ದ್ವಾರಂ ಮಯಾ ಮುಕ್ತಂ ನಿರರ್ಗಲಮ್ ।
ಭವಿಷ್ಯತಿ ಪುನಃ ಪೂರ್ಣಂ ರಾಮೇ ರಾಜ್ಯಂ ಪ್ರಶಾಸತಿ ॥ ೪೦ ॥

ಬಹುಮಾನಯ ರಾಮಸ್ಯ ಅಭಿಷೇಕಂ ಮಹಾತ್ಮನಃ ।
ಇತ್ಯುಕ್ತಾ ರಾಜವರ್ಯೇಣ ಕೈಕೇಯೀ ಪಾಪಲಕ್ಷಣಾ ॥ ೪೧ ॥

ಕೈಗಳಿಂದ ರಾಯನನ್ನು ಆಲಂಗಿಸಿ ನಿಂತಳು. ಆಗ ರಾಯನು ಕುಪಿತೆಯಾದವಳಿಗೆ, 'ಎಲೌ ಕೈಕೇಯಿ! ನಿನ್ನ ದುಃಖಕ್ಕೆ ಕಾರಣವೇನು! ಎಲೌ ಶೋಭನೆ' ಅದನ್ನು ಹೇಳು.

೩೮. ಎಲೌ ಶೋಭನೆ! ವಸ್ತ್ರ, ತೊಡವು, ರನ್ನ-ಇವೇ ಮೊದಲಾದುವು ಯಾವುದನ್ನು ಎಳಸುವೆಯೋ, ಅವೆಲ್ಲವನ್ನೂ ಬಂಡಾರದಿಂದ ಸಂದೇಹಗೊಳ್ಳದೆ ತೆಗೆದುಕೋ; ಸೊಗದಿಂದಿರು.

೩೯-೪೦. ಎಲೌ ಶೋಭನೆ! ಶುಭಸ್ವರೂಪಳೇ! ನಾಳೆ ನನ್ನ ಬಂಡಾರದಿಂದ ಸಕಲ ಫಲವುಂಟಾಗುವುದು. ಯಾವಾಗ ಶ್ರೀರಾಮ ಪಟ್ಟಾಭಿಷೇಕವಾಗುವುದೋ, ಪುಂಡರೀಕಾಕ್ಷನಾದ ಶ್ರೀರಾಮನು ಒಡೆಯನಾಗುವುದಕ್ಕೆ ಬರಲು, ನನ್ನ ಬೊಕ್ಕಸದ ಬಾಗಿಲುಗಳನ್ನು ನಾನು ತಡೆಯಿಲ್ಲದೆ ತೆರದಿರುತ್ತೇನೆ. (ಯಾರು ಬೇಕಾದರೂ ತಮಗೆ ಬೇಕಾದುವನ್ನು ತೆಗೆದುಕೊಳ್ಳಬಹುದು. ಇಂತು ಬಂಡಾರವು ಬರಿದಾಗಲು,) ಶ್ರೀರಾಮನು ರಾಜ್ಯವಾಳಲು ತೊಡಗಲು, ಆ ಬೊಕ್ಕಸವು ಪುನಹ ತುಂಬುವುದು.

೪೧-೪೨. ಮಹಾತ್ಮನಾದ ಶ್ರೀರಾಮಚಂದ್ರನ ಪಟ್ಟಾಭಿಷೇಕವನ್ನು ಗೌರವಿಸು;' ಇಂತು ರಾಜವರ್ಯನಾದ ದಶರಥನಿಂದ ಹೇಳಿಸಿಕೊಳ್ಳಲ್ಪಟ್ಟ ಪಾಪ

ಕುಮತಿರ್ನಿರ್ಘೃಣಾ ದುಷ್ಟಾ ಕುಬ್ಜಯಾ ಶಿಕ್ಷಿತಾಽಬ್ರವೀತ್ ।
ರಾಜಾನಂ ಸ್ವಪತಿಂ ವಾಕ್ಯಂ ಕ್ರೂರಮತ್ಯಂತ ನಿಷ್ಠುರಮ್ ॥ ೪೨ ॥

ರತ್ನಾದಿಸಕಲಂ ಯತ್ತೇ ತನ್ಮಮೈವ ನ ಸಂಶಯಃ ।
ದೇವಾಸುರ ಮಹಾಯುದ್ಧೇ ಪ್ರೀತ್ಯಾ ಯನ್ಮೇ ವರದ್ವಯಮ್ ॥ ೪೩ ॥

ಪುರಾದತ್ತಂ ತ್ವಯಾ ರಾಜನ್ ತದಿದಾನೀಂ ಪ್ರಯಚ್ಛ ಮೇ ।
ಇತ್ಯುಕ್ತಃ ಪಾರ್ಥಿವಃ ಪ್ರಾಹ ಕೈಕೇಯೀಮಶುಭಾಂ ತದಾ ॥ ೪೪ ॥

ಅದತ್ತಮಪ್ಯಹಂ ದಾಸ್ಯೇ ತವ ನಾನ್ಯಸ್ಯ ವಾ ಶುಭೇ ।
ಕಿಂ ಮೇ ಪ್ರತಿಶ್ರುತಂ ಪೂರ್ವಂ ದತ್ತಮೇವ ಮಯಾ ತವ ॥ ೪೫ ॥

ಶುಭಾಂಗೀ ಭವ ಕಲ್ಯಾಣೀ ತ್ಯಜ ಕೋಪಮನರ್ಥಕಂ ।
ರಾಮಾಭಿಷೇಕಜಂ ಹರ್ಷಂ ಭಜೋತ್ತಿಷ್ಠ ಸುಖೀ ಭವ ॥ ೪೬ ॥

ಸ್ವಭಾವವಕ್ಕೈಕೇಯಿಯು ದುರ್ಬುದ್ಧಿಯುಳ್ಳವಳೂ, ದಯೆಯಿಲ್ಲದವಳೂ, ದುಷ್ಟೆಯೂ, ಕುಬ್ಜೆಯಿಂದ ಶಿಕ್ಷಿತೆಯೂ ಆದವಳು ತನ್ನ ಸ್ವಾಮಿಯಾದ ದಶರಥರಾಯನನ್ನು ಕುರಿತು ಕ್ರೂರವಾಗಿಯೂ, ಅತ್ಯಂತ ಕಠಿನವಾಗಿಯೂ ಇಂತು ನುಡಿದಳು.

೪೩-೪೪. 'ನಿನ್ನವಾದ ಯಾವ ರತ್ನಾದಿಗಳಿವೆಯೋ, ಅವೆಲ್ಲವೂ ನನ್ನವೇ ಆಗಿವೆ. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲವು. ಎಲೈ ರಾಯನೇ! ಹಿಂದೆ ದೇವಾಸುರ ಮಹಾ ಯುದ್ಧದಲ್ಲಿ ಪ್ರೀತಿಯಿಂದ ನನಗೆ ಯಾವ ಎರಡು ವರಗಳನ್ನು ನೀನು ಕೊಟ್ಟೆಯೋ, ಅವನ್ನೀಗ ಸಲ್ಲಿಸು;' ಇಂತು ಹೇಳಿಸಿಕೊಳ್ಳಲ್ಪಟ್ಟ ಪಾರ್ಥಿವನು ಆಗ ಅಶುಭಳಾದ ಕೈಕೇಯಿಗೆ ಇಂತು ನುಡಿದನು.

೪೫. "ಎಲೈ ಶುಭಕರಳೇ! ನಿನಗಾಗಲೀ, ಇತರರಿಗಾಗಲೀ, ನುಡಿಯಿಂದ ಕೊಡದೇ ಇದ್ದುದನ್ನಾದರೂ ಈಗ ಕೊಡುವೆನು. ನಾನು ಹಿಂದೆ ನಿನಗೆ ಯಾವುದನ್ನು ಆಣೆಮಾಡಿದ್ದೆನೋ, ಅದನ್ನು ನಾನು ನಿನಗೆ ಕೊಟ್ಟಿರುತ್ತೇನೆ.

೪೬. ಎಲೌ ಕಲ್ಯಾಣಿಯೇ! ಶುಭಾಂಗಿಯಾಗು; ನಿಷ್ಪ್ರಯೋಜನವಾದ ಮುನಿಸನ್ನು ಬಿಡು; ಶ್ರೀ ರಾಮನ ಪಟ್ಟಾಭಿಷೇಕದಿಂದಾಗುವ ಸಂತಸವನ್ನು ತಾಳು; ಏಳು; (ಸೊಗವುಳ್ಳವಳಾಗು.) ಆನಂದಿಸು.'

ಇತ್ಯುಕ್ತೇ ರಾಜನಿ ಪುನಃ ಕೈಕೇಯೀ ಕಲಹಪ್ರಿಯಾ ।
ಉವಾಚ ಪರುಷಂ ವಾಕ್ಯಂ ರಾಜ್ಞೋ ಮರಣ ಕಾರಣಮ್ ॥ ೪೭ ॥

ವರದ್ವಯಂ ಪೂರ್ವದತ್ತಂ ಯದಿ ದಾಸ್ಯಸಿ ಮೇ ವಿಭೋ ।
ಶ್ವೋ ಭೂತೇ ಗಚ್ಛತು ವನಂ ರಾಮೋಽಯಂ ಕೋಸಲಾತ್ಮಜಃ ॥ ೪೮ ॥

ದ್ವಾದಶಾಬ್ದಂ ನಿವಸತು ತ್ವದ್ವಾಕ್ಯಾದ್ದಂಡಕೇ ವನೇ ।
ಅಭಿಷೇಕಂ ಚ ರಾಜ್ಯಂ ಚ ಭರತಸ್ಯ ಭವಿಷ್ಯತಿ ॥ ೪೯ ॥

ಇತ್ಯಾಕರ್ಣ್ಯ ಸ ಕೈಕೇಯ್ಯಾ ವಚನಂ ಘೋರಮಪ್ರಿಯಮ್ ।
ಪಪಾತ ಭುವಿ ನಿಃಸಂಜ್ಞೋ ರಾಜಾ ಸಾಽಪಿ ವಿಭೂಷಿತಾ ॥ ೫೦ ॥

ರಾತ್ರಿಶೇಷಂ ನಯಿತ್ವಾ ತು ಪ್ರಭಾತೇ ಸಾ ಮುದಾವತೀ ।
ದೂತಂ ಸುಮಂತ್ರಮಾಹ್ವೈವಂ ರಾಮಮಾನೀಯತಾಮಿತಿ ॥ ೫೧ ॥

---

೪೭. ಇಂತು ರಾಮನು ಹೇಳುತ್ತಿರಲು, ಮತ್ತೂ ಕಲಹಪ್ರಿಯೆಯಾದ ಕೈಕೆಯಿಯು ರಾಯನಿಗೆ ಸಾವಿಗೆ ಕಾರಣವಾದ (ಕರ್ಕಶವಾದ) ಕ್ರೂರವಾದ ನುಡಿಯನ್ನಾಡಿದಳು.

೪೮–೪೯. ‘ಎಲೈ ಪ್ರಭುವೇ ! ಹಿಂದೆ ವಾಗ್ದತ್ತಗಳಾದ ಎರಡು ವರಗಳನ್ನು ಈಗ ಸಲ್ಲಿಸುವುದಾದರೆ, ನಾಳೆಯಾಗುತ್ತಲೇ ಕೌಸಲ್ಯೆಯ ಮಗನಾದ ಈ ರಾಮನು ಕಾಡಿಗೆ ಹೋಗಲಿ ; ನಿನ್ನ ಆಣತಿಯಿಂದ ದಂಡಕವೆಂಬ ಕಾಡಿನಲ್ಲಿ ಹನ್ನೆರಡುವರ್ಷಗಳ ಕಾಲ ವಾಸಮಾಡಲಿ ; ಭರತನಿಗೆ ಪಟ್ಟಾಭಿಷೇಕವೂ, ರಾಜ್ಯವೂ ಉಂಟಾಗುವುದು.’

೫೦–೫೧. ಆ ದಶರಥನು ಇಂತು ಭಯಂಕರವೂ, ಅಹಿತವೂ ಆದ ಕೈಕೇಯಿಯ ಮಾತನ್ನು ಕೇಳಿ, ಎಚ್ಚರಿಕೆಯಿಲ್ಲದೆ ನೆಲದ ಮೇಲೆ ಬಿದ್ದನು. ಆ ಕೈಕೇಯಿಯು ಅಲಂಕರಿಸಿಕೊಂಡವಳಾಗಿ, ಮಿಕ್ಕ ರಾತ್ರಿಯನ್ನು ಕಳೆದು, ಪ್ರಭಾತ ಕಾಲದಲ್ಲಿ ಸಂತಸದೊಡಗೂಡಿ, ದೂತನಾದ ಸುಮಂತ್ರನಿಗೆ ರಾಮನನ್ನು ಕರೆಸು ಕೊಂಡು ಬರುವಂತೆ ಹೇಳಿದಳು.

ರಾಮಸ್ತು ಕೃತಪುಣ್ಯಾಹಃ ಕೃತಸ್ವಸ್ತ್ಯಯನೋ ದ್ವಿಜೈಃ ।
ಯೋಗಮಂಡಪಮಧ್ಯಸ್ಥಃ ಶಂಖತೂರ್ಯರವಾನ್ವಿತಃ ॥ ೫೨ ॥

ತಮಾಸಾದ್ಯ ತತೋ ದೂತಃ ಪ್ರಣಿಪತ್ಯ ಪುರಃ ಸ್ಥಿತಃ ।
ರಾಮ ರಾಮ ಮಹಾಬಾಹೋ ಆಜ್ಞಾಪಯತಿ ತೇ ಪಿತಾ ॥ ೫೩ ॥

ದ್ರುತಮುತ್ತಿಷ್ಠ ಗಚ್ಛ ತ್ವಂ ಯತ್ರ ತಿಷ್ಠತಿ ತೇ ಪಿತಾ ।
ಇತ್ಯುಕ್ತಸ್ತೇನ ದೂತೇನ ಶೀಘ್ರಮುತ್ಥಾಯ ರಾಘವಃ ॥ ೫೪ ॥

ಅನುಜ್ಞಾಪ್ಯ ದ್ವಿಜಾನ್ ಯಾತಃ ಕೈಕೇಯ್ಯಾ ಭವನಂ ಪ್ರತಿ ।
ಪ್ರವಿಶಂತಂ ಗೃಹಂ ರಾಮಂ ಕೈಕೇಯೀ ಪ್ರಾಹ ನಿರ್ಘೃಣಾ ॥ ೫೫ ॥

ಪಿತುಸ್ತವ ಮತಂ ವತ್ಸ ಇದಂ ತೇ ಪ್ರಬ್ರವೀಮ್ಯಹಮ್ ।
ವನೇ ವಸ ಮಹಾಬಾಹೋ ಗತ್ವಾ ತ್ವಂ ದ್ವಾದಶಾಬ್ದಕಮ್ ॥ ೫೬ ॥

---

೫೨. ಶ್ರೀ ರಾಮನು ಪುಣ್ಯಾಹವನ್ನೂ, ಸ್ವಸ್ತ್ಯಯನವನ್ನೂ ಬ್ರಾಹ್ಮಣರಿಂದ ನೆರವೇರಿಸಿಕೊಂಡವನಾಗಿ, ಶಂಖತೂರ್ಯವಾದ್ಯಗಳು ಮೊಳಗುತ್ತಿರಲು, ಯಾಗ ಮಂಟಪದ ನಡುವೆ ಕುಳಿತಿದ್ದನು.

೫೩. ಬಳಿಕ ದೂತನು ಹತ್ತಿರಕ್ಕೆ ಬಂದು ಪೊಡಮಟ್ಟು, ಎದುರಿನಲ್ಲಿ ನಿಂತವನಾಗಿ "ರಾಮ ! ರಾಮ ! ಮಹಾಬಾಹುವೇ ! ನಿನ್ನ ತಂದೆಯು ಅಪ್ಪಣೆ ಮಾಡುತ್ತಾನೆ.

೫೪–೫೫. ಬೇಗನೆ ಏಳು ; ಎಲ್ಲಿ ನಿನ್ನ ತಂದೆಯಿರುವನೋ, ಅಲ್ಲಿಗೆ ಹೋಗು ;" ಎಂದು ದೂತನು ಹೇಳಲು, ರಾಘವನು ಬೇಗನೆದ್ದು, ಬ್ರಾಹ್ಮಣರ ಅನುಮತಿಯನ್ನು ಪಡೆದು, ಕೈಕೇಯಿಯ ಮನೆಗೆ ಹೋದನು. ನಿಷ್ಕರುಣೆಯಾದ ಕೈಕೇಯಿಯು ರಾಮನು ತನ್ನ ಮನೆಯನ್ನು ಪ್ರವೇಶಿಸುತ್ತಿರುವಾಗಲೇ, ಅವನಿಗೆ ಇಂತು ಹೇಳಿದಳು.

೫೬.-೫೭. 'ಎಲೈ ವತ್ಸನೇ ! ಕೇಳು ; ನಿನ್ನ ತಂದೆಗೆ ಇಷ್ಟವಾದ ಈ ಮಾತನ್ನು ನಾನು ನಿನಗೆ ಹೇಳುತ್ತೇನೆ ; ಎಲೈ ಮಹಾಬಾಹುವೇ ! ನೀನು ಕಾಡಿಗೆ ಹೋಗಿ, ಅಲ್ಲಿ ಹನ್ನೆರಡುವರ್ಷಗಳಕಾಲ ವಾಸಮಾಡು ; ಎಲೈ ವೀರನೇ ! ತಪ

ಅದ್ಯೈವ ಗಮ್ಯತಾಂ ವೀರ ತಪಸೇ ಧೃತಮಾನಸಃ ।
ನ ಚಿಂತ್ಯಮನ್ಯಥಾ ವತ್ಸ ಆದರಾತ್ಕುರು ಮೇ ವಚಃ ॥ ೫೭ ॥

ಏತಚ್ಛ್ರುತ್ವಾ ಪಿತುರ್ವಾಕ್ಯಂ ರಾಮಃ ಕಮಲಲೋಚನಃ ।
ತಥೇತ್ಯಾಜ್ಞಾಂ ಗೃಹೀತ್ವಾಽಸೌ ನಮಸ್ಕೃತ್ಯ ಚ ತಾವುಭೌ ॥ ೫೮ ॥

ನಿಷ್ಕ್ರಮ್ಯ ತದ್ಗೃಹಾದ್ರಾಮೋ ಧನುರಾದಾಯ ವೇಶ್ಮತಃ ।
ಕೌಸಲ್ಯಾಂ ಚ ನಮಸ್ಕೃತ್ಯ ಸುಮಿತ್ರಾಂ ಗಂತುಮುದ್ಯತಃ ॥ ೫೯ ॥

ತಚ್ಛ್ರುತ್ವಾ ತು ತತಃ ಪೌರಾಃ ದುಃಖಶೋಕಪರಿಪ್ಲುತಾಃ ।
ವಿವ್ಯಥುಶ್ಚಾಥ ಸೌಮಿತ್ರಿಃ ಕೈಕೇಯೀಂ ಪ್ರತಿ ರೋಷಿತಃ ॥ ೬೦ ॥

ತತಸ್ತಂ ರಾಘವಂ ದೃಷ್ಟ್ವಾ ಲಕ್ಷ್ಮಣಂ ರಕ್ತಲೋಚನಮ್ ।
ವಾರಯಾಮಾಸ ಧರ್ಮಜ್ಞೋ ಧರ್ಮವಾಗ್ಭಿರ್ಮಹಾಮತಿಃ ॥ ೬೧ ॥

ವನ್ನೈಸಗಲು ಮನಮೊಸೆದು ಇಂದೇ ಹೊರಡು ; ಎಲೈ ವತ್ಸನೇ ! ಬೇರೆ ಏನನ್ನೂ ಎಣಿಸಬೇಡ ; ನನ್ನ ನುಡಿಯನ್ನು ಸಡ್ಡೆಯಿಂದಾಚರಿಸು ;

೫೮-೫೯. ಇವು ನಿನ್ನ ತಂದೆಯ ನುಡಿಗಳು ;' ಎಂದು ಕೈಕೇಯಿಯು ಹೇಳಿದ ನುಡಿಯನ್ನು ಪುಂಡರೀಕಾಕ್ಷನಾದ ರಾಮನು ಕೇಳಿ, ಇವನೂ ' ಹಾಗೆಯೇ ಆಗಲಿ ;' ಎಂದು ಅಪ್ಪಣೆಯನ್ನು ಸ್ವೀಕರಿಸಿ, ಅವರೀರ್ವರಿಗೂ ನಮಸ್ಕರಿಸಿ, ಅರಮನೆಯಿಂದ ಹೊರಟು, ತನ್ನ ಮನೆಗೆ ಬಂದನು. ತರುವಾಯ ಬಿಲ್ಲನ್ನು ತೆಗೆದುಕೊಂಡು, ತನ್ನ ಮನೆಯಿಂದ ಹೊರಟು, ಕೌಸಲ್ಯಾ ಸುಮಿತ್ರೆಯರಿಗೆರಗಿ, ಅವನು ವನಕ್ಕೆ ಹೊರಡಲು ತೊಡಗಿದನು.

೬೦. ಪೌರರು ಆ ಸಂಗತಿಯನ್ನು ಕೇಳಿ, ದುಃಖಶೋಕದಿಂದ ತುಂಬಿದವ ರಾಗಿ, ವ್ಯಸನಪಟ್ಟರು. ಸುಮಿತ್ರಾ ಪುತ್ರನಾದ ಲಕ್ಷ್ಮಣನು ಕೈಕೇಯಿಗೆ ಕೋಪ ಗೊಂಡನು.

೬೧. ಅನಂತರದಲ್ಲಿ ಶ್ರೀರಾಮನು ಕಿಸುಗಣ್ಣಿನ ಆ ಲಕ್ಷ್ಮಣನನ್ನು ನೋಡಿ, ಧರ್ಮವನ್ನರಿತವನೂ, ಮಹಾಮತಿಯೂ, ಆದವನು ಧರ್ಮವಾಕ್ಯಗಳಿಂದ ಅವನನ್ನು ತಡೆದನು.

ತತಸ್ತು ತತ್ರ ಯೇ ವೃದ್ಧಾಸ್ತಾನ್ ಪ್ರಣಮ್ಯ ಮುನೀಂಶ್ಚ ಸಃ ।
ರಾಮೋ ರಥಂ ಖಿನ್ನಸೂತಂ ಪ್ರಸ್ಥಾನಾಯಾರುರೋಹ ವೈ ॥ ೬೨ ॥

ಆತ್ಮೀಯಂ ಸಕಲಂ ದ್ರವ್ಯಂ ಬ್ರಾಹ್ಮಣೇಭ್ಯೋ ನೃಪಾತ್ಮಜ ।
ಶ್ರದ್ಧಯಾ ಪರಯಾ ದತ್ವಾ ವಸ್ತ್ರಾಣಿ ವಿವಿಧಾನಿ ಚ ॥ ೬೩ ॥

ತಿಸ್ರಃ ಶ್ವಶ್ರೂಃ ಸಮಾಮಂತ್ರ್ಯ ಶ್ವಶುರಂ ಚ ವಿಸಂಜ್ಞಿಕಮ್ ।
ಮುಂಚಂತಮಶ್ರುಧಾರಾಣಿ ನೇತ್ರಯೋಃ ಶೋಕಜಾನಿ ಚ ॥ ೬೪ ॥

ಪಶ್ಯಂತೀ ಸರ್ವತಃ ಸೀತಾ ಚಾರುರೋಹ ತಥಾ ರಥಮ್ ।
ರಥಮಾರುಹ್ಯ ಗಚ್ಛಂತಂ ಸೀತಯಾ ಸಹ ರಾಘವಮ್ ॥ ೬೫ ॥

ದೃಷ್ಟ್ವಾ ಸುಮಿತ್ರಾ ವಚನಂ ಲಕ್ಷ್ಮಣಂ ಚಾಹ ದುಃಖಿತಾ ।
ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್ ॥ ೬೬ ॥

---

೬೨. ಬಳಿಕ ಆ ರಾಮನು ಅಲ್ಲಿದ್ದ ವೃದ್ಧರಾದವರನ್ನೂ, ಮುನಿಗಳನ್ನೂ ನಮಸ್ಕರಿಸಿ, ವನಕ್ಕೆ ತೆರಳಲು ದುಃಖಗೊಂಡ ಸೂತನುಳ್ಳ ತೇರನ್ನು ಹತ್ತಿದನು.

೬೩-೬೫. ರಾಜಕುವರಿಯಾದ ಸೀತಾದೇವಿಯು ತನ್ನದಾದ ಸಕಲ ದ್ರವ್ಯವನ್ನೂ, ವಿವಿಧಗಳಾದ ವಸ್ತ್ರಗಳನ್ನೂ, ಬ್ರಾಹ್ಮಣ ಬ್ರಾಹ್ಮಣಿಯರಿಗೆ ದಾನವಾಗಿ ಕಡುಸಡ್ಡೆಯಿಂದಿತ್ತು, ಮೂವರಾದ ಅತ್ತೆಯವರನ್ನೂ ಮಾತನಾಡಿಸಿ, ಅಪ್ಪಣೆ ಪಡೆದು, ಎಚ್ಚರಿಕೆಯಿಲ್ಲದೆ ದುಃಖದಿಂದುಂಟಾದ ಕಂಬನಿಗಳನ್ನು ಎಡಬಿಡದೆ ಮಳೆಗರೆಯುತ್ತಲಿದ್ದ, ಮಾವನಾದ ದಶರಥರಾಯನನ್ನೂ ಕಂಡು, ಹೊರಡಲು ಆಣತಿ ಬೇಡಿ ಸುತ್ತಲೂ ನೋಡುತ್ತಾ, ತಾನೂ ತೇರನ್ನು ಹಾಗೆಯೇ ಹತ್ತಿದಳು.

ಸೀತಾದೇವಿಯೊಡನೆ ತೇರನೇರಿ ಹೋಗುತ್ತಲಿದ್ದ ಶ್ರೀರಾಮನನ್ನು ನೋಡಿ, ಸುಮಿತ್ರೆಯು ಕಡುದುಮ್ಮಾನಗೊಂಡವಳಾಗಿ, ಲಕ್ಷ್ಮಣನಿಗೆ ಇಂತು ಹೇಳಿದಳು ;— 'ಎಲೈ ಮಗುವೇ ! ಶ್ರೀರಾಮನನ್ನು ದಶರಥನೆಂದು ಭಾವಿಸು ; ಸೀತಾದೇವಿಯನ್ನು

ಅಯೋಧ್ಯಾಮಟವೀಂ ವಿದ್ಧಿ ವ್ರಜ ತಾಭ್ಯಾಂ ಗುಣಾಕರ ।
ಮಾತ್ರೈವಮುಕ್ತೋ ಧರ್ಮಾತ್ಮಾ ಸ್ತನಕ್ಷೀರಾರ್ದ್ರದೇಹಯಾ ॥ ೬೭ ॥

ತಾಂ ನತ್ವಾ ಚಾರುಯಾನಂ ತಮಾರುರೋಹ ಸ ಲಕ್ಷ್ಮಣಃ ।
ಗಚ್ಛತೋ ಲಕ್ಷ್ಮಣೋ ಭ್ರಾತಾ ಸೀತಾ ಚೈವ ಪತಿವ್ರತಾ ॥ ೬೮ ॥

ರಾಮಸ್ಯ ಪೃಷ್ಠತೋ ಜಾತಾ ಪುರಾದ್ವೀರಾ ಮಹಾಮತೇ ।
ವಿಧಿಭಿನ್ನಾಭಿಷೇಕಂ ತಂ ರಾಮಂ ರಾಜೀವಲೋಚನಮ್ ॥ ೬೯ ॥

ಅಯೋಧ್ಯಾಯಾ ವಿನಿಷ್ಕ್ರಾಂತಮನುಯಾತಾಃ ಪುರೋಹಿತಾಃ ।
ಮಂತ್ರಿಣಃ ಪೌರಮುಖ್ಯಾಶ್ಚ ದುಃಖೇನ ಮಹತಾಽನ್ವಿತಾಃ ॥ ೭೦ ॥

ನಾನೆಂದು ಭಾವಿಸು; ಅಡವಿಯನ್ನು ಅಯೋಧ್ಯೆಯೆಂದು ತಿಳಿ; ಎಲೈ ಗುಣಾಕರನೇ ! ಅವರೀರ್ವರೊಡನೆ ಹೋಗಿ ಬಾ;' ಎಂದು ಮೊಲೆವಾಲಿನಿಂದ ನಾಂದೊಡಲಿನ ತಾಯಿಂದ ಹೇಳಿಸಿಕೊಂಡ, ಧರ್ಮಾತ್ಮನಾದ ಲಕ್ಷ್ಮಣನು ಆ ತಾಯಿಯನ್ನು ವಂದಿಸಿ, ಆ ಮನೋಹರವಾದ ತೇರನ್ನು ಹತ್ತಿದನು. ಇಂತು ಅನುಜನಾದ ಲಕ್ಷ್ಮಣನೂ, ಹದಿಬದೆಯಾದ ಸೀತಾದೇವಿಯೂ ಶ್ರೀರಾಮನನ್ನು ಅನುಸರಿಸಿ ಹೊರಟರು.

೬೯–೭೦. ಎಲೈ ಮಹಾಮತಿಯಾದ ಸಹಸ್ರಾನೀಕರಾಯನೇ! ಕೇಳು; ಪನ್ನತಿಕೆಯುಳ್ಳವರು ಪಟ್ಟಣದಿಂದ ಶ್ರೀರಾಮನ ಹಿಂಭಾಗದಲ್ಲಿಯೇ ಇದ್ದರು. ದುರ್ದೈವದಿಂದ ಪಟ್ಟಾಭಿಷೇಕವು ಬನ್ನಗೊಂಡು, ಅಯೋಧ್ಯೆಯಿಂದ ಹೊರಗೆ ಹೋಗುತ್ತಲಿದ್ದ ಆ ಪುಂಡರೀಕಾಕ್ಷನಾದ ಶ್ರೀರಾಮನನ್ನು ಪುರೋಹಿತರು, ಮಂತ್ರಿಗಳು, ಮತ್ತು ಪೌರಮುಖ್ಯರು ಬಹುವಾದ ದುಃಖದಿಂದ ಕೂಡಿದವರಾಗಿ, ಹಿಂಬಾಲಿಸಿ ಹೊರಟರು.

ಆದೇಶಂ ಪ್ರಾಪ್ಯ ಗಚ್ಛಂತಂ ರಾಮಮೂಚುರಿದಂ ವಚಃ ।
ರಾಮ ರಾಮ ಮಹಾಬಾಹೋ ಗಂತುಂ ನಾರ್ಹಸಿ ಶೋಭನ ॥ ೭೧ ॥

ರಾಜನ್ನತ್ರ ನಿವರ್ತಸ್ವ ವಿಹಾಯಾಸ್ಮಾನ್ ಕ್ವ ಗಚ್ಛಸಿ ।
ಇತ್ಯುಕ್ತೋ ರಾಘವಸ್ತೈಸ್ತು ತಾನುವಾಚ ದೃಢವ್ರತಃ ॥ ೭೨ ॥

ಗಚ್ಛಧ್ವಂ ಮಂತ್ರಿಣಃ ಪೌರಾ ಗಚ್ಛಧ್ವಂ ಚ ಪುರೋಧಸಃ ।
ಪಿತ್ರಾದೇಶಂ ಮಯಾ ಕಾರ್ಯಮಭಿಯಾಸ್ಯಾಮಿ ವೈ ವನಮ್ ॥ ೭೩ ॥

ದ್ವಾದಶಾಬ್ದವ್ರತಂ ಚೈತನ್ನೀತ್ವಾಹಂ ದಂಡಕೇ ವನೇ ।
ಆಗಚ್ಛಾಮಿ ಪಿತುಃ ಪಾದಂ ಮಾತ್ವಾಣಾಂ ದ್ರಷ್ಟುಮೋಜಸಾ ॥ ೭೪ ॥

ಇತ್ಯುಕ್ತ್ವಾ ತಾನ್ ಜಗಾಮಾಥ ರಾಮಃ ಸತ್ಯಪರಾಯಣಃ ।
ತಂ ಗಚ್ಛಂತಂ ಪುನರ್ಯಾತಾ ಪೃಷ್ಠತೋ ದುಃಖಿತೋ ಜನಾಃ ॥ ೭೫ ॥

ಅಲ್ಲದೆ ಅವರ ಅನುಜ್ಞೆಯನ್ನೂ ಪಡೆದು ಹೋಗುತ್ತಲಿದ್ದ ಶ್ರೀರಾಮನಿಗೆ ಈ ಮಾತನ್ನು ಹೇಳಿದರು;—'ಎಲೈ ಮಹಾಬಾಹುವಾದ ಶ್ರೀರಾಮನೇ! ಶೋಭನನೇ! ನೀನು ಹೋಗುವುದು ಸರಿಯಲ್ಲ; ಎಲೈ ರಾಯನೇ! ಹಿಂತಿರುಗು; ನಮ್ಮನ್ನು ಬಿಟ್ಟು ಎಲ್ಲಿಗೆ ಹೋಗುವೆ? ಈ ರೀತಿಯಾಗಿ ಅವರು ಹೇಳಲು, ದೃಢವ್ರತನಾದ ರಾಮನು ಅವರಿಗೆ ಹೀಗೆ ಹೇಳಿದನು;—

೭೩. ಎಲೈ ಮಂತ್ರಿಗಳಿರಾ! ಹಿಂದಿರುಗಿ ಹೋಗಿರಿ; ಎಲೈ ಪೌರರೇ! ಪುರೋಹಿತರೇ! ಹೋಗಿರಿ; ತಂದೆಯ ಅಪ್ಪಣೆಯನ್ನು ನಾನು ನಡೆಸಬೇಕು; ಕಾಡಿಗೆ ಹೋಗುವೆನು;

೭೪-೭೫. ನಾನು ಈ ಹನ್ನೆರಡುವರ್ಷಗಳ ವ್ರತವನ್ನು ದಂಡಕಾರಣ್ಯದಲ್ಲಿ ಕಳೆದು, ತಂದೆಯ ಮತ್ತು ತಾಯಂದಿರ ಪಾದಗಳನ್ನು ದರ್ಶನಮಾಡಲು ಉತ್ಸಾಹದಿಂದ ಬರುವೆನು;' ಎಂದು ಸತ್ಯದಲ್ಲಿ ಅತ್ಯಂತಾಸಕ್ತನಾದ ಶ್ರೀರಾಮನು ಅವರಿಗೆ ಹೇಳಿ, ಬಳಿಕ ಮುಂದೆ ಹೊರಟನು. ದುಃಖಗೊಂಡ ಜನರು ಮತ್ತೂ ಅಂತು ಹೋಗುತ್ತಲಿದ್ದ ಅವನನ್ನು ಬೆನ್ಹತ್ತಿಹೋದರು.

ಪುನಃ ಪ್ರಾಹ ಸ ಕಾಕುಸ್ಥೋ ಗಚ್ಛಧ್ವಂ ನಗರೀಮಿಮಾಮ್ ।
ಮಾತ್ರಶ್ಚ ಪಿತರಂ ಚೈವ ಶತ್ರುಘ್ನಂ ನಗರೀಮಿಮಾಮ್ ॥ ೭೬ ॥

ಪ್ರಜಾಸ್ಸಮಸ್ತಾಸ್ತತ್ರಸ್ಥಾ ರಾಜ್ಯಂ ಭರತಮೇವ ಚ ।
ಪಾಲಯಧ್ವಂ ಮಹಾಭಾಗಾಸ್ತಪಸೇ ಯಾಮ್ಯಹಂ ವನಮ್ ॥ ೭೭ ॥

ಅಥ ಲಕ್ಷ್ಮಣಮಾಹೇದಂ ವಚನಂ ರಾಘವಸ್ತದಾ ।
ಸೀತಾಮರ್ಪಯ ರಾಜಾನಂ ಜನಕಂ ಮಿಥಿಲೇಶ್ವರಮ್ ॥ ೭೮ ॥

ಪಿತೃಮಾತೃವಶೇ ತಿಷ್ಠ ಗಚ್ಛ ಲಕ್ಷ್ಮಣ ಯಾಮ್ಯಹಮ್ ।
ಇತ್ಯುಕ್ತಃ ಪ್ರಾಹ ಧರ್ಮಾತ್ಮಾ ಲಕ್ಷ್ಮಣೋ ಭ್ರಾತೃವತ್ಸಲಃ ॥ ೭೯ ॥

ನೈವಮಾಜ್ಞಾಪಯ ವಿಭೋ ಮಾಮದ್ಯ ಕರುಣಾಕರ ।
ಗಂತುಮಿಚ್ಛಸಿ ಯತ್ರ ತ್ವಮವಶ್ಯಂ ತತ್ರಯಾಮ್ಯಹಮ್ ॥ ೮೦ ॥

೭೬-೭೭. ಆ ಕಕುಸ್ಥವಂಶಜನಾದ ಶ್ರೀರಾಮನು ಮತ್ತೂ ಹೇಳಿದನು;— 'ಎಲೈ ತಾಯ್ತಿರಾ! ತಂದೆಯೇ! ಶತ್ರುಘ್ನನೇ! ನೀವೆಲ್ಲರೂ ಅಯೋಧ್ಯಾಪಟ್ಟಣಕ್ಕೆ ಹೋಗಿರಿ; ಎಲೈ ಅಶೇಷ ಪ್ರಜೆಗಳಿರಾ! ಪುಣ್ಯಾತ್ಮರಾದ ನೀವೆಲ್ಲರೂ ಅಯೋಧ್ಯೆಯಲ್ಲಿಯೇ ಇದ್ದು, ರಾಜ್ಯವನ್ನೂ, ಭರತನನ್ನೂ ರಕ್ಷಿಸಿರಿ; ನಾನು ತಪಸ್ಸಿಗಾಗಿ ಕಾಡಿಗೆ ಹೋಗುತ್ತೇನೆ.'

೭೮-೮೧. ಇಂತು ಹೇಳಿ, ಅನಂತರದಲ್ಲಿ ಆಗ ರಾಘವನು ಲಕ್ಷ್ಮಣನಿಗೆ ಈ ಮಾತನ್ನು ಹೇಳಿದನು;—'ಲಕ್ಷ್ಮಣನೇ! ಮಿಥಿಲೇಶ್ವರನಾದ ಜನಕರಾಯನಿಗೆ ಸೀತೆಯನ್ನೊಪ್ಪಿಸು; ನೀನು ತಾಯಿ ತಂದೆಗಳ ವಶದಲ್ಲಿರು; ನಾನು ವನಕ್ಕೆ ಹೋಗುವೆನು;' ಎಂದು ರಾಮನು ಹೇಳಲು, ಧರ್ಮಾತ್ಮನೂ, ಭ್ರಾತೃವತ್ಸಲನೂ, ಆದ ಲಕ್ಷ್ಮಣನು ಇಂತು ನುಡಿದನು; 'ಎಲೈ ಕರುಣಾಕರನಾದ ಸ್ವಾಮಿಯೇ! ಇಂದು ನನಗೆ ಹೀಗೆ ಅಪ್ಪಣೆ ಮಾಡಬೇಡ, ನೀನು ಎಲ್ಲಿಗೆ ಹೋಗಲಿಚ್ಛಿಸುವಿಯೋ, ನಾನೂ ಅಲ್ಲಿಗೆ ಅವಶ್ಯವಾಗಿ ಬರುತ್ತೇನೆ;' ಎಂದು ಲಕ್ಷ್ಮಣನು ಹೇಳಲು, ಅಲ್ಲಿ ಶ್ರೀರಾಮನು

ಇತ್ಯುಕ್ತೇ ಲಕ್ಷ್ಮಣೇ ತತ್ರ ಸೀತಾಂ ತಾಮಾಹ ರಾಘವಃ ।
ಸೀತೇ ಗಚ್ಛ ಮಮಾದೇಶಾತ್ಪಿತರಂ ಪ್ರತಿ ಶೋಭನಮ್ ॥
ಸುಮಿತ್ರಾಯಾ ಗೃಹೇ ಚಾಪಿ ಕೌಸಲ್ಯಾಯಾಃ ಸುಮಧ್ಯಮೇ ।
ನಿವಸಸ್ವ ಹಿ ತಾವತ್ತ್ವಂ ಯಾವದಾಗಮನಂ ಮಮ ।
ಇತ್ಯುಕ್ತೇ ರಾಘವೇ ತತ್ರ ಸೀತಾ ಪ್ರಾಹ ಕೃತಾಂಜಲಿಃ ।
ಯತ್ರ ಗತ್ವಾ ವನೇ ವಾಸಂ ತ್ವಂ ಕರೋಷಿ ಮಹಾಭುಜ ॥ ೮೧ ॥

ತತ್ರ ಗತ್ವಾ ತ್ವಯಾ ಸಾರ್ಧಂ ವಸಾಮ್ಯಹಮರಿಂದಮ ।
ವಿಯೋಗಂ ನೋ ಸಹೇ ರಾಜಂಸ್ತ್ವಯಾ ಸತ್ಯವತಾ ಕ್ವ ಚಿತ್ ॥ ೮೨ ॥

ಅತಃ ತ್ವಾಂ ಪ್ರಾರ್ಥಯಿಷ್ಯಾಮಿ ದಯಾಂ ಕುರು ಮಮ ಪ್ರಭೋ ।
ಗಂತುಮಿಚ್ಛಾಮಿ ಯತ್ರ ತ್ವಮವಶ್ಯಂ ತತ್ರ ಯಾಮ್ಯಹಮ್ ।
ನಾನಾಯಾನ್ಯೈರುಪಗತಾನ್ ಜನಾನ್ ವೀಕ್ಷ್ಯ ಸ ಪ್ರಪ್ಲುತಃ ॥ ೮೩ ॥

ಸೀತಾದೇವಿಗೆ ಹೀಗೆ ಹೇಳಿದನು; - 'ಎಲೌ ಸೀತೆ! ನನ್ನ ಅಪ್ಪಣೆಯಿಂದ ಶೋಭನನಾದ ನಿನ್ನ ತಂದೆಯೆಡಗೆ ಹೋಗು; ಸುಮಿತ್ರೆಯ ಗೃಹದಲ್ಲಾಗಲೀ, ಕೌಸಲ್ಯೆಯ ಮನೆಯಲ್ಲಾಗಲೀ, ನಾನು ಹಿಂತಿರುಗಿ ಬರುವವರಿವಿಗೂ, ವಾಸಮಾಡಿಕೊಂಡಿರು' ಎಂದು ರಾಘವನು ಹೇಳಲು, ಸೀತಾದೇವಿಯು ಕೈಮುಗಿದು, ಅಲ್ಲಿ ಶ್ರೀ ರಾಮನಿಗೆ ಬಿನ್ನವಿಸಿದಳು;—'ಎಲೈ ಮಹಾಭುಜನೇ! ನೀನು ಯಾವ ವನದಲ್ಲಿ ಹೋಗಿ ವಾಸಮಾಡುತ್ತೀಯೊ, ನಾನೂ ಅಲ್ಲಿಗೆ ನಿನ್ನೊಡನೇ ಬಂದು ವಾಸಮಾಡುತ್ತೇನೆ.

೮೨. ಎಲೈ ಅರಿಂದಮನಾದ ರಾಯನೇ! ಎಲ್ಲಿಯೂ ಸತ್ಯವಂತನಾದ ನಿನ್ನಿಂದ ವಿರಹವನ್ನು ಸಹಿಸಲಾರೆನು.

೮೩–೮೪. ಎಲೈ ಪ್ರಭುವೇ! ಆದುದರಿಂದ ನಿನ್ನನ್ನು ಬೇಡುವೆನು; ನನಗೆ ಕೃಪೆಮಾಡು; ನೀನು ಎಲ್ಲಿಗೆ ಹೊಗಲಿಚ್ಛಿಸುತ್ತೀಯೊ, ಅಲ್ಲಿಗೇ ನಾನೂ ಅವಶ್ಯ ಬರಲಿಚ್ಛಿಸುತ್ತೇನೆ (ಬರುತ್ತೇನೆ) ; ಎಂದು ಸೀತಾದೇವಿಯು ಬಿನ್ನವಿಸಿದಳು.

ಯೋಷಿತಾಂಶ್ಚ ಗಣಾನ್ ರಾಮೋ ವಾರಯಾಮಾಸ ಧರ್ಮವಿತ್ ।
ನಿವೃತ್ಯ ಸ್ಥೀಯತಾಂ ಸ್ವೈರಮಯೋಧ್ಯಾಯಾಂ ಜನಾಸ್ತ್ರಿಯಃ ॥ ೮೪ ॥

ಗತ್ವಾಽಹಂ ದಂಡಕಾರಣ್ಯಂ ತಪಸೇ ಧೃತ ಮಾನಸಃ ।
ಕತಿಪಯಾಬ್ದಾದಿಹಾಯಾಸ್ಯೇ ನಾನ್ಯಥಾ ಸತ್ಯಮೀರಿತಮ್ ॥ ೮೫ ॥

ಲಕ್ಷ್ಮಣೇನ ಸಹ ಭ್ರಾತ್ರಾ ವೇದೇಹ್ಯಾ ಚ ಸ್ವಭಾರ್ಯಯಾ ।
ಜನಾನ್ನಿವೃತ್ಯ ರಾಮೋಽಸೌ ಜಗಾಮ ಚ ಗುಹಾಶ್ರಮಮ್ ॥ ೮೬ ॥

ಗುಹಸ್ತು ರಾಮ ಭಕ್ತೋಽಸೌ ಸ್ವಭಾವಾದೇವ ವೈಷ್ಣವಃ ।
ಕೃತಾಂಜಲಿಪುಟೋ ಭೂತ್ವಾ ಕಿಂ ಕರ್ತವ್ಯಮಿತಿ ಸ್ಥಿತಃ ॥ ೮೭ ॥

ಬಳಿಕ ಶ್ರೀರಾಮನು ಹಿಂಭಾಗದಲ್ಲಿ ಅನೇಕ ತೆರನಾದ ಯಾನಗಳಿಂದ ಬಂದ ಜನರನ್ನು ನೋಡಿ, ಧರ್ಮಜ್ಞನು ಆ ಸ್ತ್ರೀಯರ ಗುಂಪುಗಳನ್ನು ತಡೆದನು. ‘ ಎಲೈ ಜನರೇ ! ಸ್ತ್ರೀಯರೇ ! ಹಿಂದಿರುಗಿ ಅಯೋಧ್ಯೆಯಲ್ಲಿ ಸ್ವೈರದಿಂದ ವಾಸಮಾಡಿರಿ ; ತಪವನ್ನಾಚರಿಸಲು ಮನ ಮಾಡಿರುವ ನಾನು ದಂಡಕಾರಣ್ಯಕ್ಕೆ ಹೋಗಿ, ಕೆಲವು ವರ್ಷಗಳಿಂದ ಇಲ್ಲಿಗೆ ಹಿಂದಿರುಗಿ ಬರುತ್ತೇನೆ. ಇದನ್ನು ವ್ಯತ್ಯಾಸಮಾಡುವುದಿಲ್ಲವು. ಸತ್ಯವಾಗಿ ಹೇಳಿದ್ದೇನೆ :’ ಎಂದು ಶ್ರೀರಾಮನು ನುಡಿದನು.

೮೬. ಈ ಶ್ರೀ ರಾಮನು ಜನಗಳನ್ನು ಹಿಂದಿರುಗಿಸಿ, ತಮ್ಮನಾದ ಲಕ್ಷ್ಮಣ ನಿಂದಲೂ , ತನ್ನ ಮಡದಿಯಾದ ವೈದೇಹಿಯಿಂದಲೂ ಕೂಡಿ, ಗುಹಾಶ್ರಮಕ್ಕೆ ಹೋದನು.

೮೭. ಹುಟ್ಟಿನಿಂದಲೇ ಶ್ರೀ ಮಹಾವಿಷ್ಣುಭಕ್ತನಾದ ಈ ಗುಹನು ಶ್ರೀ ರಾಮನಲ್ಲಿ ಭಕ್ತನಾಗಿ, ಕೈಯ ಬೊಗಸೆಯನ್ನು ಹಿಡಿದು, ‘ ಏನು ಮಾಡತಕ್ಕದ್ದು ? (ಏನಪ್ಪಣೆ?) ’ ಎಂದು ನಿಂತನು.

ಮಹತಾ ತಪಸಾ ನೀತಾ ಗುರುಣಾ ಯದಿ ವಃ ಪುರಾ ।
ಭಗೀರಥೇನ ಯಾ ಭೂಮಿಃ ಸರ್ವಪಾಪಹರಾ ಶುಭಾ ॥ ೮೮ ॥

ನಾನಾಮುನಿ ಜನೈರ್ದುಷ್ಟಾ ಕೂರ್ಮಮತ್ಸ್ಯಸಮಾಕುಲಾ ।
ಗಂಗಾ ತುಂಗೋರ್ಮಿಮಾಲಾಢ್ಯಾ ಸ್ಫಟಿಕಾಭಜಲಾವಹಾ ॥ ೮೯ ॥

ಗುಹೋಪನೀತನಾವಾ ತು ತಾಂ ಗಂಗಾಂ ಸ ಮಹಾದ್ಯುತಿಃ ।
ಉತ್ತೀರ್ಯ ಗತವಾನ್ ರಾಮೋ ಭಾರದ್ವಾಜಾಶ್ರಮಂ ಶುಭಂ ॥ ೯೦ ॥

ಪ್ರಯಾಗೇ ತು ತತಸ್ತಸ್ಮಿನ್ ಸ್ನಾತ್ವಾ ತೀರ್ಥೇ ಯಥಾವಿಧಿ ।
ಲಕ್ಷ್ಮಣೇನ ಸಹ ಭ್ರಾತ್ರಾ ರಾಘವಃ ಸೀತಯಾ ಸಹ ॥ ೯೧ ॥

ಭಾರದ್ವಾಜಾಶ್ರಮೇ ತತ್ರ ವಿಶ್ರಾಂತಸ್ತೇನ ಪೂಜಿತಃ ।
ತತಃ ಪ್ರಭಾತೇ ವಿಮಲೇ ತಮನುಜ್ಞಾಪ್ಯ ರಾಘವಃ ॥ ೯೨ ॥

೮೮–೯೦. ಪೂರ್ವದಲ್ಲಿ ನಿಮ್ಮ ಹಿರಿಯನಾದ ಭಗೀರಥ ಚಕ್ರವರ್ತಿಯಿಂದ ಅತಿಕಠಿನವಾದ ತಪಸ್ಸಿನಿಂದ ಸಕಲ ಪಾಪಗಳನ್ನೂ ಅಳಿಯಿಸುವ, ಕಲ್ಯಾಣ ಕರವಾದ, ಅನೇಕ ಋಷಿಗಳಿಂದ ಸೇವಿಸಲ್ಪಡುತ್ತಿರುವ, ಆಮೆ, ಮೀನುಗಳಿಂದ ತುಂಬಿದ, ಎತ್ತರದ ತೆರೆಗಳ ಸಾಲುಗಳಿಂದ ಕೂಡಿದ, ಪಟಿಕದ ಕಾಂತಿಯು ನೀರನ್ನು ಹೊಂದಿರುವ ಯಾವ ಗಂಗಾನದಿಯು ಭೂಮಿಗೆ ತರಲ್ಪಟ್ಟಿತೋ, ಆ ನದಿಯನ್ನು ಅತ್ಯಂತ ತೇಜಸ್ವಿಯಾದ ಆ ರಾಮನು ಗುಹನು ತಂದ ಹರಿಗೋಲಿನಿಂದ ದಾಟಿ, ಭಾರದ್ವಾಜ ಮುನಿಗಳ ಶುಭವಾದ ಆಶ್ರಮಕ್ಕೆ ಹೋದನು.

೯೧–೯೨. ಅನಂತರದಲ್ಲಿ ಶ್ರೀ ರಾಮನು ತಮ್ಮನಾದ ಲಕ್ಷ್ಮಣನಿಂದಲೂ, ಮಡದಿಯಾದ ಸೀತೆಯಿಂದಲೂ ಕೂಡಿ, ಆ ಪ್ರಯಾಗ ತೀರ್ಥದಲ್ಲಿ ವಿಧ್ಯನುಸಾರವಾಗಿ ಮಿಂದು, ಆ ಭರದ್ವಾಜಾಶ್ರಮದಲ್ಲಿ ಆ ಮುನಿಯಿಂದ ಸೇವೆಗೊಂಡು, ವಿಶ್ರಮಿಸಿ ಕೊಂಡು, ಬಳಿಕ ಮರುದಿವಸದಲ್ಲಿ ನಿರ್ಮಲವಾದ ಪ್ರಭಾತಕಾಲದಲ್ಲಿ ಆ ಮುನಿಯ

ಭರದ್ವಾಜೋಕ್ತಮಾರ್ಗೇಣ ಚಿತ್ರಕೂಟಂ ಶನೈರ್ಯಯೌ ।
ನಾನಾದ್ರುಮ ಲತಾಕೀರ್ಣಂ ಪುಣ್ಯತೀರ್ಥಮನುತ್ತಮಮ್ ॥ ೯೩ ॥

ತಾಪಸಂ ವೇಷಮಾಸ್ಥಾಯ ಜಹ್ನುಕನ್ಯಾಮತೀತ್ಯ ವೈ ।
ಗತೇ ರಾಮೇ ಸಭಾರ್ಯೇ ತು ಸಭ್ರಾತರಿ ಸಸಾರಥಿಃ ॥ ೯೪ ॥

ಅಯೋಧ್ಯಾಮವಸತ್ ಭೂಪ ನಷ್ಟಶೋಭಾಂ ಸುದುಃಖಿತಾಮ್ ।
ನಷ್ಟಸಂಜ್ಞೋ ದಶರಥಃ ಶ್ರುತ್ವಾ ವಚನಮಪ್ರಿಯಮ್ ॥ ೯೫ ॥

ರಾಮಪ್ರವಾಸ ಜನನಂ ಕೈಕೇಯ್ಯಾ ಮುಖನಿಃಸೃತಮ್ ।
ಲಬ್ಧಸಂಜ್ಞಃ ಕ್ಷಣಾದ್ರಾಜಾ ರಾಮರಾಮೇತಿ ಚುಕ್ರುಶೇ ॥ ೯೬ ॥

ಕೈಕೇಯ್ಯುವಾಚ ಭೂಪಾಲಂ ಭರತಂ ಚಾಭಿಷೇಚಯ ।
ಸೀತಾಲಕ್ಷ್ಮಣ ಸಂಯುಕ್ತೋ ರಾಮಚಂದ್ರೋ ವನಂ ಗತಃ ॥ ೯೭ ॥

ಅನುಮತಿಪಡೆದು, ಅನೇಕ ತೆರನಾದ ಮರ ಬಳ್ಳಿಗಳಿಂದ ವ್ಯಾಪ್ತವಾದ, ಅತ್ಯುತ್ತಮಗಳಾದ ಪುಣ್ಯತೀರ್ಥಗಳುಳ್ಳ ಚಿತ್ರಕೂಟಪರ್ವತಕ್ಕೆ ಮೆಲ್ಲನೆ ಹೋದನು.

೯೪–೯೬. ತನ್ನ ಮಡದಿ, ತಮ್ಮ ಮತ್ತು ಸಾರಥಿ–ಇವರೊಡಗೂಡಿದ ಶ್ರೀ ರಾಮನು ತಾಪಸವೇಷವನ್ನು ಹೊಂದಿ, ಜಹ್ನುಕನ್ನೆಯಾದ ಗಂಗೆಯನ್ನು ದಾಟಿ ಹೋಗಲು, ಎಲೈ ಸಹಸ್ರಾನೀಕನೇ ! ಕೇಳು ; ಕಾಂತಿಗುಂದಿದ, ಕಡುದುಕ್ಕದಿಂದ ಕೂಡಿದ, ಅಯೋಧ್ಯೆಯಲ್ಲಿದ್ದ ದಶರಥರಾಯನು ಶ್ರೀ ರಾಮನು ಪ್ರವಾಸಗೊಂಡುದರಿಂದುಂಟಾದ, ಕೈಕೇಯಿಯ ಬಾಯಿಂದ ಹೊರಟ, ಅಪ್ರಿಯದ ನುಡಿಯನ್ನು ಕೇಳಿ ಮೂರ್ಛೆಗೊಂಡಿದ್ದವನು, ಚಣದಿಂದ ಎಚ್ಚರಗೊಂಡವನು ಆದ ರಾಯನು ‘ ರಾಮ, ರಾಮ,’ ಎಂದು ಕೂಗಿಕೊಂಡನು.

೯೭. ಕೈಕೇಯಿಯು ಅರಸನಿಗೆ, ‘ ಸೀತಾಲಕ್ಷ್ಮಣರೊಡಗೂಡಿ ರಾಮನು ಕಾಡಿಗೆ ಹೋದನು. ಭರತನಿಗೆ ಪಟ್ಟಾಭಿಷೇಕ ಮಾಡಿಸು ; ’ ಎಂದು ಹೇಳಿದಳು.

ಪುತ್ರಶೋಕಾಭಿಸಂತಪ್ತೋ ರಾಜಾ ದಶರಥಸ್ತದಾ ।
ವಿಹಾಯ ದೇಹಂ ದುಃಖೇನ ದೇವಲೋಕಂ ಗತಸ್ತದಾ ॥ ೯೮ ॥

ತತಸ್ತಸ್ಯಾಂ ಮಹಾಪುರ್ಯಾಮಯೋಧ್ಯಾಯಾಮರಿಂದಮ ।
ರುರುದುರ್ದುಃಖಶೋಕಾರ್ತಾ ಜನಾಃ ಸರ್ವೇ ಚ ಯೋಷಿತಃ ॥ ೯೯ ॥

ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯೀ ಕಷ್ಟಕಾರಿಣೀ ।
ಪರಿವಾರ್ಯ ಮೃತಂ ತತ್ರ ರುರುದುಸ್ತಾಃ ಪತಿಂ ತತಃ ॥ ೧೦೦ ॥

ತತಃ ಪುರೋಹಿತಸ್ತತ್ರ ವಸಿಷ್ಠಃ ಸರ್ವ ಧರ್ಮವಿತ್ ।
ತೈಲದ್ರೋಣ್ಯಾಂ ವಿನಿಕ್ಷಿಪ್ಯ ಮೃತಂ ರಾಜಕಲೇವರಮ್ ॥ ೧೦೧ ॥

---

೯೮. ಮಗನಾದ ರಾಮನ ವಿರಹ ಶೋಕದಿಂದ ಬೆಂದ ದಶರಥರಾಯನು ದುಃಖದಿಂದ ದೇಹವನ್ನು ಬಿಟ್ಟು, ಆಗ ದೇವಲೋಕಕ್ಕೆ ಹೋದನು.

೯೯. ಎಲೈ ಶತ್ರುನಾಶಕನಾದ ಸಹಸ್ರಾನೀಕನೇ! ಕೇಳು; ಅನಂತರದಲ್ಲಿ ಮಹಾಪಟ್ಟಣವಾದ ಆ ಅಯೋಧ್ಯೆಯಲ್ಲಿ ಎಲ್ಲ ಸ್ತ್ರೀ ಪುರುಷರೂ ದುಃಖ ಶೋಕಗಳಿಂದ ಪೀಡಿತರಾಗಿ ಅತ್ತರು.

೧೦೦. ಬಳಿಕ ಆ ಕೌಸಲ್ಯೆ, ಸುಮಿತ್ರೆ, ಈ ಕ್ಲೇಶವನ್ನೆಸಗಿದ ಕೈಕೇಯಿ ಈ ಮೂವರೂ ಸತ್ತ ಪತಿಯನ್ನು ಸುತ್ತಿಕೊಂಡು ಅಲ್ಲಿ ಅತ್ತರು.

೧೦೧-೧೦೩. ತರುವಾಯದಲ್ಲಿ ಅಲ್ಲಿ ಸಕಲ ಧರ್ಮವನ್ನೂ ತಿಳಿದ ಪುರೋಹಿತನಾದ ವಸಿಷ್ಠನು ಮೃತವಾದ ರಾಯನ ಒಡಲನ್ನು ಎಣ್ಣೆಯ ದೋಣಿಯಲ್ಲಿ ಹಾಕಿಸಿ, ದೂತನನ್ನು ಭರತನಿರುವೆಡೆಗೆ ಕಳುಹಿಸಿ, ಮಂತ್ರಿಗಳ ಸಮುದಾಯದಿಂದ ಆಲೋಚನೆಯಲ್ಲಿ ಇದ್ದನು. ಆ ದೂತನು ಯಾವ ಮಾವನ ಮನೆಯಲ್ಲಿ

ದೂತಂ ವೈ ಪ್ರೇಷಯಾಮಾಸ ಸಹ ಮಂತ್ರಿಗಣೈಃ ಸ್ಥಿತಃ ।
ಸ ಗತ್ವಾ ಯತ್ರ ಭರತಃ ಶತ್ರುಘ್ನೇನ ಸಹ ಸ್ಥಿತಃ ॥ ೧೦೨ ॥

ತದನುಕ್ತ್ವಾ ಯಥಾವೃತ್ತಂ ಸ ನಿವೃತ್ತಂ ಮಹೀಪತಿಮ್ ।
ತಾವಾನೀಯ ತತಃ ಶೀಘ್ರಮಯೋಧ್ಯಾಂ ಪುನರಾಗತಃ ॥ ೧೦೩ ॥

ಕ್ರೂರಾಣಿ ದೃಷ್ಟ್ವಾ ಭರತೋ ನಿಮಿತ್ತಾನಿ ಚ ವೈ ಪಥಿ ।
ವಿಪರೀತಂ ತ್ವಯೋಧ್ಯಾಯಾಮಿತಿ ಮೇನೇ ಸ ಪಾರ್ಥಿವಃ ॥ ೧೦೪ ॥

ನಿಃಶೋಭಾಂ ನಿರ್ಗತಶ್ರೀಕಾಂ ದುಃಖ ಶೋಕಾನ್ವಿತಾಂ ಪುರೀಮ್ ।
ಕೈಕೇಯ್ಯಗ್ನಿವಿನಿರ್ದಗ್ಧಾಮ ಯೋಧ್ಯಾಂ ಪ್ರವಿವೇಶ ಸಃ ॥ ೧೦೫ ॥

ದುಃಖಾನ್ವಿತಾ ಜನಾಃ ಸರ್ವೇ ತೌ ದೃಷ್ಟ್ವಾ ರುರುದುರ್ಭೃಶಮ್ ।
ಹಾ ತಾತ ರಾಮ ಸೀತೇತಿ ಲಕ್ಷ್ಮಣೇತಿ ಪುನಃ ಪುನಃ ॥ ೧೦೬ ॥

ಭರತನು ಶತ್ರುಘ್ನನೊಡನೆ ಇದ್ದನೋ, ಅಲ್ಲಿಗೆ ಹೋಗಿ, ದಶರಥರಾಯನು ಮರಣ ಹೊಂದಿದ, ನಡೆದ ಸಂಗತಿಯನ್ನರುಹದೆ, ಬಳಿಕ ಭರತಶತ್ರುಘ್ನರೀರ್ವರನ್ನೂ ಕರೆದುಕೊಂಡು ಬೇಗನೆ ಅಯೋಧ್ಯೆಗೆ ಹಿಂದಿರುಗಿ ಬಂದನು.

೧೦೪. ಆ ಭರತರಾಯನು ಹಾದಿಯಲ್ಲಿ ಕ್ರೂರಗಳಾದ ದುರ್ನಿಮಿತ್ತಗಳನ್ನು ಕಂಡು, ಅಯೋಧ್ಯೆಯಲ್ಲಿ ಏನೋ ಅನಿಷ್ಟವಾಗಿರುವುದೆಂದು ತಿಳಿದನು.

೧೦೫. ಬಳಿಕ ಆ ಭರತನು ಶೋಭಾರಹಿತವೂ, ಅಳಿದ ಸಿರಿಯುಳ್ಳುದೂ, ದುಃಖಶೋಕಗಳಿಂದ ತುಂಬಿದುದೂ, “ ಕೈಕೇಯಿ ” ಯೆಂಬ ಬೆಂಕಿಯಿಂದ ಸುಡಲ್ಪಟ್ಟುದೂ, ಆದ ಅಯೋಧ್ಯಾ ನಗರಿಯನ್ನು ಪ್ರವೇಸಿಸಿದನು.

೧೦೬. ದುಃಖದಿಂದ ಕೂಡಿದ, ಅಯೋಧ್ಯಾ ನಿವಾಸಿಗಳಾದ ಜನರೆಲ್ಲರೂ ಅವರೀರ್ವರನ್ನೂ ನೋಡಿ, ಪದೇ ಪದೇ ‘ ಹಾ ತಾತಾ ! ರಾಮ ! ಹಾ ಸೀತೆ ! ಹಾ ಲಕ್ಷ್ಮಣ ! ’ ಎಂದು ಕೂಗುತ್ತಾ ಬಹುವಾಗಿ ಅತ್ತರು.

ರುರೋದ ಭರತಸ್ತತ್ರ ಶತ್ರುಘ್ನಶ್ಚ ಸುದುಃಖಿತಃ ।
ಕೈಕೇಯ್ಯಾ ತತ್ಕ್ಷಣಾಚ್ಛ್ರುತ್ವಾ ಚುಕ್ರೋಧ ಭರತಸ್ತದಾ ॥ ೧೦೭ ॥

ದುಷ್ಟಾ ತ್ವಂ ದುಷ್ಟಚಿತ್ತಾ ಚ ಯಯಾ ರಾಮಃ ಪ್ರವಾಸಿತಃ ।
ಲಕ್ಷ್ಮಣೇನ ಸಹ ಭ್ರಾತ್ರಾ ರಾಘವಃ ಸೀತಯಾ ವನಮ್ ॥ ೧೦೮ ॥

ಸಾಹಸಂ ಕಿಂ ಕೃತಂ ದುಷ್ಟೇ ತ್ವಯಾ ಸದ್ಯೋಽಲ್ಪಭಾಗ್ಯಯಾ ।
ಉದ್ವಾಸ್ಯ ಸೀತಯಾ ರಾಮಂ ಲಕ್ಷ್ಮಣೇನ ಮಹಾತ್ಮನಾ ॥ ೧೦೯ ॥

ಮನ್ಯೈವ ಪುತ್ರಂ ರಾಜಾನಂ ಕರೋತ್ವಿತಿ ಮತಿಸ್ತವ ।
ದುಷ್ಟಾಯಾ ನಷ್ಟಭಾಗ್ಯಾಯಾಃ ಪುತ್ರೋಽಹಂ ಭಾಗ್ಯವರ್ಜಿತಃ ।
ಭ್ರಾತ್ರಾ ರಾಮೇಣ ರಹಿತೋ ನಾಹಂ ರಾಜ್ಯಂ ಕರೋಮಿ ವೈ ॥ ೧೧೦ ॥

---

೧೦೭. ಅಲ್ಲಿ ಭರತನೂ, ಶತ್ರುಘ್ನನೂ ಬಹು ದುಃಖಗೊಂಡವರಾಗಿ, ಅತ್ತರು. ಭರತನು ತಾಯಿಯಾದ ಕೈಕೇಯಿಯಿಂದ ಆ ವೃತ್ತಾಂತವನ್ನೆಲ್ಲಾ ಆ ಚಣದಲ್ಲಿ ತಿಳಿದು, ಆಗ ಕೋಪಗೊಂಡವನಾದನು.

೧೦೮. 'ಎಲೌ ಜನನೀ! ನೀನು ದುಷ್ಟೆ ಮತ್ತು ದುಷ್ಟಚಿತ್ತೆಯು. ಯಾವ ನೀನು ತಮ್ಮನಾದ ಲಕ್ಷ್ಮಣನೊಡನೆಯೂ, ಮಡದಿಯಾದ ಸೀತಾದೇವಿಯೊಡನೆಯೂ ಶ್ರೀರಾಮನನ್ನು ಕಾಡಿಗೆ ಅಟ್ಟಿದೆ.

೧೦೯. ಎಲೌ ದುಷ್ಟೆ! ಮಂದಭಾಗ್ಯಳಾದ ನೀನು ಮಹಾತ್ಮರಾದ ಸೀತಾ ಲಕ್ಷ್ಮಣರೊಡನೆ ಶ್ರೀರಾಮನನ್ನು ಅಟ್ಟಿ, ಈಗ ಏನು ಸಾಹಸ ಮಾಡಿದೆ.

೧೧೦. 'ನನ್ನ ಮಗನನ್ನೇ ದೊರೆಯನ್ನಾಗಿ ಮಾಡಬೇಂದು ನಿನ್ನ ಯೋಚನೆಯು ಇದ್ದಿತು. ಅಳಿದ ಭಾಗ್ಯದ, ದುಷ್ಟೆಯ ಮಗನಾದ, ನಾನು ಭಾಗ್ಯಹೀನನು; ಅಣ್ಣನಾದ ರಾಮನಿಲ್ಲದೆ ನಾನು ರಾಜ್ಯವನ್ನಾಳುವುದಿಲ್ಲವಷ್ಟೆ!

ಯತ್ರ ರಾಮೋ ನರವ್ಯಾಘ್ರಃ ಪದ್ಮಪತ್ರಾಯತೇಕ್ಷಣಃ ।
ಧರ್ಮಜ್ಞಃ ಸರ್ವಶಾಸ್ತ್ರಜ್ಞೋ ಮತಿಮಾನ್ ಬಂಧುವತ್ಸಲಃ ॥ ೧೧೧ ॥

ಸೀತಾ ಚ ಯತ್ರ ವೈದೇಹೀ ನಿಯಮವ್ರತಚಾರಿಣೀ ।
ಪತಿವ್ರತಾ ಮಹಾಭಾಗಾ ಸರ್ವಲಕ್ಷಣಸಂಯುತಾ ॥ ೧೧೨ ॥

ರಾಮ ಏವ ಮಮ ಭ್ರಾತಾ ಜ್ಯೇಷ್ಠೋ ಮತಿಮತಾಂ ವರಃ ।
ಲಕ್ಷ್ಮಣಶ್ಚ ಮಹಾವೀರ್ಯೋ ಗುಣವಾನ್ ಭ್ರಾತೃವತ್ಸಲಃ ।
ತತ್ರ ಯಾಸ್ಯಾಮಿ ಕೈಕೇಯಿ ಮಹತ್ಪಾಪಂ ತ್ವಯಾ ಕೃತಮ್ ॥ ೧೧೩ ॥

ಸ ಏವ ರಾಜಾ ದುಶ್ಚೇಷ್ಟೇ ಭೃತ್ಯೋಽಹಂ ತಸ್ಯ ವೈ ಸದಾ ॥ ೧೧೪ ॥

೧೧೧–೧೧೩. ಎಲೌ ಕೈಕೇಯಿಯೇ! ಪುರುಷಶ್ರೇಷ್ಠನೂ, ತಾವರೆಯ ರೇಕಿನಂತೆ ಅಗಲಿತಾದ ಕಣ್ಗಳುಳ್ಳವನೂ, ಧರ್ಮಚರಿತನನೂ, ಎಲ್ಲಾ ಶಾಸ್ತ್ರಗಳನ್ನೂ ತಿಳಿದವನೂ, ವಿವೇಕಿಯೂ, ನಂಟರಲ್ಲಿ ನೇಹವುಳ್ಳವನೂ, ಆದ ರಾಮನೆಲ್ಲಿರುವನೋ, ವಿದೇಹರಾಯ ಕುವರಿಯೂ, ನೇಮವ್ರತಗಳೆಸಗುವವಳೂ, ಹದಿಬದೆಯೂ, ಅತ್ಯಂತ ಪುಣ್ಯವತಿಯೂ, ಸಕಲವಾದ ಉತ್ತಮ ಸ್ತ್ರೀ ಲಕ್ಷಣಗಳುಳ್ಳವಳೂ ಆದ ಸೀತಾದೇವಿಯು ಎಲ್ಲಿರುವಳೋ, ಕಡುಪನ್ನತಿಕೆಯವನೂ, ಗುಣವಂತನೂ, ಅಣ್ಣನಲ್ಲಿ ಪ್ರೀತಿಯಿರುವವನೂ ಆದ ಲಕ್ಷ್ಮಣನು ಎಲ್ಲಿ ಇರುವನೋ, ನಾನೂ ಅಲ್ಲಿಗೆ ಹೋಗುವೆನು. ನೀನು ಮಹತ್ಪಾಪವನ್ನೆಸಗಿದೆ.

೧೧೪. ಎಲೌ ಅಳಿಮನಸವಳೇ! ನನ್ನ ಹಿರಿಯ ಅಣ್ಣನೂ, ಮತಿವಂತರಲ್ಲಿ ಶ್ರೇಷ್ಠನೂ ಆದ ಶ್ರೀರಾಮನೇ ರಾಯನು; ನಾನು ಯಾವಾಗಲೂ ಆತನ ಸೇವಕನು.

ಇತ್ಯುಕ್ತ್ವಾ ಮಾತರಂ ತತ್ರ ರುರೋದ ಭೃಶದುಃಖಿತಃ ।
ಹಾ ರಾಜನ್ ಪೃಥಿವೀಪಾಲ ಮಾಂ ವಿಹಾಯ ಸುದುಃಖಿತಮ್ ॥ ೧೧೫ ॥

ಕ್ವ ಗತೋಽಸ್ಯದ್ಯ ವೈ ತಾತ ಕಿಂ ಕರೋಮೀಹ ತದ್ವದ ।
ಭ್ರಾತಾ ಪಿತ್ರಾ ಸಮಃ ಕ್ವಾಸ್ತೇ ಜ್ಯೇಷ್ಠೋ ಮೇ ಕರುಣಾಕರಃ ॥ ೧೧೬ ॥

ಸೀತಾ ಚ ಮಾತೃ ತುಲ್ಯಾ ಮೇ ಕ್ವ ಗತೋ ಲಕ್ಷ್ಮಣಶ್ಚ ಹ ।
ಇತ್ಯೇವಂ ವಿಲಪಂತಂ ತಂ ಭರತಂ ಮಂತ್ರಿಭಿಃ ಸಹ ॥ ೧೧೭ ॥

ವಸಿಷ್ಠೋ ಭಗವಾನಾಹ ಕಾಲಕರ್ಮವಿಭಾಗವಿತ್ ।
ಉತ್ತಿಷ್ಠೋತ್ತಿಷ್ಠ ವತ್ಸ ತ್ವಂ ನ ಶೋಕಂ ಕರ್ತುಮರ್ಹಸಿ ॥ ೧೧೮ ॥

ಕರ್ಮಕಾಲವಶಾದೇವ ಪಿತಾ ತೇ ಸ್ವರ್ಗಮಾಸ್ಥಿತಃ ।
ತಸ್ಯ ಸಂಸ್ಕಾರಕಾರ್ಯಾಣಿ ಕರ್ಮಾಣಿ ಕುರು ಶೋಭನ ॥ ೧೧೯ ॥

೧೧೫-೧೧೬. ಅಲ್ಲಿ ಭರತನು ಇಂತು ತಾಯಿಗೆ ಹೇಳಿ, ಅತ್ಯಂತ ದುಃಖಗೊಂಡು ಅತ್ತನು. 'ಎಲೈ ಪೊಡವಿಯ ರಕ್ಷಕನೇ! ರಾಯನೇ! ಬಹುದುಃಖಗೊಂಡ ನನ್ನನ್ನುಳಿದು ಇಂದು ಎಲ್ಲಿಗೆ ಹೋದೆ? ಇಲ್ಲಿ ನಾನೇನು ಮಾಡಲಿ? ಅದನ್ನರುಹು; ತಂದೆಗೆಣೆಯನೂ, ದಯಾಶಾಲಿಯೂ, ಆದ ನನ್ನ ಹಿರಿಯನಾದ ಅಣ್ಣನೆಲ್ಲಿರುವನು.

೧೧೭. ತಾಯಿಗೆ ಸದೃಶಳಾದ ಸೀತಾದೇವಿಯೂ ಲಕ್ಷ್ಮಣನೂ ಎಲ್ಲಿ ಹೋದರು?' ಇದೇ ಮೊದಲಾಗಿ ಹೇಳುತ್ತಾ ಅಳುತ್ತಲಿದ್ದ ಭರತನಿಗೆ ಕಾಲಕರ್ಮಗಳ ಹಂಚಿಕೆಯನ್ನರಿತ, ಭಗವಂತನಾದ ವಸಿಷ್ಠನು ಮಂತ್ರಿಗಳೊಡಗೂಡಿ 'ಎಲೈ ವತ್ಸ! ಏಳು, ಏಳು; ನೀನು ದುಃಖಪಡುವುದುಚಿತವಲ್ಲವು.

೧೧೯. ನಿನ್ನ ತಂದೆಯು ಕರ್ಮ ಮತ್ತು ಕಾಲ (ತನ್ನಿಯಾಮಕನಾದ ಭಗವಂತ) ಇವುಗಳಿಗೆ ಅಧೀನನಾಗಿ ಸ್ವರ್ಗವನ್ನೆಯ್ದಿದನು. ಎಲೈ ಮಂಗಳ ಸ್ವರೂಪನೇ! ಆತನಿಗೆ ಮಾಡಬೇಕಾದ ಸಂಸ್ಕಾರ ಕರ್ಮಗಳನ್ನೆಸಗು.

ರಾಮೋಽಪಿ ದುಷ್ಟನಾಶಾಯ ಶಿಷ್ಟಾನಾಂ ಪಾಲನಾಯ ಚ ।
ಅವತೀರ್ಣೋ ಜಗತ್ಸ್ವಾಮೀ ಸ್ವಾಂಶೇನ ಭುವಿ ಮಾಧವಃ ॥ ೧೨೦ ॥

ಪ್ರಾಯಸ್ತತ್ರಾಸ್ತಿ ರಾಮೇಣ ಕರ್ತವ್ಯಂ ಲಕ್ಷ್ಮಣೇನ ಚ ।
ಯತ್ರಾಸೌ ಭಗವಾನ್ ವೀರಃ ಕರ್ಮಣಾ ತೇನ ಚೋದಿತಃ ॥ ೧೨೧ ॥

ತತ್ಕೃತ್ವಾ ಪುನರಾಯಾತಿ ರಾಮಃ ಕಮಲ ಲೋಚನಃ ।
ಇತ್ಯುಕ್ತೋ ಭರತಸ್ತೇನ ವಸಿಷ್ಠೇನ ಮಹಾತ್ಮನಾ ॥ ೧೨೨ ॥

ಸಂಸ್ಕಾರಂ ಲಂಭಯಾಮಾಸ ವಿಧಿದೃಷ್ಟೇನ ಕರ್ಮಣಾ ।
ಅಗ್ನಿಹೋತ್ರಾಗ್ನಿನಾ ದಗ್ಧ್ವಾ ಪಿತುರ್ದೇಹಂ ವಿಧಾನತಃ ॥ ೧೨೩ ॥

---

೧೨೦. ಶ್ರೀರಾಮನೂ ದುಷ್ಟರ ನಾಶಕ್ಕೂ, ಶಿಷ್ಟರ ರಕ್ಷಣೆಗೂ ಸ್ವರೂಪಾಂಶದಿಂದ ಭೂಲೋಕದಲ್ಲಿ ಅವತಾರ ರೂಪದಿಂದ ಆವಿರ್ಭವಿಸಿರುವ, ಚತುರ್ದಶಲೋಕಗಳಿಗೊಡೆಯನಾದ, ಲಕ್ಷ್ಮೀಪತಿಯಾದ ನಾರಾಯಣನು.

೧೨೧. ಎಲ್ಲಿ ಈ ಭಗವಂತನಾದ ವೀರನು ಆ ಕರ್ಮದಿಂದ ಕರ್ಮನಿಯಾಮಕವಾದ ಭಗವದಿಚ್ಛೆಯಿಂದ ಪ್ರೇರಿತನಾಗಿರುವನೋ, ಅಲ್ಲಿ ಪ್ರಾಯಿಕವಾಗಿ ರಾಮನೂ, ಲಕ್ಷ್ಮಣನೂ ಮಾಡತಕ್ಕ ಕೆಲಸಗಳಿರುವುವು.

೧೨೨-೧೨೩. ಪುಂಡರೀಕಾಕ್ಷನಾದ ಶ್ರೀರಾಮನು ಅವನ್ನು ಮಾಡಿ, ಪುನಃ ಇಲ್ಲಿಗೆ ಬರುತ್ತಾನೆ ; ' ಇಂತು ಮಹಾತ್ಮರಾದ ಆ ವಸಿಷ್ಠಮುನಿಯು ಹೇಳಲು, ಭರತನು ಶಾಸ್ತ್ರದಲ್ಲಿ ಕಂಡ ಕರ್ಮಗಳಿಂದ ಸಂಸ್ಕಾರವನ್ನು ಮಾಡಲು ಕೈಕೊಂಡನು. ಶಾಸ್ತ್ರದಲ್ಲಿ ಹೇಳಿರುವ ಕ್ರಮದಿಂದ ತಂದೆಯ (ದಶರಥನ) ದೇಹವನ್ನು ಅಗ್ನಿಹೋತ್ರಾಗ್ನಿಯಿಂದ ಸುಟ್ಟನು.

ಸ್ನಾತ್ವಾ ಸರಯ್ವಾಃ ಸಲಿಲೇ ಕೃತ್ವಾ ತಸ್ಯೋದಕಕ್ರಿಯಾಮ್ ।
ಶತ್ರುಘ್ನೇನ ಸಹ ಶ್ರೀಮಾ‌ನ್ ಮಾತೃಭಿರ್ಬಾಂಧವೈಸ್ಸಹ ॥ ೧೨೪ ॥

ತಸ್ಯೌರ್ಧ್ವದೇಹಿಕಂ ಕೃತ್ವಾ ಮಂತ್ರಿಣಾ ಮಂತ್ರಿನಾಯಕಃ ।
ಹಸ್ತ್ಯಶ್ವರಥಪತ್ತೀಭಿಃ ಸಹ ಪ್ರಾಯಾನ್ಮಹಾಮತಿಃ ॥ ೧೨೫ ॥

ಮತ್ವಾ ತಂ ಭರತಂ ಶತ್ರುಂ ರಾಮಭಕ್ತೋ ಗುಹಸ್ತದಾ ।
ಸ್ವ ಸೈನ್ಯಂ ವಶಗಂ ಕೃತ್ವಾ ಸನ್ನದ್ಧಃ ಕವಚೀ ರಥೀ ।
ಮಹಾಬಲ ಪರೀವಾರೋ ರುರೋಧ ಭರತಂ ಪಥಿ ॥ ೧೨೬ ॥

ಸಭ್ರಾತೃಕಂ ಸಭಾರ್ಯಂ ಮೇ ರಾಮಂ ಸ್ವಾಮಿನಮುತ್ತಮಮ್ ।
ಪ್ರಾಪಿತೋಽಸಿ ವನಂ ದುಷ್ಟ ಸಾಂಪ್ರತಂ ಹಂತುಮಿಚ್ಛಸಿ ॥ ೧೨೭ ॥

೧೨೪-೧೨೬. ಸರಯೂ ನದಿಯಲ್ಲಿ ಸ್ನಾನಮಾಡಿ, ಇಂತು ಆ ದಶರಥ ರಾಯನಿಗೆ ಔರ್ಧ್ವದೇಹಿಕಕರ್ಮಗಳನ್ನನುಷ್ಠಿಸಿ, ಮಂತ್ರಿಗಳಿಂದಲೂ, ಆನೆ, ಕುದುರೆ ತೇರು, ಕಾಲಾಳುಗಳಿಂದಲೂ ಕೂಡಿ, ರಾಮನು ಹೋದ ಮಾರ್ಗದಿಂದ ಅವನನ್ನು ಹುಡುಕಲು ಹೊರಟನು. ಶ್ರೀರಾಮಭಕ್ತನಾದ ಗುಹನು ಅಂತು ಶ್ರೀರಾಮನನ್ನು ಅನುಸರಿಸಿ, ದೊಡ್ಡ ದಳದೊಡನೆ ಬರುತ್ತಲಿದ್ದ ಭರತನನ್ನು ಶ್ರೀರಾಮವಿರೋಧಿ ಯಾದ ಹಗೆಯೆಂದು ಬಗೆದು, ಆಗ ತನ್ನ ಸೈನ್ಯವನ್ನು ದುಂಡಿಗೆ ಸಜ್ಜುಗೊಳಿಸಿ ನಿಲ್ಲಿಸಿ, ತಾನು ಕವಚವನ್ನು ತೊಟ್ಟು, ರಥದಲ್ಲಿ ಕುಳಿತು ದೊಡ್ಡ ಸೇನೆಯಿಂದ ಸುತ್ತುಗಟ್ಟಿ ಗೊಂಡು ಹಾದಿಯಲ್ಲಿ ಅವನನ್ನು ತಡೆದನು.

೧೨೭-೧೨೯. 'ಎಲೈ ದುಷ್ಟನೇ! ನನ್ನ ಒಡೆಯನಾದ, ಉತ್ತಮನಾದ ಶ್ರೀರಾಮನನ್ನು ಮಡದಿತಮ್ಮಂದಿರೊಡನೆ ಕಾಡಿಗೆ ಅಟ್ಟಿದೆ. ಈಗ ಅವರನ್ನು ಕೊಲ್ಲಲೆಳಸಿರುವೆಯೋ? ಎಲೈ ದುರಾತ್ಮನೇ! ದುರ್ಬುದ್ಧಿಯೇ! ನೀನು ಈಗ ಸೇನೆಯೊಡನೆ ಹಾಳಾಗಿ ಹೋಗುವೆ;' ಎಂದು ಗುಹನು ರಾಯಗುವರನಾದ

ಗಮಿಷ್ಯಸಿ ದುರಾತ್ಮಂಸ್ತ್ವಂ ಸೇನಯಾ ಸಹ ದುರ್ಮತೇ ।
ಇತ್ಯುಕ್ತೋ ಭರತಸ್ತತ್ರ ಗುಹೇನ ನೃಪನಂದನಃ ॥ ೧೨೮ ॥

ತಮುವಾಚ ವಿನೀತಾತ್ಮಾ ರಾಮಾಯಾಥ ಕೃತಾಂಜಲಿಃ ।
ಯಥಾ ತ್ವಂ ರಾಮಭಕ್ತೋಽಸಿ ತಥಾಹಮಪಿ ಭಕ್ತಿಮಾನ್ ॥ ೧೨೯ ॥

ಪ್ರೋಷಿತೇ ಮಯಿ ಕೈಕೇಯ್ಯಾ ಕೃತಮೇತನ್ಮಹಾಮತೇ ।
ರಾಮಸ್ಯಾನಯನಾರ್ಥಾಯ ವ್ರಜಾಮ್ಯದ್ಯ ಮಹಾಮತೇ ॥ ೧೩೦ ॥

ಸತ್ಯಪೂರ್ವಂ ಗಮಿಷ್ಯಾಮಿ ಪಂಥಾನಂ ದೇಹಿ ಮೇ ಗುಹ ।
ಇತಿ ಆಶ್ವಾಸಮಾನೀಯ ಜಾಹ್ನವೀಂ ತೇನ ತಾರಿತಃ ॥ ೧೩೧ ॥

ನಾವಿಕೈರ್ಬಹುಭಿಃ ಸಾರ್ಧಂ ಸ್ನಾತ್ವಾಽಸೌ ಜಾಹ್ನವೀಜಲೇ ।
ಭಾರದ್ವಾಜಾಶ್ರಮಂ ಪ್ರಾಪ್ತೋ ಭರತಸ್ತಂ ಮಹಾಮುನಿಮ್ ॥ ೧೩೨ ॥

ಭರತನಿಗೆ ಹೇಳಲು, ಅನಂತರದಲ್ಲಿ ವಿನಯಸ್ವಭಾವನಾದ ಭರತನು ಶ್ರೀರಾಮನಿಗೆ ಕೈಜೋಡಿಸಿ 'ಎಲೈ ಗುಹನೇ! ನೀನೆಂತು ಶ್ರೀರಾಮನ ಭಕ್ತನಾಗಿರುತ್ತೀಯೋ, ನಾನೂ ಹಾಗೆಯೇ ಶ್ರೀರಾಮಭಕ್ತಿಯುಳ್ಳವನಾಗಿರುತ್ತೇನೆ.

೧೩೦-೧೩೧. ಎಲೈ ಮಹಾಮತಿಯೇ! ನಾನು ದೇಶಾಂತರಗತನಾಗಿರಲು, ಕೈಕೇಯಿಯು ಈ ದುಷ್ಟಕಾರ್ಯವನ್ನೆಸಗಿದಳು. ಶ್ರೀರಾಮನನ್ನು ಹಿಂದಕ್ಕೆ ಕರೆತರಲು, ಇಂದು ಹೋಗುತ್ತಲಿದ್ದೇನೆ. ಎಲೈ ವಿವೇಕಿಯೇ! ಸತ್ಯಪೂರ್ವಕವಾಗಿ ಹೋಗುವೆನು. ಎಲೈ ಗುಹನೇ! ನನಗೆ ಹಾದಿಯನ್ನು ಬಿಡು;' ಎಂದು ಭರತನು ಹೇಳಿದನು. ಇಂತು ಭರತನು ಗುಹನಿಗೆ ನಂಬಿಕೆಯಿತ್ತು, ಅವನಿಂದ ಗಂಗೆಯನ್ನು ದಾಟಿಸಿಕೊಂಡನು.

೧೩೨-೧೩೩. ಇವನು ಅನೇಕ ನಾವಿಕರ ತಂಡದೊಡನೆ ಗಂಗೆಯಲ್ಲಿ ಸ್ನಾನ ಮಾಡಿ ಭರದ್ವಾಜರ ಆಶ್ರಮಕ್ಕೆ ಬಂದನು. ಆಗ ಭರತನು ಆ ಮಹಾಮುನಿಗೆ ತಲೆಬಾಗಿ ನಮಸ್ಕರಿಸಿ, ಸಂಗತಿಯೆಲ್ಲವನ್ನೂ ಬಿನ್ನವಿಸಿದನು. ಭಾರದ್ವಾಜಮುನಿಯೂ

ಪ್ರಣಮ್ಯ ಶಿರಸಾ ತಸ್ಮೈ ಯಥಾವೃತ್ತಮುವಾಚ ಹ ।
ಭಾರದ್ವಾಜೋಽಪಿ ತಂ ಪ್ರಾಹ ಕಾಲೇನ ಕೃತಮೀದೃಶಮ್ ॥ ೧೩೩ ॥

ದುಃಖಂ ನ ತಾವತ್ಕರ್ತವ್ಯಂ ರಾಮಾರ್ಥೇಽಪಿ ತ್ವಯಾಽಧುನಾ ।
ವರ್ತತೇ ಚಿತ್ರಕೂಟೇಽಸೌ ರಾಮಃ ಸತ್ಯ ಪರಾಕ್ರಮಃ ॥ ೧೩೪ ॥

ತ್ವಯಿ ತತ್ರ ಗತೇ ವಾಽಪಿ ಪ್ರಾಯೋಽಸೌ ನಾಗಮಿಷ್ಯತಿ ।
ತಥಾಽಪಿ ತತ್ರ ಗಚ್ಛ ತ್ವಂ ಯದಸೌ ವಕ್ತಿ ತತ್ಕುರು ॥ ೧೩೫ ॥

ರಾಮಸ್ತು ಸೀತಯಾ ಸಾರ್ಧಂ ವನಖಂಡೇ ಸ್ಥಿತಃ ಶುಭೇ ।
ಲಕ್ಷ್ಮಣಸ್ತು ಮಹಾವೀರ್ಯೋ ದುಷ್ಟಾಲೋಕನ ತತ್ಪರಃ ॥ ೧೩೬ ॥

ಇತ್ಯುಕ್ತೋ ಭರತಸ್ತತ್ರ ಭರದ್ವಾಜೇನ ಧೀಮತಾ ।
ಉತ್ತೀರ್ಯ ಯಮುನಾಂ ಯಾತಶ್ಚಿತ್ರಕೂಟಂ ಮಹಾನಗಮ್ ॥ ೧೩೭ ॥

ಭರತನಿಗೆ ಇಂತು ಹೇಳಿದನು :—' ಅಯ್ಯಾ ಭರತನೇ ! ಇಂತಾದುದು ಕಾಲಗತಿಯಿಂದ ಕಾಲನಿಯಾಮಕನಾದ ಭಗವಂತನ ಇಚ್ಛೆಯಿಂದ ನೀನೀಗ ಶ್ರೀರಾಮನ ವಿಷಯದಲ್ಲಿ ವ್ಯಸನಪಡಬೇಡ ; ಸತ್ಯಪರಾಕ್ರಮನಾದ ಈ ಶ್ರೀರಾಮನು ಚಿತ್ರಕೂಟ ಪರ್ವತದಲ್ಲಿರುತ್ತಾನೆ. ನೀನು ಅಲ್ಲಿಗೆ ಹೋಗಿ ಬೇಡಿದರೂ ಬಹುಶಃ ಅವನು ಬರುವುದಿಲ್ಲ ; ಆದರೂ, ನೀನು ಅಲ್ಲಿಗೆ ಹೋಗು. ಅವನೇನನ್ನು ಹೇಳುತ್ತಾನೆಯೋ, ಅದನ್ನು ನೀನು ನಡೆಸು.

೧೩೬. ಶ್ರೀರಾಮನು ಮಂಗಳವಾದ ವನಖಂಡದಲ್ಲಿ ಸೀತಾದೇವಿಯೊಡನೆ ಇರುತ್ತಾನೆ. ಕಡುಸಾಹಸಿಗನಾದ ಲಕ್ಷ್ಮಣನು ಅಲ್ಲಿಗೆ ಯಾವ ದುಷ್ಟರೂ ಬರದಂತೆ ಎಚ್ಚರಿಕೆಯಿಂದ ನೋಡಿಕೊಂಡಿರುವುದರಲ್ಲಿ ಯಾವಾಗಲೂ ಆಸಕ್ತನಾಗಿರುತ್ತಾನೆ.

೧೩೭. ಇಂತು ಜ್ಞಾನಿಗಳಾದ ಭಾರದ್ವಾಜ ಮುನಿಗಳು ಹೇಳಲು, ಅಲ್ಲಿ ಭರತನು ಜಗುನೆಯನ್ನು ದಾಟಿ, ಚಿತ್ರಕೂಟವೆಂಬ ಪರ್ವತಕ್ಕೆ ಹೋದನು.

ಸ್ಥಿತೋಽಸೌ ದೃಷ್ಟವಾನ್ ದೂರಾತ್ಸಧೂಲಿಂ ಚೋತ್ತರಾಂ ದಿಶಮ್ ।
ರಾಮಾಯ ಕಥಯಿತ್ವಾ ಸ ತದಾದೇಶಾತ್ತು ಲಕ್ಷ್ಮಣಃ ॥ ೧೩೮ ॥

ವೃಕ್ಷಮಾರುಹ್ಯ ಮೇಧಾವೀ ವೀಕ್ಷಮಾಣಃ ಪ್ರಯತ್ನತಃ ।
ಸ ತತೋ ದೃಷ್ಟವಾನ್ ಹೃಷ್ಟಾಮಾಯಾಂತೀಂ ಮಹತೀಂ ಚಮೂಮ್ ॥

ಹಸ್ತ್ಯಶ್ವರಥ ಸಂಯುಕ್ತಾಂ ದೃಷ್ಟ್ವಾ ರಾಮಮಥಾಬ್ರವೀತ್ ।
ಹೇ ಭ್ರಾತಸ್ತ್ವ ಮಹಾಬಾಹೋ ಸೀತಾಪಾರ್ಶ್ವೇ ಸ್ಥಿರೋ ಭವ ॥ ೧೪೦ ॥

ಭೂಪೋಽಸ್ತಿ ಬಲವಾನ್ ಕಶ್ಚಿತ್ ಹಸ್ತ್ಯಶ್ವರಥಪತ್ತಿಭಿಃ ।
ಇತ್ಯಾಕರ್ಣ್ಯ ವಚಸ್ತಸ್ಯ ಲಕ್ಷ್ಮಣಸ್ಯ ಮಹಾತ್ಮನಃ ॥ ೧೪೧ ॥

ರಾಮಸ್ತಮಬ್ರವೀದ್ಧೀರೋ ವೀರಂ ಸತ್ಯ ಪರಾಕ್ರಮಃ ।
ಪ್ರಾಯೇಣ ಭರತೋಽಸ್ಮಾಕಂ ದ್ರಷ್ಟುಮಾಯಾತಿ ಲಕ್ಷ್ಮಣ ॥ ೧೪೨ ॥

೧೩೮–೧೩೯. ಇತ್ತ ಲಕ್ಷ್ಮಣನು ಇದ್ದು ದೂರದಿಂದಲೇ ಉತ್ತರದಿಕ್ಕು ಧೂಲಿಗೊಂಡಿರುವುದನ್ನು ಕಂಡನು. ಅವನು ಶ್ರೀ ರಾಮನಿಗೆ ಅದನ್ನು ಹೇಳಿ, ಅವನ ಅಪ್ಪಣೆಯಿಂದ ಮೇಧಾವಿಯು ಮರವನ್ನೇರಿ ಪ್ರಯತ್ನದಿಂದ ನೋಡುತ್ತಿರುತ್ತಾ, ಬಳಿಕ ಸಂತಸಗೊಂಡು ಬರುತ್ತಲಿದ್ದ ಹಿರಿಯ ದಳವನ್ನು ಕಂಡನು.

೧೪೦–೧೪೨. ಅಂತು ಆನೆ, ಕುದುರೆ, ತೇರುಗಳಿಂದ ಕೂಡಿದ ಸೇನೆಯನ್ನು ಲಕ್ಷ್ಮಣನು ನೋಡಿ, ಬಳಿಕ ಶ್ರೀ ರಾಮನಿಗೆ ಇಂತೆಂದನು. ಎಲೈ ಮಹಾಬಾಹುವಾದ ಅಣ್ಣನೇ! ನೀನು ಸೀತಾದೇವಿಯ ಬಳಿಯಲ್ಲಿಯೆ ಇರು. ಆನೆ, ಕುದುರೆ, ತೇರು ಕಾಲಾಳುಗಳಿಂದ ಕೂಡಿದ, ಬಲವಂತನಾದ, ಯಾವನೋ ರಾಯನು ಬರುತ್ತಲಿದ್ದಾನೆ;' ಎಂಬ ಮಹಾತ್ಮನಾದ ಆ ಲಕ್ಷ್ಮಣನ ಮಾತನ್ನು ವೀರನೂ, ಸತ್ಯಪರಾಕ್ರಮನೂ ಆದ ಶ್ರೀ ರಾಮನು ಕೇಳಿ ಹೀಗೆ ಹೇಳಿದನು:— 'ಎಲೈ ಲಕ್ಷ್ಮಣನೇ

ಇತ್ಯೇವಂ ವದತಸ್ತಸ್ಯ ರಾಮಸ್ಯ ವಿದಿತಾತ್ಮನಃ ।
ಆರಾತ್ಸಂಸ್ಥಾಪ್ಯ ಸೇನಾಂ ತಾಂ ಭರತೋ ವಿನಯಾನ್ವಿತಃ ॥ ೧೪೩ ॥

ಬ್ರಾಹ್ಮಣೈರ್ಮಂತ್ರಿಭಿಸ್ಸಾರ್ಧಂ ರುದನ್ನಾಗತ್ಯ ಪಾದಯೋಃ ।
ರಾಮಸ್ಯ ನಿಪಪಾತಾಥ ವೈದೇಹ್ಯಾ ಲಕ್ಷ್ಮಣಸ್ಯ ಚ ॥ ೧೪೪ ॥

ಮಂತ್ರಿಣೋ ಮಾತೃವರ್ಗಶ್ಚ ಸ್ನಿಗ್ಧಬಂಧುಸಹೃಜ್ಜನಾಃ ।
ಪರಿವಾರ್ಯ ತತೋ ರಾಮಂ ರುರುದುಃಶೋಕಕಾತರಾಃ ॥ ೧೪೫ ॥

ಸ್ವರ್ಯಾತಂ ಪಿತರಂ ಜ್ಞಾತ್ವಾ ತತೋ ರಾಮೋ ಮಹಾಮತಿಃ ।
ಲಕ್ಷ್ಮಣೇನ ಸಹ ಭ್ರಾತ್ರಾ ವೈದೇಹ್ಯಾಽಥ ಸಮನ್ವಿತಃ ॥ ೧೪೬ ॥

ಭರತನು ಬಹುಶಃ ನಮ್ಮನ್ನು ನೋಡಲು ಬರುತ್ತಿದ್ದಾನೆ ಎಂದು ಹೇಳುತ್ತಲಿದ್ದ, ಭರತನ ಸ್ವಭಾವವನ್ನು ತಿಳಿದಿದ್ದ ಆ ಶ್ರೀ ರಾಮನ ಬಳಿಗೆ ದೂರದಲ್ಲಿಯೇ ಆ ಸೇನೆಯನ್ನು ಬೀಡು ಬಿಟ್ಟು, ಭರತನು ನಮ್ರತೆಯಿಂದ ಕೂಡಿ ಬಂದನು.

೧೪೪. ಬ್ರಾಹ್ಮಣರು ಮಂತ್ರಿಗಳು ಇವರೊಡನೆ ಭರತನು ಅಳುತ್ತಾ ಬಂದು, ಶ್ರೀ ರಾಮನ ಚರಣಗಳಲ್ಲಿಯೂ, ಬಳಿಕ ಸೀತಾದೇವಿ ಲಕ್ಷ್ಮಣರ ಚರಣಗಳಲ್ಲಿಯೂ (ಪೊಡಮಟ್ಟನು) ದಿಂಡುಗೆಡಹಿದನು.

೧೪೫. ಮಂತ್ರಿಗಳು, ತಾಯಿಯರ ತಂಡ, ನೇಹಿಗರು, ನಂಟರು ಮತ್ತು ಕೆಳೆಯರು ಆದವರು ಬಳಿಕ ದುಃಖದಿಂದ ತಳ್ಳಂಕಗೊಂಡವರಾಗಿ, ಶ್ರೀ ರಾಮನನ್ನು ಬಳಸಿ ಅತ್ತರು.

೧೪೬–೧೪೯. ಎಲೈ ರಾಯನೇ! ಕೇಳು; ಮಹಾಮತಿಯಾದ ರಾಮನು ಬಳಿಕ ತಂದೆಯು ಸ್ವರ್ಗಸ್ಥನಾದುದನ್ನರಿತು, ತಮ್ಮನಾದ ಲಕ್ಷ್ಮಣ, ಮಡದಿಯಾದ, ಸೀತೆ ಇವರೊಡನೆ ಮಲಾಪಹವೆಂಬ ತೀರ್ಥದಲ್ಲಿ ಸ್ನಾನಮಾಡಿ, ಜಲಾಂಜಲಿಯನ್ನು

ಸ್ನಾತ್ವಾ ಮಲಾಪಹೇ ತೀರ್ಥೇ ದತ್ವಾ ಚ ಸಲಿಲಾಂಜಲಿಮ್ ।
ಮಾತ್ರಾದೀನಭಿವಾದ್ಯಾಥ ರಾಮೋ ದುಃಖಸಮನ್ವಿತಃ ॥ ೧೪೭ ॥

ಉವಾಚ ಭರತಂ ರಾಜನ್ ದುಃಖೇನ ಮಹತಾಽನ್ವಿತಮ್ ।
ಅಯೋಧ್ಯಾಂ ಗಚ್ಛ ಭರತ ಇತಃ ಶೀಘ್ರಂ ಮಹಾಮತೇ ॥ ೧೪೮ ॥

ರಾಜ್ಞಾ ವಿಹೀನಾಂ ನಗರೀಮನಾಥಾಂ ಪರಿಪಾಲಯ ।
ಇತ್ಯುಕ್ತೋ ಭರತಃ ಪ್ರಾಹ ರಾಮಂ ರಾಜೀವಲೋಚನಮ್ ॥ ೧೪೯ ॥

ತ್ವಾಮೃತೇ ಪುರುಷವ್ಯಾಘ್ರ ನ ಯಾಸ್ಯೇಽಹಮಿತೋ ಧ್ರುವಮ್ ।
ಯತ್ರ ತ್ವಂ ತತ್ರ ಯಾಸ್ಯಾಮಿ ವೈದೇಹೀ ಲಕ್ಷ್ಮಣೋ ಯಥಾ ॥ ೧೫೦ ॥

ಇತ್ಯಾಕರ್ಣ್ಯ ಪುನಃ ಪ್ರಾಹ ಭರತಂ ಪುರತಃ ಸ್ಥಿತಮ್ ।
ನೃಣಾಂ ಪಿತೃಸಮೋ ಜ್ಯೇಷ್ಠಃ ಸ್ವಧರ್ಮಮನುವರ್ತಿನಾಮ್ ॥ ೧೫೧ ॥

ಕೊಟ್ಟು, ಅನಂತರ ದುಃಖದೊಡಗೂಡಿ, ಮಾತೆಯರಿಗೆರಗಿದನು ಮತ್ತು ಕಡುದುಃಖ ಗೊಂಡ ಭರತನಿಗೆ ಇಂತೆಂದನು:— 'ಎಲೈ ಮಹಾಮತಿಯಾದ ಭರತನೇ! ಇಲ್ಲಿಂದ ಬೇಗನೆ ಅಯೋಧ್ಯೆಗೆ ಹೋಗು; ರಾಜನಿಲ್ಲದೇ ಅನಾಥೆಯಾದ ನಗರಿಯನ್ನು ರಕ್ಷಿಸು;' ಎಂದು ಹೇಳಿದ ತಾವರೆಗಣ್ಣನಾದ ರಾಮನಿಗೆ ಭರತನು ಇಂತು ಬಿನ್ನವಿಸಿದನು.

೧೫೦. 'ಎಲೈ ಪುರುಷ ವ್ಯಾಘ್ರನೇ ನಿನ್ನನ್ನು ಬಿಟ್ಟು ನಾನು ಇಲ್ಲಿಂದ ನಿಶ್ಚಯವಾಗಿಯೂ ಹೋಗುವುದಿಲ್ಲ; ವೈದೇಹೀ ಲಕ್ಷ್ಮಣರಂತೆ ಎಲ್ಲಿ ನೀನಿರುವೆಯೋ, ಅಲ್ಲಿಗೆ ನಾನೂ ಬರುವೆನು.'

೧೫೧. ಎಂದು ಭರತನು ನುಡಿದುದನ್ನು ಶ್ರೀ ರಾಮನು ಕೇಳಿ, ಎದುರಿನಲ್ಲಿದ್ದ ಆ ಭರತನಿಗೆ ಮತ್ತು ಇಂತು ಹೇಳಿದನು:— 'ಎಲೈ ಭರತನೇ! ಸ್ವಧರ್ಮವನ್ನು ಅನುಷ್ಠಿಸುವ ಮಾನವರಿಗೆ ಹಿರಿಯವನಾದ ಅಣ್ಣನು ಲೋಕದಲ್ಲಿ ತಂದೆಗೆ ಸಮನು.

ಯಥಾ ನ ಲಂಘ್ಯಂ ವಚನಂ ಮಯಾ ಪಿತೃ ಮುಖೇರಿತಮ್ ।
ತಥಾ ತ್ವಯಾ ನಲಂಘ್ಯಂ ಸ್ಯಾದ್ವಚನಂ ಮಮ ಸತ್ತಮ ॥ ೧೫೨ ॥

ಮತ್ಸಮೀಪಾದಿತೋ ಗತ್ವಾ ಪ್ರಜಾಸ್ತ್ವಂ ಪರಿಪಾಲಯ ॥ ೧೫೩ ॥

ದ್ವಾದಶಾಬ್ದಿಕಮೇತನ್ಮೇ ವ್ರತಂ ಪಿತೃಮುಖೇರಿತಮ್ ।
ತದರಣ್ಯೇ ಚರಿತ್ವಾ ತು ಆಗಮಿಷ್ಯಾಮಿ ತೇಽನ್ತಿಕಮ್ ॥ ೧೫೪ ॥

ಗಚ್ಛ ತಿಷ್ಠ ಮಮಾದೇಶೇ ನ ದುಃಖಂ ಕರ್ತುಮರ್ಹಸಿ ॥ ೧೫೫ ॥

ಇತ್ಯುಕ್ತೋ ಭರತಃ ಪ್ರಾಹ ಬಾಷ್ಪಪರ್ಯಾಕುಲೇಕ್ಷಣಃ ॥ ೧೫೬ ॥

---

೧೫೨. ತಂದೆಯು ಹೇಳಿದ ಮಾತನ್ನು ನಾನು ಹೇಗೆ ಮೀರಕೂಡದೋ, ಹಾಗೆಯೇ ಎಲೈ ಸತ್ತಮನೇ ! ನನ್ನ ಮಾತನ್ನೂ ನೀನು ಮೀರಬಾರದು.

೧೫೩. ನೀನು ಈ ನನ್ನ ಸಮೀಪದಿಂದ ಅಯೋಧ್ಯೆಗೆ ಹೋಗಿ ಪ್ರಜೆಗಳನ್ನು ರಕ್ಷಿಸು.

೧೫೪. ತಂದೆಯು ಆಣತಿಗೊಟ್ಟ, ಈ ನನ್ನ ವ್ರತವು ಹನ್ನೆರಡು ವರ್ಷಗಳ ಕಾಲ ಆಚರಿಸತಕ್ಕದ್ದು. ಅದನ್ನು ಕಾಡಿನಲ್ಲಿ ಆಚರಿಸಿ, ಬಳಿಕ ನಿನ್ನ ಸಮೀಪಕ್ಕೆ ಬರುವೆನು.

೧೫೫. ಹೋಗು; ನನ್ನ ಅಪ್ಪಣೆಯಲ್ಲಿ ನಿಲ್ಲು; ದುಃಖಪಡಬೇಡ.'

೧೫೬. ಎಂದು ಶ್ರೀ ರಾಮನು ಹೇಳಲು, ಭರತನು ಕಂಬನಿ ತುಂಬಿದ ಕಣ್ಣುಳ್ಳವನಾಗಿ ಶ್ರೀ ರಾಮನಿಗೆ ಬಿನ್ನವಿಸಿದನು.

ಯಥಾ ಪಿತಾ ತಥಾ ತ್ವಂ ಮೇ ನಾತ್ರಕಾರ್ಯಾ ವಿಚಾರಣಾ ।
ತವಾದೇಶಾನ್ಮಯಾ ಕಾರ್ಯಂ ದೇಹಿ ತ್ವಂ ಪಾದುಕೇ ಮಮ ॥ ೧೫೭ ॥

ನಂದಿಗ್ರಾಮೇ ವಸಿಷ್ಯೇಽಹಂ ಪಾದುಕೇ ದ್ವಾದಶಾಬ್ದಿಕಮ್ ।
ತ್ವದ್ವೇಷಮೇವ ಮದ್ವೇಷಂ ತ್ವದ್ವ್ರತಂ ಮೇ ಮಹಾವ್ರತಮ್ ॥ ೧೫೮ ॥

ತ್ವಂ ದ್ವಾದಶಾಬ್ದಿಕಾದೂರ್ಧ್ವಂ ಯದಿ ನಾಯಾಸಿ ಸತ್ತಮ ।
ತತೋ ಹವಿರ್ಯಥಾ ಚಾಗ್ನೌ ಪ್ರಧಕ್ಷ್ಯಾಮಿ ಕಲೇಬರಮ್ ॥ ೧೫೯ ॥
ಇತ್ಯೇವಂ ಶಪಥಂ ಕೃತ್ವಾ ಭರತೋ ಹಿ ಸುದುಃಖಿತಃ ।
ಬಹುಪ್ರದಕ್ಷಿಣಂ ಕೃತ್ವಾ ನಮಸ್ಕೃತ್ಯಚ ರಾಘವಂ ॥ ೧೬೦ ॥

ಪಾದುಕೇ ಶಿರಸಾ ಸ್ಥಾಪ್ಯ ಭರತಃ ಪ್ರಸ್ಥಿತಃ ಶನೈಃ ।
ಸಕುರ್ವನ್ ಭ್ರಾತುರಾದೇಶಂ ನಂದಿಗ್ರಾಮೇ ಸ್ಥಿತೋ ವಶೀ ॥
ತಪಸ್ವೀ ನಿಯತಾಹಾರಃ ಶಾಕಮೂಲಫಲಾಶನಃ ॥ ೧೬೧ ॥

೧೫೭-೧೫೯. 'ಎಲೈ ಅಗ್ರಜನೇ! ನನಗೆ ನೀನೂ ತಂದೆಯಂತೆಯೇ ಸರಿ; ಈ ವಿಚಾರದಲ್ಲಿ ವಿಚಾರ ಮಾಡುತಕ್ಕದ್ದಿಲ್ಲವು. ನಿನ್ನ ಅಪ್ಪಣೆಯಿಂದ ರಕ್ಷಣೆಯ ಕಾರ್ಯವನ್ನು ನಡೆಸುವೆನು. ನನಗೆ ನಿನ್ನ ಹಾವುಗೆಗಳನ್ನು ಕೊಡು. ನಾನು ಹನ್ನೆರಡು ವರ್ಷಗಳಕಾಲ ಪಾದುಕೆಗಳನ್ನಿಟ್ಟುಕೊಂಡು, ನಂದಿಗ್ರಾಮದಲ್ಲಿ ವಾಸ ಮಾಡುವೆನು. ನಿನ್ನ ವೇಷವೇ ನನ್ನ ವೇಷವು; ನಿನ್ನ ವ್ರತವೇ ನನ್ನ ವ್ರತವು; ಎಲೈ ಸತ್ತಮನೇ! ನೀನು ಹನ್ನೆರಡು ವರ್ಷಗಳು ಕಳೆದ ಬಳಿಕ ಬಾರದಿದ್ದಲ್ಲಿ ಬಳಿಕ ನಾನು ಅಗ್ನಿಯಲ್ಲಿ ಹವಿಸ್ಸಿನಂತೆ, ನನ್ನ ಒಡಲನ್ನು ಸುಡುವೆನು.'

೧೬೦-೧೬೧. ಇಂತು ಆಣೆಮಾಡಿ ಭರತನು ಕಡುಸೊಂದವನಾಗಿ, ಶ್ರೀರಾಘವನಿಗೆ ಅನೇಕ ಬಾರಿ ಬಲಬಂದು, ಹಾವುಗೆಗಳನ್ನು ತಲೆಯಿಂದ ಧರಿಸಿ, ಮೆಲ್ಲನೆ, (ಮನವಿಲ್ಲದೆ) ಭರತನು ಹಿಂದಿರುಗಿದನು. ಜಿತೇಂದ್ರಿಯನೂ, ತಪಸ್ವಿಯೂ, ರಾಜಯೋಗ್ಯವಾದ ಆಹಾರವನ್ನು ಬಿಟ್ಟವನೂ, ಸೊಪ್ಪುಗೆಣಸುಗಳೇ ಆಹಾರ

ಜಟಾಕಲಾಪಂ ಶಿರಸಾ ಚ ಬಿಭ್ರ
ತ್ತ್ವಚಶ್ಚ ವಾಕ್ಷೀಃ ಕಿಲ ವನ್ಯಭೋಜೀ ।
ರಾಮಸ್ಯವಾಕ್ಯಾದಸಶೋ ಹೃದಿ ಸ್ಥಿತಃ
ಬಭಾರ ಭೂಭಾರಮನಿಂದಿತಾತ್ಮಾ ॥ ೧೬೨ ॥

ಇತಿಶ್ರೀನರಸಿಂಹಪುರಾಣೆ (ಶ್ರೀರಾಮಪ್ರಾದುರ್ಭಾವೇ) ಶ್ರೀರಾಮಚರಿತೇ ಅಯೋಧ್ಯಾಕಾಂಡಕಥಾನಿರೂಪಣಂನಾಮ ಅಷ್ಟಚತ್ವಾರಿಂಶೋಽಧ್ಯಾಯಃ

ವನ್ನಾಗಿಟ್ಟುಕೊಂಡವನೂ ಆಗಿ, ಭರತನು ನಂದಿ ಗ್ರಾಮದಲ್ಲಿ ಅಣ್ಣನಾದ ಶ್ರೀ ರಾಮಚಂದ್ರನ ಅಪ್ಪಣೆಯನ್ನು ನಡೆಸುತ್ತಾ, ತಲೆಯಿಂದ ತಿರಿಕಟ್ಟಿದಜಡೆಯನ್ನೂ, ಮರದ ತೊಗಟೆಯ ವಸ್ತ್ರಗಳನ್ನೂ ಧರಿಸಿ, ಕಾಡಿನಲ್ಲಿ ಸಿಕ್ಕುವ ಕಂದಮೂಲಗಳನ್ನೂ ತಿನ್ನುತ್ತಾ, ಶ್ರೀ ರಾಮನ ಆಜ್ಞೆಯಲ್ಲಿ ಸಡ್ಡೆಯಿಂದ ಮನದಲ್ಲಿ ತಾಳಿದ್ದ ಭೂಭಾರ ವನ್ನು ಶ್ಲಾಘ್ಯಸ್ವಭಾವದವನಾಗಿ ಹೊರಗೂ ಧರಿಸಿದನು.' ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀ ಸೂತರು ಭರದ್ವಾಜನಿಗೆ ಹೇಳಿದರೆಂದು ವರ್ಣಿಸಿದೆ.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಶ್ರೀ ರಾಮಚರಿತೆಯಲ್ಲಿ ಅಯೋಧ್ಯಾಕಾಂಡ ಕಥಾನಿರೂಪಣವೆಂಬ ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

ನಲವತ್ತೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ, ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ "ಶ್ರೀರಾಮನು ತನ್ನ ಮಡದಿ-ಮಾತಾಪಿತೃಗಳು ಅನುಜರು-ಇವರೊಡನೆ ಅಯೋಧ್ಯೆಯಲ್ಲಿ ಸುಖದಿಂದಿರಲು, ಭರತನು ಶತ್ರುಘ್ನನೊಡನೆ ತನ್ನ ಸೋದರಮಾವನ ಮನೆಗೆ ಹೋದನು.

ಆಗ ದಶರಥನು ಪ್ರಾಪ್ತವಯಸ್ಕನಾದ ಶ್ರೀ ರಾಮನಿಗೆ ಪಟ್ಟಾಭಿಷೇಕಮಾಡಿ, ರಾಜ್ಯಭಾರವನ್ನು ಅವನಲ್ಲಿಟ್ಟು, ತಾನು ವಿಶ್ರಾಂತನಾಗಲು ಬಯಸಿ, ಪುರೋಹಿತ, ಮಂತ್ರಿಗಳು, ಪೌರಜಾನಪದರನುಮತಿಯನ್ನು ಪಡೆದು, ರಾಮಾಭಿಷೇಕವನ್ನು ನಿರ್ಧರಿಸಿ, ತನ್ನ ಅಮಾತ್ಯಾದಿಗಳಿಗೆ ಸಕಲ ಸಾಮಗ್ರಿಗಳನ್ನು ಸಿದ್ಧಪಡಿಸಲು ಹೇಳಿದನು.

ಅಂತೆಯೇ ಪಟ್ಟಾಭಿಷೇಕ ದಿನವು ನಾಳೆಯಿರಲು ಕೈಕೇಯಿಯ ದಾಸಿ ಮಂಥರೆಯೆಂಬ ಕುಬ್ಜೆಯು ಆ ಸಂಗತಿಯನ್ನು ಕೈಕೇಯಿಗೆ ಹೇಳಲು, ಅವಳೂ ಹಿಗ್ಗಲು, ಅವಳನ್ನು ತಿರಸ್ಕರಿಸಿ, 'ನಿನ್ನ ಮಗನಿಗೆ ರಾಜ್ಯವು ತಪ್ಪಿತಲ್ಲಾ! ಅವನು ಮಾವನ ಮನೆಗೆ ಹೋಗಿರುವಾಗ ಇದನ್ನು ಗೊತ್ತುಮಾಡಿರುವರು ;' ಇತ್ಯಾದಿಯಾಗಿ ಹೇಳಿ, ಅವಳಿಗೆ ಮುಳಿಸು ಬರುವಂತೆಸಗಿದಳು. ರಾಯನು ಎಲ್ಲವನ್ನೂ, ಸಿದ್ಧಪಡಿಸಿ, ಕೈಕೇಯಿಯ ಮನೆಗೆ ಬರಲು, ಅವಳು ಕೋಪಾಗಾರದಲ್ಲಿರುವುದು ತಿಳಿದು, ಅವಳನ್ನು ಸಂತೋಷಗೊಳಿಸಲು, ಅಲ್ಲಿಗೆ ಹೋಗಿ ಯತ್ನಿಸಲು, ಅವಳು ತನಗೆ ಹಿಂದೆ ರಾಯನು ಕೊಟ್ಟವರವನ್ನು ಸಲ್ಲಿಸುವುದಾಗಿ ಆಣೆ ಮಾಡಿಸಿಕೊಂಡು, ರಾಮನು ಹದಿನಾಲ್ಕು ವರ್ಷ ವನವಾಸ ಮಾಡಬೇಕು; ತನ್ನ ಮಗನಿಗೆ ಪಟ್ಟಗಟ್ಟಬೇಕೆಂದಳು.

ಅದನ್ನೇ ಕೇಳಿ, ರಾಯನು ಮೂರ್ಛೆಗೆ ಸಂದನು. ಆಗ ಕೈಕೇಯಿಯು ರಾಮನನ್ನು ಅಲ್ಲಿಗೆ ಬರಮಾಡಿಕೊಂಡು, ರಾಮನ ಅಪ್ಪಣೆಯೆಂದು ತಿಳಿಸಲು, ಪರಮ ಸಂತೋಷದಿಂದ ರಾಮನು ತನ್ನ ತಾಯಿತಂದೆಗಳಿಗೆರಗಿ, ವನಕ್ಕೆ ಹೊರಡಲು ಅನು

ಬಾಪನು. ಇದನ್ನು ತಿಳಿದು ಆವನ ಮಡದಿ ಸೀತಾದೇವಿಯೂ, ತಮ್ಮನಾದ ಲಕ್ಷ್ಮಣನೂ ಹಿಂಬಾಲಿಸಲು ಸಿದ್ಧರಾದರು. ಅವರು ಎಷ್ಟು ಬೇಡವೆಂದು ಹೇಳಿದರೂ ಕೇಳಲಿಲ್ಲ. ತರುವಾಯ ಶ್ರೀ ರಾಮನು ಅನೇಕ ತೆರನಾಗಿ ಅವರಿಗೆ ಸಮಾಧಾನವನ್ನು ಹೇಳಿ, ತನ್ನ ವ್ರತವನ್ನು ಪೂರೈಸಿ, ತಾನು ಹಿಂದಿರುಗುವುದಾಗಿ ಹೇಳಿದನು.

ತರುವಾಯ ಅವನು ಶೃಂಗಿಬೇರಪುರಕ್ಕೆ ಬಂದು, ಅಲ್ಲಿ ಗುಹನೆಂಬ ಅಂಬಿಗನ ಸಹಾಯದಿಂದ ಗಂಗೆಯನ್ನು ದಾಟಿ, ಭರದ್ವಾಜಾಶ್ರಮಕ್ಕೆ ಬಂದು ಅವರಿಂದ ಆತಿಥ್ಯವನ್ನು ಸ್ವೀಕರಿಸಿ, ಚಿತ್ರಕೂಟಕ್ಕೆ ಹೋಗಿ ಅಲ್ಲಿ ಎಲೆವನೆಯಲ್ಲಿ ಸುಖದಿಂದಿದ್ದನು.

ಇತ್ತ ರಾಮನು ಕಾಡಿಗೆ ಹೋದುದನ್ನು ಕೇಳಿ, ದಶರಥನು ಆ ದುಃಖದಿಂದ ಕಾಲವಶನಾದನು. ವಸಿಷ್ಠಮುನಿಯು ದೂತನಿಂದ ಭರತನನ್ನು ಬರಮಾಡಿಕೊಂಡು, ದಶರಥನ ಔರ್ಧ್ವದೇಹಿಕ ಕರ್ಮಗಳನ್ನು ಮಾಡಿಸಿ, ರಾಜ್ಯಭಾರವನ್ನು ಸ್ವೀಕರಿಸೆನಲು ಭರತನು ರಾಮನೇ ಹಿಂತಿರುಗಿ ಬಂದು ಸ್ವೀಕರಿಸುವುದೆಂದು ಹೇಳಿ, ಅವನನ್ನು ಕರೆತರಲು ಮಾತೆಯರು, ಮಂತ್ರಿಗಳು, ಸೈನಿಕರು, ಪುರೋಹಿತರು-ಇವರೊಡಗೂಡಿ ಬಂದು, ಶ್ರೀರಾಮನನ್ನು ಬೇಡುವನು. ಶ್ರೀರಾಮನೂ, ಪಿತೃಮರಣವಾರ್ತೆಯನ್ನು ಕೇಳಿ, ಮಲಾಪಹತೀರ್ಥದಲ್ಲಿ ಮಡದಿ, ತಮ್ಮವರೊಡನೆ ಮಿಂದು, ಪಿತೃತರ್ಪಣವನ್ನು ಕೊಟ್ಟು, ಮಾತೆಯರಿಗೆರಗಿ- ತನ್ನ ಮಾತನ್ನು ತಂದೆಯ ಮಾತಿನಂತೆ ತಿಳಿವುದೆಂದು ಭರತನಿಗೆ ಹೇಳಿ, ಪ್ರಜೆಗಳನ್ನು ರಕ್ಷಿಸಿಕೊಂಡು, ಅಯೋಧ್ಯೆಯಲ್ಲಿ ಇರುವುದೆನಲು, ಅವನು ಶ್ರೀ ರಾಮ ಪಾದುಕೆಯನ್ನು ಬೇಡಿ, ತಾನು ಅದರ ಆಜ್ಞಾಧಾರಕನಾಗಿ, ಶೃಂಗಿಬೇರಪುರದಲ್ಲಿ ಶ್ರೀ ರಾಮನಂತೆ ದೀಕ್ಷಿತನಾಗಿ ಪ್ರಜೆಗಳನ್ನು ರಕ್ಷಿಸುತ್ತಿದ್ದನು.

ಇಂತು ನಲವತ್ತೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀ:

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಏಕೋನಪಂಚಾಶತ್ತಮೋಽಧ್ಯಾಯಃ

ಅಥ ಶ್ರೀ ರಾಮಚರಿತೇ ಅರಣ್ಯಕಾಣ್ಡಕಥಾ ನಿರೂಪಣಮ್

॥ ಮಾರ್ಕಂಡೇಯ ಉವಾಚ ॥

ಗತೇಽಥ ಭರತೇ ತಸ್ಮಿನ್ ರಾಮಃ ಕಮಲಲೋಚನಃ ।
ಲಕ್ಷ್ಮಣೇನ ಸಹಭ್ರಾತ್ರಾ ಭಾರ್ಯಯಾ ಸೀತಯಾ ಸಹ ॥ ೧ ॥

ಶಾಕಮೂಲಫಲಾಹಾರೋ ವಿಚಚಾರ ಮಹಾವನೇ ।
ಕದಾಚಿಲ್ಲಕ್ಷ್ಮಣವ್ಯತೇ ರಾಮದೇವಃ ಪ್ರತಾಪವಾನ್ ॥ ೨ ॥

ನಲವತ್ತೊಂಬತ್ತನೆಯ ಅಧ್ಯಾಯವು.

ಇನ್ನು ಶ್ರೀ ರಾಮಚರಿತೆಯಲ್ಲಿ ಅರಣ್ಯಕಾಣ್ಡದ ಕಥೆಯು ನಿರೂಪಣೆಯು.

೧-೪. ಶ್ರೀ ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ;—'ಅನಂತರದಲ್ಲಿ ಆ ಭರತನು ಶ್ರೀರಾಮಪಾದುಕೆಗಳನ್ನು ತೆಗೆದು ಕೊಂಡು, ನಂದಿಗ್ರಾಮಕ್ಕೆ ಬರಲು, ತಾವರೆಗಣ್ಣನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣನಿಂದಲೂ, ಮಡದಿಯಾದ ಸೀತೆಯಿಂದಲೂ ಕೂಡಿ, ಸೊಪ್ಪುಗೆಣಸುಹಣ್ಣು ಗಳನ್ನು ತಿನ್ನುತ್ತಾ, ಗೊಂಡಾರಣ್ಯದಲ್ಲಿ ಸಂಚರಿಸಿದನು. ಒಮ್ಮೆ ಲಕ್ಷ್ಮಣನು ಇಲ್ಲದೆ,

ಚಿತ್ರಕೂಟವನೋದ್ದೇಶೇ ವೈದೇಹ್ಯಾ ಸಂಗಮಾಶ್ರಿತಃ ।
ಸುಷ್ವಾಪ ಸುಮುಹೂರ್ತಂ ತು ತತಃ ಕಾಕೋ ದುರಾತ್ಮವಾನ್ ॥ ೩ ॥

ಸೀತಾಭಿಮುಖಮಭ್ಯೇತ್ಯ ವಿದದಾರಸ್ತನಾಂತರಮ್ ।
ವಿದಾರ್ಯ ವೃಕ್ಷಮಾರುಹ್ಯ ಸ್ಥಿತೋಽಸೌ ವಾಯಸಾಧಮಃ ॥ ೪ ॥

ತತಃ ಪ್ರಬುದ್ಧೋ ರಾಮೋಽಸೌ ದೃಷ್ಟ್ವಾ ರಕ್ತಂ ಸ್ತನಾಂತರೇ ।
ಶೋಕಾವಿಷ್ಟಾಂ ತು ಸೀತಾಂ ತಾಮುವಾಚ ಕಮಲೇಕ್ಷಣಃ ॥ ೫ ॥

ಇದಂ ಸ್ತನಾಂತರಂ ಭದ್ರೇ ತವ ರಕ್ತಸ್ಯ ಕಾರಣಮ್ ।
ಇತ್ಯುಕ್ತಾ ಸಾ ಚ ತಂ ಪ್ರಾಹ ಭರ್ತಾರಂ ವಿನಯಾನ್ವಿತಾ ॥ ೬ ॥

ಪಶ್ಯ ರಾಜೇಂದ್ರ ವೃಕ್ಷಾಗ್ರೇ ವಾಯಸಂ ದುಷ್ಟಚೇಷ್ಟಿತಮ್ ।
ಅನೇನೈವ ಕೃತಂ ಕರ್ಮ ಸುಪ್ತೇ ತ್ವಯಿ ಮಹಾಮತೇ ॥ ೭ ॥

ಪ್ರತಾಪಶಾಲಿಯಾದ ಶ್ರೀರಾಮನು ವೈದೇಹಿಯೊಡಗೂಡಿ, ಚಿತ್ರಕೂಟ ವನಪ್ರದೇಶದಲ್ಲಿ ಒಂದು ಮುಹೂರ್ತಕಾಲ ಮಲಗಿಕೊಂಡನು. ಅನಂತರದಲ್ಲಿ ದುಷ್ಟಸ್ವಭಾವದ ಕಾಕಾಸುರನು ಸೀತಾದೇವಿಯ ಎದುರಿನಲ್ಲಿ ಬಂದು, ಸ್ತನದ ನಡುವೆ ಕುಕ್ಕಿದನು. ಇಂತು ಕುಕ್ಕಿ ಆ ವಾಯಸಾಧಮನು ಮರವನ್ನೇರಿದನು.

೫. ಬಳಿಕ ಈ ಶ್ರೀರಾಮನು ಎಚ್ಚರಗೊಂಡು ಸ್ತನದ ನಡುವೆ ರಕ್ತವನ್ನು ನೋಡಿ, ಆ ಪುಂಡರೀಕಾಕ್ಷನು ದುಃಖಗೊಂಡಿದ್ದ ಆ ಸೀತಾದೇವಿಗೆ ಇಂತು ಹೇಳಿದನು.

೬. 'ಎಲೌ ಮಂಗಳಾಂಗಿಯೇ! ನಿನ್ನ ಸ್ತನದ ನಡುವೆ, ರಕ್ತವು ಇಂತುಂಟಾಗಲು ಕಾರಣವೇನು?' ಎಂದು ಕೇಳಿದ ಪತಿಗೆ ಆ ಸೀತಾದೇವಿಯು ವಿನಯದೊಡಗೂಡಿ ಇಂತು ಹೇಳಿದಳು.

೭. 'ಎಲೈ ಮಹಾಮತಿಯಾದ ರಾಜೇಂದ್ರನೇ! ಈ ಮರದ ತುದಿಯಲ್ಲಿ ಈ ಕೆಟ್ಟ ನಡತೆಯ ಕಾಗೆಯನ್ನು ನೋಡು; ನೀನು ಮಲಗಿರುವಾಗ ಇವನೇ ಈ ಕೆಲಸವನ್ನು ಮಾಡಿದವನು.

ರಾಮೋಽಪಿ ದೃಷ್ಟವಾನ್ ಕಾಕಂ ತಸ್ಮಿನ್ ಕ್ರೋಧಮಥಾಕರೋತ್ ।
ಇಷೀಕಾಸ್ತ್ರಂ ಸಮಾಧಾಯ ಬ್ರಹ್ಮಾಸ್ತ್ರೇಣಾಭಿಮಂತ್ರಿತಮ್ ॥ ೮ ॥

ಕಾಕಮುದ್ದಿಶ್ಯ ಚಿಕ್ಷೇಪ ಸೋಽಭ್ಯಧಾವದ್ಭಯಾನ್ವಿತಃ ।
ಸ ಶ್ಚಿಂದ್ರಸ್ಯ ಸುತೋ ರಾಜನ್ನಿಂದ್ರಲೋಕಂ ವಿವೇಶ ಹ ॥ ೯ ॥

ರಾಮಾಸ್ತ್ರಂ ಪ್ರಜ್ವಲದ್ದೀಪ್ತಂ ತಸ್ಯಾನುಪ್ರವಿವೇಶ ವೈ ।
ವಿದಿತಾರ್ಥಶ್ಚ ದೇವೇಂದ್ರೋ ದೇವೈಃ ಸಹ ಸಮನ್ವಿತಃ ॥ ೧೦ ॥

ನಿಷ್ಕ್ರಾಮಯಚ್ಚ ತಂ ದುಷ್ಟಂ ರಾಘವಸ್ಯಾಪಕಾರಿಣಮ್ ।
ತತೋಽಸೌ ಸರ್ವದೇವೈಸ್ತು ದೇವಲೋಕಾದ್ಬಹಿಃ ಕೃತಃ ॥ ೧೧ ॥

೮-೯. ಎಂದು ಸೀತಾದೇವಿಯು ಹೇಳಲು, ಶ್ರೀ ರಾಮನೂ ಕಾಕಾಸುರನನ್ನು ನೋಡಿದನು. ಬಳಿಕ ಅವನಲ್ಲಿ ಕೋಪವನ್ನು ಮಾಡಿದನು. ಒಂದು ಹುಲ್ಲಿನ ಬಾಣದ ಅಭಿಮಾನದೇವತೆಯನ್ನು ಕರೆದು ! ಬ್ರಹ್ಮಾಸ್ತ್ರದಿಂದಭಿಮಂತ್ರಣಮಾಡಿ, ಕಾಕಾಸುರನ ಮೇಲೆ ಪ್ರಯೋಗಿಸಿದನು. ಅವನೂ ಭಯದಿಂದ ಕೂಡಿ ಓಡಿ ಹೋದನು. ಎಲೈ ರಾಯನೇ ! ಅವನು ಇಂದ್ರನ ಮಗನು. ಆದುದರಿಂದ ಇಂದ್ರಲೋಕವನ್ನು ಹೊಕ್ಕನು.

೧೦-೧೧. ಶ್ರೀ ರಾಮನು ಪ್ರಯೋಗಿಸಿದ ಅಸ್ತ್ರವೂ ಉರಿಗೊಂಡು ಜ್ವಲಿಸುತ್ತಾ, ಅವನನ್ನೇ ಹಿಂಬಾಲಿಸಿ ಹೊಕ್ಕಿತು. ಈ ವಿಷಯವನ್ನರಿತ ದೇವೇಂದ್ರನು ದೇವತೆಗಳಿಂದ ಕೂಡಿದವನಾಗಿ, ಶ್ರೀ ರಾಮಚಂದ್ರನಿಗೆ ಕೇಡಿಸಗಿದ ಆ ದುಷ್ಟನನ್ನು ಓಡಿಸಿದನು. ಅನಂತರದಲ್ಲಿ ಎಲ್ಲ ದೇವತೆಗಳೂ ಒಟ್ಟುಗೂಡಿ, ಇದನ್ನು ದೇವಲೋಕದಿಂದ ಹೊರದೂಡಿದರು.

ಪುನಃ ಸೋಽಭ್ಯಪತದ್ರಾಮಂ ರಾಜಾನಂ ಶರಣಂ ಗತಃ ।
ತ್ರಾಹಿ ರಾಮ ಮಹಾಬಾಹೋ ಅಜ್ಞಾನಾದಪಕಾರಿಣಮ್ ॥ ೧೨ ॥

ಇತಿ ಬ್ರುವಂತಂ ತಂ ಪ್ರಾಹ ರಾಮಃ ಕಮಲಲೋಚನಃ ।
ಅಮೋಘಂ ಚ ಮಯ್ಯೈವಾಸ್ತ್ರಮಂಗಮೇಕಂ ಪ್ರಯಚ್ಛ ವೈ ॥ ೧೩ ॥

ತತೋ ಜೀವಸಿ ದುಷ್ಟ ತ್ವಮಪಕಾರೋ ಮಹಾನ್ಕೃತಃ ।
ಇತ್ಯುಕ್ತೋಽಸೌ ಸ್ವಕಂ ನೇತ್ರಮೇಕಮಸ್ತ್ರಾಯ ದತ್ತವಾನ್ ॥ ೧೪ ॥

ಅಸ್ತ್ರಂ ತನ್ನೇತ್ರಮೇಕಂ ತು ಭಸ್ಮೀಕೃತ್ಯ ಸಮಾಯಯೌ ।
ತತಃ ಪ್ರಭೃತಿ ಕಾಕಾನಾಂ ಸರ್ವೇಷಾಮೇಕನೇತ್ರತಾ ॥ ೧೫ ॥

---

೧೨. ಆ ದುಷ್ಟನಾದ ಕಾಕನು ಓಡಿಬಂದು ರಾಜನಾದ ಶ್ರೀ ರಾಮನನ್ನೇ ಮರೆಹೊಕ್ಕನು. 'ಎಲೈ ಪರಾಕ್ರಮಶಾಲಿಯಾದ ರಾಮನೇ! ಅರಿವಿಲ್ಲದೆ ಕೇಡೆಸಗಿದ ನನ್ನನ್ನು ರಕ್ಷಿಸು;' ಎಂದು ಶ್ರೀ ರಾಮನನ್ನು ಬೇಡಿದನು.

೧೩. ಇಂತು ಹೇಳುತ್ತಲಿದ್ದ ಅವನನ್ನು ಕುರಿತು, ತಾವರೆಗಣ್ಣನಾದ ಶ್ರೀ ರಾಮನು, 'ಎಲೈ ಕಾಕನೇ! ನನ್ನ ಅಸ್ತ್ರವು (ಅಮೋಘವು) ವ್ಯರ್ಥವಾಗುವುದಿಲ್ಲವು. ಇದಕ್ಕೆ ನಿನ್ನ ಒಂದು ಅವಯವವನ್ನು ಗುರಿಪಡಿಸು.

೧೪. ಎಲೈ ದುಷ್ಟನೇ! ನೀನು ಹಿರಿದಾದ ಕೇಡನ್ನು ಮಾಡಿರುತ್ತೀಯೆ; ಅಂತೆಸಗಿದರೇ ಬಳಿಕ ಬದುಕುತ್ತೀಯೇ,' ಎಂದು ಶ್ರೀ ರಾಮನು ಹೇಳಿದನು. ಆಗ ಆ ಕಾಕನು ತನ್ನ ಒಂದು ಕಣ್ಣನ್ನು ಆ ಅಸ್ತ್ರಕ್ಕೆ ಗುರಿಯಾಗಿ ಕೊಟ್ಟನು.

೧೫. ಅಸ್ತ್ರವು ಆ ಕಾಕಾಸುರನ ಒಂದು ಕಣ್ಣನ್ನು ಸುಟ್ಟು ಹಿಂದಕ್ಕೆ ಬಂದಿತು. ಅಂದು ಮೊದಲು ಕಾಗೆಗಳಿಗೆಲ್ಲಾ ಒಂದೇ ಕಣ್ಣಿರುವುದು.

ಚಕ್ಷುಷೈಕೇನ ಪಶ್ಯಂತಿ ಹೇತುನಾ ತೇನ ಪಾರ್ಥಿವ ।
ಉಷಿತ್ವಾ ತತ್ರ ಸುಚಿರಂ ಚಿತ್ರಕೂಟೇ ಸ ರಾಘವಃ ॥ ೧೬ ॥

ಜಗಾಮ ದಂಡಕಾರಣ್ಯಂ ನಾನಾಮುನಿನಿಷೇವಿತಮ್ ।
ಸಭ್ರಾತೃಕಃ ಸಭಾರ್ಯಶ್ಚ ತಾಪಸಂ ವೇಷಮಾಸ್ಥಿತಃ ॥ ೧೭ ॥

ಧನುಃ ಪರ್ವಸು ಪಾಣಿಶ್ಚ ಸೇಷುಧೀಶ್ಚ ಮಹಾಬಲಃ ।
ತತೋ ದದರ್ಶ ತತ್ರಸ್ಥಾನಂಬುಭಕ್ಷಾನ್ಮಹಾಮುನೀನ್ ॥ ೧೮ ॥

ಅಶ್ಮಕುಟ್ಟಾನನೇಕಾಂಶ್ಚ ದಂತೋಲೂಖಲಿನಸ್ತಥಾ ।
ಚತುರ್ಥಕಾಲಿಕಾನನ್ಯಾನೇವಮುಗ್ರತಪಶ್ಚರಾನ್ ॥ ೧೯ ॥

೧೬-೧೭. ಎಲೈ ರಾಯನೇ! ಕಾಗೆಗಳು ಆ ಕಾರಣದಿಂದ ಒಂದೇ ಕಣ್ಣಿನಿಂದ ನೋಡುತ್ತವೆ. ಬಳಿಕ ಆ ರಾಘವನು ಆ ಚಿತ್ರಕೂಟದಲ್ಲಿ ಬಹುಕಾಲ ವಾಸಮಾಡಿ, ಮಡದಿ, ತಮ್ಮಂದಿರೊಡಗೂಡಿ, ತಾಪಸವೇಷವನ್ನು ತಾಳಿ, ಅನೇಕ ಮುನಿಗಳ ಗಡಣದಿಂದ ಸೇವಿತವಾದ ದಂಡಕಾರಣ್ಯಕ್ಕೆ ಹೋದನು.

೧೮. ಬಳಿಕ (ಬಿಲ್ಲಿನ ಗೆಣ್ಣುಗಳಲ್ಲಿ ಕೈಯುಳ್ಳವನೂ) ಎಡದ ಕೈಯಿಂದ ಬಿಲ್ಲಿನ ಗೆಣ್ಣನ್ನು ಹಿಡಿದವನೂ, ಬತ್ತಳಿಕೆ ಬಾಣಗಳನ್ನು ತಾಳಿದವನೂ, ಆದ ಶ್ರೀರಾಮಚಂದ್ರನು ಆ ದಂಡಕಾರಣ್ಯದಲ್ಲಿದ್ದ ಜಲಾಹಾರಿಗಳಾದ ಮಹಾ ಮುನಿಗಳನ್ನು ನೋಡಿದನು.

೧೯-೨೦. ಅಲ್ಲಿ ಕಲ್ಲಿಂದ ಪುಡಿಮಾಡಿ ಬೇಯ್ಸದ ವಸ್ತುವನ್ನು ತಿನ್ನುವ ಅನೇಕ ಅಶ್ಮಕುಟ್ಟರವರನ್ನೂ, ಹಾಗೆಯೇ ಹಲ್ಲುಗಳೇ ಒರಳಿನ ಸ್ಥಾನದಲ್ಲಿರುವ ದಂತೋಲೂಖಲಿಗಳನ್ನೂ, ಶಕ್ತಿಯಿದ್ದಷ್ಟು ಅನ್ನವನ್ನು ತಿರಿದು ತಂದು, ಹಗಲಿನ ನಾಲ್ಕನೆಯ ಯಾಮದಲ್ಲಿ ಊಟಮಾಡುವ ಚತುರ್ಥಕಾಲಿಕರನ್ನೂ, ಇನ್ನೂ ಇತರ ಕಠಿನವಾದ

ತಾನ್ ದೃಷ್ಟ್ವಾ ಪ್ರಣಿಪತ್ಯೋಚ್ಚೈ ರಾಮಸ್ತೈಶ್ಚಾಭಿನಂದಿತಃ ।
ತತೋಽಖಿಲಂ ವನಂ ದೃಷ್ಟ್ವಾ ರಾಮಃ ಸಾಕ್ಷಾಜ್ಜನಾರ್ದನಃ ॥ ೨೦ ॥

ಭ್ರಾತೃಭಾರ್ಯಾಸಹಾಯಶ್ಚ ಸಂಪ್ರತಸ್ಥೇ ಮಹಾಮತಿಃ ।
ದರ್ಶಯಿತ್ವಾ ತು ಸೀತಾಯೈ ವನಂ ಕುಸುಮಿತಂ ಶುಭಮ್ ॥ ೨೧ ॥

ನಾನಾಶ್ಚರ್ಯಸಮಾಯುಕ್ತಂ ಶನೈರ್ಗಚ್ಛನ್ ಸ ದೃಷ್ಟವಾನ್ ।
ಕೃಷ್ಣಾಂಗಂ ದತ್ತನೇತ್ರಂ ತು ಶೈಲಸ್ಥೂಲಸಮಾನಕಮ್ ॥ ೨೨ ॥

ಶುಭ್ರದಂಷ್ಟ್ರಂ ಮಹಾಬಾಹುಂ ಸಂಧ್ಯಾಘನ ಶಿರೋರುಹಮ್ ।
ಮೇಘಸ್ವನಂ ಸಾಪರಾಧಂ ಶರಂ ಸಂಧಾಯ ರಾಘವಃ ॥ ೨೩ ॥

ತಪಸ್ಸನ್ನು ಮಾಡುವವರನ್ನೂ ದರ್ಶನಮಾಡಿ, ಶ್ರೀ ರಾಮನು ಅವರಿಗೆರಗಿ, ಅವರಿಂದ ವಿಶೇಷನಾಗಿ ಶ್ಲಾಘಿಸಲ್ಪಟ್ಟನು. ಅನಂತರದಲ್ಲಿ ಸಾಕ್ಷಾಜ್ಜನಾರ್ದನನಾದ ಶ್ರೀ ರಾಮನು ಆ ವನವನ್ನೆಲ್ಲಾ ನೋಡಿದನು.

೨೧. ಮಹಾಮತಿಯಾದ ಶ್ರೀ ರಾಮನೂ, ತಮ್ಮನಾದ ಲಕ್ಷ್ಮಣನು ಮತ್ತು ಮಡದಿಯಾದ ಸೀತಾದೇವಿ ಇವರೊಡನೆ ಬನಕ್ಕೆ ತೆರಳಿದನು. ಹೂಗಳಿಂದ ಕೂಡಿದ ಮಂಗಳಕರವಾದ, ಕಟ್ಟುಚ್ಚರಿಯನ್ನುಂಟುಮಾಡುವ ಆ ಕಾಡನ್ನು ಸೀತಾದೇವಿಗೆ ಶ್ರೀ ರಾಮನು ತೋರಿಸಿದನು.

೨೨-೨೫. ಅಂತು ಮೆಲ್ಲಗೆ ಹೋಗುತ್ತಾ, ಕಾರೊಡಲನೂ, ಕಿಸುಗಣ್ಣನೂ, ಬೆಟ್ಟದಂತೆ ತೋರವಾದ ತಲೆಯುಳ್ಳವನೂ, ಬೆಳ್ಳನೆ ಕೋರೆಹಲ್ಲುಳ್ಳವನೂ, ಉದ್ದವಾದ ತೋಳುಗಳುಳ್ಳವನೂ, ಸಂಜೆಯ ಮೋಡದಂತೆ ತಲೆಗೂದಲುಳ್ಳವನೂ, ಮೇಘದಂತೆ ದನಿಯುಳ್ಳವನೂ, ಮುನಿಗಳಿಗೆ ಬಾಧಕನೂ, ಅಪರಾಧಿಯೂ ಆದ ವಿರಾಧನನ್ನು ಕಂಡು, ಶ್ರೀ ರಾಮನು ಬಿಲ್ಲಿನಲ್ಲಿ ಬಾಣವನ್ನು ಹೂಡಿ, ಕ್ರೋಧದಿಂದ

ವಿವ್ಯಾಧ ರಾಕ್ಷಸಂ ಕ್ರೋಧಾಲ್ಲಕ್ಷ್ಮಣೇನ ಸಹ ಪ್ರಭುಃ ।
ಅನ್ಯೈರವಧ್ಯಂ ಹತ್ವಾ ತಂ ಗಿರಿಗರ್ತೇ ಮಹಾತನುಮ್ ॥ ೨೪ ॥

ಶಿಲಾಭಿಶ್ಛಾದ್ಯ ಗತವಾನ್ಶರಭಂಗಾಶ್ರಮಂ ತತಃ ।
ತಂ ನತ್ವಾ ತತ್ರ ವಿಶ್ರಮ್ಯ ತತ್ಕಥಾತುಷ್ಟಮಾನಸಃ ॥ ೨೫ ॥

ವಿಂಧ್ಯಾಚಲಸಮಾನೋಽನು ವರ್ತತೇ ಭರತರ್ಷಭಃ ।
ದತ್ವಾ ತಪ್ತೋದಕಂ ತಸ್ಮೈ ಭ್ರೂಣಹಾ ಮುಚ್ಯತೇ ಯತಃ ॥ ೨೬ ॥

ಸುತೀಕ್ಷ್ಣಾಶ್ರಮಮುಪಾಗಮ್ಯ ದೃಷ್ಟವಾಂಸ್ತಂ ಮಹಾಮುನಿಮ್ ।
ತೇನಾದಿಷ್ಟೇನ ಮಾರ್ಗೇಣ ಗತ್ವಾಗಸ್ತಿಂ ದದರ್ಶ ಹ ॥ ೨೭ ॥

ಆ ರಕ್ಕಸನಿಗೆ ಹೊಡೆದನು. ಸಮರ್ಥನಾದ ಶ್ರೀ ರಾಮಚಂದ್ರನು ಲಕ್ಷ್ಮಣ ನೊಡಗೂಡಿದವನು ಮತ್ತಾರಿಂದಲೂ ಕೊಲ್ಲಲಾಗದ ಆ ವಿರಾಧನನ್ನು ಕೊಂದು, ಆ ಪೇರೊಡಲನ್ನು ಬೆಟ್ಟದ ಕಮರಿಯಲ್ಲಿ ಹಾಕಿ, ಬಂಡೆಯಿಂದ ಮುಚ್ಚಿ, ಬಳಿಕ ಶರಭಂಗ ಮುನಿಯು ಆಶ್ರಮಕ್ಕೆ ಹೋದನು. ಅಲ್ಲಿ ಆ ಮುನಿಗೆರಗಿ, ವಿಶ್ರಮಿಸಿಕೊಂಡು, ಆ ಮುನಿಗಳು ಪೇಳಿದ ಕತೆಯಿಂದ ಸಂತಸಗೊಂಡ ಮನವುಳ್ಳವನಾದನು.

೨೬. ' ವಿಂಧ್ಯಪರ್ವತದಂತೆ ಅಚಲನಾದ ಭರತವಂಶೀಯರಲ್ಲಿ ಶ್ರೇಷ್ಠನಾದವ ನಿರುತ್ತಾನೆ. ಭ್ರೂಣಹತ್ಯೆ ಮಾಡಿದವನೂ ಅವನಿಗೆ ಬಿಸುನೀರನ್ನಿತ್ತು ಆ ಪಾಪ ದಿಂದ ಮುಕ್ತನಾಗುತ್ತಾನೆ.' (ಆ ಮಹರ್ಷಿಯನೇ ಸುತೀಕ್ಷ್ಣ ಮುನಿಯು)

೨೭. ತರುವಾಯ ಶ್ರೀ ರಾಮನು ತಮ್ಮನು ಮತ್ತು ಮಡದಿ, ಇವರೊಡನೆ ಸುತೀಕ್ಷ್ಣಮುನಿಯ ಆಶ್ರಮಕ್ಕೆ ಹೋಗಿ, ಅಲ್ಲಿ ಆ ಮುನಿಯನ್ನು ಸಂದರ್ಶಿಸಿದನು. ಆ ಮುನಿಯು ತೋರಿಸಿದ ಮಾರ್ಗದಿಂದ ಮುಂದೆ ಹೋಗಿ ಅಗಸ್ತ್ಯಮುನಿಯನ್ನೂ, ಅವರ ತಮ್ಮನಾದ ಸುದರ್ಶನನೆಂಬ ಮುನಿಯನ್ನೂ (ಅಗಸ್ತ್ಯಭ್ರಾತೃವನ್ನೂ) ಸಂದರ್ಶನಮಾಡಿದನು.

ಖಡ್ಗಂ ತು ವಿಮಲಂ ತಸ್ಮಾದವಾಪ ರಘುನಂದನಃ ।
ಇಷುಧಿಂ ಚಾಕ್ಷಯಶರಂ ಚಾಪಂ ಚೈವ ತು ವೈಷ್ಣವಮ್ ॥ ೨೮ ॥

ತತೋಽಗಸ್ತ್ಯಾಶ್ರಮಾದ್ರಾಮೋ ಭ್ರಾತೃಭಾರ್ಯಾಸಮನ್ವಿತಃ ।
ಗೋದಾವರ್ಯಾಃ ಸಮೀಪೇ ತು ಪಂಚವಟ್ಯಾಮುವಾಸ ಸಃ ॥ ೨೯ ॥

ತತೋ ಜಟಾಯುರಭ್ಯೇತ್ಯ ರಾಮಂ ಕಮಲಲೋಚನಮ್ ।
ನತ್ವಾ ಸ್ವಕುಲಮಾಖ್ಯಾಯ ಸ್ಥಿತವಾನ್ಗೃಧ್ರನಾಯಕಃ ॥ ೩೦ ॥

ರಾಮೋಽಪಿ ತತ್ರ ತಂ ದೃಷ್ಟ್ವಾ ಆತ್ಮವೃತ್ತಂ ವಿಶೇಷತಃ ।
ಕಥಯಿತ್ವಾ ತು ತಂ ಪ್ರಾಹ ಸೀತಾಂ ರಕ್ಷ ಮಹಾಮತೇ ॥ ೩೧ ॥

---

೨೮. ಶ್ರೀರಘುನಂದನನು ಆ ಅಗಸ್ತ್ಯಮುನಿಯಿಂದ ನಿರ್ಮಲವಾದ ಕತ್ತಿಯನ್ನೂ, ಕೊನೆಯಾಗದ ಬಾಣಗಳುಳ್ಳ ಬತ್ತಳಿಕೆಯನ್ನೂ, ವಿಷ್ಣುವೇ ದೇವತೆಯಾದ ಬಿಲ್ಲನ್ನೂ ಅನುಗ್ರಹವಾಗಿ ಪಡೆದನು.

೨೯. ಆ ಅಗಸ್ತ್ಯಾಶ್ರಮದಿಂದ ಮುಂದೆ ಹೊರಟು, ಅವನು ತನ್ನ ತಮ್ಮ ಮಡದಿಯರೊಡಗೂಡಿ, ಗೋದಾವರೀನದಿಯ ಹತ್ತಿರದ ಪಂಚವಟಿಯಲ್ಲಿ ವಾಸ ಮಾಡಿದನು.

೩೦. ಆ ಬಳಿಕ ಹದ್ದುಗಳಿಗೆ ಒಡೆಯನಾದ ಜಟಾಯುವೆಂಬವನು ಪುಂಡರೀಕಾಕ್ಷನಾದ ಶ್ರೀರಾಮನ ಬಳಿಗೆ ಬಂದು, ನಮಸ್ಕರಿಸಿ ತನ್ನ ಕುಲವನ್ನು ಹೇಳಿ ಕುಳಿತನು.

೩೧. ಅಲ್ಲಿ ಶ್ರೀರಾಮನೂ ಅವನನ್ನು ನೋಡಿ, ವಿಶೇಷವಾಗಿ ತನ್ನ ವೃತ್ತಾಂತವನ್ನೂ ಅರುಹಿ, ‘ ಎಲೈ ಮಹಾಮತಿಯೇ ! ಸೀತಾದೇವಿಯನ್ನು ರಕ್ಷಿಸು ;’ ಎಂದೂ ಹೇಳಿದನು.

ಇತ್ಯುಕ್ತೋಽಸೌ ಜಟಾಯುಸ್ತು ರಾಮಮಾಲಿಂಗ್ಯ ಸಾದರಮ್ ।
ಕಾರ್ಯಾರ್ಥಂ ತು ಗತೇ ರಾಮೇ ಭ್ರಾತ್ರಾ ಸಹ ವನಾಂತರಮ್ ॥ ೩೨ ॥

ಅಹಂ ರಕ್ಷಾಮಿ ತೇ ಭಾರ್ಯಾಂ ಸ್ಥೀಯತಾಮತ್ರ ಶೋಭನಾ ।
ಇತ್ಯುಕ್ತ್ವಾ ಗತವಾನಾಶ್ರಮಂ ಗೃಧ್ರರಾಜಃ ಸ್ವಮಾಶ್ರಮಮ್ ॥ ೩೩ ॥

ಸಮೀಪೇ ದಕ್ಷಿಣೇ ಭಾಗೇ ನಾನಾಪಕ್ಷಿನಿಷೇವಿತೇ ।
ವಸಂತಂ ರಾಘವಂ ತತ್ರ ಸೀತಯಾ ಸಹ ಸುಂದರಮ್ ॥ ೩೪ ॥

ಮನ್ಮಥಾಕಾರಸದೃಶಂ ಕಥಯಂತಂ ಮಹಾಕಥಾಃ ।
ಕೃತ್ವಾ ಮಾಯಾಮಯಂ ರೂಪಂ ಲಾವಣ್ಯಗುಣಸಂಯುತಮ್ ॥ ೩೫ ॥

ಮದನಾಕ್ರಾಂತ ಹೃದಯಾ ಕದಾ ಚಿದ್ರಾವಣಾನುಜಾ ।
ಗಾಯಂತೀ ಸುಸ್ವರಂ ಗೀತಂ ಶನೈರಾಗತ್ಯ ರಾಕ್ಷಸೀ ॥ ೩೬ ॥

೩೨-೩೩. ಇಂತು ಹೇಳಿಸಿಕೊಂಡ ಈ ಜಟಾಯುವು ಆದರದೊಡನೆ ಶ್ರೀರಾಮ ಚಂದ್ರನನ್ನು ತಳ್ಕೈಸಿ, 'ತಮ್ಮನೊಡನೆ ಶ್ರೀರಾಮನಾದ ನೀನು ಕಾರ್ಯಾರ್ಥವಾಗಿ ಬೇರೆ ಕಾಡಿಗೆ ಹೋದಾಗ, ನಿನ್ನ ಮಡದಿಯನ್ನು ನಾನು ರಕ್ಷಿಸುವೆನು; ಈ ಮಂಗಳಾಂಗಿಯು ಇಲ್ಲಿರಲಿ;' ಎಂದು ಶ್ರೀರಾಮನಿಗೆ ಹೇಳಿ, ಗೃಧ್ರರಾಜನಾದ ಜಟಾಯುವು ತನ್ನ ಆಶ್ರಮಕ್ಕೆ ಹೋದನು.

೩೪-೩೬. ಹತ್ತಿರದ ದಕ್ಷಿಣ ದಿಕ್ಕಿನ ಅನೇಕ ಜಾತಿ ಹಕ್ಕಿಗಳಿಂದ ಸೇವಿತವಾದ ಕಾಡಿನ ಈ ಭಾಗದಲ್ಲಿ ಸೀತಾದೇವಿಯೊಡನೆ ವಾಸಿಸುತ್ತಲಿರುವ, ಮನೋಹರನಾದ, ಮನ್ಮಥನ ಆಕಾರವನ್ನು ಹೋಲುವ, ನೀಳ್ಗತೆಗಳನ್ನು ಹೇಳುತ್ತಿರುವ, ಶ್ರೀರಾಮಚಂದ್ರನನ್ನು ಕುರಿತು, ಒಮ್ಮೆ ರಾವಣನ ಸೋದರಿಯಾದ ಶೂರ್ಪಣಖೆಯೆಂಬ ರಕ್ಕಸಿಯು, ಮನ್ಮಥನಿಂದ ಆಕ್ರಮಿಸಿದ ಮನವುಳ್ಳವಳಾಗಿ ಇಂಚರದ ಹಾಡನ್ನು ಹಾಡುತ್ತಾ, ಮೆಲ್ಲಗೆ ಮಾಯೆಯ ರೂಪವನ್ನು ಧರಿಸಿದವಳಾಗಿ, ಅಲ್ಲಿಗೆ ಬಂದಳು.

ದದರ್ಶ ರಾಮಮಾಸೀನಂ ಕಾನನೇ ಸೀತಯಾ ಸಹ ।
ಅಥ ಶೂರ್ಪಣಖಾ ಘೋರಾ ಮಾಯಾರೂಪಧರಾ ಶುಭಾ ॥ ೩೭ ॥

ನಿಃಶಂಕಾ ದುಷ್ಟಚಿತ್ತಾ ಸಾ ರಾಘವಂ ಪ್ರತ್ಯಭಾಷತ ।
ಭಜ ಮಾಂ ಕಾಂತ ಕಲ್ಯಾಣೀಂ ಭಜಂತೀಂ ಕಾಮಿನೀಮಿಹ ॥ ೩೮ ॥

ಭಜಮಾನಾಂ ತ್ಯಜೇದ್ಯಸ್ತು ತಸ್ಯ ದೋಷೋ ಮಹಾನ್ಭವೇತ್ ।
ಇತ್ಯುಕ್ತಃ ಶೂರ್ಪಣಖಯಾ ರಾಮಸ್ತಾಮಾಹ ಪಾರ್ಥಿವಃ ॥ ೩೯ ॥

ಕಲತ್ರವಾನಹಂ ಬಾಲೇ ಕನೀಯಾಂಸಂ ಭಜಸ್ವ ಮೇ ।
" ಮಮಾಸ್ತಿ ಭಾರ್ಯಾ ಸದನೇ ತ್ವಯಾ ನಾಸ್ತಿ ಪ್ರಯೋಜನಮ್ ॥
ಇತಿ ಶ್ರುತ್ವಾ ತತಃ ಪ್ರಾಹ ರಾಕ್ಷಸೀ ಕಾಮರೂಪಿಣೀ ।
ಅತೀವ ನಿಪುಣಾ ಚಾಹಂ ರತಿಕರ್ಮಣಿ ರಾಘವ ॥

---

೩೭. ಘೋರಸ್ವಭಾವದ, ಶುಭವಾದ, ಮಾಯಾರೂಪವನ್ನು ತಾಳಿದ, ಆ ಶೂರ್ಪಣಖೆಯು, ಅನಂತರದಲ್ಲಿ ಕಾಡಿನಲ್ಲಿ ಸೀತೆಯೊಡನೆ ಕುಳಿತಿದ್ದ ಶ್ರೀರಾಮನನ್ನು ನೋಡಿದಳು.

೩೮-೩೯. ಆ ದುಷ್ಟಚಿತ್ತೆಯು ಸ್ವಲ್ಪವೂ ಶಂಕೆಯಿಲ್ಲವೆ, ಶ್ರೀರಾಮನನ್ನು ಕುರಿತು, ಹೇಳಿದಳು :— 'ಎಲೈ ಕಾಂತನೇ ! ಇಲ್ಲಿ ನಿನ್ನನ್ನು ಸಾರುತ್ತಲಿರುವ, ಕಲ್ಯಾಣಿಯೂ, ವಿಶೇಷವಾಗ ಕಾಮವುಳ್ಳವಳೂ, ಆದ ನನ್ನನ್ನು ಹೊಂದು. ತಾನಾಗಿಯೇ ಹೊಂದಲು ಬರುವವಳನ್ನು ಯಾವನು ತಿರಸ್ಕರಿಸಿ ಬಿಡುತ್ತಾನೆಯೋ, ಅವನಿಗೆ ಬಹು ದೋಷವುಂಟಾಗುವುದು ;' ಎಂದು ಶೂರ್ಪಣಖೆಯಿಂದ ಹೇಳಿಸಿ ಕೊಂಡ ಪಾರ್ಥಿವನಾದ ರಾಮನು ಅವಳಿಗೆ ಇಂತು ಹೇಳಿದನು.

೪೦-೪೧. 'ಎಲೌ ಬಾಲೇ ! ನಾನು ಮಡದಿಯೊಡಗೂಡಿರುವೆನು ; ನನ್ನ ಕಿರಿಯನನ್ನು ಸೇವಿಸು ;' ಎಂದನು. ಆಗ ಲಕ್ಷ್ಮಣನೂ 'ಎಲೌ ಬಾಲೆ ! ಅಯೋಧ್ಯೆಯ ಅರಮನೆಯಲ್ಲಿ ನನ್ನ ಮಡದಿ ಇರುವಳು; ನಿನ್ನಿಂದ ಯಾವ ಕೆಲಸವೂ ಇಲ್ಲವು ;' ಎಂದನು. ಇಂತು ಲಕ್ಷ್ಮಣನ ನುಡಿಯನ್ನೂ ಆ ಕಾಮ

ತ್ಯಕ್ತ್ವೈನಾಮನಭಿಜ್ಞಾಂ ತ್ವಂ ಸೀತಾಂ ಮಾಂ ಭಜ ಶೋಭನಾಮ್ ।
ಇತ್ಯಾಕರ್ಣ್ಯ ವಚಃ ಪ್ರಾಹ ರಾಮಸ್ತಾಂ ಧರ್ಮತತ್ಪರಃ ॥
ಪರಸ್ತ್ರಿಯಂ ನ ಗಚ್ಛೇಽಹಂ ತ್ವಮಿತೋ ಗಚ್ಛ ಲಕ್ಷ್ಮಣಮ್ ।
ತಸ್ಯ ನಾತ್ರ ವನೇ ಭಾರ್ಯಾ ತ್ವಾಮಸೌ ಸಂಗ್ರಹೀಷ್ಯತಿ ॥
ಇತ್ಯುಕ್ತಾ ಸಾ ಪುನಃ ಪ್ರಾಹ ರಾಮಂ ರಾಜೀವಲೋಚನಮ್ ।
ಯಥಾ ಸ್ಯಾಲ್ಲಕ್ಷ್ಮಣೋ ಭರ್ತಾ ತಥಾ ತ್ವಂ ದೇಹಿ ಪತ್ರಕಮ್ ॥
ತಥೈಮುಕ್ತೋ ಮತಿಮಾನ್ರಾಮಃ ಕಮಲಲೋಚನಃ ॥ ೪೦ ॥

ಛಿಂಧ್ಯಸ್ಯಾ ನಾಸಿಕಾಮಿತಿ ಮೋಕ್ತ್ವಾ ನಾತ್ರ ಸಂಶಯಃ ।
ರಾಮೋ ಮನೋಹರ ಇತ್ಯಾಲಿಖ್ಯ ಪತ್ರಂ ಪ್ರದತ್ತವಾನ್ ॥ ೪೧ ॥

ರೂಪಿಣಿಯಾದ ರಕ್ಕಸಿಯು ಕೇಳಿ, ಹೀಗೆ ನುಡಿದಳು; 'ಎಲೈ ರಾಘವನೇ! ನಾನು ರತಿಕಜ್ಞದಲ್ಲಿ ಅತ್ಯಂತ ನಿಪುಣೆಯು; ಏನೂ ಅರಿಯದ ಈ ಸೀತೆಯನ್ನು ಬಿಟ್ಟು, ಶೋಭನೆಯಾದ ನನ್ನನ್ನು ನೀನು ಹೊಂದು;' ಶ್ರೀರಾಮನು ಈ ಮಾತನ್ನು ಕೇಳಿ, ಧರ್ಮದಲ್ಲಿ ಆಸಕ್ತನಾಗಿ, ಅವಳಿಗೆ ಹೇಳಿದನು. 'ನಾನು ಬೇರೆ ಹೆಂಗುಸನ್ನು ಸಂಬಂಧಮಾಡುವುದಿಲ್ಲವು; ನೀನು ಇಲ್ಲಿಂದ ಲಕ್ಷ್ಮಣನ ಬಳಿಗೆ ಹೋಗು; ಇವನ ಮಡದಿಯು ಈ ವನದಲ್ಲಿಲ್ಲವು; ಇವನು ನಿನ್ನನ್ನು ಸಂಗ್ರಹಿಸುವನು;' ಎಂದು ಹೇಳಲು, ಅವಳು ಮತ್ತೂ ಪುಂಡರೀಕಾಕ್ಷನಾದ ಶ್ರೀರಾಮನಿಗೆ ಹೇಳಿದಳು,' 'ಲಕ್ಷ್ಮಣನು (ಒಡೆಯನಾಗುವಂತೆ) ಗಂಡನಾಗುವಂತೆ ನೀನು ಓಲೆಯನ್ನು ಬರೆದು ಕೊಡು;' ಎಂದು ಆ ಮಾಯಾವಿನಿಯು ಹೇಳಲು, ಮತಿವಂತನಾದ ಕಮಲ ಲೋಚನನಾದ ಶ್ರೀರಾಮನು, ಇಂತು ಬರೆದನು. 'ವತ್ಸ ಲಕ್ಷ್ಮಣ ಇವಳ ಮೂಗನ್ನು ಕತ್ತರಿಸು; ಸುಮ್ಮನೇ ಇವಳನ್ನು ಬಿಡಬಾರದು;' ಎಂದು ಮನೋಹರನಾದ ಶ್ರೀರಾಮನು ಓಲೆಯನ್ನು ಬರೆದುಕೊಟ್ಟನು.

ಸಾ ಗೃಹೀತ್ವಾ ತು ತತ್ಪತ್ರಂ ಗತ್ವಾ ತಸ್ಮಾನ್ಮುದಾನ್ವಿತಾ ।
ಗತ್ವಾ ದತ್ತವತೀ ತದ್ವಲ್ಲಕ್ಷ್ಮಣಾಯ ಮಹಾತ್ಮನೇ ॥ ೪೨ ॥

ತಂ ದೃಷ್ಟ್ವಾ ಲಕ್ಷ್ಮಣಃ ಪ್ರಾಹ ರಾಕ್ಷಸೀಂ ಕಾಮರೂಪಿಣೀಮ್ ।
ನ ಲಂಘ್ಯಂ ರಾಘವವಚೋ ಮಯಾ ತಿಷ್ಠಾತ್ಮಕಶ್ಮಲೇ ॥ ೪೩ ॥

ತಾಂ ಪ್ರಗೃಹ್ಯ ತತಃ ಖಡ್ಗಂ ಉದ್ಯಮ್ಯ ವಿಮಲಂ ಸುಧೀಃ ।
ತೇನ ತತ್ಕರ್ಣನಾಸಾಂ ತು ಚಿಚ್ಛೇದ ತಿಲಕಾಂಡವತ್ ॥ ೪೪ ॥

ಛಿನ್ನನಾಸಾ ತತಃ ಸಾ ತು ರುರೋದ ಭೃಶದುಃಖಿತಾ ।
ಹಾ ದಶಾಸ್ಯ ಮಮ ಭ್ರಾತಃ ಸರ್ವದೇವವಿಮರ್ದಕ ॥ ೪೫ ॥

---

೪೨. ಆ ಶೂರ್ಪಣಖೆಯು ಆ ಓಲೆಯನ್ನು ತೆಗೆದುಕೊಂಡು ಅಲ್ಲಿಂದ ಸಂತಸ ದೊಡಗೂಡಿ ಹೋಗಿ, ಅಂತೆಯೇ ಮಹಾತ್ಮನಾದ ಲಕ್ಷ್ಮಣನಿಗೆ ಆ ಓಲೆಯನ್ನು ಕೊಟ್ಟಳು.

೪೩. ಲಕ್ಷ್ಮಣನು ಓಲೆಯನ್ನು ನೋಡಿ, ಕಾಮರೂಪಿಣಿಯಾದ ಆ ರಕ್ಕಸಿಗೆ, 'ಎಲೌ ಕಶ್ಮಲಸ್ವಭಾವದ ರಕ್ಕಸಿಯೇ ! ನಾನು ಶ್ರೀರಾಮನ ಮಾತನ್ನು ಮೀರ ಲಾಗದು ; ನಿಲ್ಲು ;' ಎಂದು ನುಡಿದನು.

೪೪. ಅನಂತರದಲ್ಲಿ ಅವಳನ್ನು ಹಿಡಿದುಕೊಂಡು, ಧೀಮಂತನಾದ ಲಕ್ಷ್ಮಣನು ನಿರ್ಮಲವಾದ, ಹರಿತವಾದ ಕಡುಗವನ್ನೆತ್ತಿ, ಅದರಿಂದ ಎಳ್ಳುಗಿಡದ ಕಾಂಡದಂತೆ ಅವಳ ಮೂಗು ಕಿವಿಗಳನ್ನೂ ಕತ್ತರಿಸಿದನು.

೪೫-೪೬. ಅನಂತರದಲ್ಲಿ ಅವಳು ಮೂಗು ಕತ್ತರಿಸಿಹೋದವಳು, ಬಹು ಶೋಕಾರ್ತೆಯಾಗಿ ಅತ್ತಳು; 'ಹಾ ದಶಾಸ್ಯನೇ ! ನನ್ನ ಅಣ್ಣನೇ ! ದೇವತೆ

ಹಾ ಕಷ್ಟಂ ಕುಂಭಕರ್ಣಾದ್ಯ ಪ್ರಪತಂತೀ ಪದೇ ಪದೇ ।
ಹಾ ಹಾ ಕಷ್ಟಂ ಗುಣನಿಧೇ ವಿಭೀಷಣ ಮಹಾಮತೇ ॥ ೪೬ ॥

ಇತ್ಯೇವಮಾರ್ತಾ ರುದತೀ ಸಾ ಗತ್ವಾ ಖರದೂಷಣೌ ।
ತ್ರಿಶಿರಸಂ ಚ ಸಾ ದೃಷ್ಟ್ವಾ ನಿವೇದ್ಯಾತ್ಮಪರಾಭವಮ್ ॥ ೪೭ ॥

ರಾಮಮಾಹ ಜನಸ್ಥಾನೇ ಭ್ರಾತ್ರಾ ಸಹ ಮಹಾಬಲಮ್ ।
ಜ್ಞಾತ್ವಾ ತೇ ರಾಘವಂ ಕ್ರುದ್ಧಾಃ ಪ್ರೇಷಯಾಮಾಸುರೂರ್ಜಿತಾನ್ ॥ ೪೮ ॥

ಚತುರ್ದಶಸಹಸ್ರಾಣಿ ರಾಕ್ಷಸಾನಾಂ ಬಲೀಯಸಾಮ್ ।
ಅಗ್ರೇ ನಿಜಗ್ಮುಸ್ತೇನ್ಯೈವ ರಕ್ಷಸಾಂ ನಾಯಕಾಸ್ತ್ರಯಃ ॥ ೪೯ ॥

ಗಳನ್ನೆಲ್ಲಾ ಸದೆಬಡಿದವನೇ! ಹಾ ಕಷ್ಟವು; ಎಲೈ ಕುಂಭಕರ್ಣನೇ! ಇಂದು ನಾನು ವಿಪತ್ತಿನಿಂದ ಹಾಳಾಗಿ ಹೋದೆ; ಎಲೈ ಗುಣನಿಧಿಯೂ, ಮಹಾಮತಿಯೂ, ಆದ ವಿಭೀಷಣನೇ! ಹಾ ಹಾ ಕಷ್ಟವು;' ಎಂದು ಆರ್ತೆಯಾಗಿ ಅಡಿಗಡಿಗೆ ಬೀಳುತ್ತಾ ಏಳುತ್ತಾ ಅವಳು ಖರದೂಷಣತ್ರಿಶಿರಸರ ಬಳಿಗೈದಿ ಕಂಡು, ತನಗಾದ ತಿರಸ್ಕಾರವನ್ನು ಹೇಳಿಕೊಂಡಳು.

೪೮. ಕಡುಸಾಹಸಿಗನಾದ ರಾಮನು, ತಮ್ಮನೊಡನೆ ಜನಸ್ಥಾನದಲ್ಲಿರುವುದನ್ನೂ ಅರುಹಿದಳು. ಆ ಖರಾದಿಗಳು ಅದನ್ನು ತಿಳಿದಿ, ಪನ್ನತಿಕೆವೆತ್ತವರನ್ನು ಅಲ್ಲಿಗೆ ಕಳುಹಿಸಿದರು.

೪೯. ಅದರಿಂದಲೇ ಆ ಮೂವರು ನಾಯಕರೂ ಬಲಾಢ್ಯರಾದ, ಹದಿನಾಲ್ಕು ಸಾಸಿರ ಮಂದಿ ರಕ್ಕಸರ ಪಡೆಯ ಮುಂದೆ ಹೊರಟರು.

ರಾವಣೇನ ನಿಯುಕ್ತಾಸ್ತೇ ಪೂರ್ವೈವ ತು ಮಹಾಬಲಾಃ ।
“ ಮಹಾಬಲಪರೀವಾರಾಃ ಜನಸ್ಥಾನಮುಪಾಗತಾಃ ॥
ಕ್ರೋಧೇನ ಮಹತಾಽಽವಿಷ್ಟಾ ದೃಷ್ಟ್ವಾ ತಾಂ ಛಿನ್ನನಾಸಿಕಾಮ್ ”
ರುದಂತೀಮಶ್ರುದಿಗ್ಧಾಂಗೀಂ ಭಗಿನೀಂ ರಾವಣಸ್ಯ ತು ॥ ೩೦ ॥

ರಾಮೋಽಪಿ ತದ್ಬಲಂ ದೃಷ್ಟ್ವಾ ರಾಕ್ಷಸಾನಾಂ ಬಲೀಯಸಾಮ್ ।
ಸಂಸ್ಥಾಪ್ಯ ಲಕ್ಷ್ಮಣಂ ತತ್ರ ಸೀತಾಯಾ ರಕ್ಷಣಂ ಪ್ರತಿ ॥ ೩೧ ॥

ಗತ್ವಾ ತು ಪ್ರಹಿತೈಸ್ತತ್ರ ರಾಕ್ಷಸೈರ್ಬಲದರ್ಪಿತೈಃ ।
ಚತುರ್ದಶಸಹಸ್ರಂ ತು ರಾಕ್ಷಸಾನಾಂ ಮಹಾಬಲಮ್ ॥ ೩೨ ॥

ಕ್ಷಣೇನ ನಿಹತಂ ತೇನ ಶರೈರಗ್ನಿಶಿಖೋಪಮೈಃ ।
ಖರಶ್ಚ ನಿಹತಸ್ತೇನ ದೂಷಣಶ್ಚ ಮಹಾಬಲಃ ॥ ೩೩ ॥

---

೩೦. ಮಹಾಬಲರಾದ ಆ ಖರಾದಿಗಳು, ರಾವಣನಿಂದ ಮೊದಲೇ ಆಣತಿಗೊಂಡು, ಪೆರ್ವಡೆಗೂಡಿ, ಜನಸ್ಥಾನಕ್ಕೆ ಬಂದಿದ್ದರು. ಮೂಗು ಕತ್ತರಿಸಿಕೊಂಡು ಬಂದ, ಕಂಬನಿಯಿಂದ ತೊಯ್ದ ಒಡಲಿನ ರಾವಣನ ತಂಗಿಯನ್ನು ಕಂಡು ಬಹುವಾಗಿ ರಾಮನ ಮೇಲೆ ಕ್ರುದ್ಧರಾದರು.

೩೧. ಶ್ರೀರಾಮನೂ ಪನ್ನತಿಕೆಯ ರಕ್ಕಸರ ಆ ಪಡೆಯನ್ನು ನೋಡಿ, ಅಲ್ಲಿ ಸೀತಾದೇವಿಯ ರಕ್ಷಣೆಗೆ ತಮ್ಮನಾದ ಲಕ್ಷ್ಮಣನನ್ನು ಗೊತ್ತುಮಾಡಿದನು.

೩೨-೩೩. ತರುವಾಯದಲ್ಲಿ ಅಲ್ಲಿಂದ ಹೊರಟು ಖರಾದಿಗಳಿಂದ ಮುಂಚೆ ಕಳುಹಿಸಲ್ಪಟ್ಟ, ಬಲಗರ್ವಿತರಾದ ರಕ್ಕಸರಿಂದ ಕೂಡಿದ ಹದಿನಾಲ್ಕುಸಾಸಿರ ರಕ್ಕಸರ ಪೆರ್ವಡೆಯನ್ನು ಅಗ್ನಿಜ್ವಾಲೆಗೆಣೆಯಾದ ಬಾಣಗಳಿಂದ ಚಣಕಾಲದಲ್ಲಿಯೇ ಸಂಹರಿಸಿದುದಲ್ಲದೆ, ಶ್ರೀರಾಮನು ಮಹಾಬಲರಾದ ಖರದೂಷಣತ್ರಿಶಿರಸರನ್ನು ಮಹಾರೋಷ

ತ್ರಿಶಿರಾಶ್ಚ ಮಹಾರೋಷಾದ್ರಣೇ ರಾಮೇಣ ಪಾತಿತಃ ।
ಹತ್ವಾ ತಾನ್ರಾಕ್ಷಸಾನ್ದುಷ್ಟಾನ್ರಾಮಶ್ಚಾಶ್ರಮಮಾವಿಶತ್ ॥ ೫೪ ॥

ಶೂರ್ಪಣಖಾ ಚ ರುದತೀ ರಾವಣಾಂತಿಕಮಾಗತಾ ।
ಛಿನ್ನನಾಸಾಂ ಚ ತಾಂ ದೃಷ್ಟ್ವಾ ರಾವಣೋ ಭಗಿನೀಂ ತದಾ ॥ ೫೫ ॥

ಮಾರೀಚಂ ಪ್ರಾಹ ದುರ್ಬುದ್ಧಿಃ ಸೀತಾಹರಣಕರ್ಮಣಿ ।
ಪುಷ್ಪಕೇಣ ವಿಮಾನೇನ ಗತ್ವಾಹ ತ್ವಂ ಚ ಮಾತುಲ ॥ ೫೬ ॥

ಜನಸ್ಥಾನಸಮೀಪೇ ತು ಸ್ಥಿತ್ವಾ ತತ್ರ ಮಮಾಜ್ಞಯಾ ।
ಸೌವರ್ಣಮೃಗರೂಪಂ ತ್ವಮಾಸ್ಥಾಯ ತು ಶನೈಃ ಶನೈಃ ॥ ೫೭ ॥

ಗಚ್ಛ ತ್ವಂ ತತ್ರ ಕಾರ್ಯಾರ್ಥಂ ಯತ್ರ ಸೀತಾ ವ್ಯವಸ್ಥಿತಾ ।
ದೃಷ್ಟ್ವಾ ಸಾ ಮೃಗಪೋತಂ ತ್ವಾಂ ಸೌವರ್ಣಂ ತ್ವಯಿ ಮಾತುಲ ॥ ೫೮ ॥

ಸ್ಪೃಹಾಂ ಕರಿಷ್ಯತೇ ರಾಮಂ ಪ್ರೇಷಯಿಷ್ಯತಿ ಬಂಧನೇ ।
ತದ್ವಾಕ್ಯಾತ್ತತ್ರ ಗಚ್ಛಂತಂ ಧಾವಸ್ವ ಗಹನೇ ವನೇ ॥ ೫೯ ॥

ದಿಂದ ಸಂಹರಿಸಿ ಕೆಡಹಿದನು. ಅಂತು ಶ್ರೀರಾಮನು ಆ ದುಷ್ಟರಾದ ರಕ್ಕಸರನ್ನು ತನ್ನ ಅಪ್ರಾಕೃತಾನಂತ ಶಕ್ತಿಯಿಂದ ಕೊಂದು, ಹಿಂದಿರುಗಿ ಆಶ್ರಮಕ್ಕೆ ಬಂದನು.

೫೫-೫೯. ಶೂರ್ಪಣಖೆಯೂ ಅಳುತ್ತಾ ರಾವಣನ ಬಳಿಗೆ ಬಂದಳು. ಆಗ ರಾವಣನು ಕತ್ತರಿಸಿದ ಮೂಗಿನ ಆ ಅನುಜಾತೆಯನ್ನು ನೋಡಿ, ದುರ್ಬುದ್ಧಿಯುಳ್ಳವನಾಗಿ ಸೀತೆಯನ್ನು ಅಪಹರಿಸುವ ಕೆಲಸದಲ್ಲಿ ಮಾರೀಚನಿಗೆ ಇಂತು ಹೇಳಿದನು ; ' ಎಲೈ ಸೋದರರದಮಾವನೇ ! ನೀನು ಪುಷ್ಪಕವಿಮಾನದಿಂದ ಹೋಗಿ, ಜನಸ್ಥಾನದ ಬಳಿಯಲ್ಲಿದ್ದು, ಅಲ್ಲಿ ನನ್ನ ಅಪ್ಪಣೆಯಿಂದ ನೀನು ಹೊನ್ನ ಎರಲೆಯ ಒಡಲನ್ನು ತಾಳಿ, ಮೆಲ್ಲಮೆಲ್ಲನೆ ನಮ್ಮ ಕಾರ್ಯದ ಸಲುವಾಗಿ ಎಲ್ಲಿ ಸೀತೆಯಿರುವಳೋ, ಅಲ್ಲಿಗೆ ಹೋಗು ; ' ಎಲೈ ಮಾತುಳನೇ ! ಅವಳು ಹೊನ್ನ ಎಳೆಯ ಹುಲ್ಲೆಯನ್ನು ನಿನ್ನಲ್ಲಿ ನೋಡಿ ಅಸೆಗೊಂಡು, ಹಿಡಿಯಲು ರಾಮನನ್ನ ಕಳುಹಿಸುವಳು ; ಅವಳ ಮಾತಿಂದ ಅಲ್ಲಿ ಅವನು ದಟ್ಟವಾದ ಹಳುವದೊಳಗೆ ಹಿಂಬಾಲಿಸಿ, ಬರುವಂತೆ ಓಡಿಹೋಗು.

ಲಕ್ಷ್ಮಣಸ್ಯಾಪಕರ್ಷಾರ್ಥಂ ವಕ್ತವ್ಯಂ ವಾಗುದೀರಣಮ್ ।
ತತಃ ಪುಷ್ಪಕಮಾರುಹ್ಯ ಮಾಯಾರೂಪೇಣ ಚಾಪ್ಯಹಮ್ ॥ ೬೦ ॥

ತಾಂ ಸೀತಾಮಾನಯಿಷ್ಯಾಮಿ ತಸ್ಯಾಮಾಸಕ್ತಮಾನಸಃ ।
ತ್ವಮಪಿ ಸ್ವೇಚ್ಛಯಾಪಶ್ಚಾದಾಗಮಿಷ್ಯಸಿ ಶೋಭನಃ ॥ ೬೧ ॥

ಇತ್ಯುಕ್ತೇ ರಾವಣೇನಾಥ ಮಾರೀಚೋ ವಾಕ್ಯಮಬ್ರವೀತ್ ।
ತ್ವಮೇವ ಗಚ್ಛ ಪಾಪಿಷ್ಠ ನಾಹಂ ಗಚ್ಛಾಮಿ ತತ್ರ ವೈ ॥ ೬೨ ॥

ಪುರ್ವೈವಾನೇನ ರಾಮೇಣ ವ್ಯಥಿತೋಽಹಂ ಮುನೇರ್ಮಖೇ ।
ಏವಮುಕ್ತೇಽಥ ಮಾರೀಚೇ ರಾವಣಃ ಕ್ರೋಧಮೂರ್ಛಿತಃ ॥ ೬೩ ॥

೬೦-೬೧. ಲಕ್ಷ್ಮಣನನ್ನು ಸೆಳೆಯುವುದಕ್ಕಾಗಿ ಗಟ್ಟಿಯಾಗಿ ಅವನನ್ನು ರಾಮನು ಕೂಗುವಂತೆ ಕೂಗುವುದು. ಬಳಿಕ ನಾನೂ ಮಾಯಾರೂಪದಿಂದ ಪುಷ್ಪಕವನ್ನು ಹತ್ತಿ, ಅವಳಲ್ಲಿ ತೊಡಗಿದ ಮನವುಳ್ಳವನಾಗಿ, ಅವಳನ್ನು ಹೊತ್ತು ತರುವೆನು. ಶೋಭನನಾದ ನೀನೂ, ಹಿಂದಿನಿಂದ ಸ್ವೇಚ್ಛೆಯಿಂದ ಬರುವೆ.'

೬೨. ರಾವಣನು ಇಂತು ನುಡಿಯಲು, ಬಳಿಕ ಮಾರೀಚನು ಈ ಮಾತನ್ನು ಹೇಳಿದನು; 'ಎಲೈ ಪಾಪಿಷ್ಠನೇ! ಅಲ್ಲಿಗೆ ನೀನೇ ಹೋಗು; ನಾನು ಹೋಗುವುದಿಲ್ಲ.

೬೩-೬೪. ನಾನು ಹಿಂದೆಯೇ ವಿಶ್ವಾಮಿತ್ರಮುನಿಯ ಜನ್ನದಲ್ಲಿ ಈ ರಾಮನಿಂದ ನೊಂದಿರುತ್ತೇನೆ.' ಮಾರೀಚನು ಹೀಗೆ ಹೇಳಲು, ಅನಂತರ ರಾವಣನು ಕೋಪದಿಂದ (ಮೋಹಗೊಂಡವನಾಗಿ) ವಿವೇಕರಹಿತನಾಗಿ ಮಾರೀಚನನ್ನು ಕೊಲ್ಲಲು

ಮಾರೀಚಂ ಹಂತುಮಾರೇಭೇ ಮಾರೀಚೋಽಪ್ಯಾಹರಾವಣಮ್ ।
ತವ ಹಸ್ತವಧಾದ್ವೀರ ರಾಮೇಣ ಮರಣಂ ವರಮ್ ॥ ೬೪ ॥

ಅಹಂ ಗಮಿಷ್ಯಾಮಿ ತತ್ರ ಯತ್ರ ತ್ವಂ ನೇತುಮಿಚ್ಛಸಿ ।
ಅಥ ಪುಷ್ಪಕಮಾರುಹ್ಯ ಜನಸ್ಥಾನಮುಪಾಗತಃ ॥ ೬೫ ॥

ಮಾರೀಚಸ್ತತ್ರ ಸೌವರ್ಣಂ ಮೃಗಮಾಸ್ಥಾಯ ಚಾಗ್ರತಃ ।
ಜಗಾಮ ಯತ್ರ ಸಾ ಸೀತಾ ವರ್ತತೇ ಜನಕಾತ್ಮಜಾ ॥ ೬೬ ॥

ಸೌವರ್ಣಂ ಮೃಗಪೋತಂ ತು ದೃಷ್ಟ್ವಾ ಸೀತಾ ಯಶಸ್ವಿನೀ ।
ಭಾವಿಕರ್ಮವಶಾದ್ರಾಮಮುವಾಚ ಪತಿಮಾತ್ಮನಃ ॥ ೬೭ ॥

ತೊಡಗಿದನು. ಆಗ ಮಾರೀಚನು ರಾವಣನಿಗೆ ಹೇಳಿದನು. 'ಎಲೈ ವೀರನೇ! ನಿನ್ನ ಕೈಯಿಂದ ಸಾಯುವುದಕ್ಕಿಂತ ಶ್ರೀರಾಮನಿಂದ ಸಾಯುವುದು ಒಳ್ಳಿತು. (ಲೇಸು)

೬೫. ಎಲ್ಲಿಗೆ ನೀನು ಒಯ್ಯಲೆಳಸುವೆಯೋ ಅಲ್ಲಿಗೆ ನಾನು ಹೋಗುವೆನು; ಎಂದು ಮಾರೀಚನು, ಹೇಳಿದನು. ಬಳಿಕ ಮಾರೀಚನು ಪುಷ್ಪಕವೆಂಬ ಗಾಳಿ ದೇರನ್ನೇರಿ ಜನಸ್ಥಾನಕ್ಕೆ ಬಂದನು.

೬೬. ಅಲ್ಲಿ ಅವನು ಮಾಯೆಯಿಂದ ಹೊನ್ನ ಜಿಂಕೆಯಾಕಾರವನ್ನು ಹೊಂದಿ, ಎಲ್ಲಿ ಜನಕಕುವರಿಯಾದ ಸೀತೆಯಿರುತ್ತಾಳೆಯೋ, ಅಲ್ಲಿ ಮುಂಭಾಗದಲ್ಲಿ ಹೋದನು.

೬೭. ಯಶೋವತಿಯಾದ ಸೀತಾದೇವಿಯು, ಆ ಹೊನ್ನ ಎಳೆಯೆರಳೆಯನ್ನು ನೋಡಿ ಮುಂದೆ ಆಗಬೇಕಾದ ದುಷ್ಟ ಹನನಕಾರ್ಯವಶದಿಂದ ತನ್ನ ಇನಿಯನಾದ ಶ್ರೀರಾಮನಿಗೆ ಇಂತು ಹೇಳಿದಳು.

ಗೃಹೀತ್ವಾ ದೇಹಿ ಸೌವರ್ಣಂ ಮೃಗಪೋತಂ ನೃಪಾತ್ಮಜ ।
ಅಯೋಧ್ಯಾಯಾಂ ತು ಮದ್ಗೇಹೇ ಕ್ರೀಡನಾರ್ಥಮಿದಂ ಮಮ ॥ ೬೮ ॥

ತಯೈವಮುಕ್ತೋ ರಾಮಸ್ತು ಲಕ್ಷ್ಮಣಂ ಸ್ಥಾಪ್ಯ ತತ್ರ ವೈ ।
ರಕ್ಷಣಾರ್ಥಂ ತು ಸೀತಾಯಾ ಗತೋಽಸೌ ಮೃಗಪೃಷ್ಠತಃ ॥ ೬೯ ॥

ರಾಮೇಣ ಚಾನುಯಾತೋ ಅಭ್ಯಧಾವದ್ವನೇ ಮೃಗಃ ।
ತತಃ ಶರೇಣ ವಿವ್ಯಾಧ ರಾಮಸ್ತಂ ಮೃಗಪೋತಕಮ್ ॥ ೭೦ ॥

ಹೇ ಲಕ್ಷ್ಮಣೇತಿ ಚೋಕ್ತ್ವಾಽಸೌ ನಿಪಪಾತ ಮಹೀತಲೇ ।
ಮಾರೀಚಃ ಪರ್ವತಾಕಾರಸ್ತೇನ ನಷ್ಟೋ ಬಭೂವ ಸಃ ॥ ೭೧ ॥

---

೬೮. 'ಎಲೈ ನೃಪಾತ್ಮಜನೇ! ಅಯೋಧ್ಯೆಯಲ್ಲಿ ನನ್ನ ಕನ್ನೆವಾಡದಲ್ಲಿ ನನಗೆ ಆಟದ ಸಲುವಾಗಿ, ಈ ಹೊನ್ನ ಮರಿಜಿಂಕೆಯನ್ನು ಹಿಡಿದುಕೊಡು;'

೬೯. ಸೀತಾದೇವಿಯು ಇಂತು ಬಯಸಲು; ಶ್ರೀರಾಮನು ಅಲ್ಲಿ ಸೀತಾದೇವಿಯ ಕಾವಲಿಗೆ ಲಕ್ಷ್ಮಣನನ್ನು ನಿಯೋಗಿಸಿ, ಆ ಮೃಗವನ್ನು ಬೆನ್ನಹತ್ತಿ ಹೋದನು.

೭೦. ಶ್ರೀರಾಮನು ಬೆಂಗೊಂಡು ಬರಲು, ಮೃಗನಾದ ಮಾರೀಚನು, ಕಾಡಿನಲ್ಲಿ ಓಡಿಹೋದನು. ಬಳಿಕ ರಾಮನು ಆ ಜಿಂಕೆಯ ಮರಿಯನ್ನು ಬಾಣದಿಂದ ಹೊಡೆದನು.

೭೧. ಆಗ ಈ ಮಾರೀಚನು, 'ಹೇ ಲಕ್ಷ್ಮಣ! ಆಃ ಆ' ಎಂದು ಗಟ್ಟಿಯಾಗಿ ಪರ್ವತದಂತೆ ಆಕಾರವನ್ನು ತಾಳಿ, ಅವನಿಂದ ಮೃತನಾದನು.

ಆಕರ್ಣ್ಯ ರುದತಃ ಶಬ್ದಂ ಸೀತಾಲಕ್ಷ್ಮಣಮಬ್ರವೀತ್ ।
ಗಚ್ಛ ಲಕ್ಷ್ಮಣ ಪುತ್ರ ತ್ವಂ ಯತ್ರಾಯಂ ಶಬ್ದ ಉತ್ಥಿತಃ ॥ ೭೨ ॥

ಭ್ರಾತುರ್ಜ್ಯೇಷ್ಠಸ್ಯ ತತ್ತ್ವಂ ವೈ ರುದತಃ ಶ್ರೂಯತೇ ಧ್ವನಿಃ ।
ಪ್ರಾಯೋ ರಾಮಸ್ಯ ಸಂದೇಹಂ ಲಕ್ಷಯೇಽಹಂ ಮಹಾತ್ಮನಃ ॥ ೭೩ ॥

ಇತ್ಯುಕ್ತಃ ಸ ತಥಾ ಪ್ರಾಹ ಲಕ್ಷ್ಮಣಸ್ತಾಮನಿಂದಿತಾಮ್ ।
ನ ಹಿ ರಾಮಸ್ಯ ಸಂದೇಹೋ ನ ಭಯಂ ವಿದ್ಯತೇ ಕ್ವ ಚಿತ್ ॥ ೭೪ ॥

ಇತಿ ಬ್ರುವಾಣಂ ತಂ ಸೀತಾ ಭಾವಿಕರ್ಮಬಲಾದ್ಧೃತಮ್ ।
ಲಕ್ಷ್ಮಣಂ ಪ್ರಾಹ ವೈದೇಹೀ ವಿರುದ್ಧವಚನಂ ತದಾ ॥ ೭೫ ॥

೭೨-೭೩. ಸೀತಾದೇವಿಯು ಅಳುವವನ ದನಿಯನ್ನು ಕೇಳಿ, ಲಕ್ಷ್ಮಣನಿಗೆ ಇಂತು ಹೇಳಿದಳು:—'ಎಲೈ ಪುತ್ರ ಲಕ್ಷ್ಮಣ! ಈ ಶಬ್ದವು ಎಲ್ಲಿ ಉಂಟಾಯಿತೋ, ಅಲ್ಲಿಗೆ ನೀನು ಹೋಗು; ನಿನ್ನ ಹಿರಿಯ ಅಣ್ಣನ ಅಳುವ ದನಿಯು ಕೇಳಿಬರುತ್ತಿದೆ. ತತ್ತ್ವವನ್ನು ತಿಳಿ; ನಾನು ಬಹುಶಃ ಮಹಾತ್ಮನಾದ ರಾಮನದೆಂದು ಸಂದೇಹ ಗೊಳ್ಳುತ್ತೇನೆ.'

೭೪-೭೫. ಇಂತು ಸೀತಾದೇವಿಯು ಹೇಳಲು, ಆಗ ಲಕ್ಷ್ಮಣನು, ಸ್ತುತ್ಯೆ ಯಾದ ಸೀತೆಗೆ ಹೀಗೆ ಹೇಳಿದನು. 'ಎಲೌ ತಾಯೇ! ಶ್ರೀರಾಮನದೆಂದು ಸಂದೇಹ ಗೊಳ್ಳಬೇಡ; ಅವನಿಗೆ ಎಲ್ಲಿಯೂ ಭಯವಿರುವುದಿಲ್ಲ.' ಎಂದು ಲಕ್ಷ್ಮಣನು ಹೇಳಲು ಆಗ ಸೀತಾದೇವಿಯು ಮುಂದಿನ ದುಷ್ಟರಾಕ್ಷಸರ ಕೊಲೆಯ ಕಾರ್ಯವಶದಿಂದ ವಿರುದ್ಧ ವಾದ ನುಡಿಯನ್ನು ಅವನಿಗೆ ಹೇಳಿದಳು.

ಮೃತೇ ರಾಮೇ ತು ಮಾಮಿಚ್ಛನ್ನತಸ್ತ್ವಂ ನ ಗಮಿಷ್ಯಸಿ ।
ಇತ್ಯುಕ್ತಃ ಸ ವಿನೀತಾತ್ಮಾ ಅಸಹನ್ನಪ್ರಿಯಂ ವಚಃ ॥ ೭೬ ॥

ಜಗಾಮ ರಾಮಮನ್ವೇಷ್ಟುಂ ತದಾ ಪಾರ್ಥಿವನಂದನಃ ।
ಸಂನ್ಯಾಸವೇಷಮಾಸ್ಥಾಯ ರಾವಣೋಽಪಿ ದುರಾತ್ಮವಾನ್ ॥ ೭೭ ॥

ಸ ಸೀತಾ ಪಾರ್ಶ್ವಮಾಸಾದ್ಯ ವಚನಂ ಚೇದಮುಕ್ತವಾನ್ ।
ಆಗತೋ ಭರತಃ ಶ್ರೀಮಾನಯೋಧ್ಯಾಯಾ ಮಹಾಮತಿಃ ॥ ೭೮ ॥

ರಾಮೇಣ ಸಹ ಸಂಭಾಷ್ಯ ಸ್ಥಿತವಾಂಸ್ತತ್ರ ಕಾನನೇ ।
ಮಾಂ ಚ ಪ್ರೇಷಿತವಾನ್ರಾಮೋ ವಿಮಾನಮಿದಮಾರುಹ ॥ ೭೯ ॥

ಅಯೋಧ್ಯಾಂ ಯಾತಿ ರಾಮಸ್ತು ಭರತೇನ ಪ್ರಸಾದಿತಃ ।
ಮೃಗಬಾಲಂ ತು ವೈದೇಹಿ ಕ್ರೀಡಾರ್ಥಂ ತೇ ಗೃಹೀತವಾನ್ ॥ ೮೦ ॥

೭೬-೭೮. 'ಶ್ರೀ ರಾಮನು ಮೃತನಾಗಲು ನನ್ನನ್ನು ಅಪೇಕ್ಷಿಸುತ್ತಿರುವವನಾಗಿ ನೀನು, ಹೋಗುವುದಿಲ್ಲವು;' ಎಂದು ವೈದೇಹಿಯು ಹೇಳಲು, ವಿನೀತ ಸ್ವಭಾವದ ಅವನು, ಆ ಅಪ್ರಿಯವಚನವನ್ನು ಸಹಿಸದೆ, ಆಗ ರಾಯಕುವರನು ಶ್ರೀ ರಾಮನನ್ನು ಹುಡುಕಲು ಹೋದನು. ದುರಾತ್ಮನಾದ ರಾವಣನು ಸಂನ್ಯಾಸ ವೇಷವನ್ನು ತಾಳಿ, ಸೀತಾದೇವಿಯ ಹತ್ತಿರಕ್ಕೆ ಬಂದು, ಈ ಮಾತನ್ನು ಹೇಳಿದನು :- 'ಶ್ರೀ ಮಂತನಾದ ಬಹುಬುದ್ಧಿಯುಳ್ಳ ಭರತನು ಅಯೋಧ್ಯೆಯಿಂದ ಬಂದನು.

೭೯-೮೨. ಆ ವನದಲ್ಲಿ ಶ್ರೀ ರಾಮನೊಡನೆ ಮಾತನಾಡುತ್ತಲಿರುವನು. ನನ್ನನ್ನು ನಿನ್ನ ಬಳಿಗೆ ಕಳುಹಿಸಿಕೊಟ್ಟಿರುತ್ತಾನೆ; ಈ ಗಾಳಿತೇರನ್ನು ಹತ್ತು; ಶ್ರೀ ರಾಮನು ಭರತನ ಬೇಡಿಕೆಯಿಂದ ಪ್ರಸನ್ನನಾಗಿ ಅಯೋಧ್ಯೆಗೆ ಹೋಗುತ್ತಾನೆ; ಜಿಂಕೆಯ ಮರಿಯನ್ನು ನಿನ್ನ ವಿಲಾಸಕ್ಕಾಗಿ ಹಿಡಿದಿರುತ್ತಾನೆ. ನೀನು ಈ ಮಹಾರಣ್ಯದಲ್ಲಿ ಇಂತು ಬಹುಕಾಲ ಕಷ್ಟಪಟ್ಟಿರುತ್ತೀಯೆ; ಮನೋಹರವಾದ ಮೊಗದ

ಕ್ಲೇಶಿತಾಸಿ ಮಹಾರಣ್ಯೇ ಬಹುಕಾಲಂ ತ್ವಮೀದೃಶಮ್ ।
ಸಂಪ್ರಾಪ್ತ ರಾಜ್ಯಸ್ತೇ ಭರ್ತಾ ರಾಮಃ ಸುರುಚಿರಾನನಃ ॥ ೮೧ ॥

ಲಕ್ಷ್ಮಣಶ್ಚ ವಿನೀತಾತ್ಮಾ ವಿಮಾನಮಿದಮಾರುಹ ।
ಇತ್ಯುಕ್ತ್ವಾ ಸಾ ತಥಾ ಕೃತ್ವಾ ನೀತಾ ತೇನ ಮಹಾತ್ಮನಾ ॥ ೮೨ ॥

ಆರುರೋಹ ವಿಮಾನಂ ತು ಛದ್ಮನಾ ಪ್ರೇರಿತಾ ಸತೀ ।
ತಜ್ಜಗಾಮ ತತಃ ಶೀಘ್ರಂ ವಿಮಾನಂ ದಕ್ಷಿಣಾಂ ದಿಶಮ್ ॥ ೮೩ ॥

ತತಃ ಸೀತಾ ಸುದುಃಖಾರ್ತಾ ವಿಲಲಾಪ ಸುದುಃಖಿತಾ ।
ವಿಮಾನೇ ಖೇಽಪಿ ರೋದಂತ್ಯಾಶ್ಚಕ್ರೇ ಸ್ಪರ್ಶಂ ನ ರಾಕ್ಷಸಃ ॥ ೮೪ ॥

ರಾವಣಃ ಸ್ವೇನರೂಪೇಣ ಬಭೂವಾಥ ಮಹಾತನುಃ ।
ದಶಗ್ರೀವಂ ಮಹಾಕಾಯಂ ದೃಷ್ಟ್ವಾ ಸೀತಾ ಸುದುಃಖಿತಾ ॥ ೮೫ ॥

ಶ್ರೀ ರಾಮನಾದ ನಿನ್ನ ಪತಿಯು, ರಾಜ್ಯವನ್ನು ಪಡೆದನು. ಲಕ್ಷ್ಮಣನೂ ವಿನಯ ಸ್ವಭಾವದವನು. ಈ ವಿಮಾನವನ್ನು ಹತ್ತು;' ಎಂದು ರಾವಣನು ಹೇಳಲು, ಅವಳೂ ಹಾಗೆಯೇ ಮಾಡಲು, ಆ ಸಾಹಸಿಗನಿಂದ ಒಯ್ಯಲ್ಪಟ್ಟಳು.

೮೩. ಆ ಸತಿಯು ಮೋಸದಿಂದ ಪ್ರೇರಿಸಲ್ಪಟ್ಟವಳು, ವಿಮಾನವನ್ನು ಹತ್ತಿದಳು. ಬಳಿಕ ವಿಮಾನವು ಬೇಗನೆ ದಕ್ಷಿಣ ದಿಕ್ಕಿಗೆ ಹೊರಟುಹೋಯಿತು.

೮೪. ಅನಂತರದಲ್ಲಿ ಆ ಸೀತಾದೇವಿಯು ಬಹುಶೋಕಪೀಡಿತೆಯಾಗಿ, ಅತ್ಯಂತ ದುಃಖಗೊಂಡು ಅತ್ತಳು :— ಆಗಸದಲ್ಲಿ ಗಾಳಿದೇರಿನಲ್ಲಿ ಅಳುತ್ತಿರುವವಳ ಸ್ಪರ್ಶವನ್ನು ರಾವಣನು ಮಾಡಲಿಲ್ಲ.

೮೫. ತರುವಾಯದಲ್ಲಿ ರಾವಣನು ತನ್ನ ರೂಪಿನಿಂದ ಪೇರೊಡಲಿನವನಾಗಿದ್ದನು. ಹತ್ತು ಕತ್ತಿನ ಪೇರೊಡಲನ್ನು ಕಂಡು ಸೀತೆಯು ಅತ್ಯಂತ ದುಃಖಗೊಂಡವಳಾದಳು.

ಹಾ ರಾಮ ವಂಚಿತಾಽದ್ಯಾಽಹಂ ಕೇನಾಪಿ ಛದ್ಮರೂಪಿಣಾ ।
ರಕ್ಷಸಾ ಘೋರರೂಪೇಣ ತ್ರಾಯ ಸ್ವೇತಿ ಭಯಾರ್ದಿತಾ ॥ ೮೬ ॥

ಹೇ ಲಕ್ಷ್ಮಣ ಮಹಾಬಾಹೋ ಹ್ಯಹಂ ದುಷ್ಟೇನ ರಕ್ಷಸಾ ।
ದ್ರುತಮಾಗತ್ಯ ರಕ್ಷಸ್ವ ನೀಯಮಾನಾಮಥಾಽಕುಲಾಮ್ ॥ ೮೭ ॥

ಏವಂ ಪ್ರಲಾಪಮಾನಾಯಾಃ ಸೀತಾಯಾಸ್ತನ್ಮಹಸ್ಸ್ವನಮ್ ।
ಆಕರ್ಣ್ಯ ಗೃಧ್ರರಾಜಸ್ತು ಜಟಾಯುಸ್ತತ್ರ ಚಾಗತಃ ॥ ೮೮ ॥

ತಿಷ್ಠ ರಾವಣ ದುಷ್ಟಾತ್ಮನ್ಮುಂಚ ಮುಂಚಾತ್ರ ಮೈಥಿಲೀಮ್ ।
ಇತ್ಯುಕ್ತ್ವಾ ಯುಯುಧೇ ತೇನ ಜಟಾಯುಸ್ತತ್ರ ವೀರ್ಯವಾನ್ ॥ ೮೯ ॥

---

೮೬. 'ಹಾ ರಾಮ! ಇಂದು ನಾನು ಯಾವನೋ ಮಾಯಾರೂಪನ, ಭಯಾಕಾರದ ಒಡಲಿನ ರಕ್ಕಸನಿಂದ ಮೋಸಗೊಂಡವಳಾದೆ, ಭಯದಿಂದ ಬಾಧೆಗೊಂಡಿದ್ದೇನೆ; ರಕ್ಷಿಸು.

೮೭. ಹೇ ಲಕ್ಷ್ಮಣ! ಮಹಾಬಾಹುವೇ! ದುಷ್ಟನಾದ ರಕ್ಕಸನು ಬೇಗನೆ ಬಂದು ನನ್ನನ್ನು ಹೊತ್ತುಕೊಂಡು ಹೋಗುತ್ತಲಿದ್ದಾನೆ. ನಾನು ಆಕುಲೆಯಾಗಿರುತ್ತೇನೆ;' ಕಾಪಿಡು.

೮೮. ಇಂತು ಅಳುತ್ತಲಿರುವ ಸೀತಾದೇವಿಯ ಆ ಪೇರುಲಿಯನ್ನು ಅಲ್ಲಿ ಜಟಾಯುವೆಂಬ ಹದ್ದುಗಳರಸನು ಕೇಳಿ, ಬಂದನು.

೮೯. 'ಎಲೈ ದುರಾತ್ಮನಾದ ರಾವಣನೇ! ಇಲ್ಲಿ ನಿಲ್ಲು; ಸೀತಾದೇವಿಯನ್ನು ಬಿಡು ಬಿಡು;' ಎಂದು ಹೇಳಿ, ಆ ವೀರನಾದ ಜಟಾಯುವು ಅವನೊಡನೆ ಹೋರಾಡಿದನು.

ಪಕ್ಷಾಭ್ಯಾಂ ತಾಡಯಾಮಾಸ ಜಟಾಯುಸ್ತಸ್ಯ ವಕ್ಷಸಿ ।
ತಾಡಯಂತಂ ತು ತಂ ಮತ್ವಾ ಬಲವಾನಿತಿ ರಾವಣಃ ॥ ೯೦ ॥

ತುಂಡಚಂಚುಪ್ರಹಾರೈಸ್ತು ಭೃಶಂ ತೇನ ಪ್ರಪೀಡಿತಃ ।
ತತ ಉತ್ಪಾಟ್ಯ ವೇಗೇನ ಚಂದ್ರಹಾಸಮಸಿಂ ಮಹತ್ ॥ ೯೧ ॥

ಜಘಾನ ತೇನ ದುಷ್ಟಾತ್ಮಾ ಜಟಾಯುಂ ಧರ್ಮಚಾರಿಣಮ್ ।
ನಿಪಪಾತ ಮಹೀಪೃಷ್ಠೇ ಜಟಾಯುಃ ಕ್ಷೀಣಚೇತನಃ ॥ ೯೨ ॥

ಉವಾಚ ಚ ದಶಗ್ರೀವಂ ದುಷ್ಟಾತ್ಮನ್ನ ತ್ವಯಾ ಹತಃ ।
ಚಂದ್ರಹಾಸಸ್ಯ ವೀರ್ಯೇಣ ಹತೋಽಹಂ ರಾಕ್ಷಸಾಧಮ ॥ ೯೩ ॥

ನಿರಾಯುಧಂ ಕೋ ಹನೇನ್ಮೂಢ ಸಾಯುಧಸ್ತ್ವದೃತೇ ಜನಃ ।
ಸೀತಾಪಹರಣಂ ವಿದ್ಧಿ ಮೃತ್ಯುಸ್ತೇ ದುಷ್ಟರಾಕ್ಷಸ ॥ ೯೪ ॥

೯೦-೯೨. ಜಟಾಯುವು ಅವನ ಎದೆಯಲ್ಲಿ ರೆಕ್ಕೆಗಳಿಂದ ಹೊಡೆದನು. ರಾವಣನು ಹಾಗೆ ಹೊಡೆಯುತ್ತಲಿದ್ದ ಅವನನ್ನು ಬಲವಂತನೆಂದರಿತನು. ಅವನ ಕೊಕ್ಕಿನ ಹೊಡೆತದಿಂದ ಕಡುನೊಂದ ರಾವಣನು, ಬಳಿಕ ಬೇಗನೆ ತನ್ನ ಚಂದ್ರಹಾಸವೆಂಬ ಪೆರ್ಗತ್ತಿಯನ್ನು ಒರೆಯಿಂದ ಸೆಳೆದು, ಅದರಿಂದ ಆ ಧಾರ್ಮಿಕನಾದ ಜಟಾಯುವನ್ನು ಹೊಡೆದನು. ಆಗ ಜಟಾಯುವು ಕುಗ್ಗಿದ ಚೇತನನಾಗಿ ಭೂಮಿಯ ಮೇಲೆ ಬಿದ್ದನು.

೯೩-೯೪. ಎಲೈ ದುಷ್ಟಾತ್ಮನಾದ ರಾಕ್ಷಸಾಧಮನೇ! ನೀನು ನನ್ನನ್ನು ಕೊಲ್ಲಲಿಲ್ಲ. ಈ ಚಂದ್ರಹಾಸದ ಬಲದಿಂದ ನಾನು ಹತನಾದೆನು. ಎಲೈ ಮೂಢನೇ! ನಿನ್ನನ್ನು ಹೊರತು ಯಾವನು ತಾನೇ ನಿರಾಯುಧನನ್ನು ಕೊಲ್ಲುವನು? ಎಲೈ ದುಷ್ಟ ರಕ್ಕಸನೇ! ಈ ಸೀತಾಪಹರಣವು ನಿನಗೆ ಮೃತ್ಯುವೆಂದು ತಿಳಿ; ಎಲೈ ದುಷ್ಟ ರಾವಣನೇ! ಶ್ರೀರಾಮನು ನಿನ್ನನ್ನು ಕೊಲ್ಲುವನು ಈ ವಿಷಯದಲ್ಲಿ ಸಂಶಯ

ದುಷ್ಟರಾವಣ ರಾಮಸ್ತ್ವಾಂ ವಧಿಷ್ಯತಿ ನ ಸಂಶಯಃ ।
ರುದತೀ ದುಃಖಶೋಕಾರ್ತಾ ಜಟಾಯುಂ ಪ್ರಾಹ ಮೈಥಿಲೀ ॥ ೯೫ ॥

ಮತ್ಕೃತೇ ಮರಣಂ ಯಸ್ಮಾತ್ತ್ವಯಾ ಪ್ರಾಪ್ತಂ ದ್ವಿಜೋತ್ತಮ ।
ತಸ್ಮಾದ್ರಾಮಪ್ರಸಾದೇನ ವಿಷ್ಣುಲೋಕಮವಾಪ್ಸ್ಯಸಿ ॥ ೯೬ ॥

ಯಾವದ್ರಾಮೇಣ ಸಂಗಸ್ತೇ ಭವಿಷ್ಯತಿ ಮಹಾದ್ವಿಜ ।
ತಾವತ್ತಿಷ್ಠಂತು ತೇ ಪ್ರಾಣಾ ಇತ್ಯುಕ್ತ್ವಾ ತಂ ಖಗೋತ್ತಮಮ್ ॥ ೯೭ ॥

ತತಸ್ತಾನ್ಯರ್ಪಿತಾನ್ಯಙ್ಗಾದ್ಭೂಷಣಾನಿ ವಿಮುಚ್ಯ ಸಾ
ಶೀಘ್ರಂ ನಿಬಧ್ಯ ವಸ್ತ್ರೇಣ ರಾಮಹಸ್ತಂ ಗಮಿಷ್ಯಥ ॥ ೯೮ ॥

ಇತ್ಯುಕ್ತ್ವಾ ಪಾತಯಾಮಾಸ ಭೂಮೌ ಸೀತಾ ಸುದುಃಖಿತಾ ।
ಏವಂ ಹೃತ್ವಾ ಸ ಸೀತಾಂ ತು ಜಟಾಯುಂ ಪಾತ್ಯ ಭೂತಲೇ ॥ ೯೯ ॥

ವಿಲ್ಲವು;' ಎಂದು ಕೆಳಗೆ ಬಿದ್ದ ಟಾಯುವು ದಶಗ್ರೀವನಿಗೆ ಹೇಳಿದನು. ಆಗ ದುಃಖಶೋಕಾರ್ತೆಯಾದ ಮೈಥಿಲಿಯು ಅಳುತ್ತಾ ಜ ಟಾ ಯು ವಿ ಗೆ ಇಂತು ನುಡಿದಳು.

೯೬-೯೯. ಎಲೈ ಪಕ್ಷಿಶ್ರೇಷ್ಠನೇ! ನೀನು ನನ್ನ ಸಲುವಾಗಿ ಯಾವಕಾರಣದಿಂದ ಸಾವನ್ನು ಹೊಂದಿದೆಯೋ, ಅದರಿಂದ ಶ್ರೀರಾಮನ ಅನುಗ್ರಪದಿಂದ ವಿಷ್ಣುಲೋಕವನ್ನು ಹೊಂದುವೆ; ಎಲೈ ಮಹಾದ್ವಿಜನೇ! ಶ್ರೀರಾಮನು ಇಲ್ಲಿಗೆ ಬಂದು ನಿನ್ನನ್ನು ಸಂಧಿಸುವವರೆಗೂ ನಿನ್ನ ಪ್ರಾಣಗಳು ಇರಲಿ;' ಎಂದು ಹೇಳಿ, ಬಳಿಕ ತನ್ನ ಒಡಲಿನಲ್ಲಿ ಧರಿಸಿದ್ದ ಆಭರಣಗಳನ್ನು ತೆಗೆದು, ಬಟ್ಟೆಯಲ್ಲಿ ಕಟ್ಟಿ, 'ಇವನ್ನು ಶ್ರೀರಾಮನ ಕೈಸೇರಿಸಿರಿ;' ಎಂದು ಹೇಳಿ, ಅತ್ಯಂತ ದುಃಖಿತೆಯಾಗಿ, ಸೀತೆಯು ಅದನ್ನು ನೆಲದಲ್ಲಿ ಕೆಡಹಿದಳು. ಆ ರಾವಣನು ಇಂತು ಜಟಾಯುವನ್ನು ನೆಲದಲ್ಲಿ ಕೆಡಹಿ, ಸೀತೆಯನ್ನಪಹರಿಸಿದನು.

ಪುಷ್ಪಕೇಣ ಗತಃ ಶೀಘ್ರಂ ಲಂಕಾಂ ದುಷ್ಟನಿಶಾಚರಃ ।
ಅಶೋಕವನಿಕಾಮಧ್ಯೇ ಸ್ಥಾಪಯಿತ್ವಾ ಸ ಮೈಥಿಲೀಮ್ ॥ ೧೦೦ ॥

ಇಮಾಮತ್ರೈವ ರಕ್ಷಧ್ವಂ ರಾಕ್ಷಸ್ಯೋ ವಿಕೃತಾನನಾಃ ।
ಇತ್ಯಾದಿಶ್ಯ ಗೃಹಂ ಯಾತೋ ರಾವಣೋ ರಾಕ್ಷಸೇಶ್ವರಃ ॥ ೧೦೧ ॥

ಲಂಕಾನಿವಾಸಿನಶ್ಚೋಚುರೇಕಾಂತೇ ಚ ಪರಸ್ಪರಮ್ ।
ಅಸ್ಯಾಃ ಪುರ್ಯಾ ವಿನಾಶಾರ್ಥಂ ಸ್ಥಾಪಿತೇಯಂ ದುರಾತ್ಮನಾ ॥ ೧೦೨ ॥

ರಾಕ್ಷಸೀಭಿರ್ವಿರೂಪಾಭೀ ರಕ್ಷ್ಯಮಾಣಾ ಸಮಂತತಃ ।
ಸೀತಾ ಚ ದುಃಖಿತಾ ತತ್ರ ಸ್ಮರಂತೀ ರಾಮಮೇವ ಸಾ ॥ ೧೦೩ ॥

ಉವಾಸ ಸಾ ಸುದುಃಖಾರ್ತಾ ದುಃಖಿತಾ ರುದತೀ ಭೃಶಮ್ ।
ಯಥಾಽಜ್ಞಾನಬಲೇ ದೇವೀ ಹಂಸಯಾನಾ ಸರಸ್ವತೀ ॥ ೧೦೪ ॥

---

೧೦೦. ಅನಂತರ ಆ ದುಷ್ಟರಕ್ಕಸನು ಪುಷ್ಪಕವಿಮಾನದಿಂದ ಬೇಗನೆ ಲಂಕೆಗೆ ಹೋದನು. ಅಲ್ಲಿ ಅಶೋಕವನದ ನಡುವೆ ಸೀತಾದೇವಿಯನ್ನು ಇಳಿಸಿದನು.

೧೦೧. ತರುವಾಯ ರಕ್ಕಸಿಯರಿಗೆ, 'ಎಲೌ ರಕ್ಕಸಿಯರಿರಾ! ವಿಕೃತಾನನೆಯರೇ! ಇವಳನ್ನು ಇಲ್ಲಿಯೇ ಕಾಪಿಡಿರಿ;' ಎಂದು ಅಣತಿಯಿತ್ತು, ರಕ್ಕಸರೊಡೆಯನಾದ ರಾವಣನು ಅರಮನೆಗೆ ಹೋದನು.

೧೦೨. ಆಗ ಲಂಕಾನಿವಾಸಿಗಳು ರಹಸ್ಯವಾಗಿ ಒಬ್ಬರೊಡನೊಬ್ಬರು 'ಈ ದುರಾತ್ಮನಾದ ರಾವಣನು, ಈ ಪೊಳಲನ್ನು ಹಾಳುಮಾಡಲು ಇವಳನ್ನು ತಂದಿಟ್ಟನು;' ಎಂದು ಮಾತನಾಡಿಕೊಳ್ಳುತ್ತಲಿದ್ದರು.

೧೦೩-೧೦೪. ಸುತ್ತಲೂ ವಿರೂಪರಾದ ರಕ್ಕಸಿಯರಿಂದ ಕಾದಿರುವ ಸೀತಾದೇವಿಯು ದುಃಖಗೊಂಡಳು; ಅಲ್ಲಿ ಶ್ರೀರಾಮನನ್ನೇ ಯಾವಾಗಲೂ ಜಾನಿಸುತ್ತಾ ದುಃಖಪೀಡಿತೆಯಾಗಿ ವ್ಯಸನಗೊಂಡು, ಹಂಸಯಾನೆಯಾದ ಸರಸ್ವತೀದೇವಿಯು ಅಜ್ಞಾನಬಲದಲ್ಲಿದ್ದಂತೆ ಅತ್ಯಂತವಾಗಿ ದುಃಖಿಸುತ್ತಿದ್ದಳು.

ಸುಗ್ರೀವಭೃತ್ಯಾ ಹರಯಶ್ಚತುರಾಶ್ಚ ಯದೃಚ್ಛಯಾ ।
ವಸ್ತ್ರಬದ್ಧಂ ತಯೋತ್ಸೃಷ್ಟಂ ಭೂಷಣಂ ಗೃಹ್ಯ ತೇ ತ್ವರಾ ॥ ೧೦೫ ॥

ಸ್ವಭರ್ತ್ರೇ ವಿನಿವೇದ್ಯೋಚುಃ ಸುಗ್ರೀವಾಯ ಮಹಾತ್ಮನೇ ।
ಅರಣ್ಯೇಽಭೂನ್ಮಹಾಯುದ್ಧಂ ಜಟಾಯೋ ರಾವಣಸ್ಯ ಚ ॥ ೧೦೬ ॥

ಅಥ ರಾಮಶ್ಚ ತಂ ಹತ್ವಾ ಮಾರೀಚಂ ಮಾಯಯಾಗತಮ್ ।
ನಿವೃತ್ತಂ ಲಕ್ಷ್ಮಣಂ ದೃಷ್ಟ್ವಾ ತೇನ ಗತ್ವಾ ಸ್ವಮಾಶ್ರಮಮ್ ॥ ೧೦೭ ॥

ಸೀತಾಮಪಶ್ಯದ್ದುಃಖಾರ್ತಃ ಪ್ರರುರೋದ ಸ ರಾಘವಃ ।
ಲಕ್ಷ್ಮಣಶ್ಚ ಮಹಾತೇಜಾ ರುರೋದ ಭೃಶದುಃಖಿತಃ ॥ ೧೦೮ ॥

೧೦೫-೧೦೬. ಕುಶಲರಾದ ಸುಗ್ರೀವನ ಸೇವಕರಾದ ಕಪಿಗಳು ದೈವಯೋಗದಿಂದ ಸೀತಾದೇವಿಯು ವಸ್ತ್ರದಲ್ಲಿ ಕಟ್ಟಿ ಕೆಡಹಿದ ತೊಡವುಗಳನ್ನು ಬೇಗನೆ ತೆಗೆದುಕೊಂಡು, ತಮ್ಮ ಒಡೆಯನಾದ ಮಹಾತ್ಮನಾದ ಸುಗ್ರೀವನಿಗೆ ಒಪ್ಪಿಸಿ, ಬಿನ್ನವಿಸಿದರು. ಆ ಹಳುವದಲ್ಲಿ ಜಟಾಯು ರಾವಣರಿಗೆ ಘೋರಯುದ್ಧವು ಜರುಗಿತು.

೧೦೭-೧೦೮. ಬಳಿಕ ಶ್ರೀರಾಮನು ಮಾಯೆಯಿಂದ ಬಂದ ಆ ಮಾರೀಚನನ್ನು ಕೊಂದು, ನಿರ್ವೇದಗೊಂಡಿದ್ದ ಲಕ್ಷ್ಮಣನನ್ನು ಕಂಡು, ಅವನೊಡನೆ ತಮ್ಮ ಆಶ್ರಮಕ್ಕೆ ಹೋಗಿ, ಅಲ್ಲಿ ಸೀತಾದೇವಿಯನ್ನು ಕಾಣದೆ ಅತ್ಯಂತ ದುಃಖಗೊಂಡು, ನಿತ್ಯಪೂರ್ಣಸುಖನೂ, ನಿರ್ದುಃಖನೂ ಆದವನು ಲೋಕದಲ್ಲಿ ಸ್ತ್ರೀವ್ಯಾಮೋಹವುಳ್ಳವರು ಹೀಗೆ ವ್ಯಸನಪಡುವರೆಂದು ತೋರಿಸಲು ಅತ್ತನು. ಮಹಾತೇಜಸ್ವಿಯಾದ ಲಕ್ಷ್ಮಣನೂ ಅತ್ಯಂತ ದುಃಖಗೊಂಡು ಅತ್ತನು.

ಬಹುಪ್ರಕಾರಮಸ್ವಸ್ಥಂ ರುದಂತಂ ರಾಘವಂ ತದಾ ।
ಭೂತಲೇ ಪತಿತಂ ಧೀಮಾನುತ್ಥಾಪ್ಯಾಶ್ವಾಸ್ಯ ಲಕ್ಷ್ಮಣಃ ॥ ೧೦೯ ॥

ಉವಾಚ ವಚನಂ ಪ್ರಾಪ್ತಂ ತದಾ ಯತ್ತಚ್ಛೃಣುಷ್ವ ಮೇ ।
ಅತಿವೇಲಂ ಮಹಾರಾಜ ನ ಶೋಕಂ ಕರ್ತುಮರ್ಹಸಿ ॥ ೧೧೦ ॥

ಉತ್ತಿಷ್ಠೋತ್ತಿಷ್ಠ ಶೀಘ್ರಂ ತ್ವಂ ಸೀತಾಂ ಮೃಗಯಿತುಂ ಪ್ರಭೋ ।
ಇತ್ಯೇವಂ ವದತಾ ತೇನ ಲಕ್ಷ್ಮಣೇನ ಮಹಾತ್ಮನಾ ॥ ೧೧೧ ॥

ಉತ್ಥಾಪಿತೋ ನರಪತಿರ್ದುಃಖಿತೋ ದುಃಖಿತೇನ ತು ।
ಭ್ರಾತ್ರಾ ಸಹ ಜಗಾಮಾಥ ಸೀತಾಂ ಮೃಗಯಿತುಂ ವನಮ್ ॥ ೧೧೨ ॥

೧೦೯-೧೧೦. ಆಗ ಅನೇಕತೆರನಾಗಿ ಸುಸ್ಥಿರನಾಗದೇ ಅಳುತ್ತಾ ನೆಲದ ಮೇಲೆ ಬಿದ್ದಿದ್ದ ಶ್ರೀರಾಮನನ್ನು (ಎಂದರೆ ಮರ್ತ್ಯರಿಗೆ ಶಿಕ್ಷೆಯನ್ನು ಮಾಡುವ ಸಲುವಾಗಿ ಇಂತು ನಟನೆಗೈಯುವನೆಂದು ಜ್ಞಾನಿಗಳಿಗೆ ತಿಳಿಸುತ್ತಲೂ, ಅಜ್ಞಾನಿಗಳು ತಮೋಯೋಗ್ಯರು, ಅವನಿಗೂ ದುಃಖಾದಿಗಳುಂಟಾದುದು ಸತ್ಯವೆಂದು ತಿಳಿದು ತಮಗೆ ಯೋಗ್ಯಸಾಧನೆ ಮಾಡಿಕೊಳ್ಳಲೆಂದೂ ಭಗವಂತನಾದ ಶ್ರೀರಾಮನು ಅಭಿನಯಿಸಿರುತ್ತಾನೆ. ರಮೆಯಿಂದ ನಿತ್ಯಾವಿಯುಕ್ತನಿಗೆ ಸೀತಾವಿರಹವೆಲ್ಲಿಯದು?) ವಿವೇಕಿಯಾದ ಲಕ್ಷ್ಮಣನು ಎಬ್ಬಿಸಿ, ಸಮಾಧಾನಗೊಳಿಸಿ ಆಗ ತನಗೆ ತೋರಿ ಬಂದುದನ್ನು ಯಾವುದನ್ನು ಹೇಳಿದನೋ ಅದನ್ನು ಹೇಳುವೆನು, ಕೇಳು ; ಎಲೈ ಮಹಾರಾಜನೇ ! ಅತ್ಯಂತವಾಗಿ ಶೋಕಿಸುವುದು ಸರಿಯಲ್ಲವು.

೧೧೧-೧೧೨. 'ಎಲೈ ಪ್ರಭುವೇ ! ಸೀತಾದೇವಿಯನ್ನು ಹುಡುಕಲು ಬೇಗನೆ ಏಳೇಳು ;' ಎಂದು ಹೇಳುತ್ತಲಿದ್ದ ಮಹಾತ್ಮನಾದ ಲಕ್ಷ್ಮಣನಿಂದ ಎಬ್ಬಿಸಲ್ಪಟ್ಟ, ದುಃಖಗೊಂಡ ಶ್ರೀರಾಮನು ದುಃಖಗೊಂಡ ಅನುಜನಾದ ಲಕ್ಷ್ಮಣನೊಡನೆ ಬಳಿಕ ಸೀತೆಯನ್ನು ಹುಡುಕಲು ಕಾಡಿಗೆ ಹೋದನು.

ವನಾನಿ ಸರ್ವಾಣಿ ವಿಶೋಧ್ಯ ರಾಘವೋ
ಗಿರೀನ್ಸಮಸ್ತಾನ್ಗಿರಿಸಾನುಗೋಚರಾನ್ ।
ತಥಾ ಮುನೀನಾಮಪಿ ಚಾಶ್ರಮಾನ್ಬಹೂನ್
ತೃಣಾದಿವಲ್ಲೀಗಹನೇಷು ಭೂಮಿಷು ॥ ೧೧೩ ॥

ನದೀತಟೇ ಭೂಮಿವರೇ ಗುಹಾಯಾಂ
ನಿರೀಕ್ಷಮಾಣೋಽಪಿ ಮಹಾನುಭಾವಃ ।
ಪ್ರಿಯಾಮಪಶ್ಯನ್ಭೃಶದುಃಖಿತಸ್ತದಾ
ಜಟಾಯುಷಂ ವೀಕ್ಷ್ಯ ಚ ಘಾತಿತಂ ನೃಪಃ ॥ ೧೧೪ ॥

ಅಹೋ ಭವಾನ್ಕೇನ ಹತಸ್ತ್ವಮೀದೃಶೀಂ
ದಶಾಮವಾಪ್ತೋಽಸಿ ಮೃತೋಽಸಿ ಜೀವಸಿ ।
ಮಮಾದ್ಯ ಸರ್ವಂ ಸಮಂ ದುಃಖಿತಸ್ಯ ಭೋಃ
ಪತ್ನೀವಿಯೋಗಾದಿಹ ಚಾಗತಸ್ಯ ವೈ ॥ ೧೧೫ ॥

---

೧೧೩. ಶ್ರೀರಾಮನು ಕಾಡುಗಳೆಲ್ಲವನ್ನೂ ಶೋಧಿಸಿ, ಬೆಟ್ಟಗಳೆಲ್ಲವನ್ನೂ, ಬೆಟ್ಟಗಳ ತಪ್ಪಲುಪ್ರದೇಶಗಳನ್ನೂ, ಹಾಗೆಯೇ ಹುಲ್ಲು ಬಳ್ಳಿ ಇವುಗಳಿಂದ ವ್ಯಾಪ್ತವಾದ ಪ್ರದೇಶಗಳಲ್ಲಿರುವ ಅನೇಕ ಋಷ್ಯಾಶ್ರಮಗಳನ್ನೂ ವಿಶೇಷವಾಗಿ ಹುಡುಕಿದನು.

೧೧೪. ನದಿಗಳ ದಡದಲ್ಲಿಯೂ, ಉತ್ತಮವಾದ ಭೂಪ್ರದೇಶದಲ್ಲಿಯೂ, ಗವಿಗಳಲ್ಲಿಯೂ ಮಹಾನುಭಾವನಾದ ಶ್ರೀರಾಮನು ಹುಡುಕಿದವನೂ ತನ್ನ ಇನಿಯಳನ್ನು ಕಾಣದೆ, ಆಗ ಕಡುದುಃಖಗೊಂಡವನಾಗಿ ಪೆಟ್ಟು ತಿಂದು, ಮೃತಕಲ್ಪನಾಗಿ ಬಿದ್ದಿದ್ದ ಜಟಾಯುವನ್ನು ಕಂಡನು.

೧೧೫. 'ಹೋ! ಅಯ್ಯಾ! ನಿನ್ನನ್ನು ಹೊಡೆದವನಾವನು? ನಿನಗೀ ಯವಸ್ಥೆಯನ್ನೆಸಗಿದವನಾವನು? ಮೃತಕಲ್ಪನಾಗಿ ಜೀವಿಸುತ್ತಿರುತ್ತೀಯೆ; ಇಂದು ದುಃಖಗೊಂಡು ಮಡದಿಯನ್ನು ಅಗಲಿ, ಇಲ್ಲಿಗೆ ಬಂದಿರುವ ನನಗೆ ಎಲ್ಲವೂ ಸಮನಾಗಿದೆ.'

ಇತ್ಯುಕ್ತಮಾತ್ರೇ ವಿಹಗೋಽಥ ಕೃಚ್ಛ್ರಾ
ದುವಾಚ ವಾಚಂ ಮಧುರಾಂ ತದಾನೀಮ್ ।
ಶೃಣುಷ್ವ ರಾಜನ್ಮಮ ವೃತ್ತಮತ್ರ
ವದಾಮಿ ದುಷ್ಟಂ ಚ ಕೃತಂ ಚ ಸದ್ಯಃ ॥ ೧೧೬ ॥

ದಶಾನನಸ್ತಾಮುಪನೀಯ ಮಾಯಯಾ
ಸೀತಾಂ ಸಮಾರೋಪ್ಯ ವಿಮಾನಮುತ್ತಮಮ್ ।
ಜಗಾಮ ಖೇ ದಕ್ಷಿಣ ದಿಙ್ಮುಖೋಽಸೌ
ಸೀತಾ ಚ ಮಾತಾ ವಿಲಲಾಪ ದುಃಖಿತಾ ॥ ೧೧೭ ॥

ಆಕರ್ಣ್ಯ ಸೀತಾಸ್ವನಮಾಗತೋಽಹಂ
ಸೀತಾಂ ವಿಮೋಕ್ತುಂ ಸ್ವಬಲೇನ ರಾಘವ ।
ಯುದ್ಧಂ ಚ ತೇನಾಹಮತೀವ ಕೃತ್ವಾ
ಹತಃ ಪುನಃ ಖಡ್ಗಬಲೇನ ರಕ್ಷಸಾ ॥ ೧೧೮ ॥

---

೧೧೬. ಎಂದು ಶ್ರೀರಾಮನು ಹೇಳುತ್ತಲೇ ಬಳಿಕ ಪಕ್ಷಿರಾಜನಾದ ಜಟಾಯುವು ಆಗ ಕಷ್ಟದಿಂದ ಈ ಇನಿವಾತನ್ನು ನುಡಿದನು. 'ಎಲೈ ರಾಯನೇ! ಕೇಳು; ಈಗಲೇ ನಾನು ಕಂಡ, ನಡೆಸಿದ ನನ್ನ ಸಮಾಚಾರವನ್ನು ಹೇಳುವೆನು.

೧೧೭. ರಾವಣನು ಮಾಯೆಯಿಂದ ಆ ಸೀತಾದೇವಿಯನ್ನು ಅಪಹರಿಸಿ ಕೊಂಡು, ಶ್ರೇಷ್ಠವಾದ ಪುಷ್ಪಕವಿಮಾನದಲ್ಲಿ ಹತ್ತಿಸಿ, ಮುಗಿಲಿನಲ್ಲಿ ದಕ್ಷಿಣದಿಕ್ಕಿಗೆ ದುರಾಗಿ ಹೋದನು. ತಾಯಿಯಾದ ಸೀತಾದೇವಿಯೂ ದುಃಖಗೊಂಡು ಅತ್ತಳು.

೧೧೮. ಎಲೈ ರಾಘವನೇ! ನಾನು ಸೀತಾದೇವಿಯ ಆ ಆರ್ತಧ್ವನಿಯನ್ನು ಕೇಳಿ, ನನ್ನ ಬಲದಿಂದ ದೇವಿಯನ್ನು ದುಷ್ಟನಿಂದ ಬಿಡಿಸಲು ಬಂದೆನು. ಅವ ನೊಡನೆ ಬಹುವಾಗಿ ಹೋರಾಡಿದೆನು. ಕಡೆಗೆ ಆ ರಕ್ಕಸನು ಮತ್ತು ನನ್ನನ್ನು ತನ್ನ ಬಾಳ ಬಲ್ಪಿಂದ ಹೊಡೆದನು.

ವೈದೇಹಿವಾಕ್ಯಾದಿಹ ಜೀವತಾ ಮಯಾ
ದೃಷ್ಟೋ ಭವಾನ್ಸ್ವರ್ಗಮಿತೋ ಗಮಿಷ್ಯೇ ।
ಮಾ ರಾಮ ಶೋಕಂ ಕುರು ಭೂಮಿಪಾಲ
ಜಹ್ಯದ್ಯ ದುಷ್ಟಂ ಸಗಣಂ ತು ನೈರ್ಋತಮ್ ॥ ೧೧೯ ॥

ರಾಮೋ ಜಟಾಯುನೇತ್ಯುಕ್ತಃ ಪುನಸ್ತಂ ಚಾಹ ಶೋಕತಃ ।
ಸ್ವಸ್ತ್ಯಸ್ತು ತೇ ದ್ವಿಜವರ ಗತಿಸ್ತು ಪರಮಾಸ್ತು ತೇ ॥ ೧೨೦ ॥

ತತೋ ಜಟಾಯುಃ ಸ್ವಂ ದೇಹಂ ವಿಹಾಯ ಗತವಾನ್ದಿವಮ್ ।
ವಿಮಾನೇನ ತು ರಮ್ಯೇಣ ಸೇವ್ಯಮಾನೋಽಪ್ಸರೋಗಣೈಃ ॥ ೧೨೧ ॥

ರಾಮೋಽಪಿ ದಗ್ಧ್ವಾ ತದ್ದೇಹಂ ಸ್ನಾತೋ ದತ್ವಾ ಜಲಾಂಜಲಿಮ್ ।
ಭ್ರಾತ್ರಾ ಸ ಗಚ್ಛನ್ದುಃಖಾರ್ತೋ ಮಾನುಷೀಂ ಪಥಿ ದೃಷ್ಟವಾನ್ ॥ ೧೨೨ ॥

---

೧೧೯. ಇದುವರೆಗೆ ವೈದೇಹಿಯಾದ ದೇವಿಯ ಅನುಗ್ರಹದವಾಕ್ಯದಿಂದ (ನಿನಗೆ ಈ ಸಂಗತಿಯನ್ನರುಹಲು) ಬದುಕಿದ್ದ ನಾನು ನಿನ್ನನ್ನು ನೋಡಿದೆನು. ಇನ್ನು ಸ್ವರ್ಗಕ್ಕೆ ತೆರಳುವೆನು. (ದೇಹವನ್ನು ಬಿಡುವೆನು.) ಎಲೈ ಭೂಪತಿಯಾದ ಶ್ರೀರಾಮನೇ! ದುಃಖಪಡಬೇಡ; ಪರಿವಾರದೊಡಗೂಡಿದ ಆ ದುಷ್ಟರಕ್ಕಸನನ್ನು ಇಂದು ಸಂಹರಿಸು.'

೧೨೦. ಜಟಾಯುವು ಇಂತು ಹೇಳಲು ರಾಮನು ಮತ್ತು ಅವನಿಗೆ ದುಃಖದಿಂದ ಇಂತು ಹೇಳಿದನು :—'ಎಲೈ ಶ್ರೇಷ್ಠಪಕ್ಷಿಯೇ! ನಿನಗೆ ಮಂಗಳವಾಗಲಿ;' ಎಂದು ಶ್ರೀರಾಮನು ಹೇಳಿದನು.

೧೨೧. ಬಳಿಕ ಜಟಾಯುವು ತನ್ನ ಒಡಲನ್ನು ಬಿಟ್ಟು ದಿವಕ್ಕೆ ಗಾಡಿವೆತ್ತ ಗಾಳಿದೇರಿನಿಂದ ಅಪ್ಸರಸರ ತಂಡದಿಂದುಪಚರಿಸಿಕೊಳ್ಳುತ್ತಿರುವವನಾಗಿ ಹೋದನು.

೧೨೨. ಶ್ರೀರಾಮನೂ ಆ ಜಟಾಯುವಿನ ಶರೀರವನ್ನು ಸುಟ್ಟು, ಸ್ನಾನ ಮಾಡಿ, ಜಲಾಂಜಲಿಯನ್ನು ಕೊಟ್ಟು, ದುಃಖಸಹಿತನಾಗಿ ತಮ್ಮನೊಡನೆ ಹೋಗುತ್ತಾ, ಮಾರ್ಗದಲ್ಲಿ ಓರ್ವ ಮಾನವಸ್ತ್ರೀಯನ್ನು ಕಂಡನು.

ಉದ್ವಮಂತೀಂ ಮಹೋಲ್ಕಾಭಾಂ ವಿವೃತಾಸ್ಯಾಂ ಭಯಂಕರೀಮ್ ।
ಶಬರೀಂ ಮುನಿಮುಖ್ಯಾನಾಂ ಸ ಪರಾಹತಕಲ್ಮಷಾಮ್ ।
ತಯಾ ಸಂಪೂಜಿತೋ ರಾಮೋ ಬದರ್ಯಾದಿಭಿರೀಶ್ವರಃ ।
ದಿವಂ ಪ್ರಸ್ಥಾಪ್ಯ ತಾಂ ಚಾಪಿ ಜಗಾಮಾನ್ಯತ್ರ ರಾಘವಃ ।
ಕ್ಷಯಂ ನಯಂತಂ ಜಂತೂನ್ವೈ ಪಾತಯಿತ್ವಾ ಗತಂ ರುಷಾ ॥ ೧೨೩ ॥

ಗಚ್ಛನ್ವನಾಂತರಂ ರಾಮಃ ಸ ಕಬಂಧಂ ದದರ್ಶ ಹ ।
ವಿರೂಪಂ ಜಠರಮುಖಂ ದೀರ್ಘಬಾಹುಂ ಘನಸ್ತನಮ್ ॥ ೧೨೪ ॥

ರುಂಧಾನಂ ರಾಮಮಾರ್ಗಂ ತು ದೃಷ್ಟ್ವಾ ತಂ ದಗ್ಧವಾನ್ಶರೈಃ ।
ದಗ್ಧೋಽಸೌ ದಿವ್ಯರೂಪೀ ತು ಸ್ವಸ್ಥೋ ರಾಮಮಭಾಷತ ॥ ೧೨೫ ॥

೧೨೩-೧೨೪. ಆ ಸ್ತ್ರೀಯು ಉದ್ವಮನಮಾಡುತ್ತಲೂ, ದೊಡ್ಡ ಬೆಂಕಿಯ ಜ್ವಾಲೆಯಂತೆ ಕಾಂತಿಯುಳ್ಳವಳೂ, ಬಾಯ್ದೆರೆದವಳೂ, ಅಂಜಿಕೆಯನ್ನೆಸಗುತ್ತಿರುವವಳೂ ಆಗಿದ್ದಳು. ಆಕೆಯ ಹೆಸರು ಶಬರಿಯೆಂದು. ಅವಳು ಶ್ರೇಷ್ಠತಪಸ್ವಿಗಳಿಗೆ ಪೂಜೆಗಳನ್ನೆಸಗಿ, ತನ್ನ ಪಾಪಗಳನ್ನೆಲ್ಲಾ ಕಳೆದುಕೊಂಡು, ಶುದ್ಧಾತ್ಮಳಾಗಿದ್ದಳು. ಅವಳು ಬೋರೆಹಣ್ಣೇ ಮೊದಲಾದುವುಗಳಿಂದ ಈಶ್ವರನಾದ ಶ್ರೀರಾಮನನ್ನು ಪೂಜಿಸಿದಳು. ತರುವಾಯ ಅವಳೂ ದಿವಂಗತಳಾಗಲು, ಶ್ರೀರಾಮನು ಬೇರೆಯೆಡೆಗೆ ಹೋದನು. ಪ್ರಾಣಿಗಳನ್ನು ನಾಶಮಾಡುತ್ತಲೂ, ಕೆಡಹುತ್ತಲೂ, ಕೋಪದಿಂದ ಬರುತ್ತಿದ್ದ ವಿರೂಪನೂ, ಹೊಟ್ಟೆಯಕಡೆ ಮುಖವುಳ್ಳವನೂ, ನಿಡಿದಾದ ತೋಳ್ಗಳುಳ್ಳವನೂ, ತೋರಗಳಾದ ಮೊಲೆಗಳುಳ್ಳವನೂ, ಆದ ಕಬಂಧನೆಂಬ ರಕ್ಕಸನನ್ನು ಬೇರೆಯಾದ ವನಕ್ಕೆ ಹೋಗುತ್ತಲಿದ್ದ ಶ್ರೀರಾಮನು ಕಂಡನು.

೧೨೫. ಅವನು ಶ್ರೀರಾಮನ ಹಾದಿಗೆ ಅಡ್ಡಗಟ್ಟಲು ಮೆಲ್ಲಗೆ ಅವನನ್ನು ನೋಡಿ ಸಂಹರಿಸಿ, ಸುಟ್ಟನು. ಸುಟ್ಟುಹೋದ ಆ ಕಬಂಧನು ದಿವ್ಯರೂಪವನ್ನು ತಾಳಿ ಸ್ವರ್ಗಸ್ಥನಾದವನು, ಶ್ರೀರಾಮನಿಗೆ ಇಂತು ಹೇಳಿದನು

ರಾಮರಾಮ ಮಹಾಬಾಹೋ ತ್ವಯಾ ಮಮ ಮಹಾಮತೇ ।
ವಿರೂಪಂ ನಾಶಿತಂ ವೀರ ಮುನಿಶಾಪಂ ಚಿರಾಗತಮ್ ॥ ೧೨೬ ॥

ತ್ರಿದಿವಂ ಯಾಮಿ ಧನ್ಯೋಽಸ್ಮಿ ತ್ವತ್ಪ್ರಸಾದಾನ್ನ ಸಂಶಯಃ ।
ತ್ವಂ ಸೀತಾಪ್ರಾಪ್ತಯೇ ಸಖ್ಯಂ ಕುರು ಸೂರ್ಯಸುತೇನ ಭೋ ॥ ೧೨೭ ॥

ವಾನರೇಂದ್ರೇಣ ಗತ್ವಾ ತು ಸುಗ್ರೀವೇ ತ್ವಂ ನಿವೇದ್ಯ ವೈ ।
ಭವಿಷ್ಯತಿ ನೃಪಶ್ರೇಷ್ಠ ಋಷ್ಯಮೂಕಗಿರಿಂ ವ್ರಜ ॥ ೧೨೮ ॥

ಇತ್ಯುಕ್ತ್ವಾ ತು ಗತೇ ತಸ್ಮಿನ್ರಾಮೋ ಲಕ್ಷ್ಮಣಸಂಯುತಃ ।
ಸಿದ್ಧೈಸ್ತು ಮುನಿಭಿಃ ಶೂನ್ಯಮಾಶ್ರಮಂ ಪ್ರವಿವೇಶ ಹ ॥ ೧೨೯ ॥

---

೧೨೬. 'ಎಲೈ ರಾಮ ! ರಾಮ ! ಮಹಾಬಾಹುವೇ ! ಮಹಾಮತಿಯೆ ! ವೀರನೇ ಮುನಿಶಾಪದಿಂದುಂಟಾಗಿದ್ದ ಬಹುಕಾಲದಿಂದಿದ್ದ ಈ ನನ್ನ ವಿರೂಪವನ್ನು ನಾಶಮಾಡಿದೆ.

೧೨೭-೧೨೮. ಸ್ವರ್ಗಕ್ಕೆ ಹೊಗುತ್ತೇನೆ. ನಿನ್ನ ಅನುಗ್ರಹದಿಂದ ಧನ್ಯನಾದೆನು. ಈ ವಿಷಯದಲ್ಲಿ ಸಂಶಯವಿಲ್ಲ. ಅಯ್ಯಾ ! ನೀನು ಸೀತಾದೇವಿಯನ್ನು ಹೊಂದಲು ಸೂರ್ಯನ ಮಗನಾದ, ಕಪಿಗಳೊಡೆಯನಾದ ಸುಗ್ರೀವನೊಡನೆ ಸ್ನೇಹವನ್ನು ಮಾಡು. ಆ ಸುಗ್ರೀವನಲ್ಲಿ ಎಲ್ಲವನ್ನೂ ಹೇಳು; ನಿನ್ನ ಕಾರ್ಯವು ನೆರವೇರುವುದು; ಎಲೈ ನೃಪಶ್ರೇಷ್ಠನೇ ! ಋಷ್ಯಮೂಕವೆಂಬ ಪರ್ವತಕ್ಕೆ ಇಲ್ಲಿಂದ ಹೋಗು ;' ಎಂದು ದಿವ್ಯರೂಪವನ್ನು ತಾಳಿದ ಕಬಂಧನು ಶ್ರೀರಾಮಚಂದ್ರನಿಗೆ ಹೇಳಿದನು.

೧೨೯-೧೩೧. ಇಂತು ಕಬಂಧನು ಶ್ರೀರಾಮನಿಗೆ ಹೇಳಿ ದಿವಂಗತನಾಗಲು, ಶ್ರೀರಾಮನೂ ಲಕ್ಷ್ಮಣನೊಡಗೂಡಿ, ಸಿದ್ಧರೂ, ಮುನಿಗಳೂ, ಇಲ್ಲದ ಒಂದು ಆಶ್ರಮವನ್ನು ಪ್ರವೇಶಿಸಿದನು. ಅಲ್ಲಿದ್ದ ತಾಪಸಿಯನ್ನು ಕಂಡು, ಅವಳೊಡನೆ ಮಾತ

ತತ್ರಸ್ಥಾಂ ತಾಪಸೀಂ ದೃಷ್ಟ್ವಾ ತಯಾ ಸಂಭಾಷ್ಯ ಸಂಸ್ಥಿತಃ ।
ಸಾಷ್ಯೇನಂ ಪೂಜಯಿತ್ವಾ ತು ಸ್ವಾಮವಸ್ಥಾಂ ನಿವೇದ್ಯ ವೈ ॥ ೧೩೦ ॥

ಸೀತಾಂ ತ್ವಂ ಪ್ರಾಪ್ಸ್ಯಸೀತ್ಯುಕ್ತ್ವಾ ಪ್ರವಿಶ್ಯಾಗ್ನಿಂ ದಿವಂ ಗತಾ ।
ತತೋ ವಿನೀತೇನ ಗುಣಾನ್ವಿತೇನ
ಭ್ರಾತ್ರಾ ಸಮೇತೋ ಜಗದೇಕನಾಥಃ ।
ಪ್ರಿಯಾವಿಯೋಗೇನ ಸುದುಃಖಿತಾತ್ಮಾ
ಜಗಾಮ ಯಾಮ್ಯಾಂ ಸ ತು ರಾಮದೇವಃ ॥ ೧೩೧ ॥

ಇತಿ ಶ್ರೀ ನರಸಿಂಹಪುರಾಣೇ ರಾಮಪ್ರಾದುರ್ಭಾವೇ ಅರಣ್ಯಕಾಣ್ಡ
ಕಥಾನಿರೂಪಣಂ ನಾಮ ಏಕೋನಪಂಚಾಶತ್ತಮೋಽಧ್ಯಾಯಃ

ನಾಡಿಕೊಂಡಿರಲು, ಅವಳೂ ಶ್ರೀರಾಮನಿಗೆ ಸತ್ಕಾರವನ್ನು ಮಾಡಿ, ತನ್ನ ಸ್ಥಿತಿಯನ್ನೂ ಅರುಹಿ, 'ನೀನು ಸೀತೆಯನ್ನು ಹೊಂದುವೆ,' ಎಂದು ಹೇಳಿ, ಅಗ್ನಿಯನ್ನು ಪ್ರವೇಶಿಸಿ ದಿವಂಗತಳಾದಳು. ಅನಂತರದಲ್ಲಿ ಲೋಕಕ್ಕೆ ಮುಖ್ಯ ಸ್ವಾಮಿಯಾದ ಆ ಶ್ರೀರಾಮ ದೇವನು ನಮ್ರನೂ, ಸದ್ಗುಣಭರಿತನೂ, ಆದ ತಮ್ಮನಾದ ಲಕ್ಷ್ಮಣನಿಂದ ಕೂಡಿದವನಾಗಿ, ಇನಿಯಳ ವಿರಹದುಃಖಪೀಡಿತನಾಗಿ, ದಕ್ಷಿಣದಿಕ್ಕಿನ ಕಡೆಗೆ ಪ್ರಯಾಣಬೆಳೆಸಿದನು;' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀಸೂತರು ಭರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀರಾಮಚರಿತೆಯಲ್ಲಿ ಅರಣ್ಯಕಾಂಡ
ಕಥಾ ನಿರೂಪಣವೆಂಬ ನಲವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

ನಲವತ್ತೊಂಭತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ' ಭರತನು ಶ್ರೀರಾಮಪಾದುಕೆಗಳನ್ನು ತೆಗೆದುಕೊಂಡು, ನಂದಿಗ್ರಾಮಕ್ಕೆ ಹಿಂದಿರುಗಲು, ಶ್ರೀರಾಮನು ಒಮ್ಮೆ ತಮ್ಮನನ್ನು ರಕ್ಷಣೆಗಿರಿಸಿ, ಸೀತಾದೇವಿಯೊಡನೆ ಸುಖದಿಂದ ಇರುತ್ತಾ ನಿದ್ರಿಸುತ್ತಿರುವಾಗ, ಕಾಕಾಸುರನೆಂಬ ದುಷ್ಟಾತ್ಮನು ಬಂದು, ಸೀತಾದೇವಿಯ ಸ್ತನದ ಮೇಲೆ ಕುಕ್ಕಲು, ರಕ್ತ ಸುರಿದು ಬಹು ದುಃಖಗೊಂಡ ಸೀತಾದೇವಿಯನ್ನು ಶ್ರೀರಾಮನು ಎಚ್ಚರಗೊಂಡು ನೋಡಿ, ಕಾರಣ ತಿಳಿದು, ಇಷೀಕಾಸ್ತ್ರವನ್ನು ಅಭಿಮಂತ್ರಿಸಿ, ಕಾಕಾಸುರನ ಮೇಲೆ ಹೊಡೆಯಲು, ಅವನು ಭೀತನಾಗಿ ಮೂರು ಲೋಕಗಳನ್ನೂ ಸುತ್ತಿ, ರಕ್ಷಣೆ ದೊರೆಯದೆ, ಶ್ರೀರಾಮನನ್ನು ಕ್ಷಮೆ ಬೇಡಲು, ಆಗ ಶ್ರೀರಾಮನು ಅವನ ಒಂದು ಕಣ್ಣನ್ನು ಅದಕ್ಕೆ ಗುರಿಮಾಡಿ, ಅಂತು ಅವನನ್ನು ರಕ್ಷಿಸಿದನು. ಅಂದಿನಿಂದ ಕಾಗೆಗಳಿಗೆ ಒಂದೇ ಕಣ್ಣಾಯಿತು. ತರುವಾಯ ಶ್ರೀರಾಮನು ದಂಡಕಾರಣ್ಯವನ್ನು ಪ್ರವೇಶಿಸಿ, ಅನೇಕ ಮುನಿಗಳನ್ನು ದರ್ಶನಮಾಡಿ, ಅವರಿಂದ ಸತ್ಕೃತನಾದನು. ಮಹಾಕಾಯನಾದ ವಿರಾಧನನ್ನು ಸಂಹರಿಸಿ, ಶರಭಂಗಮುನಿಯ ಆಶ್ರಮದಲ್ಲಿ ಸತ್ಕೃತನಾಗಿ, ಅಗಸ್ತ್ಯಮುನಿಯ ದರ್ಶನಮಾಡಿ, ಅವರ ಅನುಗ್ರಹದಿಂದ ಅಕ್ಷಯವಾದ ಬತ್ತಳಿಕೆ ಬಾಣಗಳನ್ನು ಪಡೆದುದಲ್ಲದೆ, ಖಡ್ಗವನ್ನು ಪಡೆದನು. ತರುವಾಯ ಗೋದಾವರಿಯ ತೀರದ ಪಂಚವಟಿಯಲ್ಲಿರುತ್ತಿರಲು, ಅಲ್ಲಿಗೆ ಜಟಾಯುವು ಬಂದು, ಸ್ವವೃತ್ತಾಂತವನ್ನು ಅರುಹಿ, ಶ್ರೀರಾಮನಿಗೆ ಸಹಾಯವೆಸಗುವುದಾಗಿ ಹೇಳಿ ಹೋಗುವನು.

ಬಳಿಕ ಅಲ್ಲಿರುವ ಶ್ರೀರಾಮನ ಬಳಿಗೆ ಶೂರ್ಪಣಖೆಯೆಂಬ ರಾವಣನನುಜೆಯು ಕಾಮರೂಪದಿಂದ ಬಂದು, ಮದುವೆಯಾಗೆನಲು ಶ್ರೀರಾಮನು ತಾನು ಪತ್ನೀಸಹಿತನಾಗಿರುವುದರಿಂದ ಒಲ್ಲೆನೆಂದು, ತಮ್ಮನ ಬಳಿಗೆ ಕಳುಹಿಸಲು, ಅವನೂ ತನ್ನ ಮಡದಿಯು ಅಯೋಧ್ಯೆಯಲ್ಲಿರುವಳೆಂದು ಹೇಳಿ, ತಿರಸ್ಕರಿಸಿ, ಅಣ್ಣನ ಅಪ್ಪಣೆ

ಯಂತೆ ಅವಳ ಮೂಗು ಕಿವಿಗಳನ್ನು ಕತ್ತರಿಸಿದನು. ಅಂತು ತಿರಸ್ಕೃತೆಯಾದ ಅವಳು ಜನಸ್ಥಾನದಲ್ಲಿದ್ದ ಖರಾದಿಗಳಿಗೆ ಆ ವೃತ್ತಾಂತವನ್ನು ಹೇಳಲು, ಅವರು ಹದಿನಾಲ್ಕುಸಾಸಿರ ರಕ್ಕಸರ ಪಡೆಯೊಡನೆ ಬಂದು ಶ್ರೀರಾಮುನನ್ನು ಮುತ್ತಲು, ಶ್ರೀರಾಮನು ನಿಮಿಷದಲ್ಲಿ ಆ ರಕ್ಕಸರನ್ನೂ ಖರದೂಷಣತ್ರಿಶಿರಸರನ್ನೂ ಸಂಹರಿಸಿದನು. ಅದನ್ನು ತಿಳಿದು, ಶೂರ್ಪಣಖೆಯು ಅಣ್ಣನಾದ ರಾವಣನ ಬಳಿಗೆ ಬಂದು, ತನಗೆ ಆದ ಬನ್ನವನ್ನು ತಿಳಿಸಿ, ಖರಾದಿಗಳ ವಧೆಯನ್ನೂ ಹೇಳುವಳು.

ತರುವಾಯ ರಾವಣನು ಮಾರೀಚನನ್ನು ಹೊನ್ನಜಿಂಕೆಯಾಗಿ ಹೋಗಿ, ಸೀತೆಗೆ ಕ್ರೀಡಾರ್ಥವಾಗಿ ಆಸೆ ಹುಟ್ಟಿಸಿ, ಶ್ರೀರಾಮುನನ್ನು ಹಳುವಕ್ಕೆ ಉಯ್ಯಬೇಕೆಂದು ಹೇಳಿ, ತಾನೂ ಮಾರೀಚನೊಡನೆ ಪುಷ್ಪಕದಲ್ಲಿ ಕುಳಿತು ಜನಸ್ಥಾನಕ್ಕೆ ಹೋದನು. ಆ ಮಾರೀಚನು ಹಾಗೆ ಮಾಡಲು, ಬೆಂಹತ್ತಿಹೋದ ಶ್ರೀರಾಮನು ಅವನು ರಾಕ್ಷಸನೆಂದು ಬಾಣ ಹೊಡೆದು ಅವನನ್ನು ಸಂಹರಿಸಲು, ಆಗ ಮಾರೀಚನು, ಲಕ್ಷ್ಮಣಾ ! ಎಂದು ರಾಮನಂತೆ ಕೂಗಿ ಪ್ರಾಣಬಿಡಲು, ಸೀತಾದೇವಿಯು ಅದನ್ನರಿಯದೆ, ಶ್ರೀರಾಮನ ವಿಚಾರ ತಿಳಿಯಲು ಲಕ್ಷ್ಮಣನನ್ನು ಬಯ್ದು ಕಳುಹಿಸಿದಳು. ಆಗ ರಾವಣನು ಸೀತೆಯ ಸಮೀಪಕ್ಕೆ ಸಂನ್ಯಾಸಿಯ ವೇಷದಿಂದ ಬಂದು ಸುಳ್ಳುಸಂಗತಿಯನ್ನು ಹೇಳಿ, ಪುಷ್ಪಕದಲ್ಲಿ ಕೂಡಿಸಿಕೊಂಡು, ಅಯೋಧ್ಯೆಗೆ ಭರತನ ಪ್ರಾರ್ಥನೆಯಂತೆ ಹೋಗುವ ಶ್ರೀರಾಮನ ಬಳಿಗೆ ಬಿಡುವುದಾಗಿ ಹೇಳಿ ಒಯ್ಯುವನು. ಮಾರ್ಗದಲ್ಲಿ ಸೀತಾದೇವಿಯ ಆರ್ತಧ್ವನಿಯನ್ನು ಕೇಳಿ, ಕೋಪದಿಂದ ಜಟಾಯುವು ಅಲ್ಲಿಗೆ ಬಂದು, ರಾವಣನೊಡನೆ ಹೋರಾಡಿ, ಅವನ ಖಡ್ಗಾಹತಿಯಿಂದ ಬಿದ್ದನು. ಸೀತಾದೇವಿಯು ಮುಂದೆ ಒಂದು ಬಟ್ಟೆಯಲ್ಲಿ ಒಡವೆಗಳನ್ನು ಕಟ್ಟಿ ಋಷ್ಯಮೂಕಪ್ರಾಂತ್ಯದಲ್ಲಿ ಶ್ರೀರಾಮನಿಗೆ ಕೊಡುವ ಸಲುವಾಗಿ ಕೆಡಹಿದಳು. ಅಂತೆ ಸುಗ್ರೀವ ಮಿತ್ರರು ಅವನ್ನು ತೆಗೆದುಕೊಂಡು ಅವನಿಗಿತ್ತರು. ರಾವಣನು ಸೀತೆಯನ್ನು ಲಂಕೆಗೆ ಒಯ್ದು, ಅಶೋಕವನದಲ್ಲಿ ರಕ್ಕಸಿಯರ ನಡುವೆ ಅವಳು ತನ್ನನ್ನೊಪ್ಪುವಂತೆ ಮಾಡಲು ಇರಿಸಿದನು.

ಇತ್ತ ಶ್ರೀರಾಮನು ಆಶ್ರಮಕ್ಕೆ ಹಿಂದಿರುಗಿ ಬಂದು, ಸೀತೆಯನ್ನು ಕಾಣದೆ ದುಃಖಗೊಂಡು, ತಮ್ಮನೊಡನೆ ಅವಳನ್ನು ಹುಡುಕಲು ಬಂದು, ಜಟಾಯುವಿನಿಂದ

ಆ ಸೀತಾಪಹರಣ ವೃತ್ತಾಂತವನ್ನರಿತು, ಮೃತನಾದ ಅವನಿಗೆ ಸಂಸ್ಕಾರ ಮಾಡಿ, ಶಬರಿಯು ಕೊಟ್ಟ ಫಲಗಳನ್ನು ತಿಂದು, ಅವಳಿಗೆ ಸದ್ಗತಿಯನ್ನಿತ್ತು, ಮುಂದೆ ಹಾದಿಯಲ್ಲಿ ಅಡ್ಡಬಂದ ಕಬಂಧನನ್ನು ಸಂಹರಿಸಿದನು. ಅವನು ದಿವ್ಯರೂಪ ಪಡೆದು, ಸುಗ್ರೀವಸಖ್ಯದಿಂದ ಶ್ರೀರಾಮನು ಸೀತಾದೇವಿಯನ್ನು ಪಡೆಯಲನುಕೂಲವಾಗುವುದೆಂದು ಹೇಳಿ ದಿವಕ್ಕೆ ತೆರಳಿದನು. ಅಲ್ಲಿಂದ ಮುಂದೆ ಶ್ರೀರಾಮನು ಸಿದ್ಧಮುನಿಗಳಿಲ್ಲದ ಒಂದು ಆಶ್ರಮಕ್ಕೆ ಬಂದು, ಅಲ್ಲಿದ್ದ ತಾಪಸಿಯಿಂದ ಸತ್ಕೃತನಾದನು. ಆಗ ಅವಳೂ 'ಸೀತೆಯನ್ನು ಹೊಂದುವೆ' ಯೆಂದು ಹೇಳಿ, ಅಗ್ನಿಪ್ರವೇಶ ಮಾಡಿ ದಿವಕ್ಕೆ ತೆರಳಲು, ಶ್ರೀರಾಮನು ಮುಂದೆ ದಕ್ಷಿಣದಿಕ್ಕಿಗೆ ಪ್ರಯಾಣ ಮಾಡಿದನು.' ಎಂದು ಹೇಳಿದುದನ್ನು ಸೂತರು ಭರದ್ವಾಜರಿಗೆ ನಿರೂಪಿಸಿರುತ್ತಾರೆ.

ಇಂತು ನಲವತ್ತೊಂಬತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.
